

ub ex
oma
Andri
plonships
yet he so
r that the
picked for
aid of An-
mance was
n unforced
nnastics to
e."
pionships.
reserve (he
s), but he
tal of six
zes includ-
uccess like
s head, but
s from his
arth
point in
hen that he
viet Union
s in 1972
r, beating
rcises.
but at the
chieve an
new pro-
nsive, more
ed to create
was that, in
pirations to
Andrianov
sufficiently.
d in 1973,
ionships to
equilib-
ar. Inciden-
y married
ymnast and
Andrianov
t no: at the
he again
. He took
bed him of
went to the
th fate and
consisten-
endeavour,
was a hard
ult? charac-
bove all he
make any
on only by
to a po
. Dedic
eache
npi

THE INTERNATIONAL BO

Government Oriental Library Series.

Edited by Pandits under the Supervision of the Curator, Government Oriental Library, Mysore.

KANNADA SECTION—No. I.

THE ÁDI PURAṆA. OF PAMPA.

ಪಂಪಕವಿ ವಿರಚಿತಂ

ಆದಿಪುರಾಣಂ.

EDITED BY

S. G. NARASIMHACHAR,

Librarian, Government Oriental Library, Mysore.

Published under the Authority of the Government of His Highness the Maharaja of Mysore.

MYSORE:

PRINTED AT THE GOVERNMENT BRANCH PRESS.

1900.

PREFACE.

It is a part of the programme of the Mysore Government Oriental Library to publish important Kannada works which have been hitherto unpublished, or which, though already published, require re-editing with the aid of correct Mss. The present volume forms the first number of the Kannada section of the Oriental Library series.

Among the various elements which contributed to the growth and development of the Kannada Literature, the adoption of the Kannada language by the Jain settlers of the Kannada country both for secular and religious purposes, seems to have been the earliest and the most effective. Wherever the Jains colonised, they were great patrons of learning and literature. To-day we have in Kannada a greater number of classical works written by Jain authors than those written by authors of any other denomination. Of the Kannada works that the Library has been able to secure, the earliest are those of the Jains. And of these the writings of the three great poets, Pampa, Ponna, and Ranna, who are popularly known as the "Three Gems," are referred to by every poet in words of praise and appreciation. It has been, there fore, thought proper to begin the Kannda section of the Oriental Library series with a work of Pampa, who is the earliest and the best of the three. Of the *Âdipurâṇa* and the *Bhârata,* the two well known Kannada works of this poet, the latter has been published by the Archaelogical Department of the Mysore Government. The publication of the former, the only other available work of this great author, has, therefore, been undertaken by the Oriental Library.

Âdi-Pampa is a name familiar to all the students of ancient Kannada Literature. He was born in an orthodox Brahmin family of the *Vatsagotra.* His ancestors appear to have been the residents of an *Agrahâra* in Vengimandala. His father, Abbirâma-Devarâya, having become a convert to the Jain religion, Pampa was by birth a follower of the *Jaina-dharma.* He has himself given in his works a clue to the date of his birth. He mentions

in his *Âdipurâṇa* that he was born in the cyclic year *Dundubhi* and that he wrote his book in the *Saka* year 863. *Dundubhi* being the 39th year preceding the year of his authorship, he must have been born in the *Saka* year 824, corresponding to 902 A. D. Nothing is known about his early life and education except that he was a disciple of one Devendramuni who seems to have been a man of some note, probably identical with one of the same name, highly spoken of in the 4th inscription of Sravana Belgola. There are passages in the *Âdipurâṇa* in which the author gives an account of his own personal appearance and character. He was a man of medium height, strong and well-built, of a dark complexion, of fair features, with soft curly hair, and beautiful expression, with a deep and sonorous voice. He was simple in his dress and manners, of a loving disposition and never jealous of others' fame. He was valorous and seems to have spent his early manhood in military service.

His literary career has found recognition ever since the time he was invited to the court of Arikesari at Puligere, Arikesari being the eighth of the Châlukya line of kings that ruled there. Under the patronage of this king he rose to literary fame, having completed in three months his *Âdipurâṇa* and in six months his famous epic *Bhârata*. That his merits as a poet have been very much appreciated by the king is evident from the rich and valuable presents bestowed on him by his royal patron. In accordance with what appears to be the custom of the Kannada poets, he also owned many characteristic titles, such as "the beautiful swan of the *Mânasa* lake of the minds of great poets", "the ocean of poetic excellence," "the precious garland of Sarasvati."

Pampa's scholarship is recognised by all Kannada poets. He might have been the author of several works both in Sanskrit and Kannada. Though his writings are silent about the Sanskrit and Kannada writers that preceded him, we have sufficient evidence in his two epics alone to show his acquaintance with some of the best Sanskrit writers and his recognition of the services of others before him in the field of Kannada Literature. He speaks of his works as having trampled under foot the Kannada writings of his predecessors. But, as he says elsewhere, he is not proud of his scholarship like one 'Kavi Vyâsa.' In his works we

often meet with parallels to the noble thoughts of Sanskrit poets like Kâlidâsa, Srîharsha, Bhâravi, Bâṇa and others, which fact does not in the least detract from the merits of his scholarship. All the classic writers of Kannada are at one in acknowledging the superiority of Pampa as a Kannada writer and in extolling the elegance of his style. Grammarians like the authors of *Bhâshâbhûshaṇa* and *S'abdamaṇidarpaṇa* and rhetoricians like Nâgavarma and Sâlva often cite Pampa in illustration of their rules. His style has, no doubt, been for a long time the standard for all Kannada writers. Some have gone to the extent of even assuming his name as a token of literary ability.

Âdipurâṇa stands even to-day as one of the best works of Kannada Literature. It is well-known for elegance and dignity of style, wealth of expression, and depth of pathos. Its melodious rhythm and poetic charm, as also the rhetorical perfection of its sentences and the majestic flow of its words have endeared the name of Pampa to the readers of Kannada poetry.His own words regarding his poetry are literally true.He speaks of his poem as " learned, of approved language, sweet and melodious, beautiful, full of excellent thoughts, with harmonious combination of words, capable of standing critical scrutiny, with apt words, worthy of hearing, without any confusion of thoughts and of wide renown." Elsewhere he says " It is ever new like the deep and sublime ocean." Again he speaks of his poem " This alone is the joy of accomplished poets, and from it one may learn the requisites of good poetry." Speaking of his language he says " It is the Kannada of Puligere, lucid, natural and pithy."

The subject of this poem is an old *purânic* story pertaining to the history of Purudeva, the first *Tîrthakara* of the Jains. As is the custom with Jain writers, the author, in narrating his story, very often diverges from the main plot and launches into the narration of dull episodes concerning the previous births of his characters. Shorn of these episodes, the main story forms only three-fourths of the whole book. In spite of the triteness of the story, the author has found occasion to display his descriptive power and pathetic earnestness. The versatility of his diction, the lucidity of expression, the delicacy of touches and his vast erudition, have all combined to make this

poem a magnificent one. Its hero being a religious personage, the author has taken the opportunity to display his knowledge of religion by filling his poem with a complete and succinct exposition of the *Jaina-dharma*.

A detailed account of the history of Pampa and of his literary qualifications and a complete analysis of this epic *Âdipurâṇa* is given in the Kannada introduction prefixed to the book.

For the purposes of editing this book, four Mss. have been consulted, two belonging to the Jaina Matt at S'ravaṇa Belgola kindly lent by the present pontiff and two others belonging to the Oriental Library. The text of this edition is mainly based on one of the palm leaf Mss. belonging to the Jain Matt, and it is only where the reading of that manuscript was apparently incorrect that a better reading found in any one of the other Mss. has been inserted in its place. All important variants are given as foot-notes.

MYSORE,
May, 1900.

———:0:———

ಪಂಪಕವಿಚರಿತಂ*.

ಆದಿಪಂಪನ ಹೆಸರನ್ನು ಹಂಪ, ಹಂಪದೇವ, ಗುರುಹಂಪ, ಪಂಪುಗ, ಪಂಪ†—ಎಂದೂ ಬರೆವುದುಂಟು.

ಈತನ ಪೂರ್ವಿಕರು ವೆಂಗಿಮಂಡಲದಲ್ಲಿ ವೆಂಗಿಪಳುಗೆ ಸೇರಿದ ಒಂದು ಅಗ್ರಹಾರದಲ್ಲಿ ವಾಸಮಾಡುತ್ತಿದ್ದರು. ಅವರು ವತ್ಸಗೋತ್ರದ ಬ್ರಾಹ್ಮಣರು. ಅವರಲ್ಲಿ ಮಾಧವಸೋಮಯಾಜಿ ಎಂಬವನು ಅನೇಕಯಜ್ಞಗಳನ್ನು ಮಾಡಿ, ವಸಂತ ಕೊಟ್ಟೂರು ನಿಡುಗುಂದಿ ವಿಕ್ರಮಪುರ ಎಂಬ ಅಗ್ರಹಾರವಾಸಿಗಳಾದ ವಿಪ್ರರಲ್ಲಿ ಶ್ರೇಷ್ಠನೆಂದು ಖ್ಯಾತನಾಗಿದ್ದನು. ಇವನ ಮಗನಾದ ಅಭಿಮಾನಚಂದ್ರನು ಅನೇಕದಾನಗಳನ್ನು ಮಾಡಿ ಯಶಸ್ವಿಯಾದನು. ಈತನ ಪುತ್ರನಾದ ಕೊಮರಯ್ಯನು ವೇದವೇದಾಂಗಪಾರಂಗತನಾಗಿದ್ದನು. ಇವನಿಗೆ ಅಭಿರಾಮದೇವರಾಯನೆಂಬ ಸುತನು ಜನಿಸಿದನು. ಈತನು ‘ ಜಾತಿಯೊಳೆಲ್ಲ ಮುತ್ತಮದ ಜಾತಿಯು ವಿಪ್ರಕುಲಂಗೆ ನಂಬಲೇಮಾತೊ ಜಿನೇಂದ್ರಧರ್ಮಮೆ ವಲಂ ದೊರೆ ಧರ್ಮದೊಳೆಂದು ನಂಬಿ ” ಜೈನಮತವನ್ನು ಅವಲಂಬಿಸಿದನು. ಈತನ ಮಗನೇ ಪ್ರಖ್ಯಾತನಾದ ಪಂಪನು. ಇವನು ‘ಧಾತ್ರೀವಳಯನಿಳಿಂಪ ’ ನೆಂದೂ ‘ ವತ್ಸಕುಲತಿಲಕ ’ ನೆಂದೂ ‘ ಕೊಂಡಕುಂದಾನ್ವಯನಂದನವನಶುಕ ’ ನೆಂದೂ ತಾನೇ ಹೇಳಿಕೊಂಡಿದ್ದಾನೆ. ಇವನು ಆದಿಪುರಾಣವನ್ನು ಬರೆದು ‘ ದ್ವಿಜವಂಶಧ್ವಜ ’ ನಾದನೆಂದು ರನ್ನನು ಅಜಿತಪುರಾಣದಲ್ಲಿ ಬರೆದಿದ್ದಾನೆ.

---

* ಈಚರಿತೆ ಪಂಪಭಾರತದ ಆದ್ಯಂತಗಳಲ್ಲಿಯೂ ಆದಿಪುರಾಣದ ಆದಿಭಾಗದಲ್ಲಿಯೂ ದೊರೆವ ಕವಿವಿಷಯವಾದ ಪದ್ಯಗಳ ಆಧಾರದಿಂದ ಬರೆಯಲ್ಪಟ್ಟಿದೆ.

† ಈ ಹೆಸರನ್ನು ಮಧುರನು ಧರ್ಮನಾಥಪುರಾಣದಲ್ಲಿ ಚಮತ್ಕಾರವಾಗಿ ಹೀಗೆ ವರ್ಣಿಸಿದ್ದಾನೆ:—ಆದಿಕವಿಪಂಪನೆಂದನು । ವಾದಿಸಿ ವಾದಿಸಿ ವಿರೋಧಿ ವಿಪರೀತತೆಯಿಂ। ದೋಡೆ ವಿಲೋಮದೆ ಪೆಸರಂ । ಮೇದಿನಿಯೊಳಗವನ ಪೆಸರೆ ಪೆಸರ್ವಡೆದೆಸೆಗುಂ॥

ಈಕವಿಯ ಜನ್ಮಸ್ಥಳವು ಆವುದೋ ತಿಳಿಯಲಾಗುವುದಿಲ್ಲ. ಇವನು ರಟ್ಟರಾಜ್ಯದಲ್ಲಿದ್ದುದಾಗಿ ರನ್ನನು ಬರೆದಿದ್ದಾನೆ. ಆದರೆ ಪಂಪನು 'ತೆಂಕನಾಡ ಮಱಿಯಲ್ಕೆಂದುಂ ಮನಂ ಬರ್ಕುರ್ವೋ' ಎಂದು ತನ್ನ ಭಾರತದಲ್ಲಿ ದಕ್ಷಿಣದೇಶವನ್ನು ವಿಶೇಷವಾಗಿ ವರ್ಣಿಸಿ ತನಗೆ ಆದೇಶವು ಆಗಾಗ್ಗೆ ನೆನೆಪಿಗೆ ಬರುತಿದ್ದಂತೆ ಬರೆದಿದ್ದಾನೆ. ಇದರಿಂದ ಇವನು ದಕ್ಷಿಣದೇಶದಲ್ಲಿ ಜನಿಸಿ ಬಳೆದು, ಆವುದೋ ಒಂದು ಕಾರಣದಿಂದ ಅದನ್ನು ಬಿಟ್ಟು ಬೇರೆದೇಶದಲ್ಲಿ ವಾಸಮಾಡುತ್ತಿದ್ದಂತೆ ಊಹಿಸುವುದಕ್ಕೆ ಅವಕಾಶವಿದೆ. ಇದು ಹೇಗಾದರೂ ಇರಲಿ; ಇವನು ಗ್ರಂಥಗಳನ್ನು ಬರೆವ ಕಾಲದಲ್ಲಿ ಪುಲಿಗೆರೆಯಲ್ಲಿ ವಾಸಮಾಡುತ್ತಿದ್ದನೆಂಬುದರಲ್ಲಿ ಆವ ಸಂಶಯವೂ ಇಲ್ಲ.

ಇವನು ತನ್ನ ಜನ್ಮಕಾಲವನ್ನು ಕಂಠೋಕ್ತವಾಗಿ ಹೇಳದಿದ್ದರೂ ಅದನ್ನು ನಿಷ್ಕರ್ಷಿಸುವುದಕ್ಕೆ ಸಾಲುವಷ್ಟು ಸಂಗತಿಗಳನ್ನು ತಿಳಿಸಿದ್ದಾನೆ. ಆದಿಪುರಾಣದಲ್ಲಿ ತಾನು 'ದುಂದುಭಿಸಂವತ್ಸರೋದ್ಭವಂ। ಎಂದೂ, ಆಗ್ರಂಥವು "ಶಕವರ್ಷಮೆಂಟುನೂರ। ಕ್ಕೆ ಕಡೆಯೊಳಱುವತ್ತುಮೂಱು ಸಂದಂದು ಜಗ॥ ತ್ಪ್ರಕಟಪ್ಲವಸಂವತ್ಸರ * * * * * 'ದಲ್ಲಿ ಸಂಪೂರ್ಣವಾಯಿತೆಂದೂ ಬರೆದಿದ್ದಾನೆ. ಶಾಲಿವಾಹನಶಕ 863, ನೆಯ ವರ್ಷವು ಕ್ರಿ. ಶ 941 ನೆಯ ವರ್ಷಕ್ಕೆ ಸರಿಯಾಗುತ್ತದೆ. ಇವನು ಈಪ್ಲವದ ಹಿಂದಣ ದುಂದುಭಿಸಂವತ್ಸರದಲ್ಲಿ—ಎಂದರೆ 39 ವರ್ಷಗಳ ಹಿಂದೆ—ಹುಟ್ಟಿರಬೇಕು. ಆದುದರಿಂದ ಇವನ ಜನ್ಮವರ್ಷವು ಶಕವರ್ಷ 824 ಕ್ಕೆ ಸರಿಯಾದ ಕ್ರಿ. ಶ 902 ನೆಯ ವರ್ಷವಾಗಿರಬೇಕು.

ಇವನ ವಿದ್ಯಾಭ್ಯಾಸವೇ ಮೊದಲಾದ ಸಂಗತಿಗಳು ಆವುವೂ ತಿಳಿದು ಬಂದಿಲ್ಲ. ಆದರೆ ತನ್ನ "ಗುರು, ದೇವೇಂದ್ರಮುನೀಂದ್ರಂ" ಎಂದು ಹೇಳಿಕೊಂಡಿರುವುದರಿಂದ ಇವನು ದೇವೇಂದ್ರಮುನಿಯಲ್ಲಿ ವಿದ್ಯೆಯನ್ನು ಕಲಿತನೆಂದು ತೋರುತ್ತದೆ. ಈ ದೇವೇಂದ್ರಮುನಿ ಮಹಾಪ್ರಖ್ಯಾತನಾಗಿ ರಾಜಾಧಿರಾಜರುಗಳಿಂದ ಪೂಜಿತನಾಗಿದ್ದಂತೆ, ಶ್ರವಣಬೆಳ್ಗೊಳದ 4 ನೆಯ ಶಾಸನದಲ್ಲಿ ದೊರೆವ—ಅಜನಿ ಮಹಿಪಚೂಡಾರತ್ನರಾರಾಜಿತಾಂಘ್ರಿಃ। ವಿಜಿತಮಕರಕೇತೂದ್ದಂಡದೋರ್ದಂಡಗರ್ವಃ॥ ಕುನಯನಿಕರ

ಭೂಧ್ರಾನೀಕದಂಭೋಳಿದಂಡ । ಸ್ಸ ಜಯತು ವಿಬುಧೇಂದ್ರೋ ಭಾರತೀ ಭಾಳಪಟ್ಟಃ—ಎಂಬ ಶ್ಲೋಕದಿಂದ ತಿಳಿಯುಬರುತ್ತದೆ.

ಪಂಪನ ಬಾಲ್ಯಕಾಲದ ಆವಸಂಗತಿಗಳೂ ತಿಳಿದು ಬಂದಿಲ್ಲ ; ಪ್ರಾಪ್ತವಯಸ್ಕನಾದಮೇಲೆ ಅವನ ವಿಷಯವಾಗಿ ಕೆಲವು ಸಂಗತಿಗಳು ತಿಳಿದು ಬಂದಿವೆ. ಅವನ ಆಕೃತಿ ಅತ್ಯುನ್ನತವಾಗಿಯಾಗಲಿ ಅತಿಕುಬ್ಜವಾಗಿಯಾಗಲಿ ಇರದೆ ಮಧ್ಯಮವಾಗಿಯೂ ಅವನ ದೇಹಚ್ಛಾಯೆ ಕದಳೀಗರ್ಭದಂತೆ ಶ್ಯಾಮವಾಗಿಯೂ ತಲೆಯ ಕೂದಲು ಮೃದುವಾಗಿಯೂ ಕುಟಿಲವಾಗಿಯೂ ಮುಖವು ಪ್ರಸನ್ನವಾಗಿ ಮನೋಹರವಾಗಿಯೂ ಇದ್ದುವು. ಧ್ವನಿ ದುಂದುಭಿಗಭೀರವಾಗಿತ್ತು ; ಮಾತುಗಳು ಮೃದುವಾಗಿಯೂ ಮಿತವಾಗಿಯೂ ಇದ್ದುವು. ಅವನು ಉಡುಪುಗಳಲ್ಲಿ ಅತ್ಯಾಡಂಬರವುಳ್ಳವನಾಗಿರದೆ ಮಿತವಾಗಿ ಮಧುರವೇಷನಾಗಿದ್ದನು. ಅಭಿಜನರಲ್ಲಿ ಪ್ರೇಮವುಳ್ಳವನಾಗಿದ್ದನು ; ಸುಕವಿಗಳ ಯಶಸ್ಸಿನಲ್ಲಿ ಸ್ವಲ್ಪವೂ ಮಾತ್ಸರ್ಯವುಳ್ಳವನಾಗಿರಲಿಲ್ಲ ; ಸ್ವಭಾವದಿಂದ ಧೈರ್ಯಶಾಲಿಯಾಗಿದ್ದನು.

ಪಂಪನು ಪಂಡಿತನಾಗಿದ್ದರೂ ವಿದ್ಯೆಯಿಂದ ತನ್ನ ಜೀವಿಕೆಯನ್ನು ಸಂಪಾದಿಸಿಕೊಳ್ಳುತ್ತಿದ್ದಂತೆ ತೋರುವುದಿಲ್ಲ. 'ಚತುರಂಗಬಳಲಯುಂಕರಣಂ' ಎಂದೂ 'ನಿಷ್ಕಂಪಂ' ಎಂದೂ 'ಜೋಳದ ಪಾಳಿನಿಜಾಧಿನಾಥನಾಹವದೊಳರಾತಿನಾಯಕರ ಪಟ್ಟವೆ ಸಾರಿಸೆ ಸಂದಪೆಂಪು ಭೂ । ಭುವನದೊಳಾವಗಂ ಬೆಳಗೆ ಮಿಕ್ಕಭಿಮಾನದ ಮಾತು ಕೀರ್ತಿಯುಂ । ವಿವರಿಸೆ ಸಂದನೇಂಕಲಿಯೋ * * ಗುಣಾರ್ಣವಂ' ಎಂದೂ ಹೇಳಿಕೊಂಡಿರುವುದರಿಂದ ಈತನು ಪರಾಕ್ರಮಶಾಲಿಯಾಗಿ ದಂಡನಾಥನಾಗಿದ್ದಂತೆ ತೋರುತ್ತದೆ. ಇವನ ಪೋಷಕನು ಪ್ರಖ್ಯಾತನಾದ ಅರಿಕೇಸರಿರಾಜನು.

ಈ ರಾಜನು ಆ ಕಾಲದಲ್ಲಿ ಪುಲಿಗೆರೆಯಲ್ಲಿ ಆಳುತ್ತಿದ್ದನು. ಇವನು ಚಾಳುಕ್ಯವಂಶದವನು. ಚಾಳುಕ್ಯರ ಮೂಲಪುರುಷನಾದ ಯುದ್ಧಮಲ್ಲನು ಹಿಂದೆ 'ಸಪಾದಲಕ್ಷ' ದೇಶಕ್ಕೆ ಅಧಿಪನಾಗಿದ್ದನು. ಅವನಿಗೆ ಅರಿಕೇಸರಿ ಎಂಬ ಮಗನು ಹುಟ್ಟಿದನು. ಇವನು ನಿರುಪಮದೇವನ ರಾಜ್ಯವನ್ನು ಜಯಿಸಿ ಪ್ರಖ್ಯಾತನಾದನು. ಈತನಿಗೆ ನರಸಿಂಹ, ಭದ್ರದೇವ ಎಂಬ ಇಬ್ಬರು ಮಕ್ಕಳಾದರು. ಈ ನರಸಿಂಹನಿಗೆ ದುಗ್ಧಮಲ್ಲನೆಂಬ

ಪುತ್ರನು ಜನಿಸಿದನು. ಇವನ ಗರ್ಭದಲ್ಲಿ ಬದ್ದೆಗನೆಂಬವನು ಅವ ತರಿಸಿ ನಾಲ್ವತ್ತೆರಡುವಿಧವಾದ ಕಾಳಗಗಳಲ್ಲೂ ಪ್ರಾಜ್ಞನಾಗಿ ಸೋಲದ ಗಂಡನೆಂಬ ಬಿರುದನ್ನು ಪಡೆದಿದ್ದನು. ಇವನ ಸುತನಾದ ದುಗ್ಧಮಲ್ಲ ನಿಗೆ ನರಸಿಂಹನೆಂಬ ಕುಮಾರನು ಹುಟ್ಟಿದನು. ಈ ಶೂರನು ಲಾಳ ರನ್ನು ಜಯಿಸಿ, ಏಳು 'ಮಾಳಳ' ವನ್ನೂ ಇರಿದು, ವಿಜಯಗಜಗ ಳನ್ನು ಹಿಡಿದು, ತನ್ನ ತುರಗವನ್ನು ಗಂಗಾವಾರ್ಧಿಯಲ್ಲಿ ತೊಳೆದು, ತನ್ನ ಪ್ರಿಯಮಿತ್ರನಾದ ಸಂಗನನ್ನು ಸ್ಥಾಪಿಸಿದನು. ಇವನಿಗೆ ಜಾಕವ್ವೆ ಪಟ್ಟ ಮಹಿಷಿಯಾದಳು. ಇವರ ಪುತ್ರನೇ ಪಂಪನ ಸ್ವಾಮಿಯಾದ ಅರಿಕೇ ಸರಿನೃಪಾಲನು. ಈತನು ಸಾಮಂತಮಣಿಯೆಂದು ಪ್ರಖ್ಯಾತನಾಗಿದ್ದನು. ಈತನಿಗೂ ಪಂಚಮಹಾಶಬ್ದವೇ ಮೊದಲಾದ ರಾಜಚಿಹ್ನಗಳುಂಟು; ಪ್ರಿಯಗಳ್ಳ ಗುಣಾರ್ಣವ ಮೊದಲಾದ ಬಿರುದುಗಳೂ ಇದ್ದುವು.

ಈರಾಜನು ಕವಿಯನ್ನು ಬರಿಸಿಕೊಂಡು ಅವನಿಗೆ ಬೇಕಾದಹಾಗೆ ಧನಕನಕಾದಿಗಳನ್ನು ಕೊಟ್ಟು ತನ್ನ ಖ್ಯಾತಿ ಆಚಂದ್ರಾರ್ಕವಾಗಿ ನಿಲ್ಲು ವಹಾಗೆ ಬಂದು ಕಾವ್ಯವನ್ನು ಬರೆದು ಒಪ್ಪಿಸುವಂತೆ ಆಜ್ಞಾಪಿಸಿದನು. ಕವಿ ಅದಕ್ಕೆ ಒಪ್ಪಿಕೊಂಡು ಮೂರುತಿಂಗಳಲ್ಲಿ ಆದಿಪುರಾಣವನ್ನೂ ಆರು ತಿಂಗಳಲ್ಲಿ ಭಾರತವನ್ನೂ ಬರೆದು ತನ್ನ ಪ್ರತಿಜ್ಞೆಯನ್ನು ನೆರವೇರಿಸಿದನು. ಭಾರತವನ್ನು ಕೇಳಿ ರಾಜನು ಸಂತುಷ್ಟನಾಗಿ, ಕವಿಗೆ ಪಂಚರತ್ನಗ ಳನ್ನೂ ಉಡುಗೊರೆಗಳನ್ನೂ ಗ್ರಾಮಗಳನ್ನೂ ಜೀವಧನಗಳನ್ನೂ ಸಮೃದ್ಧಿಯಾಗಿ ಕೊಟ್ಟು ತನ್ನ ಪಕ್ಕದಲ್ಲಿ "ಪಿರಿಯಬಿತ್ತರಿಗೆ" ಯನ್ನು ಇರಿಸಿ "ಪಿರಿದಪ್ಪ ಗೌರವದ ಮೈಮೆಯು ಮನ್ನಣೆಯುಮೊಳ್ಪನಟ್ಟಿಯುಂ" ದ ಕವಿಯನ್ನು ಗೌರವಿಸಿ, ಬಚ್ಚಿಸಾಸಿರದ ಧರ್ಮಪುರಕ್ಕೆ ಸಾರವೆಂದು ಹೆಸರಿಟ್ಟು ಶಾಸನಾಗ್ರಹಾರವಾಗಿ ಕೊಟ್ಟನು.

ಹೀಗೆ ಬಂದ ಬಹುಮಾನಗಳೊಡನೆ ಪಂಪನಿಗೆ ಅನೇಕವಾದ ಬಿರುದುಗಳೂ ಬಂದುವು. ಇವನ ಕಾವ್ಯವು ಸುಕವಿಜನಶ್ಲಾಘ್ಯವಾದು ದರಿಂದ ಇವನು ಸುಕವಿಜನಮನೋಮಾನಸೋತ್ತಂಸಹಂಸನಾದನು. ಇವನ ಕವಿತ್ವವು ಸಮುದ್ರದಂತೆ ನಿಶ್ಶ್ಯವೂ ನೂತನವೂ ಗಂಭೀರವೂ ಆದುದರಿಂದ ಕವಿತಾಗುಣಾರ್ಣವನೆನಿಸಿದನು. ಇವನು ತನ್ನ ಕಾವ್ಯದಲ್ಲಿ

ಸಂಸಾರಸಾರವಾದ ಧರ್ಮವನ್ನು ವರ್ಣಿಸಿರುವುದರಿಂದ ಸಂಸಾರಸಾರೋದಯನೆನಿಸಿಕೊಂಡನು. ಇವನ ವಾಗ್ವಿಲಾಸವು ಸರಸ್ವತಿಗೆ ಅಲಂಕೃತಿಪ್ರಾಯವಾಗಿರುವುದರಿಂದ ಸರಸ್ವತೀಮಣಿಹಾರನಾದನು. ಈ ಆದಿಪುರಾಣವನ್ನು ಬರೆದುದರಿಂದ ಪುರಾಣಕವಿಯೆನಿಸಿದನು. ಈ ಬಿರುದುಗಳಲ್ಲೆಲ್ಲಾ ಕವಿತಾಗುಣಾರ್ಣವನೆಂಬ ಬಿರುದೇ ಕವಿಗೆ ಪ್ರಿಯವಾದುದೆಂದು ತೋರುತ್ತದೆ. ಇದು ಆದಿಪುರಾಣದಲ್ಲಿಯೂ ಭಾರತದಲ್ಲಿಯೂ ಆಶ್ವಾಸಾಂತ್ಯದ ಗದ್ಯಗಳಲ್ಲಿ ತಪ್ಪದೆ ದೊರೆಯುತ್ತದೆ. ಸರಸ್ವತೀಮಣಿಹಾರಂ ಎಂಬುದು ಆದಿಪುರಾಣದಲ್ಲಿ ಆಶ್ವಾಸಗಳ ಮೊದಲನೆಯ ಪದ್ಯದ ಕೊನೆಯಲ್ಲಿಯೂ, ಸುಕವಿಜನಮನೋಮಾನಸೋತ್ತಂಸಹಂಸಂ ಸಂಸಾರಸಾರೋದಯಂ ಎಂಬುವು ಆಶ್ವಾಸಗಳ ಕಡೆಯ ಎರಡುಪದ್ಯಗಳ ಅಂತ್ಯದಲ್ಲಿಯೂ ಪ್ರಾಯಃ ದೊರೆಯುತ್ತವೆ.

ಪಂಪನು ತನಗೆ ಹಿಂದೆ ಇದ್ದ ಕರ್ಣಾಟಕಕವಿಗಳಲ್ಲಿ ಒಬ್ಬರ ಹೆಸರನ್ನೂ ಹೇಳಿಲ್ಲ. ಸಂಸ್ಕೃತಕವಿಗಳಲ್ಲಿ ವ್ಯಾಸಮುನಿ, ಸತ್ಕವಿವ್ಯಾಸ—ಎಂಬಿಬ್ಬರು ಹೊರತಾಗಿ ಬೇರೆ ಯಾವ ಕವಿಗಳನ್ನೂ ಸ್ಮರಿಸಿಲ್ಲ. ಆದರೂ ಶ್ರೀಹರ್ಷ, ಕಾಳಿದಾಸ, ಭಾರವಿ, ಬಾಣ, ಮೊದಲಾದ ಕವಿಗಳಿಂದ ಅನೇಕ ಭಾವಗಳನ್ನು ತೆಗೆದುಕೊಂಡು ಕನ್ನಡಿಸಿದ್ದಾನೆ. ಅವುಗಳೆಲ್ಲವನ್ನೂ ಇಲ್ಲಿ ಬರೆವುದು ಅನಾವಶ್ಯಕವಾದುದರಿಂದ ದಿಕ್ಪ್ರದರ್ಶನಾರ್ಥವಾಗಿ ಕೆಲವನ್ನು ಉದಾಹರಿಸುತ್ತೇವೆ.

ಆ ದಿ ಪು ರಾ ಣ .

ಡಿಸಲ್ ಪಂಕಜದುರ್ಕನೇಂ ನೆಱೆಯ
ದೋ ನೇತ್ರೋತ್ಪಳಾನಂದಮಂ । ಪಡೆಯ
ಲ್ ಸಾಲದೊ ಮನ್ಮಥಂಗೆ ಜಯಮಂ
ಮೋಹೋಯಿದೋ ಸಾಲದೇಂ ॥ ಗಡಮಾ
ಕಾಂತೆಯ ವಕ್ತ್ರಚಂದ್ರನೆಲೆ ತಾನೇನೆಂದು
ಚಂದ್ರಂ ನಭ । ಕ್ಕೆ ಡರ್ಪಂ ಗೆಲ್ಲದೆ ತನ್ನೊ
ಳುಳ್ಳಮೃತಮಂ ಬಿಂಬಾಧರಸ್ಥಾಮೃತಂ ॥
ಪುಟ. 169. ಆಶ್ವಾಸ 7. ಪದ್ಯ 85

किं पद्मस्य रुचिं न हन्ति नयनानन्दं-
विधत्ते न किं । वृद्धिं वा झषकेतनस्य
कुरुते नालोकमात्रेण किं ॥ वक्त्रेन्दौ
तव सत्ययं यदपरश्शीतांशुरुज्जृंभते
दर्पस्स्यादमृतेन चेदिह तदप्यस्त्येव बिं-
बाधरे ॥
रत्नावल्यां द्वितीयेऽङ्के ११ तमः श्लोकः.

—o—

ತಂದೆಯ ರೂಪೆ ತಂದೆಯ ವಿಳಾಸಮೆ
ತಂದೆಯ ಚೆಲ್ವೆ ತಂದೆಯೊಂ । ದಂದಮೆ
ತಂದೆಯೊಂದು ನುಡಿಯೋಜೆಯೆ ತನ್ನೊ
ಳಮರ್ಕೆವೆತ್ತುದಾ ॥ ನಂದಕರಂ ಕರಂ
ಸೊಗಯಿಸುತ್ತಿರೆ ಶೋಭಿಸಿದಂ ಕುಮಾ
ರನಾ । ನಂದಿತರೂಪನಂದೆಸೆಯೆ ತಂದೆ
ಯೊಳಚ್ಚಿನೊಳೊತ್ತಿದಂತೆವೋಲ್ ॥

ಪುಟ. 204. ಆಶ್ವಾಸ. 8. ಪದ್ಯ 43.

—0—

ಬಗೆದುಂ ನಿನ್ನನ್ವಯೋನ್ನತಿಯು
ನಿವಳತಿಸ್ನೇಹಸಂಬಂಧಮಂ ನೀಂ । ಬಗೆ
ದುಂ ಸಂದೆಮ್ಮನಣ್ಪಂ ಬಗೆದುಮಱಿ
ಯದೇ ನಾನುಮೆಂದಾಗಳುಂ ಮೆ । ಲ್ಲಗೆ
ನೀಂ ಕಲ್ಪಿಪ್ಪುದೆಮ್ಮಂ ನೆನೆದೆರ್ದೆಗಿಡದಂ
ತಾಗೆ ಪಾಲಿಪ್ಪುದಿಂತೀ । ಮೃಗಶಾಬೇಕ್ಷಾ
ಕ್ಷಿಯಂ. * * *

ಪುಟ. 91. ಆಶ್ವಾಸ. 4. ಪದ್ಯ 55.

—0—

ಅಂತು ಮಹೀಭಾಗಮೆಲ್ಲಂ ಚತುರಂಗ ಮಯಮುಂ, ದಿಗ್ವಿಭಾಗಮೆಲ್ಲಂ ರಜೋಮಯಮುಂ, ನಭೋಭಾಗಮೆಲ್ಲಂ ದಿವಿಜವಿದ್ಯಾಧರಮಯಮುಂ, ಅನ್ತರಿಕ್ಷಮೆಲ್ಲಮಾತಪತ್ರಮಂಡಳಮಯಮುಂ, ಸಮೀರಣಸಂಚರಣಮೆಲ್ಲಂ ಮದಗಂಧಮಯಮುಂ, ಸೃಷ್ಟಿಯೆಲ್ಲಮವನಿಪಾಳಮಯಮುಂ, ಭುವನವಿವರಮೆಲ್ಲಂ ಜಯಜಯನಿನಾದಮಯಮುಮಾಗಿ;

ಪುಟ. 278. ಆಶ್ವಾಸ 11. 35 (ಗ).

—0—

ಬಳೆದ ತಮೋಮದೇಭಘಟೆಯೊಡ್ಡೊ
ಡೆವನ್ನೆಗಮುನ್ನತೋದಯಾ । ಚಳ
ಗುಹೆಯಿಂ ಲಸತ್ಕಿರಣಕೇಸರಮಂ ಪರಪ್ಪು
ತ್ತುಮಾಗಳಾ । ಗುಳಿಸುವ ಬಾಯಕೆಂಪ

रूपं तदोजस्वि तदेव वीर्यं तदेव नैस-
र्गिकमुन्नतत्वं ॥ न कारणात्स्वाद्बिभि-
दे कुमारः प्रवर्तितो दीप इव प्रदीपात्॥

रघुवंशे ५ मसर्गे ३७ तमः श्लोकः.

—0—

अस्मान् साधु विचिंत्य संयमधना
नुच्चैः कुलं चात्मनः त्वय्यस्याः कथ-
मप्यबांधवकृतां स्नेहप्रवृत्तिं च तां ॥
सामान्यप्रतिपत्तिपूर्वकमियं दारेषु दृ-
श्या त्वया भाग्यायत्तमतः परं न
खलुतद्वाच्यं वधूबंधुभिः ॥

शाकुंतले ४ थें अङ्के.

—0—

क्षणेन च तुरगमयमिव महीतलं, कुंजरमयमिव दिक्चक्रवालं, आतपत्रमंडलमयमिवांतरिक्षं, इभमदगंधमय इव समीरणः, भूपालमयीव प्रजासृष्टिः
* * * *
जयजयशब्दमयमिव त्रिभुवनमभवन्.

*कादंबर्यां ११२ तमे पुटे.

—0—

शशिकेसरिकरनखरविदार्यमाण
करिकुंभसंभवेन.....................

कादंबर्यां १६० तमे पुटे.

*डाक्टर् पीटर्सनेन मुद्रितायां.

ನುದಯಂಗೆಯೆ ಪೊಣ್ಮುವ ಕೆಂಪು ಪೋಲ್ತೆ
ನಂ । ತಳರೆ ಬೆಡಂಗಿನೊಳ್ ಪುದಿದುದೆಲ್ತಿರ
ಮುದ್ಗತಚಂದ್ರಸಿಂಹದಾ ॥
ಪುಟ. 303. ಆಶ್ವಾಸ. 12. ಪದ್ಯ 5.

—0—

ನೆಱೆದೈ ಸಂಜೆಯೊಳೆಂದು ಕಾಯ್ದೊದೆ
ದೊಡೇನಾತ್ಮಾಂಗದೊಳ್ ರೋಹಿಣೀ । ಚ
ರಣಾಲಕ್ತಕರಾಗಮಚ್ಚೊಱಿದುದೋ ಮೇಣ್
ಕಾಮಿಗಳ್ಗೀವ ರಾ । ಗರಸಂ ಪೊಣ್ಮಿ
ದುದೋ ತಮೋಗಜದ ಕೋಡೇಱಿಂದ
ಮೇಂ ನೊಂದುದೋ । ಹರಿಣಾಂ ಮೇಣೆ
ನಿಸಿತ್ತು ರಕ್ತರುಚಿಯಿಂ ಬಿಂಬಂ ಸುಧಾ
ಸೂತಿಯಾ ॥
ಪುಟ. 303. ಆಶ್ವಾಸ 12. ಪದ್ಯ 6.

—0—

ನೆಲಸುಗೆ ನಿನ್ನ ವಕ್ಷದೊಳೆ ನಿಶ್ಚಳ
ಮೀಭಟಖಡ್ಗಮಂಡಲೋ । ತ್ಪಲವನವಿ
ಭ್ರಮಭ್ರಮರಿಯಪ್ಪ ಮನೋಹರಿ ರಾಜ್ಯ
ಲಕ್ಷ್ಮಿ * *
ಪುಟ. 384. ಆಶ್ವಾಸ 14. ಪದ್ಯ 130

—0—

ವಿಕ್ರಮಾರ್ಜುನವಿಜಯ.

ಸಾಲಪ್ರಾಂಶು ವಿಶಾಲಲೋಲನಯನಂ
ಪ್ರೋದ್ಯದ್ವೃಷಸ್ಕಂಧನು । ನ್ಮೀಲತ್ಪಂಕ
ಜವಕ್ತ್ರನಾಯತಭುಜಾಗ್ರೋವ್ಯೋರಸ್ಸ್ಥಲಂ
ದೀರ್ಘಬಾ । ಹಾಲಂಬಂ. * *
ಪುಟ. 11. ಆಶ್ವಾಸ. 1. ಪದ್ಯ. 67.

—0—

ಧ್ಯಾನದೊಳಭವಂ ನೆಱೆದಿನಿ
ಸಾನುಮನರೆಮುಚ್ಚಿ ಕಣ್ಗಳಂ ನಿಶ್ಚಳಿತಂ ।
ತಾನಿರ್ದ ಮಾಱಿದು ಕೆಂದಿದ
ಮೀನಂ ತಳ್ತಿಡದಿರ್ದ ಮಡುವಂ ಪೋಲ್ತಂ
ಪುಟ. 169. ಆಶ್ವಾಸ 8. ಪದ್ಯ 13.

रतिकलहकुपितरोहिणीचरणाल
क्तकरसलांछितमिव अभिनवोदयलो-
हितं रजनिकरमुदितं विलोक्य……
कादंबर्यां १६१ तमे पुटे.

—0—

इयं हि सुभटखड्गमण्डलोत्पलवन-
विभ्रमभ्रमरी लक्ष्मीः । * *
कादम्बर्यां १०४ तमे पुटे.

—0—

व्यूढोरस्को वृषस्कन्धः सालप्रांशुर्म
हाभुजः ॥
रघुवंशे. प्रथमसर्गे १३ श्लोकः.

—0—

इति विज्ञापितो राज्ञा ध्यानस्तिमि-
तलोचनः । क्षणमात्रमृषिस्तस्थौ सुप्त-
मीन इव ह्रदः ॥
रघुवंशे प्रथमसर्गे ७३ तमः श्लोकः.

—0—

ನುಡಿವೊಡೆ ರಾಜಕಾರ್ಯನಯಮೆತ್ತ
ಬಲಾಜನದೋ * * ತ್ತುಡುಪತಿವಂಶ
ನೋಡುವೊಡಿದೋ * ಘಟಿಂಗಳೆಂತುಕೇ ।
ಳ್ನುಡಿಯದೆ ಕೆಮ್ಮಗಿರ್ದೊಡ ಮಿರಲ್ಕಣ
ಮಾಯದೆ ನಿಮ್ಮೊಳೇನುಮಂ । ನುಡಿಯಿ
ಸಿದಪ್ಪುವಾಕುರುಕುಳರ್ಕಳೆಗೆಯ್ದಪರಾಧ
ಕೋಟಿಗಳ್ ॥

ಪುಟ. 157. ಅಶ್ವಾಸ. 7. ಪದ್ಯ 44

—0—

ಪೋಗಿಸುಪರ್ವಪರ್ವತದ ಕಾಂಚನ
ತೂಣೆಗಳಂ ಪರಾಕ್ರಮೋ । ದ್ಯೋಗದಿ
ನೆತ್ತಿತಂದು ನಿನಗಿತ್ತದಟಂ ಬಡಪಟ್ಟು
ಟ್ಟಿದೊಳ್ ॥ ಪೋಗಿ ತೊಟಿಲ್ವು ನಾರ್ಗ
ಳನುಡಲ್ತರುತಿರ್ದಲೆ ಮಾಜಲಾರ್ತನಿಲಾ
ಗಳೆ ಕೋಪವಂ ನಿನಗೆ ಸಂಚಿತಶೌರ್ಯ
ದಿನಾ ಧನಜಂಯಂ ॥

ಪುಟ. 157. ಆಶ್ವಾಸ. 7. ಪದ್ಯ 46

—0—

ಬಳ್ವಳನೀಳ್ದ ಕಣ್ಮಲರ ತಳ್ತಮೆಯಿಂ
ಕರೆಗಣ್ಮಿ ಪಳ್ಗಡ । ಲ್ಗಳ್ಸರಿಯಲ್ಕಮಾಟಿಸಿ
ದೊಡೊಯ್ಯನೆ ಮಂಗಳಗೀತಿ ಭೀತಿಯಂ ।
ತಳ್ವದೆಮಾಡೆ ಬಾಷ್ಪಜಳಮಂ ತಳೆದಟ್ಟಿಕಿ
ನೀಯೆ ಸಂಬಳಂ । ಗೊಳ್ವವೊಲಾತಳೋ
ದರಿಯ ಚಿತ್ತಮ ನಿಟ್ಟಿಕೆ ಗೊಂಡನಂತರಂ,

ಪುಟ. 161. ಆಶ್ವಾಸ. 7. ಪದ್ಯ 66.

—0—

ಸಮದಗಜಗಮನೆಯುಮರ್ಗಿ
ಲ ಮೇಲೆ ನಡೆಪಾಡುವಾಕೆಗಳ್ ತಮಗೆ
ಧರಾ ।
ಗಮನಂ ಪೊಸತಪ್ಪುದಱಿಂ
ದಮರ್ದಿರೆ . . ನಡೆಯಲಾಱದೆ ಸುೞಿದರ್ ॥

भवादृशेषु प्रमदाजनोदितं भवत्यधि-
क्षेप इवानुशासनं । तथापि वक्तुं व्यव-
साययंति मां निरस्तनारीसमया दुरा-
धयः ॥

भारवौ प्रथमसर्ग २८ तमः श्लोकः.

—0—

विजित्य यः प्राज्यमयज्यदुत्तरान्
कुरूनकुप्यं वसु वासवोपमः । स व-
ल्कवासांसि तवाधुना हरन् करोति
मन्युं न कथं धनंजयः ॥

भारवौ प्रथमसर्गे ४२ तमः श्लोकः.

—0—

तुषारलेखाकुलितोत्पलाभे पर्यश्रु-
णी मंगलभंगभीरुः । अगूढभावापि
विलोचने सा न लोचने मीलयितुं विषे
हे ॥ अकृत्रिमप्रेमरसाभिरामं रामार्पितं
दृष्टिविलोभि दृष्टं । मनःप्रसादाञ्जलि-
ना निकामं जग्राह पाथेयमिवेंद्रसूनुः ॥
भारवौ द्वितीयसर्गे ३६-३७तमौ श्लोकौ.

—0—

द्रुततरमभियातुमिच्छतीनां
गगनपरिक्रमलाघवेन तासां ।

ಮುಡಿಯ ಕುಚಯುಗದ ಜಘನದ
ಕಡುವಿಣ್ಪಿಂ ಮಣಲೊಳೞ್ದು ಬರೆಮೆಲ್ಲಡಿಗಳ್
ನಡೆಯದ ಜೀವಸಮಂ ತಾಂ
ನಡೆಯಿಸುವಂತವರ್ಗಳೊಯ್ಯನೊಯ್ಯನೆ ಬಂದರ್

ಪುಟ. 164. ಆಶ್ವಾಸ. 7. ಪದ್ಯ 82-83.

अवनिषु चरणैः पृथुस्तनीनामलघुनितंबतया चिरं निपेदे ॥

भारवौ–दशमसर्गे–तृतियः श्लोकः.

—o—

ಹರಜಟಾಜೂಟಕ್ಕೆ ಚಂದ್ರಲೇಖೆಯಪ್ಪಂತೆ ದಿಕ್ಕರಿಕರಟತಟಕ್ಕೆ ಮದಲೇಖೆಯಂತೆ ಕೈಟಭಾರತಿಯ ವಿಶಾಲೋರಸ್ಸ್ಥಲಕ್ಕೆ ಕೌಸ್ತುಭವಿರ್ಪಂತೆ.

ಪುಟ. 9. 56. ಗದ್ಯ.

चंद्रलेखेव हरजटाकलापस्य कौस्तुभप्रभेव कैटभारि वक्षस्स्थलस्य...... मदलेखेव दिग्गजस्य ॥

कादंबर्यां–९६तमे–पुटे.

—o—

—o—

ಈರೀತಿಯಾಗಿ ಪಂಪನು ಸಂಸ್ಕೃತಕವಿಗಳಿಂದ ಕೆಲವು ವಾಕ್ಯಗಳನ್ನೂ ಅಭಿಪ್ರಾಯಗಳನ್ನೂ ತೆಗೆದುಕೊಂಡ ಮಾತ್ರದಿಂದಲೇ ಅವನಿಗೆ ಕೃತಿಚೌರ್ಯದೋಷವು ಉಂಟಾಯಿತೆಂದಾಗಲಿ ಪ್ರತಿಭೆಯಿಲ್ಲವೆಂದಾಗಲಿ ಭಾವಿಸಕೂಡದು. ಆದಿಪುರಾಣವನ್ನು ಮೂರುತಿಂಗಳಲ್ಲಿಯೂ ಭಾರತವನ್ನು ಆರುತಿಂಗಳಲ್ಲಿಯೂ ಬರೆದುದೇ ಅವನ ಅದ್ವಿತೀಯವಾದ ಪಾಂಡಿತ್ಯಕ್ಕೂ ಅನ್ಯಾದೃಶವಾದ ಪ್ರತಿಭೆಗೂ ಸಾಕಾದ ನಿದರ್ಶನವಾಗಿದೆ. ಆದುದರಿಂದ ಅವನು ಹೀಗೆ ಮಾಡಿದುದಕ್ಕೆ ಬೇರೆ ಕಾರಣವಿರಬೇಕು. ಸಂಸ್ಕೃತದ ಉದ್ದಾಮಕವಿಗಳ ಅಭಿಪ್ರಾಯಗಳನ್ನು ಮನೋಹರವಾಗಿ ಕನ್ನಡಿಸಿ ಕನ್ನಡಿಗರಲ್ಲಿ ಪ್ರಚಾರಕ್ಕೆ ತರಬೇಕೆಂಬ ಉದ್ದೇಶವೇ ಕಾರಣವಾಗಿರಬಹುದು. ಇದು ಹೇಗಾದರೂ ಇರಲಿ; ಹೀಗೆ ಮಹಾಕವಿಗಳ ಸರ್ವವಿದಿತವಾದ ಅಭಿಪ್ರಾಯಗಳನ್ನು ಭಾಷಾಂತರಗಳಲ್ಲಿ ಉಪಯೋಗಿಸಿಕೊಳ್ಳುವುದರಿಂದ ಆವದೋಷವೂ ಇಲ್ಲ' ಈ ಅಭಿಪ್ರಾಯದಿಂದಲೇ ಆವಕವಿಗಳೂ ಈತನಲ್ಲಿ ದೋಷಾರೋಪಣೆ

ಯನ್ನು ಮಾಡಿಲ್ಲ. ಅಷ್ಟೇ ಅಲ್ಲ; ಕನ್ನಡದ ಮಹಾಕವಿಗಳೆಲ್ಲರೂ ಈ ತನನ್ನು ಏಕಕಂಠರಾಗಿ ಸ್ತುತಿಸಿದ್ದಾರೆ. ಕವಿರತ್ನವೆಂದು ಪ್ರಖ್ಯಾತನಾದ ರನ್ನನು 'ಸುಭಗಕವಿಸಂಪನಿಂ ವಾ । ಗ್ವಿಭವೋನ್ನತಿ ನೆಗೞ್ದುದವನ ಗುಣದೊಳಗೆಸೆದಿ । ದುರ್ಭಯಕವಿಚಕ್ರವರ್ತಿಗ । ಮಭಿನವಕವಿ 'ಚಕ್ರವರ್ತಿಗಂ ದೊರೆಯೊಳರೇ'—ಎಂದು ಹೇಳಿದ್ದಾನೆ. 'ರಸಿಕಾಗ್ರಣಿ ಹಂಪದೇವಂ' ಎಂದು ವರ್ಧಮಾನಪುರಾಣದಲ್ಲಿ ವಾಣೀವಲ್ಲಭನೂ, 'ಪಂಪನೊಂದಸದೃಶಮಪ್ಪಪೂರ್ವರಸಭಾವಂ' ಎಂದು ಧರ್ಮಾಮೃತದಲ್ಲಿ ನಯಸೇನನೂ, 'ಪಂಪನ ಗುಣಂ' ಎಂದು ಸೂಕ್ತಿಸುಧಾರ್ಣವದಲ್ಲಿ ಮಲ್ಲಿಕಾರ್ಜುನನೂ, 'ಪಂಪನ ರೀತಿ' ಯೆಂದು ಜಗನ್ನಾಥವಿಜಯದಲ್ಲಿ ರುದ್ರಭಟ್ಟನೂ, 'ಪಂಪನಿಂಪು' ಎಂದು ಅನಂತನಾಥಪುರಾಣದಲ್ಲಿ ಜನ್ನನೂ, 'ಪಂಪನ ನುಣ್ಪುವೆತ್ತ ನುಡಿ' ಯೆಂದು ಪಾರ್ಶ್ವಪುರಾಣದಲ್ಲಿ ಪಾರ್ಶ್ವಪಂಡಿತನೂ, 'ಸತ್ಕವಿಹಂಪನ ವಾಕ್ಸುಂದರೀ ಸುಭಗಂ' ಎಂದು ಶಾಂತಿನಾಥಪುರಾಣದಲ್ಲಿ ಕಮಲಭವನೂ, ಪಂಪನ ಅದ್ಭುತಶಕ್ತಿಯನ್ನು ತಮ್ಮ ತಮ್ಮ ಅನುಭವಾನುಸಾರವಾಗಿ ಸ್ತುತಿಸಿದ್ದಾರೆ. ಹೆಚ್ಚು ಮಾತುಗಳೇತಕ್ಕೆ? ಪ್ರಸಿದ್ಧವಾದ ರಾಮಚಂದ್ರಚರಿತಪುರಾಣವನ್ನೂ ಮಲ್ಲಿನಾಥಪುರಾಣವನ್ನೂ ಬರೆದ ಮಹಾಕವಿ ನಾಗಚಂದ್ರನು ತನ್ನ ಮಲ್ಲಿನಾಥಪುರಾಣದಲ್ಲಿ 'ಮನ್ನಿಸುಗೆ ಕೃತಿಗೆ ಶೋಭಾ । ಗ್ಯೋನ್ನತಿಯಂ ಸುಕವಿಪಂಪನಾದಿಪುರಾಣಂ' ಎಂದು ಸ್ತುತಿಸಿದುದು ಮಾತ್ರವೇ ಅಲ್ಲದೆ, ತಾನು ಅಭಿನವಪಂಪನೆಂದು ಹೆಸರಿಟ್ಟುಕೊಂಡು ತನಗೆ ಆದಿಪಂಪನಲ್ಲಿದ್ದ ಗೌರವವನ್ನು ಪ್ರಕಟಿಸಿದ್ದಾನೆ.

ಹೀಗೆ ಮಹಾಕವಿಸ್ತುತನಾದವನ ಕಾವ್ಯದ ವಿಷಯವಾಗಿ ನಾವು ಹೇಳಬೇಕಾದುದೇನೂ ಇರುವುದಿಲ್ಲ. ತನ್ನ ಕಾವ್ಯವು 'ವಿದಿತಂ ಪ್ರಾತೀತಿಕಂ ಕೋಮಳಮತಿಸುಭಗಂ ಸುಂದರಂ ಸೂಕ್ತಿಗರ್ಭಂ । ಮೃದುಸಂದರ್ಭಂ ವಿಚಾರಕ್ಷಮಮುಚಿತಪದಂ ಶ್ರವ್ಯಮವ್ಯಾಕುಳಂವ್ಯಾ । ಪ್ತದಿಗಂತಂ ಎಂದೂ 'ಇದು ನಿಚ್ಚಂ ಪೊಸತರ್ಣವಂಬೊಲತಿಗಂಭೀರಂ ಕವಿತ್ವಂ" ಎಂದೂ 'ಇದುವೆ ಸುಕವಿಪ್ರಮೋದಪ್ರದಂ' ಎಂದೂ ಇದರಲ್ಲಿ 'ಅಱಿವುದು ಕಾವ್ಯಧರ್ಮಮಂ' ಎಂದೂ ತನ್ನ ಕಾವ್ಯಗಳು 'ಮುನ್ನಿನ ಕಬ್ಬಮನೆಲ್ಲಮಿಕ್ಕಿ ಮೆಟ್ಟುವುವು' ಎಂದೂ ಪಂಪನೇ ಹೇಳಿ

ಕೊಂಡಿದ್ದಾನೆ. ಈ ಅಭಿಪ್ರಾಯವನ್ನೇ ಸಮರ್ಥಿಸಿ ಪಾರ್ಶ್ವಪಂಡಿತನು—
‘ಚತುರಚಮತ್ಕೃತಿಯುದ್ಘಾ । ಟಿತರಮಣೀಯಂ ದಿಟಕ್ಕೆ ಪಂಪನ ಕೃತಿ
ಮಿ । ಕ್ಕಿತರರ ಕೃತಿತತಿಯುಮಿಚಾ । ರಿತರಮಣೀಯಂ ವಿದಗ್ಧರಂ ಮೆಚ್ಚಿಕು
ಮೇ ॥ ಇಂಪೆಸೆಯೆ ವಿಪಂಚಿಯ ದನಿ । ಯಂ ಪೋಲ್ತಿರೆ ಸುಕರಸರಸ
ಸೂಕ್ತಿವಿಳಾಸಂ ॥ ಪಂಪನ ನುಡಿವಂ * * *
ಬಟೆಕ್ಕೆ ಕಳಕಂಠನ ಪೋಲ್—’ಎಂದೂ, ನಾಗರಾಜನು ‘ಪಸರಿಪ ಕನ್ನ
ಡಕ್ಕೊಡೆಯನೊರ್ವನೆ ಸತ್ಕವಿಪಂಪ’ ನೆಂದೂ ಹೇಳಿದ್ದಾರೆ.

ಪಂಪನು ತನ್ನ ಭಾಷೆ ‘ಪುಟವಹ ಸಾಜದ ಪುಲಿಗೆರೆಯ ತಿರುಳಕನ್ನಡ’ ವೆಂದು ಹೇಳಿದ್ದಾನೆ. ಇದು ವ್ಯಾಕರಣಶುದ್ಧವಾದುದೆಂಬ ವಿಷಯದಲ್ಲಿ ಶಬ್ದಮಣಿದರ್ಪಣಕಾರನ ‘ * * ಹಂಪನ * ಸುಮಾರ್ಗಮಿದಱೊಳ್ ಲಕ್ಷ್ಯಂ’ ಎಂಬ ಮಾತೇ ಸಾಕಾಗಿರುತ್ತದೆ. ಈತನು ಆದಿಪುರಾಣವೊಂದರಿಂದಲೇ ಹತ್ತೊಂಬತ್ತು ಕಡೆಯಲ್ಲಿ ಪದ್ಯಗಳನ್ನು ಉದ್ಧರಿಸಿ ಬರೆದಿದ್ದಾನೆ. । ನಾಗವರ್ಮನು ಭಾಷಾಭೂಷಣದಲ್ಲಿ ‘ಗುರುಹಂಪದೇವ’ ನಿಂದ ಉದಾಹರಣೆಗಳನ್ನು ತೆಗೆದಿದ್ದಾನೆ. ಶಬ್ದಾನುಶಾಸನದಲ್ಲೂ ಇವನ ಗ್ರಂಥದಿಂದ ಪದ್ಯಗಳು ಉದ್ಧೃತವಾಗಿವೆ.

---

1 ಆದಿಪುರಾಣ.				ಶಬ್ದಮಣಿದರ್ಪಣ.	
		ಪುಟ.	ಪದ್ಯ.	ಪುಟ	ಪದ್ಯ.
[1.] ಪರಮಜಿನೇಂದ್ರವಾಣಿಯು ಸರಸ್ವತಿ ಬೇಱದು ಪೆಣ್ಣರೂಪಮಂ । ಧರಿಯಿಸಿ ನಿಂದುದಲ್ತು	ಇತ್ಯಾದಿ	2	9	109	98
[2.] ಶ್ರೀಮತ್ಸಮಂತಭದ್ರಸ್ವಾಮಿಗಳ	„	3	11	125	102
[3.] ಇರು ಮರುಳೆ ಶುಷ್ಕವೈಯಾಕರಣಂಗಂ	„	5	24	272	230
[4.] ಆಯಿರ್ದಮಾಪ್ಕೆಯೊಳ್	„	38	53	64 128	53 104

ಆ ದಿ ಪು ರಾ ಣ .				ಶಬ್ದಮಣಿದರ್ಪಣ.	
[5.] ಸುರತರು ನಂದನಂಗಳಿರ	„	45	4	112 153	95 120
[6.] ವಿನೋದದ ಮೊದಲೆಲ್ಲಿದಂ	„	48	15	136	111
[7.] ಅವರುಮನಂತಕನೊ ಮೆರ್ಯಿ	„	54	35	150	122
[8.] ಇರುಳಿನ ಚಕ್ರಾಹ್ವಯದ ಪೊಲಿರ್ದವಂ ಸುಖಂಬಡೆದಪನೇ.	„	65	68	134	109
[9.] ಓಸರಿಸಿದಜವನಿಕೆಯೊಡ ನೋಸರಿಸಿದ ನಿಸಲೆ ಕಂತು	„	221	21	16	8
[10.] ಅಱುದಿಂಗಳಾಯುಮುಂಟೆನೆ ಮಱುಗುವುದುಂ	„	226	50	224	189
[11.] ಬಾರಿಸಿದುವು ಬಿಡದೆ ಜಡಿದು ವನದೇವತೆಗಳ್	„	235	93	109	88
[12.] ಈಯುಲ್ಬಂದತ್ತು ಕಲ್ಪಾಂ ಘ್ರಿಪಮಭಿಮತಮಂ	„	244	132	64 128 277	53 104 234
[13.] ಮಹೇಂದ್ರಮಹದೈಶ್ವ ರ್ಯಂಗಳೆಲ್ಲ ಧ್ರುವಂ . .	„	263	59	168	137
[14.] ಅವರ್ಕೆಯ್ದಿ ಕವಲ್ಕ ವಲ್ತು ಪಲವುಂ ಕೊಂಬಾದು ಪೊಳ್ಗೊಂಬುಗಳ್	„	289	97	112	90
[15.] ಪಗಲಂತಿರ್ದಚ್ಚವೆಳ್ದಿಂ ಗಳೊಳ್	„	303	9	134	109
[16.] ಅವತಂಸೋತ್ಪಲತಾಡನಂ	„	312	48	173	142
[17.] ಜಳಧಿದ್ವೀಪಾಂತರಾಳಂಗಳ ನಿರದೆ ಪುಗಿಂ ಪೋಗಿಮೃಗಾ ರಿಗಳ್	„	340	44	153	125
[18.] ನ ದೇವಚರಿತಂ ಚರೇತೆನಿಸಿ ದೈ ತ್ರಿಲೋಕೇಶ್ವರಾ	„	353	84	74	61
[19.] ಇನಿಯಮು ವಿಷಯಸುಖಂ . .	„	383	125	117	95

ಇವನ ಗ್ರಂಥದ 'ಕಾವ್ಯಧರ್ಮ' ಸಮೃದ್ಧಿಯನ್ನು ದೃಢೀಕರಿಸುವಂತೆ ಕಾವ್ಯಾವಲೋಕನದಲ್ಲಿ ನಾಗವರ್ಮನೂ, ರಸರತ್ನಾಕರದಲ್ಲಿ ಕವಿಸಾಳ್ವನೂ ಅನೇಕ ಪದ್ಯಗಳನ್ನು ತೆಗೆದು ಉದಾಹರಿಸಿದ್ದಾರೆ. ಮಲ್ಲಿಕಾರ್ಜುನನ ಸೂಕ್ತಿಸುಧಾರ್ಣವದಲ್ಲೂ ಅಭಿನವವಾದಿವಿದ್ಯಾನಂದನನ ಕಾವ್ಯಸಾರದಲ್ಲೂ ಏತತ್ಕೃತವಾದ ಅನೇಕಪದ್ಯಗಳು ದೊರೆಯುತ್ತವೆ.

ಪಂಪನು ಸತ್ಕವಿಯ ಶಕ್ತಿಯನ್ನೂ ಸತ್ಕಾವ್ಯದ ಲಕ್ಷಣಗಳನ್ನೂ 'ಬಗೆಯದು ತಪ್ಪದಾಗಿ ಮೃದುಬಂಧದೊಳೊಂದುವುದೊಂದಿದೇಸೆಯೊಳ್ । ಪುಗುವುದು ಪೊರ್ಕ್ಕಮಾರ್ಗದೊಳೆ ತಳ್ವುದು ತಳ್ತೊಡೆ ಕಾವ್ಯದ ಬಂಧ ಮೊಪ್ಪುಗುಂ * *' 'ಆಸಕಲಾರ್ಥಸಂಯುತಮಳಂಕೃತಿಯುಕ್ತಮುದಾತ್ತಕೀರ್ತಿವಿ । ನ್ಯಾಸಮನೇಕಲಕ್ಷಣಗುಣಪ್ರಭವಂ ಮೃದುಪಾದಮಾದ ಮಾ। ಕ್ಷಿ ್ರಸುಭಗಂ ಕಳಾಕಳಿತಂ' ಎಂಬ ಪದ್ಯಭಾಗಗಳಲ್ಲಿ ವರ್ಣಿಸಿದ್ದಾನೆ. ಈರೀತಿಯಾದ ಗುಣಗಳನ್ನೆಲ್ಲಾ ತಳೆದು ಈಲಕ್ಷಣಗಳಿಗೆ ಅನುಸಾರವಾದ ಕಾವ್ಯಶ್ರೇಷ್ಠವನ್ನು ವಿರಚಿಸಿ ತನ್ನ ಲಕ್ಷಣಕ್ಕೆ ತನ್ನ ಕಾವ್ಯವನ್ನೇ ಲಕ್ಷ್ಯವಾಗಿ ತೋರಿಸಿದವನು ಮಹಾಕವಿಪಂಪನೊಬ್ಬನೇ ಎಂದು ಧಾರಾಳವಾಗಿ ಹೇಳಬಹುದು.

ಪಂಪನು ಸಂಸ್ಕೃತದಲ್ಲೂ ಗ್ರಂಥಗಳನ್ನು ಬರೆದುದಾಗಿ ತಿಳಿಯಬರುತ್ತದೆ. ಇವನ ಕನ್ನಡದ ಕಾವ್ಯಗಳಲ್ಲಿ ಈವರೆಗೆ ತಿಳಿದಿರುವುವು ಪಂಪಭಾರತ ಅಥವಾ ವಿಕ್ರಮಾರ್ಜುನವಿಜಯ, ಆದಿಪುರಾಣ ಎಂಬ ಎರಡು ಗ್ರಂಥಗಳು.

ಪಂಪಭಾರತ ಅಥವಾ ವಿಕ್ರಮಾರ್ಜುನವಿಜಯ.

ಇದು ಚಂಪೂಕಾವ್ಯವು; 14 ಆಶ್ವಾಸಗಳುಳ್ಳುದಾಗಿದೆ. ಇದರಲ್ಲಿ ಭಾರತದಕಥೆ ಹೇಳಿದೆ ಇದನ್ನು ಕವಿ ತನ್ನ ಪೋಷಕನಾದ ಅರಿಕೇಸರಿಯ ಖ್ಯಾತಿಯನ್ನು ಸ್ಥಿರವಾಗಿಸ್ಥಾಪಿಸುವುದಕ್ಕಾಗಿ ವಿರಚಿಸಿದನು. ಇದರಲ್ಲಿ "ಬೆಳಗುವೆಂ ಲೌಕಿಕಮಂ" ಎಂದೂ, "ಉಪಾಖ್ಯಾನಂಗಳೊಳೊಂದುಂ ಕುಂದಲೀಯದೆ ಪೇಳ್ದೆಂ" ಎಂದೂ ಕವಿಯೇ ಹೇಳಿದ್ದಾನೆ. ಈ ಕಾವ್ಯ

ದಲ್ಲಿ ಸಂಸ್ಕೃತಪದಗಳನ್ನು ವಿಶೇಷವಾಗಿ ಬೆರಸದೆ ಕನ್ನಡದ ಪದಗಳನ್ನೇ ಬಹಳವಾಗಿ ಪ್ರಯೋಗಿಸಿದ್ದಾನೆ.

ಈ ಗ್ರಂಥದ ವಿಷಯವಾಗಿ ಇಲ್ಲಿ ವಿಶೇಷವಾಗಿ ಲಂಬಿಸಿ ಬರೆವುದು ಅಪ್ರಕೃತವಾದುದರಿಂದ ಈವಿಷಯವನ್ನು ಇಷ್ಟಕ್ಕೆ ನಿಲ್ಲಿಸಿದ್ದೇವೆ.

ಆದಿಪುರಾಣ.

ಇದು ಚಂಪೂಕಾವ್ಯವು. ಇದರಲ್ಲಿ ಪ್ರಥಮತೀರ್ಥಂಕರನಾದ ಪುರುದೇವನ ಚರಿತೆ ವರ್ಣಿಸಲ್ಪಟ್ಟಿದೆ. ಈ ಕಥೆಯನ್ನೇ ಅರ್ಹದ್ದಾಸನೆಂಬ ಕವಿ 'ಪುರುದೇವಚಂಪು' ಎಂಬ ಹೆಸರಿನಿಂದ ಸಂಸ್ಕೃತದಲ್ಲಿ ಬರೆದಿದ್ದಾನೆ. ಈಕಥೆ ಚಾವುಂಡರಾಯನ "ಚಾವುಂಡರಾಯಪುರಾಣ" ದಲ್ಲಿ ಕನ್ನಡ ಭಾಷೆಯಲ್ಲಿ ಗದ್ಯರೂಪವಾಗಿ ದೊರೆಯುತ್ತದೆ. ಇದನ್ನು ಹಸ್ತಿಮಲ್ಲನು ಕರ್ಣಾಟಕಕಾವ್ಯರೂಪವಾಗಿ ಬರೆದಂತೆ ಪ್ರತೀತಿಯಿದೆ.

ಈ ಕಥೆ ಹಿಂದೆ ಪುರುದೇವಾದಿಜಿನೇಂದ್ರರು ಗಣಧರರು ಇವರ ಪರಂಪರೆಯಿಂದ ವೀರಸೇನಜಿನಸೇನಾಚಾರ್ಯಪರ್ಯಂತವಾಗಿ ಉಪದೇಶಕ್ರಮದಿಂದ ಬಂದಿತೆಂದು ಈ ಗ್ರಂಥದಲ್ಲಿ ಹೇಳಿದೆ. ಆದರೂ ಜಿನಸೇನನ ಪುರಾಣದ ಆಧಾರದಿಂದ ಈಗ್ರಂಥವು ಹುಟ್ಟಿದ ಹಾಗೆ ತಿಳಿಯಬರುವುದಿಲ್ಲ; ವಿಕ್ರಮಾರ್ಜುನವಿಜಯದಲ್ಲಿ " * * * ಸತ್ಕವಿ ವ್ಯಾಸಸಮಾಗಮಾನ್ವಿತಮನಾದಿಪುರಾಣಮನೆಯ್ದೆ ಪೇಳ್ದು ವಾಕ್ಶ್ರೀಸುಭಗಂ ಪುರಾಣಕವಿ" ಯೆಂದು ಹೇಳಿಕೊಂಡಿರುವುದರಿಂದ ವ್ಯಾಸನೆಂಬ ಕವಿಯ ಗ್ರಂಥದ ಆಧಾರದ ಮೇಲೆ ವಿರಚಿತವಾದಂತೆ ತೋರುತ್ತದೆ.

ಇದು 16. ಆಶ್ವಾಸಗಳಾಗಿ ಭಾಗಿಸಲ್ಪಟ್ಟಿದೆ. ಗ್ರಂಥಕಾರನು ಕವಿಸಂಪ್ರದಾಯಾನುಸಾರವಾಗಿ ಆದಿಯಲ್ಲಿ ಕಥಾನಾಯಕನಾದ ಆದಿಬ್ರಹ್ಮನನ್ನೂ ಬಳಿಕ ಸಿದ್ಧಾದಿಗಳನ್ನು ಸ್ತುತಿಸಿದ್ದಾನೆ. ಅನಂತರ ತನ್ನ ಗುರುವಾದ ದೇವೇಂದ್ರಮುನಿಯನ್ನು ಸ್ತುತಿಸಿ ತರುವಾಯ ಈ ಪುರಾಣವನ್ನು "ಅಪರಿಮಿತಭಕ್ತಿಯಿಂ ವಿರಚಿಸುವೆಂ" ಎಂದೂ ಇದರಲ್ಲಿ "ಕಾವ್ಯಧರ್ಮಮುಂ ಧರ್ಮಮುಮಂ" ಹೇಳುವೆನೆಂದೂ ತಿಳಿಸಿ ಕಥೆಯನ್ನು ಉಪಕ್ರಮಿಸುತ್ತಾನೆ.

ಇದರಲ್ಲಿ ಕಥಾನಾಯಕನ ಹಿಂದಣ ಹತ್ತು ಜನ್ಮದ ಕಥೆಗಳಿವೆ.

I ಮೊದಲನೆಯ ಜನ್ಮದಲ್ಲಿ—ಅವನು ವಿಜಯಾರ್ಧಗಿರಿಯ ಉತ್ತರ ಶ್ರೇಣಿಯ ಅಳಕಾಪುರದಲ್ಲಿ ಮಹಾಬಳನೆಂಬ ಖಚರಪತಿಯಾಗಿ ಸ್ವಯಂಬುದ್ಧಾದಿಮಂತ್ರಿಗಳ ಸಾಹಾಯ್ಯದಿಂದ ರಾಜ್ಯಭಾರಮಾಡುತ್ತಿದ್ದನು. ಒಂದಾನೊಂದುದಿವಸ ಅವನು ಒಡ್ಡೋಲಗದಲ್ಲಿರುವಾಗ ಸ್ವಯಂಬುದ್ಧನು ಸದ್ಧರ್ಮೋಪದೇಶಕ್ಕೆ ಅವಸರವನ್ನು ಪಡೆದು ಧರ್ಮಪ್ರಭಾವವನ್ನೂ ತತ್ಫಲಗಳನ್ನೂ ತಿಳಿಸಿದನು; ಉಳಿದ ಮಂತ್ರಿಗಳು ವಿಮತಗಳನ್ನವಲಂಬಿಸಿ, ಜೀವನಿಲ್ಲ, ಪುಣ್ಯಪಾಪಗಳಿಲ್ಲವೆಂದು ವಾದಿಸಿದರು. ಸ್ವಯಂಬುದ್ಧನು ಅವರೆಲ್ಲರನ್ನೂ ಯುಕ್ತಿಯುಕ್ತವಾದ ವಾದದಿಂದಲೂ ದೃಷ್ಟಶ್ರುತಾನುಭೂತ ಕಥಾನುವಾದದಿಂದಲೂ ಜಯಿಸಿ ಪ್ರಭುವಿನ ವಿಶ್ವಾಸಕ್ಕೆ ಪಾತ್ರನಾಗಿದ್ದನು. ಹೀಗೆ ಕೆಲವುಕಾಲ ಕಳೆಯಲು ಸ್ವಯಂಬುದ್ಧನು ಒಂದುಕಾಲದಲ್ಲಿ ಮೇರುವಿಗೆ ಹೋಗಿ ಅಲ್ಲಿ ಜಿನದರ್ಶನ ಮಾಡುತ್ತಿದ್ದನು; ಆಗ ಅಲ್ಲಿಗೆ ಗಗನದಿಂದ ಆದಿತ್ಯಗತಿ ಅರಿಂದಮ ಎಂಬ ಇಬ್ಬರು ಚಾರಣರು ಇಳಿದು ಬಂದರು. ಅವರನ್ನು ಕಂಡು ಒಡನೆ ಅಲ್ಲಿಗೆ ಹೋಗಿ, ತನ್ನ ಸ್ವಾಮಿಯಾದ ಮಹಾಬಳನು ಆಸನ್ನಭವ್ಯನೆಂಬ ಸಂಗತಿಯನ್ನು ಅವರಿಂದ ತಿಳಿದುಕೊಂಡು ಅವನ ಬಳಿಗೆ ಹೋಗಿ ವಿವೇಕವನ್ನು ಹೇಳಿದನು. ಆಮಾತುಗಳಿಂದ ಖೇಚರೇಂದ್ರನು ವೈರಾಗ್ಯವನ್ನವಲಂಬಿಸಿ ಪ್ರಾಯೋಪಗಮನದಿಂದ ಶರೀರಪರಿತ್ಯಾಗಮಾಡಿದನು.

II ಎರಡನೆಯ ಜನ್ಮದಲ್ಲಿ—ಈಶಾನಕಲ್ಪದಲ್ಲಿ ಲಲಿತಾಂಗನಾಗಿ ಹುಟ್ಟಿದನು. ಕೂಡಲೆ ವಿಮಾನದಲ್ಲಿ ದೇವಸ್ತ್ರೀಯರು ಮಂಗಳವಾದ್ಯಸಮೇತರಾಗಿ ಬಂದು ಅವನನ್ನು ಇದಿರುಗೊಂಡರು. ಅವನು ಅಲ್ಲಿ ಸ್ವಯಂಪ್ರಭೆಯೆಂಬ ಸ್ತ್ರೀಯೊಡನೆ ಚಿರಕಾಲ ಸ್ವರ್ಗಸುಖವನ್ನು ಅನುಭವಿಸಿ, ಆಯುರವಸಾನದಲ್ಲಿ ಮೃತನಾದನು.

III ಮೂರನೆಯ ಜನ್ಮದಲ್ಲಿ—ಉತ್ಪಳಪುರದಲ್ಲಿ ವಜ್ರಜಂಘನೆಂಬ ರಾಜನಾಗಿ ಹುಟ್ಟಿದನು. ಅತ್ತ, ಸ್ವಯಂಪ್ರಭೆ ಪತಿವಿಯೋಗದಿಂದ ನೊಂದು ಗುರುಪಂಚಕವನ್ನು ಧ್ಯಾನಿಸುತ್ತಾ ಶರೀರವನ್ನು ಬಿಟ್ಟು, ಪುಂಡ

ರೀಕಿಣಿಯಲ್ಲಿ ಶ್ರೀಮತಿಯೆಂಬ ರಾಜಪುತ್ರಿಯಾಗಿ ಹುಟ್ಟಿ ಬೆಳೆಯುತ್ತಿದ್ದಳು. ಇಬ್ಬರಿಗೂ ಯೌವನೋದಯವಾಯಿತು. ವಜ್ರಜಂಘನು ಪೂರ್ವದ ಸ್ವಯಂಪ್ರಭೆಯನ್ನು ನೆನೆನೆನೆದು ಬೇರೆ ಯಾರನ್ನೂ ವರಿಸಲೊಲ್ಲದೆ ವಿರಹವಿಕಳನಾಗಿದ್ದನು. ಶ್ರೀಮತಿಗೂ ಪೂರ್ವಜನ್ಮಸಂಸ್ಕಾರವುಂಟಾಗಿ ಮನೋವ್ಯಥೆ ತಲೆದೋರಿತು. ಅವಳ ಸಖಿಯಾದ ಪಂಡಿತೆ ಆ ವಿಷಯವನ್ನು ತಿಳಿದುಕೊಂಡು ಶ್ರೀಮತಿ ಬರೆದಿಟ್ಟಿದ್ದ ಪೂರ್ವಜನ್ಮವೃತ್ತಸೂಚಕವಾದ ಚಿತ್ರಪಟದ ಸಾಹಾಯ್ಯದಿಂದ ವಜ್ರಜಂಘನೇ ಲಲಿತಾಂಗನೆಂದು ಕಂಡುಹಿಡಿದಳು. ಆ ಸಂಗತಿಯನ್ನು ಕೇಳಿ ಅವರ ಮಾತಾಪಿತೃಗಳು ಶ್ರೀಮತಿಯನ್ನು ವಜ್ರಜಂಘನಿಗೆ ಕೊಟ್ಟು ವಿವಾಹ ಮಾಡಿದರು. ವಜ್ರಜಂಘನು ಕೆಲವುದಿವಸ ಅತ್ತೆಯ ಮನೆಯಲ್ಲಿದ್ದು ಬಳಿಕ ತನ್ನ ಪತ್ನಿಯೊಡನೆ ನಿಜನಗರಿಗೆ ಹೋದನು. ಸ್ವಲ್ಪ ಕಾಲದಮೇಲೆ ವಜ್ರಜಂಘನ ತಂದೆಯೂ ಶ್ರೀಮತಿಯ ತಂದೆಯೂ ವೈರಾಗ್ಯವನ್ನವಲಂಬಿಸಿ ಮೊದಲನೆಯವನು ವಜ್ರಜಂಘನಿಗೂ ಎರಡನೆಯವನು ತನ್ನ ಮೊಮ್ಮಗನಿಗೂ ರಾಜ್ಯವನ್ನು ಕೊಟ್ಟು ತಪಸ್ಸಿಗೆ ಹೋದರು. ಶ್ರೀಮತಿಯ ಸೋದರಳಿಯನು ಬಾಲನಾದುದರಿಂದ ರಾಜ್ಯದಲ್ಲಿ ದುಷ್ಟರ ಬಾಧೆಯುಂಟಾಯಿತು. ಅದನ್ನು ಅಡಗಿಸಲು ವಜ್ರಜಂಘನು, ಪತ್ನಿಯೊಡನೆ ಪುಂಡರೀಕಣಿಗೆ ಹೋಗಿ ರಾಜ್ಯವನ್ನು ನಿಷ್ಕಂಟಕಮಾಡಿ, ಮರಳಿ ತಮ್ಮೂರಿಗೆ ಬಂದು ಸುಖದಿಂದಿರುತ್ತಿದ್ದನು. ಹೀಗೆ ಅನೇಕ ಸಂವತ್ಸರಗಳು ಕಳೆದ ಮೇಲೆ, ಒಂದು ದಿವಸ ಆದಂಪತಿಗಳು ಮಲಗಿರುವ ಮನೆಯಲ್ಲಿ ಧೂಪದ ಹೊಗೆ ತುಂಬಿಕೊಂಡುದರಿಂದ ಉಸಿರಾಡುವುದಕ್ಕೆ ಮಾರ್ಗವಿಲ್ಲದೆ ಇಬ್ಬರೂ ಕಾಲವಶರಾದರು.

IV ನಾಲ್ಕನೆಯ ಜನ್ಮದಲ್ಲಿ—ಅವರು ಭೋಗಭೂಮಿಯಲ್ಲಿ ಅವತರಿಸಿದರು. ಅಲ್ಲಿಗೆ ಒಬ್ಬ ಚಾರಣನು ಬಂದು ಅವರಿಗೆ ಸಮ್ಯಗ್ದರ್ಶನ ಸ್ವರೂಪವನ್ನು ಬೋಧಿಸಿದನು. ಅವರು ಸಮ್ಯಗ್ದರ್ಶನದಲ್ಲಿ ನಿಂತು ಕ್ಷುತವಿಜೃಂಭಣವ್ಯಾಜದಿಂದ ಆಯುಷ್ಯಾವಸಾನದಲ್ಲಿ ಮೃತ್ಯುವಶರಾದರು.

V ಐದನೆಯ ಜನ್ಮದಲ್ಲಿ—ವಜ್ರಜಂಘನು ಶ್ರೀಪ್ರಭವಿಮಾನದಲ್ಲಿ ಶ್ರೀಧರನೆಂಬ ದೇವನಾಗಿ ಜನಿಸಿದನು. ಶ್ರೀಮತಿ ಸಮ್ಯಕ್ತ್ವಮಹಿಮೆ

ಮೆಯಿಂದ ಸ್ತ್ರೀತ್ವವನ್ನು ಬಿಟ್ಟು ಸ್ವಯಂಪ್ರಭನಾದಳು. ಕೆಲವು ಕಾಲದಲ್ಲಿ ಶ್ರೀಧರನು ದಿವದಿಂದ ಪರಿಚ್ಯುತನಾದನು.

VI ಆರನೆಯ ಜನ್ಮದಲ್ಲಿ—ಅವನು ಸುವಿಧಿಯೆಂಬ ಹೆಸರಿನಿಂದ ಸುಸೀಮಾನಗರಕ್ಕೆ ಅರಸಾಗಿ ಹುಟ್ಟಿದನು. ಶ್ರೀಮತಿಯಾಗಿದ್ದ ಸ್ವಯಂಪ್ರಭದೇವನು ದೇವಲೋಕದಿಂದಿಳಿದು ಬಂದು ಕೇಶವನೆಂಬ ಹೆಸರಿನಿಂದ ಅವನಿಗೆ ಪುತ್ರನಾಗಿ ಜನಿಸಿದನು. ಸುವಿಧಿ ಪಂಚಾಣುವ್ರತಾದಿಗಳನ್ನು ಕೈಕೊಂಡು ಜೀವಿತಾವಸಾನದಲ್ಲಿ ಸಮಾಧಿವಿಧಿಯಿಂದ ಶರೀರಪರಿತ್ಯಾಗ ಮಾಡಿದನು.

VII ಏಳನೆಯ ಜನ್ಮದಲ್ಲಿ—ಅವನು ಅಚ್ಯುತೇಂದ್ರನಾಗಿ ಅಚ್ಯುತೇಂದ್ರಕಲ್ಪದಲ್ಲಿ ಅವತರಿಸಿದನು. ಅಲ್ಲಿ ದಿವ್ಯಭೋಗಗಳನ್ನು ಆಸ್ವಾದಿಸಿ ಆಯುರವಸಾನದಲ್ಲಿ ಜಿನಪದಧ್ಯಾನಾಸಕ್ತನಾಗಿ ಅಲ್ಲಿಂದ ಪರಿಚ್ಯುತನಾದನು.

VIII ಎಂಟನೆಯ ಜನ್ಮದಲ್ಲಿ—ಅವನು ವಜ್ರನಾಭಿಯೆಂಬ ನಾಮದಿಂದ ಪ್ರತಿಬದ್ಧಪುಂಡರೀಕಿಣಿಯಲ್ಲಿ ಜನಿಸಿದನು. ವಯಸ್ಸಾದಮೇಲೆ ತನ್ನ ಮಗನಿಗೆ ರಾಜ್ಯವನ್ನು ಕೊಟ್ಟು ಪಂಚಮಹಾವ್ರತ ಪಂಚಸಮಿತಿ ಗುಪ್ತಿತ್ರಯಗಳನ್ನು ಆಚರಿಸಿ ಶರೀರಪರಿತ್ಯಾಗಮಾಡಿದನು.

IX ಒಂಬತ್ತನೆಯ ಜನ್ಮದಲ್ಲಿ—ಅವನು ಅಹಮಿಂದ್ರನಾಗಿ ಸರ್ವಾರ್ಥಸಿದ್ಧಿಯಲ್ಲಿ ಅವತರಿಸಿದನು.

X ಹತ್ತನೆಯ ಜನ್ಮದ ಕಥೆ—ಆಕಾಲದಲ್ಲಿ ಜಂಬೂದ್ವೀಪದಲ್ಲಿ ಹದಿನಾಲ್ಕನೆಯ ಮನುವಾದ ನಾಭಿರಾಜನು ಅಯೋಧ್ಯೆಯಲ್ಲಿ ಆಳುತ್ತಿದ್ದನು. ಮರುದೇವಿಯೆಂಬವಳು ಅವನ ಅಗ್ರಮಹಿಷಿಯಾಗಿದ್ದಳು. ಅವಳ ಉದರದಲ್ಲಿ ಪರಮನು ಅವತರಿಸುವನೆಂದು ಇಂದ್ರನು ತಿಳಿದು ಗರ್ಭಶೋಧನಾದಿವ್ಯಾಪಾರಗಳಿಗೆ ದೇವಸ್ತ್ರೀಯರನ್ನು ನಿಯಮಿಸಿದನು. ಗರ್ಭಶೋಧನೆಯಾದಮೇಲೆ ಮರುದೇವಿ ಶುಭಸ್ವಪ್ನವನ್ನು ಕಂಡಳು. ತತ್ಫಲದಿಂದ ಆಕೆ ಗರ್ಭವಾಗಿ ಸಕಾಲದಲ್ಲಿ ಪುತ್ರರತ್ನವನ್ನು ಪಡೆದಳು. ಈಶಿಶುವೇ ಪುರುದೇವನು. ಜನನವಾದ ಕೂಡಲೆ ಇಂದ್ರನು ಶಿಶುವನ್ನು ಎತ್ತಿಕೊಂಡು ಹೋಗಿ ಜನ್ಮಾಭಿಷೇಕವನ್ನು ನೆರವೇರಿಸಿ ಪುನಃ ತಂದಿಟ್ಟನು. ಆಜಿನಬಾ

ಲಕನು ಸುರರೊಡನೆ ಬಾಲಕ್ರೀಡೆಮಾಡಿ ಬಳೆದನು. ಪ್ರಾಪ್ತಯೌವನ ನಾದರೂ ಅವನಿಗೆ ರಾಜ್ಯಲಕ್ಷ್ಮಿಯಲ್ಲೂ ವಿವಾಹದಲ್ಲೂ ಅಭಿರುಚಿಯುಂಟಾಗಲಿಲ್ಲ. ಆದರೂ ತಂದೆ ನಾನಾವಿಧವಾಗಿ ಬುದ್ಧಿಹೇಳಿ ಅನುಮತಿಪಡಿಸಿ ಯಶಸ್ವತಿ, ಸುನಂದೆಯೆಂಬ ಕನ್ನಿಕೆಗಳನ್ನು ಮದುವೆಮಾಡಿದನು. ಕೆಲವು ಕಾಲಕ್ಕೆ ಯಶಸ್ವತಿ ಭರತನೆಂಬ ಮಗನನ್ನೂ ಆಬಳಿಕ ಬ್ರಾಹ್ಮಿ ಯೆಂಬ ಮಗಳನ್ನೂ ಪಡೆದಳು. ಹಾಗೆಯೇ ಸುನಂದೆಯೂ ಬಾಹುಬಲಿಯೆಂಬ ಪುತ್ರನನ್ನೂ ಸೌಂದರಿಯೆಂಬ ಪುತ್ರಿಯನ್ನೂ ಹೆತ್ತಳು. ಆ ಮಕ್ಕಳೆಲ್ಲರೂ ಬಳೆಯುತ್ತಿದ್ದರು. ಅವರಿಗೆಲ್ಲಾ ಪುರುದೇವನು ಲೋಕೋಪಕಾರಕವಾದ ವಿದ್ಯೆಗಳನ್ನು ಕಲಿಸಿ ತನ್ನ ಪ್ರಜೆಗಳಿಗೆ ಉಪಯುಕ್ತವಾದ ಅನೇಕ ವಿದ್ಯೆಗಳನ್ನು ಉಪದೇಶಿಸಿದನು. ಬಳಿಕ ತಾನು ಹಿಂದೆ ಪಡೆದ ಕ್ಷತ್ರಿಯವಣಿಕ್ಛೂದ್ರರೆಂಬ ಮೂರುವರ್ಣಕ್ಕೂ ಮುಂದೆ ಭರತನಿಂದುಂಟಾಗುವ ವಿಪ್ರವರ್ಣಕ್ಕೂ ಯಥೋಚಿತವೃತ್ತಿಗಳನ್ನು ತಿಳಿಸಬೇಕೆಂದು ಬಗೆದು ದ್ವಿಜವರ್ಣಕ್ಕೆ, ಅಧ್ಯಯನ ಅಧ್ಯಾಪನ ದಾನ ಪ್ರತಿಗ್ರಹ ಯಜನ ಯಾಜನವಿಶಿಷ್ಟವೃತ್ತಿಯನ್ನೂ, ಕ್ಷತ್ರಿಯ ಜಾತಿಗೆ, ಸತ್ಯ ತ್ಯಾಗ ಪ್ರಜಾಪಾಲನ ಶರಣಾಗತರಕ್ಷಣ ಪ್ರಹರಣಕ್ಷಮಾದಿಗುಣಾಚರಣವನ್ನೂ, ವಣಿಗ್ವಂಶಕ್ಕೆ, ಜಳಸ್ಥಳಯಾತ್ರಾದಿಗಳನ್ನೂ, ಶೂದ್ರಾನ್ವಯಕ್ಕೆ ವರ್ಣತ್ರಯ ಶುಶ್ರೂಷೆಯನ್ನೂ ಬೋಧಿಸಿದನು. ಆ ವೇಳೆಗೆ ಆತನ ಪರಿನಿಷ್ಕ್ರಮಣಕಲ್ಯಾಣವು ಸಮೀಪಿಸಿತು; ಅದು ದರಿಂದ ರಾಜ್ಯವನ್ನು ತನ್ನ ಮಕ್ಕಳಿಗೆ ಕೊಟ್ಟು ಅಯೋಧ್ಯಾಪುರದ ಸಮೀಪದ ಸಿದ್ಧಾರ್ಥವನಕ್ಕೆ ಹೋಗಿ ಕೇಶವನ್ನು 'ಪರಿದು' ದೀಕ್ಷೆಯನ್ನು ಅಂಗೀಕರಿಸಿದನು. ಕೆಲವು ಕಾಲದಮೇಲೆ ಅಲ್ಲಿಂದ ಹೊರಟು ಧರ್ಮಕ್ಷೇತ್ರಗಳಲ್ಲಿ ವಿಹಾರಿಸುತ್ತ ರಜತಾಚಳಕ್ಕೆ ಹೋಗಿ ತಪಸ್ಸು ಮಾಡುತ್ತಿದ್ದನು.

ಇತ್ತ ಭರತನು ದಿಗ್ವಿಜಯಾರ್ಥವಾಗಿ ಹೋಗಿ ತನ್ನ ತಮ್ಮನಾದ ಬಾಹುಬಲಿಯೊಡನೆ ಯುದ್ಧಮಾಡಿದನು. ಅದನ್ನು ನೋಡಿ ಬಾಹುಬಲಿ—ರಾಜ್ಯವಿಮೋಹವು ದುರ್ವ್ಯಸನಕ್ಕೆ ಕಾರಣವೆಂದು ಬಗೆದು ವೈರಾಗ್ಯವನ್ನು ಹೊಂದಿ ಕೈಲಾಸಕ್ಕೆ ಹೋಗಿ ದೀಕ್ಷೆಯನ್ನು ಪಡೆದನು. ಭರ

ತನು ಪಟ್ಟಾಭಿಷಿಕ್ತನಾಗಿ ಅನೇಕ ಜಿನಧರ್ಮಗಳನ್ನು ಮಾಡುತ್ತ ರಾಜ್ಯವನ್ನು ಪಾಲಿಸುತ್ತಿದ್ದನು. ಹೀಗಿರುತ್ತಿರಲು ಅತ್ತ ವೃಷಭನಾಥನಿಗೆ ಚರಮಕಾಲವು ಸಮೀಪಿಸಿತು. ಆ ಮಹಾಪುರುಷನು ಮಾಘಮಾಸದ ಕೃಷ್ಣಚತುರ್ದಶಿಯಂದು ಅಭಿಜಿನ್ಮುಹೂರ್ತದಲ್ಲಿ ಮೋಕ್ಷಕ್ಕೆ ನಡೆದನು. ಕೂಡಲೆ ಭರತನೂ ದೀಕ್ಷೆಯನ್ನು ವಹಿಸಿದನು.

ಇದು ಪುರಾಣವಾದುದರಿಂದಲೂ 'ವ್ಯಾಸಸಮಾಗಮಾನ್ವಿತ' ವಾದುದರಿಂದಲೂ ಇದರಲ್ಲಿ ಕವಿಯ ಕಥಾಕೌಶಲಕ್ಕೂ ಕಲ್ಪನಾಶಕ್ತಿಗೂ ವಿಶೇಷ ಅವಕಾಶವಿಲ್ಲ. ಅಲ್ಲಲ್ಲಿ ಅಪ್ರಕೃತವಾಗಿಯೂ ನೀರಸವಾಗಿಯೂ ಇರುವ ಜನ್ಮಾಂತರಕಥಾಗಹನವು ತುಂಬಿರುವುದರಿಂದ ಇದ್ದ ರಸವೂ ಮರೆಯಾಗಿ ಹೋಗಿದೆ. ಈ ಜನ್ಮಾಂತರ ಭಾಗವನ್ನು ಬಿಟ್ಟರೆ ಬಹುಶಃ ಗ್ರಂಥವು ನಾಲ್ಕರಲ್ಲಿ ಒಂದುಪಾಲು ಕಿರಿದಾಗುತ್ತದೆ. ಈ ಗ್ರಂಥದಲ್ಲಿ ಕವಿಯ ಅನ್ಯಾದೃಶವಾದ ಶಯ್ಯೆಯನ್ನೂ ವರ್ಣನಾಶಕ್ತಿಯನ್ನೂ ನೋಡಿ ಆನಂದ ಪಡಬಹುದು. ಇದರ ಬಂಧವು ಭಾರತದ ಬಂಧಕ್ಕಿಂತ ಲಲಿತವಾಗಿಯೂ ಮಧುರವಾಗಿಯೂ ಇದೆ.

ಈ ಗ್ರಂಥದ ವಿಷಯವಾಗಿ ರನ್ನನು "ಪೆಱಪುಳಯುಳ್ಳುವಿಲ್ಲಿಯೊಳವಾಗಮಭಾಷೆಗಳಲ್ಲಿಯುಳ್ಳುವಂ । ಪೆಱಪುಳ ಕಾಣಲಾಗದೆನೆ ಪಂಪನ * * * ಕಬ್ಬದೊಳ್ । ನೆಱೆಯೆಪರಿಸ್ಫುಟಂ ನೆಱೆಯೆ ತೀರ್ದುದು * *" ಎಂದೂ, 'ಉಪಮಾತೀತಮೆನಿಪ್ಪಾ । ದಿಪುರಾಣ' ಮೆಂದೂ, ಕವಿಯವಿಷಯವಾಗಿ "ಕವಿಜನದೊಳ್ ರತ್ನತ್ರಯ । ಪವಿತ್ರಮೆನೆ ನೆಗಳ್ದ ಪಂಪನುಂ ಪೊನ್ನಿಗನುಂ । ಕವಿರತ್ನನುಮಿಾಮೂವರ್ । ಕವಿಗಳ್ ಜಿನಸಮಯದೀಪಕರ್ ಪೆಱರೊಳರೇ" ಎಂದೂ ಹೇಳಿದ್ದಾನೆ.

ಈ ಗ್ರಂಥದಲ್ಲಿ—ಸ್ತ್ರೀವಿದ್ಯಾಭ್ಯಾಸ, ವರ್ಣಾಶ್ರಮಧರ್ಮ, ಕಾಪಿಲ ಸಿದ್ಧಾಂತೋತ್ಪತ್ತಿ, ಯೋಗಶಾಸ್ತ್ರೋತ್ಪತ್ತಿ, ವಿಪ್ರವರ್ಣೋತ್ಪತ್ತಿ ಇವೇ ಮೊದಲಾದವುಗಳ ವಿಷಯವಲ್ಲಿ ಹೇಳಿರುವ ಅಭಿಪ್ರಾಯಗಳು ನವೀನವಾಗಿಯೂ ವಿಜಾತೀಯವಾಗಿಯೂ ಇರುವದರಿಂದ ವಿಚಾರಾರ್ಹವಾಗಿವೆ.

ಆದಿಪುರಾಣಂ.

I. ಮಹಾಬಳ ಕುಮಾರೋದಯಂ.

ಕವಿ ಗ್ರಂಥಾವತಾರದಲ್ಲಿ [1] ಆದಿಬ್ರಹ್ಮನನ್ನು ಸ್ತುತಿಸಿದ್ದಾನೆ [2] ಬಳಿಕ ಸಿದ್ಧರನ್ನೂ, [3] ಆಚಾರ್ಯರನ್ನೂ, [4] ಉಪಾಧ್ಯಾಯರನ್ನೂ, [5] ಸರ್ವಸಾಧುಗಳನ್ನೂ, [6] ಅರ್ಹತ್ಸಿದ್ಧಾಚಾರ್ಯೋಪಾಧ್ಯಾಯ ಸರ್ವಸಾಧುಗಳನ್ನೂ, [7] ಚಕ್ರೇಶ್ವರಿಯನ್ನೂ, [8] ವೃಷಭಯಕ್ಷನನ್ನೂ, [9] ಸರಸ್ವತಿಯನ್ನೂ, [10] ಶ್ರುತಸ್ಕಂಧವನ್ನೂ ಸ್ತುತಿಸಿ, [11] ಸಮಂತಭದ್ರ, ಕವಿಪರಮೇಷ್ಠಿ, ಪೂಜ್ಯಪಾದರನ್ನೂ [12] ಗೃಧ್ರಪಿಂಛಾಚಾರ್ಯ, ಜಟಾಚಾರ್ಯ ಶ್ರುತಕೀರ್ತ್ಯಾಚಾರ್ಯರನ್ನೂ [13] ಮಲಧಾರಿಸಿದ್ಧಾಂತಮುನಿಯನ್ನೂ ದೇವೇಂದ್ರಮುನಿಯನ್ನೂ ಜಯನಂದಮುನಿಯನ್ನೂ ಕ್ರಮವಾಗಿ ಸ್ತುತಿಸಿದ್ದಾನೆ. ಬಳಿಕ [14] ತಾನು ಕುಂಡಕುಂದಾನ್ವಯನಂದನವನಶುಕವೆಂದು ತನ್ನಲ್ಲಿ ಮುನಿನಿವಹವು ಅನುಗ್ರಹಮಾಡಬೇಕೆಂದು ಪ್ರಾರ್ಥಿಸಿ [15] ಜಿನರೂ ಗಣಧರರೂ ಮುನೀಂದ್ರರೂ ಮುನಿಗಳೂ ಭವ್ಯರಿಗೆ ಗುಣಗಳನ್ನು ದಯೆಯಿಂದ ಕೊಡಬೇಕೆಂದು ಆಶಿಸಿ [16] ಅಕಳಂಕದೇವನ ಪ್ರಮಾಣರತ್ನಪ್ರದೀಪರಶ್ಮಿಕಲಾಪವು ಜಗದ ಮಿಥ್ಯಾತ್ವತಮವನ್ನು ನಿರಾಕರಿಸಲೆಂದು ಪ್ರಾರ್ಥಿಸುತ್ತಾನೆ.

ಅನಂತರ [17—19] ಸತ್ಕೃತಿಯ ಗುಣಗಳನ್ನೂ ದುಷ್ಕೃತಿಯ ದೋಷಗಳನ್ನೂ ವಿವರಿಸಿ, [20] ಕವಿತಾರಹಸ್ಯವು ಕವಿಗಳಲ್ಲದೆ ಸಾಮಾನ್ಯನಿಗೆ ತಿಳಿಯದೆಂದು ಹೇಳಿ [21—22] ಭಾವಿಕರೂ ಕವಿತ್ವವಿಶೇಷಜ್ಞರೂ ಕೃತಿಯ ಗುಣವನ್ನು ಪರೀಕ್ಷಿಸಬಲ್ಲರೆಂದು ಶ್ಲಾಘಿಸಿ, ಕುಕವಿಬಕಗಳು ದೋಷಾಮಿಷವನ್ನು ಬಯಸುವವೆಂದು ನಿಂದಿಸಿ [23] ಅವರ ಬಳಿಯಲ್ಲಿ ಸತ್ಕೃತಿಪಠನವು ಅರಣ್ಯರುದಿತವೆಂದು ಸೂಚಿಸಿ [24] ಶುಷ್ಕವೈಯಾಕರಣನಿಗೂ ಶುಷ್ಕತಾರ್ಕಿಕನಿಗೂ ಅತಿಚತುರಕವಿಜನೈಕವೇದ್ಯವಾದ ಕಾವ್ಯರಸವು ಆಗೋಚರವೆಂದು ತಿಳಿಸುತ್ತಾನೆ.

ತರುವಾಯ [25] ದೇವೇಂದ್ರಮುನೀಂದ್ರನು ತನ್ನ ಗುರುವೆಂದೂ ಪುರುದೇವನು ಕಥಾನಾಯಕನೆಂದೂ ಕಥೆ ತದಾದಿಪುರುಷಜನ್ಮಕಥಾಬಂಧುರವೆಂದೂ ಹೇಳುತ್ತಾನೆ. ಇವನ ಕಾವ್ಯವು ಸುಕವಿಜನಶ್ಲಾಘ್ಯವಾದುದರಿಂದ ಇವನಿಗೆ [26] ಸುಕವಿಜನಮನೋಮಾನಸೋತ್ತಂಸಹಂಸನೆಂದೂ [27] ಇವನ ಕವಿತ್ವವು ಸಮುದ್ರದಂತೆ ನಿತ್ಯವೂ ನೂತನವೂ ಗಂಭೀರವೂ ಆದುದರಿಂದ ಇವನಿಗೆ ಕವಿತಾಗುಣಾರ್ಣವನೆಂದೂ, ಇವನು ಸಂಸಾರಸಾರವಾದ ಧರ್ಮವನ್ನು ವರ್ಣಿಸಿರುವುದರಿಂದ ಇವನಿಗೆ ಸಂಸಾರಸರೋದಯನೆಂದೂ [28] ಇವನ ವಾಗ್ವಿಲಾಸವೆ ಸರಸ್ವತಿಗೆ ಅಲಂಕೃತಿಪ್ರಾಯವಾಗಿರುವುದರಿಂದ ಇವನಿಗೆ ಸರಸ್ವತೀಮಣಿಹಾರನೆಂದೂ ಬಿರುದುಗಳನ್ನು ಕೊಟ್ಟು [29—32]

ಇವನ ಸೌಂದರ್ಯಾದಿಗಳನ್ನು ವರ್ಣಿಸಿ [33] ಇವನು ವತ್ಸಕುಲೋತ್ಪನ್ನನೆಂದೂ [34] ದುಂದುಭಿಸಂವತ್ಸರದಲ್ಲಿ ಜನಿಸಿದವನೆಂದೂ ಇವನ ಹೆಸರು ಪಂಪನೆಂದೂ ಇವನು ಜಿನ ಭಕ್ತನೆಂದೂ ಸುಗುಣಿಯೆಂದೂ ಈ ಕವಿಯನ್ನು ಶ್ಲಾಘಿಸಿ ಈ ಗ್ರಂಥವನ್ನು ಹೇಳೆಂಬುದಾಗಿ ಪಂಡಿತರು ನಿಯಮಿಸಲು ತಾನು ಇದನ್ನು ಹೇಳುವುದಕ್ಕೆ ಅನುಮತಿಸಿದಂತೆ ತಿಳಿಸುತ್ತಾನೆ.

[35] ಹಿಂದೆ ಪುರುದೇವಾದಿಜಿನೇಂದ್ರರು ಗಣಧರರು ಇವರ ಪರಂಪರೆಯಿಂದ ವೀರಸೇನ ಜಿನಸೇನಾಚಾರ್ಯಪರ್ಯಂತವಾಗಿ ಬಂದ ಈ ಕಥೆ ಬಹುಗಂಭೀರವಾದುದು ; ಅವರು ಜ್ಞಾನರ್ಧಿಸಂಪನ್ನರು ; ಅವರಿಗೆ ಅದು ಸಾಧ್ಯವಾದುದು ತನಗೆ ಅಸಾಧ್ಯವೆಂದು ಸುಮ್ಮನಿರದೆ ಈ ಕಥಾಸಾಗರವನ್ನು ತಾನು ಈಜುವುದಕ್ಕೆ ಇಷ್ಟಪಟ್ಟುದು ಧಾರ್ಷ್ಟ್ಯವೆಂದು ಸ್ವಾಹಂಕಾರಪರಿತ್ಯಾಗಮಾಡಿ [36] ಕವಿತೆಗೆ ಪೂಜೆಯೂ ಖ್ಯಾತಿಯೂ ಲಾಭವೂ ಫಲವೆಂದು ತಿಳಿಸಿ ಅದರಲ್ಲೂ ಈ ಕವಿತೆಯಿಂದ ತನಗೆ ಇಂದ್ರಪೂಜೆಯೂ ಭುವನಸ್ತುತವಾದ ಖ್ಯಾತಿಯೂ ಮುಕ್ತಿಯ ಲಾಭವೂ ಉಂಟಾಗುವುದರಿಂದ ತನಗೆ ಇತರರಿಂದ ಆಗಬೇಕಾದ ಪ್ರಯೋಜನವು ಏನೂ ಇಲ್ಲವೆಂದು ತನ್ನ ನಿಸ್ಪೃಹತೆಯನ್ನು ಸೂಚಿಸಿ [37] ಇಂದ್ರನರೇಂದ್ರವಂದಿತನಾದ ಅರ್ಹನನ್ನು ಒಂದೊಂದುವೇಳೆ ಚಿಂತಿಸಿದವನ ಪುಣ್ಯಕ್ಕೇ ಎಣೆಯಿಲ್ಲದಿರುವಲ್ಲಿ ಕಾವ್ಯಗಳಲ್ಲಿ ಅರ್ಹನನ್ನೇ ವರ್ಣಿಸುವವನ ಕರ್ಮನಿರ್ಜರೆಗೆ ಪಾರವೇ ಇಲ್ಲವೆಂದು ತನ್ನ ಧನ್ಯತೆಯನ್ನು ಹೇಳಿಕೊಂಡು [38] ಈ ಆದಿಪುರಾಣದಲ್ಲಿ ಸುಕವಿಗಳಿಗೆ ಪ್ರಮೋದಾವಹವಾಗುವಂತೆ ಕಾವ್ಯಧರ್ಮವನ್ನೂ ಭವ್ಯಲೋಕಕ್ಕೆ ಆನಂದಕರವಾಗುವಂತೆ ಜೈನಧರ್ಮವನ್ನೂ ವ್ಯಾವರ್ಣಿಸುವುದಾಗಿ ಪ್ರತಿಜ್ಞೆಮಾಡಿ ಅವತರಣಿಕೆಯನ್ನು ಪರಿಪೂರ್ತಿಮಾಡಿ ಮುಂದೆ ಕಥೆಯನ್ನು ಉಪಕ್ರಮಿಸುತ್ತಾನೆ.

———

[39] ಶ್ರುತಸ್ಕಂಧದಲ್ಲಿ ನಾಲ್ಕು ಅನುಯೋಗಗಳುಂಟು. ಅವುಗಳಲ್ಲಿ ಪೂರ್ವಾನುಯೋಗದಲ್ಲಿ ಈ ಕಥೆ ದೊರೆಯುತ್ತದೆ. [40—41] ಇದನ್ನು ಮೊದಲು ವೃಷಭಜಿನಸನ್ನಿಧಿಯಲ್ಲಿ ವೃಷಭಸೇನಗಣಾಗ್ರಣಿ ಭರತನಿಗೆ ಹೇಳಿದನು. ಅದನ್ನೇ ವಿಪುಳಾದ್ರಿಯಲ್ಲಿ ವರ್ಧಮಾನಜಿನಸನ್ನಿಧಿಯಲ್ಲಿ ಗೌತಮನು ಮಗಧನಾಯಕನಿಗೆ ವಿವರಿಸಿದನು. [44] ಅದೇ ಕಥೆಯೇ ಈ ಗ್ರಂಥದಲ್ಲಿ ನಿರೂಪಿಸಲ್ಪಟ್ಟಿದೆ.

[42 ಗ]. ಪುರಾಣಕ್ಕೆ ಲೋಕಾಕಾರಕಥನ, ದೇಶನಿವೇಶೋಪದೇಶ, ನಗರಸಂಪತ್ಪರಿವರ್ಣನ, ರಾಜ್ಯರಮಣೀಯತಾಖ್ಯಾನ, ತೀರ್ಥಮಹಿಮಾಸಮರ್ಥನ, ಚತುರ್ಗತಿಸ್ವರೂಪನಿರೂಪಣ, ತಪೋದಾನವಿಧಾನವರ್ಣನ, ತತ್ಫಳಪ್ರಾಪ್ತಿಪ್ರಕಟನವೆಂದು ಎಂಟಂಗಗಳುಂಟು. ಅವುಗಳಲ್ಲಿ ಮೊದಲನೆಯದಾದ ಲೋಕವು [43—44] ಅನಂತವಾಗಿರುವ ಗಗನಮಧ್ಯದಲ್ಲಿ ಅನೇಕ ಜೀವನಿವಹನಿಬಿಡಾಭ್ಯಂತರವಾಗಿ [44] ಅನಾದಿಯಾಗಿ ಅಕೃತ್ರಿಮವಾಗಿ ಅನಿಧನವಾಗಿ ಮರುತ್ತ್ರಯಸಂವೇಷ್ಟಿತವಾಗಿ ಹದಿನಾಲ್ಕು

ರಜ್ಜು ಎತ್ತರವಾಗಿದೆ. ಅದರ ಆಕಾರವು ಕಟಿತಟವಿನ್ಯಸ್ತಹಸ್ತನಾದ ನಟನಂತೆ ಯೂ [47] ವೇತ್ರಾಸನಝಲ್ಲರೀಮೃದಂಗಗಳಂತೆಯೂ ಇದೆ.

[46] ಅದರಲ್ಲಿ ಅಧೋಲೋಕ, ತಿರ್ಯಗ್ಲೋಕ, ಊರ್ಧ್ವಲೋಕಗಳೆಂಬ ಮೂರುಭೇದಗಳುಂಟು. [47 ಗ-48] ಅವುಗಳಲ್ಲಿ ಮಧ್ಯಮವಾದ ತಿರ್ಯಗ್ಲೋಕವು ಏಕರಜ್ಜುಪ್ರಮಾಣ ವಿಸ್ತಾರವುಳ್ಳುದಾಗಿ ಸ್ವಯಂಭೂರಮಣವೆಂಬ ಸಮುದ್ರದವರೆಗೂ ವ್ಯಾಪಿಸಿರುತ್ತದೆ. [48 ಗ] ಆತಿರ್ಯಗ್ಲೋಕದ ನಟ್ಟನಡುವೆ ಜಂಬೂದ್ವೀಪವು [49] ವೃತ್ತಾಕಾರವಾಗಿ ಲವಣಜಲಧಿಪರಿವೃತವಾಗಿ ಇದೆ. [49ಗ-50] ಆ ದ್ವೀಪದ ಮಧ್ಯ ಪ್ರದೇಶದಲ್ಲಿ ಮಂದರಪರ್ವತವು ಪ್ರಕಾಶಿಸುತ್ತಿರುವುದು [50ಗ] ಆ ಪರ್ವತದ ಪೂ ರ್ವಾಪರದಿಗ್ಭಾಗಗಳಲ್ಲಿ ವಿದೇಹವೆಂಬ ದೇಶಗಳು ಕಂಗೊಳಿಸುತ್ತವೆ. [51-53] ವಿದೇಹವರ್ಣನೆ. ಅವುಗಳಲ್ಲಿ ಪಶ್ಚಿಮ ವಿದೇಹಗಳಲ್ಲಿ [54-55] ಸೀತಾನದಿ ಪ್ರವ ಹಿಸುತ್ತಿದೆ. [55ಗ] ಆ ನದಿಯ ದಕ್ಷಿಣೋತ್ತರಭಾಗಗಳಲ್ಲಿ ಎಂಟು ನಾಡುಗಳಿವೆ. [56] ಉತ್ತರ ಭಾಗದ ದೇಶಗಳಲ್ಲಿ ಏಳನೆಯದಾದ ಗಂಧಿಳದೇಶವು ನೀಳಾಚಳಕ್ಕೆ ದಕ್ಷಿಣದಲ್ಲೂ ವಕ್ಷಾರಾದ್ರಿಗೆ ಪಶ್ಚಿಮದಲ್ಲೂ ಬಪ್ಪುತ್ತಿದೆ. [56—62] ಗಂಧಿಳವಿಷಯಾದಿವರ್ಣನೆ. [62ಗ-63] ಆ ದೇಶದ ಮಧ್ಯದಲ್ಲಿ ವಿಜಯಾರ್ಧವೆಂಬ ಶೈಲವಿದೆ. [63—69] ಶೈಲವರ್ಣನೆ. [70] ಅದರ ತಪ್ಪಲಲ್ಲಿ ಎರಡು ವಿದ್ಯಾಧರಶ್ರೇಢಿಗಳಿವೆ. [79ಗ—71] ಅವುಗಳಲ್ಲಿ ಉತ್ತರಶ್ರೇಢಿಯಲ್ಲಿ ಅಳಕಾಪುರವೆಂಬ ಪತ್ತನವಿತ್ತು. [71ಗ] ಅದನ್ನು ಅತಿಬಳನೆಂಬ ಖಚರಪತಿ ಆಳುತ್ತಿದ್ದನು ಆತನಿಗೆ ಮನೋಹರಿಯೆಂಬ ಪತ್ನಿಯಿದ್ದಳು. [73.] ಅವಳ ಗರ್ಭದಲ್ಲಿ ಮಹಾಬಳನೆಂಬೊಬ್ಬ ಪುತ್ರನು ಜನಿಸಿದನು. ಆತನು [74—75] ಪ್ರಾಪ್ತವಯಸ್ಕನಾಗಿ ಯುವರಾಜಪದವಿಗೆ ಯೋಗ್ಯನಾಗಲು ಆತನಿಗೆ ಅತಿಬಳನು [76] ಯುವರಾಜಪದವಿಯನ್ನು ಕೊಟ್ಟು [77—78] ತಾನು ಅಧಿರಾಜಪದವಿಯಲ್ಲಿದ್ದುಕೊಂಡು ರಾಜ್ಯಭಾರವನ್ನು ವಹಿಸಿದ್ದನು. ಹೀಗೆ ಕೆಲವು ಕಾಲಕ ಳೆಯಲು [79] ಅತಿಬಳನಿಗೆ ಕನ್ನೆಯಲ್ಲಿ ನರೆ ಕಂಡಿತು. [79ಗ] ಅದನ್ನು ನೋಡಿ ಅವನು ವೈರಾಗ್ಯಪರನಾಗಿ [80] ತನ್ನ ಮಗನಿಗೆ ರಾಜ್ಯವನ್ನು ಒಪ್ಪಿಸಿ [80ಗ] ಗುಣಧರ ಕೇವ ಳಿಗಳ ಪಾದಪದ್ಮದಲ್ಲಿ [8] ತಪಸ್ಸನ್ನು ಅಂಗೀಕರಿಸಿದನು [81ಗ] ಮಹಾಬಳನು ಸಿಂಹಾ ಸನಾರೂಢನಾಗಿ ಚತುರುಪಧಾವಿಶುದ್ಧರಾದ [82—84] ಸ್ವಯಂಬುದ್ಧ ಮಹಾಮತಿ ಸಂಭಿನ್ನಮತಿ ಶತಮತಿಗಳೆಂಬ ನಾಲ್ವರು ಅಮಾತ್ಯರಲ್ಲಿ ರಾಜ್ಯಭಾರವನ್ನು ವಹಿಸಿ ಸುಖ ದಿಂದಿರುತ್ತಿದ್ದನು.

ಲಲಿತಾಂಗದೇವವರ್ಣನಂ.

ಹೀಗಿರಲು ಒಂದಾನೊಂದುಕಾಲದಲ್ಲಿ [1] ಮಹಾಬಳನು [2] ತನ್ನ ವರ್ಷವರ್ಧ ನದಿನದಲ್ಲಿ [2ಗ] ಒಡ್ಡೋಲಗದಲ್ಲಿ ಸಿಂಹಾಸನಾಸೀನನಾಗಿದ್ದನು (2ಗ—5) ಆಸ್ಥಾನವ

ರ್ಣನೆ. [5ಗ] ಆ ಕಾಲದಲ್ಲಿ ಸ್ವಯಂಬುದ್ಧನೆಂಬ ಮಂತ್ರಿ ಸದ್ಧರ್ಮೋಪದೇಶಲಬ್ಧಾವಸರನಾಗಿ [6] ಎಲೈ ಮಹಾರಾಜನೆ ನಿನ್ನ ವಿದ್ಯಾಧರಲಕ್ಷ್ಮಿ ಪುಣ್ಯಜನಿತವಾದುದು. [7] ಧರ್ಮವೇ ಎಲ್ಲಾ ಸಂಪತ್ತುಗಳಿಗೂ ಕಾರಣವು. [7ಗ] ಎಂದು ಧರ್ಮಪ್ರಭಾವವನ್ನೂ ತತ್ಫಲಗಳನ್ನೂ ತಿಳಿಸಿದನು. ಆಗ ಮಹಾಮತಿ, ಸಂಭಿನ್ನಮತಿ, ಶತಮತಿಗಳೆಂಬ ಮಿಕ್ಕ ಮಂತ್ರಿಗಳು ಲೋಕಾಯತಿಕ, ಯೋಗಾಚಾರ, ಮಾಧ್ಯಮಿಕ ಮತಗಳನ್ನವಲಂಬಿಸಿ (8) ದೇಹದಲ್ಲಿ ಜೀವವೊಂದಿದೆಯಂತೆ, ಅದು ಪುಣ್ಯಪಾಪಗಳನ್ನು ಕೂಡಿಡುವುದಂತೆ, ಬೇರೆ ದೇಹದಲ್ಲಿ ಅದನ್ನು ಅನುಭವಿಸುವುದಂತೆ, ಇದೆಲ್ಲವೂ ಬರಿಯ ಸುಳ್ಳು [9] ತಲೆಬೋಳಿಸಿಕೊಂಡು ಬೆತ್ತಲೆ ನಿಂತು ಸ್ವರ್ಗಸುಖವನ್ನು ಆಸ್ವಾದಿಸುವೆವೆಂಬ ಹುಚ್ಚರಮಾತನ್ನು ನೀನು ನಂಬಬಹುದೆ ? ಜೀವವಿರುವವರೆಗೂ ಸುಖವಾಗಿರಬೇಕು, ಮುಂದಿನ ಜನ್ಮವನ್ನು ಕಂಡವರಾರು ? [9 ಗ] ಎಂದು ಹೇಳಿ ತಮ್ಮತಮ್ಮ ಮತಗಳನ್ನು ಉಪನ್ಯಾಸಮಾಡುತ್ತಾರೆ.

[1] ಬೃಹಸ್ಪತಿಮತವೆಂಬ ಚಾರ್ವಾಕಮತೋಪನ್ಯಾಸವನ್ನು ಮಹಾಮತಿ ಮಾಡುತ್ತಾನೆ.—ಚೈತನ್ಯವೆಂಬುದು ಪಂಚಭೂತಗಳ ಪರಸ್ಪರಸಂಯೋಗವಿಶೇಷದಿಂದ ಹುಟ್ಟುವುದು. ಆದುದರಿಂದ ಭೂತಾತಿರಿಕ್ತವಾಗಿಯೂ ನಿತ್ಯವಾಗಿಯೂ ಇರುವ ಬೇರೆಪದಾರ್ಥವಿಲ್ಲ. ಹೇಗೆ ವೀಣಾಧ್ವನಿಯೂ-ಮದಶಕ್ತಿಯೂ-ಅಲಾಬುತಂತುಸಂಯೋಗದಿಂದಲೂ ಕಿಣ್ವಾದಿಪದಾರ್ಥಸಂಯೋಗದಿಂದಲೂ ಉಂಟಾಗುವುವೋ ಅದೇ ಪ್ರಕಾರ ಆತ್ಮವೆಂಬ ಚೈತನ್ಯವು ಉಂಟಾಗುತ್ತದೆ. ಅದು ಉತ್ಪತ್ತಿವಿನಾಶಶಾಲಿಯಾಗಿರುವುದರಿಂದ ಸ್ಥಿರವಾದ ಆತ್ಮವೆಂಬುದು ಇದೆಯೆಂಬ ಅಭಿಪ್ರಾಯದಿಂದ ಪರಲೋಕಾದಿಸಾಧನವಾದ ವ್ಯಾಪಾರಗಳನ್ನು ಮಾಡುವುದು ನಿರರ್ಥಕವು.

[2] ಬೌದ್ಧವಿಶೇಷವಾದ ಯೋಗಾಚಾರಮತವನ್ನು ಸಂಭಿನ್ನಮತಿ ಉಪನ್ಯಸಿಸುತ್ತಾನೆ.—ಕ್ಷಣಿಕವಾದ ವಿಜ್ಞಾನಗಳೇ ಸಂತಾನರೂಪವಾಗಿ ಆತ್ಮವೆಂಬ ವ್ಯವಹಾರವಿಷಯವಾಗುವುವು. ನಿರನ್ವಯವಿನಾಶಿಗಳಾದ ಆ ವಿಜ್ಞಾನಕ್ಷಣಗಳೇ ಜ್ಞಾನಜ್ಞೇಯಜ್ಞಾತೃರೂಪವಾಗಿ ಭ್ರಾಂತರಿಗೆ ಕಾಣಲ್ಪಡುವುವು. ಶೀಘ್ರವಾಗಿ ಉತ್ಪತ್ತಿವಿನಾಶಶಾಲಿಗಳಾದುದರಿಂದ ಸಂತಾನರೂಪವಾಗಿಯೂ ಕಾಣಲ್ಪಡುವುವು. ಸೋಯಮೆಂಬ ಪ್ರತ್ಯಭಿಜ್ಞೆ ನಖ ಕೇಶ ದೀಪಜ್ವಾಲಾದಿಗಳಂತೆ ಭ್ರಾಂತಿಸಿದ್ಧವು; ಆದುದರಿಂದ ಪರಲೋಕಾಪೇಕ್ಷಿಗಳು ಭ್ರಾಂತಶಿರೋಮಣಿಗಳು.

[3] ಬೌದ್ಧಶಿರೋಮಣಿಯಾದ ಮಾಧ್ಯಮಿಕಮತವನ್ನು ಶತಮತಿ ಉಪನ್ಯಾಸಮಾಡುತ್ತಾನೆ-ಆಂತರಪದಾರ್ಥಗಳು ಬಾಹ್ಯಪದಾರ್ಥಗಳು ಯಾವುವೂ ಸತ್ಯವಾಗಿಲ್ಲ ; ಸಮಸ್ತವೂ ಮಿಥ್ಯಾಭೂತವಾದುವು, ವ್ಯವಹಾರಾವಿಗಳು, ಸ್ವಾಪ್ನಿಕಪದಾರ್ಥವಿಲ್ಲದೆಯೆ ಸ್ವಾಪ್ನಿಕವ್ಯವಹಾರದೋಪಾದಿಯಲ್ಲಿಯೂ ಮರುಮರೀಚಿಕಾಪದಾರ್ಥದೋಪಾದಿಯಲ್ಲಿಯೂ ಐಂದ್ರಜಾಲಿಕಪದಾರ್ಥದೋಪಾದಿಯಲ್ಲಿಯೂ ಇರುವುವು. ಆದುದರಿಂದ ಜೀವನೆಂಬುದಿಲ್ಲ, ಪರ

ಲೋಕವಿಲ್ಲ, ಪುಣ್ಯವಿಲ್ಲ, ಪಾಪವಿಲ್ಲ, ಇದಕ್ಕಾಗಿ ಮಾಡುವ ತಪೋದಾನಾದಿಪ್ರಯತ್ನಗಳು ವೃಥಾಕ್ಲೇಶಮಾತ್ರಫಲಪ್ರದಗಳು.

ಈ ಮತತ್ರಯವನ್ನು ಯಥಾಕ್ರಮವಾಗಿ ಖಂಡಿಸುತ್ತಾನೆ ಸ್ವಯಂಬುದ್ಧನು.

[1] ಚೈತನ್ಯವು ಭೌತಿಕವಾಗುವ ಪಕ್ಷದಲ್ಲಿ ಬಾಲ್ಯಾದಿವಿರುದ್ಧಧರ್ಮಗಳನ್ನು ಚೈತನ್ಯದಲ್ಲಿ ಸ್ವೀಕಾರಮಾಡಬೇಕಾಗುವುದಾದುದರಿಂದ ಬಾಲವೃದ್ಧವ್ಯವಹಾರವಿಲ್ಲದೆ ಹೋಗಬೇಕಾಗುವುದು. ನಿನ್ನ ಮತದಲ್ಲಿ ಆಕಾಶವಿಲ್ಲದೆಯಿರುವುದರಿಂದ ದೇಶಭೇದವಿಲ್ಲ; ಆದುದರಿಂದ ಜೀವಭೇದಸಿದ್ಧಿಸಲಾರದು. ಕಿಣ್ವಾದಿಮದಶಕ್ತಿ ದೃಷ್ಟಾಂತದಿಂದ ಕಾರಣಾಪೇಕ್ಷೆಯಾ ಅತಿರಿಕ್ತ ಕಾರ್ಯಸಿದ್ಧಿಸಬೇಕಾಗುವುದರಿಂದಲೂ ಕಾರಣಗುಣವು ಕಾರ್ಯವಾದ ಚೈತನ್ಯದಲ್ಲಿ ಕಾಣಲ್ಪಡದೆಯಿರುವುದರಿಂದಲೂ ಶರೀರಕಾರ್ಶ್ಯವೃದ್ಧಿಗಳಿಂದ ಚೈತನ್ಯಕಾರ್ಶ್ಯವೃದ್ಧಿಗಳುಂಟಾಗಬೇಕಾಗುವುದರಿಂದಲೂ ಗಜಾದಿಶರೀರಪ್ರಮಾಣಾನುಗುಣವಾಗಿ ಚೈತನ್ಯಪ್ರಮಾಣವು ಸಿದ್ಧಿಸುವುದರಿಂದಲೂ ತನ್ನ ಶರೀರವನ್ನು ತಾನೇ ಕೆಡಿಸಿಕೊಳ್ಳುವುದು ಅಯುಕ್ತವಾಗಬೇಕಾಗಿರುವದರಿಂದಲೂ ಈ ಮತವು ಅತ್ಯಂತವಿರುದ್ಧವು.

[2] ವಿಜ್ಞಾನಮಾತ್ರವಾದವೂ ಅಯುಕ್ತವೇ. ಹೇಗೆಂದರೆ—ಸರ್ವವೂ ವಿಜ್ಞಾನವೆಂಬ ಸಾಧ್ಯವನ್ನು ವಿಜ್ಞಾನಮಾತ್ರದಿಂದ ಸಾಧಿಸುವೆಯೋ ವಾಕ್ಯದಿಂದ ಸಾಧಿಸುವೆಯೊ ? ಮೊದಲನೆಯ ಪಕ್ಷದಲ್ಲಿ ಸಾಧ್ಯಹೇತುಗಳಿಗೆ ಭೇದವಿಲ್ಲದೆ ಇರುವುದರಿಂದ ಸಿದ್ಧಿಸಲಾರದು. ಎರಡನೆಯಪಕ್ಷದಲ್ಲಿ ಆವಾಕ್ಯವು ಅರ್ಥವುಳ್ಳುದೋ ? ಅಲ್ಲವೋ ? ದ್ವಿತೀಯಪಕ್ಷದಲ್ಲಿ ನಿಷ್ಪ್ರಯೋಜನವೇ ದೋಷವು. ಪ್ರಥಮಪಕ್ಷದಲ್ಲಿ ವಿಜ್ಞಾನವೆಂಬ ಅರ್ಥವುಳ್ಳದ್ದೋ? ಬೇರೆ ಅರ್ಥವುಳ್ಳದ್ದೋ? ಒಂದನೆಯಪಕ್ಷದಲ್ಲಿ ಸಾಧ್ಯವಿಶೇಷವೆಂಬ ಮೊದಲು ಹೇಳಿದ ದೋಷವುಂಟಾಗುವುದು. ಎರಡನೆಯ ಪಕ್ಷದಲ್ಲಿ ಬಾಹ್ಯಾರ್ಥಸಿದ್ಧಿಸುವುದಾದುದರಿಂದ ನಿನ್ನ ಮತವಿರೋಧವು. ಮತ್ತು ವಿಜ್ಞಾನವು-ಮತ್ತೊಂದುವಿಜ್ಞಾನವನ್ನು ವಿಷಯೀಕರಿಸುತ್ತದೆಯೋ ? ಇಲ್ಲವೋ-? ಮೊದಲನೆಯ ಪಕ್ಷದಲ್ಲಿ ಸರ್ವಪ್ರತ್ಯಯವೂ ನಿರ್ವಿಷಯಕವೆಂಬ ನಿನ್ನ ಮತಹಾನಿ; ಬಾಹ್ಯಾರ್ಥಸಿದ್ಧಿ. ಎರಡನೆಯದರಲ್ಲಿ ಸಂತಾನಾಂತರಭಂಗ ; ಅನುಮಾನದಿಂದ ಸಂತಾನಾಂತರಸಿದ್ಧಿಯಾಗುವದರಲ್ಲಿ ಬಾಹ್ಯಾರ್ಥವೂ ಸಿದ್ಧಿಸುವದು ; ಆದುದರಿಂದ ಈ ಮತವು ಬಹಳ ಅಯುಕ್ತವು.

[3] ಸರ್ವಶೂನ್ಯವಾದಿಮತಧ್ವಂಸಹೇಗೆಂದರೆ :— ಸರ್ವವೂ ಶೂನ್ಯವೆಂಬ ನಿನ್ನಮಾತೂ ಅದರಿಂದುಂಟಾಗುವ ಜ್ಞಾನವೂ ನಿರ್ವಿಷಯಕವೆ ? ಸವಿಷಯಕವೆ ? ಪ್ರಥಮಪಕ್ಷದಲ್ಲಿ ನಿನ್ನಿಷ್ಟ ಸಿದ್ಧಿಸುವುದಿಲ್ಲ; ದ್ವಿತೀಯಪಕ್ಷದಲ್ಲಿ ನಿನ್ನ ಮತಭಂಗವಾಗುವುದು ; ಆದುದರಿಂದ ನಿನ್ನ ಪ್ರತ್ಯಯವಾಕ್ಯಗಳ ಹಾಗೆ ಬಾಹ್ಯಾಭ್ಯಂತರಸಕಲಪದಾರ್ಥವೂ ಸಿದ್ಧಿಸುವುದು.

ಈಪ್ರಕಾರ ಮತತ್ರಯವನ್ನೂ ನಿರಾಕರಿಸಿ ನಿತ್ಯನಾಗಿಯೂ ಪುಣ್ಯಪಾಪಗಳ ಫಲವನ್ನು ಅನುಭವಿಸುವವನಾಗಿಯೂ ಸೂಕ್ಷ್ಮನಾಗಿಯೂ ಜ್ಞಾನಾನಂದಾದಿಗುಣವುಳ್ಳವನು

ಗಿಯೂ ಸ್ವಸ್ವದೇಹಾನುಗುಣಪ್ರಮಾಣವುಳ್ಳವನಾಗಿಯೂ ಸಕಲಕರ್ಮನಿರ್ಮೂಲನಕರನಾಗಿಯೂ ತ್ರಿಲೋಕಶಿಖರಶೇಖರನಾಗಿಯೂ ಇರುವ ಜೀವನೆಂಬವನುಂಟೆಂದು ಸ್ಥಾಪಿಸಿ ಜನರನ್ನು ಸಂತೋಷಪಡಿಸಿದನು.

[11] ಮತ್ತೂ ಅವರಿಗೆ ತಿಳಿಸಬೇಕೆಂದು ನೃಪವಂಶಸಂಬಂಧಿಗಳಾದ ದೃಷ್ಟಶ್ರುತಾನುಭೂತಕಥೆಗಳನ್ನು ಹೇಳತೊಡಗಿದನು.

'ಈತನ ವಂಶದಲ್ಲಿ ಅರವಿಂದನೆಂಬ ಅಂಬರಚರನು ತನ್ನ ಪತ್ನಿಯಾದ ವಿಜಯಿಯೊಡನೆಯೂ ಹರಿಶ್ಚಂದ್ರ ಕುರವಿಂದರೆಂಬ ತನ್ನ ಮಕ್ಕಳೊಡನೆಯೂ ಚಿರಕಾಲ ಖೇಚರವಿಭವವನ್ನು ಅನುಭವಿಸುತ್ತಿದ್ದನು. ಕಡೆಗೆ ಅವನು ಬಹ್ವಾರಂಭ ರೌದ್ರಧ್ಯಾನದಿಂದ ನರಕಾಯುಷ್ಯವನ್ನು ಉಪಾರ್ಜಿಸಿ ಮರಣಸಮಯದಲ್ಲಿ [12] ದಾಹಜ್ವರಸಂತಪ್ತನಾಗಿ [13–14] ಆವವಿಧವಾದ ಶೀತಳಕ್ರಿಯೆಯಿಂದಲೂ ತಾಪಶಾಂತಿಯನ್ನು ಪಡೆಯದೆ [14 ಗ] ಹರಿಶ್ಚಂದ್ರನನ್ನು ಕರೆದು ತನ್ನನ್ನು ಗಗನಗಾಮಿನಿವಿದ್ಯೆಯಿಂದ ಉತ್ತರಕುರುಗೆ ಕರೆದುಕೊಂಡು ಹೋಗಿ ಅಲ್ಲಿ ನಂದವನದಲ್ಲಿ ಬಿಡುವಂತೆ ಹೇಳಿದನು. ಆಗಗನಗಾಮಿನಿವಿದ್ಯೆ ನರಕಾಯುಷ್ಯನನ್ನು ಕರೆದುಕೊಂಡು ಹೋಗಲಾರೆನೆಂದು ಆತನ ಆಜ್ಞೆಯನ್ನು ಉಲ್ಲಂಘಿಸಿತು. ಹೀಗಿರಲು ಒಂದುದಿವಸ ಗೃಹಕಪೋತಗಳು ಕೋಪದಿಂದ ಒಂದನ್ನೊಂದು ಕಡಿದಾಡುತ್ತಿದ್ದುವು. ಆಕಾಲದಲ್ಲಿ ಅವುಗಳ ದೇಹದಿಂದ ರಕ್ತದ ಹನಿಗಳು ಹಾರಿ ಅರವಿಂದನ ದೇಹದಲ್ಲಿ ಬಿದ್ದುವು. ಆ ರಕ್ತಬಿಂದುಗಳಿಂದ ಅವನ ತಾಪವು ಸ್ವಲ್ಪಮಟ್ಟಿಗೆ ಆರಿತು. ಕೂಡಲೆ ಅವನು ಮಗನನ್ನು ಕರೆದು ತನಗೆ ಒಂದು ರಕ್ತಜಲಸರೋವರವನ್ನು ನಿರ್ಮಿಸಿಕೊಡುವಂತೆ ಆಜ್ಞಾಪಿಸಿದನು. ಮಗನು ಆನಿಸ್ತ್ರಿಂಶಕರ್ಮಕ್ಕೆ ಅಂಜಿದರೂ ತಂದೆಯ ಮಾತನ್ನು ಮೀರಲಾರದೆ ಲಾಕ್ಷಾರಸಾದಿಗಳಿಂದ ಕೃತಕರುಧಿರವನ್ನು ಮಾಡಿ ಕೊಳದಲ್ಲಿ ತುಂಬಿಟ್ಟನು. ಅರವಿಂದನು ಸಂತುಷ್ಟನಾಗಿ ಆಕೊಳವನ್ನು ಹೊಕ್ಕು ಓಲಾಡಿ ಮುಕ್ಕುಳಿಸಿ ನೋಡಿ ಕೃತಕರಕ್ತವೆಂದು ತಿಳಿದು ಮಗನಲ್ಲಿ ಕೋಪವನ್ನು ತಾಳಿ ಅವನನ್ನು ಕೊಂದುಹಾಕಬೇಕೆಂದು ಕೈಯ ಕತ್ತಿಯೊಡನೆ ಪಾವಟಗೆಗಳನ್ನು ಹತ್ತಿಬಂದನು. ಹಾಗೆ ಬರುವಾಗ ಜಾರಿಬಿದ್ದು ಕಯ್ಯಕತ್ತಿ ಎದೆಯಲ್ಲಿ ನಟ್ಟು ಸತ್ತುಹೋದನು. ಇದನ್ನು ಎಲ್ಲರೂ ಕೇಳಿರಬಹುದು.

ಮತ್ತು ಈತನ ವಂಶದಲ್ಲಿ ದಂಡಕನೆಂಬೊಬ್ಬನು ಚಿರಕಾಲ ರಾಜ್ಯವಾಳಿ [15] ಲೋಭದಿಂದ ಸತ್ತು ಅಜಗರವಾಗಿ ಹುಟ್ಟಿ ತಾನು ಹಿಂದೆ ಕೂಡಿಟ್ಟಿದ್ದ ಭಂಡಾರವನ್ನು ಕಾದಿದ್ದು ತನ್ನ ಪೂರ್ವಜನ್ಮದ ಪುತ್ರನನ್ನು ಕಂಡು ಜಾತಿಸ್ಮರನಾಗಿ ಅವನನ್ನು ಮಾತ್ರ ಭಂಡಾರದೊಳಗೆ ಬಿಡುತ್ತಿದ್ದನು. ಹೀಗಿರಲು ಮಗನು ರತಿಚಾರಣರೆಂಬವಧಿಜ್ಞಾನಿಗಳನಲ್ಲಿ ಅಜಗರವೃತ್ತಾಂತವನ್ನು ಕೇಳಿ ಅದು ತನ್ನ ತಂದೆಯೆಂದು ತಿಳಿದು ಅದರ

ಬಳಿಗೆ ಹೋಗಿ [16-17] 'ನೀನು ಲೋಭದಿಂದ ಅಜಗರವಾದೆ. ಇನ್ನಾದರೂ ವಿಷಯಾಭಿಲಾಷೆಯನ್ನು ಬಿಡು' ಎಂದು ಬೋಧಿಸಿದನು. [17] ಕೂಡಲೆ ಅಜಗರವು ಅಜ್ಞಾನವನ್ನು ತೊರೆದು ನಿರಶನವ್ರತದಿಂದ ದೇಹವನ್ನು ಬಿಟ್ಟು ಸೌಧರ್ಮಕಲ್ಪದಲ್ಲಿ ದೇವನಾಗಿ ಜನಿಸಿ [18] ತನ್ನ ಪುತ್ರನ ಉಪಕಾರವನ್ನು ಸ್ಮರಿಸಿಕೊಂಡು ದಿವ್ಯರತ್ನಾಭರಣಗಳನ್ನು ತಂದುಕೊಟ್ಟನು. ಅವು ವಂಶಪರಂಪರೆಯಾಗಿ ಬಂದು ಈಗ ನಮ್ಮ ಮಹಾರಾಜನ ಕಂಠದಲ್ಲಿ ಪ್ರಕಾಶಿಸುತ್ತವೆ.—ಇದನ್ನೂ ನೀವು ಕಂಡೇ ಇರುತ್ತೀರಿ. [18] ಇದೂ ಅಲ್ಲದೆ ಈ ಮಹಾಬಳನ ಪಿತೃಪಿತಾಮಹನಾದ ಸಹಸ್ರಬಳನು ಆತ್ಮಶ್ರೀಯನನುಭವಿಸಿ ವಿಷಯವಿರಕ್ತನಾಗಿ [19] ರಾಜ್ಯದಲ್ಲಿ ತನ್ನ ಹಿರಿಯಮಗನನ್ನು ನಿಲಿಸಿ ತಪಸ್ಸಿನಿಂದ ಮೋಕ್ಷವನ್ನು ಸಾಧಿಸಿದನು. ಬಳಿಕ ಶತಬಳನು ಈ ಮಹಾಬಳನ ತಂದೆಯಾದ ಅತಿಬಳನೆಂಬ ತನ್ನ ಮಗನಿಗೆ ರಾಜ್ಯವನ್ನು ಕೊಟ್ಟು ತಪಕ್ಕೆ ಹೋಗಿ ಸನ್ನ್ಯಸನವಿಧಾನದಿಂದ ಶರೀರವನ್ನು ಬಿಟ್ಟು ಮಹೇಂದ್ರಕಲ್ಪದಲ್ಲಿ ಜನಿಸಿದನು. ಹಿಂದೆ ಬಾಲ್ಯದಲ್ಲಿ ನಾವು ಒಂದುದಿನ ಮಂದರಪರ್ವತದಲ್ಲಿ ವನಕ್ರೀಡೆಯಾಡುತ್ತಿರುವಾಗ ಮಹೇಂದ್ರಕಲ್ಪಜನು ಅಲ್ಲಿಗೆ ಚೈತ್ಯಾಲಯವಂದನಾರ್ಥನಾಗಿ ಬಂದು [20] ಈ ಮಹಾಬಳನನ್ನು ಕಂಡು ಆಲಿಂಗಿಸಿಕೊಂಡು ಜಿನಧರ್ಮವನ್ನು ಮರೆಯದಿರೆಂದು ಹೇಳಲಿಲ್ಲವೆ? [21] ಈತನ ತಂದೆಯಾದ ಅತಿಬಳಖೇಚರನೂ ಈತನಿಗೆ ರಾಜ್ಯವನ್ನು ವಹಿಸಿ ತಪೋಬಲದಿಂದ ಕೇವಲಿಯಾಗಲು ನಾವೆಲ್ಲರೂ ದೇವಸಂತತಿಯೊಡನೆ ಹೋಗಿ ಪೂಜಿಸಿ ಬರಲಿಲ್ಲವೆ? ಇದು ಅನುಭೂತವಲ್ಲವೆ? ಎಂಬೀ ದೃಷ್ಟಶ್ರುತಾನುಭೂತಕಥೆಗಳನ್ನು ಹೇಳಿ [22ಗ] ಪರಪಕ್ಷದೂಷಣಪುರಸ್ಸರವಾದ ಅನೇಕೋಪಪತ್ತಿಗಳಿಂದ ಸ್ವಪಕ್ಷಸ್ಥಾಪನೆಮಾಡಿ [23]ಜಯಪತ್ರವನ್ನು ಪಡೆದನು. [23ಗ]ಇವನಲ್ಲೇ ಮಹಾಬಳನು ಪರಮವಿಶ್ವಾಸವನ್ನಿಟ್ಟುಸುಖದಿಂದಿರುತ್ತಿದ್ದನು.[24ಗ]ಹೀಗೆ ಕೆಲವುಕಾಲವಾಗಲು ಒಂದು ದಿವಸ ಸ್ವಯಂಬುದ್ಧನು [25] ಮೇರುವಿಗೆ ಹೋಗಿ [26—32] ಅದರ ಸಮೀಪಪ್ರದೇಶಗಳನ್ನು ಪರಿಜನಕ್ಕೆ ತೋರಿ ವಿವರಿಸುತ್ತ [32ಗ] ಭದ್ರಶಾಲ ಮೊದಲು ಪಾಂಡುಕವನದವರೆಗೂ ಅದರಲ್ಲಿದ್ದ ಚೈತ್ಯಾಲಯಗಳನ್ನು ಕ್ರಮವಾಗಿ ವಂದಿಸಿ ದೇವತಾರ್ಚನೆಮಾಡಿ ಸೌಮನಸವನದ ಜಿನಭವನಕ್ಕೆ ಬಂದನು. [33-33]ಆಗ ಅಲ್ಲಿಗೆ ಆದಿತ್ಯಗತಿ ಅರಿಂದಮ ಎಂಬಿಬ್ಬರು ಅವಧಿಜ್ಞಾನಿಗಳು ಗಗನಮಾರ್ಗದಿಂದ ಇಳಿದು ಬಂದರು. ಅದನ್ನು ಕಂಡು ಸ್ವಯಂಬುದ್ಧನು ಅವರ ಬಳಿಗೆ ಹೋಗಿ ವಂದನೆಮಾಡಿ ಆದಿತ್ಯಗತಿಗಳನ್ನು ಕುರಿತು [34] 'ಸ್ವಾಮಿ ನಮ್ಮ ಪ್ರಭುವಿಗೆ ಇನ್ನೂ ಭೋಗಕಾಂಕ್ಷೆ ಕುಂದಲಿಲ್ಲ. ಆತನು ಭವ್ಯನೋ ಅಲ್ಲವೋ? [35] ಆತನಿಗೆ ಯೌವನವು ಕಳೆದು ಹೋಗಿ ಮುಪ್ಪುಬಂದೊದಗಿದರೂ ಇನ್ನೂ ವ್ಯಾಮೋಹವು ತಪ್ಪಲಿಲ್ಲ. ಇದು ನನಗೆ ದುಃಖವನ್ನು ಉಂಟುಮಾಡುತ್ತಿದೆ. ನಿಜಾವಧಿಜ್ಞಾನದಿಂದ ಇದನ್ನು ಅರಿತು ನನಗೆ ತಿಳುಹಿ ನನ್ನ ದುಃಖವನ್ನು ತೊಲಗಿಸಬೇಕು' ಎಂದು ಪ್ರಾರ್ಥಿಸಿದನು. ಅದಕ್ಕೆ ಆದಿತ್ಯಗತಿಗಳು ಮಹಾಬಳನ ಪೂರ್ವಜನ್ಮದ ವೃತ್ತಾಂತವನ್ನು ಹೀಗೆಂದು ಹೇಳಿದರು:—

ಈ ಜಂಬೂದ್ವೀಪದ ಪರವಿದೇಹದ ಗಂಧಿಳವಿಷಯದಲ್ಲಿ ಸಿಂಹಪುರವೆಂಬ ಪಟ್ಟಣವುಂಟು. ಅದನ್ನು ಶ್ರೀಷೇಣನೆಂಬ ರಾಜನು ಆಳುತ್ತಿದ್ದನು. [36] ಅವನಿಗೆ ಸುಂದರಿಯೆಂಬ ಪತ್ನಿಯಿದ್ದಳು [37] ಅವರಿಗೆ ಜಯವರ್ಮ ಶ್ರೀವರ್ಮ ಎಂಬ ಇಬ್ಬರು ಮಕ್ಕಳಾದರು. [37ಗ] ಅವರಲ್ಲಿ ಕಿರಿಯವನು ಜನಗಳಿಗೆ ಪ್ರಿಯನಾಗಿದ್ದನು [38] ಆದುದರಿಂದ ರಾಜನು ತನ್ನ ವೃದ್ಧಾಪ್ಯದಲ್ಲಿ ರಾಜ್ಯವನ್ನು ಮಕ್ಕಳಿಗೆ ಕೊಡುವಾಗ ಕಿರಿಯವನಿಗೆ ಕೊಟ್ಟು ತಪಸ್ಸಿಗೆ ಹೊರಟುಹೋದನು. [38ಗ] ಅದಕ್ಕೆ ಹಿರಿಯಮಗನು ದುಃಖಿಸಿ [39] ತನ್ನ ಮುಂದಿನ ಜನ್ಮದಲ್ಲಾದರೂ ರಾಜ್ಯವನ್ನು ಪಡೆವೆನೆಂದು ಜೈನದೀಕ್ಷೆಯನ್ನು ವಹಿಸಿ ತನ್ನ ಕೊಯ್ದ ಕುಂತಳವನ್ನು ಇಡಲೆಂದು[40]ಹುತ್ತದಲ್ಲಿ ಕೈಯಿಟ್ಟನು. ಅಲ್ಲಿದ್ದ ಹಾವು ಕೈಯನ್ನು ಕಚ್ಚಿತು. [41] ಆಕಾಲಕ್ಕೆ ಸರಿಯಾಗಿ ಅಂತರಿಕ್ಷದಲ್ಲಿ ಒಬ್ಬ ವಿಯಚ್ಚರೇಂದ್ರನು ಹೋಗುತ್ತಿದ್ದನು. ಅವನನ್ನು ಕಂಡು ತಾನೂ ವಿದ್ಯಾಧರನಾಗಬೇಕೆಂದು ಬಯಸಿ ರಾಜಪುತ್ರನು ದೇಹವನ್ನು ತೊರೆದು[42] ಇಲ್ಲಿ ಮಹಾಬಳನಾಗಿ ಜನಿಸಿದನು. ಅವನು [43] ಇಂದಿನ ಕನಸಿನಲ್ಲಿ ತನ್ನ ಮೂವರುಮಂತ್ರಿಗಳೂ ತನ್ನನ್ನು ದುರ್ಗಂಧದ ಕೆಸರಿನಲ್ಲಿ ಅದ್ದಿದಂತೆಯೂ ನೀನು ಬಿಡಿಸಿತಂದು ಸಿಂಹಾಸನದಲ್ಲಿರಿಸಿ ಅಭಿಷೇಕಿಸಿದಂತೆಯೂ ಎದ್ದ ಉರಿ ನಂದುವಂತೆಯೂ ಕಂಡು ದುಸ್ಸ್ವಪ್ನವಾದುದರಿಂದ ಚಿಂತಾಕ್ರಾಂತನಾಗಿ ನಿನ್ನ ಆಗಮನವನ್ನೇ ಇದಿರುನೋಡುತ್ತಿರುವನು. ನೀನು ಹೋಗಿ ಎಲ್ಲವನ್ನೂ ತಿಳಿಸಿದರೆ ನಿನ್ನ ಮಾತಿನಂತೆ ನಡೆದುಕೊಳ್ಳುವನು. ಅವನಿಂದ ನೋಂಪಿಗಳನ್ನು ಮಾಡಿಸು. ಆ ಫಲದಿಂದ [44] ಅವನು (1) ಲಲಿತಾಂಗ(2)ವಜ್ರಜಂಘ(3)ಭೋಗಭೂಮಿಜ (4) ಶ್ರೀಧರ (5) ಸುವಿಧಿನೃಪ (6) ಅಚ್ಯುತೇಂದ್ರ (7) ವಜ್ರನಾಭಿ (8) ಸರ್ವಾರ್ಥಸಿದ್ಧೀಶ್ವರ ಎಂಬ ಹೆಸರುಗಳಿಂದ ಬೇರೆಬೇರೆ ಜನ್ಮಗಳನ್ನು ಪಡೆದು ಕೊನೆಗೆ (9) ಆದಿದೇವನಾಗುವನು.' ಬಳಿಕ ಸ್ವಯಂಬುದ್ಧನು ಅವರಿಗೆ ಕೈಗಳನ್ನು ಮುಗಿದು ತ್ವರಿತಗತಿಯಿಂದ ಬಂದು [45ಗ] ಖಚರಪತಿಗೆ ಆ ಸಂಗತಿಯನ್ನೆಲ್ಲಾ ತಿಳಿಸಿ [46-48] ವಿವೇಕವನ್ನು ಉಪದೇಶಿಸಿದನು. [48ಗ] ಅವನು ಮಂತ್ರಿಯ ಮಾತಿನಿಂದ ಅಕಲುಷಿತಹೃದಯನಾಗಿ [49] ವೈರಾಗ್ಯವನ್ನವಲಂಬಿಸಿ ತನ್ನ ಮಗನಾದ ಅತಿಬಳನನ್ನು ರಾಜ್ಯದಲ್ಲಿ ನಿಲ್ಲಿಸಿ ಪಟ್ಟಣದಿಂದ ಹೊರಟು ಹೋಗಿ ವೀರಸಂಸ್ಥಾನಾರೂಢನಾಗಿದ್ದನು. [51ಗ] ಅವನನ್ನು ಸ್ವಯಂಬುದ್ಧನು ಜಾತರೂಪಧರನಾಗಿ ಮಾಡಿ [52–57] ವ್ರತವಿಧಾನವನ್ನು ಉಪದೇಶಿಸಿ[58]'ಜಿನೇಂದ್ರಪದವನ್ನು ಶರಣುಹೊಗು; ದಿವ್ಯಕಾಂತಿಯುಳ್ಳ ಶರೀರವನ್ನು ಪಡೆವೆ' ಎಂದು ಬೋಧಿಸಿದನು. ಖಚರೇಂದ್ರನು [58ಗ] ಆ ಮಾತಿನಂತೆಯೆ ಇಪ್ಪತ್ತೆರಡುದಿವಸ ವೀರಶಯ್ಯಾತಳದಲ್ಲಿದ್ದು [59–60] ಪ್ರಾಯೋಪಗಮನದಿಂದ ಶರೀರವನ್ನು ತೊರೆದು [62] ಈಶಾನಕಲ್ಪದಲ್ಲಿ ಲಲಿತಾಂಗದೇವನಾಗಿ ಹುಟ್ಟಿದನು.

(2) ಲಲಿತಾಂಗದೇವನ ಕಥೆ.

(63–65) ಈಶಾನಕಲ್ಪದ ವರ್ಣನೆ. ಕೂಡಲೆ ಮೃದಂಗಮಂಗಳವಾದ್ಯವೂ (65) ಕುಸುಮವರ್ಷಾದಿಶುಭನಿಮಿತ್ತಗಳೂ ಉಂಟಾದುವು. ಬಳಿಕ ದೇವವಿಲಾಸಿನಿಯರೊಡನೆ ಒಂದು ವಿಮಾನವು ಬಂದಿತು. (66) ಲಲಿತಾಂಗನು ಅದೆಲ್ಲವನ್ನೂ ನೋಡಿ ಇದೇನಿರಬಹುದೆಂದು ಸ್ವಲ್ಪಕಾಲ ವಿಸ್ಮಯಸ್ತಬ್ಧನಾಗಿದ್ದು ಹಾಗೆಯೇ ತನ್ನ ಪೂರ್ವವೃತ್ತಾಂತವನ್ನು ನೆನೆದು (67) ಅದು ದೇವ ವಿಮಾನವೆಂದೂ ಆ ಸ್ತ್ರೀಯರು ದೇವಸ್ತ್ರೀಯರೆಂದೂ ತಿಳಿದುಕೊಂಡನು. ಅಷ್ಟರಲ್ಲಿ (67ಗ) ಅಲ್ಲಿನ ಮಹತ್ತರ ದೇವಿಗಳು ಬಂದು (68) ‘ಇದು ನಿನ್ನ ವಿಮಾನವು. ಇದು ನಿನ್ನ ಸೇವೆಗಾಗಿರುವ ಗಣಿಕಾಸಮೂಹವು. ನೀನು ಲಲಿತಾಂಗದೇವನು. (69) ಇವೆಲ್ಲವೂ ನಿನಗೆ ಜಿನವರಪ್ರಸಾದದಿಂದ ಉಂಟಾದುವು,’ ಎಂದು ಬಿನ್ನವಿಸಿ ಅವುಗಳನ್ನು ಒಪ್ಪಿಸಿದರು. ಲಲಿತಾಂಗನು ಎಲ್ಲವನ್ನೂ ಅಂಗೀಕರಿಸಿ ಸ್ವಯಂಪ್ರಭೆ, ಕನಕಲತೆ, ಕನಕಮಾಲೆ, ವಿದ್ಯುಲ್ಲತೆ, ಎಂಬ ನಾಲ್ವರು ದೇವಿಗಳೊಡನೆ (70-72) ಚಿರಕಾಲ ಸ್ವರ್ಗಸುಖಗಳನ್ನು ಅನುಭವಿಸುತ್ತಿದ್ದನು. ಆಗ ಸರ್ವಾಂಗಸುಂದರಿಯಾದ ಸ್ವಯಂಪ್ರಭೆ ಜನಿಸಿದಳು (73–77) ಅವಳ ವರ್ಣನೆ ಆಕೆಯನ್ನು ವರಿಸಿ ಸುಖದಿಂದಿರುತ್ತಿದ್ದನು.

III. ಆಶ್ವಾಸಂ. ವಜ್ರಜಂಘದರ್ಶನ ವ್ಯಾವರ್ಣನಂ.

ಹೀಗೆ ಲಲಿತಾಂಗನು ಸುರಲೋಕಸೌಖ್ಯಗಳನ್ನು ಸೇವಿಸುತ್ತಿರುವಲ್ಲಿ (2ಗ] ಅವನ ಆಯುಃಪ್ರಮಾಣವು ಇನ್ನಾರುತಿಂಗಳಿಗೆ ಮುಗಿವುದೆಂಬ ವೇಳೆಗೆ (3) ಪುಷ್ಪಮಾಲೆಗಳೂ ವಿಭೂಷಣಾದಿಗಳೂ ಕಾಂತಿಗುಂದಿ ಅವನ ಅವಸಾನಕಾಲವನ್ನು ಸೂಚಿಸಿದುವು. ಅದನ್ನು ಕಂಡು ಅವನು ಎದೆಗೆಟ್ಟು ನಡುಗಿ (3ಗ-5) ಬಹು ವಿಧವಾಗಿ ಪ್ರಲಾಪಿಸಿದನು. [5ಗ] ಆಗ ಸಾಮಾನಿಕದೇವರು ಬಂದು (6) ‘ಮೃತ್ಯುವು ಆರಿಗೂ ತಪ್ಪಿದುದಲ್ಲ; (7) ನೀನು ಅಂಜದೆ ಜಿನಪೂಜೆಯನ್ನು ಮಾಡು (8) ಆರೂ ಮೃತ್ಯುವನ್ನು ಗೆಲ್ಲಲಾರರು’ ಎಂದು ಸಮಾಧಾನಮಾಡಿದರು. ಅವರ ವಾಕ್ಯವನ್ನು ನಂಬಿ ಅವನು ಆರುತಿಂಗಳು ಜಿನಪೂಜೆಮಾಡಿ ಕೊನೆಗೆ ಮೃತ್ಯುವಶನಾದನು.

(3) ವಜ್ರಜಂಘನ ಕಥೆ.

ಬಳಿಕ ಅವನು [9] ಜಂಬೂದ್ವೀಪದ ಮೇರುವಿನ ಪೂರ್ವವಿದೇಹದ ಸೀತಾನದಿಯ ದಕ್ಷಿಣತಟದ ಉತ್ಪಳಪುರದಧಿಪನಾದ ವಜ್ರಬಾಹುನೃಪನಿಗೂ ಅತನ ಪತ್ನಿ ವಸುಂಧರೆಗೂ ಅಗ್ರಪುತ್ರನಾಗಿ ಜನಿಸಿ ವಜ್ರಜಂಘನೆಂಬ ಹೆಸರಿನಿಂದ ಬೆಳೆಯುತ್ತಿದ್ದನು. [9ಗ-10] ಅವನಿಗೆ ಕ್ರಮಕ್ರಮವಾಗಿ ಯೌವನೋದಯವಾಯಿತು. [11–11ಗ]

ಕೂಡಲೆ ಸ್ವಯಂಪ್ರಭಾದೇವಿಯ ನೆನೆಪೂ ಉಂಟಾಯಿತು. ಅವಳ ಹಂಬಲಿಂದ ಅವನು [12] ಸರ್ವಭೋಗವಿಮುಖನಾಗಿ ಚಿಂತಿಸುತ್ತಿದ್ದನು. [12ಗ] ಅತ್ತ ಸ್ವಯಂಪ್ರಭಾದೇವಿಯೂ ಪತಿವಿಯೋಗದಿಂದ ಖಿನ್ನಳಾಗಿ [13] ಆಭರಣಾದಿಗಳನ್ನು ತೊರೆದು [14–15] ಲಲಿತಾಂಗನನ್ನು ಹಂಬಲಿಸಿ ಹಲುಬುತ್ತ ರೋದಿಸುತ್ತಿದ್ದಳು. [15] ಅವಳ ಬಳಿಗೆ ಮಹತ್ತರದೇವಿಗಳು ಹೋಗಿ [16] 'ಮರಣವು ಬಾರದವರು ಆರು? ಮುಂದುಹಿಂದೆಂಬ ಭೇದವಲ್ಲದೆ ಬೇರೆಯೇನೂ ಇಲ್ಲ. ಇದಕ್ಕೆ ಮರುಳಾಗದೆ ಜಿನನನ್ನು ಪೂಜಿಸು. ಮುಂದಿನ ಜನ್ಮದಲ್ಲಿ ನಿನ್ನ ಪತಿಯನ್ನು ಪಡೆವೆ' ಎಂದು ಬೋಧಿಸಿದರು. [16ಗ] ಆ ಮಾತುಗಳಿಂದ ಮನಸ್ಸಿಗೆ ವಿವೇಕವನ್ನು ತಂದುಕೊಂಡು [17] ಅವಳು ಗುರುಪಂಚಕವನ್ನು ಧ್ಯಾನಿಸುತ್ತ ಶರೀರಪರಿತ್ಯಾಗಮಾಡಿದಳು. [17ಗ] ಕೂಡಲೆ ಜಂಬೂದ್ವೀಪದ ಪೂರ್ವವಿದೇಹದ ಪುಂಡರೀಕಿಣಿಯನ್ನು ಆಳುತ್ತಿದ್ದ ವಜ್ರದಂತನಿಗೂ ಆತನ ಸತಿ ಲಕ್ಷ್ಮೀಮತಿಗೂ ಪುತ್ರಿಯಾಗಿ ಹುಟ್ಟಿ ಶ್ರೀಮತಿಯೆಂಬ ನಾಮದಿಂದ ಬಳೆದು [18-20] ಯೌವನಲಕ್ಷ್ಮಿಯನ್ನು ಹೊಂದಿದಳು. [21] ಪಂಡಿತೆಯೆಂಬ ದಾದಿಯಲ್ಲಿ ಓದಿ ಸಕಲಕಲಾಪಾಂಡಿತ್ಯವನ್ನು ಪಡೆದಿದ್ದಳು. ಹೀಗಿರುವಲ್ಲಿ [21ಗ] ಒಂದುದಿವಸ ಆ ಕನ್ಯೆ ತನ್ನ ಅಂತಃಪುರದಲ್ಲಿ ಮಲಗಿದ್ದು ನಿಶಾವಸಾನಸಮಯದಲ್ಲಿ ಆಪುರದ ಬಹಿರುದ್ಯಾನದಲ್ಲಿದ್ದ ಯಶೋಧರಮುನಿಗಳ ಕೇವಲಜ್ಞಾನೋತ್ಪತ್ತಿಯ ಉತ್ಸವಕ್ಕಾಗಿ ಬಂದ [22] ದೇವಯಾನದ ಕಿಂಕಿಣೀಧ್ವನಿಯಿಂದ ಎಚ್ಚತ್ತು [22ಗ] ಸೌಧದಲ್ಲಿ ನಿಂತು ದೇವಾಗಮನವನ್ನು ನೋಡಿದಳು. ತಟ್ಟನೆ ಅವಳಿಗೆ ತನ್ನ ಪೂರ್ವಭವಸ್ಮರಣೆಯುಂಟಾಯಿತು. [23] ಅದರೊಡನೆ ಲಲಿತಾಂಗದೇವನ ನೆನೆಪೂ ಮೈದೋರಿತು. ಅವಳು ವಿರಹವ್ಯಥೆಯಿಂದ ಮೈಮರೆತಳು. [23ಗ] ಅದನ್ನು ಕಂಡು ಪರಿಜನರು ಬಂದು ಶೀತಳ ಕ್ರಿಯೆಗಳಿಂದ ಉಪಚರಿಸಿ ಮೂರ್ಛೆಯಿಂದೆಚ್ಚರಿಸಿ ಮೂರ್ಛೆಗೆ ಕಾರಣವೇನೆಂದು ಕೇಳಿದರು. ಅವಳು ಅವ ಪ್ರತ್ಯುತ್ತರವನ್ನೂ ಕೊಡಲಿಲ್ಲ; ಆದುದರಿಂದ ಅವರು ಆ ಸಂಗತಿಯನ್ನು ವಜ್ರದಂತನಿಗೂ ಲಕ್ಷ್ಮೀಮತಿಗೂ ತಿಳಿಸಿದರು. ಅವರಿಬ್ಬರೂ ಮಗಳ ಸಮೀಪಕ್ಕೆ ಬಂದು [24] ಅವಳ ಚಿಂತೆಗೆ ಕಾರಣವನ್ನು ಕೇಳಿದರು. ಅವಳು ಸುಮ್ಮನೆ ಕಣ್ಣೀರನ್ನು ಸುರಿಸಿದಳೆ ಹೊರತು ತನ್ನ ಮನೋಗತವನ್ನು ಹೇಳಲಿಲ್ಲ. ಅದನ್ನು ಕಂಡು [26] ವಜ್ರದಂತನು—ಮಗಳ ಅಭಿಪ್ರಾಯವನ್ನು ತಿಳಿವವರೆಗೂ ನೀನು ಸಮಾಧಾನಳಾಗಿರೆಂದು ತನ್ನ ಪತ್ನಿಗೆ ಹೇಳಿ [26ಗ] ಪಂಡಿತೆಯನ್ನು ಕರೆದು ಮಗಳನ್ನು ಮೆಲ್ಲಗೆ ಒಡಂಬಡಿಸಿ ಸಂಗತಿಯನ್ನು ತಿಳಿದು ಹೇಳುವಂತೆ ನಿಯಮಿಸಿ ಹೊರಟುಹೋದನು. [27] ಆಸಮಯಕ್ಕೆ ಗುರುಗಳಾದ ಯಶೋಧರ ಮುನಿಪತಿಗೆ ಕೇವಲಬೋಧವೂ ತನ್ನ ಆಯುಧಾಗಾರದಲ್ಲಿ ಚಕ್ರರತ್ನವೂ ಜನಿಸಿದುವು. [29] ಆಗ ವಜ್ರದಂತನು ಹೋಗಿ ಮುನಿಪತಿಗೆ ವಂದಿಸಿ [29ಗ] ಲಬ್ಧಾವಧಿಲೋಚನನಾಗಿ ಮರಳಿ ಬಂದು ಚಕ್ರಪೂಜೆಯನ್ನು ನಿರ್ವರ್ತಿಸಿ ದಿಗ್ಜಯೋದ್ಯೋಗದಿಂದ ವಿಜಯಪ್ರಯಾಣವನ್ನು ಬಳೆಸಿದನು.

ಇತ್ತ ಪಂಡಿತೆ ಶ್ರೀಮತಿಯನ್ನು ಮೆಲ್ಲಗೆ ಉಪವನಕ್ಕೆ ಕರೆದುಕೊಂಡುಹೋಗಿ (30] ಉಪಚರಿಸುವ ವ್ಯಾಜದಿಂದ ಸಮೀಪಕ್ಕೆ ಸೇರಿ [31-32] 'ನನಗಿಂತ ನಿನಗೆ ಹಿತರಾರು ? ನನ್ನಲ್ಲಿಯೂ ನಿನ್ನಮನಸ್ಸನ್ನು ಮರಸಿ ನೀನು ಹೀಗೆ ಕೊರಗಲಾಗದು, ನಿನ್ನ ಮನೋಗತವನ್ನು ಹೇಳು' ಎಂದು ಪ್ರೀತಿಯಿಂದ ಕಾಡಿದಳು. [32ಗ] ಸ್ವಭಾವಮುಗ್ಧೆಯಾದ ಶ್ರೀಮತಿ ಲಜ್ಜೆಯಿಂದ ತಲೆಬಾಗಿ [33]'ನಿನಗಿಂತಲೂ ನನಗೆ ಆಪ್ತರು ಬೇರೆಯಾರಿರುವರು ? ಹೇಳುವೆನು ಕೇಳು. ದೇವಾಗಮನವನ್ನು ಕಂಡು ನನಗೆ ಪೂರ್ವಜನ್ಮಸ್ಮರಣೆಯುಂಟಾಗಿ ಇಷ್ಟು ನೋವಾಯಿತು. ಇಲ್ಲದಿದ್ದರೆ ನಿಷ್ಕಾರಣವಾಗಿ ನನಗೆ ಇಷ್ಟು ಚಿಂತೆಯಿಲ್ಲಿಯದು – ಎಂದು ಹೇಳಿ ತನ್ನ ಹಿಂದಿನ ಜನ್ಮದ ಸಂಗತಿಯನ್ನು ಇಂತೆಂದಳು:—

[33ಗ] ನಾನು ಈ ಜನ್ಮಕ್ಕೆ ಹಿಂದೆ ಮೂರನೆಯ ಜನ್ಮದಲ್ಲಿ ಗಂಧಿಳವಿಷಯದ ಪಾಟಲಿಗ್ರಾಮದಲ್ಲಿ ನಾಗದತ್ತನೆಂಬ ವರ್ತಕನ ಪತ್ನಿಯಾದ ವಸುದತ್ತೆಎಂಬಳ ಉದರದಲ್ಲಿ ಜನಿಸಿದೆನು. ನಾನು ನಮ್ಮ ತಾಯಿಯ ಗರ್ಭದಲ್ಲಿ ನೆಲಸಿದ ಕೂಡಲೆ [34] ನನ್ನೊಡಹುಟ್ಟಿದವರೂ ತಂದೆಯೂ ಪರಲೋಕಗತರಾದರು. [33ಗ] ನಮ್ಮ ತಾಯಿಯೂ ಅಜ್ಜಿಯೂ ಸರ್ವಸ್ವವನ್ನೂ ಕಳೆದುಕೊಂಡು ದೀನರಾಗಿ ಇತರರ ಮನೆಯಲ್ಲಿ ಕೆಲಸಮಾಡಿಕೊಂಡು ಜೀವಿಸುತ್ತಿದ್ದರು. ಕೆಲವು ಕಾಲದಮೇಲೆ ನಾನು ಜನಿಸಿದೆನು. ನನ್ನ ದೇಹದಿಂದ ಒಂದು ವಿಧವಾದ ದುರ್ಗಂಧವು ಬರುತ್ತಿದ್ದುದರಿಂದ ಎಲ್ಲರೂ ಜುಗುಪ್ಸೆಪಡುತ್ತಿದ್ದರು. ಅದರಿಂದ ಅವರು ನನ್ನನ್ನು ಶ್ಮಶಾನದಲ್ಲಿ ಚಿಂದಿಹೊದಿಸಿಟ್ಟು ತಾವುಬೇಡಿ ತಂದಎಂಜಲಿಂದ ಸಾಕುತ್ತಿದ್ದರು. ನಾನು ಹೆಸರೂ ಇಲ್ಲದೆ ನಿರ್ನಾಮಿಕೆಯಾಗಿದ್ದೆನು. ಹೀಗಿರುವಲ್ಲಿ [35] ಕೆಲವು ದಿವಸಕ್ಕೆ ಅವರೂ ಮೃತ್ಯುವಶರಾದರು. ನನಗೆ ಆರೂ ಗತಿಯಿಲ್ಲದಿದ್ದುದರಿಂದ ನಾನು ಅವಿಚಾರಣವೆಂಬ ಕಾಡನ್ನು ಹೊಕ್ಕು[35ಗ]ಅಲ್ಲಿದ್ದ ಅಂಬರತಿಳಕವೆಂಬ ಗಿರಿಯನ್ನು ಸೇರಿದನು. [36] ಅಲ್ಲಿ ಪುಣ್ಯಾಸ್ರವರೆಂಬ ಮುನಿಗಳಿದ್ದರು [36ಗ]ಅವರಿಗೆ ನಮಸ್ಕರಿಸಿ ನನ್ನ ದುಃಖಕಾರಣವನ್ನು ತಿಳಿಸಿ ಕರುಣಿಸಬೇಕೆಂದು ಪ್ರಾರ್ಥಿಸಿದೆನು. [38] 'ಇದು ನಿನ್ನ ಜನ್ಮಾಂತರಪಾಪಪರಿಪಾಕದಿಂದ ಉಂಟಾಯಿತು' ಎಂದು ಅವರು ಇಂತೆಂದರು :—[38ಗ]ನೀನು ಹಿಂದಿನ ಜನ್ಮನಲ್ಲಿ ಈ ದೇಶದ ಪಳಾಳಕೂಟದಲ್ಲಿ ದೇವಿಲನೆಂಬ ಗ್ರಾಮಕೂಟನ ಪತ್ನಿ ವಸುಮತಿಯೆಂಬಳ ಗರ್ಭದಲ್ಲಿ ಧನಶ್ರೀಯೆಂಬ ಹೆಸರಿನಿಂದ ಹುಟ್ಟಿ ಒಂದುದಿವಸ ತ್ರಿಗುಪ್ತಿಗುಪ್ತ ಸಮಾಧಿಗುಪ್ತರೆಂಬ ಯತಿಗಳ ಅಧ್ಯಯನಕ್ಕೆ ಅಂತರಾಯವನ್ನು ಕಲ್ಪಿಸಲೆಂದು ಸತ್ತನಾಯನ್ನು ತಂದು ಅವರ ಓದುವ ಮನೆಯಲ್ಲಿ ಹಾಕಿದೆ. ಅದಕ್ಕೆ ಅವರು [39] ಅಯ್ಯೋ ! ಬುದ್ಧಿಯಿಲ್ಲದ ಹುಡುಗೀ ! ಹೀಗೆ ಮಾಡಿದೆಯಲ್ಲಾ ; ಇದು ನಿನಗೆ ದುಃಖವನ್ನು ಉಂಟುಮಾಡುವುದು, ಎಂದರು [39ಗ] ಅದಕ್ಕೆ ನೀನು ಅಂಜಿ [40] ಅವರ ಕ್ಷಮೆಯನ್ನು ಬೇಡಿಕೊಂಡೆ. [40] ಅವರ ಉಪಶಮದಿಂದ ನಿನಗೆ ಮನುಷ್ಯಜನ್ಮವುಂಟಾಯಿತು. ಈ ನಿನ್ನ ದುಃಖವು ಪೂರ್ವ

ಪಾಪಜನಿತವಾದುದು ; ಇನ್ನು ನಿನಗೆ ಜಿನೇಂದ್ರಧರ್ಮಾಭ್ಯಾಸದಿಂದ ಪಾಪವಿಮೋಚನೆಯಾಗುವುದು ' ಎಂದು ಅನುಗ್ರಹಿಸಿದರು. [40ಗ] ತದ್ವಾಕ್ಯಾನುಸಾರವಾಗಿ ನಾನು ಜೈನವ್ರತಗಳನ್ನು ನಡೆಯಿಸಿ ಆಯುಷ್ಯಾವಸಾನದಲ್ಲಿ ಶರೀರಪರಿತ್ಯಾಗವನ್ನು ಮಾಡಿ ಶ್ರೀಪ್ರಭವಿಮಾನದಲ್ಲಿ ಜನಿಸಿ ಸ್ವಯಂಪ್ರಭೆಯೆಂಬ ಹೆಸರಿನಿಂದ ಲಲಿತಾಂಗದೇವನಿಗೆ ಪತ್ನಿಯಾಗಿದ್ದೆನು. ಕೆಲವು ಕಾಲಕ್ಕೆ ನನ್ನ ಪ್ರಿಯನು ಮೃತನಾದನು ; ನಾನು ಆರುತಿಂಗಳು ಜಿನೇಂದ್ರಮಹಿಮೆಯನ್ನು ಮಾಡಿ ಇಲ್ಲಿ ಬಂದು ಜನಿಸಿದೆನು. ಇದೇ ನನ್ನ ವೃತ್ತಾಂತವು.[41]

ಲಲಿತಾಂಗದೇವನೂ ಎಲ್ಲಿಯೋ ಹುಟ್ಟಿರಬೇಕು ; ಅವನೊಡನೆ ಸೇರದಿದ್ದರೆ ನನಗೆ ಜೀವಿತದ ಆಶೆಯೂ ಸೇರದು. ಇದನ್ನು ಆರೊಡನೆ ಹೇಳಿದರೆ ತಾನೆ ಏನು ಪ್ರಯೋಜನವೆಂದು ಮೌನವಾಗಿದ್ದೆನು. [42] ಆತನ ರೂಪು ನನ್ನ ಎದೆಯಲ್ಲಿ ಸನ್ನಿಹಿತವಾಗಿ [43] ಸ್ಥಿರವಾಗಿ ನೆಲೆಗೊಂಡಿದೆ. [43ಗ) ನನ್ನ ಇಷ್ಟಾರ್ಥವು ಮಾತ್ರ ಕೈಗೂಡುವಂತಿಲ್ಲ. ಆದುದರಿಂದ ನಮ್ಮ ಅನುರಾಗಸೂಚಕವಾದ ಈ ಚಿತ್ರಪಟವನ್ನು ಬರೆದು ಇಟ್ಟುಕೊಂಡಿರುವೆನು ; ಇದನ್ನು ಪೂಜಿಸುತ್ತ ಕನ್ಯಾವ್ರತದಲ್ಲೆ ಕಾಲವನ್ನು ಕಳೆವೆನು— ಎಂದು ಹೇಳಿದಳು. ಅದೆಲ್ಲವನ್ನೂ ಕೇಳಿ [44] ಪಂಡಿತೆ ಆ ಪಟವನ್ನು ತೆಗೆದುಕೊಂಡು ನೋಡಿ [45] ಅದರ ಸಾಹಾಯ್ಯದಿಂದ ಅವಳ ಪ್ರಾಣಪ್ರಿಯನನ್ನು ಹುಡುಕಿ ತಂದು ಕೊಡುವುದಾಗಿ ಹೇಳಿ ಆ ಪಟದಲ್ಲಿ ಬರೆಯದೆ ವಂಚಿಸಿದ್ದ ಕೆಲವು ರಹಸ್ಯಗಳನ್ನು ತಿಳಿದುಕೊಂಡು ಅಲ್ಲಿಂದ ಹೊರಟು ಮಹಾಪೂತಜಿನಾಲಯಕ್ಕೆ ಹೋಗಿ ಅಲ್ಲಿ ಆ ಪಟವನ್ನು ಹರಹಿ ಇಟ್ಟುಕೊಂಡು ನಿಜಾಭಿಲಷಿತ ಕಾರ್ಯಸಿದ್ಧಿಯನ್ನು ನಿರೀಕ್ಷಿಸುತ್ತಿದ್ದಳು.

[46] ಇತ್ತ ವಜ್ರದಂತನು ದಿಙ್ಮಂಡಲವನ್ನು ಜಯಿಸಿ ರಾಜಧಾನಿಯನ್ನು ಪ್ರವೇಶಿಸಿ ಮೂರ್ಧಾಭಿಷಿಕ್ತನಾದನು. ಅನಂತರದಲ್ಲಿ ತನ್ನ ಮಗಳನ್ನು ಕರೆಯಕಳುಹಿದನು. [47] ಅವಳು ಬಂದು ತಂದೆಗೆ ವಂದಿಸಿ [47ಗ] ಆತನ ಆಶೀರ್ವಾದಗಳನ್ನು ತಳೆದು ಸಮೀಪದಲ್ಲಿ ನಿಂತುಕೊಂಡಳು. ಹಾಗೆ ನಿಂತ ಮಗಳನ್ನು ನೋಡಿ 'ನಾಳಿನಾಡಿದರಲ್ಲಿಯೆ ನೀನು ನಿನ್ನ ಪ್ರಾಣಕಾಂತನೊಡನೆ ಕೂಡುವೆ ' ಯೆಂದು ಹೇಳಿ ಅವಳ ಮತ್ತು ತನ್ನ ಜನ್ಮಾಂತರದಕಥೆಗಳನ್ನು ಹೀಗೆಂದು ಹೇಳಿದನು: —

[50ಗ] ನಮ್ಮ ಯಶೋಧರಗುರುಗಳ ಜ್ಞಾನೋತ್ಪತ್ತಿಯಲ್ಲಿ ಉಂಟಾದ ಸ್ಥಿರಭಕ್ತಿಯಿಂದ ನನಗೆ ಅವಧಿಜ್ಞಾನವು ಉತ್ಪನ್ನವಾಯಿತು. ಅದರ ಪ್ರಭಾವದಿಂದ ನಿನ್ನ ಮತ್ತು ನಿನ್ನ ಕಾಂತನ ಜನ್ಮಾಂತರಗಳನ್ನು ತಿಳಿದುಕೊಂಡೆನು. ಅವುಗಳನ್ನು ನಿನಗೆ ಹೇಳುವೆನು ಕೇಳು. ನಾನು ಈ ಜನ್ಮಕ್ಕೆ ಹಿಂದೆ ಐದನೆಯ ಜನ್ಮದಲ್ಲಿ ಪುಂಡರೀಕಿಣಿಯಲ್ಲಿ ಕೇಶವಮಹೀಶನಿಗೆ ಚಂದ್ರಕೀರ್ತಿಎಂಬ ಮಗನಾಗಿ ಹುಟ್ಟಿದ್ದೆನು. ನನಗೆ ಜಯಕೀರ್ತಿಎಂಬ ಸ್ನೇಹಿತನಿದ್ದನು. ನಾವಿಬ್ಬರೂ ಗೃಹಸ್ಥಧರ್ಮ

ದಲ್ಲಿದ್ದೆವು. ನಾನು ಜೀವಿತಾವಸಾನಕಾಲದಲ್ಲಿ ಪ್ರೀತಿವರ್ಧನೋದ್ಯಾನದಲ್ಲಿ ಚಂದ್ರ
ಸೇನಾಚಾರ್ಯರಬಳಿ ಸನ್ನ್ಯಸನವಿಧಿಯಿಂದ ಆಹಾರವನ್ನು ತೊರೆದು ದೇಹತ್ಯಾಗಮಾಡಿ
ಮಹೇಂದ್ರಕಲ್ಪದಲ್ಲಿ ಸಾಮಾನಿಕದೇವನಾದೆನು. ಜಯಕೀರ್ತಿಯೂ ತನ್ನ ವಿಭವಾನು
ಗುಣವಾಗಿ ಅಲ್ಲಿಯೇ ಹುಟ್ಟಿದನು. ಅಲ್ಲಿ ಕೆಲವು ಕಾಲ ಜೀವಿಸಿ ಬಳಿಕ ನಾವು ಅಲ್ಲಿಂದ
ಪರಿಚ್ಯುತರಾಗಿ ಮಂಗಳಾವತೀವಿಷಯದ ರತ್ನಸಂಚಯಪುರದ ಶ್ರೀಧರಮಹಾರಾಜನ
ಪುತ್ರರಾಗಿ ಜನಿಸಿದೆವು. ನಮ್ಮ ತಂದೆ ನಮಗೆ ಅಧಿರಾಜಯುವರಾಜಪದವಿಗಳನ್ನು
ಕೊಟ್ಟು ದೇವಲೋಕಕ್ಕೆ ಸಂದನು. [51ಗ] ನಮ್ಮ ಮಾತೆಯೂ ಅನೇಕವ್ರತಗಳನ್ನು
ಮಾಡಿ ಜೀವಿತಾಂತ್ಯದಲ್ಲಿ ಶ್ರೀಪ್ರಭವಿಮಾನದಲ್ಲಿ ಲಲಿತಾಂಗದೇವನಾದಳು. [52]
ಕೆಲವು ದಿವಸಕ್ಕೆ ನನ್ನತಮ್ಮನು ಮೃತನಾದನು. ಅದರಿಂದ ನಾನು ವಿಶೇಷವಾಗಿ ಶೋಕಿ
ಸುತ್ತಿದ್ದೆನು. [52ಗ-56] ಆಗ ಲಲಿತಾಂಗದೇವನು ಬಂದು ನನಗೆ ವೈರಾಗ್ಯವನ್ನು
ಉಪದೇಶಿಸಿದನು. [57-5ಗ] ನಾನು ಯುಗಂಧರಮುನೀಂದ್ರರಲ್ಲಿ ತಪಸ್ಸನ್ನು ಕೈ
ಕೊಂಡು ಜೀವಿತಾಂತ್ಯದಲ್ಲಿ ಅಚ್ಯುತೇಂದ್ರಕಲ್ಪದಲ್ಲಿ ಅಚ್ಯುತೇಂದ್ರನಾದೆನು. [58ಗ]
ನನ್ನ ಆ ವಿಭವಕ್ಕೆ ಲಲಿತಾಂಗನೇ ಕಾರಣವೆಂದು ತಿಳಿದು ಅವನನ್ನು ಕರೆದುಕೊಂಡು
ಹೋಗಿ ಪೂಜಿಸಿದೆನು. ಕೆಲವು ಕಾಲಕ್ಕೆ ಅವನು ಶರೀರವನ್ನು ತೊರೆದು ವಾಸವ
ನೆಂಬ ಗಂಧರ್ವರಾಜನಿಗೆ ಮಹೀಧರನೆಂಬ ಮಗನಾದನು. ನಾನು ಅವನನ್ನು ಕಂಡು
[60-64] ಅವನಿಗೆ ವೈರಾಗ್ಯವನ್ನು ಬೋಧಿಸಿದೆನು. [65] ಕೂಡಲೆ ಅವನು
ರಾಜ್ಯವನ್ನು ತನ್ನ ಮಗನಿಗೆ ಕೊಟ್ಟು ಜಗನ್ನಂದನಗುರುಗಳಲ್ಲಿ ಶಿಷ್ಯನಾಗಿ ಸತ್ತು
ಪ್ರಾಣತೇಂದ್ರನಾಗಿ ಜನಿಸಿ ಆಯುರವಸಾನದಲ್ಲಿ ಮೃತನಾಗಿ [65] ಗಂಧಿಳವಿಷಯದ
ಅಯೋಧ್ಯಾಧಿಪನಾದ ಜಯವರ್ಮನ ಸತಿ ಸುಪ್ರಭೆಯ ಗರ್ಭದಲ್ಲಿ ಅಜಿತಂಜಯನೆಂಬ
ಹೆಸರಿನಿಂದ ಹುಟ್ಟಿ ಬೆಳೆದು ಚಕ್ರವರ್ತಿಪದದಲ್ಲಿದ್ದನು. ಆಗ ನಾನು ಅಲ್ಲಿಗೆ ಹೋಗಿ
[66-72] ಪುನಃ ವೈರಾಗ್ಯವನ್ನುಪದೇಶಿಸಿದೆನು. [72ಗ] ನನ್ನ ಮಾತಿನಿಂದ
ಅವನು ವೈರಾಗ್ಯವನ್ನವಲಂಬಿಸಿ ಮಂದರಸ್ಥವಿರರೆಂಬ ಮುಮುಕ್ಷುಗಳ ಬಳಿಯಲ್ಲಿ
ಮೋಕ್ಷಮಾರ್ಗವನ್ನು ಅಂಗೀಕರಿಸಿ ಮದೀಯಜನನೀಚರ ಗುರುಗಳ ಉಪದೇಶದಿಂದ
ನೋಂತು, ಮಹಾಬಳಖೇಚರನಾದ ಭವದಲ್ಲಿ ಸ್ವಯಂಬುದ್ಧೋಪದೇವನ್ನು ಪಡೆದು ಈಶಾ
ನಕಲ್ಪದ ಶ್ರೀಪ್ರಭವಿಮಾನದಲ್ಲಿ ಲಲಿತಾಂಗದೇವನಾಗಿ ಹುಟ್ಟಿದನು. ನೀನು ಅವನಿಗೆ ಪತ್ನಿ
ಯಾಗಿದ್ದೆ [73] ಆಕಾಲದ ಒಂದು ರಹಸ್ಯವನ್ನು ಹೇಳುವೆನು ಕೇಳು. ಆಕಾಲದಲ್ಲಿ
ನಾವು ಅಚ್ಯುತೇಂದ್ರನಿಂದ ಯುಗಂಧರಜಿನೋಪಾಖ್ಯಾನವನ್ನು ಕೇಳಿದೆವು. [73ಗ]
ಅದೆಂತೆಂದರೆ—ಪೂರ್ವವಿದೇಹದ ಸೀತಾನದಿಯ ದಕ್ಷಿಣತೀರದ ಸುಸೀಮಾನಗರವನ್ನು
ಆಳುವ ಅಜಿತಂಜಯನ ಮಂತ್ರಿಗೂ ಆತನ ಸತಿ ಸತ್ಯಭಾಮೆಗೂ ಪ್ರಹಸಿತನೆಂಬ
ಮಗನಾದನು. ಅವನಿಗೆ ವಿಕಸಿತನೆಂಬ ಮಿತ್ರನಿದ್ದನು. [74-75] ಅವರಿಬ್ಬರೂ
ಬಹಳ ಪಂಡಿತರಾಗಿದ್ದರು. [75ಗ] ಅವರು ಒಂದುದಿನ ತಮ್ಮ ವಿದ್ಯಾಗರ್ವ
ದಿಂದ ಮತಿಸಾಗರಮುನಿಗಳಲ್ಲಿ ವಾದಮಾಡಿ ಸೋತು ಅವರಿಗೆ ಶಿಷ್ಯರಾದರು. [76]

ಬಳಿಕ ಮಹಾವ್ರತಗಳನ್ನು ಕೈಕೊಂಡು ಸಮಾಧಿಯನ್ನುಮಾಡಿ ಮಹಾಶಕ್ರಕಲ್ಪದಲ್ಲಿ ಇಂದ್ರಪ್ರತೀಂದ್ರರಾಗಿ ಜನಿಸಿದರು. ಅಲ್ಲಿ ಚಿರಕಾಲಜೀವಿಸಿ [76ಗ] ಪರಿಚ್ಯುತರಾಗಿ ಧಾತಕೀಷಂಡದ ಪೂರ್ವವಿದೇಹದ ಪುಷ್ಕಳಾವತಿಯ ಪುಂಡರೀಕಿಣಿಪುರವನ್ನು ಆಳುತ್ತಿದ್ದ ಧನಂಜಯ.ನರಸಿಯರಪ್ಪ ಜಯಮತಿ ಜಯಸೇನೆಯರಿಗೆ ಮಹಾಬಳಾತಿಬಳರೆಂಬ ಮಕ್ಕಳಾದರು.[77] ಅತಿಬಲನು ಮೃತನಾಗಲು ಮಹಾಬಲನು ಮೃತನಾಗಿ ಪ್ರಾಣತದಲ್ಲಿ [77ಗ] ಪುಷ್ಪಚೂಳನೆಂಬನಾಗಿ ವಿಂಶತಿಸಮುದ್ರೋಪಮಾಯುಷ್ಯಾವಸಾನದಲ್ಲಿ ವತ್ಸಕಾವತಿಯ ಪ್ರಭಾವತೀಪುರದರಸು ಮಹಾಸೇನನಿಗೂ ವಸುಂಧರೆಗೂ ಜಯಸೇನನೆಂಬ ಮಗನಾದನು. ಅಲ್ಲಿ[78]ತನಗೆ ಬಂದ ರಾಜ್ಯವನ್ನು ತೊರೆದು [78ಗ] ಸೀಮಂಧರಜಿನೇಶರಲ್ಲಿ ದಿಗ್ವಾಸನಾದಿಭಾವನೆಗಳನ್ನು ಭಾವಿಸಿ ನಿಜಜೀವಿತಾವಸಾನದಲ್ಲಿ ಸೌಮನಸವೆಂಬಗ್ರೈವೇಯಕದಲ್ಲಿ ಅಹಮಿಂದ್ರನಾಗಿದ್ದು [79] ಬಳಿಕ ಭೂಮಿಗಿಳಿದು ಪೂರ್ವವಿದೇಹದ ಮಂಗಳಾವತೀವಿಷಯದ ರತ್ನಸಂಚಯಪುರವನ್ನು ಆಳುವ ಅಜಿತಂಜಯಭೂಪಾಲನಿಗೂ ಅವನರಸಿ ವಸುಮತಿಗೂ ಮಗನಾಗಿ ಯುಗಂಧರನೆಂಬ ಹೆಸರಿನಿಂದ ಜನಿಸಿದನು. [80-8]ಅವನು ಈಗ ಜೈನದೀಕ್ಷೆಯನ್ನು ಹೊಂದಿ ಆರ್ಹಂತ್ಯಲಕ್ಷ್ಮಿಯನ್ನು ಪಡೆದು ಪ್ರಖ್ಯಾತನಾಗಿದ್ದಾನೆ, [82]ಎಂದು ಅವನ ಚರಿತೆಯನ್ನು ಹೇಳಿ ತಾವು ಪಿಹಿತಾಸ್ರವಭಟ್ಟಾರಕರ ಕೇವಲಜ್ಞಾನೋತ್ಪತ್ತಿಯೊಸಗೆಮಾಡಿ ಬಂದುದನ್ನು ಜ್ಞಾಪಿಸಿ [83] ಮೇರುನಗದಲ್ಲಿ ವನಕೇಳಿಯನ್ನೂ ಸ್ವಯಂಭೂರಮಣಸಮುದ್ರದಲ್ಲಿ ಜಲಕೇಳಿಯನ್ನೂ ಆಡಿದುದು ಜ್ಞಾಪಕವುಂಟೆ? ಎಂದನು. ಅವಳು ಜ್ಞಾಪಕವುಂಟೆಂದು ಹೇಳಿ[83ಗ]ಲಲಿತಾಂಗದೇವನು ಹುಟ್ಟಿರುವ ಸ್ಥಾನವು ತಿಳಿಯದೆ ಕಳವಳಿಸುವೆನು ; ಅದನ್ನು ತಿಳಿಸಬೇಕೆಂದು ಪ್ರಾರ್ಥಿಸಿದಳು.—ಲಲಿತಾಂಗನು ಉತ್ಪಳಖೇಟವನ್ನಾಳುವ ನನ್ನ ಮೈದುನನಾದ ವಜ್ರಬಾಹುಗೂ ನನ್ನ ತಂಗಿ ವಸುಂಧರೆಗೂ ವಜ್ರಜಂಘನೆಂಬ ಹೆಸರಿನಿಂದ ಮಗನಾಗಿ ಹುಟ್ಟಿರುವನು [84] ಅವನು ಕ್ಷಿಪ್ರದಲ್ಲಿಯೇ ಬರುವನು. ಈ ಸಂಗತಿಯನ್ನು ಪಂಡಿತೆಯೂ ಬಂದು ತಿಳಿಸುವಳು [84ಗ] ಎಂದು ಹೇಳಿ ಅವಳನ್ನು ಕನ್ಯಾಂತಃಪುರಕ್ಕೆ ಕಳುಹಿಸಿದನು. ಆ ವೇಳೆಗೆ ಪಂಡಿತೆ ಬಂದು ಶ್ರೀಮತಿಯನ್ನುಕಂಡು [86ಗ]—ನಿನ್ನ ಚಿತ್ರಪಟವನ್ನು ತೆಗೆದುಕೊಂಡುಹೋಗಿ ಮಹಾಪೂತಜಿನಾಲಯದ ಮುಂದೆ ಇಡಲು [87] ಎಲ್ಲರೂ ಆಶ್ಚರ್ಯದಿಂದ ನೋಡುತ್ತಿದ್ದರು. [87ಗ] ಆಗ ಅಲ್ಲಿದ್ದ ವಾಸವದುರ್ದಂತರೆಂಬಿಬ್ಬರಲ್ಲಿ ವಾಸವನು [88] ಅದೆಲ್ಲಾ ತನ್ನವೃತ್ತವೆಂದು ಆಟವಾಡಿದನು [88ಗ] ದುರ್ದಂತನು ಅನೇಕೋಪಚಾರವನ್ನು ಮಾಡಿದನು. ಅದನ್ನೆಲ್ಲಾ ನೋಡಿ ನಾನು ಅಲ್ಲಿಗೆ ಹೋಗಿ [89] ಇದಕ್ಕೆ 'ಇಷ್ಟುಚಿಂತೆಯೇನು ? ಇದು ನಮ್ಮ ಮಗಳ ಪಟ. ಈಕೆಯಲ್ಲಿ ಪೂರ್ವಭವಾನುರಾಗವಿದ್ದರೆ ಒಂದೆರಡು ರಹಸ್ಯಗಳನ್ನು ಹೇಳಿ' ಎಂದೆನು. ಅವರು ಹೇಳಲಾರದೆ ನಾಚಿಕೊಂಡು ಓಡಿಹೋದರು. [90ಗ] ಬಳಿಕ ಅಲ್ಲಿಗೆ ಒಬ್ಬ ರಾಜಕುಮಾರನು ಬಂದನು

IV. ಆಶ್ವಾಸಂ. ಚಾರಣಯುಗಳದಾನೋತ್ಸವವರ್ಣನಂ.

ಆತನು [1] ಜಿನಭವನವನ್ನು ಮೂರುಸಲ ಪ್ರದಕ್ಷಿಣೆಮಾಡಿ [2] ತ್ರಿಕರಣಶುದ್ಧಿಯಿಂದ ಜಿನನನ್ನು ಸ್ತುತಿಸಿ ಅಕ್ಷತೆಯನ್ನು ಕೊಂಡು [3] ಅಲ್ಲಿಂದ ಹೊರಗೆ ಬಂದು ಇದಿರಲ್ಲಿ ನಿಂತಿದ್ದ ಗುಂಪನ್ನು ಕಂಡು [3ಗ) ಏನೆಂದು ನೋಡುವುದಕ್ಕಾಗಿ ಅಲ್ಲಿಗೆ ಬಂದು ಚಿತ್ರಪಟವನ್ನು ಕಂಡನು. [4] ಅದನ್ನು ಹಾಗೆಯೇ ನೋಡುತ್ತಿರುವಾಗ [5]ಅದರಲ್ಲಿ ಲಿಖಿತವಾದ ವಿಷಯಗಳು ಪೂರ್ವಸಂಸ್ಕಾರವನ್ನು ಅವನ ನೆನಪಿಗೆ ತಂದುವು [5ಗ] ಒಡನೆ ಅವನು ಸುರಲೋಕಸುಖಗಳನ್ನು ನೆನೆದು [6] ಅದು ಶ್ರೀಪ್ರಭವೆಂದೂ[7]ಆಸ್ತ್ರೀ ಸ್ವಯಂಪ್ರಭೆಯೆಂದೂ ತಿಳಿದು [8-15] ನಾನಾವಿಧವಾದ ತನ್ನ ಪೂರ್ವದ ಸೌಖ್ಯಗಳನ್ನು ಹಂಬಲಿಸುತ್ತ [16] ಹಾ ! ಸ್ವಯಂಪ್ರಭೇ ! ಎಂದು ಕೂಗುತ್ತ ಮೂರ್ಛೆಹೋದನು. [17] ಕೂಡಲೆ ಅವನ ಪರಿಜನರು ಶೀತಲೋಪಚಾರಮಾಡಿ ಅವನನ್ನು ಎಚ್ಚರಗೊಳಿಸಿದರು. [17ಗ] ಆತನೆ ಲಲಿತಾಂಗದೇವನೆಂದು ತಿಳಿದು ನಾನು ಅವನ ಬಳಿಗೆ ಹೋಗಿ [18] ಈಗ ‘ ನನ್ನ ಪ್ರತಿಜ್ಞೆಯೂ ನೆರವೇರಿತು. ಶ್ರೀಮತೀ ವಜ್ರಜಂಘರ ರಾಗೋತ್ಸವವೂ ಸಫಲವಾಯಿತು ’ ಎಂದು ಹೇಳಿದನು [18ಗ] ಅದು ಹೇಗೆಂದು ಆತನು ಕೇಳಿದನು [19-21ಗ] ನಾನು ನಿನ್ನ ಸಂಗತಿಯನ್ನೆಲ್ಲವನ್ನೂ ಸಮಗ್ರವಾಗಿ ತಿಳಿಸಿದೆನು. [22] ಎಲ್ಲವನ್ನೂ ಕೇಳಿ ಆತನು ನಿನ್ನ ಪಟವನ್ನು ತೆಗೆದುಕೊಂಡು ಈ ಪಟವನ್ನು ನಿನಗೆ ಕೊಡುವಂತೆ ಕಳುಹಿಸಿರುವನು, ಎಂದು ಸಾಭಿಜ್ಞಾನಪಟವನ್ನು ಕೊಟ್ಟಳು. ಶ್ರೀಮತಿ ಅದನ್ನು ತೆಗೆದುಕೊಂಡು ನೋಡಿ ನೋಡಿ [23] ಆನಂದಪರವಶಳಾಗಿದ್ದಳು.

ಆವೇಳೆಗೆ [23] ಶ್ರೀಮತೀವಜ್ರಜಂಘರ ಜನ್ಮಾಂತರಸ್ನೇಹವೂ ಚಿತ್ರಪಟವ್ಯತಿಹಾರವೂ ವಜ್ರಬಾಹುಮಹಾರಾಜನಿಗೆ ತಿಳಿಯಿತು. ಆತನು ತನ್ನ ಪುತ್ರನಿಗೆ ಆ ಕನ್ನಿಕೆಯನ್ನೇ ವಿವಾಹಮಾಡಬೇಕೆಂದು ನಿಶ್ಚಯಿಸಿಕೊಂಡು ಕನ್ಯಾರ್ಥಿಯಾಗಿ ಪುಂಡರೀಕಿಣಿಗೆ ಪ್ರಯಾಣಮಾಡಿದನು. [24]ಆ ಸಮಾಚಾರವನ್ನು ಕೇಳಿ ವಜ್ರದಂತನು ಇದಿರುಗೊಂಡುಹೋಗಿ [24ಗ-25ಗ] ಸನ್ಮಾನದಿಂದ ಬರಗೊಂಡು ಬಂದು ಸತ್ಕರಿಸಿ ಬಳಿಕ ಬಂದಕಾರ್ಯವನ್ನು ಕೇಳಿದನು. [26] ‘ ನಮ್ಮ ವಜ್ರಜಂಘನಿಗೆ ನಿಮ್ಮ ಪುತ್ರಿಯನ್ನು ಕೊಟ್ಟು ವಿವಾಹಮಾಡಿಕೊಡಬೇಕೆಂದು ಪ್ರಾರ್ಥಿಸಲು ಬಂದೆನು ’ ಎಂದು ಆತನು ಹೇಳಿದನು. ಆ ಅರ್ಥಕ್ಕೆ ವಜ್ರದಂತನೂ ಒಡಂಬಟ್ಟನು. ಕೂಡಲೆ ಜೋಯಿಸರನ್ನು ಕರೆಯಿಸಿ ಲಗ್ನವನ್ನು ನಿರ್ಣಯಿಸಹೇಳಿದರು. ಆದೇ ಶುಭಮುಹೂರ್ತವೆಂದು ತಿಳಿಯಬಂದಿತು. ಒಡನೆ ವಿವಾಹಮಂಟಪವು [30ಗ-34] ಅಲಂಕೃತವಾಯಿತು [34-35] ದಾನಗಳೂ ಅನೇಕವಾಗಿ ನಡೆದುವು. ಬಳಿಕ [35ಗ-41]ವಜ್ರಜಂಘನಿಗೆ ಮಂಗಳಸ್ನಾನವನ್ನು ಮಾಡಿಸಿ ಅಲಂಕರಿಸಿದರು. ಶ್ರೀಮತಿಗೂ [41ಗ—47] ಮಂಗಳಸ್ನಾನವೂ ಮಂಗಳಪ್ರಸಾಧನವೂ ಸೌಭಾಗ್ಯವನ್ನು ಹೆಚ್ಚಿಸಿದುವು. ಆ ವಧೂವರರಿಬ್ಬರನ್ನೂ ಹಸೆ

ಯಲ್ಲಿ ಕುಳ್ಳಿರಿಸಿ [48] ವಜ್ರದಂತನು ಧಾರೆಯೆರೆದು ವಿವಾಹಪ್ರಸ್ತುತವನ್ನು ಬಹಳ ವಿಜೃಂಭಣೆಯಿಂದ ನಡೆಯಿಸಿದನು. ವಧೂವರರು ಸಂತೋಷವಾಗಿ ಅಲ್ಲಿಯೇ ಕೆಲವುಕಾಲ ವಿರುತ್ತಿದ್ದರು

[53] ಬಳಿಕ ವಜ್ರಜಂಘನ ತಂಗಿಯಾದ ಸುಂದರಿಗೂ ಶ್ರೀಮತಿಯ ಸಹೋದರನಾದ ಅಮಿತತೇಜನಿಗೂ ಮದುವೆಯಾಯಿತು.

ಅನಂತರದಲ್ಲಿ ವಜ್ರದಂತನು ಮಗಳನ್ನು ಅಳಿಯನೊಡನೆ ಕಳುಹಿಸಿಕೊಡಲೆಂದು ಬಗೆದು (54-54) ಬೇಕಾದಹಾಗೆ ಬಳುವಳಿಗಳನ್ನು ಕೊಟ್ಟು (55) ಅಳಿಯನಿಗೆ ಹಿತೋಕ್ತಿಯನ್ನೂ (56) ಮಗಳಿಗೆ ಬುದ್ಧಿವಾದವನ್ನೂ ಹೇಳಿ ಕಳುಹಿಸಿಕೊಟ್ಟನು.

[57] ಇತ್ತ ವಜ್ರಬಾಹುರಾಜನು ಮಗನನ್ನೂ ಸೊಸೆಯನ್ನೂ ಕರೆದುಕೊಂಡು [58] ಉತ್ಪಲಖೇಟವೆಂಬ ತನ್ನ ರಾಜಧಾನಿಗೆ ಬಂದು [59] ಪುರಪ್ರವೇಶವನ್ನು ಮಾಡಿದನು. ಶ್ರೀಮತೀ ವಜ್ರಜಂಘರು ತಮ್ಮ ರಾಜಮಂದಿರದಲ್ಲಿ ಸುಖವಾಗಿರುತ್ತಿದ್ದರು. ಕೆಲವು ಕಾಲಕ್ಕೆ ಶ್ರೀಮತಿ ಗರ್ಭವಾಗಿ 49 ಅವಳಿಮಕ್ಕಳನ್ನು ಪ್ರಸವಿಸಿದಳು.

ಹೀಗೆ ಇರುತ್ತಿರಲು [63] ಒಂದಾನೊಂದುದಿವಸ ವಜ್ರಬಾಹು ಅರಮನೆಯ ಉಪ್ಪರಿಗೆಯಲ್ಲಿ ನಿಂತು ಗಗನವನ್ನು ನೋಡುತ್ತ ಅಲ್ಲಿ ಮನೋಹರಾಕೃತಿಯುಳ್ಳ ಒಂದು ಮೇಘವನ್ನು ಕಂಡನು; ಅದರಂತೆ ಒಂದು ಜಿನಮಂದಿರವನ್ನು ಕಟ್ಟಿಸಬೇಕೆಂಬ ಇಚ್ಛೆಯುಂಟಾಯಿತು. ಆದುದರಿಂದ ಅದರಂತೆ ಚಿತ್ರವನ್ನು ಬರೆದಿಡಬೇಕೆಂದು [63] ಚಿತ್ರಫಲಕೆಯನ್ನೂ ಬಣ್ಣಿಗೆಯನ್ನೂ ತರಹೇಳಿ ಪರಿಜನರಿಗೆ ನಿಯಮಿಸಿದನು. ಅವರು ಅದನ್ನು ತರುವಷ್ಟರಲ್ಲೆ ಅದು ಕರಗಿ ಹೋಯಿತು. ಅದೇ [64-67] ಅವನಿಗೆ ವೈರಾಗ್ಯನಿಮಿತ್ತವಾಗಿ [67ಗ] ಅವನು ವಜ್ರಜಂಘನಿಗೆ ರಾಜ್ಯವನ್ನು ಕೊಟ್ಟು [67ಗ] ನಿಜಪತ್ನಿಯೊಡನೆಯೂ ಪುತ್ರರೊಡನೆಯೂ [68] ಯಮಧರಮುನಿಗಳ ಪಾದಪದ್ಮದಲ್ಲಿ ಜಾತರೂಪಧರನಾಗಿ ಮೋಕ್ಷಕ್ಕೆ ನಡೆದನು

ಅತ್ತ [68ಗ] ವಜ್ರದಂತಚಕ್ರವರ್ತಿ ಒಂದುದಿವಸ ಸಿಂಹಾಸನಾರೂಢನಾಗಿದ್ದಾಗ [69] ಉದ್ಯಾನಪಾಲಕನು ಒಂದು ಮನೋಹರವಾದ ಹೊಂದಾವರೆಯನ್ನು ಕಾಣಿಕೆಯಾಗಿ ತಂದು ಒಪ್ಪಿಸಿದನು. ಅದನ್ನು ಚಕ್ರವರ್ತಿ ಕೈಯಲ್ಲಿ ಹಿಡಿದುಕೊಂಡು [70] ಅದರ ಪರಿಮಳವನ್ನು ಅಭಿನಂದಿಸಿ ಲೀಲೆಯಿಂದ ತಿರುಗಿಸುತ್ತಿದ್ದನು. ಆಗ [71] ಅದರೊಳಗಿನಿಂದ ಒಂದು ಮೃತವಾದ ತುಂಬಿ ಹೊರಗೆ ಬಿದ್ದಿತು. ಅದನ್ನು ನೋಡಿ ಆತನು ವಿಸ್ಮಯಪಟ್ಟು [72-74] ಈ ಭ್ರಮರವು ಘ್ರಾಣೇಂದ್ರಿಯವೊಂದಕ್ಕೆ ಸೋತು ಈ ದುರವಸ್ಥೆಗೆ ಬಂದಿತು. ಅನೇಕೇಂದ್ರಿಯಗಳಿಗೆ ವಶರಾದ ನಮ್ಮಂಥವರ ಪಾಡೇನು ಎಂದು ಬಗೆದು [74-78] ವೈರಾಗ್ಯವನ್ನು ಅವಲಂಬಿ

ಸಿ [78ಗ] ಸಕಲಸಾಮ್ರಾಜ್ಯವನ್ನೂ ತನ್ನ ಅಗ್ರಪುತ್ರನಿಗೆ ಕೊಡಲುದ್ಯುಕ್ತನಾದನು. [79–80] ಅಗ್ರಪುತ್ರನು ರಾಜ್ಯವನ್ನು ಒಲ್ಲೆನೆಂದನು ; ಅವನ ತಮ್ಮಂದಿರೂ ಅಂಗೀಕರಿಸದೆ ಹೋದರು. [81ಗ] ಬಳಿಕ ವಜ್ರದಂತನು ಅಮಿತತೇಜನ ಶಿಶುವಾದ ಪುಂಡರೀಕನೆಂಬ ಬಾಲಕನಿಗೆ ಪಟ್ಟವನ್ನು ಕಟ್ಟಿ ಯಶೋಧರಮುನೀಂದ್ರರ ಪಾದಪದ್ಮೋಪಾಂತದಲ್ಲಿ ಮೋಕ್ಷಲಕ್ಷ್ಮಿಯನ್ನು ವರಿಸಿದನು. ಲಕ್ಷ್ಮೀಮತಿಯೂ ಅನುಂದರೀಯೂ ಪುಂಡರೀಕನನ್ನು ಪರಿಪಾಲಿಸುತ್ತಿದ್ದರು.

ಹೀಗೆ ರಾಜ್ಯವು [82ಗ] ಬಾಲನಾಯಕವಾಗಲು ಮಂಡಲಿಕರು ಕಪ್ಪವನ್ನೂ ಕೊಡದೆಯೂ ಆಟವಿಕರು ಅಡಗಿರದೆಯೂ ಪಾರ್ಷ್ಣಿಗ್ರಾಹಕರು ವಿರೋಧಿಗಳಾಗಿಯೂ ಪ್ರಬಲಿಸುತ್ತಿದ್ದರು. ಆಗ ಲಕ್ಷ್ಮೀಮತೀಮಹಾದೇವಿ ಮಂತ್ರಿಗಳೊಡನೆ ಆಲೋಚಿಸಿ ತನ್ನ ಅಳಿಯನಾದ ವಜ್ರಜಂಘನನ್ನು ಕರೆಯಿಕಳುಹಬೇಕೆಂದು ನಿಶ್ಚಯಿಸಿ [83] ಲೇಖನವನ್ನು ಬರೆಯಿಸಿ [84ಗ] ಉಪಾಯನಗಳೊಡನೆ ಕೊಟ್ಟು ಚಿಂತಾಗತಿ ಮನೋಗತಿಯೆಂಬ ವಿದ್ಯಾಧರದೂತರನ್ನು ಕಳುಹಿಸಿದಳು. ಅವರಿಬ್ಬರೂ ವಿಮಾನಾರೂಢರಾಗಿ ಹೊರಟು [86ಗ] ಉತ್ಪಲಖೇಟವನ್ನು ಸೇರಿ ವಜ್ರಜಂಘನನ್ನು ಕಂಡು ತಾವು ತಂದ ಲೇಖನವನ್ನೂ ಉಪಾಯನಗಳನ್ನೂ ಮುಂದೆ ಇಟ್ಟರು. ಆತನು ಆ ಲೇಖನವನ್ನು ವಾಚಿಸಿ ನೋಡಿ ವಿಸ್ಮಯಾಕ್ರಾಂತನಾಗಿ [87-88ಗ] ಚಕ್ರಿಯನ್ನೂ ತನ್ನಂದನರನ್ನೂ ಶ್ಲಾಘಿಸಿ ನಿಜಪತ್ನಿಯ ಬಳಿಗೆ ಬಂದು ಆ ಸಂಗತಿಯನ್ನು ಹೇಳಿದನು. ಅದನ್ನು ಕೇಳಿ ಅವಳು ಬಹಳವಾಗಿ ಶೋಕಿಸಿದಳು. ಉಪಚಾರೋಕ್ತಿಗಳಿಂದ ಅವಳ ದುಃಖವನ್ನು ಶಮನಮಾಡಿ [89ಗ] ಅಲ್ಲಿಂದ ಬಂದು ಮಂತ್ರಿಗಳೊಡನೆ ಆಲೋಚಿಸಿ [90] ಪುಂಡರೀಕಿಣಿಗೆ ಪ್ರಯಾಣಮಾಡಬೇಕೆಂದು ನಿಶ್ಚಯಿಸಿದನು. ಒಡನೆ ಸೈನ್ಯವು ಸಿದ್ಧವಾಯಿತು. ಬಳಿಕ [91–92] ಸೈನ್ಯದೊಡನೆಯೂ ನಿಜಾಂತಃಪುರಸ್ತ್ರೀಯರೊಡನೆಯೂ ಹೊರಟು ಮಾರ್ಗದಲ್ಲಿ ಹೋಗುತ್ತ ಹೋಗುತ್ತ [93–95] ಮನೋಹರವಾದ ಒಂದು ಸರಸ್ಸನ್ನು ಕಂಡು ಅಲ್ಲಿ ಬೀಡು ಬಿಟ್ಟನು. [95ಗ] ಆಗ ಅಲ್ಲಿ ಧರ್ಮವರಸಾಗರಸೇನರೆಂಬ ಗಗನಚಾರಣರು ಕಾಂತಾರಚರ್ಯಾಮಾರ್ಗದಲ್ಲಿ ಅವರ ಶಿಬಿರಕ್ಕೆ ಬಂದರು. ಅವರನ್ನು ಶ್ರೀಮತಿಯೂ ವಜ್ರಜಂಘನೂ ಇದಿರ್ಗೊಂಡು ನಿಲಿಸಿ ದಾನವನ್ನು ಕೊಟ್ಟರು. [98-99] ಆದಾನಪ್ರಭಾವದಿಂದ ಪಂಚಾಶ್ಚರ್ಯವುಂಟಾಯಿತು.

V ಆಶ್ವಾಸಂ. ಸುವಿಧಿಮಹಿಮೋತ್ಪತ್ತಿವರ್ಣನಂ.

ಅನಂತರ [1] ಚಕ್ರಿ ತನ್ನಪತ್ನಿಯೊಡನೆ ಪುನಃ ಮುನೀಂತ್ರಿಗಳ ಸಮೀಪಕ್ಕೆ ಹೋಗಿ ತಮಗೆ ಅವರಲ್ಲಿ ಪ್ರೀತಿಯುಂಟಾಗಲು ಕಾರಣವೇನೆಂದು ಕೇಳಿದನು. [2] ಆಗ ವೃದ್ಧ ಕಂಚುಕಿ—' ಇವರು ನಿಮ್ಮ ಮಕ್ಕಳೆಂದು ' ಹೇಳಿದನು [2ಗ] ಅವನನ್ನು ಸುಮ್ಮನಿರಹೇ? ಆ ಮುನಿಸಿನ ಸಮೀಪದಲ್ಲಿ ಉಪಶಮಭಾವವನ್ನು ತಳೆದು ನೋಡುತ್ತಿದ್ದ

ದರ್ೂಲವರಾಹಗೋಲಾಂಗೂಲನಕುಲಂಗಳನ್ನು ನೋಡುತ್ತ ರಾಜನು ತನ್ನ ಮಂತ್ರಿ ಸೇನಾನಾಯಕ ಪುರೋಹಿತ ಶ್ರೇಷ್ಠಿಗಳ ಭವಾಳಿಯನ್ನು ಬೆಸಗೊಂಡನು. [3] ಅವರು ಂತೆಂದರು: —

[3] ಈ ಮತಿವರನು ಈ ಭವಕ್ಕೆ ಐದನೆಯ ಭವದಲ್ಲಿ ಜಂಬೂದ್ವೀಪದ ಪೂರ್ವ ದೇಹದ ವತ್ಸಕಾವತಿಯ ಪ್ರತಿಬದ್ಧಪ್ರಭಾಕರೀಪುರದಲ್ಲಿ ಮತಿವೃದ್ಧನೆಂಬ ಅರಸಾಗಿ 4] ಮಹಾಲೋಭದಿಂದ ಸತ್ತು [5] ಹುಲಿಯಾಗಿ ಜನಿಸಿ ಒಂದು ಗಿರಿಯಲ್ಲಿದ್ದನು. ್ರೀತಿವರ್ಧನನೆಂಬ ಆ ಮಂಡಲಾಧಿಪನು ದಿಗ್ವಿಜಯಮಾಡಿಕೊಂಡು ಸೇನಾಸಮೇತನಾಗಿ ಂದು ಆಪರ್ವತದ ಬಳಿಯಲ್ಲಿ ಬೀಡುಬಿಟ್ಟನು. [6] ಆಗ ಉಂಟಾದ ಶುಭನಿಮಿತ್ತ ಳನ್ನು ನೋಡಿ ಆನೃಪನ ಪುರೋಹಿತನು ಋಷಿಗಳು ಚರ್ಯೆಗೆ ಬರುವರೆಂದೂ ಸುವರ್ಣ ್ರಾಪ್ತಿಯಾಗುವುದೆಂದೂ ನುಡಿದನು. [7–10] ಆ ಋಷಿಗಳು ನಗರಪ್ರವೇಶಮಾಡ ಂತೆ ಮಾರ್ಗದಲ್ಲಿ ನೀರು ಚೆಲ್ಲಿ ಸಮೃದ್ಧಿಯಾಗಿ ಪುಷ್ಪಗಳನ್ನು ಎರಚಿ ರಾಜನು ಋಷಿ ಳ ಆಗಮನವನ್ನು ನಿರೀಕ್ಷಿಸುತ್ತಿದ್ದನು. [10] ಬಳಿಕ ಒಂದು ತಿಂಗಳಿಗೆ ಪಿಹಿತಾಸ್ರವ ಂಬ ಮುನಿ ಬಂದು ನೋಡಿ ಆ ಪುಷ್ಪಗಳನ್ನು ತುಳಿದರೆ ಜೀವಹಿಂಸೆಯಾಗುವುದೆಂದು ಗರಮಾರ್ಗವನ್ನು ತೊರೆದು ರಾಜನ ಶಿಬಿರಕ್ಕೆ ಬಂದರು. [11] ರಾಜನು ಇದಿರುಗೊಂ ು ಹೋಗಿ ಅವರನ್ನು ನಿಲಿಸಿ ದಾನಮಾಡಿದನು. ಕೂಡಲೆ ಪಂಚಾಶ್ಚರ್ಯವಾಯಿತು. [11ಗ] ಆಗ ಆಪರ್ವತದಲ್ಲಿದ್ದ ಶಾರ್ದೂಲವು ಜಾತಿಸ್ಮರನಾಗಿ ಅಲ್ಲಿಗೆ ಬಂದು ಉಪ ಾಂತನಾಗಿದ್ದಿತು. ಮುನಿಪನು ಆಗಿರಿಯ ತಟದಲ್ಲಿದ್ದ ಸುವರ್ಣಪೂರ್ಣಕಟಾಹಗಳನ್ನು ತೋರಿಸಿದನು. [12] ಆ ಹುಲಿ ಹದಿನೆಂಟುದಿವಸ ವ್ರತಮಾಡಿ [13] ಸಮಾಧಿ ಯನ್ನು ಹೊಂದಿ ಈಶಾನಕಲ್ಪದಲ್ಲಿ ದಿವಾಕರವಿಮಾನದಲ್ಲಿ ದಿವಾಕರಪ್ರಭಾವನೆಂಬ ದೇವ ನಾಯಿತು. ಆ ಪ್ರೀತಿವರ್ಧನನು ಆಮೃತಪದವಿಯನ್ನು ಪಡೆದನು . ಆತನ ಸೇನಾನಾಯಕ ನು ಪ್ರಭಾಕರನೆಂದೂ, ಮಂತ್ರಿ ಕನಕಪ್ರಭನೆಂದೂ, ಪುರೋಹಿತನು ಪ್ರಭಂಜನನೆಂ ದೂ, ಬೇರೆ ಬೇರೆ ವಿಮಾನಗಳಲ್ಲಿ ಜನಿಸಿ ನಿನ್ನ ಲಲಿತಾಂಗಜನ್ಮದಲ್ಲಿ ನಿನಗೆ ಪರಿವಾರ ದೇವರಾದರು. ಈ ಜನ್ಮದಲ್ಲಿ ಆ ಶಾರ್ದೂಲನೇ ಮತಿವರಮಂತ್ರಿಯಾಗಿಯೂ, ಆಪ್ರ ಭಾಕರನೇ ಸೇನಾನಾಯಕನಕಂಪನಾಗಿಯೂ, ಆಕನಕಪ್ರಭನೇ ಪುರೋಹಿತನಾನಂದ ನಾಗಿಯೂ, ಆ ಪ್ರಭಂಜನನೇ ನಿಜಶ್ರೇಷ್ಠಿಧನಮಿತ್ರನಾಗಿಯೂ, ಆ ಸ್ವಯಂಪ್ರಭಾದೇವಿ ಯೇ ಶ್ರೀಮತಿಯಾಗಿಯೂ ಜನಿಸಿ ನಿನ್ನನ್ನು ಸೇರಿರುವರು. ಆದುದರಿಂದ ಇವರಲ್ಲಿ ನಿನಗೆ ಮೈತ್ರಿ ಹೆಚ್ಚಾಯಿತು. ಮುಂದೆ ಈ ಭವಕ್ಕೆ ಎಂಟನೆಯ ಭವದಲ್ಲಿ ನೀನು ಭರತದಲ್ಲಿ ಆದಿತೀರ್ಥನಾಗುವ ಕಾಲದಲ್ಲಿ, ಶ್ರೀಮತಿ ಶ್ರೇಯಾಂಸನಾಗಿಯೂ ಉಳಿದವರು ನಿನ್ನ ಮಕ್ಕಳಾಗಿಯೂ ಹುಟ್ಟುವರು. [14] ಬಳಿಕ ಅಲ್ಲಿದ್ದ ಹುಲಿ, ಹಂದಿ, ಕೋಡಗ, ಮುಂಗುಸಿ—ಇವುಗಳ ಜನ್ಮವನ್ನು ಹೀಗೆಂದು ತಿಳಿಸಿದರು. [14ಗ] ಈ ಹುಲಿ ಪ್ರಾಗ್ಜನ್ಮದಲ್ಲಿ ಈದೇಶದ ಹಸ್ತಿನಾಪುರದಲ್ಲಿ ಉಗ್ರಸೇನನೆಂಬ ಹರದನಾಗಿ ಅಪ್ರತ್ಯಾಖ್ಯಾನಕ್ರೋಧದಿಂದ ತಿರ್ಯಗಾಯುಷ್ಯವನ್ನು ಪಡೆದು [15]

ಅರಸನ ಕೋಷ್ಠಾಗಾರದಲ್ಲಿ ಚೌರ್ಯಮಾಡಿದನು. ರಾಜನು ಇವನನ್ನು ಹಿಡಿದು ತರಹೇಳಿ ದೂತಂಗೆ ಆಜ್ಞಾಪಿಸಲು, ಇವನು ಚಪೇಟ ಚರಣಾಘಾತದಿಂದ ಸತ್ತು ಇಲ್ಲಿ ಹುಲಿಯಾಗಿ ಹುಟ್ಟಿದನು. ಈ ವರಾಹನು ಈ ರಾಜ್ಯದ ವಿಜಯಪುರದಲ್ಲಿ ಹರಿಕಾಂತನೆಂಬ ರಾಜಪುತ್ರನಾಗಿ ಅಪ್ರತ್ಯಾಖ್ಯಾನಮಾನದಿಂದ ತಂದೆಗೆ ಅವಿನೀತನಾಗಿ [17] ಶಿಲೆಯಲ್ಲಿ ತಲೆಯನ್ನು ತಾಟಿಸಿ ಒಡೆದುಕೊಂಡು ಸತ್ತು ವರಾಹನಾದನು. [17ಗ] ಈ ವಾನರನು ಪೂರ್ವಜನ್ಮದಲ್ಲಿ ಧ್ಯಾನಪುರದಲ್ಲಿ ನಾಗದತ್ತನೆಂಬ ವಣಿಜನಾಗಿ ಅಪ್ರತ್ಯಾಖ್ಯಾನಮಾಯೆಯಿಂದ[18]ತನ್ನ ಅನುಜೆಯ ಧನವನ್ನು ಅಪಹರಿಸಿ ಈ ಜನ್ಮದಲ್ಲಿ ಕಪಿಯಾದನು. [18ಗ] ಈ ನಕುಲನು ಅಪ್ರತ್ಯಾಖ್ಯಾನಲೋಭದಿಂದ ಕಲ್ಲುರಿಗನಾಗಿ, ರಾಜನಿಗಾಗಿ ಇಟ್ಟಿಗೆಗಳನ್ನು ಕೊಂಡುಕೊಳ್ಳುತ್ತ ಒಂದು ಇಟ್ಟಿಗೆಯನ್ನು ಒರಸಿ ನೋಡಿ ಅದು ಸ್ವರ್ಣಮಯವಾಗಿರಲು ಪ್ರತಿದಿನವೂ ತನ್ನ ಸ್ವಂತಕ್ಕೆ ಇಟ್ಟಿಗೆಗಳನ್ನು ಕೊಂಡುಕೊಳ್ಳುತ್ತ ಇದ್ದನು. ಒಂದು ದಿವಸ ತಾನು ಪರಸ್ಥಳಕ್ಕೆ ಹೋಗಬೇಕಾಗಿದ್ದುದರಿಂದ ತನ್ನ ಮಗನಿಗೆ ಇಟ್ಟಿಗೆಯನ್ನು ಕೊಂಡುಕೊಳ್ಳುವಂತೆ ಹೇಳಿ ಹೊರಟುಹೋದನು. ಪುನಃ ಬಂದು ನೋಡುವಾಗ ಮಗನು ಕೊಂಡುಕೊಂಡಿರಲಿಲ್ಲ. ಅದರಿಂದ ಕುಪಿತನಾಗಿ ಮಗನನ್ನು ಕೊಡಲಿಯಿಂದ ಹೊಡೆದು ಕೊಂದು ಅರಮನೆಯವರು ತನ್ನನ್ನು ಶಿಕ್ಷೆಮಾಡುವರೆಂದು ಭಯಪಟ್ಟು ತನ್ನ ಕಾಲುಗಳನ್ನೂ ಒಡೆದುಕೊಂಡನು. ಆದರೂ ರಾಜನು ಅವನನ್ನು ದಂಡಿಸಿದನು. ಅಲ್ಲಿ ಸತ್ತು ಇದೋ ಇಲ್ಲಿ ಮುಂಗುಸಿಯಾಗಿದ್ದಾನೆ. ಇವರೆಲ್ಲರೂ ಮುಂದೆ ನಿನ್ನ ಉದರದಲ್ಲಿ ಜನಿಸುವರು.

ಆ ತರುವಾಯ [20ಗ] ವಜ್ರಜಂಘನೂ ಶ್ರೀಮತಿಯೂ ಪಯಣಹೊರಟು ಪುಂಡರೀಕಿಣಿಗೆ ಬಂದು ಸೇರಿ, ಅಲ್ಲಿ ಬಂಧುಜನಗಳ ದುಃಖವನ್ನು ಸಮಾಧಾನಮಾಡಿ [21] ಸೋದರದಳಿಯನ ರಾಜ್ಯವನ್ನು ನಿಷ್ಕಂಟಕಮಾಡಿ ಮಂತ್ರಿಮಂಡಳಕ್ಕೆ ವಹಿಸಿ ನಿಜರಾಜಧಾನಿಗೆ ತೆರಳಿ ಬಂದು [22] ಸುಖದಿಂದಿರುತ್ತಿದ್ದರು. [22ಗ] ಹೀಗೆ ಅನೇಕ ಸಂವತ್ಸರಗಳು ಕಳೆದು ಹೋದವು. ಬಳಿಕ ಒಂದು ದಿವಸ ರಾತ್ರಿ ಶ್ರೀಮತೀವಜ್ರಜಂಘರು ಶಯ್ಯಾಗೃಹದಲ್ಲಿ ಮಲಗಿರುವಾಗ ಅಲ್ಲಿ ಧೂಪದ ಧೂಮವು ತುಂಬಿಕೊಂಡಿತು ಉಸಿರಾಡುವುದಕ್ಕೆ ಮಾರ್ಗವಿಲ್ಲದೆ ಅವರಿಬ್ಬರೂ ಮಲಗಿದ್ದಂತೆಯೇ ಮೃತರಾದರು. ಅದನ್ನು ಕೇಳಿ [27ಗ] ರಾಜ್ಯವೇ ಗೋಳಾಡಿತು. ಮತಿವರಾದಿಗಳು ಪುರಜನದ ದುಃಖವನ್ನು ಸಮಾಧಾನಮಾಡಿ ಆದಂಪತಿಗಳಿಗೆ ಉತ್ತರಕ್ರಿಯೆಗಳನ್ನು ನೆರವೇರಿಸಿ ಶ್ರೀಮತಿಯ ಪುತ್ರನಾದ ವಜ್ರಬಾಹುವಿಗೆ ರಾಜ್ಯಭಾರವನ್ನು ವಹಿಸಿ ತಾವು ತಪಸ್ಸಿಗೆ ಹೊರಟುಹೋಗಿ ಕೆಲವುಕಾಲ ತಪಸ್ಸುಮಾಡಿ ಜೀವಿತಾಂತ್ಯದಲ್ಲಿ ಪರಿಚ್ಯುತರಾದರು.

(4) ಭೋಗಭೂಮಿಜಜನ್ಮಕಥೆ.

[28-30] ಭೋಗಭೂಮಿವರ್ಣನೆ [31-40] ದಶಾಂಗಕಲ್ಪಕುಜವರ್ಣನೆ [41-42] ಭೋಗಭೂಮಿಜರ ವರ್ಣನೆ.—ಇತ್ತ ವಜ್ರಜಂಘ ಶ್ರೀಮತಿಗಳು ಪಾತ್ರ

ನದ ಫಲದಿಂದ ಭೋಗಭೂಮಿಯಲ್ಲಿ ಅವತರಿಸಿದರು. ಆಸತಿಪತಿಗಳು ಅಲ್ಲಿ ಬಂದು
ವಸ [45] ಬಂದು ಮಾವಿನಮರದ ಸೌಂದರ್ಯವನ್ನು ನೋಡುತ್ತಿದ್ದರು. [45ಗ]
ಕಾಲದಲ್ಲಿ ಅಂತರಿಕ್ಷದಲ್ಲಿ ಸೂರ್ಯಪ್ರಭನೆಂಬ ದೇವನ ವಿಮಾನವು ಹೋಗುತ್ತಿದ್ದಿತು.
ದನ್ನು ಕಂಡು ಅವರಿಗೆ ಪೂರ್ವಜನ್ಮಸ್ಮರಣೆಯುಂಟಾಯಿತು. ಕೂಡಲೆ ಚಾರಣಯು
ಳವು ಇಳಿದುಬಂದಿತು. [46ಗ] ಆಯುಗಳನ್ನು ಉಪಚರಿಸಿ [47] ತಮಗೆ ಅವು
ಗಳಲ್ಲಿ ಪ್ರೀತಿಯುಂಟಾಗಲು ಕಾರಣವೇನೆಂದು ಅವರು ಪ್ರಶ್ನೆಮಾಡಿದರು. [47ಗ]
ಪಕ್ಕೆ ಅಗ್ರಮುನಿ ನಕ್ಕು 'ನೀನು ಮಹಾಬಲನಾಗಿದ್ದಂದು ನಾನು ನಿನಗೆ ಸಚಿವ
ನಾಗಿದ್ದೆನು. ನಾನು ಸ್ವಯಂಬುದ್ಧನು. ನಿನ್ನ ವಿಯೋಗದಿಂದ ತಪಸ್ಸುಮಾಡಿ ಮಣಿ
ಕೂಡಾಮರನಾಗಿ ಜನಿಸಿ ಬಳಿಕ ಈ ಜನ್ಮದಲ್ಲಿ ಪ್ರೀತಿಂಕರನಾದೆನು' ಎಂದು ತಿಳಿಸಿ
[25-64] ಅವರಿಗೆ ಸಮ್ಯಗ್ದರ್ಶನಸ್ವರೂಪವನ್ನು ಬೋಧಿಸಿ ಗಗನಮಾರ್ಗಕ್ಕೆ
ಹೊರಟುಹೋದನು. [65-69ಗ] ಅವರು ಆ ಗಗನಚಾರಣರ ಗುಣಗಳನ್ನು ಹೊಗ
' ತಾವು ಸಮ್ಯಗ್ದರ್ಶನದಲ್ಲಿ ನಿಂತು ಪಲ್ಯೋಪಮತ್ರಯಾಯುಷ್ಯಾನಾವಸಾನದಲ್ಲಿ ಕ್ಷು
ತವಿಜೃಂಭಣವ್ಯಾಜದಿಂದ ಮೃತರಾದರು.

(5). ಶ್ರೀಧರ ಜನ್ಮಕಥೆ.

[70ಗ]. ಬಳಿಕ ವಜ್ರಜಂಘನು ಈ ಶಾನಕಲ್ಪದಲ್ಲಿ ಶ್ರೀಪ್ರಭವಿಮಾನದಲ್ಲಿ ಶ್ರೀಧ
ರನೆಂಬ ದೇವನಾಗಿ ಹುಟ್ಟಿದನು. ಶ್ರೀಮತಿ ಸಮ್ಯಕ್ತ್ವಮಹಿಮೆಯಿಂದ ಸ್ತ್ರೀರೂಪ
ವನ್ನು ಬಿಟ್ಟು ಸ್ವಯಂಪ್ರಭವಿಮಾನದಲ್ಲಿ ಸ್ವಯಂಪ್ರಭನೆಂಬ ಹೆಸರಿನಿಂದ ಜನಿಸಿ ಶ್ರೀಧರ
ನಿಗೆ ಸಾಮಾನಿಕದೇವನಾದಳು. ಮಂತ್ರಿಯೇ ಮೊದಲಾದವರೂ ಬೇರೆ ಬೇರೆ ವಿಮಾನಗ
ಳಲ್ಲಿ ಜನ್ಮವೆತ್ತಿದರು. ಹೀಗಿರಲು ಒಂದು ದಿವಸ ಶ್ರೀಧರನು ಅವಧಿಬೋಧದಿಂದ ಪ್ರೀ
ತಿಂಕರಾರ್ಯರ ಕೇವಲಜ್ಞಾನೋತ್ಪತ್ತಿಯನ್ನು ಅರಿತು ಉತ್ತುಂಗಶ್ರೀಪ್ರಭಾಚಲಕ್ಕೆ
ಹೋಗಿ [72] ಅವರಿಗೆ ವಂದಿಸಿ [74] ತಾನು ಅಂಬರಚರನಾಗಿದ್ದ ಕಾಲದಲ್ಲಿ ತನಗೆ
ಮಂತ್ರಿಗಳಾಗಿದ್ದ ಮೂವರ ಸ್ಥಿತಿಯನ್ನೂ ಕೇಳಿದನು. [76] ಅದಕ್ಕೆ ಅವರು—ಸಂಭಿ
ನ್ನಮತಿ ನಿಗೋದವೆಂಬ ನರಕದಲ್ಲೂ [77] ಶತಮತಿ ದ್ವಿತೀಯನರಕದಲ್ಲೂ
ಇರುವನೆಂದು ಹೇಳಿ ಬಳಿಕ [79-81] ಅಧರ್ಮಸ್ವರೂಪವನ್ನೂ [81ಗ-94] ನರ
ಕಗಳ ಸ್ವರೂಪವನ್ನೂ ವಿವರಿಸಿ [94ಗ] ಶತಮತಿ ಘೋರನರಕದಲ್ಲಿರುವನೆಂದು
ತಿಳಿಸಿದನು. ಅದನ್ನು ಕೇಳಿ ಶ್ರೀಧರನು ದುಃಖಿತನಾಗಿ ಅಲ್ಲಿಗೆ ಹೋಗಿ [98] ಶತಮ
ತಿಗೆ ಸಮ್ಯಕ್ತ್ವವನ್ನು ಬೋಧಿಸಿದನು. [96] ಅವನು ಅದನ್ನು ಧರಿಸಿ [97] ಬೇರೆ
ಬೇರೆ ಜನ್ಮಗಳನ್ನು ಪಡೆದು ಕೊನೆಗೆ ಬ್ರಹ್ಮೇಂದ್ರನಾದನು. ಇತ್ತ ಶ್ರೀಧರನು ದಿವದಿಂದ
ಪರಿಚ್ಯುತನಾಗಿ ಜಂಬೂದ್ವೀಪದ ಪೂರ್ವವಿದೇಹದ ವತ್ಸಕಾವತಿ ವಿಷಯದ ಸುಸೀಮಾನ
ಗರವನ್ನು ಆಳುವ ಸುದೃಷ್ಟಿರಾಜನಿಗೂ ಸುನಂದೆಗೂ ಸುವಿಧಿಯೆಂಬ ಮಗನಾದನು

VI. ಆಶ್ವಾಸಂ. ನಾಭಿರಾಜರಾಜ್ಯಲಾಭವರ್ಣನಂ.

(6). ಸುವಿಧಿಜನ್ಮಕಥೆ.

[2] ಸುವಿಧಿ ತನ್ನ ತಂದೆಯ ಮಾತನ್ನು ಮೀರಲಾರದೆ ಅಭಯಘೋಷಚಕ್ರಿಯ ಮಗಳಾದ ಮನೋರಮೆಯನ್ನು ಮದುವೆಯಾಗಿ ರಾಜ್ಯಭಾರವನ್ನು ವಹಿಸಿದನು. [2ಗ] ಹಿಂದೆ ಶ್ರೀಮತಿಯಾಗಿದ್ದ ಸ್ವಯಂಪ್ರಭಾದೇವನು ದೇವಲೋಕದಿಂದಿಳಿದು [3] ಕೇಶವ ನೆಂಬ ಮಗನಾಗಿ ಹುಟ್ಟಿದನು. [3ಗ] ಇತರರೂ ಯಥಾಯೋಗ್ಯವಾಗಿ ಜನಿಸಿದರು. [4ಗ] ಒಂದುದಿವಸ ಅಭಯಘೋಷಚಕ್ರಿ ವಿಮಳವಾಹನಜಿನಚರಣವಂದನೆಗೆ ಹೋದನು. ಸುವಿಧಿಯೂ ತನ್ನ ಮಗನನ್ನು ಕರೆದುಕೊಂಡು ಅಲ್ಲಿಗೆ ಹೋದನು. ಚಕ್ರಿ ಧರ್ಮಾಮೃತರಸಾಸ್ವಾದನದಿಂದ [5] ವಿರಕ್ತನಾಗಿ ದೀಕ್ಷೆಯನ್ನು ವಹಿಸಿ ದನು. [6] ಸುವಿಧಿಯೂ ವೈರಾಗ್ಯವನ್ನು ಅವಲಂಬಿಸಿ ಉಪಾಸಕನಾಗಿ [7] ಪಂಚಾ ಣುವ್ರತಗಳನ್ನೂ [8] ಮೂರುಗುಣವ್ರತಗಳನ್ನೂ [9] ನಾಲ್ಕು ಶಿಕ್ಷಾವ್ರತಗಳ ನ್ನೂ [10-11] ಏಕಾದಶನಿಳಯವನ್ನೂ ಅಂಗೀಕರಿಸಿ ಚಾರಿತ್ರವ್ರತವನ್ನು ತಳೆದು [11ಗ] ಜೀವಿತಾವಸಾನದಲ್ಲಿ ಸಮಾಧಿವಿಧಿಯಿಂದ ಶರೀರಪರಿತ್ಯಾಗಮಾಡಿದನು.

(7). ಅಚ್ಯುತೇಂದ್ರ ಜನ್ಮಕಥೆ.

ಬಳಿಕ ಅಚ್ಯುತಕಲ್ಪದಲ್ಲಿ ಅಚ್ಯುತೇಂದ್ರನಾದನು. [12ಗ] ಕೇಶವನೂ ರಾಜ್ಯ ವನ್ನು ತೊರೆದು ಪ್ರತೀಂದ್ರನಾದನು. [13] ಇತರರೂ ತಕ್ಕ ತಕ್ಕ ಜನ್ಮಗಳನ್ನು ಪಡೆ ದರು. ಅಚ್ಯುತೇಂದ್ರನು [13-17] ದಿವ್ಯಭೋಗಗಳನ್ನು ಆಸ್ವಾದಿಸಿ ಆಯುರವ ಸಾನದಲ್ಲಿ [20] ಜಿನಪದಧ್ಯಾನಾಸಕ್ತಮನನಾಗಿ ಪರಿಚ್ಯುತನಾದನು.

(8). ವಜ್ರನಾಭಿಜನ್ಮಕಥೆ

[21] ಬಳಿಕ ವಜ್ರನಾಭಿಯೆಂಬ ನಾಮದಿಂದ ಜಂಬೂದ್ವೀಪದ ಪ್ರಾಗ್ವಿದೇಹದ ಸೀತಾನದಿಯ ಬಡಗಣ ತಡಿಯ ಪುಷ್ಕಳಾವತೀವಿಷಯದ ಪ್ರತಿಬದ್ಧಪುಂಡರೀಕಿಣೀಪುರದ ವಜ್ರಸೇನವಿಭುವಿಗೂ ಶ್ರೀಕಾಂತೆಗೂ ಪುತ್ರನಾದನು. ಇವನಿಗೆ ಯೌವನೋದಯವಾ ಗಲು [24] ಪಟ್ಟಕ್ಕೆ ಯೋಗ್ಯನಾದನೆಂದು ಬಗೆದು ವಜ್ರಸೇನನು ಇವನಿಗೆ ರಾಜ್ಯವನ್ನು ಒಪ್ಪಿಸಿ ತಪಸ್ಸಿಗೆ ಹೋದನು. [26] ಕೆಲಕಾಲಕ್ಕೆ ವಜ್ರನಾಭಿಯೂ ವೈರಾಗ್ಯವನ್ನು ತಳೆದು [26ಗ] ನಿಜಾಗ್ರಸುತನಾದ ವಜ್ರದಂತನಿಗೆ ವಸುಂಧರಾಭಾರವನ್ನು ಕೊಟ್ಟು ನಿಜ ಗುರುಸಮೀಪದಲ್ಲಿ [27] ನಿಜದ ರೂಪವನ್ನೂ ನಿರ್ಗ್ರಂಥರೂಪವನ್ನೂ ವಹಿಸಿ [28ಗ] ಪಂಚಮಹಾವ್ರತಗಳನ್ನೂ [28] ಪಂಚಸಮಿತಿಯನ್ನೂ [29] ಗುಪ್ತಿತ್ರಯ ವನ್ನೂ [30-34ಗ] ಇತರ ತಪಸ್ಸುಗಳನ್ನೂ ಆಚರಿಸಿ ಶರೀರಪರಿತ್ಯಾಗಮಾಡಿದನು.

[34ಗ—42] ಸರ್ವಾರ್ಥಸಿದ್ಧಿಯುವರ್ಣನೆ. [48] ಅಲ್ಲಿ ಅಹಮಿಂದ್ರನು ಸುಖವಾಗಿರುತ್ತಿದ್ದನು.

ಇತ್ತ ಜಂಬೂದ್ವೀಪದಲ್ಲಿ — [48ಗ] ಕಾಲಸ್ವರೂಪಪ್ರಮಾಣಾದಿಗಳ ವರ್ಣನೆ. [49–51] ಜಘನ್ಯಭೋಗಭೂಮಿಯ ಚರಮಸ್ಥಿತಿವರ್ಣನೆ.—ಆಗ [51–ಗ52] ಸೂರ್ಯಚಂದ್ರಬಿಂಬಗಳು ಉದಿಸಿದುವು. [52ಗ] ಅವುಗಳನ್ನು ಕಂಡು ಜನರು ಭೀತರಾದರು. [53] ಅವರ ಭಯವನ್ನು ಬಿಡಿಸಿ ಪ್ರತಿಶ್ರುತಿಯೆಂಬ ಮೊದಲನೆಯ ಮನು ಅವರನ್ನು ಸಂತೈಸಿದನು. [53ಗ] ಸನ್ಮತಿಯೆಂಬ ಎರಡನೆಯ ಮನುವಿನ ಕಾಲದಲ್ಲಿ [54-55] ಉದಯಾಸ್ತಮಯಗಳೂ ನಕ್ಷತ್ರಗಳೂ ಉಂಟಾದುವು [56–56ಗ] ಬಳಿಕ ಮೂರನೆಯ ಮನುವಾದ ಕ್ಷೇಮಂಕರನು ದುಷ್ಟಮೃಗಗಳನ್ನು ವಶಮಾಡಿಕೊಳ್ಳುವ ಉಪಾಯಗಳನ್ನು ಕಲಿಸಿದನು. ಕ್ಷೇಮಂಧರನೆಂಬ ನಾಲ್ಕನೆಯ ಮನು ಲಕುಟಯಷ್ಟ್ಯಾದಿಗಳಿಂದ ಪಾಪಸತ್ತ್ವಗಳನ್ನು ಶಿಕ್ಷಿಸುವ ಉಪಾಯವನ್ನು ತಿಳಿಸಿದನು [57] ಸೀಮಾವಿವಾದವನ್ನು ನಿವಾರಿಸಿ ಐದನೆಯ ಮನು ಸೀಮಂಕರನಾದನು. [58] ಆಘಾಟಶುದ್ಧಿಮಾಡಿ ಆರನೆಯ ಮನು ಸೀಮಂಧರನಾದನು. [58] ಏಳನೆಯ ಮನುವಾದ ವಿಮಳವಾಹನನು ವಾಹನಗಳನ್ನು ಕಲ್ಪಿಸಿದನು. [59] ಎಂಟನೆಯ ಮನುವಾದ ಚಕ್ಷುಷ್ಮಂತನು ಸುತಮುಖಕಮಲಾಲೋಕನಯುಕ್ತಿಯನ್ನು ಬೋಧಿಸಿದನು. [60] ಯಶಸ್ವಿ ಹೆಸರಿಡುವುದನ್ನು ಹೇಳಿಕೊಟ್ಟನು. [60ಗ] ಅಭಿಚಂದ್ರನು ಚಂದ್ರನನ್ನು ತೋರಿ ಮಕ್ಕಳಾಡಿಸುವುದನ್ನು ಉಪದೇಶಿಸಿದನು. [61] ಸೂರ್ಯಚಂದ್ರರು ಹಿಮದಿಂದ ಮರೆಯಾಗಲು ಭಯಪಟ್ಟ ಜನರನ್ನು ಭದ್ರಾಭನು ಸಂತೈಸಿದನು. [61ಗ—63] ಮರುದೇವನು ಸೋಪಾನಾದಿಗಳನ್ನು ಕಟ್ಟಿ ಗಿರಿದುರ್ಗಗಳನ್ನು ಹತ್ತುವ ಯುಕ್ತಿಯನ್ನೂ ದ್ರೋಣಿಯಾನಪಾತ್ರಾದಿಗಳಿಂದ ಜಲದುರ್ಗೋತ್ತರಣವನ್ನೂ ಕಲಿಸಿದನು. [65] ಪ್ರಸೇನಜಿತ್ತೆಂಬನು ಜರಾಯುಪಟಲವಿಮೋಚನಕ್ರಮವನ್ನು ಅರುಹಿದನು. [67] ಹದಿನಾಲ್ಕನೆಯ ಮನುವಾದ ನಾಭಿರಾಜನು ಅರ್ಭಕರ ನಾಭಿನಾಳಪ್ರಕರ್ತನೋಪಾಯವನ್ನು ವಿಶದೀಕರಿಸಿದನು. [67—70] ನಾಭಿರಾಜವರ್ಣನೆ. [71—72] ವೃಷ್ಟಿವರ್ಣನೆ. [73–78] ಮಳೆಯಿಂದ ವ್ರೀಹ್ಯಾದಿಗಳು ಬೆಳೆದರೂ ಕ್ಷುತ್ಪೀಡೆಯಿಂದ ನಮೆಯುತ್ತಿದ್ದ ಜನರಿಗೆ ನಾಭಿ ಅವುಗಳ ಉಪಯೋಗವನ್ನು ಕಲಿಸಿಕೊಟ್ಟನು. ಈ ನಾಭಿರಾಜನಿಗೆ ಮರುದೇವಿಯೆಂಬ ಪತ್ನಿಯಿದ್ದಳು. [80] ಅವಳ ಸೌಂದರ್ಯವರ್ಣನೆ. [81–88] ಆದಂಪತಿಗಳ ಗರ್ಭದಲ್ಲಿ ತೀರ್ಥಕರಾವತಾರವಾಗುವುದೆಂದು ಇಂದ್ರನು [88ಗ] ಅಯೋಧ್ಯಾಪುರವನ್ನು ನಿರ್ಮಿಸಿದನು. [89-106] ಪುರವರ್ಣನೆ. ಅಲ್ಲಿ ಮನೋಹರವಾದ ರಾಜಾಲಯದಲ್ಲಿ [107] ಅವರು ಪುರುದೇವನ ಅವತರಣವನ್ನು ನಿರೀಕ್ಷಿಸುತ್ತಿದ್ದರು.

VII. ಮಹೇಂದ್ರಾನಂದನೃತ್ತವರ್ಣನಂ.

[2] ಅಮರೇಂದ್ರನು ಪರಮನ ಚರಮಗರ್ಭಾವತರಣವನ್ನು ಅವಧಿಜ್ಞಾನ
ದಿಂದ ತಿಳಿದು ಆರುತಿಂಗಳಿಗೆ ಮುಂಚೆಯೆ [3] ಅಯೋಧ್ಯೆಯಲ್ಲಿ ಧನವೃಷ್ಟಿಯ
ನ್ನು ಕರೆವಂತೆ ಧನದನಿಗೆ ಆಜ್ಞಾಪಿಸಿ [3ಗ] ಶ್ರೀಹ್ರೀಮೊದಲಾದ ದೇವಸ್ತ್ರೀಯರನ್ನು
ಗರ್ಭಶೋಧನೆಯೇ ಮುಂತಾದ ವ್ಯಾಪಾರಗಳಲ್ಲಿ ನಿಯೋಜಿಸಿದನು. ಅವರು ತದ
ಜ್ಞಾನುಸಾರವಾಗಿ ಜಿನಜನನಿಯನ್ನು [4ಗ—26] ನಾನಾವಿಧವಾಗಿ ಓಲಗಿಸುತ್ತಿದ್ದ
ರು. [26ಗ—27ಗ] ಹೀಗಿರಲು ಒಂದುದಿವಸ ಮರುದೇವಿ ಚತುರ್ಥಸ್ನಾನವ
ನ್ನು ಮಾಡಿ ಪತಿಯೊಡನೆ ನಿದ್ರಿಸಿದ್ದು ನಿಶಾಂತ್ಯದಲ್ಲಿ ಶುಭಸೂಚಕವಾದ ಷೋಡಶಸ್ವ
ಪ್ನವನ್ನು ಕಂಡಳು. [29] ನಾಭಿ ಆ ಸ್ವಪ್ನವನ್ನು ಕೇಳಿ ತೀರ್ಥಕರನು ಜನಿ
ಸುವನೆಂದು ತಿಳಿದನು. [30ಗ] ಆಕೆ ಗರ್ಭವಾದಳು. [31—35] ಗರ್ಭವ
ರ್ಣನೆ. ಬಳಿಕ ಪ್ರಸವಕಾಲವು ಒದಗಿ ಬಂದಾಗ ಮರುದೇವಿ [35] ಒಂದು ಪುತ್ರರ
ತ್ನವನ್ನು ಹಡೆದಳು. [39—37] ಜನ್ಮೋತ್ಸವವರ್ಣನೆ. ಆಗ [42] ಶಚಿ
ಅದೃಶ್ಯೆಯಾಗಿ ಬಂದು [43] ಪ್ರಸೂತಿಗೃಹಕ್ಕೆ ಮೂರುಸಲ ಪ್ರದಕ್ಷಿಣೆಮಾಡಿ [44
ಒಳಗೆ ಪ್ರವೇಶಿಸಿ ಮರುದೇವಿಗೆ ಮಾಯೆಯಿಂದ ನಿದ್ದೆಬರುವಂತೆ ಮಾಡಿ ಅಲ್ಲಿ ಬ
ದು ಮಾಯಾಶಿಶುವನ್ನು ಇಟ್ಟು ಜಿನಶಿಶುವನ್ನು ಎತ್ತಿಕೊಂಡು [47] ಅಲ್ಲಿಂ
ಬಂದು ಇಂದ್ರನ ಕೈಯಲ್ಲಿ ಇಟ್ಟಳು. [48ಗ] ಇಂದ್ರನು [51-56
ಐರಾವತದ ಸ್ಕಂಧದಲ್ಲಿ ಶಿಶುವನ್ನು ಕುಳ್ಳಿರಿಸಿಕೊಂಡು ಹೊರಟು [59ಗ] ಮಂದ
ರಾಚಲಕ್ಕೆ [60—70] ದೇವನಿಕಾಯದೊಡನೆ ಹೋಗಿ [73—75] ಪಾಂಡುಕ
ಶಿಲಾತಲದಲ್ಲಿ [75ಗ] ಸಿಂಹಪೀಠದಲ್ಲಿ ಶಿಶುವನ್ನು ಕುಳ್ಳಿರಿಸಿ [77] ಮಂಗಳವಾದ್ಯರವ
ದೊಡನೆ [78] ಧೂಪದೀಪದಿಂದ ಅರ್ಚಿಸಿ [79] ಅಕ್ಷತಮಿಶ್ರವಾದ ಅರ್ಘ್ಯವನ್ನು
ಅರ್ಪಿಸಿ [79ಗ—100] ಕನಕಕಲಶಗಳಿಂದ ಮಂಗಳಮಜ್ಜನವನ್ನು ನೆರವೇರಿಸಿದ
ನು. [105] ಅನಂತರ ಇಂದ್ರಾದಿಗಳು ಜಿನಬಾಲನೊಡನೆ ವಿನೀತಾಪುರಕ್ಕೆ ಬಂದ
[107ಗ] ರಾಜಭವನವನ್ನು ಪ್ರವೇಶಿಸಿ ಸಿಂಹಾಸನದಲ್ಲಿ ಬಾಲಕನನ್ನು ಮೂರ್ತಿಗೊಳಿಸಿ
ದರು. [109] ಬಳಿಕ ಜಾತಕಮಹೋತ್ಸವವು ನಡೆಯಿತು. ಇಂದ್ರನು ಆನಂದನೃತ್ತ
ದಿಂದ ಉಭಯಸಭೆಯನ್ನೂ ಸಂತೋಷಪಡಿಸಿದನು.

VIII. ಕರ್ಮಭೂಮಿ ನಿಯೋಗನಿರೂಪಣಂ

[1—3] ಆಬಾಲಕನು ಸುರರೊಡನೆ ಬಾಲಕ್ರೀಡೆಯಾಡಿ ಬಳೆದು [4—5]
ಉದ್ಯದ್ಯೌವನನಾದನು. [6] ಆದರೂ ಅವನಿಗೆ ರಾಜ್ಯಲಕ್ಷ್ಮಿಯಲ್ಲಿ ಅಭಿರುಚಿಯು
ಟಾಗಲಿಲ್ಲ. [7—8] ಅದನ್ನು ನೋಡಿ ನಾಭಿರಾಜನು ಅವರೀತಿಯಲ್ಲಾದರೂ

ಪುತ್ರನಿಗೆ ವಿವಾಹವಮಾಡಬೇಕೆಂದು ಆಲೋಚಿಸಿ [8ಗ-15] ಅವನ ಬಳಿಗೆ ಹೋಗಿ ನಾನಾ ವಿಧವಾಗಿ ನೀತಿಯನ್ನು ಬೋಧಿಸಿ ಅವನನ್ನು ಅನುಮತಿಪಡಿಸಿದನು. [15ಗ-22] ಕೂಡಲೆ ಮದುವೆಯ ಮಂಟಪವು ಅಲಂಕೃತವಾಯಿತು. [22ಗ] ಬಹಳ ಸಂಭ್ರಮದೊಡನೆ ಯಶಸ್ವತಿಸುನಂದೆಯೆಂಬ ಕನ್ನಿಕೆಗಳನ್ನು ಮದುವೆ [23ಗ-25] ಯಾಗಿ ಅವರೊಡನೆ ಸಂಸಾರಸುಖವನ್ನು ಸೇವಿಸುತ್ತಿದ್ದನು. ಹೀಗೆ ಕೆಲವು ಕಾಲ ಕಳಿಯಲು ಯಶಸ್ವತಿ ಗರ್ಭಿಣಿಯಾದಳು. [31—33] ಗರ್ಭದೌಹೃದಾದಿ ವರ್ಣನೆ. [34] ಬಳಿಕ ನವಮಾಸ ತುಂಬಿ ಶುಭಮೂಹೂರ್ತದಲ್ಲಿ [34] ಪುತ್ರರತ್ನವನ್ನು ಹೆತ್ತಳು. [35—36ಗ] ಜನ್ಮೋತ್ಸವವರ್ಣನೆ. [37] ಆ ಶಿಶುವಿಗೆ ಭರತನೆಂದು ನಾಮಕರಣಮಾಡಿದರು [38--44.] ಕುಮಾರನ ಬಾಲಲೀಲಾದಿವರ್ಣನೆ. ಆಕೆ ಹೀಗೆಯೇ [44ಗ] ನೂರ್ವರು ಪುತ್ರರನ್ನೂ ಬ್ರಹ್ಮಿಯೆಂಬ ಪುತ್ರಿಯನ್ನೂ ಪಡೆದು [45] ಅಗ್ರಮಹಿಷೀಪದವನ್ನು ಅಲಂಕರಿಸಿದಳು. ಆಗಲೆ [45ಗ] ಸುನಂದಾದೇವಿಯೂ ಗರ್ಭಿಣಿಯಾದಳು. [46—48] ವರ್ಣನೆ. [49] ಬಳಿಕ ಸಕಾಲದಲ್ಲಿ ಒಂದು ಗಂಡುಮಗುವನ್ನು ಹಡೆದಳು. [50] ಜನ್ಮೋತ್ಸವದಲ್ಲಿ ಆಮಗುವಿಗೆ [50ಗ] ಬಾಹುಬಲಿಯೆಂದು ಹೆಸರಿಟ್ಟರು. [50ಗ—53] ಆತನ ಶೈಶವಯುವ್ವನಾದಿವರ್ಣನೆ. [54] ಕೆಲವುಕಾಲಕ್ಕೆ ಅವನಿಗೆ ಸೌಂದರಿಯೆಂಬ ತಂಗಿ ಹುಟ್ಟಿದಳು. [54ಗ—55] ಭರತೇಶ್ವರನು ಆ ಮಕ್ಕಳನ್ನು ನೋಡಿ ಸಂತೋಷಿಸಿ ಅವರವರಿಗೆ ಉಚಿತವಾದ ಆಭರಣಾದಿಗಳನ್ನು ಕಲ್ಪಿಸಿಕೊಟ್ಟನು. [55ಗ] ಒಂದಾನೊಂದುದಿವಸ ಭರತೇಶ್ವರನು ವಿದ್ಯೆಗಳನ್ನು ಉಪದೇಶಿಸಬೇಕೆಂದು ಆಲೋಚಿಸುತ್ತಿದ್ದ ಕಾಲದಲ್ಲಿ [56] ಪುತ್ರಿಯರಿಬ್ಬರೂ ಬಂದು ನಮಸ್ಕಾರಮಾಡಿದರು. [57] ಅವರಿಬ್ಬರನ್ನೂ ತನ್ನ ತೊಡೆಯಲ್ಲಿ ಕುಳ್ಳಿರಿಸಿಕೊಂಡು [59—6ಗ] ಬ್ರಹ್ಮಿಗೆ ಸಿದ್ಧಂ ನಮಃ—ಎಂದು ತೊಡಗಿ ಲಿಪಿಗಳನ್ನು ದಕ್ಷಿಣಹಸ್ತದಲ್ಲಿ ಉಪದೇಶಿಸಿದನು. [60] ಸೌಂದರಿಗೆ ಗಣಿತವನ್ನು ಎಡಗೈಯಲ್ಲಿ ಬರೆದು ತೋರಿಸಿ [60ಗ] ಸ್ವಯಂಭುವಾಭಿಧಾನಪದವಿದ್ಯಾಛಂದೋವಿಚಿತ್ರ್ಯಲಂಕಾರಗಳೆಂಬಿವೇ ಮೊದಲಾದ ಸಮಸ್ತವಿದ್ಯೆಗಳನ್ನೂ ಬೋಧಿಸಿ ಇಬ್ಬರನ್ನೂ ವಿದ್ಯಾಪರಿಪೂರ್ಣೆಯರನ್ನು ಮಾಡಿದನು. ಬಳಿಕ ಉಳಿದ ಗಂಡುಮಕ್ಕಳಿಗೆ ಭರತ ಅರ್ಥಶಾಸ್ತ್ರ ಗಾಂಧರ್ವಶಾಸ್ತ್ರ ಮೊದಲಾದ ಲೋಕೋಪಕಾರಿಗಳಾದ ಶಾಸ್ತ್ರಗಳನ್ನು ಉಪದೇಶಿಸಿ ಸುಖದಿಂದಿರುತ್ತಿದ್ದನು. [61] ಹೀಗೆಯೇ ಆತನಿ ಇಪ್ಪತ್ತು ಲಕ್ಷ ಪೂರ್ವಕಾಲಗಳು ಕಳೆದುಹೋದುವು. [61ಗ] ಆಪ್ರಸ್ತಾವದಲ್ಲಿ ಪೈರಪಚ್ಚೆಗಳು ವಿರಳವಾಗಿ ಜನರು ಅಧಿವ್ಯಾಧಿಗಳಿಂದ ಸಂಕಟಪಡುತ್ತ [62] ಅವನ ಬಳಿಗೆ ಬಂದು ಶರಣಾಗತರಾದರು [62ಗ] ಅವರಿಗೆ ಅಭಯವನ್ನು ಕೊಟ್ಟು ಇಂದ್ರನನ್ನು ಬರಿಸಿ [63ಗ] ಕ್ಷೇತ್ರವಿಭಾಗಗಳನ್ನು ದೇಶವಿಭಾಗಗಳನ್ನೂ ಪಶ್ವಾದಿಗಳನ್ನು ವಶಮಾಡಿಕೊಳ್ಳುವ ಉಪಾಯಗಳನ್ನೂ ಉಪಯೋಗಕರವಾದ ಅನೇಕವಿದ್ಯೆಗಳನ್ನೂ ಕಲಿಸಿದನು [64] ಬಳಿಕ ಆದಿಬ್ರಹ್ಮನು ಅಸಿಮಷಿಕೃಷಿಗಳನ್ನು ಕಲ್ಪಿಸಿ ತಾನು ಪಡೆದ ಕ್ಷತ್ರಿ

ಯ ವಣಿಕ್ಛೂದ್ರರೆಂಬ ಮೂರುವರ್ಣಗಳಲ್ಲಿ ಕ್ಷತ್ರಿಯರಿಗೆ ಶಸ್ತ್ರಕರ್ಮವನ್ನೂ ವಣಿಗ್ವಂಶಕ್ಕೆ ಪಾಶುಪಾಲ್ಯಕೃಷಿಪಣ್ಯಕರ್ಮಗಳನ್ನೂ ಸ್ಪೃಶ್ಯಾಸ್ಪೃಶ್ಯಕಾರುಗಳೆಂಬೆರಡುವಿಧದ ಶೂದ್ರರಿಗೆ ಶುಶ್ರೂಷಾನಿಯೋಗವನ್ನೂ ಉಪದೇಶಿಸಿ ವರ್ಣಸಂಕರವಾಗಲೀಯದೆ ತಮ್ಮತಮ್ಮ ಜಾತಿಗಳಲ್ಲೆ ನಂಟನ್ನೂ ಹೆಣ್ಣು ತರುವ ಕೊಡುವ ಬಳಕೆಯನ್ನೂ ನಿಯೋಜಿಸಿದನು. [66] ಇದು ಭಗವತ್ಕೃತವಾದುದರಿಂದ ಇದಕ್ಕೆ ಕೃತಯುಗವೆಂಬ ಹೆಸರಾಯಿತು. [66ಗ—71] ಬಳಿಕ ಇಂದ್ರಾದಿಗಳು ಆದಿಬ್ರಹ್ಮನಿಗೆ ರಾಜ್ಯಾಭಿಷೇಕವನ್ನು ಮಾಡಿದರು. ಆಗ [72ಗ] ಆದಿಬ್ರಹ್ಮನು ಹಿಂದೆ ತಾನು ಪಡೆದ ವರ್ಣತ್ರಯಕ್ಕೂ ಮುಂದೆ ಭರತನಿಂದ ಉಂಟಾಗುವ ವಿಪ್ರವರ್ಣಕ್ಕೂ ಯಥೋಚಿತವೃತ್ತಿಗಳನ್ನು ತಿಳಿಸಬೇಕೆಂದು ಬಗೆದು [73] ಈ ಮತಗಳು ತಮ್ಮ ತಮ್ಮ ಕಾರ್ಯದಿಂದ ಉಂಟಾದುವೆಂದು ತಿಳಿಸಿ [73ಗ] ದ್ವಿಜನ್ಮವರ್ಣಕ್ಕೆ ಅಧ್ಯಯನಾಧ್ಯಾಪನದಾನಪ್ರತಿಗ್ರಹಯಜನಯಾಜನವಿಶಿಷ್ಟವೃತ್ತಿಯನ್ನೂ ಕ್ಷತ್ರಿಯಜಾತಿಗೆ ಸತ್ಯತ್ಯಾಗಪ್ರಜಾಪಾಲನಶರಣಾಗತರಕ್ಷಣಾಪ್ರಹರಣಕ್ಷಮಾದಿಗುಣಾಚರಣವನ್ನೂ, ವಣಿಗ್ವಂಶಕ್ಕೆ ಜಳಸ್ಥಳಯಾತ್ರಾಸಂವೃತಮರ್ಘಪ್ರವರ್ತನವನ್ನೂ ಶೂದ್ರಾನ್ವಯಕ್ಕೆ ಬ್ರಾಹ್ಮಣಾದಿವರ್ಣತ್ರಯಕ್ಕೂ ಶುಶ್ರೂಷಾನೃತಕರ್ಮಕರಣೋಪಜೀವನವನ್ನೂ ಕಲ್ಪಿಸಿ [74] ಇದಕ್ಕೆ ವ್ಯತಿರಿಕ್ತವಾಗಿ ನಡೆದವರಿಗೆ ದಂಡನೆಯನ್ನು ನಿಯಮಿಸಿ [73ಗ] ದಂಡಧರರಿಲ್ಲದಿದ್ದರೆ ಜನರು ಸ್ವಚ್ಛಂದವಾಗಿ ನಡೆವರೆಂದು ತಿಳಿದು ಅವರನ್ನು ನಿಯಮಿಸುವುದಕ್ಕಾಗಿ ಕುರುವಂಶ, ಹರಿವಂಶ, ನಾಥವಂಶ, ಉಗ್ರವಂಶವೆಂಬ ರಾಜವಂಶಗಳನ್ನೂ ನಿಯಮಿಸಿದನು. ಹೀಗೆ ಅರುವತ್ತುಮೂರುಲಕ್ಷ ಪೂರ್ವಕಾಲರಾಜ್ಯವಾಳಿ ಕರ್ಮಭೂಮಿಪ್ರಸರಕ್ಕೆ ಆದಿಯಾಗಿ ಸಾಕೇತಸಿಂಹಾಸನಾಸೀನನಾಗಿರುತ್ತಿದ್ದನು.

IX. ಪರಿನಿಷ್ಕ್ರಮಣಕಲ್ಯಾಣವರ್ಣನಂ.

ಆದಿಬ್ರಹ್ಮನು ಒಂದಾನೊಂದುದಿವಸ [2-6] ಒಡ್ಡೋಲಗದಲ್ಲಿ [7—8] ಸಿಂಹಾಸೀನನಾಗಿರುವಾಗ [8ಗ] ಇಂದ್ರನು—ಆದಿದೇವನ ಪರಿನಿಷ್ಕ್ರಮಣಕಲ್ಯಾಣವು ಅತ್ಯಾಸನ್ನವೆಂದು ನಿಜಾವಧಿಬೋಧದಿಂದರಿದು ಸಂಗೀತಪ್ರಸಂಗದಿಂದ ಆರಾಧಿಸಲೆಂದು ಅಲ್ಲಿಗೆ ಬಂದನು. [9—3] ಅಲ್ಲಿ ಅನುಮತಿಯನ್ನು ಪಡೆದು [14—16] ಗೀತದಿಂದ ಉಪಚರಿಸಿದನು. ಬಳಿಕ [18—40] ನೀಲಾಂಜನೆಯ ನಾಟ್ಯವು ಆನಂದವನ್ನುಂಟುಮಾಡುತ್ತಿದ್ದಿತು. [41] ಆಕೆ ನಾಟ್ಯವಾಡುತ್ತ ಆಡುತ್ತ ಆಯುರವಸಾನವಾಗಲು ಹಾಗೆಯೇ ಅದೃಶ್ಯವಾದಳು. [43] ರಸಭಂಗವಾಗದಂತೆ ಇಂದ್ರನು ಆರಿಗೂ ತಿಳಿಯದಂತೆ ಪಾತ್ರಾಂತರವನ್ನು ನಿಯೋಜಿದನು. ಆದರೂ ಆದಿದೇವನು ಅದನ್ನು ತಿಳಿದು [34—60ಗೆ] ದೇಹಾನಿತ್ಯತೆಯನ್ನು ಭಾವಿಸಿ ಮುಕ್ತಿಕಾಂತಾವರನಾಗಲ್ ಬಯಸಿದನು. [70ಗ—73] ಆವೇಳೆಗೆ ಲೋಕಾಂತಿಕದೇವರು ಬಂದು 'ನೀನು ಧರ್ಮ

ವನ್ನು ವಿಶದಮಾಡಬೇಕು'-ಎಂದು ಪ್ರತಿಬೋಧಿಸಿದರು. [63ಗ] ಬಳಿಕ ಇಂದ್ರನು ಪರಿವಾರಸಮೇತನಾಗಿ ಬಂದು ಅಭಿಷೇಕಮಾಡಿದನು ಪರಮನು ಭರತರಾಜನನ್ನು ಬರಿಸಿ ರಾಜ್ಯಾಭಿಷೇಕಮಾಡಿ [65] ಬಾಹುಬಲಿಗೆ ಯುವರಾಜ್ಯಪದವಿಯನ್ನು ಕೊಟ್ಟು. ಅಯೋಧ್ಯಾಪಟ್ಟಣದಲ್ಲೂ ಪೋದನಪುರದಲ್ಲೂ ಅವರನ್ನು ನಿಲ್ಲಿಸಿದನು [66—72] ವರ್ಣನೆ. [72ಗ] ಬಳಿಕ ಉಳಿದಮಕ್ಕಳಿಗೂ ಯಥಾಯೋಗ್ಯವಾಗಿ ರಾಜ್ಯವನ್ನು ವಿಭಾಗಮಾಡಿಕೊಟ್ಟು, ನಾಭಿರಾಜಾದಿಗಳನ್ನು ಬೀಳ್ಕೊಂಡು ಸೌಧರ್ಮೇಂದ್ರಹಸ್ತವನ್ನು ಅವಲಂಬಿಸಿ ಶಿಬಿಕೆಯನ್ನು ಹತ್ತಿದನು. ಅದನ್ನು ಕಂಡು ಪ್ರಜೆಗಳು [74—75] ದುಃಖಪಟ್ಟರು. [76] ಯಶಸ್ವಿಯೂ ಸುನಂದೆಯೂ ಹಿಂದೆಯೇ ಅಳುತ್ತ ಹೋದರು. ಅವರನ್ನು ಅಂತಃಪುರವೃದ್ಧರು ಸಮಾಧಾನಪಡಿಸಿ ಹಿಂದಕ್ಕೆ ಕರೆದುಕೊಂಡುಹೋದರು. ಭರತಾದಿಗಳು ಮಾತ್ರ ಸಂಗಡಲೇ ಹೋದರು. ಇತ್ತ ಇಂದ್ರಾದಿಗಳು ಶಿಬಿಕೆಯನ್ನು ಹೊತ್ತುಕೊಂಡು ಅಯೋಧ್ಯಾಪುರದ ಸಮೀಪದ ಸಿದ್ಧಾರ್ಥವನದ ನಡುವಣ ಚಂದ್ರಶಿಲಾತಳದಲ್ಲಿ ಇಳಿಸಿದರು. ಅಲ್ಲಿ ಪರಮನು ಪೂರ್ವಾಭಿಮುಖವಾಗಿ ಪಲ್ಯಂಕಾಸನದಲ್ಲಿದ್ದು [77] ಕೇಶವನ್ನು ಪರಿದು [79] ದೀಕ್ಷೆಯನ್ನು ಕೈಕೊಂಡನು. ಬಳಿಕ ಇಂದ್ರನು ಪರಿನಿಷ್ಕ್ರಮಣಕಲ್ಯಾಣವನ್ನು ನೆರವೇರಿಸಿ ಪೂಜೆಯನ್ನು ಮಾಡಿ ತನ್ನ ನೆಲೆಗೆ ಹೊರಟುಹೋದನು. ಭರತನೂ ತನ್ನ ರಾಜಧಾನಿಗೆ ಹೋದನು. ಆದರೆ ಕಚ್ಛಮಹಾಕಚ್ಛರೂ ಭರತನ ಮಗನಾದ ಮರೀಚಿಯೇ ಮೊದಲಾದ ನಾಲ್ಕುಸಾವಿರ ರಾಜಪುತ್ರರೂ ಹೋಗಲೊಲ್ಲದೆ [81] ಜಾತರೂಪವನ್ನು ಅಂಗೀಕರಿಸಿದರು. [82—88] ಪರಮನ ತಪೋವರ್ಣನೆ ಹಾಗೆ ಆದಿಬ್ರಹ್ಮನು ತಪಸ್ಸುಮಾಡುತ್ತಿರಲು [88ಗ] ಕಚ್ಛಾದಿಗಳು ಕ್ಷುತ್ಪಿಪಾಸಾದಿಪರೀಷಹಗಳನ್ನು ಸೈರಿಸಲಾರದೆ [92ಗ] ಬಿಟ್ಟುಹೋದರೆ ಭರತನು ಅಪಮಾನಮಾಡುವನೆಂದಂಜಿ ಹೋಗಲೂ ಆರದೆ [93ಗ] ಬೇರೆಬೇರೆ ವೇಷಧಾರಿಗಳಾಗಿ ಕೌಪೀನಧಾರಿಗಳೂ, ಭಸ್ಮೋದ್ಧೂಳಿತಾಂಗರೂ, ಜಟಾಧರರೂ ಆಗಿ ವನಪ್ರವೇಶಮಾಡಿ ಫಲಾಶಿಗಳಾಗಿದ್ದರು. ಆಗ ಮರೀಚಿ ಪರಿಗೃಹೀತಪರಿವ್ರಾಜಕನಾಗಿ ಅಪಸಿದ್ಧಾಂತಭಾಷಿತಗಳಿಂದ ಮಿಥ್ಯಾತ್ವವನ್ನು ವೃದ್ಧಿಮಾಡಿ ತಾನು ಉಪನ್ಯಾಸಮಾಡಿದ ಕಾಪಿಳಸಿದ್ಧಾಂತವನ್ನೂ ಯೋಗಶಾಸ್ತ್ರವನ್ನೂ ತೋರಿಸಿ ಲೋಕವು ಸಮ್ಯಜ್ಞಾನಪರಾಙ್ಮುಖವಾಗುವಂತೆ ಮಾಡಿದನು. ಇತ್ತ ಆದಿತೀರ್ಥಂಕರನು ಇನ್ನೂ ತಪಸ್ಸಿನಲ್ಲೇ ಇದ್ದನು [94-96] ಅವನ ವರ್ಣನೆ—[97.] ತಪೋಮಹಿಮೆಯು ವರ್ಣನೆ. [97ಗ] ಆಕಾಲದಲ್ಲಿ ಅಲ್ಲಿಗೆ ಕಚ್ಛಮಹಾಕಚ್ಛರ ಮಕ್ಕಳಾದ ನಮಿವಿನಮಿಗಳು ಬಂದು ಆದಿಪುರುಷನಿಗೆ ವಂದಿಸಿ [98—99] ತಮಗೂ ಭೂಭಾಗವನ್ನು ಕೊಡಿಸಿಕೊಡಬೇಕೆಂದು ಕಾಡಿ ಯೋಗವ್ಯಾಘಾತವನ್ನು ಮಾಡಿದರು. [99ಗ] ಅದನ್ನು ತಿಳಿದು ಧರಣೇಂದ್ರನು ಬಂದು [101—104] ತಪೋವಿಘ್ನಮಾಡಬೇಡವೆಂದು ನಮಿವಿನಮಿಗಳಿಗೆ ಎಷ್ಟೋಬಗೆಯಾಗಿ ಹೇಳಿದನು. ಆದರೂ ಅವರು ಕೇಳಲೊಲ್ಲದೆ ಧರಣೇಂದ್ರನನ್ನೇ [105—109] ಧಿಕ್ಕರಿಸಿದರು. [110—111] ಆಗ ಅವನು ನಿಜರೂಪದಿಂದ ಅವರಿಗೆ ಪ್ರತ್ಯಕ್ಷನಾಗಿ ಬೋ

ಧಿಸಿದನು. ಆದರೂ ಅವರು ಕೇಳದಿರಲು [112] ವಿಕ್ರಿಯೆಯಿಂದ ಪರಮನೇ ಬೆಸಸುವಹಾಗೆ ಮಾಡಿ ಅವರನ್ನು ಕಳುಹಿಸಿ [112ಗ] ಬಳಿಕ ಪರಮನನ್ನು ನಿಜವಿಮಾನದಲ್ಲಿ ಕುಳ್ಳಿರಿಸಿ ರಜತಾಚಲಕ್ಕೆ ಕರೆದುಕೊಂಡು ಹೋದನು. [113—121] ರಜತಾಚಲವರ್ಣನೆ [121ಗ] ಅಲ್ಲಿ ಅವರನ್ನು ಬಿಟ್ಟು [122ಗ] ನಿಜಲೋಕಕ್ಕೆ ಹೊರಟುಹೋದನು. [123] ಆದಿಭಟ್ಟಾರಕರು ಅಲ್ಲಿ ಆರುತಿಂಗಳು ತಪಸ್ಸುಮಾಡಿ [124ಗ] ಚರ್ಯಾಮಾರ್ಗದಲ್ಲಿ ನಡೆದು ಜನಪದಗಳಲ್ಲಿ ತಿರುಗಿ ಆರುತಿಂಗಳುಕಳಿದು [129ಗ] ಕುರುಜಾಂಗಳದ ಹಸ್ತಿನಾಪುರಕ್ಕೆ ಬಂದರು. ಆಪುರದ ರಾಜಪುತ್ರನಾದ ಶ್ರೇಯಾಂಸನು ಇವರ ಆಗಮನವನ್ನು ಸ್ವಪ್ನದಿಂದರಿತು ಇದಿರುಗೊಂಡು ಹೋಗಿ ಅವರನ್ನು ನಿಲಿಸಿದನು.

X. ಕೇವಲಜ್ಞಾನೋತ್ಪತ್ತಿವರ್ಣನಂ.

ಹಾಗೆ ನಿಲಿಸಿ [1ಗ] ಭಕ್ತಿಯಿಂದ ಅವರ ಪಾಣಿಪುಟದಲ್ಲಿ ಕಬ್ಬಿನ ಹಾಲನ್ನು ಎರೆದನು. [2–4] ಕೂಡಲೆ ಪಂಚಾಶ್ಚರ್ಯಗಳು ಉಂಟಾದುವು. ಆದಾದಮೇಲೆ [4ಗ] ಆಕಬ್ಬಿನ ಹಾಲಿನಿಂದ ಅವರು ಕಾಯಸ್ಥಿತಿಯನ್ನು ನಿರ್ವರ್ತಿಸಿ [6] ಆರಾಜಪುತ್ರನನ್ನು ಆಶೀರ್ವದಿಸಿ ಹೊರಟು ಹೋದರು. [7ಗ] ಈಸಮಾಚಾರವನ್ನು ಭರತೇಶ್ವರಾದಿಗಳು ಕೇಳಿ ಅಲ್ಲಿಗೆ ಬಂದು ಆರಾಜಪುತ್ರನೇ ಧನ್ಯನೆಂದು ಅವನನ್ನು ಪೂಜಿಸಿದರು. [8ಗ–13] ಅವನು ದಾನದ ಮಹಿಮೆಯನ್ನು ವಿಸ್ತರಿಸಿದನು. [13] ಇತ್ತ ವೃಷಭಯೋಗೀಂದ್ರನು ಜಿನಕಲ್ಪವೆಂಬ ಆಚರಣವನ್ನು ಅಂಗೀಕರಿಸಿ ಯೋಗಯೋಗ್ಯಸ್ಥಳಗಳಲ್ಲಿ ವಿಹರಿಸುತ್ತ ಸಂವತ್ಸರಸಹಸ್ರವನ್ನು ಕಳಿದ ಪುರಿಮತಾಳಪುರದ ಬಹಿರ್ಭಾಗನಿಕಟೋದ್ಯಾನದ ವಟವಿಟಪಿಯ ಕೆಳಗೆ ಪೂರ್ವಾಮಮುಖನಾಗಿ ಪಲ್ಯಂಕಾಸನದಲ್ಲಿ [14] ತಪಸ್ಸನ್ನು ಕೈಕೊಂಡನು [14ಗ] ತಪೋಭೇದಾದಿನಿರೂಪಣ. [4] ಮೊದಲು ಕೈವಲ್ಯಲಕ್ಷ್ಮಿಯೂ ಬಳಿಕ [15—16) ಕೇವಲಜ್ಞಾನವೂ ಉಂಟಾದುವು. [17ಗ] ಆಗ ಸೌಧರ್ಮೇಂದ್ರನು ಇಂದ್ರಾಣಿಯೊಡನೆ ಅಲ್ಲಿಗೆ ಬಂದನು. [18—20] ತದಾಗಮನವರ್ಣನೆ. ಬಂದು [21ಗ] ತನ್ನ ಆಜ್ಞಾನುಸಾರವಾಗಿ ಹಿಂದೆಯೇ ಧನದನು ನಿರ್ಮಿಸಿದ್ದ ಸಮವಸರಣವನ್ನು ನೋಡಿದನು. [21ಗ—44.] ಸಮವಸರಣವರ್ಣನೆ. ನೋಡಿ ಅದರಲ್ಲಿದ್ದ ಗಂಧಕುಟಿಯನ್ನು ಮೂರುಪ್ರದಕ್ಷಿಣೆಮಾಡಿ ನಮಸ್ಕರಿಸಿ [45—46] ಅರ್ಚಿಸಿದನು. [46ಗ] ಆಗ ಪುರಿಮತಾಳಪುರಾಧೀಶ್ವರನು ಬಂದು ವೃಷಭೇಶ್ವರನನ್ನು ಪೂಜಿಸಿ [47ಗ] ದೀಕ್ಷೆಯನ್ನು ವಹಿಸಿ ಪ್ರಥಮಗಣಧರನಾದನು. ಈಸಮಾಚಾರವೂ ಪುತ್ರಜನನದ ಸಂಗತಿಯೂ ಚಕ್ರರತ್ನೋತ್ಪತ್ತಿಯ ವೃತ್ತಾಂತವೂ, ಭರತನಬಳಿಗೆ ಏಕಕಾಲದಲ್ಲಿ ಬಂದುವು. ಭರತನು ಗುರುಪೂಜೆಯೇ ಪ್ರಥಮಕಾರ್ಯವೆಂದು ಬಗೆದು ಅಯೋಧ್ಯೆಯಿಂದ [50—50ಗ] ಪರಿಜನದೊ

ಷನೆ ಬಂದು ಪರಮನನ್ನು ಅರ್ಚಿಸಿ [51—59] ನಾನಾವಿಧವಾಗಿ ಸ್ತುತಿಸಿ [59ಗ] ನಿಜೋಚಿತಸ್ಥಾನದಲ್ಲಿ ಕುಳಿತುಕೊಂಡು [60] ಅಖಿಳವಸ್ತುಸ್ಥಿತಿಯನ್ನು ಬೆಸಗೊಂಡನು. [61ಗ] ಆಯೋಗೀಂದ್ರನು ಎಲ್ಲವನ್ನೂ ಸಂಕ್ಷೇಪವಾಗಿ ವಿವರಿಸಿದನು. [64ಗ] ಅದನ್ನು ಆಕರ್ಣಿಸಿ ಅನೇಕರು-ಗಣಧರರೂ ಪರಿವ್ರಾಜಿಕೆಯರೂ ಆದರು. ಭರತೇಶ್ವರನೂ ಬಾಹುಬಲಿಯೂ ಜಿನನಿಗೆ ನಮಸ್ಕರಿಸಿ ತಮ್ಮತಮ್ಮ ರಾಜಧಾನಿಗಳಿಗೆ ತೆರಳಿದರು. ಇತ್ತ ಸೌಧರ್ಮೇಂದ್ರನು ಭಗವದ್ವಿಹಾರವನ್ನು ಅವಧಿಯಿಂದ ತಿಳಿದು [65-66] ಬಿನ್ನೈಸಿದನು. [66ಗ] ಕೂಡಲೆ ಸಮವಸರಣವು ಅಂತರಿಕ್ಷದಲ್ಲಿ ನಡೆಯತೊಡಗಿತು. ಹೀಗೆ ಆದಿತೀರ್ಥಂಕರನು [6] ಶಕಕಾಶ್ಮೀರಾದಿದೇಶಗಳ ವಿನೇಯಜನಗಳಿಗೆಲ್ಲ ಉತ್ಸವವನ್ನು ಮಾಡುತ್ತ ಧರ್ಮಕ್ಷೇತ್ರಗಳಲ್ಲಿ ವಿಹಾರಿಸುತ್ತ ಬಂದು ಕೈಲಾಸದಲ್ಲಿ ನೆಲಸಿದನು.

XI. ದಿಗ್ವಿಜಯ ಪ್ರಾರಂಭ ನಿರೂಪಣೆ.

ಆಬಳಿಕ ಇತ್ತ [1] ಭರತನು [2-3] ಚಕ್ರರತ್ನವನ್ನೂ [3ಗ] ಅದರೊಡನೆ ಜನಿಸಿದ ಇತರ ಜೀವಾಜೀವರತ್ನಗಳನ್ನೂ ಪೂಜಿಸಿ [4—5] ತನ್ನ ಅಗ್ರಸುತನ ಜನ್ಮೋತ್ಸವವನ್ನು ನೆರವೇರಿಸಿದನು. ಆವೇಳೆಗೆ [5ಗ—9] ಶರತ್ಸಮಯವು ಬಂದೊದಗಿತು. ಅದನ್ನು ಕಂಡು [1ಗ—10] ಇನ್ನು ದಿಗ್ವಿಜಯಸಮಯವು ಪ್ರಾಪ್ತವಾಯಿತೆಂದು ತಿಳಿದು ಸೇನೆ ಸನ್ನದ್ಧವಾಗುವಂತೆ ವಿಜಯಪ್ರಸ್ಥಾನಭೇರಿಯನ್ನು ಹೊಯ್ಸಿದನು. [10ಗ—] ಬಳಿಕ ಜ್ಯೋತಿಷ್ಕರು ಸೂಚಿಸಿದ ಶುಭಮುಹೂರ್ತದಲ್ಲಿ ಬಂದು ನಿಂತ ರಥದಲ್ಲಿ ಕುಳಿತು ರಾಜಮಾರ್ಗದಲ್ಲಿ ತನ್ನನ್ನು ನೋಡುವ ಆತುರದಿಂದ ಬಂದು ಸೇರಿದ್ದ [16—23] ಪುರಾಂಗನೆಯರಿಗೆ ನೇತ್ರಾನಂದವನ್ನು ಉಂಟುಮಾಡುತ್ತ ನಡೆದು ಊರಹೊರಗೆ ಕಾದಿದ್ದ [24ಗ] ಸೈನ್ಯವನ್ನೂ [25] ರಾಜರನ್ನೂ ನೋಡಿ [26] ನಿಜಶಿಬಿರವನ್ನು ಪ್ರವೇಶಿಸಿದನು. ಅಲ್ಲಿ [26ಗ—27] ಭೋಜನಮಾಡಿ [27] ತಾಂಬೂಲವನ್ನು ಸೇವಿಸುತ್ತ ವಿಶ್ರಮಿಕೊಂಡು [28ಗ] ಮರುದಿನ ಮಂಗಳವಾದ್ಯರಭಸದೊಡನೆ ಪೂರ್ವಾಭಿಮುಖನಾಗಿ (29ಗ) ಹೊರಟನು [29-38] ಹಸ್ತ್ಯಶ್ವರಥಪದಾತಿಗಳೂ ಸಂಗಡ ಹೊರಟವು (83—47] ಕೂಡಲೆ ಭರತನ ಪರಿವಾರಸ್ತ್ರೀಯರೂ ಅಂತಃಪುರಸ್ತ್ರೀಯರೂ ಸಾಗಿಬಂದರು. ಹೀಗೆ ಪ್ರಯಾಣಮಾಡುವಾಗ (48—54) ಶರತ್ಕಾಲದ ಬಿಸಲಿನ ತಾಪದಿಂದ ಎಲ್ಲರೂ ಬಳಲಿ [55—56] ಮೆಲ್ಲಗೆ ಗಂಗಾತೀರಕ್ಕೆ ಬಂದು (75–59) ಆನದಿಯ ಸೌಂದರ್ಯವನ್ನೂ [60-69] ತತ್ತಟವನದ ಮನೋಜ್ಞತೆಯನ್ನೂ ನೋಡಿ ಅಲ್ಲಿ ಬೀಡು ಬಿಟ್ಟರು. [71—82] ಅಲ್ಲಿ ಸ್ತ್ರೀಯರು ಯಥಾಯೋಗ್ಯವಾಗಿ ಲತಾಗೃಹಾದಿಗಳಲ್ಲಿ ವಿಶ್ರಮಿಸಿಕೊಂಡು ಶಾರದಾತಪವನ್ನೂ ಕಳೆದು ಬಳಿಕ (83—137) ವನದ ಸೌಂದರ್ಯವನ್ನು ನೋಡುತ್ತ ಪುಷ್ಪಾಪಚಯಮಿಷದಲ್ಲಿ ಬಳಲುತ್ತ ಚಿರಕಾಲ ವನವಿಹಾರಸು

ಖದಿಂದ ಸುಖಿಸಿ [139ಗ—157] ಜಲಕೇಳೀರಸಲೋಲರಾಗಿ ಗಂಗಾನದಿಯಲ್ಲಿ ವಿಹರಿಸಿದರು.

XII. ಮಾಗಧದರ್ಪದಳನ.

ಆವೇಳೆಗೆ [1—2] ಸೂರ್ಯಾಸ್ತಮಯಸಮಯವಾಯಿತು. [2ಗ] ಭರತನು ಸಂಧ್ಯಾಸಮಯೋಚಿತವಾದ ಜಿನೇಂದ್ರವಂದನೆಯನ್ನು ನೆರವೇರಿಸಿದನು. [4] ಕೂಡಲೆ ಸಂಧ್ಯಾರಾಗವು ಪ್ರಸರಿಸಿತು. [5—11] ಬಳಿಕ ಚಂದ್ರೋದಯವಾಗಿ ದಿಶಾಭಾಗಗಳೆಲ್ಲವೂ ಬೆಳದಿಂಗಳಿಂದ ಬೆಳ್ಳಗೆ ಕಂಗೊಳಿಸಿದುವು. ಆಗ ವಿಜಯಕಟಕಗದ ಸ್ತ್ರೀಪುರುಷರು [12—46] ಕೌಮುದೀಮಹೋತ್ಸವವನ್ನು ಆಸ್ವಾದಿಸಿದರು. [47—48] ಭರತನು ಆವಿನೋದಗಳನ್ನು ನೋಡಿಕೊಂಡು ಅಂತಃಪುರಕ್ಕೆ ಬಂದು ಸುಖಶಯನದಲ್ಲಿ ನಿದ್ರಿಸಿದನು. ಮರುದಿವಸ [49—53] ಮಂಗಳಪಾಠಕರವದಿಂದೆಚ್ಚೆತ್ತು [56] ಪ್ರಭಾತಕಾಲಕೃತ್ಯಗಳನ್ನು ಕೈಕೊಂಡು [56ಗ—61] ವಿಜಯಗಜೇಂದ್ರಾರೂಢನಾಗಿ [63] ಗಂಗಾತೀರದಲ್ಲಿ ಸೈನ್ಯದೊಡನೆ ನಡೆದು ಮಾರ್ಗದಲ್ಲಿ [25—28] ಅಲ್ಲಲ್ಲಿಯ ರಾಜರು ತಂದಿತ್ತ ಕಪ್ಪಗಳನ್ನು ಸ್ವೀಕರಿ [68ಗ] ಗಂಗಾದ್ವಾರದಲ್ಲಿ ಬೀಡುಬಿಡಿಸಿದನು. [74] ಅಲ್ಲಿ ಮೂರುರಾತ್ರಿವಾಸಮಾಡಿ [75] ಅಲ್ಲಿಂದ ಮುಂದೆ ಹೊರಟು ಗಂಗಾದ್ವಾರದಿಂದ ಲವಣಜಲಧಿಯನ್ನು ಪ್ರವೇಶಿಸಿ [76—79ಗ] ಸಮುದ್ರದ ಸೌಂದರ್ಯವನ್ನು ನೋಡುತ್ತ [80—84ಗ] ಸಮುದ್ರದಮೇಲೆ ರಥವನ್ನು ನಡಿಸಿಕೊಂಡು ಹನ್ನೆರಡು ಯೋಜನದವರೆಗೂ ಹೋದನು. ರಥವು [85] ಅಲ್ಲಿಂದ ಮುಂದೆ ನಡೆಯದೆ ನಿಂತು ಕೊಂಡಿತು. ಆದುದರಿಂದ [87ಗ] ಮಾಗಧನನ್ನು ಅಲ್ಲಿಂದಲೆ ಸಂಹರಿಸುವೆನೆಂದು ಧನುವನ್ನು ಏರಿಸಿ ಟಂಕಾರಮಾಡಿ ಮಾಗಧನ ಪಟ್ಟಣಕ್ಕೆ ಹೊಡೆದನು. [92—103] ಅದನ್ನು ನೋಡಿ ಮಾಗಧನು ಕೋಪಾವಿಷ್ಟನಾಗಿ ಶತ್ರುಸಂಹಾರಮಾಡುವೆನೆಂದು ಆರ್ಭಟಿಸುತ್ತಿದ್ದನು. ಅವನ ಮಾತುಗಳನ್ನು ಕೇಳಿ ಕುಲವೃದ್ಧರು ಬಂದು [906] 'ಇದು ಸಾಮಾನ್ಯಶರವಲ್ಲ; ಈವಿಷಯದಲ್ಲಿ ಸಾಮವೇ ಸಾಧು' ವೆಂದು ಉಪದೇಶಮಾಡಿ ಅವನಿಗೆ ಬುದ್ಧಿಗಲಿಸಿದರು]109] ಆಮಾತಿಗೆ ಒಪ್ಪಿಕೊಂಡು ಮಾಗಧನು ನಿಜನಗರದಿಂದ ಉಪಾಯನಗಳನ್ನು ತೆಗೆದುಕೊಂಡು ಹೊರಟುಬಂದು ಚಕ್ರಿಗೆ ಪದಾನತನಾಗಿ ಕಾಣಿಕೆಗಳನ್ನು ಒಪ್ಪಿಸಿದನು. ಚಕ್ರವರ್ತಿ ಅವನನ್ನು ಮನ್ನಿಸಿ ನಿಜನಗರಿಗೆ ಕಳುಹಿಸಿಕೊಟ್ಟು ನಿಜಶಿಬಿರಾಭಿಮುಖನಾಗಿ ಹೊರಟುಬಂದು ಸೇನಾನಿವೇಶವನ್ನು ಪ್ರವೇಶಿಸಿದನು.

XIII. ಷಟ್ಖಂಡಮಂಡಳವಿಜಯಂ.

[1-3ಗ] ಬಳಿಕ ಭರತನು ದಕ್ಷಿಣದಿಶಾಭಿಮುಖನಾಗಿ ಹೊರಟು ಲವಣಜಲಧಿಮಧ್ಯದಲ್ಲಿದ್ದ ವರತನುವನ್ನು ಜಯಿಸಿ ಕಪ್ಪವನ್ನು ತೆಗೆದುಕೊಂಡು [3ಗ] ಲವಣಸಮುದ್ರೋಪಸಮುದ್ರದ ನಡುವೆ ಇದ್ದ [4] ಪ್ರಭಾಸಾಮರನನ್ನು ಜಯಿಸಿ ಸಿಂಧುತೀರಕ್ಕೆ ಬಂದನು. [5–7] ಆವೇಳಗೆ ವಸಂತಕಾಲವು ಪ್ರಾಪ್ತವಾಯಿತು [8] ಆ ಕಾಲದಲ್ಲಿ [9-10] ವಿಜಯಾರ್ಧಪರ್ವತದ ಬಳಿಗೆ ಬಂದು ಅದರ ಸೌಂದರ್ಯವನ್ನು ನೋಡುತ್ತ ಅದರ ವನವೇದಿಕಾಪ್ರದೇಶಕ್ಕೆ ಸೇರಿ ಅಲ್ಲಿ [11ಗ] ಶಿಬಿರನಿವೇಶನವನ್ನು ಮಾಡಿದನು. [12-18] ಆಸಂಗತಿಯನ್ನು ಕೇಳಿ ಆಪರ್ವತದಲ್ಲಿದ್ದ ವಿಜಯಾರ್ಧನೆಂಬವನು ಬಂದು ಇದಿರುಗೊಂಡು ಭರತನಿಗೆ ಪುಣ್ಯೋದಕಸ್ನಾನವನ್ನು ಮಾಡಿಸಿ ತಾನು ತಂದಿದ್ದ ಸಾರವಸ್ತುಗಳನ್ನು ಕಾಣಿಕೆಕೊಟ್ಟು ಆಜ್ಞಾವಿಧೇಯನಾಗಿ ತನ್ನ ಸ್ಥಾನಕ್ಕೆ ಹೋದನು. [20] ಆಬಳಿಕ ಭರತನು ಅಲ್ಲಿಂದ ಪ್ರಯಾಣಮಾಡಿ ವಿಜಯಾರ್ಧವನ ವೇದಿಕೆಗೆ ಆಸನ್ನವಾದ ವಿಶಾಲಪ್ರದೇಶದಲ್ಲಿ ಬೀಡುಬಿಟ್ಟನು. [22] ಅಲ್ಲಿಗೆ ಕುರುರಾಜಾದಿಮೂರ್ಧಾಭಿಷಿಕ್ತರು ಬಂದು ಕಾಣಿಸಿಕೊಂಡು ಉತ್ತರಾರ್ಧವನ್ನೂ ಜಯಿಸಬೇಕೆಂದು ಚಕ್ರವರ್ತಿಗೆ ವಿಜ್ಞಾಪಿಸಿದರು. [23-31ಗ] ಆವೇಳೆಗೆ ಕೃತಮಾಳನೆಂಬ ಒಬ್ಬ ವ್ಯಂತರಾಮರನು ಅಲ್ಲಿಗೆ ಬಂದು ಅಮೂಲ್ಯವಾದ ರತ್ನಗಳನ್ನು ಅರ್ಪಿಸಿ ವಿಜಯಾರ್ಧಗುಹಾದ್ವಾರಪ್ರವೇಶದ ಉಪಾಯವನ್ನು ತಿಳಿಸಿ ಸನ್ಮಾನಿತನಾಗಿ ಹೊರಟುಹೋದನು. ಕೂಡಲೆ [32-41ಗ] ಭರತನು ಆವುಪಾಯವನ್ನು ಸೇನಾನಾಯಕನಿಗೆ ತಿಳಿಸಿ ತಮಿಸ್ರಗುಹೆಯ ಕವಾಟವನ್ನು ತೆರೆದು ಪಶ್ಚಿಮದ ಮ್ಲೇಚ್ಛಖಂಡವನ್ನು ವಶಮಾಡುವಂತೆ ಆಜ್ಞಾಪಿಸಿದನು. ಆತನು ದಂಡರತ್ನವನ್ನೂ ಕತಿಪಯಪರಿಜನವನ್ನೂ ಸಂಗಡ ತೆಗೆದುಕೊಂಡುಹೋಗಿ ಮ್ಲೇಚ್ಛಖಂಡವನ್ನು ಜಯಿಸಿ ಕೆಲರಾಜರನ್ನು ಸೆರೆವಿಡಿದು ತಂದು ಚಕ್ರವರ್ತಿಯ ಮುಂದೆ ನಿಲಿಸಿದನು. [42–44ಗ] ಬಳಿಕ ಭರತನು ಉತ್ತರಭರತವನ್ನು ಸ್ವೈವಸಮಾಡಿಕೊಳ್ಳಬೇಕೆಂದು ಹೊರಟು [45ಗ] ತನ್ನೊಡನೆ ಬಂದು ಸೇರಿದ ಆಂಧ್ರಕರ್ಣಾಟಾದಿಸೇನಾಸಮೇತನಾಗಿ ನಡೆದು [46ಗ] ವಿಜಯಾರ್ಧಾಚಳದ ತಮಿಸ್ರಗುಹಾದ್ವಾರವನ್ನು ಪ್ರವೇಶಿಸಿ [47–53ಗ] ಉತ್ತರಗುಹಾದ್ವಾರದಿಂದ ಹೊರಗೆ ಬಂದು [54-56] ಆ ಪರ್ವತದ ಉಪಕಂಠದಲ್ಲಿದ್ದ ವನದಲ್ಲಿ ಬೀಡುಬಿಟ್ಟನು. [56ಗ] ತರುವಾಯ ಪಶ್ಚಿಮಖಂಡವನ್ನು ಸ್ವಾಧೀನಮಾಡಿಕೊಂಡು ಮಧ್ಯಮಖಂಡಕ್ಕೆ ಮುತ್ತಿಗೆ ಹಾಕಿದನು. [57-67] ಆಗ ಚಿಳಾತಾವರ್ತರೆಂಬ ಇಬ್ಬರು ಮ್ಲೇಚ್ಛರಾಜರು ಯುದ್ಧಕ್ಕೆ ಬಂದು ಘಾತಪಾತಗಳನ್ನು ಮಾಡಿದರು. ಅವರನ್ನು ಜಯಕುಮಾರನು ಜಯಿಸಿ ಚಕ್ರವರ್ತಿಗೆ ವಶವರ್ತಿಗಳಾಗಿ ಮಾಡಿದನು. ಅನಂತರ ಚಕ್ರವರ್ತಿ ಅಲ್ಲಿಂದ ಹೊರಟು ಹಿಮವತ್ಪರ್ವತವನ್ನು [72-77ಗ] ಕಳೆದು ವೃಷಭಾಚಲಕ್ಕೆ ಹೋಗಿ ಸೇರಿ ಅಲ್ಲಿ ತನ್ನ ಪ್ರಶಸ್ತಿಯನ್ನು ಬರೆಯಿಸಿ ಅಲ್ಲಿಂದ ದಕ್ಷಿಣಾಭಿಮುಖನಾಗಿ

ನಡೆದು ವಿಜಯಾರ್ಧದಲ್ಲಿ ಬೀಡುಬಿಟ್ಟನು. ಅಲ್ಲಿ ಸೇನಾಪತಿ ಮ್ಲೇಚ್ಛಖಂಡವನ್ನು ಸಾಧಿಸಿ ದಕ್ಷಿಣೋತ್ತರಶ್ರೇಣಿಗಳ ವಿದ್ಯಾಧರರಾಜರಾದ ನಮಿವಿನಮಿಗಳನ್ನು ಕೈಸೆರೆಹಿಡಿದು ತಂದನು. ಅವರು ಚಕ್ರವರ್ತಿಗೆ ತಮ್ಮ ಸೋದರಿಯಾದ ಸುಭದ್ರೆಯನ್ನು ಕೊಟ್ಟು ವಿವಾಹಮಾಡಿದರು. ಬಳಿಕ ಭರತನು ಗುಹಾದ್ವಾರದಿಂದ ಹೊರಗೆ ಹೊರಟು ಬಂದು ಪೂರ್ವದಿಗ್ಭಾಗದ ಮ್ಲೇಚ್ಛಖಂಡವನ್ನು ಜಯಿಸಿ ಸಿದ್ಧದಿಗ್ವಿಜಯನಾಗಿ ಕೈಲಾಸಶೈಲಕ್ಕೆ ಬಂದುಸೇರಿದನು. ಅಲ್ಲಿ [82ಗ] ಧೂಳಿಶಾಳವೊದಲುಗೊಂಡು ವೃಷಭನಾಥನಾಸ್ಥಾನಮಂಟಪವನ್ನು ನೋಡುತ್ತ ಬಂದು ಸುರಾಸುರಸಭೆಯನಡುವೆ ಸಿಂಹಾಸನಾಸೀನನಾಗಿದ್ದ ಜಗತ್ತ್ರಯತಿಳಕನ ಪಾದಪದ್ಮಕ್ಕೆ ನಮಸ್ಕರಿಸಿ [83-90] ಅನೇಕಸ್ತವನಗಳಿಂದ ಸ್ತುತಿಸಿ ಪೂಜಿಸಿದನು.

XIV. ದಿಗ್ವಿಜಯಧ್ವಜಾರೋಹಣಂ.

ಬಳಿಕ ಭರತನು [1ಗ] ಸಮವಸರಣದಿಂದ ಹೊರಟು ನಿಜವಿಜಯಕಟಕಕ್ಕೆ ಬಂದು [2] ದಿಗ್ವಿಜಯದಲ್ಲಿ ಅರುವತ್ತುಸಾವಿರವರ್ಷಗಳು ಕಳೆದುಹೋದುವೆಂದು ಯೋಚಿಸಿ ಅಯೋಧ್ಯಾಪುರಾಭಿಮುಖನಾಗಿ ಪ್ರಯಾಣಮಾಡಿದನು. [3] ಪುರದ್ವಾರಕ್ಕೆ ಬಂದು ಪ್ರವೇಶಮಾಡುವ ಕಾಲದಲ್ಲಿ ಚಕ್ರರತ್ನವು ಪ್ರವೇಶಮಾಡದೆ ನಿಂತುಬಿಟ್ಟಿತು. ಅದನ್ನು ನೋಡಿ [4-6] ಕುಪಿತನಾಗಿ [6ಗ] ಪುರೋಹಿತನನ್ನು ಬರಿಸಿ [7—9] ಅದರ ಕಾರಣವನ್ನು ಕೇಳಿದನು. ಅವಕ್ಕೆ ಪುರೋಹಿತನು [9ಗ –17] ಬಾಹುಬಲಿ ಮೊದಲಾದ ಅವನ ಅನುಜರು ಮದೋದ್ಧತರಾಗಿರುವರೆಂದು ತಿಳಿಸಿದನು. [18—30] ಅದನ್ನು ಕೇಳಿ ಅವರನ್ನು ಜಯಿಸದಿದ್ದರೆ ತನ್ನ ದಿಗ್ವಿಜಯವೇ ವ್ಯರ್ಥವೆಂದು ಹೇಳಿ ಅವರಿಗೆ ದೂತರನ್ನು ಅಟ್ಟಿದನು. [31ಗ] ಅವರು ತಮ್ಮ ಬಳಿಗೆ ಬಂದ ದೂತನ ವಾಕ್ಯವನ್ನೂ ರಾಜಾದೇಶವನ್ನೂ ಕೇಳಿ [32—39] ಅಗ್ರಜನಿಗೆ ಅಧೀನರಾಗದೆ ರಾಜ್ಯವನ್ನು ತೊರೆದು ಸಮವಸರಣಕ್ಕೆ ಹೋಗಿ ದೀಕ್ಷೆಯನ್ನು ವಹಿಸಿದರು. [43ಗ] ಬಳಿಕ ಬಾಹುಬಲಿಗೆ ಲೇಖನವನ್ನು ಅಟ್ಟಿದನು. ದೂತನು ಅದನ್ನು ತೆಗೆದುಕೊಂಡುಹೋಗಿ ಬಾಹುಬಲಿಗೆ ಒಪ್ಪಿಸಿದನು. [46] ಬಾಹುಬಲಿ ಅದನ್ನು ಓದಿಸಿ ನೋಡಿ ಭರತನ ವಿಜಯವನ್ನೆಲ್ಲಾ ಬಿನ್ನವಿಸುವಂತೆ ದೂತನಿಗೆ ಆಜ್ಞಾಪಿಸಿದನು. ಆತನು ಸಾಂಗವಾಗಿ ವಿವರಿಸಿ [50-63] "ನನ್ನ ತಮ್ಮನೆನನಗೆ ನಮಸ್ಕರಿಸದಮೇಲೆ ಸಾಮ್ರಾಜ್ಯವೇ ನಿಷ್ಫಲವು" ಎಂದು ಯೋಚಿಸಿ ಚಕ್ರಿನನ್ನನ್ನು ಇಲ್ಲಿಗೆ ಕಳುಹಿಸಿದನೆಂದು ವಿಜ್ಞಾಪಿಸಿದನು. [63ಗ—81] ಅದಕ್ಕೆ ಬಾಹುಬಲಿ ಕುಪಿತನಾಗಿ ವಕ್ರೋಕ್ತಿಗಳಿಂದ ಅಗ್ರಜನ ದೋಷಗಳನ್ನು ಉದ್ಘಾಟಿಸಿ ಯುದ್ಧದಲ್ಲಿ ತನ್ನನ್ನು ಜಯಿಸಿದರೆ ಪಾದಗಳಿಗೆ ಎರಗುವೆನೆಂದು ಹೇಳಿ ದೂತನನ್ನು ಕಳುಹಿಸಿ ಯುದ್ಧಸನ್ನದ್ಧನಾಗುತ್ತಿದ್ದನು.

ಇತ್ತ ಭರತನು ಬಾಹುಬಲಿಯ ಯುದ್ಧೋದ್ಯಮವನ್ನು ದೂತಮುಖದಿಂದ ತಿಳಿದು ಸೇನಾಸಮೇತನಾಗಿ ಪೌದನಪುರಾಭಿಮುಖನಾಗಿ ಹೊರಟನು. [90-92]

ಅತ್ತ ಬಾಹುಬಲಿಯೂ ಸನ್ನದ್ಧನಾಗಿ ಯುದ್ಧಭೂಮಿಗೆ ಬಂದು ನಿಂತನು [93—99] ಎರಡು ಸೇನೆಗಳೂ ಬಂದನ್ನೊಂದು ಇದಿರಿಸಿ ಯುದ್ಧಾರಂಭವ್ಯಗ್ರಗಳಾಗಿದ್ದುವು. [100ಗ] ಆಕಾಲದಲ್ಲಿ ಉಭಯಪಕ್ಷದ ಮಂತ್ರಿಯುವರ್ಯರೂ ಯುದ್ಧದಿಂದ ಪ್ರಾಣಿವಧೆಯಾಗುವುದೆಂದು ಸಂತಾಪಪಟ್ಟು ಭರತನಲ್ಲಿಗೆ ಬಂದು [101] "ನೀವು ನಿಮ್ಮಿಬ್ಬರ ದೃಷ್ಟಿಯುದ್ಧ ಜಲಯುದ್ಧ ಮಲ್ಲಯುದ್ಧದಲ್ಲೆ ಜಯವನ್ನು ಒಪ್ಪಿಕೊಳ್ಳಿರಿ. ಈ ಜನಕ್ಷಯದಿಂದ ಬರುವ ಪಾಪವನ್ನು ಏತಕ್ಕೆ ಕಟ್ಟಿಕೊಳ್ಳಬೇಕು" ಎಂದು ಹೇಳಿ ಒಡಂಬಡಿಸಿದರು. [104ಗ] ಹಾಗೆಯೇ ಬಾಹುಬಲಿಯನ್ನೂ ಸಮ್ಮತಿಪಡಿಸಿದರು. [105] ಬಳಿಕ ಅದೇ ರೀತಿಯಲ್ಲಿ ದೃಷ್ಟಿಯುದ್ಧ [106—108ಗ] ಜಳಯುದ್ಧ [109—113] ಮಲ್ಲಯುದ್ಧಗಳು ನಡೆದುವು. ಮೂರರಲ್ಲೂ ಭರತನಿಗೆ ಸೋಲವಾಯಿತು. ಅದಕ್ಕೆ ಭರತನು ಕುಪಿತನಾಗಿ ತಮ್ಮನ ಮೇಲೆ ಚಕ್ರರತ್ನವನ್ನು ಪ್ರಯೋಗಿಸಿದನು. ಅದರಿಂದಲೂ ಏನೂ ಸಾಗಲಿಲ್ಲ. [—126] ಆದರೆ ಬಾಹುಬಲಿ ರಾಜ್ಯವಿಮೋಹವು ಆರೀತಿಯಾದ ದುರ್ವ್ಯಸನಕ್ಕೆ ಅವಕಾಶವನ್ನು ಉಂಟುಮಾಡುವುದೆಂದು ಭಾವಿಸಿ ವೈರಾಗ್ಯವನ್ನವಲಂಬಿಸಿ [133ಗ] ಮಹಾಬಲಿಯೆಂಬ ತನ್ನ ಕುಮಾರನಿಗೆ ಪಟ್ಟಾಭಿಷೇಕಮಾಡಿ [136ಗ] ಕೈಲಾಸದಲ್ಲಿದ್ದ ಪುರಪರಮೇಶ್ವರನ ಸಮವಸರಣಕ್ಕೆ ಹೋಗಿ ಜಿನದೀಕ್ಷೆಯನ್ನು ಅಂಗೀಕರಿಸಿ ಪ್ರತಿಮಾಯೋಗದಿಂದ ಜ್ಞಾನಾವಿರ್ಭಾವವನ್ನು ಪಡೆದು ಆದಿದೇವನ ಸನ್ನಿಧಿಯಲ್ಲಿ ನಿಂತನು.

XV. ಉಪಾಸಕಾಧ್ಯಯನವರ್ಣನಂ.

ಬಳಿಕ ಭರತಚಕ್ರವರ್ತಿ [1—2] ಪಟ್ಟಾಭಿಷಿಕ್ತನಾಗಿ [3—4] ಭರತಮಂಡಲವನ್ನು ಪಾಲಿಸುತ್ತಿದ್ದನು. [6] ಒಂದುಕಾಲದಲ್ಲಿ ಆತನು ಜಿನಪೂಜೋತ್ಸವವೆಂಬ ಉತ್ಸವವನ್ನು ಮಾಡಿ ಪಾತ್ರವರಿತು ದಾನಮಾಡಬೇಕೆಂದು ಯೋಚಿಸಿದನು. ಋಷಿಗಳು ದಾನವನ್ನು ಕೊಳ್ಳದುದರಿಂದ ಗೃಹಸ್ಥರಲ್ಲಿ ಯೋಗ್ಯರನ್ನು ತಿಳಿವುದಕ್ಕಾಗಿ ಒಂದು ಉಪಾಯವನ್ನು ಮಾಡಬೇಕೆಂದು ಒಂದು ಉತ್ಸವವನ್ನು ಮಾಡಿ [7] ರಾಜಾಂಗಣದಲ್ಲಿ ಫಲಕುಸುಮಪ್ರವಾಳಾದಿಗಳನ್ನು ಕೆದರಿಸಿ ಜನರನ್ನು ಬರಿಸಿದನು. [8] ಕೆಲವರು ಅವುಗಳನ್ನು ತುಳಿದುಕೊಂಡುಹೋದರು; ಕೆಲವರು ಹೋಗದೆ ಹೊರಗೆ ನಿಂತುಬಿಟ್ಟರು. [9] ಹಾಗೆ ನಿಂತವರನ್ನು ರಾಜನು ಬೇರೆ ಬಾಗಿಲಿಂದ ಬರಿಸಿಕೊಂಡು ಅವರು ಹೊರಗೆ ನಿಂತುದಕ್ಕೆ ಕಾರಣವೇನೆಂದು ಪ್ರಶ್ನೆ ಮಾಡಿದನು. ಫಲಾದಿಗಳಲ್ಲಿ ಜೀವರಾಶಿಯಿರುವುದರಿಂದ ಪರ್ವದಿನಗಳಲ್ಲಿ ತುಳಿಯಲಾಗದೆಂದು ಅವರು ಹೇಳಿದರು. [11ಗ] ಅದನ್ನು ಕೇಳಿ ಭರತನು ಸಂತುಷ್ಟನಾಗಿ ಅವರು ದಾನಸನ್ಮಾನಕ್ಕೆ ಯೋಗ್ಯರೆಂದು ನಿಶ್ಚಯಿಸಿ ತಪನೀಯಸೂತ್ರದಲ್ಲಿ ಏಕಾದಿಯಾಗಿ ಏಕೋತ್ತರದಶಪರ್ಯಂತ ಬ್ರಹ್ಮಸೂತ್ರಾಭಿಧಾನಯಜ್ಞೋಪವೀತದಿಂದ ಅವರನ್ನು ಪವಿತ್ರಗಾತ್ರರಾಗಿಮಾಡಿ [12] ಅವರಿಗೆ ಬೇಡಿದುದನ್ನು ಕೊಟ್ಟು ಮನ್ನಿಸಿದನು. [13] ಬಳಿಕ ಅವರಿಗೆ ಆರ್ಯಷಟ್ಕರ್ಮಗಳನ್ನು ಉಪದೇಶಿಸಿ [14] ಈ ಷಟ್ಕರ್ಮಗಳನ್ನು

ನಡಿಸುವವರು ದ್ವಿಜರೆಂದೂ [15] ನಡಿಸದವರು ಅಲ್ಲವೆಂದೂ ಹೇಳಿ [16ಗ—18] ಅವರು ಮಾಡಬೇಕಾದ ಕರ್ಮಗಳನ್ನೆಲ್ಲಾ ಉಪದೇಶಿಸಿದನು. [20] ಅದರಿಂದೀಚೆಗೆ ಬ್ರಾಹ್ಮಣರು ಪ್ರಖ್ಯಾತರಾದರು. ಹೀಗಿರುತ್ತಿರುವಲ್ಲಿ [21ಗ] ಭರತನು ಒಂದು ದಿವಸ ದುಸ್ಸ್ವಪ್ನವನ್ನು ಕಂಡು ಅದರ ಫಲವನ್ನು ವೃಷಭೇಶ್ವರನಲ್ಲಿಗೆ ಹೋಗಿ ಕೇಳಿದನು [22—43] ಜಿನಮತಕ್ಷಯವಾಗುವುದೇ ಮೊದಲಾದ ಅದರ ಫಲಗಳನ್ನು ಅವನು ವಿವರಿಸಿ ಹೇಳಿದನು. ಅದನ್ನು ತಿಳಿದು ಭರತನು ಅವನನ್ನು ಪೂಜಿಸಿ ಸ್ವಸ್ಥಾನಕ್ಕೆ ಬಂದು ದುಸ್ಸ್ವಪ್ನದೋಷನಿವಾರಣಾರ್ಥವಾಗಿ ಕಲ್ಪವೃಕ್ಷಾದಿಮಹಾಮಹಿಮಗಳನ್ನೂ ಶಾಂತಿಕ್ರಿಯೆಗಳನ್ನೂ ಮಾಡಿಸುತ್ತಿದ್ದನು.

XVI. ಪರಿನಿರ್ವಾಣಕಲ್ಯಾಣವರ್ಣನಂ.

ಭರತನು ಅನೇಕಚೈತ್ಯಾಲಯಗಳನ್ನು ಕಲ್ಪಿಸಿ ಅವುಗಳಲ್ಲಿ ಆದಿಭಟ್ಟಾರಕನ ಪ್ರತಿಮೆಯೇ ಮೊದಲಾದ ಅನೇಕಬಿಂಬಗಳನ್ನು ಪ್ರತಿಷ್ಠಿಸಿ ಅಭಿಷೇಕಿಸಿ ಅರ್ಚಿಸಿ [3—10] ಕನ್ನಡಪದ್ಯಗಳಿಂದಲೂ [1 —36] ಸಂಸ್ಕೃತಶ್ಲೋಕಗಳಿಂದಲೂ ಸ್ತುತಿಸಿ ಧರ್ಮದಿಂದ ರಾಜ್ಯಭಾರಮಾಡುತ್ತಿದ್ದನು. [40] ಅದನ್ನು ಕಂಡು 'ಯಥಾ ರಾಜಾ ತಥಾ ಪ್ರಜಾಃ' ಎಂಬರೀತಿಯಲ್ಲಿ ಪ್ರಜೆಗಳೂ ಧರ್ಮಪ್ರಿಯರಾಗಿದ್ದರು.

ಅತ್ತ ವೃಷಭನಾಥನು [40ಗ] ಚತುರುತ್ತರಾಶೀತಿಲಕ್ಷಪೂರ್ವಗಳಲ್ಲಿ ಹದಿನಾಲ್ಕು ದಿವಸದಾಯುಃಶ್ಯವಿರುವಾಗ ಕೈಲಾಸಪರ್ವತದ ಸಿದ್ಧಕೂಟದಲ್ಲಿ ಪೌಷ್ಯಮಾಸದ ಪೂರ್ಣಿಮಾದಿನದಲ್ಲಿ ಯೋಗಪಲ್ಯಂಕಾಸನದಲ್ಲಿ ಪೂರ್ವಾಭಿಮುಖನಾಗಿ ಇದ್ದನು.

ಇತ್ತ ಭರತಾದಿಗಳು [41—48] ಸ್ವಪ್ನಗಳನ್ನು ಕಂಡು ಅವುಗಳ ಫಲವನ್ನು ಕೇಳಿದರು. [49] ಅವು ಆದಿದೇವನು ಮೋಕ್ಷವನ್ನು ಹೊಂದುವುದನ್ನು ಸೂಚಿಸುವುವೆಂದು ಪುರೋಹಿತನು ತಿಳಿಸಿದನು [50] ಕೂಡಲೆ ಭರತನು ಅಲ್ಲಿಗೆ ಹೋಗಿ ಭಟ್ಟಾರಕನಿಗೆ ಪ್ರದಕ್ಷಿಣೆಮಾಡಿ ಮಹವೆಂಬ ಪೂಜೆಯನ್ನು ಮಾಡಿದನು. ವೃಷಭನಾಥನೂ ಅನೇಕ ವ್ರತಗಳನ್ನು ಮಾಡಿ [51] ಮಾಘಮಾಸದ ಕೃಷ್ಣಚತುರ್ದಶಿಯಂದು ಅಭಿಜಿನ್ಮುಹೂರ್ತದಲ್ಲಿ ಮೋಕ್ಷಕ್ಕೆ ಸಂದನು. [60] ಆಕಾಲದಲ್ಲಿ ಚತುರ್ವಿಧಾಮರರು ಪರಿನಿರ್ವಾಣಕಲ್ಯಾಣೋತ್ಸವವನ್ನು ಅತ್ಯಾನಂದದಿಂದ ನೆರವೇರಿಸಿ ತಮ್ಮ ತಮ್ಮ ಸ್ಥಾನಗಳಿಗೆ ಹೊರಟುಹೋದರು. ಭರತನು ಅಯೋಧ್ಯೆಗೆ ಬಂದು ರಾಜ್ಯವಾಳುತ್ತಿದ್ದನು. ಅವನಿಗೆ ಮುಪ್ಪು ಬಂದಿತು. ಕೂಡಲೆ ರಾಜ್ಯವಿಮುಖನಾಗಿ ಕೈಲಾಸಕ್ಕೆ ನಡೆದು ದೀಕ್ಷೆಯನ್ನು ವಹಿಸಿ ಮೋಕ್ಷವನ್ನು ಹೊಂದಿದನು. ಬಳಿಕ ವೃಷಭಸೇನಗಣಧರರೂ ಪುರುಸುತರೂ ಅಕ್ರಮದಲ್ಲಿಯೇ ದೀಕ್ಷೆಯನ್ನು ಕೈಕೊಂಡರು.

ಈ ಗ್ರಂಥವು [76—77] ಶಕವರ್ಷ 863 ನೆಯ ಪ್ಲವಸಂವತ್ಸರದ ಕಾರ್ತಿಕ ಶುಕ್ಲಪಂಚಮಿ ಸೋಮವಾರದಲ್ಲಿ ಪೂರ್ಣವಾಯಿತು.

ಶ್ರೀ

ಪಂಪಮಹಾಕವಿವಿರಚಿತಂ

ಆದಿಪುರಾಣಂ.

ಪ್ರಥಮಾಶ್ವಾಸಂ.

ಶ್ರೀದೇವೇಂದ್ರಮುನೀಂದ್ರವಂದಿತಗುಣವ್ರಾತಂ[1]ಜಗತ್ಸ್ವಾಮಿ ಸಂ
ದಾದಿಬ್ರಹ್ಮನಗಾಧಬೋಧನಿಳಯಂ ದುರ್ವಾರಸಂಸಾರವಿ।
ಚ್ಛೇದೋಪಾಯನಿಯುಕ್ತಸೂಕ್ತಿ ವೃಷಮಾರ್ಗಾಗ್ರೇಸರಂ[2]ಪಾಪಹೃ
ತ್ಪಾದಾಬ್ಜಂ ದಯೆಗೆಯ್ವನಕ್ಕೆಮಗೆ ಮುಕ್ತಿಶ್ರೀಸುಖಾವಾಪ್ತಿಯಂ॥ ೧

ಪೆಣೆದೆಂಟುಂ[3] ಕಿಲ್ಬಿಷಂಗಳ್ಕಿಡೆ ಕಿಡದ ಗುಣಂ ಪೊರ್ದೆ ಬಂದೆಂಟುಮಾದಂ
ತಣಿವಂ ಕೈಕೊಂಡಮೂರ್ತರ್ಜರಮತನುಸಮಾಕಾರರುದ್ಧತಲೇಪರ್
ಪ್ರಣುತರ್ನಿತ್ಯರ್ಜಗನ್ಮಂಗಳನಿಳಯರನಂತತ್ರಿಲೋಕೈಕಚೂಡಾ
ಮಣಿಗಳ್ಸಿದ್ಧರ್ ಸ್ವಕೀಯಪ್ರಭುತೆಯನೆಮಗಂ ಮಾಳ್ಕಿತಿಪ್ರೀತಿಯಿಂದಂ॥ ೨

ಮೂವತ್ತಾಱುಂ ಗುಣಂಗಳ್ತಮಗಮರ್ದಿರೆ ಸಂದೈದುಮಾಚಾರದೊಳ್ಸ
ದ್ಭಾವಂ ಕೈಗಣ್ಮೆ ಶಿಷ್ಯಾಚರಣವಿಧಿಗಳಂ ತಿರ್ದಿ ಕಾರುಣ್ಯದಿಂದಂ।
ಸಾವದ್ಯಂ ಸಾರದಂತಾಗಿರೆ ನಿಯಮಿಸುವಾಚಾರ್ಯರಿನ್ನೆಮ್ಮನೇನೋ
ದಾವಂ ತಳ್ತಿಪ್ಪುದಂ[4]ತೋಸರಿಸಿ ಕಳೆಗೆ ಸಂಸಾರಕಾಂತಾರದಿಂದಂ॥ ೩

ಹೇಯಂಗಳ್ ಖಳಕರ್ಮಬಂಧನಕರ[5]ಕ್ರೋಧಾದಿಗಳ್ ಮತ್ತುಪಾ[6]
ದೇಯಂಗಳ್ ದುರಿತೇಂಧನಾನಳಲಸದ್ರತ್ನತ್ರಯಂಗಳ್ ಸುಖೋ।

---

[1] ಖ. ಗ.—ಬ್ರಾತಂ. [2] ಗ.—ಸ್ವರಂ. [3] ಗ.—ದೆಂದುಂ.
[4] ಕ. ಗ.—ತಳ್ತಳುರದಂ. [5] ಕ. ಖ.—ಸರಕ. [6] ಕ.—ತಳ್ತುಪಾ.

ಪಾಯಂಗಳ್ಗಡಿಮೆಂದು ಭವ್ಯಜನಮಂ ಕಣ್ಣೂಱಿ ಕಲ್ಪಿಪ್ಪಪಾ
ಧ್ಯಾಯಜ್ಯೋತಿಸು[1]ಗೆಮ್ಮ ಚಿತ್ತಗೃಹದೊಳ್ರತ್ನತ್ರಯಜ್ಯೋತಿಯಂ ॥ ೪

ಬಗೆಯೊಳ್ಪೊಣ್ಮೆ ದಯಾರಸಂ ಚರಿತದೊಳ್ಕೈಗಣ್ಮೆ ಚಾರಿತ್ರಮಾ
ವಗಮಾವಶ್ಯಕದೊಳ್ತಗುಳ್ದು ಪಲವುಂ ಶೀಲಂಗಳಂ ತಾಳ್ದಿ ದಂ ।
ದುಗವೆಂದುಂ[2]ತಮಗಾಗದಂತೆಸಗುವರ್ಸರ್ವೋತ್ತಮರ್ಸರ್ವಸಾ
ಧುಗಳೋರಂತೆ ಕಳಲ್ಚುಗೆಮ್ಮಮನದಿಂ ದುರ್ಮೋಹ[3]ಸಂದೋಹಮಂ ॥ ೫

ಕಾರ್ಯಮೆಮಗಿದುವೆ ಶಿವಪದ
ಪರ್ಯಂತಂ ಬರಮಶೇಷಮುದ್ಧರಿಸುಗೆ ತಾ ।
ತ್ಪರ್ಯದಿನರ್ಹತ್ಸಿದ್ಧಾ
ಚಾರ್ಯೋಪಾಧ್ಯಾಯಸರ್ವಸಾಧುಗಳೆಮ್ಮಂ ॥ ೬

ವರದಂ ಪದ್ಮಾಂಕಿತಂ ತೋಳೆರಡು ನಿಶಿತವಜ್ರಪ್ರಭಾಭಾಸುರಂ ತೋ
ಳೆರಡುದ್ಯಚ್ಚಕ್ರಚಕ್ರೋಜ್ಜ್ವಳತರತರಳ[4]ಜ್ಯೋತಿ ತೋಳೆಂಟುಗುರ್ವಾ ।
ಗಿರೆ ಬಣ್ಣಂ ಪೊನ್ನಬಣ್ಣಕ್ಕೆಣೆಯೆನೆ ಗರುಡಂ ವಾಹಮಾಗಿರ್ಪ ಚಕ್ರೇ
ಶ್ವರಿ ಭಾಸ್ವದ್ಧರ್ಮಚಕ್ರಾಕ್ರಮಿಗಳನಲೆದಾಟಕ್ಕೆ ವಿಕ್ರಾಂತದಿಂದಂ ॥ ೭

ಪರಶುಫಳಾಕ್ಷಸೂತ್ರವರದೋಚಿತಚಿಹ್ನಚತುರ್ಭುಜಂ ಮನೋ
ಹರವೃಷಲಾಂಛನಂ ವೃಷಮುಖಂ ವೃಷವಾಹನನಿಂದುಕುಂದಸುಂ ।
ದರ[5]ತರವರ್ಣನೀವೃಷಭನಾಥಕಥಾರಚನೋಕ್ತಿಯಲ್ಲಿ ಮಾ
ಳ್ಕೆರದೆಮಗಾಗಳುಂ[6] ವೃಷಭಯಕ್ಷನವಿಘ್ನಮನಃಪ್ರವೃತ್ತಿಯಂ ॥ ೮

ಪರಮಜಿನೇಂದ್ರವಾಣಿಯು[7] ಸರಸ್ವತಿ ಬೇಱಿದು ಪೆಣ್ಣ ರೂಪ[8]ಮಂ
ಧರಿಯಿಸಿ ನಿಂದುದಲ್ತದುವೆ ಭಾವಿಸಿಯೋದುವ ಕೇಳ್ವ ಪೂಜಿಪಾ ।
ದರಿಸುವ ಭವ್ಯಕೋಟಿಗೆ ನಿರಂತರಸೌಖ್ಯಮನೀವುದಾನದ
ರ್ಕೆರೆದಪೆನಾಸರಸ್ವತಿಯೆ ಮಾಳ್ಕೆಮಗಿಲ್ಲಿಯೆ ವಾಗ್ವಿಳಾಸಮಂ ॥ ೯

ಅನುಯೋಗಕುಸುಮಪಾದಪ
ಮನೇಕನಯಲತಿಕಮಂಗಫಲಮಹಿಜಂ ಸ ।

1ಗ.—ದ್ಯೋತಿಸು. 2ಕ. ಗ.—ವೊಂದುಂ. 3ಗ.—ದೆಂದುಂ ಮೋಹ. 4ಗ.—ತರಳತರ.
5ಖ.—ಸಾಂದರ. 6ಖ.—ಳ್ಕೆಮಗಿರದಾಗಳುಂ. 7ಖ.—ವಾಣಿಯೆ. 8ಕ. ಗ.—ರೂಪು.

ದ್ವನಜವನವೆಮಗೆ ವಿಶ್ರಮ[1]
ವನಮಕ್ಕತಿವಿಶ್ರುತಶ್ರುತಸ್ಕಂದವನಂ ॥ ೧೦

ಶ್ರೀಮತ್ಸಮಂತಭದ್ರ
ಸ್ವಾಮಿಗಳ ಜಗತ್ಪ್ರಸಿದ್ಧಕವಿಪರಮೇಷ್ಠಿ ।
ಸ್ವಾಮಿಗಳ ಪೂಜ್ಯಪಾದ
ಸ್ವಾಮಿಗಳ ಪದಂಗಳೀಗೆ ಶಾಶ್ವತಪದಮಂ ॥ ೧೧

ಆರ್ಯನುತಗೃಧ್ರಪಿಂಛಾ
ಚಾರ್ಯಜಟಾಚಾರ್ಯವಿಶ್ರುತಶ್ರುತಕೀರ್ತ್ಯಾ ।
ಚಾರ್ಯಪುರಸ್ಸರಮಪ್ಪಾ
ಚಾರ್ಯಪರಂಪರೆಯೆ ಕುಡುಗೆ ಭವ್ಯೋತ್ಸವಮಂ ॥ ೧೨

ಎಮಗೆ ಮಲಧಾರಿಸಿದ್ಧಾಂ
ತಮುನೀಶ್ವರಚರಣಸರಸಿಜಾತಂ ದೇವೇಂ ।
ದ್ರಮುನಿಪದಾಬ್ಜಂ ಜಯನಂ
ದಿಮುನಿಕ್ರಮಕಮಳಮೀಗೆ ಬೋಧೋದಯಮಂ ॥ ೧೩

ಮುನಿಜನದೋದಿಸಿದೋಜೆಯೊ
ಳನುಮದಿಪ್ಪುದಿದೊಂದೆ[2] ಕೊಂಡಕುಂದಾನ್ವಯನಂ ।
ದನವನಶುಕಮೆಂದೆನಗಿನಿ
ಸನುಗ್ರಹಂಗೆಯ್ಗೆ ಕರುಣದಿಂ ಮುನಿನಿವಹಂ ॥ ೧೪

ಪರಮಜಿನಮಾಲೆ ವರಗಣ
ಧರಮಾಲೆ ಮುನೀಂದ್ರಮಾಲೆ ಮುನಿಮಾಲೆ ನಿರಂ ।
ತರಮೀಗೆ ಭವ್ಯಮಾಲೆಗೆ
ಪರಾರ್ಥ್ಯಗುಣರತ್ನಮಾಲೆಯಂ ದಯೆಯಿಂದಂ ॥ ೧೫

ತಮಮಂ ದ್ಯುಮಣಿಮಯೂಖೋ
ದ್ಗಮಮಲೆವವೊಲಲೆಗೆ ಜಗದ ಮಿಥ್ಯಾತ್ವತಮ ।

---

[1] ಕ.—ವಿಶ್ರುತ. [2] ಕ.—ದೊಂದು.

ಸ್ತಮುಮನಕಳಂಕದೇವ
ಪ್ರಮಾಣರತ್ನಪ್ರದೀಪರಶ್ಮಿಕಳಾಪಂ ‖ ೧೬

ಮೃದುಪದಗತಿಯಿಂ ರಸಭಾ
ವದ ಪೆರ್ಚಿಂ ಪಣ್ಯವನಿತೆವೋಲ್[1] ಕೃತಿ ಸಾಂದ ।
ರ್ಯದ ಚಾತುರ್ಯದ ಕಣಿಯೆನೆ
ವಿದಗ್ಧಬುಧಜನದ ಮನಮನಲೆಯಲೆ ವೇಡಾ[2] ‖ ೧೭

ಕಿವಿಯಿಂ[3] ಬಗೆವುಗುವೊಡೆ ಕೊಂ
ಕುವೆತ್ತ ಪೊಸನುಡಿಯೆ ಪುಗುಗುಮುಳದುದು ಸಬುಸ್ಸೈ ।
ತವಚಲನೆ ಮಾಡಿ ಸಬುಸ್ಸೈ
ತು ಪೋಕುಮೇಂ ಬಗೆಯ ಬಟ್ಟೆಯುಂ ಮುಟ್ಟುಗುಮೇ ‖ ೧೮

ಮೃದುಮಧುರವಚನರಚನೆಯೊ
ಳು[4]ದಾತ್ತಮರ್ಥಪ್ರತೀತಿಯುಂ ಕ್ರೇಳ್ಳ ಜನ ।
ಕ್ಕೆದಿರೊಳ್ಕು[5]ಡಧ್ವಂದದು[6] ಕ
ಬ್ಬದೊಳಿರ್ದುಂ ಕವಿಯ ಮನದೊಳಿರ್ದಂತೆ ವಲಂ[7] ‖ ೧೯

ಕವಿತಾರಹಸ್ಯಮಂ ಸ
ತ್ಕವಿಯಱಿಗುಮನೇಕಮೂಕನೇಡಂ ಜಡನೆಂ ।
ಬವನಱಿಗುಮೆ ವಿಟನಱಿಗುಂ
ಕುವಿಟಂ ಸ್ತ್ರೀರತರಹಸ್ಯದೊಳಗಱಿದಪನೇ ‖ ೨೦

ಭಾಷಾವಿದರ್ಕವಿತ್ವವಿ
ಶೇಷಜ್ಞರ್ನಿಕಷರಪ್ಪೊಡಪ್ಪುದು ಸಭೆಯೊಳ್ ।
ಮೆ ಷಾಷಮುಖದಂತೆ[8] ದೋಷಗ
ವೇಷಣಪರರಪ್ಪರೆಂದೊಡದು ತೆಗಟಲ್ತೆ ‖ ೨೧

---

[1]ಕ.–ಪುಣ್ಯವನಿತೆಯೊಲ್. [2]ಖ.–ನಲೆಯಲ್ವೇಡಾ. [3]ಗ.–ಕಿವಿಗಿಂ. [4]ಖ.–ಯನು. [5]ಖ.–ದಿರ್ಗೊಳಿಕು ; ದಿಱೊಳಿಕು. [6]ಕ.–ದಂದುಂ. [7]ಕ.–ವೊಲಂ. [8]ಕ.–ಮಾಷ ಮುಖರಂತೆ ; ಗ.–ಮೇಷಮುಖದಂತೆ.

ಧಿಷಣರ ಕೃತಿಗಳೊಳೆಸೆವಖಿ
ಲಷಿತಗುಣಂಗಳನೆ ಬಿಸುಟು ಮಾತ್ಸರ್ಯಮಹಾ।
ವಿಷಮುಮತಿಯಿಂದೆ ದೋಷಾ
ಮಿಷಮನೆ[1] ಪೊರ್ದಿಪರ್ವಲ್ತೆ ಕುಕವಿಬಕಂಗಳ್॥ ೨೨

*ಕೋಗಿಲೆಯ ಸರವರಣ್ಯದೊ
ಳೇಗೆಯ್ದುದೊ ಮೂರ್ಖಜಡಜನಾರಣ್ಯದೊಳಿಂ।
ಪೋಗಡಿಸಿದ ಕವಿಶಬ್ದಮ
ದೇಗೆಯ್ದುದರಣ್ಯರುದಿತಮುದು ಬಗೆವಾಗಳ್॥ ೨೩

ಇರು ಮರುಳೆ ಶುಷ್ಕವೈಯಾ
ಕರಣಂಗಂ ಶುಷ್ಕತಾರ್ಕಿಗಂಗಂ ಬೆಳ್ಳ।
ಕ್ಕರಿಗಂಗಂ ವಿಷಯಮೆ ಕಾ
ವ್ಯರತ್ನಮತಿಚತುರಕವಿಕದಂಬಕವಿಷಯಂ॥ ೨೪

ಗುರು ದೇವೇಂದ್ರಮುನೀಂದ್ರನಿಂದ್ರನಮಿತಂ ದೇವಂ ಕಥಾನಾಯಕಂ
ಪುರುದೇವಂ ಕಥೆಯುಂ ತದಾದಿಪುರುಷಪ್ರಸ್ತುತ್ಯಜನ್ಮಾಳಿಬಂ।
ಧುರಮೊಂದಂದೆ ಮದೀಯವಾಗ್ವಿಭವವಿನ್ಯಾಸಂ ಬಲಂಬೆತ್ತುದಿ
ನ್ನಿರು ಬಲ್ಲಿತ್ತು ಐ ಕೋಡು ಕೂರಿತದನಂತಿಂತುಂತೆನಲ್ಬ[2]ರ್ಕರ್ಮೋ॥ ೨೫

ವಿದಿತಂಪ್ರಾತೀತಿಕಂ[3] ಕೋಮಳಮತಿಸುಭಗಂ ಸುಂದರಂ ಸೂಕ್ತಿಗರ್ಭಂ
ಮೃದುಸಂದರ್ಭಂ ವಿಚಾರಕ್ಷಮಮುಚಿತಪದಂ ಶ್ರವ್ಯಮವ್ಯಾಕುಳಂವ್ಯಾ।
ಪ್ತದಿಗಂತಂ ಕಾವ್ಯಮೆಂದನ್ವಿತಸುಕವಿಜನಂ ಮೆಚ್ಚೆ ನಿಚ್ಚಂ ಮನಂಗೊ
ಳ್ವುದಱಿಂದಂನೆಟ್ಟನೀತಂಸುಕವಿಜನಮನೋಮಾನಸೋತ್ತಂಸಹಂಸಂ॥ ೨೬

ಇದು ನಿಚ್ಚಂ ಪೊಸತರ್ಣವಂಬೊಲತಿಗಂಭೀರಂ ಕವಿತ್ವಂ ಜಗ
ಕ್ಕದಱಿಂದಂ ಕವಿತಾಗುಣಾರ್ಣವನಿಳಾಲೋಕೈಕವಿಖ್ಯಾತನ।

---

[1] ಖ.—ಮಹಾ। ವಿಷಮತೆಯಿಂ ಪೊಸಯಿಸಿ ತಾಂ। ವಿಷಮನೆ . . .॥
[2] ಕ.—ನಂತಿಂತೆಂದೆನಲ್ಬ. [3] ಗ.—ವಿದಿತಪ್ರಾತೀತಿಕಂ.
* ಈಪದ್ಯವು ಖ. ಗ. ಗಳಲ್ಲಿಲ್ಲ.

ಭ್ಯುದಯಪ್ರಾಪ್ತಿನಿಮಿತ್ತಮುತ್ತಮಯಶಂ ಸಂಸಾರದೊಳ್ಸಾರವ
ಪ್ಪುದಱಿಂ[1] ಧರ್ಮವುದಂ ನಿಮಿರ್ಚುವುದಱಿಂ ಸಂಸಾರಸಾರೋದಯಂ ॥

ಅತಿಸುಭಗೆಗೆ ಸಂದ ಸರ
ಸ್ವತಿಗೀತನ ಲಲಿತವಾಗ್ವಿಳಾಸಮೆ ದಲಲಂ[2] ।
ಕೃತಿಯವೊಲೆಸೆದಪುದು ಜಗ
ತ್ಪ್ರತೀತನೀತನೆ ಸರಸ್ವತೀಮಣಿಹಾರಂ ॥ ೨೮

*ಕದಳೀಗರ್ಭಶ್ಯಾಮಂ
ಮೃದುಕುಟಿಲಶಿರೋರುಹಂ ಸರೋರುಹವದನಂ ।
ಮೃದುಮಧ್ಯಮತನು ಹಿತಮಿತ
ಮೃದುವಚನಂ ಲಲಿತಮಧುರಸುಂದರವೇಷಂ ॥ ೨೯

ವತ್ಸಕುಲತಿಲಕನಭಿಜನ
ವತ್ಸಳನಭಿಮಾನಮೂರ್ತಿ ಸುಕವಿಯಶೋನಿ ।
ರ್ಮತ್ಸರನಮೃತಮಯೋಕ್ತಿ ಶ
ರತ್ಸಮಯಸುಧಾಂಶುವಿಶದಕೀರ್ತಿವಿತಾನಂ ॥ ೩೦

ವನಿತಾಕಟಾಕ್ಷಕುವಲಯ
ವನಚಂದ್ರಂ ಯುವತಿಜಘನಕಾಂಚೀರತ್ನಂ ।
ಸ್ತನಭರವಿನಮ್ರಗಣಿಕಾ
ಸ್ತನತಟ[3]ಹಾರಂ ಸರಸ್ವತೀಮಣಿಹಾರಂ ॥ ೩೧

ಕೇರಳವಿಟೀಕಟೀಸೂ
ತ್ರಾರುಣಮಣಿ ಮಲಯಯುವತಿದರ್ಪಣನಾಂಧ್ರೀ ।
ನೀರಂಧ್ರಬಂಧುರಸ್ತನ
ಹಾರನುದಾರಂ ಸರಸ್ವತೀಮಣಿಹಾರಂ ॥ ೩೨

1ಕ.—ಮಪ್ಪುದುತಾಂ. 2ಕ.—ಸದಲಂ. 3ಕ.—ಸ್ತನಮಣಿ.

*ಕ. ಪದ್ಯಗಳು 31, 32, 30, 29 ಈ ಕ್ರಮದಲ್ಲಿವೆ.
ಗ. ,, 31, 32, 29, 30 ಈ ಕ್ರಮದಲ್ಲಿವೆ.

ದುಂದುಭಿಗಭೀರನಿನದಂ
ದುಂದುಭಿಸಂವತ್ಸರೋದ್ಭವಂ ಪ್ರಕಟಯಶೋ ।
ದುಂದುಭಿ ಸಿಂಹಾಸನಸುರ
ದುಂದುಭಿಪತಿಚರಣಕಮಳಭೃಂಗಂ ಪಂಪಂ ॥ ೩೩

ಎಂದಿಂತು ತಮ್ಮ ತಮ್ಮಣು
ಗಿಂದಂ ಪೆಸರಿಟ್ಟು ಬುಧಸಮೂಹಮಿದಂ ಪೇ ।
ಳೆಂದೊಡೆ ಪೇೞಲ್ಕಾಂಬಗೆ
ದಂಡೆನಿದೆಂನಳವೆ ಗಣಧರೋದಿತಚರಿತಂ ॥ ೩೪

ಪುರುದೇವಾದಿಜಿನೇಂದ್ರಮಾಳೆ ಗಣಭೃತ್ಸಂತಾನಮೆಂದೀಪರಂ
ಪರೆಯಿಂ ವಿಶ್ರುತವೀರಸೇನಜಿನಸೇನಾಚಾರ್ಯಪರ್ಯಂತಮಾ ।
ಗಿರೆ ಬಂದೀಕಥೆ ಗುಣ್ಪುವೆತ್ತುದವರುಂ ಜ್ಞಾನರ್ಧಿಸಂಪನ್ನರೆಂ
ದಿರದಾಂ ಧೃಷ್ಟನೆ[1]ನೀಕಥಾಬ್ಧಿಯುಮನೇನೀಸನ್ನನಂದಂದೆನೋ ॥ ೩೫

ಕವಿತೆಯೊಳಾಸೆಗೆಯ್ವ ಫಲಮಾವುದೊ ಪೂಜೆ ನೆಗೞ್ತೆ ಲಾಭಮೆಂ
ಬಿವೆ ಪಲವಿಂದ್ರಪೂಜೆ ಭುವನಸ್ತುತಮಪ್ಪ ನೆಗೞ್ತೆ ಮುಕ್ತಿ ಸಂ ।
ಭವಿಸುವಲಾಭಮೆಂಬಿವೆ ಜಿನೇಂದ್ರಗುಣಸ್ತುತಿಯಿಂದೆ ತಾಮೆ ಸಾ
ರವೆ ಪೆಱರೀವುದೇಂ ಪೆಱರ್ ಮಾಡುವುದೇಂ ಪೆಱರಿಂದವಪ್ಪುದೇಂ ॥ ೩೬

ಪೆಸರ್ಗೊಂಡಿಂದ್ರನರೇಂದ್ರವಂದ್ಯನನೊಱಲ್ದೆತ್ತಾನುಮೋರೊರ್ಮೆ ಚಿಂ
ತಿಸಿದೊಂಗಂ ಪವಣಿಲ್ಲ ಪುಣ್ಯಮೆನೆ ಪೂಣ್ದೊಳ್ಪಿಂದಮೋರಂತೆ ಭಾ ।
ವಿಸಿ ತಾಂ ತನ್ಮಯನಾಗಿ ತಚ್ಚರಿತಮಂ ಕಾವ್ಯಂಗಳೊಳ್ಕೂಡೆ ಬಂ
ಣಿಸಿ ಪೇೞ್ವಾತನ ಕರ್ಮನಿರ್ಜರೆಯನಂತಿಂತುಂತೆನಲ್ಬರ್ಕುಮೇ[2] ॥ ೩೭

ಇದುಮೆ ಸುಕವಿಪ್ರಮೋದ
ಪ್ರದಮಿದುಮೆ ಸಮಸ್ತಭವ್ಯಲೋಕಪ್ರಮುದ ।
ಪ್ರದಮೆನೆ ನೆಗೞ್ದಾದಿಪುರಾ
ಣದೊಳಱಿವುದು ಕಾವ್ಯಧರ್ಮಮುಂ ಧರ್ಮಮುಮಂ ॥ ೩೮

---

1 ಖ.—ದಿರದೋದ್ಧೃಷ್ಟನೆ. 2 ಕ. ಗ.—ತಿಂತೆಂದು ಪೇೞ್ವಿಂತುಟೇ.

ನೆಱವಂ ತಾಳ್ದಿದಪೌಸ್ತ್ರದುರ್ನಯತಮೋಬಂಧಂ ಶ್ರುತಸ್ಕಂದಮಾ
ದಱವಿಂದಂ ಗಣನಾಯಕರ್ಸಮೆಱೆ ಭವ್ಯಶ್ರೇಣಿಗವ್ಯಾಜದಿಂ ।
ದಱಿಯ[1]ಲ್ನಾಲ್ಕನುಯೋಗಮಾದುದದಱೊಳ್ಪ್ರಾರ್ವಾನುಯೋಗಾಬ್ಧಿಯಂ[2]
ಪೊಱಪೊಣ್ಮಿತ್ತುದು ವೇಳೆಯಂತೆ ಕಥೆ ಲಂಬೋದ್ದಾಮವೀಚೀಚಯಂ॥ ೩೯

ಪಾಪಹರಂ ಪ್ರಕಾಶಿತವೃಷಂ ವೃಷಭಂ ವೃಷಧ್ವಜಂ ಮಹಾ
ಷ್ಟಾಪದಶೈಲದೊಳ್ವಿಜಿತಘಾತಿಚತುಷ್ಟಯನತ್ಯುದಾರರಾ ।
ಗೋಪನತಾಮರೇಂದ್ರದನುಜೇಂದ್ರನರೇಂದ್ರಪದಂ ಸಮಸ್ತವಿ
ದ್ಯಾಪತಿ ನಾಭಿನಂದನನುಪಾಶ್ರಿ[3]ತಭವ್ಯಜನಾಭಿನಂದನಂ ॥ ೪೦

ಇರೆ ಹರಿಪೀಠದೊಳ್ಭರತನಾದರದಿಂ ಬೆಸಗೊಂಡುದಂ ಜಿನೇ
ಶ್ವರಮತದಿಂದಮಾ[4]ವೃಷಭಸೇನಗಣಾಗ್ರಣಿ ಪೇೞ್ದುದಂ ಸವಿ ।
ಸ್ತರದೊಳೆವರ್ಧಮಾನಜಿನ[5]ಸಂನಿಧಿಯೊಳ್ವಿಪುಳಾದ್ರಿಯೊಳ್ನಿಜಾ
ದರದೊಳೆ ಗೌತಮರ್ಗಣಧನಾಯಕನುಂ ತಿಳಿವಂತು ಪೇೞ್ದುದಂ ॥ ೪೧

ಪ್ರಾಣಿಹಿತಮಂ ವಿನೇಯ
ಪ್ರೀಣನಕರಮಂ ಜಗತ್ರಯಪ್ರಕಟಿತಕ ।
ಲ್ಯಾಣಮನೀನೆಗೞ್ದಿಪು
ರಾಣಮನಪರಿಮಿತಭಕ್ತಿಯಿಂ ವಿರಚಿಸುವೆಂ ॥ ೪೨

ವಚನ ॥ ಆಪುರಾಣಕ್ಕಂ ಲೋಕಾಕಾರಕಥನಮುಂ ದೇಶನಿವೇಶೋಪದೇಶಮುಂ ನಗರಸಂಪತ್ಪರಿವರ್ಣನಮುಂ ರಾಜ್ಯರಮಣೀಯಕಾಖ್ಯಾನಮುಂ ತೀರ್ಥಮಹಿಮಸಮರ್ಥನಮುಂ ಚತುರ್ಗತಿಸ್ವರೂಪನಿರೂಪಣಮುಂ ತಪೋದಾನವಿಧಾನವರ್ಣನಮುಂ[6] ತತ್ಫಳಪ್ರಾಪ್ತಿಪ್ರಕಟನಮುಮೆಂದಿಂತ ವಯವಂಗಳೆಂಟಕ್ಕುಂ.

ಅವಱೊಳ್ಲೋಕಮದೆಂತುಟೆಂದೊಡೆ ಸಮಂತಾವಂಗಮೆತ್ತೆತ್ತ ನೋ
ಡುವೊಡಂ ನೋಡಲನಂತಮಪ್ಪ ವಿಭುವಪ್ಪಾಕಾಶಪದ್ಮಕ್ಕೆ ತಾ ।

---

[1]ಕ.—ಪ. [2]ಕ.—ಯಿಂ. [3]ಕ.—ರ್ಜಿ
[4]ಕ.—ಮತಮಾರ್ಗಮಂ. [5]ಕ.—ಮಾನಮುನಿ: [6]ಕ.—ತಪೋಧನವ್ಯಾವರ್ಣನಮುಂ.

ನೆ ವಲಂ ಕರ್ಣಿಕೆಯಿಂದಮಾಯ್ತೆನೆ ವಿಯನ್ಮಧ್ಯಸ್ಥಮಂತಸ್ಸ್ಥಕ
ರ್ಮವಶಭ್ರಾಮ್ಯದನೇಕಜೀವನಿವಹಕ್ರೋಡೀಕೃತಾಭ್ಯಂತರಂ ॥ ೪೩

ಅದನಾದ್ಯನಿಧನ[1]ಗುಣಯುತ
ಮದಕೃತ್ರಿಮಮದು ಮರುತ್ತ್ರಿಕಾವೇಷ್ಟಿತಮಂ ।
ತದು ಸುಪ್ರತಿಷ್ಠ[2]ಕೋಪಮ
ಮದು ಜಿನಮತದೊಳ್ ದ್ವಿಸಪ್ತರಜ್ಜೂತ್ಸೇಧಂ ॥ ೪೪

ಸ್ಫುಟವೈಶಾಖಸ್ಥಾನಂ ಕಟಿ
ತಟವಿನ್ಯಸ್ತಹಸ್ತಯುಗನಾಗಿ ಮಹಾ ।
ಲಟಹಂಬೆರಸಿರ್ದೊಪ್ಪುವ
ನಟನಾಕೃತಿ ತಾನೆ ಲೋಕ[3]ದೊಂದಾಕಾರಂ ॥ ೪೫

ಮಾಡುವ ಕಿಡಿಸುವ ಗಸಣಿಗೆ
ನಾಡೆಯುಮದು ಪೊಱಗು ಸಹಜನಿಯತಸ್ಥಿತಿ ನಾ ।
ಡಾಡಿಯ ನರರ್ಗದು ಬಗೆಯಲ್
ಕೂಡದದಧಸ್ತಿರ್ಯಗೂರ್ಧ್ವಭೇದವಿಭಿನ್ನಂ ॥ ೪೬

ವಿತ್ರಸ್ತಕರ್ಮರಿಪುವೆ ಜ
ಗತ್ತ್ರಯದೀಪಕನ ಕಾಣ್ಕೆಗೊಳಗಾದುದು ಲೋ ।
ಕತ್ರಯಮದನುಕ್ರಮದೊಳ್
ವೇತ್ರಾಸನಝಲ್ಲರೀಮೃದಂಗಸಮಾನಂ ॥ ೪೭

ವ ॥ ಆಲೋಕತ್ರಯಮಧ್ಯದೊಳ್ ಮಧ್ಯಮಲೋಕಮೆಂಬ ಪೆಸರಂ ಪಡೆದು,

ಪರ್ಯಾಯಂದಪ್ಪದೇಂಸುತ್ತಿಱಿದುಮೊವಳಯಾಕಾರದೊಂದೊಂದನತ್ಯಾ
ಶ್ಚರ್ಯಂ ದ್ವೀಪಾಬ್ಧಿವರ್ಗಕ್ರಮಮದುವುಮಸಂಖ್ಯಾತಮಾಸಂಖ್ಯೆಯೊಳಾ ।
ತ್ಪರ್ಯಂಗೆಯ್ವಂನವೆಂಬಗ್ಗಳಿಕೆಯಿನೆಸೆದತ್ತೇಕರಜ್ಜುಪ್ರಮಾಣಂ [೪೮
ತಿರ್ಯಗ್ಲೋಕಂ ಸ್ವಯಂಭೂರಮಣಜಳಧಿಪರ್ಯಂತಮಂತಾಗುವನ್ನಂ ॥

1ಕ.—ದಿ ನಿಧನ. 2ಕ.—ಸುಪ್ರತಿಷ್ಟ. 3ಗ.—ಭುವನ.

ವ॥ ಆತಿರ್ಯಗ್ಲೋಕದ ನಟ್ಟನಡುವೆ ಲವಣಜಲಧಿಪರಿವೃತವಾಗಿ ಭರತ, ಹೈಮವತ, ಹರಿವರ್ಷ, ವಿದೇಹ, ರಮ್ಯಕ, ಹೈರಣ್ಯವತ್ಯೈರಾವತಂಗ ಳೆಂಬೇೞು ಜನಪದಂಗಳಿಂದಂ ಪೂರ್ವಾಪರಾಯತಂಗಳುಂ, ಹೇಮಾರ್ಜುನ ತಪನೀಯವೈಡೂರ್ಯ್ಯವಜ್ರರಜತಹೇಮಮಯಂಗಳುಂ, ಮಣಿವಿಚಿತ್ರಪಾ ರ್ಶ್ವಂಗಳುಮಧಸ್ಸ್ಥಳೋಪರಿಮತಳಸಮಾನವಿಸ್ತಾರಂಗಳುಮಪ್ಪ ಹಿಮವ ನ್ಮಹಾಹಿಮವನ್ನಿಷಧನೀಳರುಗ್ಮಿಶಿಖರಿಗಳೆಂಬ ವರ್ಷಧರಮಹೀಧರಂಗಳಿಂ ದಂ ಇನ್ನೂಱುಕನಕಗಿರಿಗಳಿಂದಂ ನಾಲ್ಕುನಾಭಿನಗಂಗಳಿಂದಂ ಮೂವತ್ತ ನಾಲ್ಕು[1]ವಿಜಯಾರ್ಧಪರ್ವತಂಗಳಿಂದಮನಿತೆ ವೃಷಭಾದ್ರಿಗಳಿಂದಂ ಚತು ರ್ದಶಮಹಾವಾಹಿನಿಗಳಿಂದಮೆಸೆದು,

ಅತಿವೃತ್ತದೆ ರವಿಬಿಂಬಾ
ಕೃತಿ ಯೋಜನಶತಸಹಸ್ರವಿಷ್ಕಂಭಂ ವಿ।
ಶ್ರುತಜಂಬೂವೃಕ್ಷಮಹಾ
ಪ್ರತೀತಿಯಿಂ ನೆಗೞ್ದುದಿಳೆಗೆ ಜಂಬೂದ್ವೀಪಂ ॥ ೪೯

ವ॥ ಆಜಂಬೂದ್ವೀಪದ ನಟ್ಟನಡುವೆ ನವನವತಿಯೋಜನಸಹಸ್ರೋತ್ಸೇ ಧಮುಂ ಯೋಜನಸಹಸ್ರಾವಗಾಹಮುಂ ಸರ್ವರತ್ನಜಾಂಬೂನದವೈಡೂ ರ್ಯಮಯಮುಂ ಅಂತರಾಂತರನಿರಂತರಕಾಂತಸೋ[2]ಮಯಮುಮರುಣಕುಬೇ ರಪ್ರಮುಖಲೋಕಪಾಲಾಭಿಯೋಗ್ಯದಿಗ್ಗಜೇಂದ್ರದೇವವಿಹಾರಪ್ರಾಸಾದಾಭಿ ರಾಮಮುಂ[3] ಅನೇಕನಾಕನಾಯಕಲೋಕಪಾಳಲೀಲಾಭವನಾಧ್ಯಾಸಿತ ಮುಂ ಪದ್ಮವೇದಿಕಾಪರಿವೃತರತ್ನತೋರಣಾಂಚಿತಜಿನಭವನಪರಿವೃತಮುಂ ಪಂಚರತ್ನಮಯಸುಶ್ಲಿಷ್ಟಾಷ್ಟಾದಶಸಹಸ್ರಲಕ್ಷಣವ್ಯಂಜನಾಂಕಿತಾಷ್ಟಶತಕ ಳಶಭೃಂಗಾರಾದ್ಯುಪಕರಣೋಪಶೋಭಿತಮುಂ ವೈಡೂರ್ಯದಂಡಮು ಕ್ತಾಮಣಿಜಾಳಾಳಂಕೃತರತ್ನಶಲಾಕಾಶತಕಾಂಚನಕುಂಭಬಿಂಬರಜತಚ್ಛದ ಚ್ಛತ್ರವಿಚಿತ್ರಜಿನೇಂದ್ರಪ್ರತಿಕೃತಿಪ್ರಕೀರ್ಣಮುಂ ಭದ್ರಸಾಲನಂದನಸೌ ಮನಸಪಾಂಡುಕವನವಿರಾಜಿತಮುಂ ಪಾಂಡುಕಪಾಂಡುಕಂಬಳರಕ್ತಕಂಬ ಳಾತಿರಕ್ತಕಂಬಳವಿಶಾಲರತ್ನಶಿಲಾತಳಪ್ರತಿಷ್ಠಿತಭಗವಜ್ಜನ್ಮಾಭಿಷೇಕಸಿಂ ಹಾಸನಾಳಂಕೃತಮುಮಾಗಿ,

---

[1] ಕ.—ಮೂವತ್ತಾಱು. [2] ಕ.—ಸ್ತೋ [3] ಗ.—ದಾರಾಮಮುಂ.

ನೆಲಸಿರ್ದಪ್ಪುದಧಸ್ಸ್ಥಳಂಬಿಡಿದಧೋಲೋಕಂ ಸಮಂತೆಯೆದ್ದು ಸು
ತ್ತಲುಮಿರ್ದಪ್ಪುದು ಮಧ್ಯಲೋಕಮೆಸೆದಿರ್ದಾ[1]ಚೂಳಿಕಾಭಾಗದಾ ।
ದಲೆಯೊಳ್ನಿಂದಪುದೂರ್ಧ್ವಲೋಕಮೆನೆ ಮೂಲೋಕಕ್ಕೆ ಪೆಂಪಿಂದಗುಂ
ದಲೆಯಾಗಿರ್ದುದು ದೇವದಂಪತಿರತಶ್ರೀಸುಂದರಂ ಮಂದರಂ ॥ ೫೦

ವ॥ ಆಮಂದರದ ಪೂರ್ವಾಪರದಿಗ್ವಿಭಾಗಂಗಳೊಳ್ ವಿದೇಹಂಗಳಿರ್ದುವಲ್ಲಿ,

ಪದನಂ ಕಾಣಿಸಿ ಕೊಳ್ವವಲ್ಲಿ ಮಟೆಗಳ್ ಷಡ್ಭಾಗಮಂ ಕೊಂಡು ತ
ಪ್ಪದೆ ಭೂಪರ್ ಪ್ರತಿಪಾಳಿಪರ್ ಪ್ರಜೆಗಳಂ ಶ್ರೀಜೈನಧರ್ಮಂ ಪೊದ ।
ಪ್ಪೊದವುತ್ತಿರ್ಪುದು ಮತ್ತಿನನ್ಯಸಮಯಕ್ಕುತ್ಪತ್ತಿಯಿಲ್ಲೊಂದಱೊಳ್ ।
ಪದಿನಾಱಾಗಿ ನಿರಂತರಂ ಸೊಗಯಿಕುಂ ಮೂವತ್ತೆರಡ್ನಾ[2]ಡುಗಳ್ ॥ ೫೧

ತೊಲಗದು[2] ಪುಬ್ಬಕೋಟಿಪರಿಸಂಖ್ಯೆವರಂ ಪರಮಾಯು ಕಳ್ಳರಾ
ಯಿಲಮಱಿಯೇಱು ಮಾರಿ ಪಸವಿಟ್ದ ಬಱಂ ಪೆಱವುಂ ಭಯಂಗಳಾ ।
ಕುಲಿತೆಗಳಿಲ್ಲ ಧಾತ್ರಿ ಪುಸಿವೋಗದು ಪಂಚಧನುಶ್ಶತಂ ಪವ
ಣ್ಣೆಲೆ[3] ನರರ್ಗೆಂದೊಡಿನ್ನಿಮಿರೆ[4] ಬಣ್ಣಿಸಲಾನಱಿಯೆಂ ವಿದೇಹಮಂ ॥ ೫೨

ಉತ್ತಮತಪಂಗಳಿಂದ
ತ್ಯುತ್ತಮದೇಹರ್ ವಿದೇಹರಪ್ಪುದಱಿಂ[5]ಮೆ ।
ಯ್ವೆತ್ತನ್ವರ್ಥತೆಯಂ ತಾ
ಳ್ದಿತ್ತು ವಿದೇಹಂ ವಿದೇಹಮೆಂಬೀಪೆಸರಂ ॥ ೫೩

ವ॥ ಅಲ್ಲಿ ಪಶ್ಚಿಮವಿದೇಹಮಧ್ಯಭೂಭಾಗ[6]ಕ್ಕಳಂಕಾರಮಾಗಿ ಪಂಚಶತಯೋಜನಪ್ರಮಾಣವಿಸ್ತೀರ್ಣಮುಮಪ್ಪ,

ಪ್ರಿಯಹಂಸೀಯುತಹಂಸನಾದೆಯು ಮಹಾಕುತ್ಕೀಲಕೂಟಪ್ರಭೇ
ದೆಯು ತೀರಸ್ಥಲವಂಗಚೂತಲವಲೀಪುಷ್ಪಾಸವಾಸ್ವಾದಿತೋ ।
ದ[7]ಯುತೋನ್ಮಾದೆಯು ತದ್ವಿದೇಹಜನತಾಸ್ವಾಂತಾರ್ಪಿತೋದ್ವೃತ್ತಪ್ರಮೋ
ದೆಯು ಸೀತೋದೆಯು ಪೋಲ್ವೆಗಿಲ್ಲ[8] ತೊಱೆಗಳ್ ವಿಶ್ವಂಭರಾಭಾಗದೊಳ್॥ ೫೪

1ಕ.—ಮೆನಿಸಿರ್ದಾ. 2ಕ.—ಗದೆ. 3ಖ.—ಶ್ಶತಪ್ರಮಾಣ್ಣೆಲೆ.
4ಖ.—ಡಿನ್ನರಿಯೆ ಬಣ್ಣಿಸ. 5ಕ.—ಪ್ಪುದರೊಳ್ಮೆ. 6ಖ. ಗ.—ಮಧ್ಯಮಭೂಮಿಭಾಗ.
7ಗ.—ಸ್ವಾದಿತಾಳಿ. 8ಗ.—ಪೋಲ್ವುದಿಲ್ಲ.

ಅದು ನೀರೇಭಕರಾಭಿಘಾತವಿಚಳದ್ವಾ[1]ರಾಶಿಯೊಳ್ ಪೋಗಿ ಕೂ
ಡಿದೊಡಾವಾರ್ಧಿಯ ಪೆಂಪುಮಾತೊಱೆಯೊಳಾ[2]ಯ್ತ್ರಂತಾ[3]ದಪೆಂಪಿಂದಮು ।
ರ್ಬಿದ[4] ಗುಣ್ಪಿಂದಮಿದಬ್ಧಿಗಗ್ಗಳವೆನಲ್ ಕುಂದೊಂದು ಕಣ್ಗೆತ್ತಿದಂ[5]
ತಿದು ದಲ್ ನೇರ್ಗಿಱಿದೆಂದೊಡಾವ ತೊಱೆಯುಂಸೀತೋದೆಯಂಪೋಲ್ಗವೇ[6]

ವ॥ ಆಸೀತೋದಾನದಿಯ ತೆಂಕಣ ಬಡಗಣ ತಡಿವಿಡಿದಿರ್ದುವೆಂಟುನಾ
ಟ್ಕಳ್. ಅಲ್ಲಿ—

ಬಡಗಣ ತಡಿಯೊಳವೇೞನೆ
ಯೆಡೆಯದು ನೀಳಾಚಳಕ್ಕೆ ತೆಂಕಣದು ಬೆಡಂ ।
ಗೊಡರಿಪ ವಕ್ಷಾರಾದ್ರಿಗೆ
ಪಡುವಣದದು ಸುಜನನಿಳಯಮುಪಗತವಿಳಯಂ ॥ ೫೬

ಅಳಿಕುಳರುತಿ[7]ಗಳಿನವನತ
ಫಲತರುಗಳಿನುಚಿತಕುಸುಮಗಂಧದಿನಬಳಾ ।
ವಿಳಸನದಿಂದೀವುದು ಗಂ
ಧಿಳವಿಷಯಂ ಸಕಳವಿಷಯರಸರಸಿಕತೆಯಂ ॥ ೫೭

ಬಕಕುರರ[8]ಪಕ್ಷವಿಕ್ಷಿ
ಪ್ತಕಂಜಕಿಂಜಲ್ಕಪುಂಜಪಿಂಜರಿತಾಚ್ಛೋ ।
ದಕಪರಿಪೂರ್ಣತಟಾಕ
ಪ್ರಕರಸರೋನಿಕರರಂಜಿತಾಶಾವಳಯಂ ॥ ೫೮

ಪಸರಿಸಿ ದುಗ್ಧಾಬ್ಧಿಜಳ
ಪ್ರಸರಮನೊಡವೇೞು ಬಂದು ಕಱೆವುವು ಮೇಘ ।
ಪ್ರಸರಂಗಳಲ್ಲಿಯೆನೆ ರಸ
ಮೊಸರ್ವುವು ಪುಂಡ್ರೇಕ್ಷುವಾಟಿಕೋಟಿಗಳದಱೊಳ್ ॥ ೫೯

ಮಡಿಗ[9]ಳೊಳಗಲರ್ದ ನೆಯ್ದಿಲ
ಕಡುಗಂಪುಮನಿವಱ ಕಂಪು[10]ಗೆಲ್ದುವು ಸಾಸಿ ।

1ಗ.—ವಿಳಸದ್ವಾ. 2ಗ.—ತೊಱೆಯಿನಾ. 3ಕ.—ಯ್ತ್ರಂತಾದ. 4ಕ.—ದಗುರ್ಬಿದ.
5ಕ. ಗ.—ಕುಂದೇಂದು ಕಣ್ಗೆತ್ತಿದಂ. 6ಕ.—ಪೋಲ್ಕುವೆ. 7ಗ.—ತತಿ.
8ಕ.—ಕುರವ. 9ಗ.—ಮಡುಗ. 10ಗ.—ಕಂಪೆ.

ರ್ಮಡಿಯೆನೆ ಪೊಂಬಣ್ಣದ ಕೆಂ
ಪಿಡಿದಿರೆ ಸೊಗಯಿಪ್ಪುವು[1] ಗಂಧಶಾಳಿವನಂಗಳ್ ॥ ೬೦

ಮತ್ತಮಲ್ಲಿ—

ಕೊಂಕಿದ ಕೊಂಕು ತದ್ವಿಷಯಕಾಂತೆಯ ಪುರ್ವಿನ ಕೊಂಕಿನಂತೆ ಚೆ
ಲ್ವಂ ಕುಡೆ ತಳ್ತ್ತ ರೆಟ್ಟಿಡಿಯ ಪೂಮರದಿಂ ಕಲಿವೂಗಳತ್ತಮಿ।
ತ್ತಂ ಕವಿದಲ್ಲಿ ಮೆಲ್ಲನುಗೆ ತೀಂಕುವ ಪೂವಿನ ಸಂಕರಂಗಳಂ
ನೊಂಕುವುವೂರ್ಮಿಮಾಳಿನಿಯ ತುಂಗತರತ್ತರಳೋರ್ಮಿಮಾಲೆಗಳ್ ॥ ೬೧

ಕನಕಾಂಭೋಜರಜಂ ನಿಜಾಂಗರುಚಿಯಂ ಕನ್ನೈದ್ದಲಿಂದಂ ಕಲಿ
ಲ್ದಿನಿಸಂ ತೂಳ್ದು ತೆರಳ್ದಸಳ್ಕಯನಮಂ ಕಂಪಂ ಕೊಳಲ್ಬರ್ಪ ಭೃಂ।
ಗನಿಕಾಯಂ ನಿಜಕೇಶಪಾಶರುಚಿಯಂ ಕೈಕೊಳ್ವಿನಂ ಮೆಲ್ಲಮೆ
ಲ್ಲನೆ ನೋಟಕ್ಕೆ ಸದೇಹಮಾಗಿ ಸುಳಿಯುತ್ತಿರ್ಕುಂ ವಿದೇಹಾನಿಳಂ ॥ ೬೨

ವ ॥ ಅಂತನೇಕನದ್ಯುದ್ಯಾನನಾನಾಜನಪದಜನಾನುರಾಗರಸರಮಣೀಯ ಮಪ್ಪ ಗಂಧಿಳವಿಷಯದ ನಡುವೆ ತನ್ಮಹೀವಿಳಾಸಿನಿಯ ಮೇಲ್ಪೊಂಡ ದುಕೂಲಮುಮಂ ಅರ್ಹತ್ಪರಮೇಶ್ವರನ ವಿಶದಯಶಃಪುಂಜಮುಮಂ ಅನುಕರಿಸಿ ವಿವಿಧವಿದಗ್ಧ[2]ವಿದ್ಯಾಧರಜನಕ್ರೀಡಾನೀಡಂಗಳಾಗಿ ದಕ್ಷಿಣೋತ್ತರಶ್ರೇಢಿಗಳ್ಗೆ ರಾಜಧಾನಿಗಳಾಗಿರ್ದ ರಥನೂಪುರಚಕ್ರವಾಳಗಗನವಲ್ಲಭಾದಿಗಳಪ್ಪ ನೂಱುಪತ್ತುಂ ಪೊೞಲ್ಗಳನೊಳಕೊಂಡು ಸಪಾದಷಡ್ಯೋಜನಾವಗಾಹದೊಳಂ ಪಂಚಷಡ್ಯೋಜನಾಧೋವಿಸ್ತಾರದೊಳಂ ತದರ್ಧಯೋಜನೋತ್ಸೇಧದೊಳಂ ದಶಯೋಜನೋಪರಿಮತಳಸಮಾನವಿಸ್ತಾರದೊಳಂ ವಿದ್ಯಾಧರಾಭಿಯೋಗ್ಯದಿಗ್ಗಜೇಂದ್ರವಿಜಯಾರ್ಧಕುಮಾರನಿವಾಸಾದಿಮೇಖಳಾತ್ರಯದೊಳಂ ಸಿದ್ಧಾಯತನಪ್ರಭೃತಿ ನವಕೂಟಂಗಳೊಳಂ ನೆಱೆದು[3],

ಉತ್ಕಶಿಖಂಡಿತಾಂಡವಮನೋಹರಮುಜ್ಜ್ವಳರತ್ನರಾಜಿರಾ
ಜತ್ಕಟಕಂ ಸರಃಕನಕ[4]ಪದ್ಮಪರಾಗಪಿಶಂಗಿತಾಂಗರಂ।
ಗತ್ಕಳಹಂಸನಾದರಮಣೀಯತರಂ ಮದದಂತಿದಾನಗಂ
ಧೋತ್ಕಟಮೊಪ್ಪುಗುಂ ಕುಮುದಪಾಂಡುರಮಾವಿಜಯಾರ್ಧಪರ್ವತಂ॥ ೬೩

---

[1] ಖ. ಗ.—ಸೊಗಯಿಸುವ. [2] ಕ.— ವಿವಿಧವಿದ್ಯಾವಿದಗ್ಧ.
[3] ಕ.—ಬೆಳೆದು. [4] ಕ—ಕನತ್ಕನಕ.

ಎಳನೀರೊತ್ತಿನೊಳೊತ್ತಿ ಬರ್ಪ ಪೊನಲೊಳ್ಸಾಂದ್ರೇಂದುಕಾಂತೋಪಳೋ
ಚ್ಛಳಿತಾಚ್ಛಾಚ್ಛ ಜಲಪ್ರವಾಹಭರದೊಳ್ ಮಂದಾನಿಳಾಂದೋಳನಾ ।
ಕುಳಿತಾರಾಮಫಲಾಮೃತೋಪಮರಸಸ್ರೋತಂಗಳೊಳ್ ಸಾಲ್ವಿನಂ
ಬೆಳೆದೋರಂತೊಱಗಿರ್ದ[1]ಶಾಳಿವನದಿಂ ಸೇವ್ಯಂ ನಗೋಪತ್ಯಕಂ ॥ ೬೪

ನನೆಯನೆ ಪೀಱಿ ಕೆಂದಳಿರೊಳೆಯ್ದೆ ಬೞಲ್ದೆಳಮಾವು ಬಂದ ಮಾ
ವನೆ ಮಱೆಗೊಂಡು ಬಗ್ಗಿಸುವ ಕೋಗಿಲೆ ಕೋಗಿಲೆಯಿರ್ಕೆದಾಣದೊಳ್ ।
ಜೆನುಗುವ ತುಂಬಿ ತುಂಬಿಯೊಳರಲ್ದಲರೆಂಬಿವಱಿಂ ಬಸಂತರಾ
ಜನ ಮನೆಯಂತೆ ಕಣ್ಗೆಸೆದು ತೋಱುಗುಮಲ್ಲಿಯ[2] ನಂದನಾಳಿಗಳ್[3] ॥ ೬೫

ಪೊಸನನೆಯೊಳ್ ಪಸುರ್ಪಲರೊಳಂಚಿರಮಲ್ಲದ ಬೆಳ್ಪು ಪಲ್ಲವ
ಪ್ರಸರದೊಳೆಯ್ದೆ ಕಣ್ಗೆ ಪಸರಂಬಡೆದೊಪ್ಪುವ ಕೆಂಪು ತುಂಬಿಯೊಳ್ ।
ಮಿಸುಗುವ ಕಪ್ಪುರ್ಬರ್ಚಿಸಿದವೋಲ್ ಬಗೆಗೊಳ್ವಿನೆಗಂ ಬಸಂತದೊಳ್
ಬಸದಿಯ ಬಾಗಿಲಂ ತೆಱೆದ ಮಾಷ್ಕೆಯೊಳಿರ್ದುವು ಬಂದ ಮಾವುಗಳ್॥ ೬೬

ಅಲರ್ದಂಭೋರುಹಷಂಡಮುಳ್ಳಲರ್ದ ಚೆನ್ನೈಯ್ದಲ್ಗೊಳಂ ತೂಗಿ ಪ
ಣ್ಗೊಲೆಯಿಂ ಬಳ್ಕುವ ಕೌಂಗು ಕಾಯ್ದುಱುಗಲಂ ಪೀಱಿರ್ದ ಚೆಂದೆಂಗು ಕ।
ಟ್ಟಲಿಸುತ್ತಿರ್ಪೆಲೆವಳ್ಳಿ ಪಣ್ತೊಲೆವ ನಾರಂಗಂ ಫಲವ್ರಾತದಿಂ
ನೆಲನಂ ಮೋದುವ ಮಾತುಳುಂಗಮೆಸೆಗುಂ ವಿದ್ಯಾಧರೋದ್ಯಾನದೊಳ್॥೬೭

ಮಲರ್ದಲರ್ದನಾಗಸಂಪಗೆ
ಯಲರ್ಗಳೊಳಗ್ಗಳಿಸಿ ಬಿರಿವ ಪೊಂಬಾಳೆಯ[4] ತ ।
ಣ್ಮಲೆವ ಪೊಸಗಂಪಿನೊಳ್ ಪುದಿ
ದಲೆವೆಲರಾಱಿಪುದು ಖಚರದಂಪತಿಶತಮಂ ॥ ೬೮

ಬೆಸನಂ ಪಾರ್ವುವು ಮನ್ತ್ರದೇವತೆಗಳಾದೇಬಾರ್ತೆಗಂ[5]ಬೇಗಮಾ
ಗಸದೊಳ್ ವಿದ್ಯೆಗಳೆಯ್ದೆ ಬರ್ಪುವು ಜಗಕ್ಕಾಶ್ಚರ್ಯಮೈಶ್ವರ್ಯಮಾ ।
ವಸಥಂ ರೂಪ್ಯಮಹೀಧರೇಂದ್ರಮೆನೆ ಪೂಣ್ದಾವಂಗಮಂತೆಯ್ದೆ ಬ
ಣ್ಣಿಸಲೇಂ ಬರ್ಕುಮೆ ಬಾರದಂಬರಚರಶ್ರೀಯುಂ ಪುರಶ್ರೀಯುಮಂ[6] ॥ ೬೯

---

[1]ಗ.—ತೆಱಗಿರ್ದ. [2]ಕ.—ತೋಱುವುವಲ್ಲಿಯ. [3].ಕ—ನಾದಿಗಳ್.

[4]ಕ.—ಪೊಂಬಳೆಯ. [5]ಗ.—ಬಾಳೆ ಗಂ. [6]ಗ.—ಶ್ರೀಯುಂಮನೋಹಾರಿಯುಂ.

ಜಿನಪೂಜೋತ್ಸವಮಂಗಳಾನಕಮೃದುಪ್ರಧ್ವಾನದೊಳ್ ಗಾಯಕೀ
ಜನಗೀತಾ[1]ನ್ವಿತವಲ್ಲಕೀಕ್ವಣಿತದೊಳ್ ವಿದ್ಯಾಧರೀರಮ್ಯನ ।
ರ್ತನರಾಗೋತ್ಥಿತಪಾರಿಹಾರ್ಯರಶನಾಮಂಜೀರಿಕೋದ್ದಾಮನಿ
ಸ್ವನದೊಳ್ ಪೊಂಪುಳಿವೋಗುತಿರ್ಪುವೆರಡುಂ ವಿದ್ಯಾಧರಶ್ರೇಢಿಗಳ್ ॥ ೭೦

ವ॥ ಅವಱೊ[2]ಳುತ್ತರಶ್ರೇಢಿಯೊಳುದಗ್ರಹಿಮಶಿಖರಿಶಿಖರಶಾರದನೀರದಾಕಾರಸುಧಾಧವಳಿತೋತ್ತುಂಗಪ್ರಾಸಾದಕೂಟಕೋಟಿಸಂಕೀರ್ಣಮುಮಂ ಆತ್ಮೀಯಜಾತ್ಯನುರೂಪಾಚರಣ[3]ಪರಿಣತಚತುರಜನಪರಿಪೂರ್ಣಮುಮಂ ಅನೇಕವಿದ್ಯಾಧರರಾಜರಾಜದ್ರಾಜವೀಧೀವಿಸ್ತೀರ್ಣ[4]ಮುಮಾಗಿ,

ಬಳಸಿದ ಪೊನ್ನಕೋಂಟೆ ಪುರಲಕ್ಷ್ಮಿಯ ಕೈಗೆಯಲಿರ್ದ ತೊಣದೊಳ್
ಬಳಸಿದ ಪೊನ್ನಕಾಂಡಪಟ[5]ದಂತಿರೆ ರುಂದ್ರನರೇಂದ್ರಗೇಹಮಾ ।
ಲಳಿತೆಯ[6] ವಕ್ತ್ರಪಂಕಜವಿಳಾಸಮನಾಂತಿರೆ ರಮ್ಯರಾಜತಾ
ಚಳತಿಳಕೋಪಮಾನಮೆನೆ ಸಂದಳಕಾಪುರಮೊಪ್ಪಿ ತೋಱುಗುಂ ॥ ೭೧

ವ॥ ಅದನಾಳ್ವನಖಿಳಖಚರಪತಿಮುಕುಟಮಣಿ[7]ಗಣಕಿರಣರಾಗರಂಜಿತಚರಣನಳಿನಯುಗಳಂ ಉದಿತೋದಿತನಿಜಕುಲಮಂದರಾಚಳಮಂದಾರಪಾದಪಂ ಅನೇಕಸಮರಸಮ್ಮರ್ದನನಿರ್ಜಿತೋರ್ಜಿತಾರಾತಿಬಳಂ ಅತಿಬಳನೆಂಬಂ; ಆತನಮಹಾದೇವಿ ನಯನಮನೋಹರಿ ಮನೋಹರಿಯೆಂಬಳ್.

ಬಲಿಸುವ ರೂಪು ಗಾಡಿಯೊಳೊಡಂಬಡೆ ಗಾಡಿ ವಿಳಾಸದೇಳ್ಗೆಯೊಳ್
ನೆಲಸೆ ವಿಳಾಸಮಂಬರಚರಾಮರಕಾಂತೆಯರೆಲ್ಲರಂ ಪಳಂ ।
ಚಲೆಯೆ ನೆಗಳ್ತೆವೆತ್ತ ಪತಿಭಕ್ತಿಯ ಮೈಮೆಯ ಮಾನಸಿಕ್ಕೆಯ
ಗ್ಗಲದ ಪೊಗಳ್ತೆ ತನ್ನದೆನೆ ಪೆಂಪು ಮನೋಹರಿಗಲ್ಲದಕ್ಕುಮೇ ॥ ೭೨

ಹಾವವಿಳಾಸವಿಭ್ರಮಸಮನ್ವಿತರೂಪಕಳಾಪದಾಮಹಾ
ದೇವಿಗಮಾವಿಯಚ್ಚರಗಣಾಗ್ರಣಿಗಂ ಗುಣರತ್ನವಾರ್ಧಿ ನಾ ।

---

[1]ಗ.—ಗಾಯಿನೀಜನಗೀತಾ. [2]ಕ.—ಅದಱೊ. [3]ಗ.—ರೂಪಾಭರಣ.
[4]ಕ.—ರಾಜರಾಜವಿವಿಧವಿಸ್ತೀರ್ಣ. [5]ಖ. ಗ—ಕನ್ನವಡ. [6]ಗ.—ಲಲನೆಯ.
[7]ಕ.—ಪತಿಮಣಿಮಕುಟರಾಗಮಣಿ.

ನಾವಿಧಸೌಖ್ಯಭಾಜನನುಪಾರ್ಜಿತಖೇಚರರಾಜಹೃದ್ಯವಿ
ದ್ಯಾವಿಭವಂ ಮಗಂ ಜಿತವಿರೋಧಿನರೇಂದ್ರಬಳಂ ಮಹಾಬಳಂ ॥ ೭೩

ವ॥ ಆಮಹಾಬಳಂ ಬಾಲಕಾಲದಿಂ[1]ತಗುಳ್ದಭ್ಯಸ್ತಸಮಸ್ತವಿದ್ಯಾಧರವಿದ್ಯಾಪಾರಗನುಂ ಪರಿಸಮಾಪ್ತಸಕಳಕಳಾವಿಜ್ಞಾನನುಂ ಅಧಿಗತಾಶೇಷ[2]ಶಾಸ್ತ್ರನುಂ ಪರಿಣತಸಕಳಶಸ್ತ್ರನುಮಾಗಿ ಯೌವನಂ ನೆಱೆಯೆನೆಱೆಯೆ.

ಮೊಗಮುತ್ಫುಲ್ಲಸರೋಜಹಾಸಿ ನಯನಂ ನೀಲಾಂಬುಜಸ್ಪರ್ಧಿ ಬಾ
ಹುಗಳಾಜಾನುವಿಳಂಬಿಗಳ್ ತೊಡೆಗಳುಂ ರಂಭಾಮೃದುಸ್ತಂಭಶೋ।
ಭೆಗಳಂ ಗೆಲ್ದುವು ವಕ್ಷಮಂಬರಚರಶ್ರೀಗೇಹಮೆಂಬೊಂದೆ ರೂ
ಪೆ ಗಡಂ ನೋಡಲೊಡಂ ಮರುಳ್ಗೊಳಿಸುಗುಂ ವಿದ್ಯಾಧರಸ್ತ್ರೀಯರಂ ॥ ೭೪

ಮನಮೊಲ್ದಾತನ ಗಾಡಿಯಂ ದರವುರಂಗಂಡಾಕೆಗಳ್ ಪೂವಿನಂ
ಬಿನ ಕೋಳ್ಗಂ ತಳವಾಲಿನೀರ್ಗಮಲರ್ವಾಸಿಂಗಂ ಕುಳಿರ್ಕೋಲ್ಪಿನಂ।
ದನಕಂ ಚಂದನಕಂ ಪಸುರ್ಪಿಸೆವ ಬಾಳ್ಗೊಂಪಕ್ಕಮೊಂದೊಂದೆ[3]ತ
ಣ್ಪಿನಿಯೊಳ್ಕ್ರೀಡಿಸುತಿರ್ಪ[4]ಬಿಜ್ಜಣಿಗೆಗಂ ಪಕ್ಕಾಗದೇಂ ಪೋಪರೇ ॥ ೭೫

ವ॥ ಅಂತುಮಹಾಬಳಕುಮಾರಂ ಕುಮಾರಕೇಳೀವಿಳಾಸವಿಶ್ರಾಂತಸ್ವಾಂತಂ ಯುವರಾಜಪದವಿಗೆ ಯೋಗ್ಯನಾಗೆ,

ಬಳವದ್ವಿದ್ವಿಷ್ಟವಿದ್ಯಾಧರಕರಟಿಶಿರಶ್ಶುಕ್ತಿಸಂಭೂತಮುಕ್ತಾ
ವಳಿಯೊಳ್ಕಣ್ಣಿಟ್ಟು ತನ್ನೊಳ್ನೆಱೆಯಲಿದು ಜಯಶ್ರೀಯ ಮುಂದಟ್ಟಿದೆಕ್ಕಾ।
ವಳಿಯೆಂಬಂತಿರ್ದುದಂ ಕಂಠಿಕೆಯನುಭಯವಿದ್ಯಾಧರಶ್ರೇಣಿಗಳ್ ಮಂ
ಗಳಗೀತಾತೋದ್ಯನಾದಂಗಳೊಳೆ ಪುದುವಿನಂ ಕಟ್ಟಿದಂ ಖೇಚರೇಂದ್ರಂ॥ ೭೬

ವ॥ ಅಂತುಕಟ್ಟಿದಾಗಳ್,

ಹಿಮಶೈಳದೊಳಂ ಜಳಧಿಯೊ
ಳಮೆಂತಭಿನ್ನಾಂಗಿ[5] ಗಂಗೆ ಸಂಗತೆ ಖಚರೋ।
ತ್ತಮನೊಳಮಾವಿದ್ಯಾಧರ
ಕುಮಾರನೊಳಮಂತೆ ಲಕ್ಷ್ಮಿ ಸಂಗತೆಯಾದಳ್ ॥ ೭೭

---

[1] ಗ.—ಕಾಲದೊಳ್. [2] ಕ.—ಅಧೀತಾಶೇಷ ; ಗ—ವಿದಿತಾಶೇಷ.
[3] ಗ.—ಮೋರೊಂದೆ. [4] ಖ.—ಯೊಳ್ಕೂಡಿರಿಸಿರ್ಪ. [5] ಖ.—ಭಿನ್ನಾಂಗೆ.

ಪೆಸರ್ಗಳ್ಕಿತ್ತು ಸಮಸ್ತಖೇಚರಬಲಂ ತೇಜಕ್ಕೆ ಬೆರ್ಚಿತ್ತು ಮುಂ
ಪೊಸಪೊಚ್ಚಂ[1] ಬೆರಸಿರ್ಪ ಭೂಚರಬಲಂ ಮೆಲ್ಪಿಂಗೆ ಮೆಚ್ಚಿತ್ತು ತ।
ನ್ನ ಸಮಸ್ತಂ ಪರಿವಾರಮೆಂಬ ಗುಣಸಂಘಾತಂ[2]ಗಳಂ ತಾಳ್ದಿ ಪೆಂ
ಪೆಸಕಂಬೆತ್ತಿರೆ ಸಂತಮಿಂತತಿಬಳಂ ರಾಜ್ಯಂಗೆಯುತ್ತಿರ್ಪಿನಂ ॥ ೭೮

ತೊಡರ್ದೀಪುತ್ರಕಳತ್ರಮೋಹದೊಳದೇಕಿರ್ದಿರ್ದಪೈ ನಿನ್ನ ಮೆ
ಳ್ಪಡಿದೇಕಾರ್ಣವಮಂತಕಂ ಕಡುಪಿನಿಂ ಕಂಠಗ್ರಹಂಗೆಯ್ವುದಿಂ ।
ತಡೆಯಂ ಚೇತರಿಸೆಂದು ಬಂದು ಕಿವಿಯೊಳ್ಪೇೞ್ವಂತೆವೊಲ್ಕೆಂನೆಯಿಂ
ದೊಡೆದೋರೆಂದೊಗೆ[3]ತಂದುವಂದು ನರೆಗಳ್ ವಿದ್ಯಾಧರಾಧೀಶನಾ ॥ ೭೯

ವ॥ ಅಂತು ಮೇಲೆ ಬಂದ ಕೃತಾಂತರಾಜವಾಹಿನಿಯ ಸಿತಪತಾಕೆಗಳನನುಕರಿಸುವ ಪಳಿತಂಗಳಂ ದರ್ಪಣದೊಳ್ನೋಡಿ[4] ಕಂಡು ಪರಪತಾಕಿನೀ[5]ಪತಾಕೆಯಂ ಕಂಡು ಸೆರಗಿಲ್ಲದ ಗಂಡನಂತಿನಿ[6]ಸಪ್ಪೊಡಂ ಮಾಣದದುವೆ ಸಂಸಾರನಿರ್ವೇಗಕಾರಣಮಾಗೆ ;

ಕರೆದಾಗಳ್ನಿಜಮಂತ್ರಿಮಂಡಳಮಹಾಸಾಮಂತಶುದ್ಧಾಂತಮು
ಖ್ಯರನಾವೃತ್ತಕಮೆಲ್ಲಮಂ ತಿಳಿಯೆ ಪೇೞ್ದಾಶಾಂತಮಂ ತಾಗೆ ತೂ ।
ರ್ಯರವಂ ಪೊಣ್ಮೆ ಮಹಾಬಳಂಗತಿಬಳಂ ಕೊಟ್ಟಂ ಸಿತಚ್ಛತ್ರಚಾ
ಮರಸಿಂಹಾಸನಚಿಹ್ನಭಾಸುರ[7]ವಿಯದ್ಗಾಮೀಶ್ವರೈಶ್ವರ್ಯಮಂ ॥ ೮೦

ವ॥ ಅಂತು ಮಹಾಬಳಂಗೆ ಮಹಾವಿಭೂತಿಯಿಂದಮಂಬರಚರಶ್ರೀಯನಿತ್ತು ಭವ್ಯಸಾರ್ಥಪ್ರಾರ್ಥನೀಯಮುಕ್ತಿಶ್ರೀಯನಾಸೆವಟ್ಟು ಸಕಳಮಳನಿರ್ಜರಣಕರಣಕಾರಣಮಂ ತಪಶ್ಶ್ರೀಯಂ ಕೈಕೊಳಲ್ಬಗೆದು ಸಾಸಿರ್ವರರಸುಮಕ್ಕಳುಮಯ್ನೂರ್ವರರಸಿಯರುಂ ಬೆರಸು ಗುಣಧರ[8]ಕೇವಳಿಗಳ ಪಾದಪದ್ಮಮೂಲದೊಳ್,

ಅತಿತೃಷ್ಣಾಪರನಾಗಿ ಮುನ್ನೆ ತೊಡರ್ದಿರ್ದಾಗಾಂಪೆ ಸಾಲ್ಗುಂ ಮದಾ
ಕೃತಿಯಂ ಮಾಸಿಸಿ ಮುಪ್ಪು ಚಪ್ಪರಿಸೆಯುಂ ಚಿಃ ಕೆಮ್ಮನೊಳ್ಕಂಮಿ ಸಂ ।

---

[1] ಖ.—ಪೊಸಪೊರ್ತಂ. [2] ಗ.—ಸಂದೋಹಂ. [3] ಕ.ಖ.—ದೋರಂತೊಗೆ.
[4] ಖ.ಗ.—ಪಳಿತಂಗಳಂನೋಡಿ. [5] ಕ. ಖ.—ಪರಬಳಪತಾಕಿನೀ.
[6] ಕ.—ಗಂಡಗಲಿಯಂತಿನಿ. [7] ಗ.—ಭಾಸ್ವರ. [8] ಗ.—ಗಣಧರ.

ಸೃತಿಯೊಳ್ಮತ್ತೆಗಡಂ ಕಡಂಗಿ[1] ತೊಡರ್ದಾಂ ಮಾಣ್ದಿರ್ಪೆನೆಂದಣ್ಮಿ ಘೋ
ರತಪೋವೃತ್ತಿಯನಾಂತ ಪೆಂಪತಿಬಳ'ಂಗಕ್ಕುಂ ಪೆಱರ್ಗಕ್ಕುಮೇ[2] ॥ ೮೧

ವ॥ ಮತ್ತಮತ್ತ ಮಹಾಬಳಖಚರಪತಿಯುಮಾತ್ಮೀಯಗುರುನಿರೂಪಿತಗಗನಚರರಾಜ್ಯಭಾರಮನಾಶೈಶವಪ್ರಭೃತಿಪ್ರರೂಢನಿರ್ಭರಪ್ರೇಮರಸರುಮನೇಕಾರ್ಥಶಾಸ್ತ್ರಪ್ರಯೋಗಕುಶಲರುಂ ಸಕಳಕಳಾವಗಾಹನ ಸಮಾಹಿತಮತಿಗಳುಮಾಗಿ ನಾಲ್ಕುಮುಪಧೆಗಳೊಳಂ[3] ಶುದ್ಧರಾಗಿ ನಾಲ್ಕುಮುಪಾಯಂಗಳಱರ್ಪಂತಿರ್ದ ಜಗತ್ಪ್ರಸಿದ್ಧ ಸ್ವಯಂಬುದ್ಧ ಮಹಾಮತಿ ಸಂಭಿನ್ನಮತಿ ಶತಮತಿ[4]ಗಳೆಂಬನಾಲ್ವರುಮಮಾತ್ಯರ ಮೆಯ್ಯೊಳ್ಳಿಱಿಸಿ ನಿರಾಕುಳಸ್ವಾಂತನಪಗತರಾಜ್ಯಚಿಂತನಮರಸಾಂದರೀವಿಳಾಸೋಪಹಾಸಿಗಗನಚರಸಾಂದರೀಮನೋನಯನಸಾಂದರನಾಗಿ ವಿದ್ಯಾಧರಶ್ರೀಯನನುಭವಿಸಿ,

ಪೊಸತಂ ಸ್ತ್ರೀರಾಜ್ಯಮಂ ಮೇಣ್ಪಡೆದನೊ ಬಿದಿ ಲಾವಣ್ಯಸಿಂಧುಪ್ರವಾಹಂ
ಪೊಸತೀಗಳ್ಬಂದು ಬೆಳ್ಳಂಗೆಡೆದುದೊ ಗಣಿಕಾಸೃಷ್ಟಿಯಂ ಪುಷ್ಪಚಾಪಂ।
ಪೊಸತಂ ಮಾಡಿಟ್ಟನೋ ನಿಪ್ಪೊಸತು ದಲಿದಱೊಂದಂದಮೆಂಬಂತದೇಂ ರಂ
ಜಿಸಿತೋ ವಿದ್ಯಾಧರಾಧೀಶ್ವರನ ಕೆಲದ ವಿದ್ಯಾಧರಸ್ತ್ರೀಸಮೂಹಂ ॥ ೮೨

ವನರಾಜಿ[5]ಕ್ರೀಡೆಯಂ ಯೌವನವನದೊಳೆ ತೋಱಲ್ಜಲಕ್ರೀಡೆಯಂ ನೂ
ತನಲಾವಣ್ಯಾಚ್ಛತೋಯಾಶಯದೊಳೆ ಮೆಱೆಯಲ್ ನರ್ತನಕ್ರೀಡೆಯಂ ನ।
ಚ್ಚಿನ ನಾನಾಭಾವರತ್ಯುತ್ಸವದೊಳೆ ಪಡೆಯಲ್ ಬಲ್ಲ ವಿದ್ಯಾಧರಸ್ತ್ರೀ
ಜನದಿಂದಂ ಕಣ್ಗೆ ವಂದಂ ಸುಕವಿಜನಮನೋಮಾನಸೋತ್ತಂಸಹಂಸಂ॥ ೮೩

ಲಳಿತಾಳಂಕರಣಪ್ರಸನ್ನರಸವದ್ಗೀಯಂಗಳೊಳ್ ಮೂಡುತುಂ
ಮುಳುಗುತ್ತುಂ ಖಚರೀಜನಾನನನವಾಂಭೋಜಂಗಳೊಳ್ ಕಂಪನೀ[6] ।
ಪ್ಪೊಳುತುಂ ನಂದನರಾಜಿಯೊಳ್ನಲಿಯುತುಂ ತದ್ರಾಜಹಂಸಂ ನಿರಾ
ಕುಳಮಿಾಮಾಪ್ಪೆಗಳಿಂದೆ ಪೊೞ್ತುಗಳೆವಂ ಸಂಸಾರಸಾರೋದಯಂ ॥ ೮೪

ಇದು ದೇವೇಂದ್ರಮುನೀಂದ್ರವಂದ್ಯಪರಮಜಿನೇಂದ್ರಮುಖಚಂದ್ರವಾಕ್ಚಂದ್ರಿಕಾ
ಪ್ರಸರಪ್ರಸಾದೋದೀರ್ಣಸೂಕ್ತಿಕಲ್ಲೋಲಮಾಲಾಕೀರ್ಣಕವಿತಾಗುಣಾರ್ಣವ
ಪ್ರಣೀತಮಪ್ಪಾದಿಪುರಾಣದೊಳ್ ಮಹಾಬಳ
ಕುಮಾರೋದಯ ವರ್ಣನಂ.

1ಕ.ಗ.—ತೊಡಂಕಿ. 2ಗ.—ಪೆಱಂಗಕ್ಕುಮೇ. 3ಕ.—ನಾಲ್ಕುಮುಪದೇಶಂಗಳೊಳಂ.
4ಕ.ಗ.—ಶತಬುದ್ಧಿ. 5ಖ.—ನವರಾಜ್ಯ. 6ಕ.—ಗಳೊಳ್ತುಂಪ.

ದ್ವಿತೀಯಾಶ್ವಾಸಂ.

ಶ್ರೀವಿಜಯಾರ್ಧಾಚಳಖಚ
ರಾವಳಿಮಣಿಮಕುಟಮಕರಿಕಾನಿಕಷಣಲೇ।
ಖಾ[1]ವಿಳಸಿತಪದಕಮಳನಿ
ಳಾವಂದ್ಯಯಶಂ ಸರಸ್ವತೀಮಣಿಹಾರಂ॥ ೧

ಕಟಕಕಟಿಸೂತ್ರಕುಂಡಲ
ಹಟತ್ಕಿರೀಟಾಂಗದಾದಿಮಣಿಭೂಷಣಭಾ।
ಜಟಿಳಿತಮಯೂತರ್ಯ್ಯತ್ಕರ್ಷಂ
ಸ್ಫುಟಹರ್ಷಂ ತನ್ನ ವರ್ಷವರ್ಧನದಿನದೊಳ್॥ ೨

ವ॥ ಆಸ್ಥಾನಮಂಡಪದೊಳ್ ಅತಿಪ್ರಚಂಡಮಂಡಳಿಕಮಹಾಸಾಮಂತ ಮಂತ್ರಿಪ್ರಧಾನಪುರೋಹಿತಾಂತರ್ವಂಶಿಕಾದಿಪರಿವಾರಪರಿವೃತಂ ಉತ್ತುಂಗ ಸಿಂಹಾಸನಾಸೀನಂ ಅಧಸ್ಸ್ಥಿತಮಣಿಮಯಪೀಠವೇದಿಕಾವಿನ್ಯಸ್ತವಾಮ ಪಾದಂ ಅಂಬರಚರಾಂಗನಾಕರತಳಪಲ್ಲವೋಲ್ಲಸಿತಹೇಮಚಾಮರಪವನವಿ ಲೋಲದುಕೂಲವಸನಪರಿವೃತ[2]ಪಂಚರತ್ನಪ್ರಭಾಭಾಸುರವಿವಿಧಭೂಷಣ ವಿರಚಿತಸುರಶರಾಸನಂ ಬಡ್ಡೋಲಗಂಗೊಟ್ಟಿರೆ;

ಎರಡುಂ ವಿದ್ಯಾಧರಶ್ರೇಢಿಯ ಖಚರಮಹೀಪಾಳಕರ್ ಸುತ್ತಲುಂ ಬಂ
ದಿರೆ ನಾನಾತೋದ್ಯವಾದ್ಯಂಗಳನೆ[3]ಮೆಱೆದು ಮೆಚ್ಚಂಕೊಳಲ್ವಾದಕರ್ಬಂ
ದಿರೆ ಗೀತಾರಾವದಿಂದಂ[4]ನೆಱೆಯೆ ನೆಱಗೊಳಲ್ ರಕ್ತಕಂಠೀಜನಂ ಬಂ
ದಿರೆ ವಂದಿವ್ರಾತಮೆತ್ತಂ ಬಗೆಗೊಳಲಿರೆ ಚೆಲ್ವಾದುದಾಸ್ಥಾನರಂಗಂ॥ ೩

ನುಡಿ ಮೊಗರಾಗಮುಂ ಪಡೆಯೆ ನೋಟಮನಂಗನ ಬಿಲ್ಲ ಬಲ್ಮೆಯುಂ
ಪಡೆಯೆ ನಯಂ ನಯಂಬಡೆಯೆ ಕಲ್ಪಮಹೀಜದ ಪಕ್ಕದಿರ್ಕೆಲಂ।
ಬಿಡಿದು ಮಡಲ್ತುತೋಱುವ ಲತಾವಳಿಗಳ್ಗೆಣೆಯಾಯ್ತು ರಕ್ಕೆಲಂ
ಬಿಡಿದು ಖಗೇಂದ್ರನೋಲಗದೊಳಿರ್ದ ವಿಳಾಸವಿಳಾಸಿನೀಜನಂ॥ ೪

---

[1]ಕ. ಖ.—ರೇಖಾ. [2]ಕ.—ವಸನಪರಿಮಿತ.
[3]ಕ.—ನಾನಾವಾದ್ಯನಾದಂಗಳನೆ. [4]ಕ.—ರವದಿಂಪಂ.

ನಿರುಪಮದೇಹದೀಪ್ತಿಗಳೊಳಿಕ್ಕೆಯಿನೆಯ್ದೆ ಪಳಂಚಿ ಮಿಂಚುವಾ
ಭರಣದ ಮಿಂಚು ಕಪ್ಪುರದ ಪಾಱುವ ಸುಟ್ಟುರೆ ಪೂವಿನುಬ್ಬುರ್ ಕ।
ತ್ತುರಿಯತಗುಳ್ದು[1]ಪೊಯ್ವಸೊವಡಾಸೊವಡೊಳ್‌ಕಡುಸೊರ್ಕಿಸೊರ್ಕಿ[2]ಗಾ
ವರಿಸುವ ತುಂಬಿ ಚೆಲ್ವೆಸೆಯೆ ಕಣ್ಗೆಸೆದತ್ತು ಖಗೇಂದ್ರನೋಲಗಂ ॥ ೫

ವ॥ ಅಂತೊಡೆಡ್ಡೋಲಗಂಗೊಟ್ಟಿರ್ದ ವಿದ್ಯಾಧರರಾಜನಂ ಸ್ವಯಂಬುದ್ಧಂ ಅಭ್ಯುದಯಪರಂಪರಾನಿಮಿತ್ತಂ ಸದ್ಧರ್ಮೋಪದೇಶಲಬ್ಧಾವಸರನಾಗಿ,

ಲಾವಣ್ಯಾಬ್ಧಿತರಂಗಭಂಗಲಲಿತಭ್ರೂಭಂಗದಿವ್ಯಾಂಗನಾ
ಭಾವಾಪಾಂಗನಿರೀಕ್ಷಣಾಮೃತಕೃತಾನಂಗೋತ್ಸವಂ ಚೋದ್ಯವಿ।
ದ್ಯಾವಷ್ಟಂಭವಿಜೃಂಭಿತಾಂಬರಚರೇಶಾರಾಧ್ಯನಾಗಿರ್ದ ನಿ
ನ್ನೀವಿದ್ಯಾಧರಲಕ್ಷ್ಮಿ ಪುಣ್ಯಜನಿತಂ ವಿದ್ಯಾಧರಾಧೀಶ್ವರಾ ॥ ೬

ಭವವಾರಾಶಿನಿಮಗ್ನರಂ ದಯೆ ದಮಂ ದಾನಂ ತಪಂ ಶೀಲಮೆಂ
ಬಿವೆ ಮೆಯ್ಯಾಗಿರೆ ಸಂದ ಧರ್ಮಮೆ ವಲಂ ಪೊತ್ತೆತ್ತುಗುಂ ಮುಕ್ತಿಪ।
ರ್ಯವಸಾನಂಬರಮಾನುಷಂಗಿಕಫಲಂ ಭೂಪೇಂದ್ರದೇವೇಂದ್ರರಾ
ಜ್ಯವಿಳಾಸಂ ಪೆಱತಲ್ತು[3] ನಂಬು ಖಚರಕ್ಷ್ಮಾಪಾಲಚೂಡಾಮಣೀ ॥ ೭

ವ॥ ಎಂದು ಧರ್ಮಪ್ರಭಾವಮುಮಂ ತತ್ಫಲಸ್ವಭಾವಮುಮಂ ತಿಳುಪುವವಸರದೊಳುಱಿದ ಮಹಾಮತಿ ಸಂಭಿನ್ನಮತಿ ಶತಮತಿ[4]ಗಳ್ ಲೋಕಾಯತಿಕ ಯೋಗಾಚಾರ ಮಾಧ್ಯಮಿಕಮತವಿತಥಾಭಿಧಾಯಿಗಳ್ ಜೀವಾಭಾವ[5]ಮನೆ ಪಿಡಿಯುಚ್ಚುವಿಡಿದು ;

ಒಡಲೊಳ್ ಜೀವಮಿರ್ದು ಗಡ ಸಂಚಿಸುತಿರ್ಪುದು ಪುಣ್ಯಪಾಪಮಂ
ಗಡ ಬೞಿಕತ್ತ ಬೇಱೆ ಪೆಱತೊಂದೊಡಲೊಳ್ಗಡ ತಾನೆ ನಿಂದೊಡಂ।
ಬಡಿಪುದು ಧರ್ಮಕರ್ಮಫಲಮಂ ಗಡ ಸತ್ತನೆ ಮತ್ತೆ ಪುಟ್ಟುವಂ
ಗಡ ಪುಸಿ ಕಾಣ ಡಂಬಮಿದು ಖೇಚರ ನೀನಿದನೆಂತು ನಂಬಿದೋ ॥ ೮

ತಲೆವಱಿದುಟ್ಟುದಿಕ್ಕಿ ಸುರಲೋಕಸುಖಂಗಳನುಣ್ಬೆವೆಂಬ ಬ
ತ್ತಲೆಗರ ಮಾತುಗೇಳದಿರು[6]ಬಾಳ್ವೆನಮಿಂದ್ರಿಯವರ್ಗದಿಚ್ಚೆಯುಂ।

---

[1]ಕ.—ಪೊದಳ್ದು. [2]ಕ.—ಸೊರ್ಕುಸೊರ್ಕಿ. [3]ಕ.—ಪೆಱವಲ್ತು ; ಖ.—ವೆಱದಲ್ತು.
[4]ಖ.—ಶತಬುದ್ಧಿ. [5]ಕ.—ಜೀವಭಾವವನೆ. [6]ಕ.—ಗೊಳ್ಳದಿರು.

ಸಲಿಸಿ ಬಸಂತದೊಳ್ ಕಳಿಕೆಗರ್ಚಿದ ಕೋಗಿಲೆಯಂತೆ ಬಿಚ್ಚತಂ
ನಲಿವುದು ಕಂಡರಾರ್ ಮಱುಭವಂಗಳನಿಲ್ಲಿ ವಿಯಚ್ಚರೇಶ್ವರಾ ॥ ೯

ವ॥ ಅದಲ್ಲದೆಯುಂ ಸ್ನಾಯ್ವಲಾಬೂದಂಡಾಂಗುಷ್ಠಾಂಗುಳಪ್ರಯತ್ನದಿಂ ಶ್ರವಣರಮಣೀಯಕ್ವಣಿತಮೆಂತು ನೆಗಟ್ದಪ್ಪುದು ; ಪಿಷ್ಟೋದಕಗುಡಧಾತಕೀಸಂಯೋಗದಿಂದಮೆಂತು ಮದವಿಕಾರಮೆಸೆದಪ್ಪುದು ; ಅಂತೆ, ಕಾಯಾಕಾರಪರಿಣತಪೃಥ್ವ್ಯಪ್ತೇಜೋವಾಯುಗಳತ್ತಣಿಂ[1] ಬಂದು ಗರ್ಭಾದಿಮರಣಪರ್ಯಂತಂ ತದಾತ್ಮಕಂ ಚೈತನ್ಯಂ ಪುಟ್ಟುಗುಂ ; ಅದಱಿಂ ಪರಲೋಕಮಿಲ್ಲ : ಪರಲೋಕಮಿಲ್ಲದಂದು ತಲ್ಲೋಕಸುಖಾನುಭವಾಪೇಕ್ಷೆಯಿನೈಹಿಕಸುಖವಿಮುಖನಾಗಿ ಶರೀರಾರ್ಥವ್ಯಯಂಮಾಡುವಾತಂ ಕಯ್ಯದಂ ಬಿಟ್ಟು ಕಾಲದ ಕರ್ಱಗುವಾತನಂ ಪೋಲ್ಗುಂ—ಎಂದು ಬೃಹಸ್ಪತಿಮತಾನುಸಾರಿಯಪ್ಪ ಮಹಾಮತಿ ನುಡಿದು ಮಾಣ್ದ ತದನಂತರದೊಳ್ ; ವಿಜ್ಞಾನವಾದಮನಾಶ್ರಯಿಸಿ, ಪೂರ್ವಪೂರ್ವಚಿತ್ತವಿಶೇಷಪ್ರಭವಂಗಳುತ್ತರೋತ್ತರಚಿತ್ತಕ್ಷಣಂಗಳುಪಾದಾನೋಪಾದೇಯಕ್ಷಣಸಂಪೃಕ್ತಂಗಳ್ ನಿರನ್ವಯಪ್ರತಿಕ್ಷಣವಿಶರಾರುಗಳ್ ನಿರಂಶಂಗಳಾಗಿಯುಂ ಭ್ರಾಂತಿವಶದಿಂ ಗ್ರಾಹ್ಯಗ್ರಾಹಕಸಂವೇದನಾಕಾರತ್ರಯಾಕ್ರಾಂತಂಗಳ್ವಿಜಾತೀಯಾವ್ಯವಧಾನಲಘೂತ್ಪತ್ತಿ ಸದೃಶಾಪರಾಪರೋತ್ಪತ್ತಿಯೆಂಬಿವಱಿಂ ವಿಪ್ರಲಬ್ಧಬುದ್ಧಿಗೆ ಸಂತಾನರೂಪದಿಂ ಪುಟ್ಟುತ್ತಿರ್ದ ವಿಜ್ಞಾನಲಕ್ಷಣಂಗಳಾತ್ಮಾಭಿಧಾನಮುಂ ಪೆಟ್ಟಸುಗುಂ. ತದೇಕತ್ವಗ್ರಾಹಕಪ್ರತ್ಯ[2]ಭಿಜ್ಞಾನಮುಂ ಲೂನಪುನರ್ಜಾತನಖಕೇಶಾದಿಗಳೊಳ್ ಪೂರ್ವಾಪರೈಕತ್ವಮಿಲ್ಲದಲ್ಲಿಯುಂ ಕಾಣಲಕ್ಕುಂ ; ಅಪ್ಪುದಱಿಂದದುವುಂ ತ್ರಿಕಾಲಾನುಯಾಯಿ ಜೀವಾಸ್ತಿತ್ವಮನಱಿಪಲಾಱದು ; ಅದಱಿಂ ಪರಲೋಕಸುಖಾರ್ಥಮಾತ್ಮಾಸ್ತಿತ್ವಾಭಿನಿವೇಶದಿಂ ತನುಧನನಿಧನಂಮಾಡಿ ಸೇದೆಗಿಡಲ್ವೇಡೆಂದು ಸಂಭಿನ್ನಮತಿ ನಿಜವಿಜ್ಞಾನವಾದಪುರಸ್ಸರಮಾತ್ಮನಿರಾಕರಣಮನೆ ನುಡಿದು ಮಾಣೆ ; ಶೂನ್ಯವಾದಪ್ರಕಾಶನಪರಂ, ಆವುದಂತರ್ಬಹೀರೂಪದಿಂ ವಿಶದದರ್ಶನಾವಗಮ್ಯಂ ಅದೆಲ್ಲಮಸತ್ಯಾವಭಾಸಿ: ಎಂತು ಮರುಮರೀಚಿಕಾಸ್ವಪ್ನೇಂದ್ರಜಾಲಾದಿಗಳೊಳ್ ವಿಶದದರ್ಶನಾವಗಮ್ಯಜಲಕರಿತುರಗನರಾದಿಗಳ್, ಅಂತೆ ಜಾಗ್ರದ್ದಶಾವಭಾಸಮಾನಾಂತರಂಗಬಹಿರಂಗವಸ್ತುಗಳುಂ. ಅದಱಿಂ ಜೀವ

[1]ಕ.—ತೇಜೋವಾಯ್ವಾಕಾಶಂಗಳತ್ತಣಿಂ. [2]ಕ.—ತದೇಕತ್ವಗ್ರಾಹಕತ್ವಗ್ರಾಹಕಪ್ರತ್ಯ.

ವೆಂಬುದೆಲ್ಲಿತ್ತು, ಪರಲೋಕವೆಂಬುದಾವೆಡೆಯದು, ಅದರ್ಕೆ ಕಾರಣಮ ಪ್ಪ ಪಾಪಪುಣ್ಯಂ[1]ಗಳೆತ್ತಣಿಂಬಂದುವು ? ಇವೆಲ್ಲಂ ಗಂಧರ್ವನಗರವಿಳಾಸವಿ ಳಸಿತಂಗಳ್. ಅದನಱಿಯದಬೋಧ[2]ಬೋಧಿತತಪೋದಾನವಿಧಾನದಿಂ ಮು ಧಾಕ್ಲೇಶಾಯಾಸನಿರತರಾಗಿ ನವೆವರೆಂದು ಶತಮತಿಯುಮೀವಮಾಪ್ಕೆಯೊ ಳೆ ಜೀವಾಭಾವಮನೆ[3] ಸಮರ್ಥಿಸೆ ; ತದುಪನ್ಯಸ್ತಕುಹೇತುಕುದೃಷ್ಟಾಂ ತಾನರ್ಥಕವಚನರಚನಾಪ್ರಳಾಪಮನವ್ಯಗ್ರಕುಶಾಗ್ರೀಯಬುದ್ಧಿಸಮೃದ್ಧಂ ಸ್ವಯಂಬುದ್ಧನವಧಾರಿಸಿ,

ಅನುವದಿಸಿದಪುದು ನುಡಿ ನುಡಿ
ದನಿತುಮನೆನೆ ತೊದಳ ತೊದಳ ದೆ[4]ಸೆಯಿಲ್ಲೆನೆ ಮಾ।
ತಿನ ಪಸುಗೆ ಪಸುಗೆವಡೆದ
ತ್ತೆನೆ ನುಡಿದಂ ಮಧುರಮೃದುಗಭೀರಧ್ವನಿಯಿಂ ॥ ೧೦

ವ॥ ನಿ[5]ಮ್ಮ ಮುನ್ನೆ ನುಡಿದ ಕಾಯಾಕಾರಪರಿಣತಭೂತಸ್ವಭಾವ[6]ಮೆ ಚೈತನ್ಯಮರ್ಥಾಂತರಭೂತಮಲ್ಲೆಂಬ ನುಡಿ ಕಾಯಾಕಾರಪರಿಣತಭೂ[7]ತ ಚೈತನ್ಯಂಗಳ್ ಬಹಿರಂತರ್ಮುಖಾವಭಾಸಿಗಳ್ ಬಾಲ್ಯಾದಿರಾಗಾದಿವಿರುದ್ಧಧ ರ್ಮಾಧ್ಯಾ[8]ಸಿತಂಗಳುಮೊರ್ಬನಿಂದೊಂದೆಸಮಯದೊಳ್ ನಿಯಮದಿಂ ದ್ರ ವ್ಯಾಂತರಭಾವದಿಂಭಿನ್ನಪ್ರ[9]ಮಾಣಗ್ರಾಹ್ಯಂಗಳಪ್ಪುದಱಿಂ ಕೂ[10]ಡಿಬಾರದು. ದೇಶಭೇದದಿಂ ಬೇಱೆವೇಱೆ ಕಾಣ[11]ಲಾಗದದಱಿಂದದರ್ಕೆ ಭೇದಮೆಂಬೆಯು ಪ್ಪೊಡೆ ಶರೀ[12]ರರೂಪಪರಿಣತಾವನಿಪವನಸಖಪವನಂಗಳ್ಗೆ ದೇಶಭೇದಮಿಲ್ಲ. ಅವರ್ಕಮೇಕತ್ವಮಾಗಿ 'ಚತ್ವಾರ್ಯೇವತತ್ವಾನಿ' ಯೆಂಬ ನಿನ್ನ ಮಾತು ವಿ ಘಟಿಸುಗುಂ. ಪಿಷ್ಟೋದಕಾದಿದ್ರವ್ಯಾನ್ವಯವ್ಯತಿರೇಕಾನುವಿಧಾಯಿಯಪ್ಪ ಮದಶಕ್ತಿ ಎಂತು ತತ್ಕಾರ್ಯಮಂತೆ ತಚ್ಚೈತನ್ಯಮುಂ ಭೂತಾನ್ವಯವ್ಯತಿ ರೇಕಾನುಕಾರಿಯಪ್ಪುದಱಿಂ ಭೂತೋಪಾದಾನಕಾ[13]ರಣಕಾರ್ಯಮೆಂಬೀ ವಚನಮುಪಾದಾನವಿಕಾರಮಲ್ಲದೆ ವಿ[14]ಕಾರಮಂ ಕೈಕೊಳ್ಳದು. ಉಪಾದೇ

1ಖ.— ಪುಣ್ಯಾಪಾಪಂ. 2ಕ.—ಯದಗಾಧಬೋಧ. 3ಕ.—ಜೀವಾಭಾಸಮನೆ.
4ಕ.—ದೆಸೆ. 5ಕ.—ನಿನ್ನ. 6ಕ.—ವಮೆ. 7ಖ.—ಭೂತಮೆ. 8ಗ.—ಧ್ಯಾಸಿಗಳುಂ.
9ಖ.—ಪ್ರಮಾಣಮೆಗ್ರಾಹ್ಯಂಗಳುಮಪ್ಪುದರಿಂ ; ಕ.—ಣಮೆಗ್ರಾಹ್ಯಂಗಳಪ್ಪುದರಿಂ.
10ಕ.—ಕೂಡದದುವೆ. 11ಖ.—ಕಾಣಲಾದುದರಿಂ. 12ಕ.—ವಿಶದರೂಪ.
13ಕ.—ಕಾರ್ಯಕಾರಣ. 14ಸಾಕಾರಮಂ.

ಯಧರ್ಮಮುಂ[1]ತಂನ ವಿಕಾರಮನುಪಾದೇಯಕೊಪ್ಪಿಸುವ ಪೂರ್ವಾಕಾರಮುಂ ಬಿಸುಟ್ಟುತ್ತರಾಕಾರಮಂ ಕೈಕೊಳ್ವುಪಾದಾನಧರ್ಮಮುಂ ಭೂತಚೈತನ್ಯಂಗಳೊಳ್ಕಾಣಲಾಗದುದಱಿಂ ಕೂ[2]ಡಿಬಾರದು ; ಬಾಲ್ಯಾದಿವಯೋವಿಶೇಷಂಗಳೊಳ್ ಶರೀರಂ ಬಳೆಯೆ ಚೈತನ್ಯಂ ಬಳೆವುದಱಿಂ ಭೂತೋಪಾದಾನಕಾರಣಕಾರ್ಯಚೈತನ್ಯಮೆಂಬೆಯಪ್ಪೊಡೆಯದುವುಂ ಹಿತಾಹಿತಾವಿವೇಕವಿಕಳತೆಯಿಂ ತಮ್ಮಂ ತಾಮೆ ಕಟ್ಟ[3]ಸುವ ಮಹಾಕಾಯಂಗಳಪ್ಪ ಕರಿಪತಿಗ[4]ಳಂದಂ; ಅನೈಕಾಂತಿಕರ್ಕೆಲರ್ತನುತರತನುಗಳೊಳಮತಿವಿಶದಪ್ರಜ್ಞಾತಿಶಯಮಂ ಕಾಣಲಾದಪ್ಪುದು, ಶರೀರವೃದ್ಧಿಯೊಳ್ ಚೈತನ್ಯವೃದ್ಧಿಯೆಂಬುದುದಕವೃದ್ಧಿಯೊಳಂಕುರವೃದ್ಧಿಯೆಂತಂತೆ ಸಹಕಾರಿಕಾರಣಮೆಂಗನೇಕಯುಕ್ತ್ಯುಕ್ತಿಗಳಿಂ ಭೂತವಾದಿಯಪ್ಪಮಹಾಮತಿಯಂ ನಿರಾಕರಿಸಿ, ವಿಶ್ವವಿಜ್ಞಾನವಾದಮೆಂಬಿದಂ ವಿಜ್ಞಾನದಿಂದೆ ನೀಂ ಸಾಧಿಸುವೆಯಪ್ಪೊಡೆ ಸಾ[5]ಧ್ಯಸಾಧನಂಗಳವ್ಯಕ್ತಮಪ್ಪದಱಿಂ ಸಾಧ್ಯಂ ನಿಶ್ಚಯಮಾಗದು, ವಿಜ್ಞಾನವ್ಯತಿರಿಕ್ತಸಾಧನವಾಕ್ಯೋಪನ್ಯಾಸದಿಂ ಸಾಧಿಸುವೊಡಾವಾಕ್ಯಮುಂ[6] ಬಹಿರರ್ಥಮಪ್ಪದಱಿಂ ಬಾಹ್ಯಾರ್ಥಸಿದ್ಧಿಯಕ್ಕುಂ; ಆ ವಾಕ್ಯಮುಂ ವಿಜ್ಞಾನಮೆಂಬೆಯಪ್ಪೊಡೆ ಪೂರ್ವೋಕ್ತದೋಷಪಾಷಾಣಸಂಚೂರ್ಣಿತಮತಿಯೆಂತಿನನೇತಱೊಳ್ನಿಶ್ಚಯಿಸುವೈ ; ಮತ್ತಂ ವಿಜ್ಞಾನಂ ವಿಜ್ಞಾನಾಂತರಗ್ರಾ[7]ಹಕಮಕ್ಕುಮಪ್ಪೊಡಾವವಸ್ಥೆಯೊಳ್ ವಿಜ್ಞಾನಾಂತರಮಪ್ಪುದಾವಸ್ಥೆಯೊಳ್ ಬಹಿರರ್ಥಸಿದ್ಧಿಯಾಗಿ ಸರ್ವಪ್ರತ್ಯಯನಿರಾಲಂಬನವಾದಂ ಕಿಡುಗುಂ ಅದುವುಂ ವಿಜ್ಞಾನಾಂತರಗ್ರಾ[8]ಹಿಯಾಗದಪ್ಪೊಡೆ ಸಂತಾನಾಂತರನಿರಸನಮಕ್ಕುಂ ಅನುಮಾನದಿಂಸಂತಾನಾಂತರಮಂ ಸಾಧಿಸುವೆನೆಂಬೆಯ[9]ಪ್ಪೊಡಂ ಬಹಿರರ್ಥಸಿದ್ಧಿಯಕ್ಕುಂ ; ಮತ್ತಂ ವಿಜ್ಞಾನಮಾತ್ರಮಲ್ಲದೆ ಪೆಱತಿಲ್ಲಕ್ಕುಮಪ್ಪೊಡೆ ವಿಜ್ಞಾನಮಾತ್ರಮೆ ತತ್ವಮೆಂಬೀವಚನವಿಜ್ಞಾನಂಗಳ್, ಬಾಹ್ಯಾರ್ಥಶೂನ್ಯಂಗಳಪ್ಪುದಱಿನನಂ[10]ತ್ಯಂಗಳಕ್ಕುಮಾದಂದಸತ್ಯೇತರವಿಭಾಗಂಗ

[1]ಮುಂ. [2]ಕ.—ಕೂಡದು. [3]ಕ.—ಕಟ್ಟಸಿಕೊಳ್ವ. [4]ಕ.—ಳಿಂದವೆಕಾಂತಿ.
[5]ಖ.—ಸಾಧ್ಯಸಾಧನಂಗಳಿವ್ಯೆಕ್ಯಮಪ್ಪದರಿಂ. [6]ಕ.—ಗಳ್ಗೆ ಸೆಬ್ಯಂಮಾರ್ಪ್ಪದರಿಂ.
[7]ಕ.—ಮೆ. [8]ಕ.—ಗ್ರಾಹಿಯಕ್ಕು. [9]ಕ.—ಗ್ರಾಹಿಯಪ್ಪುದಪ್ಪೊಡೆ.
[10]ಖ.—ಯೆಪ್ಪೊಡಂತುಂ. [11]ಖ.—ವಿಜ್ಞಪ್ತಿ.

ಳಂ ಪಡೆಯಲಾಗದು, ಆದು ಸಾಧನದೂಷಣಪ್ರಯೋಗಾನ್ಯಥಾನುಪಪತ್ತಿಯಿಂ ಬಹಿರರ್ಥಸಿದ್ಧಿಯಕ್ಕುಮದಱಿಂ ವಿಜ್ಞಾನಮಾತ್ರಮೆ ತತ್ವಮಾತ್ಮಾದಿತತ್ವಮಿಲ್ಲೆಂಬ ನಿನ್ನ ಮಾತು ಭಿನ್ನಭಾಜನಸಮಾನಮೆಂದು ಸಂಭಿಂನಮತಿಗಂ ಪ್ರತಿ[1]ಭಾಭಂಗಮಂ ಮಾಡಿ ; ಸಕಳಬಹಿರಙ್ಗಾನ್ತರಙ್ಗ[2]ತತ್ವಂಗಳ್ ಶೂನ್ಯಂಗಳೆಂಬಿದನಱಿಪುವ ಭವತ್ಪ್ರತ್ಯಯಾಭಿಧಾನಂಗಳ್ ಶೂನ್ಯಂಗಳೆಯಕ್ಕುಮಪ್ಪೊಡೆಸರ್ವಶೂನ್ಯಮೆಂಬೀ ನಿನ್ನ ಮಾತು ಕೆಟ್ಟುಪೋಕುಂ ತತ್ಪ್ರತ್ಯಯಾಭಿಧಾನಂಗಳುಳ್ಳೊಡೆ ಅವೆಂತೊಳವಂತೆವಸ್ತುಗಳೆಲ್ಲಮೊಳವಪ್ಪುದಱಿನನಾದ್ಯನಿಧನಸ್ವಭಾವನುಂ ಸುಕೃತದುಷ್ಕೃತಕರ್ಮೋಪಾರ್ಜನನುಂ ತತ್ಫಲಭಾಜನನುಂ ಸೂಕ್ಷ್ಮರೂಪನುಮನಂತಜ್ಞಾನಾದಿಗುಣರೂ[3]ಪನುಂ ಸಂಹರಣವಿಸರ್ಪಣಾಸ್ವರೂಪನುಮಾತ್ಮೋಪಾತ್ತಶರೀರಪ್ರಮಾಣನುಮುತ್ಪಾದವ್ಯಯದ್ರವ್ಯಾತ್ಮಕನುಂ ಸಕಳಕರ್ಮನಿರ್ಮೂಲನಕರನುಂ ತ್ರಿಲೋಕಶಿಖರಿಶೇಖರನುಮಪ್ಪ ಜೀವನುಂಟೆಂದು ಶತಮತಿವೆರಸು ಮೂವರುಂ ಪ್ರತಿವಾದಿಗಳನಪ್ರತಿಹತಪ್ರತಿಭೆ[4]ಯಿನಪಗತಪ್ರತಿಭ[5]ರ್ಮಾಡಿ ಸಭಾಪತಿಯಾಗಿರ್ದಮಹಾಬಳನುಮಂ ಪ್ರಾಶ್ನಿಕರಾಗಿರ್ದ ವಿದ್ವಜ್ಜನಮುಮಂ ಸಭಾಜನಮುಮಂ ತಿಳಿಪಿ.

ಪುಸಿಯು ಪರಾಂಗನಾರತದ ಮದ್ಯದ ಮಾಂಸದ ಮೆಯ್ಗೆಱಲ್ದ[6]ದು
ರ್ವ್ಯಸನಿಯು ಮಾಡಿದೋದೆ[7]ನಿಮಗಾಗಮಮಾಗಿರಸತ್ಯ[8]ವಾದಮಂ।
ಪೊಸಯಿಸಿ ಜೀವನಿಲ್ಲ ಮೋಱೆಯಿಲ್ಲಱನಿಲ್ಲ ಪರತ್ರೆಯಿಲ್ಲೆನ
ಲ್ಕಸಕಳೆ[9]ಯಂತು ನಾಲಗೆ ಪೊರಳ್ವುದು ರಾಜಸಭಾಂತರದೊಳ್ ॥ ೧೧

ವ॥ ಎಂದು ಮತ್ತಮವರನೆ ತಿಳಿಪುವ ಬಗೆಯಿಂ ದೃಷ್ಟಶ್ರುತಾನುಭೂತಕಥೆಗಳಂ ತದನ್ವಯಸಂಬಂಧಿಗಳನಿಂತೆಂದು ಪೇಱಲ್ತಗುಳ್ದಂ. ಈತನ ಸಂತತಿಯೊಳರವಿಂದನೆಂಬನಂಬರಚರಂ ನಿಜಮನೋವಿಜಯಿ[8]ವಿಜಯಿಯೆಂಬಳ್ಗೆ ಪುಟ್ಟಿದ ಹರಿಶ್ಚಂದ್ರಕುರುವಿಂದರೆಂಬನಿಜತನೂಜರೊಡನೆ ಖೇಚರ

1ಕ. ಖ.—ಪ್ರತಿಭಂಗಂ. 2ಕ.—ತತ್ವದೊಳ್. 3ಕ.—ಸಂಪೂರ್ಣನುಂ.
4ಕ.—ಜ್ಞೆ. 5ಕ.—ಜ್ಞ. 6ಗ. ಖ.—ಯ್ಗೆಱಲ್ದು. 7ಖ.—ಮಾಡಿದೋದು.
7ಕ.—ಮಾಡಿದೋಜೆ. 8ಕ.—ಗಿರೆಸತ್ಯ. 8ಕ. ಗ—ತಳಮಳಿಸಿ.
9ಗ.—ಗಳೆ.

ಗೋಚರ[1]ವಿಭವವಮನನುಭವಿಸಿ ಬಹ್ವಾರಂಭಸಂರಂಭರೌದ್ರಧ್ಯಾನಪರಿಣತ ಸಮುಪಾರ್ಜಿತನರಕಾಯುಷ್ಯಂ ಪ್ರತ್ಯಾಸನ್ನಮೃತ್ಯುವಾಗಿ,

ಉರಿಯುಳ್ಳುರ್ವಂತತಿ[2]ದಾಹ
ಜ್ವರಮುಳುರೆ[3] ಪೊರಳ್ದು ನಾಡೆಯುಂ ಕೊರಗಿದನಂ।
ದರವಿಂದಂ ಕೊಳದಿಂದಂ
ಕರಿಪತಿ ಕಿತ್ತಿಕ್ಕೆ ಕೊರಗಿದರವಿಂದದವೊಲ್ ॥ ೧೨

ವಾರಿಜಮುಳಯಜಮುಳಯುಸ
ವಿಾರಣಚಂದ್ರಾಂಶುಚಂದ್ರಕಾಂತದ್ರವಕ।
ರ್ಪೂರಮೃಣಾಳಾದಿಗಳುಂ
ಬಾರಿಸಲಾಱವೆ ದಲವನ[4] ದಾಹಜ್ವರಮಂ ॥ ೧೩

ಕುಳಿರ್ವ ತಿಳಿನೀರನುಡುಗದೆ
ತಳಿ ತಳಿರಂ ಪಾಸು ಜಳದೆಯಿಂ ಬೀಸೆಂದು।
ವ್ವಳಿಸಿ ಕಳವಳಿಸಿ[5] ವಿರಹಾ
ಕುಳನವೊಲಾಖಚರನಿಂತು ತಳವೆಳಗಾದಂ ॥ ೧೪

ವ॥ ಅಂತನೇಕಪ್ರಕಾರಶೀತಳಕ್ರಿಯೆಗಳಿಂ ಶರೀರಸಂತಾಪಮನೆಂತುಂ ಮಾಣಿಸಲಾಱದೆ[6] ಪುಣ್ಯಕ್ಷಯದೊಳ್ತನ್ನ ವಿದ್ಯೆಗಳುಂ ತನಗೆ ಬೆಸಕೆಯ್ಯದಿರೆ ಹರಿಶ್ಚಂದ್ರನೆಂಬ ತನ್ನ ಪಿರಿಯಮಗನಂ ಕರೆದು ತನ್ನ ದುಸ್ಸಹಾವಸ್ಥಾಂತರಮನಱಿಪಿ ನೀನೆನ್ನಂ ನಿನ್ನ ಗಗನಗಾಮಿನೀವಿದ್ಯೆಯಿನುತ್ತರಕುರುವನೆಯ್ದಿಸು ; ಅಲ್ಲಿಯ ಸುರತರುಗಳ ತಣ್ನೆೞಲ್ಗಳೊಳಂ ಕಲ್ಪಲತೆಯ ಜೊಂಪಂಗಳೊಳಂ ಸೀತಾನದೀತರಜಾಲಿಂಗಿತಸಂತಾನಲತಾಲತಾಂತಸುರಭಿತರ[7] ಮಂದಾರವನವೀಧೀವಿಹಾರಪರಿಶ್ರಾಂತಪವಮಾನಸ್ಪರ್ಶನದಿಂ ಮದೀಯಾಂಗ

1ಕ.—ಭೂಚರ. 2ಕ.—ತಿರೆ. 3ಖ.—ಜ್ವರಮಡರೆ.
4ಖ.—ಬಾರಿಸುವುವೆನೋಡಲವನ. 5ಕ. ಗ.—ತಳಮಳಿಸಿ.
6ಗ.—ಸಂತಾಪಮನೆಂತುಮಾಱಿಸಲಾರದೆ.
7ಕ. ಗ.—ತರಂಗಾಲಿಂಗಿತಲತಾಲತಾಂತಸಂತಾನಸುರಭಿಸಾರಮಂದಾರ.

4

ಸಂಗತಪರಿತಾಪವನಾಱಿಸುವೆನೆಂದು ನಿಜನಂದನಂಗೆ ಪೇೞ್ದೊಡಾತನುಂ ತನ್ನ ಪಯೋಧರಪಥಗಾಮಿನೀವಿದ್ಯೆಯುಂ ಬೆಸಸಿದೊಡೆ ನರಕಗಮನಾಭಿಮುಖನಾಗಿರ್ದ ರವಿಂದಂಗುಪಕಾರಂಗೆಯ್ವುದೆನಗಶಕ್ಯಮೆನೆ ವಿದ್ಯಾವಚನದಿನಾತನನಾಸನ್ನ ಮೃತ್ಯುವನಱಿದು ವಿಷಣ್ಣಮನನುದಾಸೀನನಾಗಿರ್ದಂ; ಅನ್ನೆಗಂ[1] ಪರಸ್ಪರಕಲಹಕಲುಷಿತಗೃಹಕೋಕಿಳಂಗಳೊಂದೊಂದಂ ತಿನೆ[2] ಪನಿತಶೋಣಿತಬಿಂದುಗಳ್ ತನ್ನ ಮೆಯ್ಗೆ ಪಾಪಪರಿಪಾಕದಿಂ ತಣ್ಪಂ ಪಡೆಯೆ ಪರಮೌಷಧಮಂ ಪಡೆದೆ[3]ನೆಂದು ಕರಮೊಸೆದರವಿಂದಂ ಕುರುವಿಂದನಂ ಕರೆದು ತ್ವನ್ನವಿಭಂಗಜ್ಞಾನದಿಂ[4] ಮೃಗಂಗಳಿರ್ದೆಡೆಯನಱಿದು ನಿಷ್ಕರುಣನವಱ ರುಣಜಳದೊಳಿನಗೆ ಲೀಲಾಸರೋವರಮಂ ನೀಡಿಲ್ಲದೆ ಮಾಡೆಂದು ಪೇೞ್ದೊಡವನಾನಿಸ್ತ್ರಿಂಶಕರ್ಮಕ್ಕೆ ಕೊಕ್ಕರಿಸಿ ಪಾಪಭೀರುವಪ್ಪುದಱಿಂ ತಂದೆಯ ತದುಪರೋಧದಿಂ ಮನಮಲ್ಲದ ಮನದೊಳ್ ತದುದ್ದಿಷ್ಟಮೃಗಾವಾಸಮನೆಯ್ದಿ ದಿವ್ಯಜ್ಞಾನಿಗಳನಲ್ಲಿರ್ದರಂ ಕಂಡು ನಿವೇದಿತನಿಜಜನಕವೃತ್ತಾಂತನವರ[5] ವಚನದಿನಾತ್ಮೀಯಪಿತೃಮರಣಮುಮನಾತನ ನರಕಗತಿ[6]ಗಮನಮುಮನಱಿದು ಕರುಣಾರಸಾರ್ದ್ರಹೃದಯನದಂ ಮಾಡಲಾಱದೆ ಲಾಕ್ಷಾದ್ರವಾದಿಕಾರಿತಮಾಯಾರುಣಜಲ[7] ಪರಿಪೂರ್ಣವಾಪಿಯುಂ ಸಮೆಯಿಸಿದೊಡದಂ ಕಂಡು ರಾಗಿಸಿ ಪೊಕ್ಕು ನೀಡುಮೋಲಾಡಿ ಮುಕ್ಕುಳಿಸಿ ನೋಡಿ ಕೃತಕರುಧಿರಮಪ್ಪುದನಱಿದೀಬೂತೆನ್ನಂ ಬಂಚಿಸಿದನೆಂದು ನೆಱೆಯುದ ನರಕಾಯುಷ್ಯಮುಂ ನೆಱಪುವನೆಂಬಂತೆ ಮುಳಿದು ಘೂರ್ಣಮಾನಲೋಹಿತಲೋಚನಂ ದಶನನಿಪೀಡಿತದಶನವಸನನಸಿಧೇನುವಂ ಕಿೞ್ತು ನಡನಡನಡುಗಿ ತಡದಡಿಸುತ್ತುಮಿಱಿಯಲ್ ಪರಿವಾತಂ ವಾಪೀಸೋಪಾನಮನಡರುತ್ತುಂ ಜಾಱಿಮರಿದು ಕೆಡೆದುರದೊಳ್ ನಟ್ಟ ಸುರಿಗೆ ಬೆನ್ನೊಳ್ಮೂಡೆ ಗತಜೀವಿತನಾಗಿ ನರಕಕ್ಕಿೞಿದನಿದನೀಗಳುಮೀಪುರಜನಂಗಳ್ಪೇೞೆ ಕೇಳಲಕ್ಕುಂ. ಮತ್ತಮಾತನವಂಶದೊಳ್[8]ಪೊೞಲೊಳ್[9] ನೆಗೞ್ತೆವೆತ್ತಂ ದಂಡಿತಾರಾತಿಮಂಡಳಂ ದಂಡಕನೆಂಬನಾತನ ಮನೋನಯನಸೌಂದರಿ ಸೌಂದರಿಯೆಂಬಳವರ್ಗೆ

---

[1]ಕ.—ಗಿರ್ಪಿನಂ. [2]ಗ.—ಬಂದನೊಂದುತಿನೆ. [3]ಗ.—ಪರಮೌಷಧಿವಡೆದೆ.

[4]ಗ.—ದುತ್ಪನ್ನವಿಭಂಗದಿಂ. [5]ಖ.—ವೃತ್ತಾಂತಮವಧಿ. [6]ಕ.—ನಾತನಧೋಗತಿ.

[7]ಕ.—ದ್ರವದಿನರುಣಜಲಾನುಕಾರಿಯಪ್ಪ. [8]ಗ.—ಸಂತತಿಯೊಳ್.

[9]ಗ.—ಪುರದೊಳ್.

ಪುಟ್ಟಿದಮಗನುಗ್ರಪ್ರತಾಪವಿಜಿತಾಂಶುಮಾಳಿ[1] ಮಣಿಮಾಳಿಯೆಂಬೊನಾಗಿ ಪಲಕಾಲಮರಸುಗೆಯ್ಯು,

ಇಳೆಯಂ ಪೊರೆಯಿಸಿ ತಕ್ಕರಂ ಕವರ್ದು ಕೊಂಡಾದರ್ಥಮಂ ಪೊಱ್ದು ಮಿ
ಕ್ಕೆಳನೋಡುತ್ತು ಮುದಗ್ರಲೋಭವಶದಿಂ ತನ್ನುಂಡುದುಂ ತಪ್ಪದೆಂ।
ದಳವಂ ಮಾಣಿಸಿ[2] ಸತ್ತು ದಂಡಕನೃಪಂ ಲೋಭಾಭಿಭೂತಂ ವಿಷಾ
ವಿಳದಂಷ್ಟ್ರಂ ಶ್ವಯುಮಾಗಿ ಪುಟ್ಟಿಸುಟಿಗುಂಪುಂಬಯ್ತು ಭಂಡಾರದೊಳ್‌೧೫

ವ॥ ಅಂತಾರ್ತಧ್ಯಾನದೊಳಜಗರನಾಗಿ ತನ್ನ ಮುನ್ನಿನ ಸಂಚಿತ[3] ವಸ್ತುಗಳಂ ಮಗಂ ಮಣಿಮಾಳಿಯುಂ ಕಂಡು ಜಾತಿಸ್ಮರನಾಗಿ ಮಣಿಮಾಳಿಯಲ್ಲದುೞಿದರಾರುಮಂ ಸಾರಲೀಯದೆ ಭಂಡಾರಮಂ ಕಾದುಕೊಂಡಿರ್ಪುದುಮೊಂದು[4] ದಿವಸಂ ಮಣಿಮಾಳಿ ರತಿ[5]ಚಾರಣರೆಂಬ ಚಾರಣರನವಧಿಜ್ಞಾನಿಗಳಂ ಕಂಡಜಗರವೃತ್ತಾಂತಮಂ ಬೆಸಗೊಂಡು ವಿಷಮವಿಷಧರನಾತ್ಮೀಯಜನಕನೆಂದಱಿದು[6] ತತ್ಸಮೀಪಕೆ ವಂದು,

ನೀನತಿಲೋಭದೊಳಲ್ಲಿ ಕು
ಯೋನಿಯೊಳಜಗರನೆಯಾದೆಯಾಮೋಹಮದೇ।
ನೇನಂ ಮಾಡದೊ ಬಿಸುಡಿದ
ನಾನಿನ್ನೇನೆಂಬೆನೆಂಬುದಂ ಕೈಕೊಳ್ಳಾ॥ ೧೬

ವಿಷಯಾಮಿಷಲಂಪಟತೆಯೆ
ವಿಷಧರನೆನಿಸಿದುದು ನಿನ್ನನೆಲೆ ವಿಷಧರ ನೀಂ।
ವಿಷಧರನಾಗದೆ ಬೇಗಂ
ವಿಷಯಾಮಿಷವಿಷಮನುಗುೞ್ದು ನಿರ್ವಿಷನಾಗಾ॥ ೧೭

ವ॥ ಎಂದು ತನ್ನಂ ಪ್ರತಿಬೋಧಿಸಿದ ನಿಜತನೂಜನ ವಚನತಿಗ್ಮರೋಚಿರುಚಿನಿಚಯದಿನಾತ್ಮೀಯಚೇತೋನಿಚಿತಮೋಹಾಂಧಂತಮಸ್ತೋಮಮಂ[7] ಕಳೆದು ಕೃತಾನುಶಯನನಶನವಿಧಾನದಿನಸುವಂ ವಿಸರ್ಜಿಸಿ ಸಾಧರ್ಮಕಲ್ಪದೊಳ್ ದೇವನಾಗಿ,

---

[1] ಕ.—ಪ್ರತಾಪಜೀವಿತಾಂಶಮಾಳಿ; ಖ.—ಪ್ರತಾಪವಿಸ್ಫುರಿತಾಂಶುಮಾಳಿ.

[2] ಕ.—ಪಾಸಿಸಿ. [3] ಮುನ್ನ ಸಂಚಿಸಿದ. [4] ಕ.—ಕೊಂಡಿರ್ಪನಮೊಂದು.

[5] ಕ.—ಮತಿ. [6] ಗ.—ಬೆಸಗೊಳೆ......ದಱಿಪೆ [7] ಕ.—ತಮಸ್ತಮಮಂ.

ನೆನೆದಾಗಳ್ ನಿಜನಂದನೋಪಕೃತಮಂ ತದ್ದೇವನೆಯ್ತಂದು ದೇ
ವನಿಕಾಯಂ ಬೆರಸಪ್ಪಿಕೊಂಡು ದಿವದೊಳ್ಮೇಲಪ್ಪ ರತ್ನಂಗಳಿಂ।
ತನಿತಂ ಮುಂ ಮಣಿಮಾಳಿಗಿತ್ತನವು ತಮ್ಮಾಮ್ನಾಯದಿಂ ಬಂದೊಡೀ
ತನುಮಿಾಗಳ್ ನೆಱೆ ತೊಟ್ಟು ಬಂದನಿದನೇಂ[1] ನೀಮೆಲ್ಲರುಂ ಕಾಣಿರೇ ‖ ೧೮

ವ॥ ಇದನ್ನೆಗಮನುಭೂತ[2]ಮಿದಲ್ಲದೆಯುಂ ವಯೋಧಿಕವ್ಯೋಮಚರ ಪ್ರತ್ಯಕ್ಷಮೀಮಹಾಬಳನಪಿತೃಪಿತಾಮಹಂ ಸಹಸ್ರಬಳನೆಂಬನಂಬರಚರನಾತ್ಮೀಯಶ್ರೀಯುನನುಭವಿಸಿ ವಿಷಯವಿರಕ್ತನಾಗಿ ನಿಜರಾಜ್ಯಪದವಿಯೊಳ್ ತನ್ನ ಪಿರಿಯಮಗನಪ್ಪ,

ಶತಬಳನಂ ಸಹಸ್ರಬಳಖೇಚರನಿಟ್ಟು ತಪೋನಿಯೋಗನಿ
ಶ್ಚಿತಮನನಾಗಿ ಸಂದನಪವರ್ಗಪದಕ್ಕೆ ಬೞಿಕ್ಕೆ ಧಾತ್ರಿಯಂ।
ಶತಬಳನಾತ್ಮಜಂಗೆ ನೆಗೞ್ದೀಖಚರೇಂದ್ರನ ತಂದೆಯಪ್ಪ ಸಂ
ದತಿಬಳಖೇಚರಂಗೆ ತೊದಳಿಲ್ಲದೆ ಕೊಟ್ಟುಪಶಾಂತಮಾನಸಂ ‖ ೧೯

ವ॥ ಗೃಹೀತೋಪಾಸಕ[3]ವ್ರತನನಶನಾವಮೋದರ್ಯಾದ್ಯಾಚರಣಪರಿಣತಂ ಯಥೋಚಿತವಿಧಿಯಿಂದಾಯುರವಸಾನದೊಳ್ ಸಂಸಾರಕ್ಷಪಕನಾಗಿ ಸಮಾಧಾನಪುರಸ್ಸರಂ ಸನ್ಯಸನವಿಧಾನದಿಂ ಪರಿತ್ಯಕ್ತಜೀವಿತಂ[4] ಮಾಹೇಂದ್ರಕಲ್ಪದೊಳಣಿಮಾದ್ಯಷ್ಟಗುಣೈಶ್ವರ್ಯೋಪೇತನುಂ ಸಪ್ತಸಾಗರಪ್ರಮಿತಜೀವಿತನುಂ ಲಬ್ಧಾತ್ಮಲಾಭನುಮಾಗಿ[5] ನಮ್ಮ ಕುಮಾರಕಾಲದಂದು ನೀಮುಮಾಮುಂ ಮಹಾಬಳನುಂ ಕ್ರೀಡಾನಿಮಿತ್ತಂ ಪೋಗಿ ಮಂದರಮಹೀಧರದನಂದನವನದೊಳ್ ವನ[6] ಕ್ರೀಡೆಯನಾಡುತ್ತಮಿರ್ಪಿನಮಲ್ಲಿಯ[7] ಕೃತ್ರಿಮಚೈತ್ಯಾಲಯಮಂ ಬಂದಿಸಲಾಮಹೇಂದ್ರಕಲ್ಪಜನುಂ ಮಹಾವಿಭೂತಿಯಿಂ ಬಂದು,

ಜಿನಪಾದಾಂಭೋಜಮಂ ಪೂಜಿಸಿಪೊಱಮಡುತುಂಸಾರೆವಂದೀತನಂಭೋಂ
ಕೆನೆ ಕಂಡಕ್ಕರ್ತು ನೋಟಂ ಬೆರಸು ಪರಸಿ ತಪ್ಪೈಸಿಕೊಂಡಮ್ಮ ನೀಂ ಮ।

---

[1] ಖ.—ನಿವುವಂ ; ಕ.—ನವನಿಂ. [2] ಗ.—ಮನುಯಾತ.
[3] ಕ.— ತೋಪವಾಸಕ. [4] ಕ.—ಮೋಹನಾಗಿ.
[5] ಕ.—ಜೀವಿತನುಪಲಬ್ಧಾವಧಿಲೋಚನನುಮಾಗಿ ; ಖ.—ಜೀವಿತನುಂಲಬ್ಧಾತ್ಮಭಾವನಾಗಿ.
[6] ಕ.—ಜಲ. [7] ಗ.—ರ್ಪಿನಮೊಂದುದಿವಸಮಲ್ಲಿಯ.

ವ್ಮ್ರನೆಯುಪ್ಪೈ ನೋಡು ನಣ್ಪಿಂ ನಿಮುಗವೆಮುಗವಾವ್ನಾಯದಿಂ ಬಂದು ದಿಂತೀ
ಜಿನಧರ್ಮಂಪ್ರಾಣಿಗಾರ್ಮಂ ಮಱೆಯದಿರಿದು ನಿನ್ನೆಂದುದುಂಟಲ್ಲಪೇೞಿಂ ೨೦

ಅತಿಬಳಖೇಚರೇಂದ್ರನಿವರಮ್ಮನುಮಾತನನೂರ್ಜಿತಾತ್ಮಸಂ
ತತಿಯೊಳನಾಕುಳಂ ನಿಱಿಸಿ ಸಂಯಮಸಾರಥಿಯಾಗಿ ಕರ್ಮಸಂ।
ತತಿಯನನಂತರಂ ಕಿಡಿಸಿ ಕೇವಳಿಯಾಗಿರೆ ಬರ್ಪ ದೇವಸಂ
ತತಿಯೊಡವೋಗಿ ನಾವುಮೊಸೆದರ್ಚಿಸಿ ಬಂದಿಸಿ[1] ಬಂದೆಮಲ್ಲಮೇ॥ ೨೧

ಅನುಭೂತಶ್ರುತದೃಷ್ಟಖೇಚರಕಥಾನೀಕಂಗಳಿಂ ಯುಕ್ತಿ[2]ಯಿಂ
ದಿನಿತಂ ಸಾಧಿಸಿ ಜೀವಸಿದ್ಧಿಯನಿದಂ ನಿಶ್ಚೈಸಿ ವಿದ್ವತ್ಸಭಾ।
ಜನಮೆಲ್ಲಂ ತಿಳಿದತ್ತು[3] ನಿಮ್ಮ ಮನದಿಂ ಮಿಥ್ಯಾಕಳಂಕಂ ತೆರ
ಳ್ದನಿತುಂ[4] ಪೋಗದು ಕಾಲಲಬ್ಧಿ ದೊರೆಕೊಂಡಂದಲ್ಲದೇಂ ಪೋಕುಮೇ॥ ೨೨

ವ॥ ಎಂದು ಪರಪಕ್ಷದೂಷಣಪುರಸ್ಸರಮನೇಕೋಪಪತ್ತಿಗಳಿಂ ಸ್ವಪಕ್ಷಸ್ಥಾಪನಂಗೆಯ್ದು ಸನ್ಮಾರ್ಗಪ್ರಕಾಶನದಿಂ[5] ಮಾರ್ಗಪ್ರಭಾವನೆಯುಂ ಮಾಡಿ ಸಭಾಸದರಿಂ ಲಬ್ಧಪ್ರಶಂಸ[6]ನಾಗಿ,

ಪರವಾದಿಗಳ ಮೊಗಂಗಳ್
ಕರಿಂಕುವರಿದಂತೆ ಕಂದಿ ಕುಂದಿರೆ ಖಚರೇ।
ಶ್ವರನೀಯೆ ಪಡೆದನತ್ಯಾ
ದರದಿಂ ಜಯಪತ್ರಮಂ ಸ್ವಯಂಬುದ್ಧಬುಧಂ॥ ೨೩

ವ॥ ಅಂತು ಮಹಾಬಳಖಚರೇಂದ್ರಂ[7] ಸ್ವಯಂಬುದ್ಧನೆ ತನಗೆ ಪರಮವಿಶ್ವಾಸಭೂಮಿಯಾಗೆ[8] ತತ್ಸಯರ್ಾಳೋಚಿತಕಾರ್ಯಪರ್ಯವಸಾನನುಂ ಮನೋಭಿಲಷಿತವಿಷಯಸುಖಾನುಭವಸಿರತನುಮಾಗಿ ಮೂವತ್ತಾಱುಲಕ್ಕೆಪೂರ್ವಂ ರಾಜ್ಯಂಗೆಯ್ಯೆ,

---

[1]ಖ. ಗ.—ಪೂಜಿಸಿ. [2]ಕ.—ಳಿಂದುಕ್ತಿಯಿಂ. [3]ಖ.—ತಿಳಿವಂತು.
[4]ಕ. ಗ.—ಳ್ದನಿಸುಂ. [5]ಖ.—ಸನ್ಮಾರ್ಗಾವಕಾಶನದಿಂ.
[6]ಕ.—ಪ್ರಸನ್ನ; ಗ.—ಪ್ರಸಂಗ. [7]ಗ.—ಗಗನಚರೇಂದ್ರಂ. [8]ಗ.—ವಿಶ್ವಾಸಿಯಾಗೆ.

ಪೊಡರದೆ ಕಪ್ಪಮೀವ ಪರಮಂಡಳಿಕರ್ ಮನೆದೀವಿ ಮಕ್ಕಳಂ
ಪಡೆದಬಳ್ಳಾಜನಂ ನೆರೆದ[1] ಮಕ್ಕಳ ಮಕ್ಕಳ ನೀಳ್ದದೊಂದು ದಾಂ ।
ಗುಡಿವಿಡಿದೀವ ಚಾಗಮೆಡಱೋಡುವಿನಂ ಪೊರೆದೊಳ್ನಿಗಟ್ತೆ[2]ಯೊಳ್
ತೊಡರ್ದಿರೆ ವೃದ್ಧರಾಜ್ಯಮುಮದೇನೆಸೆದತ್ತೊ ನಭಶ್ಚರೇಂದ್ರನಾ ॥ ೬೪

ವ ॥ ಮತ್ತೊಂದುಪುಣ್ಯದಿನದೊಳ್ ಸ್ವಯಂಬುದ್ಧಂ ಅಗಣ್ಯಪುಣ್ಯೋಪಾರ್ಜನಕರಸಪರ್ಯಾಸಮೇತಂ ಅಪರಿಮಿತಭಕ್ತಿಯಿಂ ಪರಿಮಿತಪರಿಜನಪರಿವೃತನಾಗಿ ಪೋಗಿ,

॥ ಪೃ ಥ್ವೀ ವೃ ತ್ತಂ ॥

ಅನೇಕರಸಭಂಗಿಸಂಗತಸುರಾಂಗನಾಪಾದಚಂ
ಕನತ್ಕನಕಕಿಂಕಿಣೀಮೃದುನಿನಾದವಿಭ್ರಾಜಿಯುಂ ।
ಕನತ್ಕನಕತುಂಗಶೃಂಗಕುಳಮುಂ ಮನೋವೇಗದೆ
ಯ್ದಿ ನೋಡಿದನೊಱಲ್ದು ಪುಷ್ಪಿತನಮೇರುವಂ ಮೇರುವಂ ॥ ೬೫

ವ ॥ ಅಂತುನೋಡಿ

ಇದು[3] ಶಾಲ್ಮಲಿಪಾದಪಮಿಂ
ತಿದು ಜಂಬೂವೃಕ್ಷಮಿದುವೆ[4] ಕುರುಭೂಮಿಗಳೊ
ಪ್ಪಿದುವರ್ಧಚಂದ್ರನಾಕಾ
ರದಿ[5]ನುಚಿತದಶಾಂಗಕಲ್ಪಕುಜನಿಳಯಂಗಳ್ ॥ ೬೬

ಗಜದಂತಾಕಾರಂಗಳ್
ಗಜದಂತಾದ್ರಿಗಳಿವಲ್ತೆ ತೋರ್ಪುವು ಮಧುಪ ।
ವ್ರಜಪರಿವಾರಿತಮಾದ್ಯ
ದ್ಗಜಕಟಕರ್ಷಪ್ರಭಗ್ನ[6]ಚಂದನತರುಗಳ್ ॥ ೬೭

ನೀಲನಿಷಧಮುಮನೆಯ್ದಿದ
ನೀಲದ ಗಜದಂತಗಿರಿಗಳಾಳ್ದುವು ಪಿರಿದುಂ[7] ।

1ಖ.—ನೆರೆಯೆ. 2ಖ.—ಪೊರೆದಾನೆಗಳ್ತೆ. 3ಖ. ಗ.—ಅದು.
4ಖ.—ಮಿವಿವೆ. 5ಕ.—ಚಂದ್ರಕೃತವೃತ್ತದಿ; ಗ.—ಚಂದ್ರವೃತ್ತಾಂಗದಿ.
6ಕ. ಖ.—ಕರ್ಷಣಪ್ರಭಗ್ನ. 7ಖ.—ಗಿರಿಗಳಾದುವೆಪಲವುಂ.

ಲೀಲೆಯುನದಂತೆ ಮಾಡದೆ[1]
ಲೀಲೆಗಳಂ ಪಾದಸೇವೆ ಭೂಭೃತ್ಪತಿಯಾ ॥ ೨೮

ಇದು ಭದ್ರಶಾಲಿನಂದನ
ಮದು[2] ನನ್ದನವನಮದಲ್ತೆ ಸೌಮನಸಮದೇಂ[3] ।
ತುದಿಯೊಳ್ಪಾಂಡುಕವೆಸೆದಿ
ರ್ದುದು ಜಿನಪತಿಸವನವಾರಿಪೂತಗ್ರಾವಮ್ ॥ ೨೯

ಅಗ್ರಹಮಂ ಬಿಸುಟಿದುವೆ ನ
ಗಾಗ್ರಣಿಯೆಂದಿದನೆ ನೋಡೆ ಬಲಗೊಳ್ವುವು ನಿ ।
ರ್ವ್ಯಗ್ರತೆಯಿಂ ಚಂದ್ರಾದಿ
ತ್ಯಗ್ರಹನಕ್ಷತ್ರತಾರಕಾನಿಕರಂಗಳ್ ॥ ೩೦

ಇದುರಿತು ವಿಮಾನವಂ ತ
ನ್ನದಗ್ರ ಚೂಳಿಕೆಯೊಳಾಂತು ಕೊಂಡಿರೆ ಸಗ್ಗ ।
ಕ್ಕಿದು ನಿಚ್ಚಣಿಗಿಪ್ಪವೊಲಿ
ರ್ದುದಲ್ತೆ ಜಿನಸವನಜಳಪವಿತ್ರಿತಕಟಕಂ ॥ ೩೧

ಸ್ಫುರಿತಮಣಿಕಳಶವಿರಚಿತ
ಪರಭಾಗಂಗಳ್ ಮನೋಹರಂಗಳ್ ವಿದ್ಯಾ ।
ಧರವಿಬುಧವಂದಿತಂಗಳ್
ಕರವೆಸೆದಪ್ಪವಿದಱ ನೆಲೆಯ ಚೈತ್ಯಗೃಹಂಗಳ್ ॥ ೩೨

ವ॥ ಎಂದು[4] ನಿಜಪರಿಜನಕೆಲ್ಲಂ ಪೊಗಳುತ್ತಂ[5] ಭದ್ರಶಾಲದಿಂ ತಗುಳ್ದು ಪಾಂಡುಕವನಂಬರಮದಱ ನೆಲೆಯೊಳಿರ್ದ[6] ಕೃತ್ರಿಮಚೈತ್ಯಾಲಯಂಗಳನ ಖಿಳಜಗತ್ಪಾವನಕರಸರಸ್ಸರಸೀಸರಿನ್ನಾಥತೀರ್ಥಜಲಂಗಳಿಂದಮತಿಮಸೃಣಘುಸೃಣಗೋಶೀರ್ಷಚಂದನಾಗುರುಕರ್ಪೂರಸಂಮಿಶ್ರತಸುರಭಿಗಂಧಂಗಳಿಂದಮುಗ್ರಪುಣ್ಯಪುಂಜಾಂಕುರಾನುಕಾರಿಕಳಮಾಕ್ಷತಂಗಳಿಂದಮಾಮೋದಮೋದಿತೋದ್ದಾಮಮಾಚಾಲಷಟ್ಚರಣಕುಳಾಕುಳಕುಸುಮದಾಮಂಗಳಿಂ

[1] ಖ.—ಲೀಲೆಯುನಳಂಕೆಮಾಡಿದ.
[2] ಖ.—ಶಾಲವೇದಿಕೆಯಿದು.
[3] ಖ.—ಸೌಮನಸವನಂ.
[4] ಕ—ಎಂದಿಂತು.
[5] ಕ.—ಜನಕೆಲ್ಲಂ ಪೇಳ್ದು ಪೊಗಳುತ್ತುಂ.
[6] ಖ—ನೆಲೆಲೊಳಿರ್ದ.

ದಂ ಅನೇಕಭಕ್ಷ್ಯೋಪದಂಶ[1]ರಸಪ್ರಚುರಚಾರುಚರುಕಂಗಳಿಂದಂ ಆಕಾಶಸ್ಫಟಿಕಕಳಶ[2]ಸ್ಥೂಲಕರ್ಪೂರಪಾಳೀಪ್ರದೀಪಂಗಳಿಂದಂ ಅತಿಬಹಳದಹ್ಯಮಾನಕಾಳಾಗುರುಧೂಪಧೂಮಯಷ್ಟಿಘಟಿತಘನಶ್ಯಾಮಳತಮ್ರೋಮತಳ ಧೂಪಂಗಳಿಂದಂ ಅತಿಸುರಭಿಸುರಸಸುರುಚಿರಫಲನಿಚಯಂಗಳಿಂದಂ ಮತ್ತಮುತ್ತಪ್ತ ಜಾಂಬೂನದಕುಸುಮದಾಮಂಗಳಿಂದುದ್ದೀಪಿತರತ್ನಪ್ರದೀಪಂಗಳಿಂದಂ ಅತಿತರಳಮುಕ್ತಾಮಣಿಪ್ರಲಂಬಂಗಳಿಂದಂ ಅನೇಕಪ್ರಕಾರದೇವಾಂಗವಸ್ತ್ರವಿಸ್ತಾರಿತರತ್ನಸಂಚಿತಮಣಿವಿತಾನಂಗಳಿಂದಂ ಅನುಕ್ರಮಂದಪ್ಪದರ್ಚಿಸಿ ನಿರ್ವರ್ತಿತದೇವತಾರ್ಚನನಾಗಿ ಸೌಮನಸವನದ ಪೌಲಸ್ತ್ಯಜಿನಭವನಂಗಳೊಳನಿಸಾನುಂಬೇಗಮಿರ್ಪನ್ನೆಗಂ ;

ಭಾನುದ್ಯುತಿತನುರುಚಿಯಿಂ ದಿ
ಶಾನೀಕಮನೊಡನೆ ಬೆಳಗೆ ಮಿಂಚಿರಡು ನಭ ।
ಸ್ಸ್ಥಾನದಿನಿಳಿದಪುವೆನೆಯೆನೆ
ತಾನಿಳಿದುದು ಜಿನಗೃಹಕ್ಕೆ ಚಾರಣಯುಗಳಂ ॥ ೩೩

ವ ॥ ಅಂತು ಪೂರ್ವವಿದೇಹದ ಸೀತಾನದಿಯ ಬಡಗಣ ತಡಿಯ ಮಹಾಕಚ್ಛವಿಷಯದ ಅರಿಷ್ಟಪುರದಿಂದಂ ಯುಗಂಧರತೀರ್ಥಸರಸೀ[3]ಹಂಸನಾಯಕರೆನಿಸಿದ ಗಗನಚಾರಣರಾದಿತ್ಯಗತಿಗಳುಮರಿಂಜಯರುಮೆಂಬರ್ ಅವಧಿಜ್ಞಾನಿಗಳ್[4]ಪವನಮಾರ್ಗದಿಂದಿಳಿವುದಂ ಕಂಡು ಪಾವಮಾರ್ಗದೊಳ್ ಕಿಱಿದಂತರ[5]ದೊಳ್ ಅವನತಿಪುರಸ್ಸರಮಿದಿರ್ಗೊಂಡು ತತ್ಕ್ರಿಯಾಪರಿಸಮಾಪ್ತಿ ಪ್ರತೀಕ್ಷಣಪರನವರಂ ಗುರುಭಕ್ತಿಪೂರ್ವಕಂ ಬಂದಿಸಿ ಸಕಳಶ್ರಾವಕವ್ರತಾರೋಪಣಪವಿತ್ರನಾಗಿ ಧರ್ಮಕಥಾಪ್ರಸಂಗದೊಳಂ ಲಬ್ಧಪ್ರಸ್ತಾವಂ[6]ಅವರೊಳಾದಿತ್ಯಗತಿಳಂ

ಮನ್ನಿಸಿ ಮನ್ತ್ರಿಮುಖ್ಯನತಿಭಕ್ತಿಭರಾನತಮೂರ್ಧನತ್ತೆಯಿಂ
ಭಿನ್ನವಿಕಂ ಮುನೀಂದ್ರಗಣಮುಖ್ಯ ಮಹಾಬಳನಸ್ಮದೀಶನಿಂ ।

1ಗ.—ದಾಮಂಗಳಿಂದತಿಸುರಭಿನಾನಾಭಕ್ಷ್ಯೋಪದಂಶ. 2ಗ. —ಸ್ಫಟಿಕಶಕಲ.
3ಖ.—ತೀರ್ಥಕರಸರಸೀ. 4ಕ.—ದಿವ್ಯಜ್ಞಾನಿಗಳ್. 5ಕ.—ಕಿಱಿದಂತರಂ.
6ಕ. ಗ.—ಕಥಾಪ್ರಸ್ತಾವದೊಳುಪಲಬ್ಧಿಪ್ರಸ್ತಾವಂ.

ನುಂ ನಿಜಭೋಗಕಾಂಕ್ಷೆಯನಱಂ ಬಿಸುಡಲ್ ಬಗೆದಾರನಾತನ
ತ್ಯುನ್ನತಬೋಧ ನೀಂ ಬೆಸಸಭವ್ಯನೊ ಭವ್ಯನೊ ದೂರಭವ್ಯನೋ ॥ ೩೪

ಪೋದುದು ಜೌವನಂ ಕ್ರಮದಿನಾದುದು ಮುಪ್ಪಿನಿಸಾದೊಡಂ ಸ್ಮರೋ
ನ್ಮಾದದೊಳೀವಿವೋಹದೊ[1]ಳದೇಕೆ ಗಡಂ ಬಗೆಯಂ ತಗುಳ್ಚಿ ಬೆ ।
ಳ್ಳಾದಪನಕ್ಕಟಾ ಖಚರನೆಂದೆನಗಿಂತಿದೆ ನಾಡೆಯುಂ ಮನಃ
ಖೇದವಿದಂ ಪ್ರಬೋಧಿಸಿ ನಿಜಾವಧಿಯಿಂ ಕಳೆಯಿಂ ಮುನೀಶ್ವರಾ ॥ ೩೫

ವ॥ ಎಂದು ಬೆಸಗೊಂಡೊಡೆ ಆತನಭವ್ಯನಲ್ಲಂ ಭವ್ಯನೇ. ಭವ್ಯನಾಗಿಯು ಮಾಸನ್ನಭವ್ಯಂ; ಎಂತೆಂದೊಡೆ ಜಂಬೂದ್ವೀಪದ ಪರವಿದೇಹದೊಳ್ ಗಂಧಿಳಮೆಂಬುದು ವಿಷಯಂ ; ಆ ವಿಷಯವಿಳಾಸಿನಿಗೆ ತಿಳಕಮಿರ್ಪಂತಿರ್ದುದು ವಿಜಿತಸುರಪುರಂ ಸಿಂಹಪುರಮೆಂಬುದು ಪುರಂ. ಅದನಾಳ್ವನತುಳಭುಜಬಳಸಂಚೂರ್ಣಿತಾರಾತಿಪಾಷಾಣಂ ಶ್ರೀಷೇಣನೆಂಬರಸಂ; ಆತಂಗೆ,

ಸೌಂದರಿಯರ ಗಾಡಿಗಳೊಳ
ಗೊಂದೊಂದನೆ ನೆಱಪಿ[2] ಮಾಡಿದಂ ಬಿದಿಯೆನೆ ಹೃ ।
ತ್ಸೌಂದರಿ ಜಿತಾಮರಾಧಿಪ
ಸೌಂದರಿ ಸೌಂದರಿಯೆ ಪೆಸರೊಳಂ ರೂಪಿನೊಳಂ ॥ ೩೬

ಬರ್ಮೆಯುಮವಚಱದೊಲವಿನ
ಕೂರ್ಮೆಯು ತತ್ಪತಿಗಮಾಕೆಗಂ ನಿಜವಂಶ ।
ಕ್ಕಾರ್ಮಮೆನೆ ಪುಟ್ಟಿದರ್ ಜಯ
ವರ್ಮಶ್ರೀವರ್ಮರೆಂಬ[3]ರಿರ್ವರ್ ತನಯರ್ ॥ ೩೭

ವ॥ ಅವರೊಳ್[4] ಕಿಱಿಯಾತನೆ ನೃಪತಿಗಂ ಪರಿವಾರಕ್ಕಮಣುಗನಾಗಿ ಬಳೆಯೆ ಪಲಕಾಲಂ ಶ್ರೀಷೇಣನರಸುಗೆಯ್ಯೆ;

ಎಡೆವೆತ್ತೊರ್ಮೆಯೆ ಮುಪ್ಪು ಕುತ್ತದೊಳೊಡಂಬಟ್ಟೊತ್ತೆ ಮತ್ತಲ್ಲಿ ಮೆ
ಳ್ಪಡದಾರ್ತಣ್ಮಿ ತಪಕ್ಕೆ ಪೋಪ ಪದದೊಳ್ ತನ್ನಗ್ರಪುತ್ರಂ ಕ್ರಮಂ ।
ಬಿಡಿದಿರ್ದಂ ಜಯವರ್ಮನಿರ್ದೊಡಮಿವಂ ಮುಟ್ಟಲ್ಲ[5]ನೆಂದೊಳ್ಪೊಡಂ
ಬಡುವನ್ನಂ ಕಿಱಿಯಾತನಂ ನಿಱಿಸಿದಂ ಶ್ರೀವರ್ಮನಂ ರಾಜ್ಯದೊಳ್ ॥ ೩೮

1ಖ.—ಳೀವಿನೋದದೊ. 2ಕ.—ಪಡೆಮ.
3ಕ.—ಜಯವರ್ಮಂ ಶ್ರೀವರ್ಮನೆಂಬ. 4ಕ.—ಅಂತವರೊಳಗೆ. 5ಖ.—ಮುದ್ದಲ್ಲ,

ವ॥ ಅಜಯವರ್ಮನುಮವಮಾನಪವಮಾನಾವಧೂತನಾಗಿ ಪೋಗಿ,

ಪ್ರಭು ಕಿಱಿಯಾತನಂ ನಿಱಿಸಿ ರಾಜ್ಯದೊಳೆನ್ನನವಸ್ತುಮಾಡಿ[1]ಪೂ
ಣ್ದಭಿಭವವಿಾಗಳೀಭವದೊಳಿಂತಿದು ನೀಗದು ರಾಜ್ಯಲಕ್ಷ್ಮಿಗ ।
ನ್ಯಭವದೊಳಪ್ಪೊಡಂ ನೆಱೆಯೆ ನೋಂಪೆನೆನುತ್ತೆ ಜಗನ್ನುತಸ್ವಯಂ
ಪ್ರಭ[2]ಗುರುಪಾದಮೂಲದೊಳೆ ಕೊಂಡನಖಂಡಿತಜೈನದೀಕ್ಷೆಯಂ ॥ ೩೯

ವ॥ಅಂತು ಜಾತರೂಪಧರನಾಗಿ ತನ್ನ ಪೞಿದು ಬಿಸುಟ ಸಹಸ್ರಕುಂತಳಂಗಳಂ ತನ್ನ ತಳದೊಳ್ ತೆಮಳ್ದುಕೊಂಡು ತುಂಬಿಯ ಬಂಬಲ್ಗಳಂ ಕೆಂದಾವರೆಯರಲ್ಗಳೊಳ್ ಪುದಿದುಯ್ವಂತುಯ್ದು,

ಮಡಗಿಡಲೆಂದು ಪುತ್ತಿನೊಳಗೊಯ್ಯನೆ ಕುತ್ತಿದ ಕಯ್ಯನಾಗಳಾ
ಗಡೆ ಪಸಿವಳ್ವ ನೀಳ್ದ ಪೊಗೆಯುಂ ಕಿಡಿಯುಂ ಬಿಸುಸುಯ್ಯ ಗಾಳಿಯೊಳ್ ।
ತೊಡರ್ದೊಡನುಣ್ಮೆ ಭೋಂಕೆನೊಗೆತರ್ಪ ಮಹೋರಗನೆಯ್ದೆ ಪಲ್ಗಳ
ರ್ದೊಡೆ ಕಿಡಿವೀಡೆ ನೆತ್ತರೊಱೆದುರ್ಚುಗೆ ಕೊಂಡುದು ತತ್ತಪಸ್ವಿಯಂ॥೪೦

ವ॥ ಆ ಪ್ರಸ್ತಾವದೊಳ್,

ಎಸೆವ ವಿಮಾನಘಂಟೆಗಳ ಮೆಲ್ಲುಲಿ ಕಿನ್ನರಗೇಯದೊಳ್ ಪೊದ
ಳ್ದೆಸೆಯೆ ವಿಚಿತ್ರಪಾತ್ರಪರಿನರ್ತನಮುಣ್ಮುವ ತೂರ್ಯನಾದದೊಳ್ ।
ಪೊಸಯಿಸೆ ಸೋಂಕಿನೊಳ್ ನಲಿವ ನಲ್ಲಳಲಂಪನೊಡರ್ಚೆ ಲೀಲೆ ಕ
ಣ್ಗೆಸದಳಮಾಗೆ ಪಾಱುವ[3] ಮಹೀಧರನೆಂಬ ವಿಯಚ್ಚರೇಂದ್ರನಂ ॥ ೪೧

ವ॥ ಭೋಂಕೆನೆ ಕಂಡು ವಿಷಮವಿಷಧರವಿಷಪೂರಿತಶರೀರಮನೊಯ್ಯನೊಯ್ಯನೆ ಆಱಿಸಿ[4] ಬಂದು ಕಿವಿಯೊಳ್ ಪಳಂಚಲೆರ್ದೆಯಂ ಪಿಡಿದಲುಗುವ ಸೀಯನಪ್ಪ ಗೀತಾತೋದ್ಯನಾದಕ್ಕಮಿದಿರೊಳೆ ಕಣ್ಗೆ ವಂದು ಬಗೆಯನುಱೆ ಸೆಱೆವಿಡಿದ ವಿದ್ಯಾಧರವಿಳಾಸಕ್ಕಂ ಬೆಕ್ಕಸಂಬಟ್ಟೀಗಳೆನ್ನ ತಪಂಬಟ್ಟ ಫಲಮುಂಟಕ್ಕುಮಪ್ಪೊಡೆ ವಿದ್ಯಾಧರನಪ್ಪೆನಕ್ಕೆಂದಾ ವಿದ್ಯಾಧರವಿಮಾನಮಂ ನೋಡಿ,

---

1ಖ.—ನವಜ್ಞೆಮಾಡಿ. 2ಕ.—ಪ್ರಭು. 3ಕ.—ಪಾಡುವ. 4ಖ.—ಅಳಱಿಸಿ.

ಅಲ್ಲಿಯೆ ಕಣ್ ಪಳಂಚಿ ಮನಮಲ್ಲಿಯೆ ಕೀಲಿಸೆ ನೆಚ್ಚು ಮೆಚ್ಚು[1] ತ
ಳ್ತಲ್ಲಿಯೆ ಸೋಲ್ತು ಪತ್ತೆ ಗತಜೀವಿತನಾಗವಿವೇಕದಿಂ[2] ತಪೋ।
ವಲ್ಲಿಯೊಳಪ್ಪನಲ್ಪಸುಖಮೆಲ್ಲಮನಲ್ಪಸುಖಕ್ಕೆ ಮಾಱಿ ಬಂ
ದಿಲ್ಲಿ ನಿದಾನದಿಂದತಿಬಳಂಗೆ ಮಹಾಬಳನಾಗಿ ಪುಟ್ಟಿದಂ ॥ ೪೦

ವ॥ ಅಂತು ಮುನ್ನಿನ ಭವದೊಳಾದಲಂಪು ಪೊಂಪುಳಿವೋಗೆ ಬಯಸಿ ಪಡೆದ ವಿದ್ಯಾಧರಶ್ರೀಯನಿನ್ನೆಗಂ ಬಿಸುಡಲಾಱದಿರ್ದೊಡಮೇನಾದುದು.

ಕನಸಿನೊಳಿಂದು ಮೂವರುಮಮಾತ್ಯರಸುಂಗೊಳೆ ಕಟ್ಟಿ ತಂದಗು
ರ್ವಿನ ಕೊಪೆನಾರ್ಪ ಕೋಷ್ಕೆಸಱ ಬಾವಿಯೊಳಿರ್ದೆ ಕಡಂಗಿ ಬಂದು ನೀ।
ನನಿಬರುಮಂ ಕರಂ ಕಱಿಲೆ ಬಗ್ಗಿಸಿ ತನ್ನನುದಗ್ರಮಪ್ಪ ಕಾಂ
ಚನಹರಿಪೀಠದೊಳ್ ಮಿಸಿಸುವಂದಮನೆರ್ದುಱಿ ನಂದುವಂದಮಂ ॥ ೪೩

ವ॥ ಕಂಡು ತದಶುಭಸ್ವಪ್ನದರ್ಶನಕ್ಕೆ ಕೊಕ್ಕರಿಸಿ ಭವದಾಗಮನಪ್ರತೀಕ್ಷಣಪರನಾಗಿರ್ದಂ. ಆತಂಗೆ ತದುತ್ಥಿತ[3]ಶಿಖಿಶಿಖಾಕಳಾಪಪ್ರಶಮನದರ್ಶನದಿಂದೊಂದು ತಿಂಗಳಾಯುಷ್ಯಂ. ಆತನಿಂ ಮುನ್ನಂ ನಿನ್ನೀ ಕನಸುಗಳಂ ಪೇೞಿ; ಪೇೞಿಲೊಡಮಾತಂ ನಿನ್ನ ಮಾತನೆ ಪವಣ್ಮಾಡಿ ಪೇೞ್ದುದಂ ಕೈಕೊಳ್ಗುಂ. ಅಂತು ಕೈಕೊಂಡು,

॥ ಪಿರಿಯಕ್ಕರಂ. ॥

ಈಗಳ್ ನೀನಿರ್ದ ನೋನಿಸೆ ನೋಂತು ಮಹಾಬಳಂ ಲಲಿತಾಂಗಂ ವಜ್ರ [ಜಂಘಂ
ಭೋಗಭೂಮಿಜಂ ಶ್ರೀಧರದೇವಂ, ಸುವಿಧಿನರಾಧಿಪನಚ್ಯುತೇಂದ್ರಂ ।
ಸಾಗರಾಂತಂ ನೆಲನೆನಿತನಿತುಮಂ ಚಕ್ರದಿಂ ಬೆಸಕೆಯ್ಸಿ ವಜ್ರನಾಭಿ
ಯಾಗಿ ಸರ್ವಾರ್ಥಸಿದ್ಧಿಯೊಳ್ಪಟ್ಟ ಭರತದೊಳಿನ್ನಾದಿದೇವನಪ್ಪೊಂ ॥ ೪೪

ವ॥ ನೀನುಂ ತೃತೀಯಜನ್ಮದೊಳ್ ವಿಗಳಿತಸಂಸೃತಿನಿಗಳನೆಯಪ್ಪೆಯೆಂಬುದುಂ; ಚಾರಣಯುಗಳಚರಣಯುಗಳಕ್ಕೆ ಕರಕಮಳಯುಗಳಮಂ ಮುಗಿದು ಬೀಳ್ಕೊಂಡತಿತ್ವರಿತಗತಿಯಿಂ ಬರುತ್ತುಂ,

---

[1] ಕ.—ಮೆಚ್ಚೆ. [2] ಕ.—ನಂತವಿವೇಕದಿಂ. [3] ಖ.—ತದುದ್ರುತ.

ಮುಸು ಮುತ್ತಂತೆ ತೆರಳ್ದ ತನ್ನ ಮೊಗಮಂ ಕಂಡಳ್ಕನೋ ಕೂಡೆ ಜೋ
ಲ್ದ ಸಡಿಲ್ದಿರ್ದೊಡಲಳ್ಳೆ ಜೊಳ್ಳೆತನಮಂ ಮೇಣ್ಕಾಣನೋ ಸಂತತ।
ವ್ಯಸನೋದ್ರೇಕದ ಕುಂದನೇನೊಣರನೋ ಶಕ್ತಿಕ್ಷಯಂಗಾಣನೋ,
ಬಿಸುಡಂ ಮುನ್ನಿನ ತನ್ನಲಂಪಳಿಕೆಯುಂ ಮತ್ತಂ ಜರಾಜರ್ಜರಂ ॥ ೪೫

ವ॥ ಅಂತಾತ್ಮಗತದೊಳ್ ಬಗೆಯುತ್ತುಂ ಬಂದು ಖಚರಪತಿಯನೆಯ್ದಿ ತತ್ಪ್ರಪಂಚಮಂ ಸಪ್ರಪಂಚಮಱಿಪಿ,

ಮನದಳಪಿಂ ತಮಾಳಲತಿಕಾಂಗಿಯರಾಟಿಸೆ ಬರ್ದುಗೆಟ್ಟು ಕಾಂ
ಚನಲತಿಕಾಂಗಿಯರ್ ಬಯಸೆ ಸೋಲ್ತು ಸರೋಜದಳಾಯತಾಕ್ಷಿಯರ್।
ನೆನೆಯೆ ವಿಳಾಸದುತ್ಪಳದಳಾಕ್ಷಿಯರೀಕ್ಷಿಸೆ ಸಂದ ನಿನ್ನ ಮು
ನ್ನಿನ ಚರಿತಂಗಳಂ ನೆನೆಯದಿರ್ ನೆನೆ ಜೈನಪದಾಂಬುಜಂಗಳಂ॥ ೪೬

ವ॥ ಅಂತುಮಲ್ಲದೆ,

ಮಸೆದಂಗೋದ್ಭವನಸ್ತ್ರದಂತೆಸೆವ ನಿನ್ನೀರೂಪು ವೃದ್ಧತ್ವದೊಳ್
ಪೊಸತೊಂದಾಯ್ತು ಮಮತ್ವಮಂಬಿಸುಟು ನೀನೇ ತತ್ತ್ವಮಂ[1] ಭವ್ಯ ಭಾ।
ವಿಸು ನಿನ್ನೀತನುವಂ ತಪೋವನವನಕ್ರೀಡಾಸುಖಕ್ಕೊಡ್ಡು ಚಿಂ
ತಿಸದಿರ್ ಮುನ್ನಿನ ನಿನ್ನ ಯೌವನವನಕ್ರೀಡಾವಿಳಾಸಂ[2]ಗಳಂ ॥ ೪೭

ವ॥ ಅಂತುಮಲ್ಲದೆಯುಂ,

ನಿನಗೀಸಂಸೃತಿವಾರಿರಾಶಿತಟಮತ್ಯಾಸನ್ನಮಾಸನ್ನ ಭ
ವ್ಯನೆಯೆಂದೆಯ್ದೆ ಮುನೀಂದ್ರದಿವ್ಯಮತದಿಂ ನಿಶ್ಚೈಸಿದೆಂ ಮಾಣಲಿ[3]।
ನ್ನೆನಸುಂ ಬಾರದು ನಿನ್ನೊಳಾತ್ಮಹಿತಮಂ ನಿಶ್ಚೈಸು ಸನ್ಮಾರ್ಗಸೂ
ಚನೆಗೆಯ್ದಿಂ ಶರಣಂ ಜಿನೇಂದ್ರಚರಣಂ ವಿದ್ಯಾಧರಾಧೀಶ್ವರಾ ॥ ೪೮

ವ॥ ಎಂದು ಪರಿಮಿತಹಿತವಚನಂಗಳಂ ಮುಟ್ಟೆ ನುಡಿದು ತನ್ನ ಕಂಡ ಕನಸುಗಳನನುಕ್ರಮಂದಪ್ಪದಱಿಪಿದ ಮಂತ್ರಿಮುಖ್ಯನ ನುಡಿಯೊಳಪಗತಕಲುಷಹೃದಯ[4]ನಾಗಿ,

---

1ಕ.—ನೀನೇಕತ್ವಮಂ. 2.ಕ — ವಿನೋದಂ. 3ಗ.—ಮಾಣದಿ.
4ಕ.—ಳವಹಿತಹೃದಯ ; ಗ.—ಳಪಹೃತಹೃದಯ.

ಜರೆ ಬಂದೊಟ್ಟೈಸೆ ಮಾಣ್ದಿರ್ದಳಿಪೆನಗಿದೆ ಮುಂ ಸೋಲದೇ ಕಾಳರಾಜಂ
ಬರೆಯುಂ ಮಾಣ್ದಿರ್ದನೇ[1] ನಿಶ್ಚಯಿಸು ತನುವನಿನ್ನೊಪ್ಪುಗೊಳ್ ಮುನ್ನ ಮಿನ್ನುಂ ।
ಕರಣೀಯಂ ನಿನ್ನ ವಾಕ್ಯಂ ನಿಜಮತವೆ ಮತಂ ಮೆಚ್ಚಿದಂತೆನ್ನ ನೀಸಂ
ಸರಣಾಂಭೋರಾಶಿಯಿಂದಂ ಪೊಱಮಡಿಸೆನಗಂ ನೀನೆ ಹಸ್ತಾವಲಂಬಂ ॥೪೯

ವ॥ ಎಂದು ಪರಿಚ್ಛೇದಿಸಿ ಮನಮಱಿಯೆ ನುಡಿದು[2] ನಿಜಗೃಹೋದ್ಯಾನದ ಜಿನಭವನದೊಳೆಂಟುದಿವಸಂಬರಂ ಮಹಾಮಹಮೆಂಬ ಜಿನಮಹಿಮೆಯುಂ ಮಹಾವಿಭೂತಿಯಿಂ ಮಹಾಬಳಂ ಮಾಡಿದಿಂ ಬೞಿಯುಂ ನಿಜಾಪ್ತವರ್ಗಮುಮಂ ಸಾಮಂತವರ್ಗಮುಮಂ ಬರಿಸಿ ಕವಚಹರನಾದ ನಿಜಸುತನತಿಬಳಕುಮಾರನಂ ರಾಜ್ಯಭಾರದೊಳ್ ನಿಱಿಸಿ,

ಒಡವಳೆದಂಬರೇಚರರನನ್ವಿತ[3]ಮಂತ್ರಿಸಮೂಹಮಂ ಮನಂ
ಬಿಡೆ ಪೊರೆದಿಷ್ಟಬಂಧುಜನಮಂ ಕರೆದೆಲ್ಲರುಮೀಕುಮಾರನಂ ।
ಹಿಡಿದಿರಿಮೆನ್ನ ಪಂಬಲನಿದಂ ಬಿಸುಡಿಂ ಬಿಡಿಮೆಂದು ಖೇಚರಂ
ಬಿಡಿಸಿದನಾಪ್ತರಂ ಬಿಡಿಸುವಂತಿರೆ ಮೋಹದ ಬಳ್ಳವಳ್ಳಿಯಂ ॥ ೫೦

ವ॥ ಅಂತು ನಿಜಾಪ್ತವರ್ಗಮುಮಂ ಬಂಧುವರ್ಗಮುಮಂ ವಿದ್ಯೆಗಳುಮಂ ಬಿಡಿಸಿ ವಿದ್ಯಾಧರಪ್ರಸಾಧನಮೆನಗಿಂದಿನೊಳನಿತೆಂಬಂತೆ ನೆಱೆಯೆ ಕೈಗೆಯ್ದು ಮಣಿಮಯಶಿಬಿಕಾರೂಢನಾಗಿ ಪೊಱಲಂ ಪೊಱಮಟ್ಟನೇಕಹಾಟಕಕೂಟಕೋಟಿಘಟಿತಸಿದ್ಧಕೂಟಮಂ ತ್ರಿಪ್ರದಕ್ಷಿಣಂಗೆಯ್ದು ಜಿನೇಂದ್ರಾರ್ಚನಾಪುರಸ್ಸರಂ ವಾಚನಾಗ್ರಹಣಸಮೇತಮಾರಾಧನೆಯಿನರ್ಚಿಸಿ ವೀರಸಂಸ್ಥಾನಾರೂಢ[4]ನಾದಾಗಳ್,

ಅರಸರ ಮುಚ್ಚು ತಮ್ಮ ಮನದೊಳ್ ನಿಲೆ ಸೈರಿಸದಂತನಿತ್ಯಮೀ
ನರರ ವಿಭೂತಿಯೆಂಬ ಬಗೆ ಬಂದಿರೆ[5] ಮಾಣದೆ ತಮ್ಮತಮ್ಮ ಪು ।
ತ್ರರನಭಿಯೋಗದಿಂದತಿಬಳಂಗೆ ನಿಯೋಜಿಸಿ ಪೊಣ್ದರಂ
ಬರಚರರಂಬರೇಚರರುಮಣ್ಮಿಳವಟ್ಟಿರೆ ಜೈನದೀಕ್ಷೆಯಂ ॥ ೫೧

1ಕ.—ಮಾಣ್ದಿರ್ಪನೇ. 2ಖ. ಗ.—ಪರಿಚ್ಛೇದಮನಱಿಯೆನುಡಿದು. 3ಖ.—ಚರಸಮನ್ವಿತ. 4ಕ.—ಸಂಸ್ತವಾರೂಢ; ಗ.—ಸಂಸ್ತರಾರೂಢ. 5ಖ.—ಸಂದಿರೆ.

ವ॥ ಆಗಳಾಸ್ವಯಂಬುದ್ಧಂ ನಿರ್ಯಾಪಕಾಚಾರ್ಯನಾಗಿ ಪಂಚಗುರು ಸಮಕ್ಷದೊಳ್ ಬಾಹ್ಯಾಭ್ಯಂತರಪರಿಗ್ರಹಪರಿತ್ಯಾಗಪುರಸ್ಸರಂ ವೀರಸಂಸ್ಥಾನಾರೂಢನಂ ಮಹಾಬಳನಂ ಜಾತರೂಪಧರನಂ ಮಾಡಿ ಚತುರ್ವಿಧಾಹಾರಶರೀರಪ್ರತ್ಯಾಖ್ಯಾನಮಂ ಕೊಟ್ಟು,

ತನ್ನಿಂದಂ ಪೆಱರಿಂದಂ
ತನ್ನಂ ಸಾವಗಿಸುವಾಸೆಯಿಲ್ಲದೆ ದೇಹೋ ।
ತ್ಪನ್ನಪರೀಷಹಸಂಹತಿ
ತನ್ನೊಡಲಂ ನೆಱೆಯೆ ತವಿಸುತಿರ್ಪುದುಮತ್ತಂ[1] ॥ ೫೦

ಆಯಿರ್ದ ಮಾಸ್ಕೆಯೊಳ್ ಪರ
ಮಾಯುಷ್ಯಾಂತಂ ಬರಂ ನಿರಾಕುಳಮಾಗಿ ।
ರ್ಪಾಯಿರವಿನ ಜೈನಾಭಿ
ಪ್ರಾಯಂ ಪ್ರಾಯೋಪಗಮನದಿಂ ತೊರಯಿಸಿದಂ[2] ॥ ೫೭

ವ॥ ಅಂತು ತೊರಯಿಸಿ,

ಮಂಗಳಕಾರಣಪಂಚಪ
ದಂಗಳನಪವರ್ಗಮಾರ್ಗವಿರಚಿತಸೋಪಾ ।
ನಂಗಳನಕ್ಷಯಮಂತ್ರಪ
ದಂಗಳನೋದುವುದು ನೆಱೆಯೆ ನಿಶ್ಚಳಮತಿಯಿಂ ॥ ೫೪

ಅವನೋದುವನಿತು ಬುದ್ಧಿಯೆ
ತವುತಂದೊಡೆ ಪಂಚಪದದ ನಾಮಾಕ್ಷರಮಂ ।
ಧ್ರುವಮೋದುವುದವು ತೊಡರ್ವುದು
ಮವಶ್ಯಮೋದಲಸದವಱ ಮೊದಲಕ್ಕರಮಂ ॥ ೫೫

ಅದು ತಡತಡಾದೊಡರ್ಹ
ತ್ಪದಮಂ ನಾಲಗೆಗೆ ತರ್ಪುದದು ಬಾರದೊಡಿ ।

1ಕ.—ತಿರ್ಪೊಡಮೆಂತುಂ 2ಖ.—ತೊಱಯಿಸಿದಂ

ರ್ಪುದಕಾರವೊಂದಱೊಳ್ ಮ
ತ್ತದು ತೊಡರ್ದೊಡೆ ತೊಡರದಿರ್ ಬೞಿಕ್ಕೇತಱೊಳಂ ॥ ೫೬

ಮುನಿವೃಂದೋಚ್ಚಾರಿತಪಂ
ಚನಮಸ್ಕೃತಿಗಾಂತು ಕಿವಿಯನರ್ಹತ್ಪದಮಂ ।
ನೆನೆಯುತ್ತುಮನುಪ್ರೇಕ್ಷೆಯೆ
ಮನದೊಳ್ ತಣ್ಮಲೆಯೆ ಸೇಸೆಗೊಳ್ ಖಚರಪತೀ ॥ ೫೭

ಮಿಡಿದನಿತು ಬೇಗದಿಂದಱಿ
ವೊಡಲನಿದಂ ಪೋಗೆ ನೂಂಕಿ ಚೆಲ್ವಪ್ಪೊಡಲಂ ।
ಪಡೆದಪೆಯಿಾಗಳೆ ಬಲ್ವಿಡಿ
ವಿಡಿದು ಶರಣ್ಬುಗು ಜಿನೇಂದ್ರಪದಸರಸಿಜಮಂ ॥ ೫೮

ವ॥ ಎಂದಾಮಹಾನುಭಾವನ ಪೇೞ್ದ ಮಾಪ್ಕೆಯೊಳಿರ್ಪತ್ತೆರಡು ದಿವಸಂ ಬರಂ ವೀರಶಯ್ಯಾತಳಗತನಾಗಿರೆ,

ಅಳುರ್ವ[1]ಪರೀಷಹಾನಳಶಿಖಾವಳಿಗಳ್ ಕೊಳೆ ಧೈರ್ಯಮಂ ಪುದುಂ
ಗೊಳಿಸಿ ಸುರುಳ್ದು ಕುರ್ಗಿದ ಕಱಂಗಿದ ಖೇಚರನಂಗಮಂ ಮೃಗಂ ।
ಗಳುಮಿರದೆಯ್ದೆ ವಂದು ನಡೆ ನೋಡಿದುವಿಂತಿದು ದಾವಪಾವಕಂ
ಬಳಸೆ ಸುರುಳ್ದ[2] ಬಾಳಸಹಕಾರಮಹೀರುಹಮೆಂಬ ಶಂಕೆಯಿಂ ॥ ೫೯

ವ॥ ಅಂತು ನೋಂತು,

ಸೊಗಯಿಪ ಮುನ್ನಿನಿರ್ದ ಪರಿಜಿಂ ಕಡುಚೆಲ್ವುಗಡಂ ಜಿನೇಂದ್ರನಂ
ಬಗೆವ ಮನಂ ಗಡಂ ಮುಗುಳ್ದು ಜಾನಿಪ ಕಣ್ಗಡಮಾತ್ಮತತ್ತ್ವದೊಳ್।
ಬಗೆ ಗಡಮೆಯ್ದೆ ಸೂೞ್ಗಡದೆ ಪಂಚಪದಂಗಳನೋದುತಿರ್ಪ ನಾ
ಲಗೆ ಗಡಮೇಂ ಸಮಾಧಿವಿಧಿಯುಂ ನೆಱೆ ತಾಳ್ದದನೋ ಮಹಾಬಳಂ ॥ ೬೦

ಇಂತನವದ್ಯಮಪ್ಪಪದದೊಳ್ ಪತಿಯುಂ ನಡೆಯಲ್ಕೆ ಪೇೞ್ದು ತಾ
ನುಂ ತಱಿಸಂದುದಗ್ರತಪಮಂ ತಡವಿಲ್ಲದೆ ಕೊಂಡು ಘೋರವೀ ।
ರಂ ತಪಮೆಂಬಿನಂ ನೆಗೞ್ದು ತತ್ಸಚಿವೋತ್ತಮನೊಳ್ಳಿಕೆಯ್ದನಿ
ನ್ನಂತುಟು ಪೇೞ್ದು ಕೆಮ್ಮಗಿರೆ ಗಮ್ಮನೆ ಕಮ್ಮರಿ[3]ಯೋಜನಾಗನೇ ॥ ೬೧

---

[1] ಖ.—ಅಳುರ್ದ; ಗ.—ಅಳುರ್ದು. [2] ಖ.—ಕಱಿಲ್ದ.

[3] ಗ.—ಪೇಳ್ದು ಕೆಮ್ಮನಿರೆ ತಪ್ಪದೆ ಕಮ್ಮರಿ.

ವ॥ ಅಂತು ಮಹಾಬಳಖಚರೇಂದ್ರಂ ಪ್ರಾಯೋಪಗಮನವಿಧಿಯಿಂದ ಮಾತ್ಮೀಯಶರೀರಭಾರಮನಿೞಿಪಿ ತತ್ಸಮಯದೊಳನಲ್ಪಸುಖನಿವಾಸಮೆನಿಸಿದೀಶಾನಕಲ್ಪದೊಳಪ್ರತಿಹತಚಂಚತ್ಪಂಚರತ್ನಪ್ರಭಾಪ್ರಸರಪ್ರಕಟಿತಸಂಧ್ಯಾಭ್ರವಿಭ್ರಮಭ್ರಾಜಿಯಪ್ಪ ದಿವ್ಯತಳ್ಪತಳದ ಪೊರೆಯೊಳಗೆ ತೊಳತೊಳತೊಳಗಿ ಪೊಱಮಡುವೆಳನೇಸಱ[1]ಬಳಗದ ಬೆಳಗನೊಳಕೊಂಡು,

ಮಿಱುಗುವ ರತ್ನಭಿತ್ತಿಗಳ ದೀಧಿತಿಯುಂ ನಿಜದೇಹದೀಪ್ತಿಗಳ್
ಮಱಸೆ ಸಮಸ್ತದೀಪ್ತಿಪರಮಾಣುಗಳಂ ಗೆಡೆಗೊಂಡು ಜೌವನಂ ।
ನೆಱೆದಿರೆ ದಿವ್ಯಮೂರ್ತಿಸಹಜಾಂಬರಭೂಷಣದಿವ್ಯಮಾಲೆಗಳ್
ನೆಱೆದೊಡವುಟ್ಟೆ ಮುನ್ನೆ ಮಱಲುಂದಿದನೆೞ್ಚಱುವಂತೆ ಪುಟ್ಟಿದಂ ॥ ೬೦

ವ॥ ಅಂತು ಪುಟ್ಟಿದಾಗಳ್,

ತೆಱೆಯದೆ ಮುನ್ನೆ ಕೆತ್ತ ಪಡಿಗಳ್ ನವಸಾರಭಮುಣ್ಮೆ ಪೊಕ್ಕಳಂ
ತೆಱೆದುವು ರತ್ನತೋರಣಗಣಂಗಳುದಗ್ರವಿಮಾನರಾಜಿಯೊಳ್ ।
ನೆಱೆದುವು ಜೈನರೊಳ್ಗುಡಿಯ ದಾಂಗುಡಿಗಳ್ ನಲಿದಾಡುವಂತೆ ಸುತ್ತಿಱಿದುವು ಭೋಂಕೆನಾತನ ಪುರಾತನಪುಣ್ಯಫಲಪ್ರಭಾವದಿಂ ॥ ೬೩

ವ॥ ಅದಱ ತದನಂತರದೊಳ್,

ನೆಗೆೞ್ದುವು ಪಟುಪಟಹಮೃದಂ
ಗಗಭೀರಾರಾವಮಮರನಾಟಕಶಾಲಾ ।
ದಿಗಳೊಳತಿಮಧುರಮೊಮೊರ್ಗದ
ಲೊಗೆದುದು ಜಯಜೀಯನಂದವರ್ಧಸ್ವರವಂ[2] ॥ ೬೪

ಸುರತರುನಂದನಂಗಳನಲರ್ಮಱೆ ಬಂದೆಱಗಿತ್ತು ದೇವಸಾಂ
ದರಿಯರ ದಿವ್ಯಮಪ್ಪ ಪೊಸಗಂಪಿನಲಂಪನವುಂಕೆ ಕೊಂಡವ।
ಳ್ದಿರ ಮಿಳಿರ್ಪೊಳ್ಗುರುಳ್ಗಳನೆ ಲೀಲೆಯಿನಾಡಿಸಿ ಪುಷ್ಪಕೇಸರಂ
ತೆರಳೆ ತೆರಳ್ಚಿ ಬೀಸಿದುದು ತೆಂಬೆಲರೆಂಬೆಲರಪ್ಪಿಕೊಳ್ವವೋಲ್ ॥ ೬೫

---

[1] ಕ.—ಪೊರೆಯೊಳಗೆ ಕೆಮ್ಮುಗಿಲತೆಗಳೆಗೆಯ ಪೊರೆಯೊಳ್ಪೊರೆಯೊರೆಯಲ್ಲದೆ ತಳತಳನೆ ತೊಳಗಿ ಪೊಳೆದು ಪೊಱಮಡುವ ಎಳನೇಸಱ. [2] ಖ.—ವರ್ಧನರವಮುಂ

ವ॥ ಮತ್ತಮಮರಲೋಕಾನೇಕವಾದ್ಯಂಗಳಲಯಂಗಳೊಳಂ ಪೂತಜಂಗಮಲತೆಗಳಂತೆಱಗಿ ತನ್ನ ಮುಂದೆ ಬಂದಾಡುವಚ್ಚರಸಿಯರುಮಂ ಅನೇಕಭಂಗಿಭೃಂಗಾರಮಣಿದರ್ಪಣಕನಕಕಳಶಚಾರುಚಾಮರಾತಪತ್ರಪವಿತ್ರಿತಕರಪಲ್ಲವೆಯರಾಗಿ ಸೇಸಿಕ್ಕಲೆಂದು ಬಂದಮರಪುರಂಧ್ರಿಯರುಮಂ ಆಳೋಕನಮಾತ್ರದೊಳ್ ಮನಮನುಗಿಬಗಿಮಾಡಿ ಮಸೆದ ಮದನನಲಗಿನಲರ್ಗಳಂತೆ ಕಣ್ಣೊಳೆಳಸಿ ಬಳಸಿ ಬಂದಿರ್ದ[1] ಪಾಟದಾಟದಮುದ್ದಿನ ಬರ್ದಿನ ಪರಿವಾರದೇವಿಯರುಮಂ ಅತಿಲಲಿತಭೂಷಾಭ್ಯಸನಚತುರಭಾಷಾವಿಶೇಷಕುಶಲೆಯರಪ್ಪ ದೇವವಿಳಾಸಿನಿಯರುಮುಂ ಭೋಂಕನೆ ಕಂಡು,

ಆನಾರ್ಗಿರ್ದ ವಿಮಾನಮಾವುದಿವರಾರ್ಗೀಲೋಕಮೇನೆಂಬುದಾ
ನೇನೋಂತಿಲ್ಲಿಗೆ ವಂದೆನೀವಿಭವಮಿಂತಾರಿಂದಮಾಯ್ತೆಂಬುದಂ।
ತಾನಾಗಳ್ ಬಗೆವನ್ನೆಗಂ ಮನದೊಳಾದೇವಂ ಭವಪ್ರತ್ಯಯ
ಜ್ಞಾನಂ ತೊಟ್ಟನೆ ಪುಟ್ಟೆ ಪೂರ್ವಭವದೊಳ್ಪುತ್ತೊಟ್ಟೊಂದು ವೃತ್ತಾಂತಮಂ॥ ೬೬

ವ॥ ನೆಱೆಯಱಿದು,

ಇದು ದೇವೇಂದ್ರನಿವಾಸಮೆನ್ನ ನೆಲೆಯುಂ ಶ್ರೀ ಶ್ರೀಪ್ರಭಂ ಮುಂದೆ ನಿಂ
ದಿದು ದೇವವ್ರಜಮಿಂತಿದೆಲ್ಲಮಮರೀಸಂದೋಹಮಾಂ ದೇವನ।
ಪ್ಪುದು ಮುಂ ಖೇಚರರಾಜನಾದ ಭವದೊಳ್ ಸಯ್ಪಿಂ ಸ್ವಯಂಬುದ್ಧನೆಂ
ಬುದನಾನೆಂದೆನದಲ್ಲದಂದೆನಗಮೀಲೋಕಕ್ಕಮೇಂ ಸಮ್ಮದಂ॥ ೬೭

ವ॥ ಎಂದು ಬಗೆವನ್ನೆಗಮೆತ್ತಿದ ನಮೇರುಮಂದಾರಪಾರಿಜಾತದ ಬಣ್ಣವಾಸಿಗಂಗಳುಂ ಮುತ್ತಿನ ಮಾಣಿಕದ ಪಡಲಿಗೆಗಳೊಳ್ ಪಸರಿಸಿದ ವಿಚಿತ್ರವಸ್ತ್ರಾಭರಣಂಗಳುಂ ಚೆಂಬೊನ್ನ ತಳಿಗೆಗಳೊಳ್ ತೆಕ್ಕನೆ ತೀವಿದ ಬಿಡುಮುತ್ತಿನ ಸೇಸೆಗಳುಂ ಬೆರಸು ಮಹತ್ತರದೇವಿಯರ್ ಬಂದು ಪೊಡೆವಟ್ಟು,

ಇದು ನಿಜಪೂರ್ವಪುಣ್ಯಫಲದಿಂ ದೊರೆಕೊಂಡ ವಿಮಾನಮೀವಿಮಾ
ನದೊಳನುಬಂಧಿಸಿರ್ದುದಿದು ದೇವನಿಕಾಯಮಿದೀತ್ವದಂಘ್ರಿಪ।
ದ್ಮದ ಬಳಸಿರ್ಪ ದಿವ್ಯಗಣಿಕಾಜನಮಿಂತಿದನಾಳ್ದ ದೇವ ರಾ
ಗದೊಳಿರು ನೀನುಮಿಲ್ಲಿ ಲಲಿತಾಂಗತೆಯಿಂ ಲಲಿತಾಂಗದೇವನೈ॥ ೬೮

[1]ಗ.— ಮದನನ ಪೊಳೆವಲರ್ಗಣೆಗಳಂತೆ ಪೊಳೆದೆಳಸಿ ಬಂದಿರ್ದ.

ಇದು ಸುಖದೊಂದು ತುತ್ತತುದಿ ರಾಗದ ಪೊತ್ತಪೊದಲ್ ನಿರಂತರಾ
ಭ್ಯುದಯದ ಸಾಗರಂ ವಿಭವದಾಗರಮಿಾದಿವಿಜೇಂದ್ರರುಂದ್ರಲೋ।
ಕದೊಳಮಿದೊಂದೆ ಸಾರಮಿದು ಜೈನಪದಾಬ್ಜವರಪ್ರಸಾದದಾ
ದುದು ನಿನಗಪ್ಪ ಕಾರಣದಿನೀಗಳೆ ಪೂಜಿಸು ಚೈತ್ಯರಾಜಿಯಂ ॥ ೬೯

ವ॥ ಎಂಬುದುಮುಮರಲೋಕದರ್ಶನಾನಂತರೋತ್ಪನ್ನರಾಗಸಾಗರೋ ದಾರಪೂರಪರಿಪ್ಲಾವಿತಾಂತರಂಗನನುಸಂಗತಾತ್ಯಂಗನುತ್ತುಂಗಮಣಿವಿಭೂ ಷಣಮರೀಚಿಮೇಚಕಿತದೇವಾಂಗನಾನಿಕಾಯಸಮೇತನೀಶಾನಕಲ್ಪದಕೃತ್ರಿ ಮಚೈತ್ಯಾಲಯಂಗಳಂ ಅರ್ಚಿಸಿ[1]ತಪ್ತತಪನೀಯಚ್ಛಾಯನುಂ ಸಪ್ತಹ ಸ್ತೋಚ್ಛ್ರಾಯನುಂ[2] ನಿದ್ರಾಲಸ್ಯಾಕ್ಷಿನಿಮೇಷಜರಾಶೋಕವಿಷಾದವಿರಹಿ ತನುಂ ಸಹಜಸುರಭಿಗಂಧಬಂಧುರನುಂ ಏಕಸಾಗರೋಪಮಾಯುಷ್ಯ ನುಂ ವರ್ಷಸಹಸ್ರಸಂಕಲ್ಪಕಲ್ಪಿತಾಮೃತಾಹಾರನುಂ ಅರ್ಧಮಾಸನಿರ್ಯ ತ್ಸುರಭಿನಿಶ್ವಾಸನುಂ ಕಾಯಪ್ರವಿಚಾರನುಂ ಅಪರಿಮಾಣಸುರತರುಪ್ರಸೂನ ಶೇಖರನುಮಾಗಿ ನಾಲ್ಕಾಸಿರ್ವರ್ ಮನೋನಯನವಲ್ಲಭೆಯರೊಳಂ ಸ್ವಯಂ ಪ್ರಭೆ, ಕನಕಲತೆ, ಕನಕಮಾಳೆ, ವಿದ್ಯುಲ್ಲತೆಯೆಂಬ ನಾಲ್ವರ್ ಮಹಾ ದೇವಿಯರೊಳಂ,

ಮಣಿಮಯದೀಪ್ತಿಯೊಳ್ ಪುದಿದು ಪಜ್ಜಳಿಪುಜ್ಜ್ವಳಕಾಂತಿ ಗಾಡಿಯೊಳ್
ಪೆಣೆದು ವಿಳಾಸದೊಳ್ ತೊಡರ್ದು ಕೆಯ್ತುಮಲಂಪನೆ ಮಾಡೆ ನೋಡಿ ಕಣ್॥
ತಣಿವಿನಮಪ್ಪಿ ತೋಳ್ ತಣಿವಿನಂ ಸುರತಾಮೃತಸೇವೆಯೊಳ್ ಮನಂ
ತಣಿವಿನಮಾದಲಂಪು ಮಿಗೆ ಭೋಗಿಸಿದಂ ಸುರಲೋಕಸೌಖ್ಯಮಂ ॥ ೭೦

ಪೊಳೆವೆಳಮಿಂಚಿನಂತೆಸೆದು ಗಾಡಿಯೊಳೊಂದಿದ ತನ್ನರೂಪು ಕ
ಣ್ಗೊಳೆ ಸವಿಯಂ ಪುದುಂಗೊಳಿಪ ಚಿತ್ರರತಂಗಳ ಭಂಗಿಗಳ್ ಮನಂ।
ಗೊಳೆ ನಗೆ ಸಬ್ಬವಂ ಬಿನದಮೆಂಬಿವಱಿಂ ಲಲಿತಾಂಗನಂ ಮನಂ
ಗೊಳಿಸುವರಿಚ್ಛೆಕಾರ್ತನದ ಲಲ್ಲೆಯ ಸಗ್ಗದ ದೇಸೆ[3]ಕಾರ್ತಿಯರ್ ೭೧

ಕಟಿಪೆ ವಿಳಾಸಮಂ ಪಡೆದ ರಾಗದ ಭೋಗದಲಂಪಿನಿಂಪು ಪೊಂ
ಪುಟಿಯೆನೆ ತದ್ವಿಮಾನದೊಳೆ ಪುಟ್ಟಿದ ತನ್ನಯ ದೇವಿಯರ್ ಪಲರ್।

[1]ಖ.—ಬಂದಿಸಿ. [2]ಗ.—ಹಸ್ತೋಚ್ಛ್ರಿತಶರೀರನುಂ. [3]ಗ.—ಗಾಡಿ.

ಕಱಿವಿನಮಾಯುರಬ್ಧಿಯೊಳನುಕ್ರಮದಿಂ ಪಳಿತೋಪಮಂಗಳ
ಯ್ದುಱಿವಿನಮುಂಡನಾತ್ರಿದಶಲೋಕಸುಖಾಮೃತಮಂ ಸುರೋತ್ತಮಂ ೨೨

ವ॥ ಅನ್ನೆಗಂ ಸ್ವಯಂಪ್ರಭಾಭಿಧಾನೆಯರ್ ಪಲಂಬರುಮತಿಕ್ರಾಂತೆಯರಾಗೆ ತತ್ಸ್ಥಾನದೊಳ್ ಶ್ರೀಪ್ರಭವಿಮಾನದೊಳುಪಪಾತತಳ್ಪತಳದ ಪೊರೆಯೊಳಂ ಪೊರೆಯೊರೆಯಿಲ್ಲದ ಮದನರಾಗರಸದೊಳ್ ಪೊರೆದು,

ಅಭಿನವಪಾರಿಜಾತಕುಸುಮಾಸವವೊರ್ದಲುಣ್ಮೆ, ದೇವದುಂ
ದುಭಿ ನಭದೊಳ್ ಪೊದಳ್ದೆಸೆಯೆ,ಕಣ್ಗೆಸೆದಿರ್ಪ ನಿಜಾಂಗಸಂಗತ ।
ಪ್ರಭೆ ಸುರಲೋಕಮಂ ಬೆಳಗೆ,ವಿಸ್ಮಯಮಪ್ಪಿನಮಾಗಳಾಸ್ವಯಂ
ಪ್ರಭೆ ಲಲಿತಾಂಗನಳ್ಕೆರ್ದೆಗೆ ತೊಟ್ಟನೆ ಬೇಂಟಮೆ ಪುಟ್ಟೆ ಪುಟ್ಟಿದಳ್॥ ೨೩

ಅದು ಸುಖದೊಂದು ಪಿಂಡಮದು ಪುಣ್ಯದ ಪುಂಜಮದಂಗಜಂಗೆ ಬಾ
ಪ್ಪೆಮ್ಮೆದಲದು ಚಿತ್ತಜಂಗೆ ಕುಲದೈವಮದಂಗಜಚಕ್ರವರ್ತಿಗೆ ।
ತ್ತಿದ ಪೊಸವಟ್ಟಮಂತದು[1] ಮನೋಜನ ಕೈಪಿಡಿಯೆಂದುಮಾಣ್ದನಾ
ಸುದತಿಯ ರೂಪನಿಂ ಪೊಗೞತನೆಂದೊಡೆ ಚಿಃ ಕರಮೊಗ್ಗನಾಗೆನೇ ॥ ೨೪

ನೆಗೞ್ದಮರಾಂಗನಾಜನದ ರೂಪುಗಳೆಲ್ಲಮದೀಕೆಯೊಂದು ದೇ
ಸೆಗೆ ನಿಮಿರ್ವೊಂದು ಪುರ್ವಿನ ನಯಕ್ಕಮವೊರ್ಂದದಗುಂತಿಗೊಂದು ಭಂ[2] ॥
ಗಿಗೆ ನೆಗಪ್ಪೊಂದು ಮೆಲ್ಪಿನ ತೊದಳ್ನುಡಿಗಪ್ಪೊಡಮೆಯ್ದೆವಾರವೇ
ನೊಗಸುವವೆಂದು[3] ತಳ್ತಗಲನಾಕೆಯನಾಲಲಿತಾಂಗವಲ್ಲಭಂ ॥ ೨೫

ಬ್ರತದಿಂದಂ ಪಡೆದಿಂದ್ರಲೋಕವಿಭವಂ ಮುನ್ನಾದ ದೇವಾಂಗನಾ
ತತಿಯಿಂದಂದಿನಿತಿಂಪನೀಯದು ಮನಕ್ಕಾಹ್ಲಾದಮಂ ಮಾೞ್ಪ ತ ।
ತ್ಸತಿಯಿಂ ನೆಟ್ಟನೆ ಸಾರಮಾದುದು ಗಡಂ ತತ್ಕಲ್ಪಜಂಗೆಂದೊಡಾ
ಜಿತವಿದ್ಯುತ್ಪ್ರಭೆಯಂ ಸ್ವಯಂಪ್ರಭೆಯನಿನ್ನೇವಣ್ಣಿಪೆಂ ಬಣ್ಣಿಪೆಂ ॥ ೨೬

ಎಸೆದಿರ್ದೆಯೊಳ್ ಪಳಂಚುವ ಕಲಧ್ವನಿಯಿಂ ಪೊಸತೊಂದು ರಾಗಮಂ
ಪೊಸಯಿಸಿ ಸೋಂಕಿ ಸೋಂಕಿದೊಡೆ ಬಂದಿರೆನಿಂದಧರೋತ್ತರಂಗಳೊಳ್ ।

---

[1] ಗ.—ವಟ್ಟಮಲ್ತದು. [2] ಕ.—ನಯಕ್ಕಮವೊರ್ಂದುಗಿದುಣ್ಮೆವೊಂದುಭಂ.
[3] ಕ.—ನೊಗಸುಗವೆವೊಲ್ದು ; ಗ.—ನೊಗಸುಗುವಂತೆ.

ಮಿಸುಪ ರಸಾಂತರಂಗಳನೊಡಂಬಡನಾಗದೆ ತನ್ನೊಳಿಂತು ಪೋ
ಲಿಸುವೊಡೆ ಪೋಲಿಸಲ್ಕೆ ದೊರೆ ವೀಣೆಯನಾಸುರತಪ್ರವೀಣೆಯುಂ ॥ ೭೭

ವ॥ ಮತ್ತಮಾಕೆವೆರಸೊರ್ವ ನಂದೀಶ್ವರಮಹಾಮಹಿಮೆಗಂ ಪಂಚಕಲ್ಯಾಣೋತ್ಸವಕ್ಕಮಚ್ಯುತೇಂದ್ರನೊಡನೆ ನಿಜಪೂಜಾವಿಳಾಸಮಂ ಮೆಱೆಯಲೆಂದು ಪೋಗಿ ವಿವಿಧದಿವ್ಯದ್ರವ್ಯಾರ್ಚನೆಗಳಿಂ ತ್ರೈಲೋಕ್ಯಪೂಜ್ಯನಂ ಪೂಜಿಸಿಯುಮೋರೊರ್ವ,

ಹಿಮವತ್ಕುತ್ಕೀಳಲೀಲಾವನಪರಿಸರರಮ್ಯೋಪಕಂಠಂಗಳೊಳ್ಪಿಂ
ಹಿಮವದ್ದೇವೇಂದ್ರಶೈಳೋಪರಿತಳವನದೊಳ್ತಳ್ತಲಂಪಿಂ ಸ್ವಯಂಭೂ।
ರಮಣಾಂಭೋರಾಶಿವೇಳಾವನನಿಕಟನಿಕುಂಜಂ[1]ಗಳೊಳ್ ಕ್ರೀಡಿಸುತ್ತು
ತ್ತಮಸಾಖ್ಯಾಧಾರನಾದಂ ಸುಕವಿಜನಮನೋಮಾನಸೋತ್ತಂಸಹಂಸಂ ॥ ೭೮

ಅಣಿಮಾದ್ಯಷ್ಟಗುಣಪ್ರವೀಣ[2]ವಿಭವಂ ದೇವಾಂಗನಾಸನ್ಮನಃ
ಪ್ರಣಯಪ್ರೀಣಿತಮಾನಸಂ ಸುರವಧೂಲೀಲಾವಧೂತಪ್ರತಿ।
ಕ್ಷಣಚಂಚಚ್ಚಮರೀರುಹಂ ಪಟುನಟಪ್ರಾರಬ್ಧಸಂಗೀತಕಂ
ತಣಿದಂ ಸಂತತಮಿಂತು ದಿವ್ಯಸುಖದೊಳ್ ಸಂಸಾರಸಾರೋದಯಂ ॥ ೭೯

ಗ॥ ಇದು ದೇವೇಂದ್ರಮುನೀಂದ್ರವಂದ್ಯಪರಮಜಿನೇಂದ್ರಮುಖ
ಚಂದ್ರವಾಕ್ಚಂದ್ರಿಕಾಪ್ರಸರಪ್ರಸಾದೋದೀರ್ಣಸೂಕ್ತಿ
ಕಲ್ಲೋಲಮಾಳಾಕೀರ್ಣಕವಿತಾಗುಣಾರ್ಣವ
ಪ್ರಣೀತಮಪ್ಪಾದಿಪುರಾಣದೊಳ್
ಲಲಿತಾಂಗದೇವವರ್ಣನಂ
ದ್ವಿತೀಯಾಶ್ವಾಸಂ
ಸಂಪೂರ್ಣಂ.

---

1 ಖ.—ವನಗಿರಿತಟಕುಂಜ. 2 ಕ.—ಗುಣಪ್ರಭೂತ.

ತೃತೀಯಾಶ್ವಾಸಂ.

ಶ್ರೀಮದಮರಾಂಗನಾನನ
ತಾಮರಸಾಮೋದಮತ್ತಮಧುಕರನಾಕ ।
ಲ್ಪಾಮರನೊಸೆದಂ ಸುರಸಾ
ಖ್ಯಾಮೃತರಸದೊಳ್ ಸರಸ್ವತೀಮಣಿಹಾರಂ ॥ ೧

ಸುರತರುನಂದನಾವಳಿಗಳಂಗಜರಾಗಮನೀವುವಾವುದೊಂ
ದಿರಲೆಡೆ ಚೆಲ್ವದರ್ಕೆ ಬಗೆದಾಗಳೆ ವಾಹನದೇವರುಯ್ವರ ।
ಚ್ಚರಸಿಯರಿಚ್ಛೆಯಂ ಸಲಿಪರೊಲ್ದಣಿಮಾದಿಗುಣಾನ್ವಿತಾಮರರ್
ಪರಿವೆಸಗೆಯ್ವರೆಂಬೆನಱಿಯೆಂ[1] ಪೊಗೞಲ್ ಸುರಲೋಕಸೌಖ್ಯಮಂ ॥ ೨

ವ॥ ಅಂತಾತ್ಮಪುಣ್ಯೋಪಾರ್ಜಿತಾಮರಲೋಕಭೋಗವೇಕಸಾಗರಪ್ರಮಿತಜೀವಿತಮುಱುದಿಂಗಳುೞಿದುದೆಂಬಂದಿಂಗೆ,

ಸೂಡಿದ ಪಾರಿಜಾತದ ನಮೇರುವ ಬಾಸಿಗವೊಯ್ಯನೊಯ್ಯನಿ
ರ್ಪೋಡಿದುದಂದಿನಂಗರುಚಿ ಕಣ್ಗೆೞಿದಾಯ್ತು ವಿಭೂಷಣಂಗಳೊಳ್ ।
ತೀಡುವ ರಶ್ಮಿಗಳ್ ಮಸುಳ್ದುವಾಗುಳಿಯಾಯ್ತು ನಿತುಬ್ಬೆಗಂ ಮೊಗಂ
ಬಾಡಿ ತಗುಳ್ದು ಸೂಚಿಸಿದುವಾದಿವಿಜಂಗವಸಾನಕಾಲಮಂ ॥ ೩

ವ॥ ಮತ್ತಂ ತನ್ನ ಪೋಗಿಂಗೆ ನಡನಡನಡುಗುವಂತೆ ನಡುಗುವುಪವನದ ಕಲ್ಪವೃಕ್ಷಂಗಳುಮಂ ತನ್ನಗಲ್ಕೆಗೆ ಬಿನ್ನನಿರ್ಪಂತೆ ಬಿನ್ನನಾಗಿರ್ಪ ವಿಮಾನದ ಮಣಿಕುಟ್ಟಿಮಭೂಮಿಗಳುಮಂ ಆಗಳಾಗಳೆ ತನ್ನಂ ಪೆಱರ್ಪಿಡಿದು ತೆಗೆವಂತೆ ತನಗೆ ತಾನೇ ಪೊಣ್ಮುವ ಭಯಮುಮಂ ಭೋಂಕನೆ ಕಂಡು ನಾಕಲೋಕಚ್ಯುತಿಯನಾಗಳಱಿದು ಮನದೊಳಳ್ಕಿ ಬೆಳ್ಕನೆವೋಗಿ,

ಸುರತರುನಂದನಂಗಳರ ರತ್ನಪಿನದ್ಧವಿಮಾನಕುಟ್ಟಿಮಾಂ
ತರಸುರತಾಲಯಂಗಳರ ಚಾರುವಿಲೋಲಕಟಾಕ್ಷಪಾತಸಾಂ ।
ದರಪರಿವಾರದೇವಿಯರಿರಾ ಕಡುಕೆಯ್ದು ಕೃತಾಂತನಿಂತು ನಿ
ರ್ನೆರಮೊಪೆದುಯ್ವೊ ಬಾರಿಸದೆ ಕೆಮ್ಮನುಪೇಕ್ಷಿಸಿ ನೋಡುತಿರ್ಪಿರೇ ॥ ೪

---

[1] ಕ.—ಗೆಯ್ವರೆಂದೊಡಱಿಯೆಂ.

ವ॥ ಎಂದು ಸೈರಿಸದೆ ಕಾಮಸಾಮ್ರಾಜ್ಯಸರ್ವಸ್ವಭೂತೆಯಪ್ಪ ತನ್ನ ನಲ್ಲಳ್ ಮೊಗಮಂ ನೋಡಿ.

ಸಂತಸದಂತನೆಯ್ದಿ ಸುರತಾಮೃತದೊಳ್ ತಣಿದಳ್ಕುಱಿಂ ಜಗಿ
ಲ್ತಂತಿರೆ ಪತ್ತಿ ಮೆಯ್ಗಳೆರಡಾದೊಡಮೇನಸುವೊಂದೆ ನೋಪ್ಪೊಡೆಂ।
ಬಂತಿರೆ ಕೂಡಿ ನಿನ್ನೊಡನೆ ಭೋಗಿಸಲೀಯದೆ ಕೆಮ್ಮನೆನ್ನ ನು
ಯ್ವಂತಕನೆಂಬ ಬೂತನೆಲೆ[1] ಮಾಣಿಸಲಾಗದೆ ಪೇೞ್[2] ಸ್ವಯಂಪ್ರಭೇ ॥ ೫

ವ॥ ಎಂದು ಧೈರ್ಯಮಂ ಪತ್ತುವಿಟ್ಟು ಅತಿಪ್ರಲಾಪಂಗೆಯ್ವ ಲಲಿತಾಂಗದೇವನಂ ಸಾಮಾನಿಕದೇವರ್ಕೈದೆವಂದು.

ನಿನಗೊರ್ವಂಗಲ್ಲವಸ್ಥಾಂತರಮಮರಜನಕ್ಕೆಲ್ಲಮೀಪಾಂಗೆ ಕಾರು
ಣ್ಯನಿನಾದಂ ನಿನ್ನ ಸಾದಂ ನಗಿಸುಗುಮೆಪೆದುಯ್ವಂತಕಂಗಿಲ್ಲ ದೇವಾಂ।
ಗನೆಯರ್ಮಾಱಾಂಪರೇ ಪೇೞ್ ಜನನಮೃತಿಜರಾತಂಕಶೋಕಾಗ್ನಿಯಿಂದಾ
ವನುಮೀಸಂಸಾರದೊಳ್ಬೇಯದನೊಳನೆ ಶರಣ್ಧರ್ಮದಿಂದೊಂದು ಮುಂಬೇ॥

ಜಿನಚೈತ್ಯಬ್ರಾತಮಂ ಬಂದಿಸು ಜಿನಪದಪದ್ಮಂಗಳಂ ದಿವ್ಯಮಪ್ಪ
ರ್ಚನೆಯಿಂದಂ ಭಕ್ತಿಯಿಂದರ್ಚಿಸು ಜಿನನ ನಮಸ್ಕಾರಮಂತ್ರಂಗಳೊಳ್ ಭಾ।
ವನೆಯುಂ ತಾಳ್ದೆತ್ತಿಯಿಂದಂ ಜಿನಮಹಿಮೆಗಳಂ ಮಾಡು ನೀಂ ಭವ್ಯನೈ ಮ
ತ್ತಿನ ಮಿಥ್ಯಾಜ್ಞಾನಿವೋಲ್ ನೀಂ ತರಳತೆವೆರಸಿಂತೇಕೆ ವಿಭ್ರಾಂತನಪ್ಪೈ ॥

ಎನೆ ಬಗೆಗೊಂಡಭೀತಮನನರ್ಚಿಸಿ ಬಂದಿಸಿ ಚೈತ್ಯಗೇಹಮು
ಳ್ಳನಿತುಮನಾಱುಮಾಸಮದಱಿಂ ಬೞಿಕಚ್ಯುತಕಲ್ಪದೊಳ್ ಜಿನೇಂ।
ದ್ರನನೊಸೆದರ್ಚಿಸುತ್ತುಮಮರಂ ಚ್ಯುತನಾದನದಲ್ತೆ ವಿಶ್ವಲೋ
ಚನನಘವೈರಿಯಲ್ಲದುೞಿದಂ ಗೆಲಲಾರ್ಕುಮೆ ಮೃತ್ಯುರಾಜನಂ ॥ ೮

ವ॥ ಅಂತು ನೋಡೆ ನೋಡೆ ಶರತ್ಸಮಯಸಮುದಿತಜಳಧರರೂಪದಿಂದ ದೃಶ್ಯರೂಪನಾಗಿ ಜಂಬೂದ್ವೀಪದ ಮೇರುವಿನ ಮೂಡಣ ವಿದೇಹದ ಸೀತಾನದಿಯ ಬಡಗಣ ತಡಿಯೊಳಶೇಷಜನಪದಜನಾನುರಾಗಜನನಸಮಸ್ತ

1ಕ.—ಭೂತಕಲೆ. 2ಕ.—ಕೇಳ್.

ಸಸ್ಯಸಂಪತ್ಪ್ರದಪುಷ್ಕಳಾವತೀವಿಷಯದೊಳನೇಕಜಳಚರಕುಳಕಳರವಪ
ರಸ್ಪರೋಚ್ಛಾಲಿತವೀಚೀಚಯಜಳಧಿನಿಭ[1] ವಿಭವಪರಿಖಾಪರಿವೃತಮುಂ
ಉದಗ್ರಚಂಚತ್ಕಾಂಚನಮಯವಿಶಾಲಭಿತ್ತಿಪರೀತಮುಂ ಅಂತರ್ಗತಧವಳ
ವಿಪುಳಪ್ರಾಸಾದನಿರಂತರನಿರುದ್ಧಭೂಮಿಭಾಗಮುಂ ಉಪವನಲತಾಕುಸು
ಮಪರಿಮಳಸಮೀರಣಾಂದೋಳಿತಪ್ರಾಸಾದಪತಾಕಾವರುದ್ಧಾಂಬರಮುಂ
ನೀಲೋತ್ಪಲವನಷಂಡಸಂಛನ್ನಮುಮಪ್ಪುದು.

ಉತ್ಪಳಖೇಟಮೆಂಬುದು ಪೊೞಲ್ ನಯದಿಂದದನಾಳ್ವದಗ್ರಭೂ
ಭೃತ್ಪತಿ ವಜ್ರಬಾಹುನೃಪನಾನೃಪನಗ್ಗದುದಗ್ರಕಾಂತೆ ನೀ ।
ಲೋತ್ಪಲಲೋಲಲೋಚನೆ ವಸುಂಧರೆಯಂತವರ್ಗಗ್ರಸೂನು ಸಂ
ಪತ್ಪತಿ ವಜ್ರಜಂಘನೆನೆ ತಲ್ಲಲಿತಾಂಗನೆ ಬಂದು ಪುಟ್ಟಿದಂ ॥ ೯

ವ॥ ಆರಾಜಕುಮಾರನನೇಕಕಲಾಕಲಾಪಪ್ರವೀಣನಾಗಿ ಯುವರಾಜಲಕ್ಷ್ಮಿಯೊಡನೆ ವಿಸ್ತಾರಮುಂ ಕೈಕೊಂಡ ವಕ್ಷಸ್ಸ್ಥಳಮುಂ ಬಂಧುಜನಮನೋರಥಂಗಳೊಡನೆ ಪೊದಪ್ಪೈವಡೆದ ವೃತ್ತೋರುಸ್ತಂಭಂಗಳುಂ ಪೊಡರ್ವಪಗೆವರೊಡನೆ ಕರಮಸಿದಾದ ಮಧ್ಯಪ್ರದೇಶಮುಂ ಪಗೆವರ ಪೆಂಡಿರ ಸುಯ್ಯೊಡನೆ ನಿಡಿಯವಾದ ತೋಳ್ಗಳುಂ ಯಶಃಪ್ರಸರದೊಡನೆ ನೀಳ್ಪುಂ ಬೆಳ್ಪುಮನೊಳಕೊಂಡು ಕಿಸುಸೆರೆವರಿದ ಕಣ್ಗಳುಂ ಆಜ್ಞೆಯೊಡನೆ ಕುಲಶಿಖರಿಶಿಖರೋತ್ತುಂಗಂಗಳಾದ ಭುಜಶಿಖರಂಗಳುಂ ಸರದೊಡನೆ ಗಂಭೀರಮಾದ ದಕ್ಷಿಣಾವರ್ತನಾಭಿಯುಂ ಅಧರಪಲ್ಲವದೊಡನೆ ಅಶೋಕಪಲ್ಲವಾನುರಕ್ತಂಗಳಾದ ಪಾಣಿಪಾದತಳಂಗಳುಂ ಲಲಾಟಪಟ್ಟದೊಡನೆ ಲಲಿತೋನ್ನತಂಗಳಾದ ಪೊಱಅಡಿಗಳುಂ ಉಗುರ್ಗಳೊಡನೆ ದೀಪ್ತಿಯೊಳ್ ಪುದಿದು ಮಧುರವರ್ಣಮಾದ ದಂತಪಙ್ಕ್ತಿಗಳುಂ ಆತ್ಮೀಯಯೌವನಪ್ರಾದುರ್ಭಾವಮಂ ಪ್ರಕಟಂಮಾಡೆ.

ಅದಿವಿಜೇಂದ್ರಲೋಕದಿರವುಂ ಪೆಸರುಂ ತನಗಿಲ್ಲಿ ಬಂದು ಬೇ
ಱಾದುದೆ ಭೇದಮಂಗರುಚಿ ರೂಪಿನ ಪೊಂಪುೞಿ ಗಾಡಿಯೇಪ್ಪೆ ಮೇ ।
ಲಾದ ವಿಳಾಸದೊಡ್ಡವಿಸಿತುಂ ದಿವದಿಂ ದೊಡವಂದುವೆಂಬನಿ
ತ್ತಾದುದು ರೂಪು ಜವ್ವನಮನೊತ್ತರಿಸುತ್ತಿರೆ ವಜ್ರಜಂಘನಾ ॥ ೧೦

1ಕ.—ಜಳಚರಕಮಳಹಂಸವನಜಳಧಿನಿಭ.

ಎನಿತೆನಿತೀಕ್ಷೆಗೆ ಯೌವನವುನಂಗವಿಕಾರವಿನೋದಿಯುಕ್ಕುವುಂ
ತನಿತನಿತೀವುಹೀತಳದ ಭಾರವುನೊಲ್ಲದೆ ತತ್ಸ್ವಯಂಪ್ರಭಾ ।
ನನಸಕಳೇಂದುಬಿಂಬರಮಣೀಯಮುನಕ್ಷಯಕಲ್ಪವೃಕ್ಷನಂ
ದನವನರಮ್ಯವುಂ ನೆನೆದು ದೂಱಿಸಿದಂ ಸುರಲೋಕಸೌಖ್ಯಮಂ ॥ ೧೧

ವ॥ ಅಂತು ಗಗನತಳಕುಸುಮುಮನೆ ಬಯಸಿ ಮರುಳ್ಗೊಂಡ ಮರುಳಂತೆ ದೇವಲೋಕದೊಳನಿತಾನುಂ ಕಾಲಮನುಭವಿಸಿದನುಭವಕ್ಕೆ ಮೊದಲಿಗೆಯೆನಿಸಿದಾ ಸ್ವಯಂಪ್ರಭೆಯುಂ ನೆನೆನೆನೆದು[1],

ಕುಡುವಿಂಚಂ ಮಸೆದನ್ನರಪ್ಪ ಪಲರೊಳ್ವೆಂಡಿರ್ ಮನಂಗೊಂಡು ಬಂ
ದೊಡಮಾರಾಜಕುಮಾರನೊಲ್ಲನೆ ದಳನ್ಮಂದಾರಿಕಾ[2] ಮಾಲೆಯೊಳ್ ।
ಕಡುಗಂಪಂ ಸವಿದೊಂದು ತುಂಬಿ ಪಸಿವಿಂ ಮೆಳ್ಪಟ್ಟು ಬಂಡುಣ್ಣದಿ
ರ್ಪೊಡಮಿರ್ಕುಂಬಟೆಕೆಂತುಮನ್ಯಕುಸುಮಾಮೋದಕ್ಕೆಮೆಯ್ದುರ್ಕುವೋ॥

ವ॥ ಅನ್ನೆಗಮೀಶಾನಕಲ್ಪದೊಳಾಶ್ರೀಪ್ರಭವಿಮಾನದೊಳ್,

ಅಲಕಂ ಮಂದಾರಶೂನ್ಯಂ ಕದಪು ಮಕರಿಕಾಪತ್ರಶೂನ್ಯಂ ಲಲಾಟಂ
ತಿಲಕಾಳಂಕಾರಶೂನ್ಯಂ ಘನಕುಚಯುಗಳಂ ಹಾರಶೂನ್ಯಂ ನಿತಂಬಂ ।
ಕಲಕಾಂಚೀದಾಮಶೂನ್ಯಂ ಚರಣಯುಗಳಮುಂ ನೂಪುರಾಳಾಪಶೂನ್ಯಂ
ಲಲಿತಾಂಗಂ ಪೋದೊಡಾಯ್ತಾಕೆಗೆ ದಿವಮನಿತುಂ ನಿರ್ಜರಾರಣ್ಯಶೂನ್ಯಂ ॥ ೧೩

ವ॥ ಅಂತಾಸ್ವಯಂಪ್ರಭಾಮಹಾದೇವಿ ನಿಜಪ್ರಾಣವಲ್ಲಭವಿಯೋಗವಿಧುರೆಯಾಗಿ,

ಮುಱಿದೆಪೆದುಯ್ಯೊ ನಿನ್ನನಿರದಂತಕನಾಂ ನಡೆ ನೋಡೆ ನೋಡೆ ನೀಂ
ಕರಗಿದೆಯೆಂತುಮೆನ್ನ ಸುಶರೀರದೊಳಿರ್ದುದು ಜೀವಮಿಾಯೊಡಲ್ ।
ಕರಗಿದುದಿಲ್ಲದೆನ್ನ ಬಸಮಲ್ತೊಡಲಿಂದೆಮ ಶೋಕದೊಳ್ ಮನಂ
ಕರಗಿದುದೆಯ್ದೆ ವಾರದಿರೆಯಿರ್ದಡೆಯಿಂ ಲಲಿತಾಂಗವಲ್ಲಭಾ ॥ ೧೪

ಮದನನ ಕೈದುವೆಲ್ಲಿದನನಂಗನ ಕೈಪೊಡೆಯೆಲ್ಲಿದಂ ವಿಳಾ
ಸದ ಕಣಿಯೆಲ್ಲಿದಂ ಚದುರ ಪುಟ್ಟಿದನೆಲ್ಲಿದನೆಲ್ಲಿದಂ ವಿನೋ ।
ದದ ಮೊದಲೆಲ್ಲಿದಂ ಸೊಬಗಿನಾಗರವೆಲ್ಲಿದನಿಚ್ಛೆಯಾಣ್ಮನೆ
ಲ್ಲಿದನೆರ್ದೆಯಾಣ್ಮನೆನ್ನರಸನೆಲ್ಲಿದನೋ ಲಲಿತಾಂಗವಲ್ಲಭಂ । ೧೫

---

[1] ಖ.—ನೆನೆದೂ. [2] ಕ.—ಲಸನ್ಮಂದಾರಿಕಾ.

ವ॥ ಪಿಂದು ನಿಜಪ್ರಾಣವಲ್ಲಭವಿಯೋಗಶೋಕೋದ್ರೇಕವ್ಯಾಕುಳೆಯಾಗಿರ್ದ ತತ್ಸ್ವಯಂಪ್ರಭಾದೇವಿಯ ಸಮೀಪಕ್ಕೆ ಮಹತ್ತರದೇವಿಯರ್ ಬಂದು,

ಮುಂ ಪಿಂತೆಂಬುದಿದಲ್ತೆ ನಿ
ಳಿಂಪಯುಗಕ್ಕೆಲ್ಲಮಿಂತು ಬಾಯೞಿವುದೆ ಚೀಃ !
ಗಾಂಪು ಬಗೆಗೊಂಡು ಜಿನಪತಿ
ಯಂ ಪೂಜಿಸು ಪಡೆವೆಯಿನಿಯನಂ ಮಱುಭವದೊಳ್ ॥ ೧೬

ವ॥ ಎಂಬುದುಮದನೆ ಮನದೆಗೊಂಡು,

ಅನ್ನೆಗಮಾಸ್ವಯಂಪ್ರಭೆಯುಮಾಲಲಿತಾಂಗವಿಯೋಗದಿಂ ಸಮಾ
ಸನ್ನನಿಜಾಯುವಂತೆ[1] ಗುರುಪಂಚಕಮಂ ನೆನೆಯುತ್ತೆ ಭೋಂಕೆನೆ ।
ತ್ಸನ್ನಶರೀರೆಯಾಗಿ ದಿವದಿಂದಿೞಿದಳ್ ಗಡಮಪ್ಪುದಂತು ಜೆಂ
ಜೆನ್ನನೆ ಬಾರದಂದು ಲಲಿತಾಂಗಿಯ ನಲ್ಮೆಗೆ ಬನ್ನಮಾಗದೇ ॥ ೧೭

ವ॥ ಅಂತು ನಿಶಾಂತತಾರಕಾಕಾರದಿಂದದೃಶ್ಯರೂಪಿಯಾಗಿ ಜಂಬೂದ್ವೀಪದ ಪೂರ್ವವಿದೇಹದ ಪುಂಡರೀಕಿಣಿಯೆಂಬ ಪೊೞಲನಾಳ್ವ ವಜ್ರದಂತಭೂಪತಿಗಮಾತನ ಮನೋರಥಜನ್ಮಭೂಮಿಯೆನಿಸಿದ ಲಕ್ಷ್ಮೀಮತಿಮಹಾದೇವಿಗಂ,

ಕಾಮನ ಮಂತ್ರದೇವತೆಯೊ ಕಾಮನ ವಿದ್ಯೆಯೊ ಬದ್ಧರಂ ಗೆಲಲ್
ಕಾಮನ ನಿಚ್ಚಮರ್ಚಿಸುವ ಕೈದುವೊ ಕಾಮನ ಮೋಹಪಾಶಮೋ ।
ಕಾಮನ ಕಾಣ್ಬ 'ಕೈಪಿಡಿಯೊ ವಿಸ್ಮಯಮಾದಪುದೆಂಬಿನಂ ಮಗಳ್
ಶ್ರೀಮತಿಯೆಂಬಳಾಗಿ ನವಯೌವನಲಕ್ಷ್ಮಿಯನೆಯ್ದೆ ತಾಳ್ದಿದಳ್ ॥ ೧೮

ಅಲರ್ದ ಪದಕ್ಕೆ ಬಂದಲೆವ ತಂಬೆಲರಿಲ್ಲದೆ ಮಾಣ್ದ ಮಲ್ಲಿಕೋ
ಜ್ಜ್ವಲಮುಕುಳಕ್ಕಮಾದ ಪೊಸಗಂಪನುಗುೞ್ತಿರಲಿರ್ದ ರಾಗದಿಂ ।
ನಲಿವ ಮದಾಳಿಯಿಲ್ಲದಿನಿಸಂ ತಡೆದಂತರಿಸಿರ್ದ ಪದ್ಮಕು
ಟ್ಮಲವಿಭವಕ್ಕಮೋಂ ದೊರೆಗೆ ವಂದುದೊ ಯೌವನದೇೞ್ಗೆ ಕನ್ನೆಯಾ ॥ ೧೯

---

[1] ಕ.—ರಂತ್ಯೆ.

ಈಪರಿಜೀತನುಚ್ಛವಿಯನೀಪೊಸಜವ್ವನವೀಬೆಡಂಗನೀ
ರೂಪುಮನೀವಿಳಾಸಮುಮನೇನೊಳಕೊಳ್ಗುವೊ ತಪ್ಪದೀಕಳಾ ।
ಳಾಪೆ ಸುರೇಂದ್ರಕಾಂತೆಯೆನುತುಂ ನಡೆ ನೋೞ್ಪವರ್ಗಕ್ಷಿಪಕ್ಷ್ಮವಿ
ಕ್ಷೇಪಣಮೊಂದೆ ಮಾಡುವುದವಳ್ ಮನುಜಾಂಗನೆಯೆಂಬ ಭೇದಮಂ ॥ ೨೦

ಪಂಡಿತೆಯೆಂಬ ನೆಗೞ್ತೆಯ
ಕೊಂಡಾಟದ ದಾದಿ ತನ್ನನೋದಿಸುತಿರೆ ಕ ।
ಯ್ಕೊಂಡ ಕಳಾಪರಿಣತೆಯೊಳ್
ಪಂಡಿತೆಯಿಂದಾಕೆ ಪರಮಪಂಡಿತೆಯಾದಳ್ ॥ ೨೧

ವ॥ ಒಂದು ದಿವಸಮಾಕನ್ನೆ ತನ್ನ ಚೆಂಬೊನ್ನ ಕನ್ನೆವಾಡದೋವರಿಯೊಳಗೆ ಗಂಗಾತರಙ್ಗಧವಳದುಕೂಲಪ್ರಚ್ಛದಾಚ್ಛಾದಿತಮೃದುತಳ್ಪತಳದೊಳ್ ಪವಡಿಸಿರೆ ನಿಶಾವಸಾನಸಮಯದೊಳ್ ತತ್ಪುರಬಹಿರ್ಭಾಗಸ್ಥಿತಮನೋಹರೋದ್ಯಾನಾಸೀನಯಶೋಧರಗುರುಗಳ ಕೇವಳಜ್ಞಾನೋತ್ಪತ್ತಿಯೊಸಗೆಗೆ,

ನೆರೆದ ಸಮಸ್ತದೇವನಿಕುರುಂಬದ ಯಾನವಿಮಾನಕಿಂಕಿಣೀ
ವಿರುತಿಯ ದುಂದುಭಿಧ್ವನಿಯ ಮಂಗಳಗೇಯದ ನಾದಮಂ ತರಂ ।
ತರದೊಳೆ ಪೊತ್ತು ಪೂಮಳೆಯ ಕಂಪನಿತಿಂಪು ಪೊದೞ್ದು ಬಂದು ಬಂ
ಧುರಹಿಮಮಂದಗಂಧವಹಮೆೞ್ಚಱಿಸಿತ್ತಮೃತಾಂಶುವಕ್ತ್ರೆಯಂ ॥ ೨೨

ವ॥ ಅಂತು ನವಜಳದ ನಿನದಮಂ ಕೇಳ್ದ ಹಂಸವನಿತೆಯಂತಾವನಿತೆ ಶಂಕೆವೆರಸು ಬೆರ್ಚ್ಚಿ ಭೋಂಕನೆೞ್ಚೆತ್ತು ಸೌಧೋಪರಿಮತಳದೊಳ್ ನಿಂದು ದೇವಾಗಮನಮಂ ನೋಡಲೊಡಂ ಪೂರ್ವಭವಸ್ಮರಣಮಾಗಿ ದೇವಲೋಕದ ಲಲಿತಾಂಗದೇವನಂ ನೆನೆದು,

ಹಾ ಲಲಿತಾಂಗ ದೇವವನಿತಾವದನಾಂಬುಜಭೃಂಗ ನಿನ್ನ ಲೀ
ಲಾಲಸದೃಷ್ಟಿಪಾತಮೆರ್ದೆಯೊಳ್ ನೆಲಸಿರ್ದುವು ನಿನ್ನ ಮಾತುಗಳ್ ।
ಕೀಲಿಸಿದಂತೆವೊಲ್ ಮನದೊಳಿರ್ದುವು ನಿನ್ನನೆ ಕಾಣಲಾಗದೆಂ
ದಾಲಲಿತಾಂಗಿ ಬೆರ್ಚ್ಚನುಸಿರ್ದಚ್ಚರಿವೆತ್ತಿರೆ ಮೂರ್ಛೆವೋಪುದುಂ ॥ ೨೩

ವ|| ಚಾಮರದಡಪದ ಡವಕೆಯ ಕನ್ನಡಿಯ ಪರಿಚಾರಿಕೆಯರುಮೊಡನಾಡಿ ಬಳೆದ ಮೇಳದ ಕೆಳದಿಯರುಮತಿವಿಕಳಮತಿಗಳಾಗಿ ಪರಿತಂದು ಮಲಯಜರಸಲುಳಿತಕದಳೀದಳವ್ಯಜನಮಂದಮಾರುತಾಂದೋಳನದಿನೆಂತಾನುಂ ಮೂರ್ಛೆಯಿಂದೆೞ್ಚಱಿಸಿ ಬೆಸಗೊಳೆ ಮಱುಮಾತುಗುಡದೆಯುಂ ಮನಂಗುಡದೆಯುಮಿರೆ ನಡುಗಿ ಪರಿದು ಕನ್ಯಾಂತಃಪುರಮಹತ್ತರದೇವಿಯರ್ ಬಂದು ವಜ್ರದಂತಂಗಂ ಲಕ್ಷ್ಮೀಮತಿಮಹಾದೇವಿಗಮಱಿಪಿದೊಡವರಿರ್ವರುಂ ಸಸಂಭ್ರಮಂ ಬೆರಸು ಬಂದು,

ಇನಿತೇಕಾದುದೊ ನೋವಿದೆಮ್ಮ ದೆಸೆಯಿಂ ಮೇಣಾದುದೋ ಮೇಣ್ಸಖೀ
ಜನದಿಂ ಬಂದುದೊ ನಿನ್ನ ಬಂಧುಜನದಿಂ ಮೇಣ್ ಪುಟ್ಟಿತೋ ಮತ್ಸುಹೃ |
ಜ್ಜನದಿಂ ಮೇಣ್ ತೊಡರ್ದತ್ತೊ ವಿಸ್ಮಯಮಿದೇಂ ಪೇಪೆಂಬುದುಂಕೂಡೆ ಕ
ಣ್ಬನಿಯಂ ಸೂಸಿದಳೊಂದುಮಂ ನುಡಿದಳಲ್ಲಾ ಕನ್ನೆ ತನ್ನಂದಮಂ || ೭೪

ವ|| ಅಂತದಂ ಕಂಡು[1] ಮತ್ತಂ.

ಇದಿರೇೞಲ್ ಪೊಡೆವಟ್ಟು ಬಂದಿದಿಗೊರ್ಳೞಲ್ ಬಾಯ್ವಾಯೊಳಾದಕ್ಕಱೊಂ
ದೊದವಿಂ ತಂಬುಲಮಂ ಕೊಳಲ್ ಮಱೆದು ನೀನಿರ್ದಂದಮೇಂ ಕಂದಿ ಕುಂ|
ದಿದುದೇಕೀಲಲಿತಾಂಗವಿಾಮೊಗವಿದಿಂತೇತರ್ಕೆ ಬಾಡಿರ್ದುದಾ
ವುದು ನಿನ್ನುೞ್ಬೆಗಮೆಮ್ಮ ಬಾಟೆನಿತೆ ನೀನಿಂತಿರ್ದೊಡಾವಾಸೆಯೋ || ೭೫

ಎಂಬುದುಮಂಬುದಾಗಮದ ಕೋಗಿಲೆಯಂತಿರೆ ಮೂಗುವಟ್ಟು ನೀ
ಮೆಂಬುದನೆನ್ನಿಮೆಂದುಸಿರದಿರ್ದ ತನೂಜೆಯ ಭಾವಮಂ ಮಹೀ |
ಶಂ ಬಗೆದೀಗಳೀಕಿಱಿಯವಳ್ ನಮಗೊಂದುಮನಿಂತುಟೆನ್ನಳಿ
ನ್ನಿಂ ಬಗೆಗಲ್ವಮನ್ನೆವರಮುಮ್ಮಳಿಸುತ್ತಿರದಿರ್ ತಳೋದರೀ || ೭೬

ವ|| ಎಂದು ತನ್ನಗ್ರಮಹಿಷಿಯ ಮನಮನಾರೆ ನುಡಿದು ಪಂಡಿತೆಯಂ ನೀನೀಕೆಯುಮಂ ನಿನ್ನ ಬಲ್ಲ ಮಾಪ್ಕೆಯೊಳೆಲ್ಲಮೆಲ್ಲಂದದೊಳಮೊಡಂಬಡಿಸಿ ಮನಂಗಲ್ವುದೆಂದು ನಿಯೋಜಿಸಿ ಪೋದಂ. ಅನ್ನೆಗಮಾಮಹೀಪತಿಯ ಪೂರ್ವಜನ್ಮದ ಪುಣ್ಯೋದಯದಿಂ,

---

[1] ಕ.—ಅದಂಕಂಡು.

ಗುರುಗೆ ಯಶೋಧರಮುನಿಪತಿ
ಗುರುಕೇವಲಬೋಧಮಾಯುಧಾಗಾರದೊಳಂ ।
ಖರಕರಸಮಪ್ರಭಂ ಚಕ
ಕ್ರರತ್ನಮೊಡವುಟ್ಟಿ ಪುಟ್ಟಿ ದೆರಡೊಸಗೆಯೊಳಂ ॥ ೭೩

ಆವುದು ಮುಖ್ಯಂ ವಿಪುಳಫ
ಳಾವಹಮೆಂಬೆರಡುಮಂ ವಿಚಾರಿಸುವ ನೃಪಂ ।
ಗಾವುದು ಪುಣ್ಯ[1]ದ ಬಂಧಮ
ನಾವರಿಸುವ ಜಿನಸಪರ್ಯೆ ತೊಡರ್ದುದು ಬಗೆಯೊಳ್[2] ॥ ೭೮

ತೊಡರೆ ನೃಪನಾಪ್ತಪರಿಜನ
ಮೊಡವರೆ ಜಿನಪತಿಗೆ ಪೂಜೆಯಂ ಮಾಡಿ ಮಗು ।
ೞ್ದಿಡಿಗೆಱಗಲೊಡಂ ಪಡೆದಂ
ಗಡಮವಧಿಯನಧಿಕಭಕ್ತರೇನಂ ಪಡೆಯರ್ ॥ ೭೯

ವ॥ ಅಂತು ವಜ್ರದಂತಚಕ್ರವರ್ತಿ ಲಬ್ಧಾವಧಿಲೋಚನಂ ತ್ರೈಲೋಕ್ಯಲೋಚನಂಗೆ ಸಾಷ್ಟಾಂಗಪ್ರಣತನಾಗಿ ಮಗುೞ್ದು ಬಂದು ಚಕ್ರಪೂಜೆಯಂ ನಿರ್ವರ್ತಿಸಿ ಪರಾಕ್ರಮಾಕ್ರಾಂತಾರಾತಿಚಕ್ರನುಂ ಸಾಧಿತದಿಕ್ಚಕ್ರನುಮಾಗಲ್ಬಗೆದು ಗಜತುರಗರಥಪದಾತಿದಿವಿಜವಿದ್ಯಾಧರಬಲಂಬೆರಸು ದಿಗ್ಜಯೋದ್ಯೋಗದಿಂ ಪೋದಂ.[3] ಅನ್ನೆಗಮಿತ್ತ ಪಂಡಿತೆಯುಮತಿಶೋಕಾಕ್ರಾಂತಮತಿಯಂ ಶ್ರೀಮತಿಯನೊರ್ಬಳನೆ ಕನ್ನೆಮಾಡದ ಪೆಱಗಣ ನಂದನವನಕ್ಕುಯ್ದದಱೊಳಗೆ,

॥ ಶಾರ್ದೂ ॥

ತೋಳ ನೀಳದ ಕೆಂದಳಿರಿಂದಂ ಸಂದಣಿಸಿರ್ದ ಮದಾಳಿಯಿಂ
ದೋಳದಿಂ ಮಳಯಾನಿಳಲೀಲಾಂದೋಳದಿನೊಪ್ಪೆ ಮನೋಭವಂ ।
ಗಾಳಮಿರ್ಪ[4]ವೊಲಿರ್ದತಿರಕ್ತಾಶೋಕದ ಸುತ್ತಿನೊಳಿರ್ದ ರೂ
ಕ್ಷಾಳಕಂಗಳನೋಸರಿಸುತ್ತುಂ ಮೆಲ್ಲನೆ ಮೇಳಿಸಿ ಕನ್ನೆಯಂ ॥ ೩೦

---

[1]ಕ.—ಗಾವಗಳಪುಣ್ಯ; ಗ.—ಗಾವಗದುಪುಣ್ಯ. [2]ಕ.—ಮನದೊಳ್.
[3]ಖ.—ದಿಗ್ವಿಜಯಕ್ಕೆ ಪೋದಂ. [4]ಕ.—ಗೊಳಮಿರ್ಪ.

ನುಡಿದಳ್ ನೀನೆನೆನಗಿಂತು ನಿನ್ನ ಬಗೆಯಂ ಕಾದಕ್ಕ ಪೇೞಾರೊಳಂ
ನುಡಿವೋ ಬೇಸಱನೆಯ್ದೆ ಕೂರ್ಪವರನೇನೆನ್ನಿಂದಮಿನ್ನಗ್ಗಳಂ ।
ಪಡೆವೋ ಮೌನದೊಳಿಂತು ನೀನಿರೆ ರುವದ್ಭಿಲಿಂಗಾಳಿಯಿಂ ಪತ್ತುವಿ
ಟ್ಟುಡುಗಿರ್ದಬ್ಜಮನೆಯ್ದೆ ಪೋಲ್ದುದು ಭವದ್ವಕ್ತ್ರಾಬ್ಜಮಬ್ಜಾನನೇ ॥ ೩೧

॥ ಪೃಥ್ವಿ ॥

ನವೋತ್ಪಳದಳೇಕ್ಷಣೇ ಮನದೊಳಾದ ನಿರ್ವೇಗವೊಂ
ದವಶ್ಯಮದು ಕೂರ್ಪರೊಳ್ ನುಡಿದೊಡಲ್ಲದೇಂ ಪೋಕುಮೇ ।
ನಿವೇದಿಸು ನಿಜಾಂತರಂಗಗತಮುಪ್ಪುದಂ ನೀನಿದಂ
ವಿವೇಕವಿಕಳರ್ಕಳಂತೆಲೆಗೆ ಚಿತ್ತದೊಳ್ ತಾಳ್ದುವೋ ॥ ೩೦

ವ॥ ಎಂಬುದಂ ಸ್ವಭಾವಮುಗ್ಧೆ ಮುಗ್ಧವದನವನಜಮನೆಱಗಿ ತನ್ನ ಮುನ್ನಿನ ಜನ್ಮಂಗಳನಿಂತೆಂದು ಬರೆದು ತೋರ್ಪಂತೆ ನೆಲನಂ ಬರೆಯುತ್ತು ಮುಪಗತನುಭವಮುದ್ರೆಯಾಗಿ,

॥ ಉಜ್ವಳ ॥

ಬಗೆಯು ಬಯ್ಕೆಯುನೊಪ್ಪಿಸುವಾಗಳ್ ನೀನೆ ವಲಂ ದೊರೆ ಪೇೞ್ದಪೆಂ
ಬಗೆದು ಕೇಳ್ ನಡೆ ನೋಡಲೊಡಂ ದೇವಾಗಮುಮಂ ಪಿರಿದೊಂದು ದಂ ।
ದುಗದ ಸಂದಣಿಯಿಂದಮೆ[1]ಮತ್ಪ್ರಾಗ್ಜನ್ಮಕಥಾವಳಿಯೆಲ್ಲಮಂ
ಬಗೆದು ನೋಪೆನೆನಗಾದುದು ನೋವಂತುಂತೆನಗಾವುದು ಬೇವಸಂ ॥ ೩೩

ವ॥ ಅದೆಂತೆಂದೊಡೆ ಆನೀಭವಕ್ಕೆ ಮೂಱನೆಯ ಭವದೊಳ್ ಈಧಾತಕೀಷಂಡದ ಮೂಡಣ ಮಂದರದ ಪರವಿದೇಹದ ಸೀತಾನದಿಯ ಬಡಗಣ ತಡಿಯ ಗಂಧಿಳವಿಷಯದ ಪಾಟಳಗ್ರಾಮದೊಳ್ ನಾಗದತ್ತನೆಂಬ ಪರದಂಗಮಾತನಪರದಿತಿ ವಸುದತ್ತೆಗಂ ಪುಟ್ಟಿದ ನಂದ, ನಂದಿಮಿತ್ರ, ನಂದಿಷೇಣ, ವರಷೇಣ, ಜಯಸೇನರೆಂಬರಯ್ವರ್ ತನಯರಿಂದಂ ಮದನಕಾಂತೆಯುಂ, ಶ್ರೀಕಾಂತೆಯುಮೆಂಬಿರ್ವರ್ ತನೂಜೆಯರಿಂದಂ ಆಕಡೆಯಗರ್ಭದೊಳ್ ನೆಲಸಲೊಡಂ ಅಸ್ಮದನ್ಯಜನ್ಮೋಪಾರ್ಜಿತದಾರುಣಕರ್ಮಪ್ರೇರಣೆಯಿಂದಂ,

[1] ಕ.—ಸಂದೆಯುದಿಂದಮೆ, ಗ.—ಸಂದೆಗದಿಂದಮೆ.

ಇಡಿದಡರೆ ಕಾಯ್ತ ಚೂತವ
ನಡಸಿ ಸಿಡಿಲ್ ಪೊಯ್ದುದೆನಿಸೆ ನೆವನೆವದಿಂದೆ ।
ನ್ನೊಡವುಟ್ಟಿದರುಂ ತಂದೆಯು
ಮಡಗಿರ್ದರ್ ಖಳಕೃತಾಂತದಂತಾಂತರದೊಳ್ ॥ ೩೪

ವ॥ ಅಂತು ಮದೀಯಜನನಿಯುಂ ಜನನಿಯ ಜನನಿಯುಮಱೆಯಲು ಮುಱೆದರುಮೆಲ್ಲಮೊರ್ವರುಱೆಯದಂತೆ ಪೋಪ್ಪುದುಮರಸರ ದೆಸೆಯಿಂ ಮನೆಯುಂ ಕವರ್ತೆವೋಪುದುಂ ಪೆಱರ ಕೀಱೆಲೊಳೆಮ್ಮಬ್ಬೆಯುಂ ಮು ತ್ತಬ್ಬೆಯುಂ ಸಾರ್ದು ಬದಗುಗೆಯ್ದುಣೆ ನವಮಾಸಂ ನೆಱೆದಾಂ ಪುಟ್ಟು ವುದುಂ ಎನ್ನ ಮೆಯ್ಯ ದುರ್ಗಂಧಕ್ಕೆ ಪೇಸಿ ಕಂಡವರೆಲ್ಲಮೆಪೆದು ಕಳೆಯೆ ಪರೇತವನಭೂಮಿಯೊಳ್ ಜೀರ್ಣಶೀರ್ಣಚೀರಂಗಳಿಂದಂ ಪುದಿದಿರಿಸಿ ಪೋ ಗಿ ತಾವಿರ್ಬರುಂ ತಿರಿದು ತಂದಿಕ್ಕಿದೆಂಜಲೆವ್ರುಱುವಂ ತಿಂದು ಪೆಸರುಮಿಲ್ಲದೆ ನಿರ್ನಾಮಿಕೆಯೆಂದು ಪೆಸರಾಗಿ ಬಳೆಯೆ,

ಅವರುಮನಂತಕನೊಯ್ಯನೆ
ಸವಿನೋೞ್ಪುದುಮಾನುಮೆನ್ನ ಪಾಪದ ಫಲಮಂ ।
ಸವಿನೋಡೆ ಪೊಕ್ಕೆನೊಡೆನೊಗೆ
ದವಿಚಾರಣ[1]ಚರಿತಮೆಂಬಗಹನಾಂತರಮಂ ॥ ೩೫

ವ॥ ಅಂತು ಪೊಕ್ಕದರ್ಕೆ ತಿಳಕಮಿರ್ಪಂತಿರ್ದಂಬರತಿಳಕಮೆಂಬ ಗಿರಿ ವರದ ಮೇಗೆ,

ವಿಸ್ರಸ್ತಬಹಳದೋಷತ
ಮಿಸ್ರರನಖಿಳರ್ಧಿಗುಣವಿಭೂಷಣ[2]ರಂ ಪು ।
ಣ್ಯಾಸ್ರವಕಾರಣರಂ ಪಿಹಿ
ತಾಸ್ರವಮುನಿಪತಿಗಳಂ ಮನಂಬಿಡೆ ಕಂಡೇಂ ॥ ೩೬

ವ॥ ಕಂಡು ಪೊಡೆವಡುವನಿತುವರಮೆನ್ನ ಮನದೊಳಱಿವಿಲ್ಲದೆಯುಂ ಅಸವಸದೊಳಾದ ಮನದೆಱಕದಿನೆಱಗಿ ಪೊಡೆವಟ್ಟು,

---

[1]ಗ.—ನೊಡಲೊ, ದವಿರೆಚಾರಣ. [2]ಕ. ಗ.—ಮಣಿವಿಭೂಷಣ.

ಆವುದು ಕರ್ಮದೊಳಾಯ್ತೆ ನ
ಗೀವಿಧದಿಂ ದುಃಖಮಱಿಯೆ ಬೆಸಸುವುದೆನ್ನಂ ।
ಕಾವುದನಾಥೆಯನೆನೆ ಪರ
ಮಾವಧಿಯಿಂ ಭವಮನಱಿದು ಯತಿಪತಿ ನುಡಿದಂ ॥ ೩೭

ಈತೆರದಿಂದಂ ನಿನ್ನಂ
ಘಾತಿಸಿ ಬಿಡದಲೆದು ಪಿೞಿದು ಪಿಂಡಿದ ದುಃಖ ।
ವ್ರಾತಮಿದು ಮಗಳೆ ನಿನ್ನ ಪು
ರಾತನದುಷ್ಕರ್ಮವಿಟಪಿಕಟುಕಫಲಂಗಳ್ ॥ ೩೮

ವ॥ ಅದೆಂತೆಂದೊಡೀವಿಷಯದ ಪಳಾಳಕೂಟಗ್ರಾಮದೊಳ್ ದೇವಿಲ ನೆಂಬಗ್ರಾಮಕೂಟಂಗಮಾತನಕುಟುಂಬಿನಿವಸುಮತಿಗಂ ಧನಶ್ರೀಯೆಂಬ[1] ಮಗಳಾಗಿ ಪುಟ್ಟಿ ನೀಂ ಮತ್ತೊಂದುದಿವಸಮಾತ್ಮೀಯವಿಹಾರಭೂಮಿಸ ಮೀಪಸ್ಥಿತತ್ರಿಗುಪ್ತಿಗುಪ್ತಸಮಾಧಿಗುಪ್ತರೆಂಬ ಯತಿಪತಿಗಳಧ್ಯಯನಂ ನಿನ ಗನಿಷ್ಟಮಪ್ಪದಱಿನಧ್ಯಯನಾಂತರಾಯಮಂ ಮಾಡಲೆಂದವರೋದುವಾ ವಾಸದೊಳ್ ಸಂಕ್ಲೇಶಮಾಗೆ ಸಾರಮೇಯಪೂತಿಕಳೇವರಮನಿಕ್ಕಿದೊಡ ವರ್ ನಿನ್ನಪಾಪೋಪಚಯಕಾರಣದುರಾಚರಿತಮಂ[2] ನೋಡಿ,

ಮತಿಗೆಟ್ಟ ಮಗಳೆ ಸಂಸೃತಿ
ಲತೆಯೊಳ್ ತೊಡರಲ್ಕೆ ನೀನಿದಂ ನೆಗೞ್ದೆ[3] ದು ।
ರ್ಗತಿಹೇತು ಪೂಜ್ಯಪೂಜಾ
ವ್ಯತಿಕ್ರಮಂ ಕಿಱಿದುದುಃಖಮಂ ಮಾಡುಗುಮೇ ॥ ೩೯

ವ॥ ಎಂಬುದುಮಾನುಡಿಗೆ ನೀಂ ಬೆರ್ಚಿ ಬೇಗಮದನೆಪೆದು ಕಳೆದು, ಅಱಿಯದೆ ಗೆಯ್ದುದರ್ಕೆ ಮುನಿಪುಂಗವ ನೀಂ ಕ್ಷಮಿಯಿಪ್ಪುದೆಂದು ಕಾ ಲ್ಗೆಱಗಿದ ನಿನ್ನದೊಂದುಪಶಮಂ ಪಡೆದತ್ತು ಮನುಷ್ಯಜನ್ಮಮಂ ।
ಮಱುಗಿಸಿ ನಿನ್ನನೀಪದಕೆ ತಂದುದು ಮುನ್ನಿನ ಗೆಯ್ದ ದೋಷಮಿ
ನ್ನಱಿದು ಜಿನೇಂದ್ರಧರ್ಮಜಳದಿಂ ಕಳೆ ಕರ್ಚ್ಚಿ ಕಳಂಕಪಂಕಮಂ ॥ ೪೦

[1] ಖ.—ಶ್ರೀಮತಿಯೆಂಬ. [2] ಕ.—ದುರಾಚಾರಮಂ. [3] ಕ.—ಬಯಸಿದೆ.

ವ॥ ಎಂಬುದುಮಾಮುಮುಕ್ಷುಗಳ ಸಮಕ್ಷದೊಳವರ ಪೇೞ್ದ ಮಾಪ್ಕೆಯೊಳ್ ಪರಮಜಿನಪತಿಪರಿಭಾಷಿತಮಪ್ಪ ಸಕಳಶ್ರಾವಕವ್ರತಂಗಳಂ ಷೋಡಶತೀರ್ಥಕರಭಾವನೆಗಳಂ ಚತುಸ್ತ್ರಿಂಶದತಿಶಯಂಗಳುಮನಷ್ಟಮಹಾಪ್ರಾತಿಹಾರ್ಯಂಗಳುಮಂ ಪಂಚಮಹಾಕಲ್ಯಾಣಂಗಳುಮಂ ನಾಮೋದ್ವೇಶಂಗೆಯ್ದು ಪಾರಣೆಯ ದಿವಸಮಲ್ಲದಱುವತ್ತುಮೂಱುದಿವಸದಿಂದುಪವಾಸದಿಂ ಸಮೆಯೆ ಜಿನಗುಣಸಂಪತ್ತಿಯುಮನಿರ್ಪತ್ತೊಂದು ಮತಿಜ್ಞಾನಭೇದಮುಮಂ ಪನ್ನೊಂದಂಗಮುಮಂ ಎರಡು ಪರಿಕರ್ಮಮುಮಂ ಎಂಭತ್ತೆಂಟುಸೂತ್ರಂಗಳುಮಂ ಪ್ರಥಮಾನುಯೋಗಂಗಳುಮಂ ಪದಿನಾಲ್ಕುಪೂರ್ವಂಗಳುಮಂ ಅಯ್ದುಚೂಳಿಕೆಯುಮಂ ಆಱುದಧಿಯುಮಂ ಪೆಸಗೊಂಡು ಪಾರಣೆಯ ದಿವಸಮಲ್ಲದೆ ನೂಱಯ್ವತ್ತೆಂಟುದಿವಸದಿಂ ಸಮೆವನೋಂಪಿಯ ವಿಶ್ರುತಶ್ರುತಜ್ಞಾನಮುಮಂ ಯಥೋಚಿತವಿಧಿಯಿಂ ನೋಂತು ಮದೀಯಾಯುಷ್ಯಾವಸಾನದೊಳೀಶಾನಕಲ್ಪದೊಳ್ ಶ್ರೀಪ್ರಭವಿಮಾನದೊಳ್ ಲಲಿತಾಂಗದೇವಂಗೆ ವಲ್ಲಭೆಯೆಂ ಸ್ವಯಂಪ್ರಭೆಯೆನೆಂಬೆನಾಗಿ ಪೂರ್ವೋಪಕಾರಮಂ ನೆನೆದು ಬಗೆದು ಪಿಹಿತಾಸ್ರವಭಟ್ಟಾರಕರನಾನುಮಾತನುಂ ಬಂದಿಸಿ ನಾನಾವಿಧಾರ್ಚನೆಗಳಿಂದರ್ಚಿಸಿ ಪೂಜಿಸಿ ದಿವ್ಯವಿನೋದಂಗಳಂ ಮೆಱೆದು ಪೋಗಿ ಸುರಲೋಕಸುಖಂಗಳನೆನಿತಾನುಂ ಕಾಲಮನುಭವಿಸಿ ನಿಜಪೂರ್ವೋಪಾರ್ಜಿತಪುಣ್ಯಾವಸಾನದೊಳ್ ನಾಕಲೋಕಮದಾನೇಕಪಂ ನಟ್ಟು ನಿಂದು ಬೀಸಿದೊಡೆ ಬಿಸುಡುವುದುಂ ಮದೀಯಜೀವಿತೇಶನಾಥೋರಣಂ ಕೆಡೆವಂತೆ ಧರಾತಳಕ್ಕೆ ಕೆಡೆವುದುಮಾನುಮಾತನ ವಿಯೋಗದೊಳಱುದಿಂಗಳ್ವರಂ ಜಿನೇಂದ್ರಮಹಿಮೆಯುಂ ಮಾಡಿ ಬಂದಿಲ್ಲಿ ಪುಟ್ಟಿದೆನಿದುಮದೀಯವೃತ್ತಾಂತಂ ॥

ಲಳಿತಾಂಗಂ ದಿವದಿಂದಮಂದಿೞಿದು ಬಂದೀವಿಶ್ವವಿಶ್ವಂಭರಾ
ತಳದೊಳ್ ಭೂಚರಖೇಚರರ್ಕಳೊಳಗಿನ್ನೆಲ್ಲಿರ್ದೊಡಂ ಕೂಡದಾ ।
ಗಳಣಂ ಕೂಡದು ಬಾೞ್ವೆ ಮಾತೆನಗದರ್ಕಾರ್ಗೇನನೇನೆಂಬೆನೆಂ
ದೊಳಕೊಂಡಿರ್ಪುದಱಿಂದಮಾಡುದೆನಗೀವಾಚಂಯಮಂ ಸಂಯಮಂ ॥೪೧

ಸಹಜಾತಾಂಬರದಿವ್ಯಭೂಷಣದಳನ್ಮಂದಾರಮಾಳಾವಿಳಾ
ಸಿ ಹಟದ್ರತ್ನಕಿರೀಟಭಾಸಿ ನಯನಾಧಾರಲೋಕನೋದ್ಭಾಸಿ ಸ ।

ಸ್ಪೃಹಸಾನಂದಸಲೀಲಸಸ್ಮಿತಮುಖವ್ಯಾಭಾಸಿ ನೋಡಿಂತು ಸ
ನ್ನಿಹಿತಂ ಸೌಂದರರೂಪಮಿನ್ನುಮೆರ್ದೆಯೊಳ್ ಮಜ್ಜೀವಿತಾಧೀಶನಾ ‖ ೪೨

ಎರೆವ ಮರಲ್ವ ಲಲ್ಲಯಿಪ ಕಾಲ್ವಿಡಿವೆಂಬುದನಿಂಬುಕೆಯ್ವಳಂ
ಕರಣವಿಳಾಸಮಂ ಮೆಱೆವ ಮೇಳಿಸುವಂದಿನ ರ[illegible]ಪ್ರು ಶಾಸನಂ ।
ಬರೆದುದು ಬರ್ಚಿಸಿತ್ತಮರ್ದುದೞ್ದಳಂಕಿದುದು[1] ಬರ್ಚಿ ಪೊಕ್ಕು ಬೇ
ರ್ವರಿದುದು ಬೆಚ್ಚುೞ್ದಚ್ಚುೞಿದುದೆನ್ನೆರ್ದೆಯೊಳ್ಲಲಿತಾಂಗದೇವನಾ ‖ ೪೩

ವ॥ ಅದಱಿಂದಮೆನ್ನ ಬಯಸಿದ ಬಯಕೆಯುಪ್ಪುದು ವಂಧ್ಯಾಸ್ತನಂಧಯಸಮಾಗಮಸಮಾನಂ; ಮಾನಸರ ದೆಸೆಯೊಳ್ ತೀರ್ವುದಲ್ತದಂ ಮದೀಯಮಾನಸದೊಳ್ ತಾಳ್ದು ಸುರಲೋಕಸುಖಾನುಭವರತರಹಸ್ಯಂಗಳೊಳ್ನ್ನಾತನಱಿವತಿರಹಸ್ಯಂಗಳಪ್ಪ ಕೆಲಕೆಲವು ಅವಿನಾಣಂಗಳಂ ನಾಣ್ಚಿ ಬಂಚಿಸಿ[2] ಪಿರಿದುಮನುರಾಗದಿಂದಮೆನ್ನ ಬರೆದ ಪಟಮನಿದನರ್ಚಿಸಿ ಕನ್ಯಾಬ್ರತದೊಳ್ ಕಾಲಮಂ ಕಳಿಪುವೆನಿದಲ್ಲದಿಲ್ಲಿಗೆ ಪೆಱತೊಂದು ಪ್ರತೀಕಾರಮಿಲ್ಲೆಂದು ನುಡಿದು ಮಾಣ್ದ ಕನ್ನೆಯ ನುಡಿಯಂ ಪಂಡಿತೆ ಮನದೆಗೊಂಡು ,

ಉಸಿರ್ದಾರ್ ನೀಂ ನಿನ್ನ ನಿರ್ಬೇಗಮನಱಿದೆನಿದಂ ಶಕ್ತಿಯೊಳ್ ಮುಕ್ತಿಯಂ ಸಾ
ಧಿಸಲಕ್ಕುಂ ಮಂತ್ರಶಕ್ತಿಪ್ರಕಟನಪಟುಗಳ್ಗೇನಸಾಧ್ಯಂಗಳೋ ಪೇೞ್ ।
ಬೆಸನಂ ಪೊರ್ದಿಪ್ಪುದಾಂ ನಿನ್ನಿನಿಯನನಱಿಸಲ್ ಸಾರ್ವೆನೆಲ್ಲಂದದಿಂ ಚಿಂ
ತಿಸದಿರ್ ತಾ ತೋಱು ನಿನ್ನೀಬರೆದ ಪಟಮನುತ್ಫುಲ್ಲಪಂಕೇಜನೇತ್ರೇ[3]‖ ೪೪

ಪಟಮಿದೆ ಸಾಲ್ಗುಮನ್ಯಭವವಲ್ಲಭನಂ ಪಟವಿದ್ಯೆಯೆತ್ತಲುಂ
ಜಟಮುಟಕರ್ಕಳಂ[4] ತೊಡರೆ ಸುತ್ತಲುಮಪ್ಪುದಱಿಂ ಸಮಸ್ತಭೂ ।
ಪಟಲಮನಾಂ ತೊೞಲ್ದಱಸಿ ನಿನ್ನೊಡಗೂಡಿ ನಿಜೇಶನಂ ಯಶಃ
ಪಟಹನಿನಾದಮಂ ಪರಪುವೆಂ ದೆಸೆಯಂತುವರಂ ತಳೋದರೀ ‖ ೪೫

ವ॥ ಎಂದು ಮುನ್ನಮಾಪಟದೊಳಾಕೆ ಬರೆಯದೆ ಬಂಚಿಸಿದ ಅವಿನಾಣಂಗಳನಱಿಯೆ ಬೆಸಗೊಂಡು ಪಟಮಂ ಕೈಕೊಂಡು ಪಂಡಿತೆ ಪೋಗಿ

[1] ಗ.—ದಡಂಗಿದುದು. [2] ಕ.—ಚಿಂತಿಸಿ. [3] ಗ.—ವಕ್ತ್ರೇ.
[4] ಕ.—ಜಟಮತಿಯರ್ಕಳಂ; ಗ.—ಜಟಕುಟಕರ್ಕಳಂ.

ಮಂದಾರವಮುನೀಂದ್ರವೃಂದಾರಕವೃಂದಸಾಂದರವಮುವಮಾಸನಭವ್ಯವ್ರಾತ್ಯೇ ಮಚಕರಭೂಚರನಿಚಯನಿಚಿತವುಮಾಗಿ ಜಗತ್ಪ್ರಾತವೆನಿಸಿದ ಮಹಾಪೂತಜಿನಾಲಯಕ್ಕೆ ಬಂದು ಅನೇಕಧೂರ್ತಜನಮನಸ್ಸಮ್ಮೋಹನತಮಃಪಟಮಂ ವಿಚಿತ್ರಚಿತ್ರಪಟಮನಾಚೈತ್ಯಾಲಯದ ಕೆಲದ ಪಟ್ಟಸಾಲೆಯುಮಂತೆ ನೇಱಿ ನಿಜಾಭಿಲಷಿತಕಾರ್ಯಸಿದ್ಧಿಯನೆ ಪಾರುತ್ತಮಿರ್ದಳ್. ಅನ್ನೆಗಮಿತ್ತ ಷಟ್ಖಂಡಮಂಡಿತವಸುಧಾಮಂಡಳಮಂ ಬಾಯ್ಕೇಳಿಸಿ,

ಪಿರಿದುಂ ಪುಣ್ಯೋದಯಂ ತನ್ನುದಯಮನಱಿಪುತ್ತಿರ್ಪಿನಂ ಮರ್ತ್ಯವಿದ್ಯಾ
ಧರರಾಜವ್ಯಂತರಾಧೀಶ್ವರಕರಸರಸೀಜಂಗಳಂ ವಕ್ತ್ರಚಂದ್ರ ।
ಸ್ಫುರಿತೋದ್ಯತ್ಕಾಂತಿ ನಿಚ್ಚಂ ಮುಗಿಯಿಸೆ ಜಿತದಿಙ್ಮಂಡಲಂ ಬಂದು ಪೊಕ್ಕಂ
ಪುರಮಂ ಶ್ರೀವಜ್ರದಂತಂ ಮಗಳ ಮದುವೆಯಂ ಮಾಡಲುದ್ಯುಕ್ತಚಿತ್ತಂ॥

ವ॥ ಅಂತು ನಿಜಾನ್ವಯರಾಜಧಾನಿಯಂ ಪೊಕ್ಕು ಮೂವತೆಣ್ಛಾಸಿರ[1]ಮಕುಟಬದ್ಧರಿಂ ಮೂರ್ಧಾಭಿಷಿಕ್ತನಾಗಿ ಸಕಳಚಕ್ರವರ್ತಿಪದದೊಳ್ ನಿಂದು ಸಿಂಹಾಸನಾರೂಢ[2]ನಾರೂಢಯೌವನೆಯುಮಂತರ್ನಿಗೂಢಶೋಕೋದ್ರೇಕಮೂಕೆಯುಮಾಗಿರ್ದ ನಿಜತನೂಜೆಗೆ ಬೞಿಯನಟ್ಟಿದಾಗಳ್,

ವನಿತಾರೂಪದ ಕಾಮಕಲ್ಪಲತೆಯೋ ಮೇಣಂಗನಾರೂಪದ
ಬ್ಜಿನಿಯೋ ಮೇಣ್ ಲಲನಾಸ್ವರೂಪದತನುಶ್ರೀರೂಪವೋ ಬರ್ಪದೆಂ
ಬಿನೆಗಂ ಮೆಲ್ಲನೆ ಬಂದು ಕಾಲ್ಗೆಱಗೆ ಲೀಲಾಲಂಬಿಲಂಬಾಳಕಾ
ಳಿ ನಿಲುಂಬಿರ್ದುವು ಚಕ್ರವರ್ತಿಯ ಪದಾಂಭೋಜಂಗಳೊಳ್ಕನ್ನೆಯಾ॥೪೭

ವ॥ ಅಂತು ಪೊಡೆವಟ್ಟ ನಿಜತನೂಜೆಯಂ ಕಲ್ಯಾಣಭೋಗಭಾಗಿಯಾಗೆಂದು ಪರಸಿ ತಕ್ಕೈಸಿಕೊಂಡು,

ಒದವಿದ ನೂಲ ತೊಂಗಲುಲಿಯಿಲ್ಲದೆ ಪೀನನಿತಂಬಮಾರಮಿ
ಲ್ಲದೆ ಕುಚಮಂಡಳಂ ಪಲವುಮಂದದ ಚಂದದ ಚೆನ್ನಪೂಗಳ ।
ಲ್ಲದೆ ಲುಳಿತಾಳಕಂ ಕ್ವಣಿತನೂಪುರಮಿಲ್ಲದೆ ಪಾದಪದ್ಮಮೊ
ಪ್ಪಿದಪುದು ನೋಡ ರೂಪಿನಿತು ಬೇಸಱೊಳಂಸೊಗಯಿಪ್ಪುದೀಕೆಯಾ॥೪೮

[1]ಗ.—ಮೂವತ್ತಿರ್ಛಾಸಿರ. [2]ಕ.—ಸಿಂಹಾಸನಾಸೀನ.

ವ॥ ಎಂದು ತನ್ನ ಮನದೊಳ್ ಬಗೆದು ಮಗಳ ಮೊಗಮಂ ಮುಗುಳ್ನ ಗೆವೆರಸು ನೋಡಿದಾಗಳ್,

ಕುಂದದಳಧವಳನೃಪದಶ
ನೇಂದುಜ್ಯೋತ್ಸ್ನಾಮೃತಾಚ್ಛಜಳಪರಿಷೇಕಂ ।
ಮಾಂದಿ[1] ಸುಮಂತಾದುದು ನೃಪ
ನಂದನೆಯೆರ್ದೆಯೊಳಗೆ[2] ಬಳೆದ ಶೋಕಾನಳನಂ ॥ ೪೯

ವ॥ ಅಂತು ವಜ್ರದಂತನ ವಜ್ರದಂತೆ ಪೊಳೆವ ದಂತಪಙ್ಕ್ತಿಗಳ ಕಾಂತಿ ಯಾಕಾಂತೆಯುಂ ಪುದಿದು ಪುದುಂಗೊಳಿಸೆ ವಜ್ರದಂತನೆಂಬ ಪೆಸರಂ ನನ್ನಿ ಮಾಡಿ,

ಮಗಳೆ ಮನಸ್ತಮಂ ನಿನಗಿದೀಗಳೆ ಪಿಂಗುಗೆ ಕುಂಕುಮದ್ರವಂ
ನಗೆಮೊಗದೊಳ್ ಕನತ್ಕನಕಮೇಖಳೆ ಪೀನನಿತಂಬದೊಳ್ ಲಯಂ ।
ನೆಗೞ್ದಿರೆ ನೂಪುರಂ ಪದಪಯೋರುಹದೊಳ್ ನೆಲೆಗೊಳ್ಗೆ ಕೂಡುವೈ
ಬಗೆಗೊಳೆ ನಾಳೆ ನಾಡಿದು ಮಹೋತ್ಸವದಿಂ ನಿಜಜೀವಿತೇಶನೊಳ್ ॥ ೫೦

ವ॥ ಅದೆಂತೆಂದೊಡೆ ಮದೀಯಗುರುಗಳುಂ ತ್ರೈಲೋಕ್ಯಗುರುಗಳು ಮಪ್ಪ ಯಶೋಧನಗುರುಗಳ ಕೇವಳಜ್ಞಾನೋತ್ಪತ್ತಿಯೊಸಗೆಯೊಳವಿಚ ಳಭಕ್ತಿಯೊಳೆನಗೆ ಪುಟ್ಟಿದವಧಿಜ್ಞಾನದೊಳೆನ್ನ ನಿನ್ನ ನಿನ್ನ ಕಾಂತನ ಜ ನ್ಮಾಂತರಂಗಳನನಂತರಿತಮನಱಿದೆನಾಕಥಾಂತರಮನಾದ್ಯಂತಮನವಧಾರಿ ಸೆಂದುಮಿಂತೆಂದು ಪೇೞಲ್ತಗುಳ್ದಂ:—ಆನೀಭವಕ್ಕೈದನೆಯ ಭವದೊಳೀ ಪುಂಡರೀಕಿಣಿಯೊಳ್ ಕೇಶವಮಹೀಶಂಗೆ ಚಂದ್ರಕೀರ್ತಿಯೆಂಬ ಮಗ ನಾಗಿ ಜಯಕೀರ್ತಿಯೆಂಬ ಕೆಳೆಯನುಮಾನುಮೊಡವಳೆದು ಗೃಹೀತಾಣು ವ್ರತನೇಂ ಗೃಹಸ್ಥಧರ್ಮಕ್ರಮದೊಳ್ಮದೀಯಮಯಸ್ಯನುಮಾನುಂ ನೆಗ ೞ್ದ ಜೀವಿತಾಂತ್ಯದೊಳ್ ಪ್ರೀತಿವರ್ಧನೋದ್ಯಾನದೊಳ್ ಚಂದ್ರಸೇನಾಚಾ ರ್ಯರ ಶ್ರೀಪಾದಪದ್ಮಪಾರ್ಶ್ವದೊಳ್ ಸನ್ಯಸನವಿಧಿಯೊಳ್ ಪರಿತ್ಯಕ್ತಾಹಾರ ಶರೀರನೆಂ ಸಮಾಧಿವಡೆದು ಮಹೇಂದ್ರಕಲ್ಪದೊಳ್ ಸಪ್ತಸಾಗರೋಪಮ ಪ್ರಮಿತಜೀವಿತನೇಂ ಸಾಮಾನಿಕದೇವನಾಗಿ ಪುಟ್ಟಿದೆಂ. ಜಯಕೀರ್ತಿಯು

---

[1] ಕ.—ನಂದಿ. [2] ಗ.—ಯೊಡಲೊಳಗೆ.

ಮಾತ್ಮೀಯವಿಭವಸದೃಶನಾಗಿ ತತ್ಕಲ್ಪದೊಳ್ ಪುಟ್ಟಿದಂ. ಅಂತಿರ್ವರುಮಮರಾಂಗನಾಪಾಂಗವಿಳೋಕನಸುಖಮನನುಭವಿಸಿ ಬಂದು ಪುಷ್ಕರವರದ್ವೀಪದ ಮೂಡಣ ಮಂದರದ ಪೂರ್ವವಿದೇಹದ ಮಂಗಳಾವತೀವಿಷಯದ ರತ್ನಸಂಚಯಪುರಾಧಿಪಂ ಶ್ರೀಧರಂಗಮಾತನ ಮನೋಹರಿಮನೋಹರಿಗಂ ಶ್ರೀವರ್ಮನುಂ ವಿಭೀಷಣನುಮೆಂಬ ಪೆಸರೊಳ್ ಬಲದೇವವಾಸುದೇವರಾಗಿ ಬಳೆಯೆ ಮದೀಯಜನಕನೆಮ್ಮಿರ್ವರುಮನಧಿರಾಜಯುವರಾಜಪದವಿಯೊಳ್ ನಿಱಿಸಿ,

ಅಱಿವಂ ಮೆಱೆದೆರಡಱಿಯದ
ತಱಿಸಲವಮರ್ದಿರೆ[1]ಸುಧರ್ಮಮುನಿಪದಪದ್ಮ ।
ಕ್ಕೆಱಗಿ ಜಿನರೂಪಮೆಂಬೊಂ
ದಱಿವಿಡಿದ[2]ಘಬಲಮನಲೆದು ಶಿಲೆಯೊಳ್ ಪೊಯ್ದಂ ॥ ೫೧

ವ॥ ಎಮ್ಮ ತಾಯ್ ಮನೋಹರಿಯುಮೆಮ್ಮೊಳಪ್ಪ ಮೋಹಂ ಕಾರಣಮಾಗೆ ತಪಮಂ ಕೈಕೊಳ್ಳದೆ ಸಕಳಶ್ರಾವಕವ್ರತಂಗಳಂ ಕೈಕೊಂಡು ಪಲವುಂ ತೆಱದ ನೋಂಪಿಗಳಂ ನೋಂತು ಜೀವಿತಾಂತ್ಯದೊಳೀಶಾನಕಲ್ಪದೊಳ್ ಶ್ರೀಪ್ರಭವವಿಮಾನದೊಳ್ ಲಲಿತಾಂಗದೇವನಾದಳ್. ಅನ್ನೆಗಮಿತ್ತ ನಿಧಾನಮಂ ತೋಱಿ ಕಣ್ಣಂ ಕಳೆವಂತೆ,

ಬಿದಿಯೆಂಬಾರಡಿಗಳ್ಳನೆನ್ನ ನುಜನಂ ಗೋವಿಂದನಂ ನಿರ್ನಿರು
ಯ್ವುದುಮಿನ್ನೇತೊದಳೊಂದೆ ಕಿಚ್ಚನಗಮಿಂತೀತಂಗಮಿನ್ನೇತನಿ ।
ಲ್ಲದೆ ಪೇಱ್ ಮಾನಸಮಾಱಿ ಮೋಹಮೆನಗಿನ್ನೇಬಾರ್ತೆಯೆಂದುಗ್ರಶೋ
ಕದಿನಾಕ್ರಂದಿಸಿದಂ ಸಹೋದರವಿಯೋಗೋದ್ವೇಗಮೇಗೆಯ್ಯದೋ ॥ ೫೨

ವ॥ ಅಂತು ವಿಭೀಷಣವಿಪತ್ತಿಯೊಳತಿಪ್ರಳಾಪಂಗೆಯ್ವನ್ನೆಗಂ ಶೋಕಾವೇಗಮನಱಿದು ಮುನ್ನಿನ ಭವದ ಜನನೀಸಂಬಂಧಮೋಹಂ ಕಾರಣಮಾಗೆ ಲಲಿತಾಂಗದೇವಂ ಬಂದು,

ಕಲಿದವರ್ಗಳ್ಪದಳೊತ್ತಡವರೇಱ್ಪರೆ ಮೋಣವರಿಂ ಬಱಿಕ್ಕೆ ತಾ
ಮುಱಿವರೆ ಮೋಣದಂತಮರಣಂ ತಮಗಂ ಬದರ್ಕಿಲ್ಲ ಧರ್ಮಮಂ ।

---

[1]ಗ.—ಅಱಿವುಂ ಮಱೆವುಂ ತನ್ನೊಳ್ನೆಱೆದಿರೆ । ತಱಿಸಲೆ.
[2]ಗ.—ದೞೆವಿಡಿದ.

ಷೆಟೆಯಿಸಿ ಕೊಳ್ವುದೊಂದೆ ಚದುರಿಂತುಟು ಸಂಸೃತಿಧರ್ಮಮೇಕೆ ಬಾ
ಯುಟೆವುದದೇಕೆ ಚಿಂತಿಸುವುದೇಕೆ ಪಲುಂಬುವುದೇಕೆ ನೋವುದೋ[1]॥ ೫೩

ಅವನೀವ್ಯೋಮಮನೆಯ್ದೆ ಪರ್ಬಿ ಬಳೆದುಂ ಶೋಕಾನುಬಂಧಾಂಧಬಾಂ
ಧವಹಾಹಾರವಮೆಂತುಮೆಯ್ದದು ವಲಂ ಲೋಕಾಂತರಪ್ರಾಪ್ತನ ।
ಪ್ಪವನಂ ನಿರ್ಭರಪೂರಮಾಗಿಯುಮತಿಸ್ನಿಗ್ಧಾಶ್ರುಧಾರಾಜಳ
ಪ್ಲವಮುಂ ಬಾರಿಸಲೆಂತುಮಾಱವು ವಲಂ ಕಾಳೋರಗಗ್ರಸ್ತನಂ ॥ ೫೪

ತನಯಂ ತಾಯ್ತಂದೆ ತಮ್ಮಂ ಕೆಳೆಯನಳಿಯನಾಳ್ವಜ್ಜನೆಮ್ಮಜ್ಜನಿಷ್ಟಾಂ
ಗನೆಯೆಂದಾರಾರನಾವಾವಱಿಕೆಯ ಭವಸಂಬಂಧಮಂ ಕಂಡು ನಿಚ್ಚಂ
ನೆನೆವೋ ನೀನಾರ್ಗೆ ನಿನ್ನಂ ಪಳಯಿಸುವವರಾರ್ಗೇಕೆ ಶೋಕಿಪ್ಪೆ ಮಾಣ್ಮಾಣ್
ಮನದೊಳ್ಮೀನಾರ್ಪೊಡಿಂ ನಿನ್ನೊಡಲನೆ ಜಿನದೀಕ್ಷಾಕ್ಷಮಂ ಮಾಡು ಪುತ್ರಾ

ಅತಿಶೋಕಾಗ್ನಿಯೊಳರ್ದು ಬರ್ದು ಪುದಿದಾತ್ಮಧ್ಯಾನದಿಂ ಘೋರದು
ರ್ಗತಿಯಂ ಪೊಕ್ಕು ದುರಂತದುಃಖಮನುಣಲ್ಬೇಡಿಂಬುಕೆಯ್ ಪೆಂಪುವೆ
ತ್ತ ತಪಃಪೋತದಿನಣ್ಣ ನೀಂ ತಡಿಯನೆ[2]ಯ್ದಂತಲ್ಲದಿಂತೀಚತು
ರ್ಗತಿಸಂಸಾರಪಯೋಧಿಯಂ ಪೊಱಮಡಲ್ ಮತ್ತಿಲ್ಲ ನೀನಾರ್ತಪೈ॥ ೫೬

ವ॥ ಎಂಬದುಂ ಮುನ್ನಾದ ಶೋಕರಸಮೆಲ್ಲಂ ಪೋಗಿ ನಿರ್ವೇಗರಸಂ
ಪುಟ್ಟೆ ಸಿದ್ಧರಸಮಂ ಮುಟ್ಟಿದ ಲೋಹದಂತೆ ಶುದ್ಧಾಂತರಙ್ಗನಾಗಿ,

॥ ಪೃಥ್ವಿ ॥

ಮೊಗಂಮುಱಿಯದೆಲ್ಲಮಂ ತೊಱೆದು ವಿಶ್ವವಿಶ್ವಂಭರಾ
ದಿಗಂಬರತಟಂಬರಂ ಬಳಸೆ ಕೀರ್ತಿವಲ್ಲೀಚಯಂ ।
ದಿಗಂಬರವಿಳಾಸಮಂ ಬಯಕೆ ತೀರ್ವಿನಂ ತಾಳ್ದಿದಂ
ಯುಗಂಧರಮಹಾಮುನೀಂದ್ರಪದಪಂಕಜೋಪಾಂತದೊಳ್ ॥ ೫೭

ವ॥ ಅಂತು ದಶಸಹಸ್ರಧರಣೀಶ್ವರರೊಡನೆ ಜಿನೇಶ್ವರರೂಪಮಂ ತಾಳ್ದಿ ಸ
ರ್ವತೋಭದ್ರಸಿಂಹವಿಕ್ರೀಡಿತಂಗಳೆಂಬ ತಪದೊಳ್ ನೆಗಳ್ದು ಜೀವಿತಾಂತ್ಯ

[1] ಗ.—ಪುಸ್ತಕದಲ್ಲಿ ಈಪದ್ಯವಿಲ್ಲ. [2] ಕ.—ತಡಿಯದೆಯ್ದಂ.

ದೊಳಚ್ಯುತಕಲ್ಪದೊಳ್ ದ್ವಾವಿಂಶತಿಪಾರಾವಾರಪರಮಾಯುಷ್ಯನೆನಚ್ಯು
ತೇಂದ್ರನೆನಾಗಿ,

ಎನಗಿನಿವಿರಿದು ಸುಖಂ ಮ
ಜ್ಜನನೀಚರದಿವಿಜನಿಂದಮಾಯ್ತೆಂದು ಕೃತಂ ।
ಮನದೊಳ್ ಪುದಿದು ಪೊದಳ್ದಿ
ರ್ಪಿನೆಗಂ ಲಲಿತಾಂಗದೇವನಂ ಪೂಜಿಸಿದೇಂ ॥ ೫೮

ವ॥ ಅಂತಾದೇವನನೀಶಾನಕಲ್ಪದಿಂದತಿಪ್ರೀತಿವರ್ಧನಕರಮೆಂಬ ಮದ್ವಿಮಾನಮಂ ಪ್ರೀತಿವರ್ಧನಕರಮಾಗೇಱಿಸಿಕೊಂಡುಯ್ದು ಮದೀಯಕಲ್ಪದೊಳಗಗ್ಗಳಮಪ್ಪ ದಿವ್ಯಾಭರಣಾಂಬರಾನುಲೇಪನಕುಸುಮಧಾಮಾದಿಗಳಿನೆನ್ನಲಂಪುಮಳ್ಕಱುಂ ನೆಗಪೆ ಪೂಜಿಸಿದೆಂ. ಆದಿವಿಜನುಮನೇಕರತ್ನಾಕರೋಪಮಮಾಯುರವಸಾನದೊಳ್ ಜಂಬೂದ್ರುಮೋಪಲಕ್ಷಿತಜಂಬೂದ್ವೀಪದ ಪೂರ್ವವಿದೇಹದ ಮಂಗಳಾವತೀವಿಷಯದ ವಿಜಯಾರ್ಧಪರ್ವತದುತ್ತರಶ್ರೇಣಿಯ ಗಂಧರ್ವಪುರಮನಾಳ್ವ ವಿದ್ಯಾಧರರಾಜಂ ವಾಸವಂಗಂ ಆತನಂತಃಪುರಪ್ರಧಾನೆ ಪ್ರಭಾವತಿಗಂ ಮಹೀಧರನೆಂಬತನೂಜನಾಗೆ ವಾಸವನುಂ ಮಹೀಧರಂಗೆ ವಿದ್ಯಾಧರವಿಭೂತಿಯಂ ಕೊಟ್ಟು ವಿಜಯಾಖ್ಯಮುನಿಮುಖ್ಯನಿಕಟದೊಳ್ ಮುಕ್ತಾವಳಿತಪಮಂ ಕೈಕೊಂಡು ಗೆಲ್ಲಂಗೊಂಡಂ. ಪ್ರಭಾವತಿಯುಂ ಪದ್ಮಾವತ್ಯಾರ್ಯಿಕಾಪಾದಮೂಲದೊಳುಪಾರ್ಜಿತರತ್ನಾವಳಿತಪದೊಳಚ್ಯುತಕಲ್ಪದೊಳ್ ಪ್ರತೀಂದ್ರಪದವಿಯಂ ಪಡೆದಳ್. ಇತ್ತ ಮಹೀಧರನುಮೊರ್ಮೆ ಪುಷ್ಕರಾರ್ಧದ ಪಡುವಣ ಮಂದರದ ಪೂರ್ವವಿದೇಹದ ವತ್ಸಕಾವತೀವಿಷಯದ ಪ್ರತಿಬದ್ಧಪ್ರಭಾಕರೀಪುರಿಯೊಳ್[1] ವಿನಯಂಧರಯೋಗಿಗಳ ಪರಿನಿರ್ವಾಣಪೂಜೆಯಂ ಮಾಡಿ ಮೇರುಗಿರಿಯ ನಂದನವನದ ಪೂರ್ವದಿಗ್ಭಾಗದಕೃತ್ರಿಮಚೈತ್ಯಾಲಯಂಗಳೊಳ್ ವಂದನಾಭಕ್ತಿನಿಮಿತ್ತಂ ಬಂದಿರೆ ಮಹೀಧರನನಾನಲ್ಲಿ ಕಾಣಲೊಡಮಱಿದು,

ಏಂ ಗಗನೇಚರ ನೀಂ ಲಲಿ
ತಾಂಗನೆಯಾದಂದು ಮಾತೃಚರನೆಂದಱಿದು ।

[1] ಕ.—ಪ್ರಭಾವತೀಪುರಿಯೊಳ್.

ತ್ತುಂಗವಿಭವಂಗಳೆಸೆಯೆ ಮ
ನಂಗೊಳೆ ಪೂಜಿಸಿದೆನಚ್ಯುತೇಂದ್ರನೆನಱಿವೋ ॥ ೫೯

॥ ಪೃಥ್ವಿ ॥

ಪೆಸರ್ ನಿನಗೆ ಕೇಳ್ ಪೊಸರ್ ಪೆಱರ್ಗೆ ನಿನ್ನ ಪೆಯ್ಯೊಳ್ವ ದ
ಡ್ಡಿಸಕ್ಕೆ ಗುಱಿಯಪ್ಪುದೊಡ್ಡಿಱಿದು ತಿಂಬರನ್ಯಕ್ರಿಯಾ ।
ವಸಾನವಿರಸಂಗಳಿಂದ್ರಿಯಸುಖಂಗಳಿನ್ನಾದ ಸಂ
ತಸಂ ಗತವಿವೇಕ ಪೇಳ್ ನಿನಗಸಾರಸಂಸಾರದೊಳ್ ॥ ೬೦

ಉಡಿಸಿಯುಮುಡಿಯುಮಿತ್ತಿಯಿ
ನೆಡೆಯುಡುಗದೆ ಸಲಿಸಿ ಪಲವು ಕಾಲಂ ಪುದುವಾ ।
ಪ್ಡೊಡಲಾತ್ಮನೊಡನೆ ಪೋಗದೆ
ಕಡೆಗಣಿಸುವುದೆಂದೊಡುಳಿದರಂ ನಂಬುವುದೇ ॥ ೬೧

ಎನಿತು ಪರಿಗ್ರಹದ ತೊಡ
ರ್ಪನಿತೆ ಮನೋದುಃಖಮುದಱು ಕುಂದೆನಿತುಮನ
ಕ್ಕನಿತೆ ಸುಖಮೆಂಬುದಂ ನೆ
ಟ್ಟನೆ ತಿಳಿದಂ ಜನ್ಮಜಳಧಿಯೊಳ್ ಮುಳುಗುವನೇ ॥ ೬೨

ಭೋಗಿಪೆನೆನ್ನ ಜವ್ವನಮುಮಾಧನಮುಂ ತವುವನ್ನೆಗಂ ಕುಚಾ
ಭೋಗಭರಾನತಾಂಗಿಯರೊಳನ್ನೆಗಮತ್ತಱನಂ ತಗುಳ್ವೆನಂ ।
ತಾಗಿಯುಮೆಂಬ ನಿನ್ನ ಪೊಲಗೆಟ್ಟಲೆಗಾಂ ಬೆಱಗಾದೆನೆಂದು ಪೇ
ೞೇಗಳೊ ಬಯ್ಗೆಯೋ ಪೊಗಸೊ ನಾಳೆಯೊ ನಾಡಿದೊ ನಿನ್ನ ಜೀವಿತಂ ॥
ಸಾಲದೆ ವಿಷಯಾಮಿಷವಿಷ
ಲೋಲತೆ ಭವವಿಷಮವಿಷಧಿಯೊಳಗೆನಿತಂ ನೀ ।
ನೋಲಾಡುವೆಯೆನೆಯೆಡೆಯಿಂ
ತೋಲಾಡಿದ ಬಿರುದಿನಂಕದಂತಿರೆ ಖಚರಂ ॥ ೬೪

ವ॥ ಇನಿಸಪ್ಪೊಡಂ ತಡೆಯದೆನ್ನ ನುಡಿದ ನುಡಿಯೋ ತನಗೆ ಮನಃಕಂ
ಪಮುಂ ಪಡೆಯೆ ಮಹೀಕಲ್ಪನೆಂಬ[1]ನಿಜತನೂಜಂಗೆ ರಾಜ್ಯಭಾರಮಂ

1ಕ.—ಮಹೀಕಂಪ.

ಕೊಟ್ಟು ಜಗನ್ನಂದನಗುರುಗಳಲ್ಲಿ ಶಿಷ್ಯತ್ವಮಂ ಪೊರ್ದು ಕನಕಾವಳಿತಪಃಪ್ರಭಾವದೊಳ್ ಪ್ರಾಣಪರಿತ್ಯಾಗದಿಂ ಪ್ರಾಣತೇಂದ್ರನಾಗಿ,

ಇರ್ಪತ್ತು ಸಾಗರೋಪಮ
ಮಾರ್ಪನ್ನೆಗಮುಂಡು ಸುಖಮನಾತಂಗೆ ಗಡಂ |
ಬರ್ಪುದುಮಾಯುತ್ತೞಿಗಂತಕ
ಸರ್ಪಂ ಕೊಳೆ ಬರ್ದುವನ್ನರಾರ್ ಸಂಸೃತಿಯೊಳ್ ॥ ೬೫

ವ॥ ಅಂತು ಬಂದು ಧಾತಕೀಷಂಡದ ಮೂಡಣ ಮಂದರದ ಪರವಿದೇಹದ ಗಂಧಿಳವಿಷಯದಯೋಧ್ಯೆಯನಾಳ್ವ ಜಯವರ್ಮಂಗಮಾತನರಸಿ ಸುಪ್ರಭೆಗಮಜಿತಂಜಯನೆಂಬ ಮಗನಾಗಿ ಪುಟ್ಟುವುದುಂ ಜಯವರ್ಮಂ ವರ್ಮಹರನಾದ[1]ನಿಜತನೂಜನಜಿತಂಜಯಂಗೆ ಜಯಜಯನಿನಾದಪೂರ್ವಕಮುರ್ವೀಭಾರಮಂ ಕೊಟ್ಟು ಭವ್ಯಜನಮನೋನಂದನರೆನಿಸಿದಭಿನಂದನಗುರುಗಳಂ ಸಾರ್ದು ಶಾಶ್ವತಸೌಖ್ಯವರ್ಧನಕರಮಪ್ಪಾಚಾಮ್ಲವರ್ಧನತಪದೊಳ್ ನೆಗೞ್ದು ಪರಮಪದಮನೆಯ್ದಿದಂ. ಸುಪ್ರಭೆಯುಂ ಸುದರ್ಶನನಾಮಗಣಿನಿಸಮಕ್ಷದೊಳ್ ರತ್ನಾವಳಿಯುಂ ನೋಂತಚ್ಯುತಕಲ್ಪದೊಳ್ ದೇವನಾಗಿಪುಟ್ಟಿದಳ್. ಇತ್ತ ಜಿತಂಜಯನುಂ ಚಕ್ರವರ್ತಿಪದಮನೆಯ್ದಿದಿಂಬೞಿಯಮಭಿನಂದನಜಿನಮಹಿಮೆಯುಂ ಮಾಡಿ ಪಿಹಿತಪಾಪಾಸ್ರವಧಾರನಾದುದಱಿಂ ಪಿಹಿತಾಸ್ರವನೆಂಬೆರಡನೆಯ ಪೆಸರಂ ಪಡೆದು ಸಾಮ್ರಾಜ್ಯಸುಖಮನನುಭವಿಸುತ್ತಿರೆ,

ಆನೊಂದು ದಿವಸಮಾತನ
ನಾನಂದೋದಯದೆ ಸಾರ್ದು ನೀಂ ಭವ್ಯನೆಯ |
ಜ್ಞಾನಿಯವೊಲ್ ನಿನ್ನಂ ಮಱೆ
ದೇನೀವಿಷಯದ ಸುಖಕ್ಕೆ ಲಂಪಟನಪ್ಪೇ ॥ ೬೬

ಅಱಿವುಂ ನೆಱವುಂ ತನ್ನೊಳ್
ನೆಱೆದಂದಱಿದದಱೊಳೆಸಪುದಲ್ಲದೆ ಬೞಿಯುಂ |

---

[1]ಕ.—ಕವಚಹರನಾದ.

ಗುಱಿನೆಱದೆಡೆಯೊಳ್ ಮಮ್ಮಲ
ಮಱುಗಿದೊಡಾನೆಱವುಮಱಿವುಮೇಂ ಕೊಡುಗುಮೋ ॥ ೬೭

ಬಹ್ವಾರಂಭಪರಿಗ್ರಹ
ವಿಹ್ವಳನಿಂದ್ರಿಯಸುಖಾರ್ಥಿ ಸಂಸಾರಗುಹಾ ।
ಗಹ್ವರದೊಳಗಿರುಳಿನ ಚ
ಕ್ರಾಹ್ವದವೊಲ್ ಮಱುಗದೇಂ ಸುಖಂಬಡೆದಪನೇ ॥ ೬೮

ತಣಿವುಂಟೇ ಪೆಱತೊಂದಪೂರ್ವರಸಮೇಂ ಕೈಸಾರ್ಗುಮೇ ಮತ್ತಮಾ
ವುಣಿಸಾತಂಬುಲಮಾವಿದಗ್ಧಗಣಿಕಾಸಂಭೋಗಮಾವಸ್ತ್ರಭೂ ।
ಷಣಮಾಲ್ಯಾದಿಗಳೆಂದು ಪಂಬಲಿಸಿ ನಿಚ್ಚಂ ನಿಚ್ಚಮೀಪಿಷ್ಟಪೇ
ಷಣಮೀಚರ್ವಿತಚರ್ವಣಂ ಸುಖಮಿದೇಂ ನಿನ್ನಂ ಮರುಳ್ಮಾಡಿತೋ ॥ ೬೯

ಭೋಗಂಗಳ್ ಸಲೆ ಮನದೊಳ್
ರಾಗಮನೊದವಿಸುಗುಮಪ್ಪೊಡನುಭವಿಕೆ ಮನೋ ।
ರಾಗಮನೊದವಿಸದವು ಹೃ
ದ್ರೋಗಮನೊದವಿಸೆ ರಸಜ್ಞನನುಭವಿಸುಗುಮೇ ॥ ೭೦

ತಣಿಪಿಯೆ ದೇವಲೋಕಸುಖಸಾಗರಮಂ ತವೆ ಪೀರ್ದುಮೀಗಳೇಂ
ತಣಿವೊ ಮನುಷ್ಯಕೀಟಕಸುಖಾಂಬುಲವೋದ್ಗಮದೊಳ್ ವಿಚಾರಿಸಲ್ ॥
ಗಣಿದಮಿದೊಂದುಮಿಲ್ಲ ನಿನಗೀಖಳಸಂಸೃತಿಯೆಂಬದೊಂದು ಜಾ
ಟಣದೊಳಗಮ್ಮ ನೀಂ ಮೊಗಪೆಯಾಗದೆ ತಾಳ್ದಪವರ್ಗಮಾರ್ಗಮಂ ॥ ೭೧

ವ॥ ನಿಮ್ಮಡಿಯ ಮಾತೃಚರನಪ್ಪುದಱಿಂದಮಾಮೋಹಕಾರಣಮಾಗಿ
ನಿನ್ನಂ ಪ್ರತಿಬೋಧಿಸಲ್ಬಂದೆಂ,

ತಡೆಯದೆ ನಿನಗಪ್ಪುದನೀ
ಗಡೆ ಬಗೆ ಮೆಳ್ಪಡದಿರೆಂಬುದುಂ ನೀಮಿನಿತಂ ।
ನುಡಿದಿರ್ ಮೊದಲಿಸಿದಿರಿಂ
ತಡೆವೆನೆ ಕಟ್ಟದುದೆ ಸುರಿಗೆ ಮೆಟ್ಟದುದೆ ಕಳಂ ॥ ೭೨

ವ॥ ಎಂದೆನ್ನ ಮಾತಿನೊಳಜಿತಂಜಯನಪ್ಪ ಪಿಹಿತಾಸ್ರವಂ ಜಾತವೈರಾಗ್ಯನಾಗಿ ವಿಂಶತಿಸಹಸ್ರರಾಜಸಮಾಜಂಬೆರಸು ಮಂದರಸ್ಥವಿರರೆಂಬ ಮುಮುಕ್ಷುಗಳ ಸಮಕ್ಷದೊಳ್ ಮೋಕ್ಷಮಾರ್ಗಮಂ ಕೈಕೊಂಡು ಗಗನಚಾರಣಋದ್ಧಿಪ್ರಾಪ್ತರೆಂಬ ಅಯ್ನೂರ್ವರಂಬರಚಾರಣರೊಡನೆ ವಿಹಾರಿಸುತ್ತುಂ ಬಂದು ಚಾರಣಚರಿತಮೆಂಬ ಪುಣ್ಯಾರಣ್ಯದೊಳಂಬರತಿಳಕಮೆಂಬ ಗಿರಿವರದ ನಡುವೆ ಯೋಗಯೋಗ್ಯಮೆಂದದನಳಂಕರಿಸಿ ನೆಲಸಿದಂದು ನಿನ್ನ ನಿರ್ನಾಮಿಕೆಯಾದ ಭವದೊಳ್ ಮದೀಯಜನನೀಚರಗುರುಗಳ್ ನಿನಗಂ ಗುರುಗಳಾದೊಡವರ್ ಪೇೞ್ದುಪದೇಶದೊಳ್ ನೋಂತು ಮಹಾಬಳಖೇಚರನಾದ ಭವದೊಳ್ ಸ್ವಯಂಬುದ್ಧೋಪದೇಶದೊಳೀಶಾನಕಲ್ಪದ ಶ್ರೀಪ್ರಭವಿಮಾನದೊಳ್ ಪುಟ್ಟಿದ ಲಲಿತಾಂಗದೇವಂಗೆ ನೀಂ ಸ್ವಯಂಪ್ರಭೆಯೆಂಬ ದೇವಿಯಾಗಿ ಪುಟ್ಟಿರೆ ಆನುಮಸ್ಮಜ್ಜನನೀಚರನಪ್ಪ ಲಲಿತಾಂಗದೇವನೊಳನುಬಂಧಿಸಿದ ಮೋಹಸಂಬಂಧದೊಳ್ ನಿನ್ನ ದೇವನಪ್ಪ ಲಲಿತಾಂಗಂಬೆರಸಿರ್ಪತ್ತಿರ್ವರ್ಲಲಿತಾಂಗರಂ ಕೊಂಡಾಡಿದೆಂ. ಅಂದು ನಿನ್ನ ದೇವನೊಳಾದ ಕೊಂಡಾಟಮಂ ನೀನುಮಱಿವೌ,

ಮನವೊಲ್ದೊಂದವಿನಾಣಮಂ ಮಗಳೆ ಕೇಳ್ ನಿನ್ನೋಪನುಂ ನೀನುಮಂ
ದನುರಾಗೋದಯದಿಂದಮಂದು ನೆಗೞ್ದಾಬ್ರಹ್ಮೇಂದ್ರನುಂ ಲಾಂತವೇಂ।
ದ್ರನುಮಕ್ಕರ್ತಿರದಚ್ಯುತೇಂದ್ರ ತಿಳಿವಂತಾಗೆಯ್ದೆ ಪೇೞೆಂಬುದುಂ
ನೆನೆಪ್ರೋರಾಗದಿನಾಯುಗಂಧರಜಿನೋಪಾಖ್ಯಾನಮಂ ಪೇೞ್ದಂ ॥ ೭೩

ವ॥ ಅದೆಂತೆಂದೊಡೀಜಂಬೂದ್ವೀಪದ ಪೂರ್ವವಿದೇಹದ ಸೀತಾನದಿಯ ತೆಂಕಣ ತಡಿಯ ವತ್ಸಕಾವತೀವಿಷಯದ ಸುಸೀಮಾನಗರಮನಾಳ್ವ ಅಜಿತಂಜಯಮಹೀಪಾಳನ ರಾಜ್ಯಪ್ರಾಸಾದಮೂಲಸ್ತಂಭಸಚಿವನಮಿತಮತಿಗಮಾತನ ಕುಲಲಲನೆ ಸತ್ಯಭಾಮೆಗಂ ಪ್ರಹಸಿತನೆಂಬ ಮಗನಾದಂ; ಆತನ ಸಹಚರಂ ವಿಕಸಿತನೆಂಬೊಂ.

ಪ್ರಹಸಿತವಿಕಸಿತರಿರ್ವರ
ಸಹಜಸ್ನೇಹಮುಮನವರ್ಗಳಿರ್ವರ ವಿದ್ಯಾ।
ಮಹಿಮೆಯುಮಂ ಬಣ್ಣಿಸಲರಿ
ದಹಿರಾಜಂಗುೞಿದ ಜಡರದೇನಂ ಪೊಗೞ್ವರ್ ॥ ೭೪

ವಾದಿನಗವಾದಿಗಜಪರ
ವಾದಿತಮಸ್ತಮನುನೊಡೆವ ಬಿಡೆ ಬೆದಱಿಸ ನಿ।
ರ್ಭೇದಿಪೆಡೆಗಳನಿ ಹರಿ ದಿನ
ಪೋದಯಮೆನಿಸಿದುದು ವಿದ್ಯೆಯೊಂದುರ್ಕವರಾ ॥ ೭೫

ವ॥ ಅಂತು ನಿಜವಿದ್ಯಾಜ್ಞಾನಮದಾವಲಿಪ್ತರಿರ್ವರು ಮೊಂದುದಿವಸಮಜಿತಂಜಯನೊಡನೆ ಪೋಗಿ ತತ್ಪುರೋಪವನದೊಳಿರ್ದ ಮತಿಸಾಗರಮುನಿಪತಿಯೊಳ್ ಬಾದುಗೆಯ್ದು ಆತ್ಮೀಯವಿದ್ಯಾಗರ್ವಪರ್ವತಮವರ ವಚೋವಜ್ರನಿರ್ಘಾತದಿಂ ನುಚ್ಚುನುಱಿಯಾಗಿ ಪೋದೊಡೆ ಹತಪ್ರತಿಜ್ಞರುಂ ಗಳಿತಗರ್ವರುಮಾಗಿ ತಚ್ಛಿಷ್ಯತ್ವಮುಂ ಪೊಣ್ದು,

ತನುವಂ ತಂದು ಮಹಾವ್ರತಕ್ಕುಚಿತಕಾಯಕ್ಲೇಶರಾಚಾಂಬ್ಲವ
ರ್ಧನಮಂ ನೋಂತು ಸಮಾಧಿ ಕೈಕೊಳೆ ಮಹಾಶಕ್ರಕ್ಕೆ ಸಂದೀತನಿಂ।
ದ್ರನಿವಂ ತತ್ಪ್ರತಿಮಂ ಪ್ರತೀಂದ್ರನೆನೆ ಸಂದಿಂತಿರ್ವರುಂ ಪೊಣ್ದಲಂ
ಪಿನೊಳುಂಡರ್ ಕಡೆಯೆಯ್ದೆ ಷೋಡಶನದೀನಾಥೋಪಮಾಯುಷ್ಯಮಂ ॥

ವ॥ ಅಂತು ಪರಿಚ್ಯುತನಾಕಲೋಕರಾಗಿ ಧಾತಕೀಷಂಡದ ಪಡುವಣ ಮಂದರದ ಪೂರ್ವವಿದೇಹದ ಪುಷ್ಕಳಾವತೀವಿಷಯದ ಪುಂಡರೀಕಿಣಿಯನಾಳ್ವ ಧನಂಜಯನರಸಿಯರಪ್ಪ[1]ಜಯಮತಿಗಂ ಜಯಸೇನೆಗಂ ಮಹಾಬಳನುಮತಿಬಳನುಮೆಂಬ ಪೆಸರೊಳ್ ಬಲದೇವವಾಸುದೇವರಾಗಿ ಪುಟ್ಟಿ ನಿಜಗುರುಪರೋಕ್ಷದೊಳ್ ಧರಾಭಾರಧುರಂಧರರಾಗಿರೆ,

ಅತಿಬಳಕೃಷ್ಣಂ ಗತಜೀ
ವಿತನಾಗೆ ಮಹಾಬಳಂ ಮಹಾವ್ರತದಿಂದ।
ನ್ವಿತಮತಿ ಸಮಾಧಿಗುಪ್ತ
ವ್ರತಿಯುಪದೇಶದೊಳ್ ಪುಟ್ಟಿದಂ ಪ್ರಾಣತದೊಳ್ ॥ ೭೭

ವ॥ ಆಕಲ್ಪದೊಳ್ ಪುಷ್ಪಚೂಳನೆಂಬ ಪೆಸರೆಸೆಯೆ ವಿಂಶತಿಸಮುದ್ರೋಪಮಾಯುಷ್ಯವಿರಾಮದೊಳ್ ಧಾತಕೀಷಂಡದ ಪಡುವಣ ಮಂದರದ ಪೂ

---

[1]ಕ.—ಧನಂಜಯಂಗಮಾತನಮಹಿಷಿಯಪ್ಪ.

ರ್ವವಿದೇಹದ ಸೀತಾನದಿಯ ತೆಂಕಣ ತಡಿಯ ವತ್ಸಕಾವತೀವಿಷಯದೊಳ್ ಪ್ರಭಾಕರೀಪುರೀನಾಥಂ ಮಹಾಸೇನಂಗಂ ತದ್ವನಿತೆ ವಸುಂಧರೆಗಂ ಜಯಸೇನನೆಂಬ ತನೂಜನಾಗಿ,

ಗುರು ಪುರುಷಾರ್ಥವುಂ ನೆಱೆಯೆ ಸಾಧಿಸಿ ಪೋಗೆ ನಿಜಾನ್ವವಾಯಭೂ
ಭರಮನದೊಂದು ಹಸ್ತಕಟಕೋಪಮಮೆಂಬಿನಿತಾಗೆ ತಾಳ್ದಿ ಕೊಂ।
ಡಿರೆಯಿರೆ ಚಕ್ರವರ್ತಿಪದಮುಂ ತನಗಾವಗಮಾದೊಡಾಮಹಾ
ಪುರುಷನದಂ ಜರತ್ತೃಣಗಣಾನುಗುಣಂ ವಲಮೆಂದೆ ಪೇಸಿದಂ ॥ ೭೮

ವ॥ ಅಂತು ಪರಿತ್ಯಕ್ತಸಕಳಸಾಮ್ರಾಜ್ಯನುಂ ದೃಷ್ಟಾನುಭೂತಶ್ರಾವಕವಿಷಯವಿತೃಷ್ಣನುಮಾಗಿ ಸೀಮಂಧರಜಿನೇಶಪದಕುಶೇಶಯಾಭ್ಯಸನದೊಳ್ ದಿಗ್ವಾಸನಾದಿಷೋಡಶಭಾವನೆಗಳಂ ಭಾವಿಸಿ ನಿಜಜೀವಿತಾವಸಾನದೊಳ್ ಸಾಮನಸಮೆಂಬೂರ್ಧ್ವಮಧ್ಯಮದ ನವಗ್ರೈವೇಯಕದೊಳ್ ಅಹಮಿಂದ್ರನಾಗಿ,

ಮೂವತ್ತುಸಾಗರೋಪಮ
ಮಾವಗಮಮರೇಂದ್ರಸುಖಮನುಣುತೆ ನಿಜಸ್ವ।
ರ್ಗಾವತರಣೋತ್ಸವಕ್ಕಮ
ರಾವಳಿ ಪದೆವಿನೆಗಮಿೞಿದನಿಳೆಗೆ ಮಹಾತ್ಮಂ ॥ ೭೯

ವ॥ ಅಂತು ಪುಣ್ಯಭಾಜನಂಗೆ ನೂಸೆ ಪಾಸೆಂಬಂತೆ ಪುಷ್ಕರಾರ್ಧದ ಮೂಡಣ ಮಂದರದ ಪೂರ್ವವಿದೇಹದ ಸೀತಾನದಿಯ ತೆಂಕಣ ತಡಿಯ ಮಂಗಳಾವತೀವಿಷಯದ ರತ್ನಸಂಚಯಪುರಮನಾಳ್ವಜಿತಂಜಯಭೂಪಾಳಂಗಮಾತನರಸಿವಸುಮತಿಗಂ ಯುಗಂಧರನೆಂಬಪೂರ್ವಪುಣ್ಯನಾಮಮುಂ ತಾಳ್ದಿ,

ಬಗೆದಂತಾಗೆ ಸುರೇಂದ್ರರಿಂ ಕ್ರಮದೆ ಕಲ್ಯಾಣದ್ವಯಂ ಜೈನದೀ
ಕ್ಷೆಗೆ ಪೂಣ್ದಕ್ಷಯಪುಣ್ಯನುಗ್ರತಪಮೆಂಬುಗ್ರಾಸಿಯಿಂ ಕೂಡೆ ಘಾ।
ತಿಗಳಂ ಘಾತಿಸಿ ತದ್ಯುಗಂಧರಮಹಾಯೋಗೀಶ್ವರಂ ಪೊರ್ದಿದಂ
ನೆಗಳ್ದಾರ್ಹಂತ್ಯಮನೇನನೀಯದೊ ಶುಭಧ್ಯಾನೋಪಯೋಗೋದಯಂ ॥

1ಕ.—ನೂಕೆ.

ಯುಗನಾಯಕನೆನೆ ಜಿನಪದ
ಯುಗನಮಿತಸುರೇಂದ್ರನೆನೆ ಯುಗಂಧರದೇವಂ ।
ನೆಗೞ್ದಿಪನೀಗಳ್ ಭುವನ
ಕ್ಕಗಾಧಕೈವಲ್ಯಬೋಧಬೋಧಿತಭವ್ಯಂ ॥ ೮೧

ಎಂದು ಯುಗಂಧರಚರಿತಮು
ನಂದಾಂ ನಿನಗಱಿಯೆ ಪೇೞ್ದೆನಲ್ಲದೆಯುಂ ಮ ।
ತ್ತೊಂದಂ ಬಗೆ ನಾಮುಂದೊಡ
ವಂದಂಬರತಿಳಕವೆಂಬ ವಿಶ್ರುತವನದೊಳ್ ॥ ೮೨

ವ॥ ಮುನ್ನ ಪೇೞ್ದ ನಮ್ಮಿರ್ವರ ಗುರುಗಳಪ್ಪ ಪಿಹಿತಾಸ್ರವಭಟ್ಟಾರಕರ ಕೇವಲಜ್ಞಾನೋತ್ಪತ್ತಿಯೊಸಗೆಯುಂ ಮಾಡಿ ಬಂದೆವಲ್ಲದೆಯುಂ,

ಮೇರುನಗೋಪಕಂಠವನದೊಳ್ ವನಕೇಳಿವಿಳಾಸಮಂ ಸ್ವಯಂ
ಭೂರಮಣಾಂಬುರಾಶಿವಿಲಸತ್ತಟದೊಳ್ ಜಳಕೇಳಿಲೀಲೆಯುಂ ।
ಪಾರಯಿಸಿರ್ದುದಂ ನೆನೆವೊ ನೀನೆನೆ ತಪ್ಪದು ಪೂರ್ವಜನ್ಮಸಂ
ಸ್ಕಾರಮದೆಲ್ಲಮಂ ನೆನೆವುದೆನ್ನ ಮನಂ ಮನುಜೇಂದ್ರವಂದಿತಾ ॥ ೮೩

ವ॥ ಇನ್ನೊಂದೆ ಮದೀಯಪ್ರಾಣವಲ್ಲಭನಪ್ಪ ಲಲಿತಾಂಗದೇವನೆಲ್ಲಿ ಪುಟ್ಟಿದನೆಂಬುದೆನಗಿದೆ ಸಂದೆಯಮೆನಗಮುದಂ ಬೆಸಸಿಮೆಂಬುದುಂ ಆಂ ನಿಮ್ಮಿಂ ಮುನ್ನಮಚ್ಯುತಕಲ್ಪದಿಂ ಪರಿಚ್ಯುತನೆನಾಗಿ ಬಂದಿಲ್ಲಿ ಯಶೋಧರಮಹೀಭುಜಂಗಂ ತದ್ವನಿತೆ ವಸುಮತಿಗಂ ವಜ್ರದಂತನಾದೆಂ; ನಿನ್ನದೇವನುಮಪ್ಪಲಲಿತಾಂಗದೇವನುಮೀಶಾನಕಲ್ಪದಿಂ ಬಂದುತ್ಪಳಖೇಟಮನಾಳ್ವ ಎನ್ನ ಮೆಯ್ದುನನಪ್ಪ ವಜ್ರಬಾಹುಗಮೆನ್ನ ತಂಗೆಯಪ್ಪ ವಸುಂಧರೆಗಂ ವಜ್ರಜಂಘನೆಂಬ ತನುಜನಾದಂ; ಆಸ್ವಯಂಪ್ರಭೆಯೆ ನೀನುಮೆನಗೀಗಳ್ ಶ್ರೀಮತಿಯಾಗಿ ಪುಟ್ಟಿದಾ.

ಭವದಿಂದಂ ಭವದೊಳ್ ತಗುಳ್ದ ಪರಮಸ್ನೇಹಂಗಳಂತೀಗಳ
ಲ್ಲಿವರಂ ಬಂದುವು ನಿನ್ನ ನಲ್ಲನೆ ಗಡಂ ಮದ್ಭಾಗಿನೇಯಂ ಮಹೋ ।
ತ್ಸವದಿಂ ಬಂದಪನಿಂದೆ ಪಂಡಿತೆಯುಮಾವೃತ್ತಾಂತದೊಳ್ ಪುಟ್ಟಿಸು
ತ್ಸವಮಂ ಮಾಣದೆ ಕೊಂಡು ಬರ್ಕುಮದುಮಂ ಕೇಳ್ಬಾ ಮಹೋತ್ಸಾಹದಿಂ ॥

ವ॥ ಎಂದು ಕನ್ಯಾರತ್ನಮಂ ಕನ್ಯಾಂತಃಪುರಕ್ಕೆ ಪೋಗಲ್ವೇೞ್ದು ವಜ್ರದಂತನಾಸ್ಥಾನದಿಂದೆರ್ದು ಪೋದಂ. ಅನ್ನೆಗಮಿತ್ತಲುಮಖಂಡಿತಮತಿ ಪಂಡಿತೆಯುಂ ತನ್ನ ಪೂಣ್ದು ಪೋದ ಕಜ್ಜಮಂ ಸಾಧ್ಯಂಮಾಡಿ ಬಂದು ಸಸಂಭ್ರಮದಿಂ ವಿಭ್ರಮವಿಳಾಸವತಿಯುಂ ಶ್ರೀಮತಿಯುಂ ಕಂಡು,

ಬರವಿನೊಳಾದದೊಂದು ಮೊಗರಾಗಮೆ ಸಂತಸಮಾತನಂತನ
ಕ್ಷರಮುಱಿಪುತ್ತುಮಿರ್ಪಿನೆಗಮೆಂದಳಿಳೇಶ್ವರಪುತ್ರಿ ತೀರ್ದುದಾ ।
ದರದೊಳ್ ನಿನ್ನ ನಚ್ಚಿನ ಮನೋರಥಮಾದೊಡಮಂತದಂ ಸವಿ
ಸ್ತರದೊಳ್ ಪೇೞದಂದೆನಗೆ ರಾಗದ ಭಾರಮಳುಂಬಮಾಗದೇ ॥ ೮೫

ವ॥ ಎಂಬುದುಂ ಆಪ್ರಸ್ತಾವದೊಳ್ ಶ್ರೀಮತಿ ತರುಣದಿನಕರಕರದಳಿತಸರಸೀರುಹವದನೆಯುಂ ಅತಿಪ್ರೀತಿವಿಸ್ತಾರಿತವಿಲೋಚನೆಯುಮಾಗಿ ಮನಂಗೊಂಡು ಕೇಳಲ್ ತಗುಳ್ದಳ್.

ಬಿರಿಯಿಸೆ ಬೇಟದೊಳ್ ಬಿರಿವ ನಲ್ಲರಗಲ್ದು ಕನಲ್ದೊನಲ್ದು ನ
ಲ್ಲರ ದೆಸೆಯಿಂದ ಮರ್ಥಿವರೆ ಕೋಗಿಲೆಯಕ್ಕೆಲರಕ್ಕೆ ತುಂಬಿಯ ।
ಕ್ಕರಗಿಳಿಯಕ್ಕೆ ಬಂದೊಡಮೊಱಲ್ದೆರ್ದೆಯಾಱುವರೆಂದೊಡೋತದೂ
ತರೆ ತರೆ ಬಂದ ಸಬ್ಬವದ ಮಾತುಗಳಂ ಗುಡಿಗಟ್ಟಿ ಕೇಳರೇ ॥ ೮೬

ವ॥ ಆಗಳ್ ಪಂಡಿತೆಯುಮಿಂತೆಂದು ಪೇೞಲ್ ತಗುಳ್ದಳ್:—ಅಂತು ನಿನ್ನ ಬರೆದ ಪಟಮಂ ಕೊಂಡುಪೋಗಿ ಮಹಾಪೂತಜಿನಾಲಯದ ಮುಂದೆ ನೆಱೆದಾಗಳೆನ್ನ ಪಸರಿಸಿದ ಚಿತ್ರಪಟಮೆಂಬ ದೀಹಕ್ಕೆ ಖೇಚರಭೂಚರಯುವಮೃಗಂಗಳೆಳಸಿ ಬಂದು,

ಇದು ದಲ್ ನೋಡ ಮನುಷ್ಯವಿದ್ಧಮಣಿಮುಲ್ತೀಗಂಡರೂಪಾವ್ರದಿಂ
ತಿದಱೊಳ್ ತಳ್ತಸದಿರ್ದ ಪೆಣ್ಸುರವಧೂಬಿಂಬಂ ದಲೀಚೆಲ್ವನ ।
ಪ್ಪಿದೆ ದಲ್ ದೇವವಿಮಾನದಂದಮಿದು ಪೇೞ್ ತಾನಾರ ವೃತ್ತಾಂತಮಾ
ರಿದನಿಂತಿಲ್ಲಿಗೆ ತಂದರೆಂದು ಪಿರಿದುಂ ಭ್ರಾಂತಿಂ ಜನಂ ನೋೞ್ಪುದುಂ ॥ ೮೭

ವ॥ ವಾಸವದುರ್ದಾಂತರೆಂಬರನೇಕಕ್ಷುದ್ರವಿದ್ಯಾಗರ್ವದುರ್ವಿದಗ್ಧರುಮಳೀಕವಿಚಕ್ಷಣರುಮಪ್ಪುದಱಿಂದಮದನನುಮಾನದಿಂದಮಱಿದು ಮೆಲ್ಲನೆ ಸಾರ್ದು ನೋಡುವಲ್ಲಿ ವಾಸವನದಂ ನೀಡುಂ ಭಾವಿಸಿ ನೋಡಿ,

ಬಗೆ ಪೋಯ್ತಿಂತಿದು ನಾಕಲೋಕವಿಭವಂ ಮದ್ವೃತ್ತಕಂ ತಪ್ಪದೀ
ಮೃಗಶಾಬೇಕ್ಷಣೆ ಮನ್ಮನೋರಮೆ ವಿಮಾನಂ ಮದ್ವಿಮಾನಂ ಮನಂ।
ಬುಗಲಾರ್ತತ್ತ್ವನಗೆಲ್ಲಿ[1] ಪುಟ್ಟಿದಳೊ ಮತ್ಪ್ರಾಣೇಶೆಯೆಂದಿಲ್ಲದು
ದ್ವೆಗವಮಂ ಭಾವಿಸಿ ತಾಳ್ದಿದಂ ಪಲವನಾಶ್ಚೈಲೂಷವೇಷಂಗಳಂ ॥ ೭೮

ವ॥ ಆಗಳ್ ಪರಿಹಿತಾಸ್ರವನಂತಿರ್ದ ವಾಸವನಂ ದುರ್ದಂತನಳೀಕೋ ದಂತಂಗಳನಾಱಿಸುತ್ತಿರ್ಪುದುಮಾಂ ಮೆಲ್ಲನಲ್ಲಿಗೆ ಪೋಗಿ,

ಏಕಿನಿತಾಕುಳಂ ಪ್ರಭುಗಿದಾದುದೊ ಪೂರ್ವಭವಾನುರಾಗವಿಂ
ತೀಕೆಯೊಳುಳ್ಳೊಡೆಮ್ಮ ಪಟಮೆಮ್ಮಯ ಕೂಸಿನ ಚಿತ್ರಮೆಯ್ದೆ ಪೇ।
ಳ್ದಾಕೆಯ ತನ್ನ ಬಯ್ಕೆಯುವಿನಾಣಮನೆಂಬುದುಮಾಗಳಾಕುಳ
ವ್ಯಾಕುಳರಾಗಿ ನಾಣ್ಚಿ ಜಗುೞ್ದಿರ್ದರುಮಂದೊಳಸಾರ್ದು ಪೋಪುದುಂ ॥

ವ॥ ಎಮ್ಮ ಪಾಸಿದ ಚಿತ್ರಪಟಮೆಂಬ ಬಲೆಯೊಳ್ ನಿಮ್ಮಂತಪ್ಪ ಬೆಳ್ಮ ಗಂಗಳಾಗಳೆ ತೊಡರ್ಗುಮುಸಿರದೆ ಬಿಜಯಂಗೆಯ್ಯಿಮೆಂದವಂದಿರಂ ನಕ್ಕು ಕಳೆಯೆ,

ರಟದಳಿವೃಂದಮೆಂತೆಱಗುಗುಂ ದಳಿತಾಂಬುರುಹಕ್ಕೆ ಗಂಧಲಂ
ಪಟತೆಯಿನಂತೆ ದಿಟ್ಟಿ ಮನಮೆಂಬಿವು ತೊಟ್ಟನೆ ನಟ್ಟು ನಟ್ಟವೊಲ್।
ಘಟಿಯಿಸೆ ಸೋಲಿತ್ತೊ ಱಲ್ದು ನಡೆ ನೋಪ್ಪೆಡೆಯೊಳ್ ಭವದೀಯರೂಪಲಂ
ಪಟವಿಟರಂ ಮರುಳ್ಗೊಳಿಸಿತುತ್ಕಟಮೋಹತಮಃಪಟಂ ಪಟಂ ॥ ೮೦

ವ॥ ಅನ್ನೆಗಂ ಗಂಭೀರತರತುರಗಹೇಷಾರವಬಧಿರಿತಸಕಳಭುವನವಿವರ ನುಂ ಕತಿಪಯಪದಾತಿಪರಿಜನಪರಿವೃತನುಂ ನಿರಂತರೋಚ್ಛ್ರಿತವಿಚಿತ್ರಚಂ ದ್ರಕಚ್ಛತ್ರಚ್ಛಾಯಾನಿರಾಕೃತಾತಪನುಂ ಶರನ್ನಿಶಾಸಮಯಸಮುದಿತತಾರಾ ತರಳಮುಕ್ತಾಭರಣಕಿರಣಚಂದ್ರಿಕಾಚಂದ್ರಕಬಳವಿಳಸಿತದಿಗಂಗನಾಮುಖ ನುಮಾಗಿ ಅಭಿನವೋದ್ಭಿದ್ಯಮಾನಮೃದುಕುಟಿಳಶ್ಮಶ್ರುಮಧುಕರಪಟಳಪ ರಿವೃತಮುಗ್ಧಮುಖಸರಸಿಜನುಂ ಮೃಗಮದವಿಲಿಖಿತವಿಚಿತ್ರಚಿತ್ರಪತ್ರಭಂ ಗಭಾಸುರಭುಜಶಿಖರನುಂ ಅತಿಸುರಭಿಸಹಕಾರಕಸ್ತೂರಿಕಪೂರಪಾಳಿಸ

---

[1] ಗ.—ಬುಗಲಾರ್ತಪ್ಪುದದೆಲ್ಲಿ.

ವ್ಮಿಶ್ರಿತಾಂಬೂಳರಾಗರಕ್ತಾಧರಪ್ರವಾಳಪ್ರಭಾ ಪ್ರಕಟಿತ ಪೂರ್ವಸಂಧ್ಯಾರಾಗನುಂ ಅಭಿನವಯೌವನಾವಷ್ಟಂಭಪ್ರಾಗಲ್ಭ್ಯದೃಷ್ಟಿಪಾತತೃಣೀಕೃತ ತ್ರಿಭುವನನುಮಪ್ಪನೊರ್ವಂ ರಾಜಕುಮಾರಂ ದೂರೋತ್ಸಾರಿತವಾಹನಂ ಸಸಂಭ್ರಮೋಪಗತಪರಿಚಾರಕಸ್ಕಂಧವಿನ್ಯಸ್ತವಾಮಹಸ್ತನಾಗಿ,

ಧನು ಕಾಮಂಗಿಕ್ಷುದಂಡಂ ಪೞಯಿಗೆ ಮಕರಂ ಬಾಣಸಂಘಾತಮಬ್ಜಂ
ನನೆಯೆಂಬೀಚಿಹ್ನವಿಲ್ಲೆಂಬನಿತೆ ಮನಸಿಜಾಕಾರಮಾಕಾರಮೇಂ ಜಾ।
ಣನೊ ಧಾತ್ರಂ ರೂಪನಿಷ್ಪಾದನವಿಧಿಯೊಳಮಂ ಮುನ್ನಮೇಂ ನೋಂಪಿಯಂ ನೋಂ
ತನೊಪೇಪೆಂಬಂತೆ ಬಂದಂಸುಕವಿಜನಮನೋಮಾನಸೋತ್ತಂಸಹಂಸಂ॥೯೧

ವ॥ ಅಂತು ಬಂದು,

ಉದಯಂಗೆಯ್ದಮೃತಾಂಶುಬಿಂಬಮೆರ್ದೆಗಂ ಕಣ್ಗಂ ಮಹೋತ್ಸಾಹದೊಂ
ದೊದವಂ ಮುಂದಿಡುವಂತೆ ತನ್ನ ಭುವನಪ್ರಖ್ಯಾತಸೌಂದರ್ಯದಿಂ।
ವಿದಿತೈಶ್ವರ್ಯದಿನೆನ್ನನಾಗಳೆ ದಲಂತೆಲ್ಲಂದದಿಂ[1] ಸೂಚಿತಾ
ಭ್ಯುದಯಂ ಜಾತದಯಂ ಮನಂಗೊಳಿಸಿದಂ ಸಂಸಾರಸಾರೋದಯಂ॥೯೨

ಗ॥ ಇದು ದೇವೇಂದ್ರಮುನೀಂದ್ರವಂದ್ಯಪರಮಜಿನೇಂದ್ರಮುಖ
ಚಂದ್ರವಾಕ್ಚಂದ್ರಿಕಾಪ್ರಸರಪ್ರಸಾದೋದೀರ್ಣಸೂಕ್ತಿ
ಕಲ್ಲೋಲಮಾಳಾಕೀರ್ಣಕವಿತಾಗುಣಾರ್ಣವ
ಪ್ರಣೀತಮಪ್ಪಾದಿಪುರಾಣದೊಳ್
ವಜ್ರಜಂಘದರ್ಶನವ್ಯಾವರ್ಣನಂ
ತೃತೀಯಾಶ್ವಾಸಂ
ಸಂಪೂರ್ಣಂ

1ಖ.—ವಿದಿತೈಶ್ವರ್ಯದಿನೆನ್ನನಾಗಳೆದಲೆಳ್ತಂದಂದದಿಂ.

ಚತುರ್ಥಾಶ್ವಾಸಂ.

ಶ್ರೀಮಜ್ಜಿನಭವನಮನಖಿ
ಳಾಮರನರಖಚರಚಕ್ರವರ್ತಿಸ್ತುತಮಂ ।
ಮೂಮೆ ಬಲಗೊಂಡು ಭವ್ಯಶಿ
ಖಾಮಣಿಯೆನಿಸಿದ ಸರಸ್ವತೀಮಣಿಹಾರಂ ॥ ೧

ತ್ರಿಕರಣಶುದ್ಧಿಯೊಳಾರಾ
ಜಕುಮಾರಂ ಮಾರಮಥನನಂ ಸ್ತುತಿಯಿಸಿ ತ ।
ತ್ಪ್ರಕಟಫಲಪ್ರಾಪ್ತಿಗೆ ಸಂ
ಚಕರಂಗೊಳ್ವಂತೆ ಸಿದ್ಧಶೇಷೆಯನಾಗಳ್ ॥ ೨

ಕೊಂಡು ಜಿನಭವನದಿಂದಾ
ಖಂಡಳನಿಭವಿಭವನಿರದೆ ಪೊಱಮಟ್ಟದಿರೊಳ್ ।
ಕಂಡಂ ನೆರೆದು ನಿಗುಂಬಿಸಿ
ತಂಡಂಗೊಂಡಿರ್ದ ನರರ ಖಚರರ ಗುಂಡಂ ॥ ೩

ವ॥ ಕಂಡೀನೆರೆದ ನೆರವಿ ವಿಸ್ಮಯಂಬಟ್ಟದೇನಂ ನೋಡಿದಪ್ಪುದೇನಾನುಮೊಂದು ಕೌತುಕಮಾಗಲೆ ವೇೞ್ಕುಮೆಂದೆಯ್ದೆ ವಂದು ನೋೞ್ಪನ್ನೆಗಮಲ್ಲಿ ಪಸರಿಸಿದ ಚಿತ್ರಪಟಮಂ ಭೋಂಕೆನೆ ಕಂಡು,

ರಸಭಾವಂಗಳೊಳಾದ ಚೆಲ್ವು ನುಡಿವಂತಾದಱ್ಕಱಿಂ ನೋಡುವಂ
ತುಸಿರ್ವಂತಿರ್ದುದು ರೇಖೆ ಕೋಮಳತೆಯಂ ತಾಳ್ದಿತ್ತು ವರ್ಣಕ್ರಮಂ ।
ರಸವತ್ಕಾಂತಿಯನಾಂತು ನಿಂದುದೆಸೆವೀನಿಮ್ನೋನ್ನತಂಗಳ್ ವಿರಾ
ಜಿಸಿ ಚೆಲ್ವಿಂ ಗೆಡೆಗೊಂಡುವಿಂತು ಬರೆಯಲ್ಬ್ರಹ್ಮಂಗಮೇಂ ಬರ್ಕುಮೋ

ವ॥ ಎಂದು ಮುನ್ನಂ ವಿಚಿತ್ರಚಿತ್ರವಿದ್ಯಾಕೌಶಲಮನತಿಕುತೂಹಳೋತ್ತಾರಿತಲೋಚನನಾಗಿ ನೀಡುಂ ಭಾವಿಸಿ ನೋಡಿ,

ಇದಱಂದಂ ಬಿಸವಂದಮಿಂತಿದಮರೇಂದ್ರಾವಾಸದೊಂದಂದಮಿಂ
ತಿದು ದಲ್ ದೇವವಿಮಾನದಂದಮಿದು ದೇವಾನೀಕದೊಂದಂದಮಿಂ ।

ತ್ರಿದು ದೇವಾಂಗನೆಯರ್ ಪಲರ್ ಬಳಸಿ ಕೊಂಡಿರ್ದಂದಮೀತಳ್ತ ರೂ
ಪಿದು ದಲ್ ದೇವನ ದೇವಿಯಂದಮಿದು ಪೇೞ್ ಮುನ್ನೆಲ್ಲಿ ಕಂಡಂದಮೋ॥ ೫

ವ॥ ಎಂದು ಬಗೆದಿರುಳ್ಕಂಡ ಕನಸಂ ಮಱುದೆವಸಂ ನೆನೆವಂತೆ ನಿರತಿಶಯಸುರಲೋಕಸಮುದ್ಭವಸುಖಾನುಭವಮನಾಗಳೆ ನೆನೆದು,

॥ ಪೃಥ್ವಿ ॥

ಎಲೇ ಬಗೆದೆನೀಗಳೀಬರೆದ ಕಲ್ಪಮೀಶಾನಮೀ
ಚಲಲ್ಲುಳಿತಕೇತನಂ ಸುರವಿಮಾನಮಾಶ್ರೀಪ್ರಭಂ ।
ಸಲೀಲವದನಾರವಿಂದಮಿದು ದೇವವೃಂದಂ ಲಸ
ದ್ವಿಲಾಸದರಹಾಸರಮ್ಯಮಿದು ದಿವ್ಯಕಾಂತಾಜನಂ ॥ ೬

ಇದೆಂದು ಲಲಿತಾಂಗದೇವನೆನೆ ಸಂದ ಮದ್ರೂಪಮೀ
ಮದಾಲಸವಿಲೋಲಲೋಚನೆ ದಲೆನ್ನ ಮಾದೇವಿ ತ ।
ಪ್ಪದೀಲಲನೆ ತತ್ಸ್ವಯಂಪ್ರಭೆಯೆ ನೋಪೆಪ್ಪೊಡೀಚಿತ್ರಮಿಂ
ತಿದಾಕೆಯದೆ ಬಲ್ಮೆ ಪೇೞ್ ಪೆಱರ್ಗಮಿಂತುಟೊಂದಕ್ಕುಮೋ ॥ ೭

ಇದೆನ್ನಯ ವಿಮಾನಮಂ ಬಳಸಿ ತಳ್ತ ಪುನ್ನಾಗನಾ
ಗದಿವ್ಯತರುನಂದನಂ ಲತೆಯ[1] ಜೊಂಪಮೀತೋರ್ಪುದೆ ।
ನ್ನದಲ್ತೆ ನೆರೆದಿರ್ಬರಿರ್ದ ಕೃತಕಾಚಳಂ ಚೆಲ್ವನ
ಪ್ಪಿದೇ ಕನಕಪದ್ಮಿನೀನಿಳಯಮೆನ್ನ ಲೀಲಾಸರಂ ॥ ೮

ಇದು ಲೀಲಾಂದೋಳಮಿಂದೋಳದ ದನಿ ನೆಱೆಗೊಳ್ವನ್ನೆಗಂ ಪಾಡಲೆಂದೇ
ಱದಳಂ ತೂಗುತ್ತುಮಿರ್ದೆನ್ನಯ ಪರಿಜೆದುವೇ ಮಾಧವೀಮಂಟಪಂ ತೋ
ರ್ಪುದಿದಂತೇಕಾಂತದೊಳ್ ನೂಪುರರವವಿಳಸದ್ವಾಮಪಾದಪ್ರಹಾರ
ಕ್ಕಿದಱೊಳ್ ಪಕ್ಕಾಗಿ ಗೋತ್ರಸ್ಖಲನೆ ನೆಗಪೆಪೂಮಾಲೆಯಿಂ ಮೋದುವೆತ್ತಂ

ವ॥ ಮತ್ತಮಮರಸಮಿತಿವೆರಸೋಲಗಂಗೊಟ್ಟಿರ್ದಲ್ಲಿ ಮದೀಯಸಿಂಹಾಸನಾರ್ಧೈಕದೇಶಮನಳಂಕರಿಸಿ ಪದವಡೆ ಸೋಂಕಿ ಕುಳ್ಳಿರ್ದ ರೂಪು

[1]ಗ.—ಕಳೆಯ.

ಮನಮಮರಾಂಗನೆಯರ ಬೀಸುವ ಚಾಮರದ ಗಾಳಿಯುಲಂಪಿನೊಳಲ್ಲುಗುವ ಬಂಬಲ್ಗುರುಳ್ಗಳ ಬಂಬಲಿಂದಂ ತಳರ್ವ ಚೆನ್ನಪೂಗಳನವಯುವದೊಳ್ ಸಯ್ತುಮಾಡುವ ಕೆಯ್ತಮುಮಂ, ಅಮರೀಮಧುರಗೀತನಿನಾದಕ್ಕಾದಮೊಱಲ್ದಿರ್ದ ಶಿರಃಕಂಪದೊಳನಿಸಾನುಮೆಱಗಿದ ಕರ್ಣಪೂರಪಾರಿಜಾತಸ್ತಬಕಮನೋಸರಿಸುವ ವಿಳಾಸಮುಮಂ, ಕನಕಕದಳೀವನದೊಳಗಣ ಮಣಿಮಯಭವನದೊಳಗೆ ಪರಿಮಿತಪರಿಜನಸಹಿತಮೆನ್ನ ಮನಮೊಱಲ್ವಿನೆಗೆಮೆನ್ನ ಸೋಂಕಿನೊಳ್ ಕುಳ್ಳಿರ್ದು ವೀಣೆಯಂ ಬಾಜಿಸುವ ರೂಪಮುಮಂ ಅಚ್ಯುತೇಂದ್ರಪೂಜಾವಿಳಾಸಮುಮಂ ಮಂದರಕಂದರವಿಹಾರಮುಮಂ ಇಲ್ಲಿಯೇ ಕಾಣಲಾದಪುದೆಂದೇ,

ಬದವಿದ ಬೇಟದತ್ತಳಗದೊಳ್ ಮುಳಿಸಂ ಪುರುಡುಂಟು ಮಾಡೆ ಜ
ರ್ವಿದ ಕಡೆಗಣ್ಣ ಜರ್ಬುಗಳೊ ಮೋದಿದ ನೀಳಸರೋಜಮಾಳೆಯಿಂ ।
ದುದಿರ್ದುಮದಂಗದೊಳ್ತೊಡರ್ದುತೋರ್ಪವಳಂಗಳೊ ಪೇೞಿಮಾಪುದೆಂ
ಬುದನೆನೆ ಕಾದಿ ಮೋದಿದವಿನಾಣಮದಿಲ್ಲಿ ದಲಿಲ್ಲ ನಲ್ಲಳಾ ॥ ೧೦

ವ॥ ಮತ್ತಮೊರ್ವೞ್ ಮಣಿಮಯಸುರತಭವನದೊಳಗೆ ನಿರ್ಭರಪ್ರಣಯಕಲಹಕಲುಷಪರವಶೆಯಾಗಿ,

ಮುಳಿದಿರೆ ಪಾದಪಂಕಜಮನಾಂ ತಲೆಯೊಳ್ ನಿಲೆ ತಾಳ್ದ ನಲ್ಲಳೇ
ತಿಳಿಯೆನೆ ನಲ್ಲಳೆನ್ನ ಪೆಸರಲ್ತೆಮಗಾಪೆಸರಾಕೆಯುಳ್ಳೊಡಂ ।
ತಿಳಿಪೆನೆ ಮತ್ತಮಾಪೆಸರ್ಗೆ ನೀನಿರೆ ನೋಂತವಳಾವಳೆಂಬುದುಂ
ತಿಳಿದಮರ್ದಪ್ಪಿದಂದಮಣಮಿಲ್ಲ ದಲೀಪಟದೊಳ್ ಮೃಗಾಕ್ಷಿಯಾ ॥ ೧೧

ವ॥ ಮತ್ತಮೊರ್ವೞ್ ಪಂಚರತ್ನಪ್ರಭಾಪ್ರಸಾಧಿತಪ್ರಸಾಧನಶಾಲೆಯೊಳಗೆ ಸ್ವಯಂಪ್ರಭೆಯನಾನೆ ಪಸದನಂಗೊಳಸುತ್ತುಮಿರ್ದು,

ಚಳದಳಕಾಳಿ ನಿನ್ನ ವದನಾಂಬುಜಮಂ ನಡೆ ನೋಡಲೀಯದ
ವ್ವಳಿಸುವುದಾಪರಿಷ್ಕಕದೊಳೆನ್ನನಿವೆಂದು ಕನಲ್ದು ಚೆನ್ನಪೂ ।
ಗಳನವಱೊಳ್ ತಗುಳ್ಚದೆ ಮೃಗೋದ್ಭವಪಂಕದೆ ಪತ್ರಭಂಗಮಂ
ತೊಳಪ ಕದಂಪಿನೊಳ್ ಬರೆದುದಂ ಬರೆಯಲ್ ಮಱೆದಂದಮಾವುದೋ ॥ ೧೨

ವ॥ ಮತ್ತಮೊರ್ವ್ವಂ ಮಂದಪವನಾಂದೋಳಿತವಿಮಾನೋಪವನದೊಳಗೆ ಪಸರಿಸಿ ಕುಸುಮಿಸಿದ ಕುಸುಮದೆಸಳ ಮಿಸುಗುವ ಪೊಸಪಸೆಯೊಳಸೆದಳಮೆಸೆಯೆ ಪಸರಿಸಿ ಪೊಸಯಿಸಿದ ಪೊಸಸುಸಿಲ ಮಸಕದ ಬಸದೊಳ್ ಬಸದಾಗಿಯುಮಸಿಯಳ್ನಗಸವಸದೊಳ್ ಬೆಸೆದು ಪೋಗಿ,

ಮಱಿಗೊಳ್ ಪೂತ ಕಲ್ಪಲತೆಯಂ ಲಲಿತಾಂಗಿಯೆ ಗೆತ್ತಲಂಪಿಸಿಂ
ದೆಱಗುವುದುಂ ಲತಾಂಗಿ ಮುಳಿಸಿಂ ಲತೆಯಂ ಲಲಿತಾಂಗಿಗೆತ್ತು ನೀಂ ।
ನೆಱಗಿದೆಯೆನ್ನ ಪಕ್ಕದೆ ಪೆಱಳ್ಗೆನೆ ಬೆರ್ಚಿ ಲತಾಂಗಿಗಾಗಳಾ
ನೆಱಗಿದೆನಾದುದಾಲತೆಯಿನಚ್ಚಿಗಮಿಂತೆನಗಂ ಲತಾಂಗಿಗಂ ॥ ೧೩

ವ॥ ಇಂತಿವು ಮೊದಲಾಗೆ ಪೆಱವುಮನ್ನಾಕೆಯುಱಿಕೆಯುವಿನಾಣಂಗಳ್ ಕೆಲವು ಬರೆದುವಿಲ್ಲೆಂದದನಾಕೃಷ್ಟದೃಷ್ಟಿಪ್ರಸರನುಮಚಳಿತಪಕ್ಷ್ಮವಿಸರನುಮಕಂಪಿತಭ್ರೂವಿಭ್ರಮನುಂ ಪ್ರಕಟಿತಚಿತ್ತವಿಭ್ರಮನುಂ ಅತಿಪ್ರಬಳಸ್ವೇದಜಳಪ್ರಕ್ಷಾಳಿತನುಂ ಕುಸುಮಶರಶಲಾಕಾಕೀಲತನುಮಾಗಿ,

ತರಳಾಪಾಂಗವಿಳಾಸ
ಸ್ಫುರಿತಮೆ ಲೆಕ್ಕಣಿಕೆಯಾಗೆ ನಲ್ಲಳ್ ಮುನ್ನಂ ।
ಬರೆದತನುಚರಿತಮೀಗಳ್
ಬರೆದಂತಿರ್ದಪುದು ಮನ್ಮನಃಪುಸ್ತಕದೊಳ್ ॥ ೧೪

ವ॥ ಎಂದು ತನ್ನೊಳೆ ಬಗೆದು ಸಂಕಲ್ಪಸಮಾಗಮಸುಖಮನನುಭವಿಸಿ,

ಪದಪು ಮನಕ್ಕೆ ಪೊಕ್ಕು ನಯನಕ್ಕೆಸೆಯುತ್ತಿರೆ ಚುಂಬನಾಭಿಲಾ
ಷದ ತನಿಗಿತ್ತು ಬಾಯ್ಗೆ ಬಳಸಲ್ ಪದೆದಪ್ಪುಱಳುರ್ಕೆ ತೋಳ್ಗೆವಂ ।
ದೊದವಿರೆ ನಾಣನೊಕ್ಕೆರ್ದೆ ವಿಚಿತ್ರವಿಕಾರರಸಾಂತರಾಂಗದೊಳ್
ಪುದಿದಿರೆ ಮಾಣದಾಡಿಸಿದನಾತನನಂಗಜನೆಂಬ ನಟ್ಟುವಂ ॥ ೧೫

ವ॥ ಆಗಳ್ ಕದಂಬಸ್ತಕಕರ್ಣಪೂರಾಯಮಾನರೋಮಾಂಚಕಂಚುಕಿತಕಪೋಲಮೂಳಸ್ಥಳನಿಶ್ವಾಸಕಲ್ಲೋಳನತಿಸೂಕ್ಷ್ಮಪಾಳಿಪರಿಚ್ಯುತತರಳತರನಯನೋದಬಿಂದುಸಂದೋಹಮೋಹರಸವಶಗತನಾಗಿ,

ಪ್ರಿಯದಯಿತೆಯೆನಾಂ ನಿನಗಂ
ಬೆಯೆಂದು ನೀನೆನ್ನನಿಂತಗಲ್ದಿರ್ಪುದೆ ವಿ।
ಸ್ಮಯಮಂ ಮಾಡಿದಪುದು ಹಾ
ಸ್ವಯಂಪ್ರಭೇ ಎಂದು ಮೂರ್ಛೆವೋಪುದುಮಾಗಳ್ ॥ ೧೬

ಪರಿಜನಮನಿತುಂ ತುರಿಪದೆ
ಪರಿತಂದಿನ್ನೇವೆವೆಂದು ಕಪ್ಪುರದ ರಜಂ
ಬೆರೆದ ಕರಕಾಂಬುವಂ ತಳಿ
ದರವುರನೆಟ್ಟಿಱಿಸೆ ಮೂರ್ಛೆ ತಿಳಿಬು ಕುಮಾರಂ ॥ ೧೭

ವ॥ ಈಪಟವುನಿಲ್ಲಿಗಾರ್ತಂದರೆಂಬನ್ನೆಗಂ ಭವದೀಯಪ್ರಾಣವಲ್ಲಭಂ ಲಲಿತಾಂಗಚರವಜ್ರಜಂಘನೆಂಬುದನಾಂ ಮುನ್ನವೆ ತಿಳಿದಾನುಮಾಮಹಾನುಭಾವನಂ ಬೇಗಮೆಯ್ದೆ ಪೋಗಿ,

ತುದಿಯೆಯ್ದಿತ್ತೆನಗೆನ್ನ ಪೂಣ್ಕೆ ನಿನಗಂ ಪುಣ್ಯೋದಯಂ ಸಾರ್ಚೆ ಬಂದುದು ಧಾತ್ರಂಗಮುಳಂಕೆಗೊಂಡು ಪಿರಿದುಂ ಚಿಂತಾಂತರಂ ಪೋಯ್ತು ಕೂ।
ಡಿದುದಾಶ್ರೀಮತಿಗಂ ಮನೋರಥಫಲಂ ಶ್ರೀವಜ್ರದಂತಂಗಮಾ
ದುದು ರಾಗೋತ್ಸವ[1]ಮೆಲ್ಲಮಿಲ್ಲಿಗೆ ಜಯಂ ಭದ್ರಂ ಶುಭಂ ಮಂಗಳಂ ॥೧೮

ವ॥ ಎಂಬುದುಮಾವಿಳಾಸರಸವಾರಾಶಿ ವಿಸ್ಮಯಸ್ಮೇರಮುಖಚಂದ್ರಸಾಂದ್ರಚಂದ್ರಿಕಾಮೃತಾಚ್ಛಜಳಶಿಶಿರಶೀಕರಂಗಳೊಳ್ ಮುನ್ನಮೆನ್ನ ಮನಮಾಱುವಿನಮುನ್ನಮಿತ್ತೈಕಭ್ರೂಲತಾವಿಳಾಸನಂತೆಂಬುದನೆಂಬುದುಂ ನೀಂ ಲಲಿತಾಂಗಚರನಪ್ಪುದಱಿಂದಂ[2] ಸ್ವಕೀಯಪ್ರಾಣೇಶ್ವರಿ ತತ್ಸ್ವಯಂಪ್ರಭಾದೇವಿ ನಿಮ್ಮ ಮಾವಂ ವಜ್ರದಂತಚಕ್ರವರ್ತಿಗಂ ನಿಮ್ಮತ್ತೆ ಲಕ್ಷ್ಮೀಮತಿ ಮಹಾದೇವಿಗಂ ಶ್ರೀಮತಿಯೆಂಬ ಮಗಳಾಗಿ ಪುಟ್ಟಿದಳ್.

ಅದು ದಿವಿಜೇಂದ್ರಲೋಕಮಿದು ಮನ್ಮಥರೂಪ ಮನುಷ್ಯಲೋಕಮೆಂ
ಬಿದುವೆ ವಿಕಲ್ಪಮಲ್ಲಿ ಸುರಕಾಂತೆ ದಲಿಲ್ಲಿ ಮನುಷ್ಯಕಾಂತೆಯೆಂ।
ಬಿದುವೆ ವಿಕಲ್ಪಮಲ್ಲದೆ ವಿಳಾಸದ ಕೆಯ್ತದ ರೂಪು ಸೋಲ್ತು ನೋ
ಡಿದರ ಮನಕ್ಕಣಂ ಪಡೆಯದಲ್ತೆ ವಿಕಲ್ಪಮನಲ್ಪಮಧ್ಯೆಯಾ ॥ ೧೯

[1] ಗ.—ದುದಾರೋತ್ಸವ. [2] ಖ.—ಚರದೇವನೆಯಪ್ಪುದರಿಂದಂ.

ಲತೆಯುಂ ಕರ್ಣೆಯ್ದಲುಂ ಸೋಗೆಯುಮಂತನುಧನುರ್ಲೇಖೆಯುಂ ವಿದ್ರು
[ಮೋದ್ಯ
ದ್ದ್ಯುತಿಯುಂ ಮುಕ್ತಾಕಳಾಪಸ್ಫುರಿತಮುಮೆಸೆದತ್ತಿತ್ತ ಬಂದಿರ್ದುವೆಂದೊಂ
ದುತಮಂ ಕೈಕೊಳ್ವಿನಂಕೋಮಲತನುವಲರ್ಗಣ್ ನೀಳ್ದಧಮ್ಮಿಲ್ಲಮುದ್ಭ್ರೂ
ಲತೆ ಸದ್ದಂತಚ್ಛದಂ ದಂತರುಚಿ ರುಚಿರಶೋಭಾಕರಂ ವಜ್ರಜಂಘಾ ॥ ೭೦

ಬಳಪೊಯ್ಯಲ್ ನಿನ್ನನಾಕನ್ನೆಯತುಱುಗೆಮೆಗಳ್ ಸುತ್ತಲುಂ ನಿನ್ನನಾಕೋ
ಮಳೆಯುಂದಂಬೆತ್ತ ಸುತ್ತುಂಗುರುಳಳವಡಿಸಲ್ ನಿನ್ನನಾತನ್ವಿಯೆತ್ತಂ।
ಬಳೆದುತ್ತುಂಗಸ್ತನಂ ಮಾಣ್ದಿರದೆ ಬಳಸಲಿಂ ನಿನ್ನನಾಕಾಂತೆಯಂತಾ
ನಳಿತೋಳ್ಗಳ್ ಪಕ್ಕುವಾರ್ದಿರ್ದುವು ಪಿರಿದುತೊಡರ್ಪಾದುದಿನ್ನೆತ್ತಪೋಪೈ

ವ॥ ಮತ್ತಮಾಕೆ ನೀಲೋತ್ಪಳದಳನಯನೆಯುಂ ಕುಂದಕುಟ್ಮಲದಶ
ನೆಯುಂ ಶಿರೀಷದಾಮಕೋಮಳಬಾಹುಯುಗಳೆಯುಂ ಕಮಳದಳಕೋ
ಮಳಕರತಳೆಯುಂ ಪಕುಳಮುಕುಳಸುರಭಿನಿಶ್ವಾಸೆಯುಂ ಚಂಪಕದಳದಾ
ಮಾವದಾತೆಯುಮಾಗಿ ಕುಸುಮಸುಕುಮಾರತನುವಪ್ಪುದಱಿಂದತನುಪರಿ
ತಾಪಮಂ ಸೈರಿಸಲಾಱದೆ ನಿನ್ನೊಳಾದ ವೃತ್ತಾಂತಮನೀಪಟದೊಳ್ ಬರೆದು
ಆಂ ತನಗೆ ಪರಮವಿಶ್ವಾಸಭೂಮಿಯೆನಾಗಿ ಕಿಱಿಯಂದಿಂದಿತ್ತ ನಡಪಿ
ದೋದಿಸಿದ ದಾದಿಯೆನಪ್ಪುದಱಿಂ ಪಂಡಿತೆಯೆಂಬ ಬಱಿಯಪೆಸರಲ್ಲದೆ ರಾಜ
ಕುಳಸತತಸಂವಾಸಪ್ರಾಪ್ತಪ್ರಾಗಲ್ಭ್ಯತೆಯುಮುಳ್ಳುದಱಿಂದಮೀಪಟಮಂ
ಪ್ರಾಣಮನೆ ಕೈಯೆಡೆಗುಡುವಂತೆನ್ನ ಕೈಯೊಳ್ಕೊಟ್ಟು ಮದೀಯಪ್ರಾಣ
ವಲ್ಲಭನನೆಲ್ಲಿಪೊಕ್ಕುಮೆಲ್ಲಂದದೊಳಮಱಸೆಂದಟ್ಟಿದೊಡೆ ಬಂದಿದನಿಲ್ಲಿ ಪಸ
ರಿಸಿ ಪಾಳ್ಪಕ್ಕೆವಟ್ಟಿರ್ದೆಂ, ಮದೀಯಕಾಯಕ್ಲೇಶಫಳಮುಂ ಜನ್ಮಫಳಮು
ಮೆನಗಿಂದು ನಿನ್ನ ಬರವಿನಿಂದಂ ಸಫಳಮಾದುದೆಂಬುದುಂ ತೆಂಕಣೆಲರಲೆ
ಪದಿಂದಂಕುರಿಸಿದ ಚೂತದಂತೆ ಆತಂ ರೋಮಾಂಚಕಂಚುಕಿತಶರೀರನಾಗಿ,

ನಿನಗಾನೇನೆಂಬೆನೆನ್ನಿರ್ದಿರವನಱಿದು ನೀನಿರ್ದೆಯಿನ್ನಾಕೆಗಂ ನೀಂ
ಮನದನ್ನೈತೋಱು ನಿನ್ನೀಪಟಮನೆನಗದಂ[1] ನೋಡಿ ಮತ್ಕಾಂತೆಯುಂ ಕಾ।
ಣ್ಬೆನೆಗಂ ಸೈರಿಪ್ಪೆನೆನ್ನೀಬರೆದ ಪಟಮುಮಂ ಕೊಂಡು ಪೋಗಾಕೆಗೆಂದಿಂ
ತಿನಿತುಂ ವೃತ್ತಾಂತಮಂ ನಿನ್ನಿನಿಯನಱಿಯೆ ಪೇಳ್ದಟ್ಟಿದಂ ಲೋಲನೇತ್ರೇ॥

[1] ಕ—ಮನದನ್ನ ಕೈತ್ತೋಱಿನಿನ್ನೀ ಬರದಪಟಮದಂ.

ವ॥ ಎಂದು ಮನಃಪ್ರಿಯತಮನ ಬರೆದ ಸಾಭಿಜ್ಞಾನಪಟಮನೀವುದು ಮಾಕೆಯುಮುದಂ ನಿಮಿರ್ಚಿ ನೋಡಿ,

ಅವಿನಾಣಮನಿತುಮೆರ್ದೆವುಗೆ
ಕಿವಿವುಗೆ ಪಂಡಿತೆಗೆ ನುಡಿದ ನಲ್ಲನ ನುಡಿ ತ ।
ಳ್ತವಿರಳರೋಮಾಂಚದೆ ಮಾ
ಧವಸಮಯದೊಳಲರ್ದ ಚೂತಲತೆಯನೆ ಪೋಲ್ತಳ್ ॥ ೭೩

ವ॥ ಅನ್ನೆಗಮತ್ತ ಶ್ರೀಮತಿವಜ್ರಜಂಘರ ಜನ್ಮಾಂತರಸ್ನೇಹರಸಾಮೃತ ಪಾತ್ರಚಿತ್ರಪಟವ್ಯತಿಕರಮಂ ವಜ್ರಜಂಘಾನುಚರರಿಂದಮಱಿದು ವಜ್ರಬಾಹುಮಹೀನಾಥಂ ನಿಜತನೂಜಗುಣಮಣಿಮಾಲೆಗೆ ತತ್ಕನ್ಯಾರತ್ನಮಂ ನಾಯಕಮಣಿಮಾಡಲೆಂದಾತ್ಮೀಯವಿಳಾಸಂ ಬೆರಸು ಬಂದು ಪುಂಡರೀಕಿಣಿಗೆ ಮುಂದಟ್ಟಿದ ದೂತಂಗೆ ಪ್ರೀತನಾಗಿ ಮೆಚ್ಚಿ ಮೆಚ್ಚಿತ್ತು ವಜ್ರದಂತ ಚಕ್ರವರ್ತಿಯುಮನಂತಸಾಮಂತಾಂತಃಪುರಪರಿವಾರಪರಿವೃತನುಂ ಬಂಧುರಗಂಧಸಿಂಧುರಾರೂಢನುಮಾಗಿ,

ಕರಿಸೇನಾಸಾರಿನದ್ಧೋತ್ತರಳಕದಳಿಕಾಕಾನನೋಚ್ಚುಂಬ್ಯಮಾನಾಂ
ಬರಚಕ್ರಂ ವಾಜಿರಾಜಿಶ್ರವಣಚಮರಜಶ್ರೇಣಿಸಂವೀಜಿತಾಶಾಂ ।
ಬರಭಾಗಂ ಪತ್ತಿಶಸ್ತ್ರದ್ಯುತಿಪರಿಕರಸಾಂದ್ರೀಭವಚ್ಚಂಡರೋಚಿಃ
ಕಿರಣೌಘಂ ವಜ್ರಬಾಹುಕ್ಷಿತಿಪತಿಗಿದಿರಂ ಬಂದನುತ್ಸಾಹದಿಂದಂ ॥ ೭೪

ವ॥ ಅಂತತಿಪ್ರೀತಿಯಿಂ ವಜ್ರಬಾಹುಕ್ಷಿತಿಪತಿಗಿದಿರ್ವೋಗಿ ನಿಜವಿಜಯಗಜದಿನಿೞಿದು ತನಗೆ ಪೊಡೆವಟ್ಟ ವಜ್ರಬಾಹುವನಾಶೀರ್ವಾದಪುರಸ್ಸರವಪ್ಪಿಕೊಂಡಾತ್ಮೀಯಶಿಖಂಡಮಣಿಮರೀಚಿಗಳಂ ನಿಜಪದಕಮಳದೊಡನೆ ವಸುಂಧರೆಯುಮನಳಂಕರಿಸಿದ ವಸುಂಧರೆಯುಮಂ ನಿಜಾನುಜೆಯುಂ ಪರಸಿ ವಿನಯವಿನಮಿತಮಣಿಮಕುಟನಾದ ವಜ್ರಜಂಘನನನೇಕಭೋಗಭಾಗಿಯಾಗೆಂದು ಪರಸಿ ಪಿರಿದುಮಚ್ಚುಱಿನೊಳ್ತಕ್ಕೈಸಿಕೊಂಡು ನಿಜವಿಜಯಗಜೇಂದ್ರಮನೇಱಿಸಿ ಮುಂದಿಟ್ಟೊಡಗೊಂಡುಬರೆ ಪುರಜನಂಗಳುತ್ತುಂಗಪ್ರಾ

ಸೌದಕೂಟಕೋಟಿಗಳುಮನುದಗ್ರ ಸೌಧೋಪರಿಮತಳಂಗಳು ಮನೇಱಿ ನೋೞ್ಪಲ್ಲಿ,

ಪುದಿದೀಶ್ವೇತಾತಪತ್ರೋತ್ಕರದ ನಡುವಣಿಂ ವಜ್ರದಂತಂ ಸಮಂತೆ
ತ್ತಿದ ಪಿಂಛಚ್ಛತ್ರಷಂಡಂಗಳ ನಡುವೆಸೆವಂ ವಜ್ರಬಾಹುಕ್ಷಿತೀಶಂ ।
ಮದಗಂಧಭ್ರಾಂತಭೃಂಗಾವಳಿವಳಯಿತಮತ್ತದ್ವಿಪಂ ಕೂಡೆ ಮಿಂಚಿಂ
ಪುದಿದತ್ತೆಂಬಂತೆ ಕೂರಂಕುಸದ ಪೊಳಪನಾತೋಱುವಂ ವಜ್ರಜಂಘಂ ೭೫

ವ॥ ಎಂದು ತಮ್ಮೊಳೋರೊರ್ವರೊಳ್ ನುಡಿಯುತ್ತುಂ ಪೌರಜನಂಗಳ್ ಸೂಸುವ ಲಾಜವರ್ಷಮುಮಂ ಕುಸುಮವರ್ಷಮುಮಂ ಆಂತುಕೊಳುತ್ತುಂ ಮುತ್ತಿನ ಮುಱಿದ ಲಂಬಣಂಗಳ್ವಿರಸೆಳೆಲ್ವ ಪಚ್ಚೆಯ ಸರದ ಹಾರದ ತೋರಣಂಗಳಂ ನುಗುಳುತ್ತುಂ ಬಂದು ರಾಜಮಂದಿರಮಂ ಪೊಕ್ಕು ಕರುಮಾಡದ ಕೆಲದ ಮಾಡದೊಳ್ ವಜ್ರಬಾಹುನೃಪನನಿರಿಸಿ ಮಜ್ಜನಭೋಜನತಾಂಬೂಲಾಂಬರಾನುಲೇಪನಭೂಷಣಾದಿವಿವಿಧವಿಶೇಷಸತ್ಕಾರಂಗಳಂ ಸಂತಸಂಬಡಿಸಿ ನಾನಾವಿನೋದಂಗಳಂ ತೋಱಿ ವಜ್ರದಂತಚಕ್ರವರ್ತಿ ನಿನಗಾವುದು ಮನೋರಥಮದಂ ಬೇಡಿಕೊಳ್ಳೆನೆ,

ಎನಗರಿದುಂಟೆ ನಿಮ್ಮ ದಯೆಯಿಂದುಱಿದಾವುದುಮೆಲ್ಲಮುಂಟು ನೀ
ನೆನಗೆ ನರೇಂದ್ರಮೌಳಿಮಣಿರಾಜಿವಿರಾಜಿತಪಾದಪೀಠ[1] ನೆ ।
ಟ್ಟನೆ ದಯೆಗೆಯ್ವೊಡೀನಿಜತನೂಜೆಯನುತ್ಸವಮಂಗಳಾನಕ
ಧ್ವನಿ ದೆಸೆಯಂ[2] ಪಳಂಚಲೆವಿನಂ ನೆರಪೀಗಳೆ ವಜ್ರಜಂಘನೊಳ್ ॥ ೭೬

ವ॥ ಎಂಬುದುಂ ಚಕ್ರಧರನಧರಕಿಸಲಯದ ಮೇಲೆ ದಂತಕಾಂತಿಲತಾಂತಪ್ರಭೆಗಳ್ ಪಸರಿಸೆ,

ಬಡೆಯುಂ ಕೂಸಿಂಗದೊಂದೇಕುಲದಚಲದ ಪೆಂಪೊಂದೆ ಚೆಲ್ವೊಂದೆ ಸಂದೊ
ಳ್ಪುಡಿಯೊಂದೇ ವಿದ್ಯೆಯೊಂದೇ ಪುದಿದೊದವಿದ ಜನ್ಮಾಂತರಸ್ನೇಹಮೊಂದೇ
ನುಡಿಯಲ್ಪಿಕ್ಕಲ್ಕದೊಂದಲ್ತೆ[3] ನಲೆಡೆ ಪೆಱರ್ಗಿನ್ನಿಲ್ಲ ಮುನ್ನಾ ವಿಧಾತ್ರಂ
ಕುಡಲಿರ್ದಂ ಕನ್ನೆಯಂ ಪೇೞ್ ನಿನಗಮೆನಗಮೇಂದಂದುಗಂ ವಜ್ರಬಾಹೂ॥

---

[1]ಗ.—ನರೇಂದ್ರಮೌಳಿಮಣಿರಾಜಿತಪಾದಪಯೋಜಪೀಠ. [2]ಗ.—ಕಿವಿಯಂ.
[3]ಗ.—ನುಡಿಯಲ್ಕೈಕಲ್ಪದಂತಲ್ತೆ.

ವ॥ ಅಂತುಮಲ್ಲದೆಯುಂ,

ಬಾಲಸಹಕಾರತರು ನವ
ಮಾಲಿಕೆಗತಿಲಲಿತಪೂಗಭೂಜಾತಂ ತಾಂ।
ಬೂಲಲತೆಗೆಂಬವೊಲ್ ಸಮ
ಲೀಲಂ ನಿಜತನಯನೆನ್ನ ತನುಜೆಗೆ ತಕ್ಕಂ[1] ॥ ೨೮

ಸ್ತ್ರೀರತ್ನಮೀಗಳೀಕೆಯೆ
ಧಾರಿಣಿಯೊಳ್ ಪುರುಷರತ್ನಮೀತನೆ ಸದೃಶಾ।
ಕಾರರನಿವರಂ ಕೂಡಿ ಪ
ಯೋರುಹಜಂಗಕ್ಕೆ ಸಮಸಮಾಯೋಗಯಶಂ[2] ॥ ೨೯

ವ॥ ಎಂಬುದುಂ ವಜ್ರಬಾಹುಮಹೀಪತಿ ವಜ್ರದಂತಚಕ್ರವರ್ತಿಸೂಕ್ತಾಮೃತಸಿಕ್ತಮಪ್ಪ ನಿಜಮನೋರಥಾಮರದ್ರುಮದಿನೊಗೆದಂಕುರಿಸಿದಂಕುರನಿಕರಮನನುಕರಿಸುವರೋಮಾಂಚನಿಚಯದಿಂ ನಿಚಿತಾಂಗನಾಗಿ,

ಪ್ರಣಯಮಿದನನ್ಯಸಾಧಾ
ರಣಮೆನಿಪ ಭವತ್ಪ್ರಸಾದಮೆಂಬಮೃತದಿನಾಂ।
ತಣಿದೆಂ ಭೂಭುವನದೊಳಾ
ರೆಣೆಯೆನಗೆಂಬೊಂದು ಸಂತಸಕ್ಕೆಡೆಯಾದೆಂ ॥ ೩೦

ವ॥ ಎಂದು ನಿಜೋತ್ತರೀಯಾಂಶುಕಮನೆ ಮಹೋತ್ಸವಧ್ವಜಮಂ ಮಾಡಿ ವಸುಂಧರಾಸುಂದರಿಯುಂ ತಾನುಂ ಪ್ರಿಯತನಯನ ವಿವಾಹೋತ್ಸವಲಗ್ನಚಿತ್ತರಾಗಿ ಲಗ್ನಮನೆ ಪಾರುತ್ತಮಿರ್ದರ್ ಆಗಳ್ ವಜ್ರದಂತಚಕ್ರವರ್ತಿಯಾತ್ಮೀಯ[3] ಪುತ್ರೀವಿವಾಹೋತ್ಸವಕ್ಕೆ ಮೌಹೂರ್ತಿಕರಂ ಕರೆದು ದಿವಸಮಂ ಬೆಸಗೊಳ್ವುದುಂ ಅವರ್—ಇಂದಿನ ವಾಸರಮೆ ಶೋಭನವಿಧೇಯವಾಸರಂ ಇಂದಿನ ದಿವಸಮೆ ಶುಭದಿವಸಾಗ್ರೇಸರಂ ಇಂದಿನ ನಕ್ಷತ್ರಮೆ ಸಕಳಕ್ಷೇಮಕ್ಷೇತ್ರಂ ಇಂದಿನ ಯೋಗಮೆ ಸಮಸ್ತಾಭಿವಾಂಛಿತಫಳಸಮಾಯೋಗಂ ಇಂದಿನ ಕರಣಮೆ ಕಲ್ಯಾಣಕರಣೀಯಾದಿಕರಣಂ ಎಂದು

---

[1]ಕ.—೨೮ಕ್ಕೆ ಮುಂದೆ ೨೯ನೆಯ ಪದ್ಯವಿದೆ. [2]ಗ—ಸುಖಂ.

[3]ಕ.—ಇತ್ತ ವಜ್ರದಂತಚಕ್ರವರ್ತಿಯುಂ ಲಕ್ಷ್ಮೀಮತಿಮಹಾದೇವಿಯುಮಾತ್ಮೀಯ.

ಬಿನ್ನಪಂಗೆಯ್ವುದುಂ ಜಗಜ್ಜನಜಂಗಮಕಲ್ಪವೃಕ್ಷಂ ಕಲ್ಪವೃಕ್ಷಮೆಂಬ ಮಹಾಮಹಿಮೆಯುಂ ಮಹಾಪೂತಜಿನಾಲಯದೊಳ್ ಮುನ್ನಂ ಮಾಡಿ ಬಲಿಯುಂ ನಿಜರಾಜಧಾನಿಯೊಳ್ ಉಸಗೆಯುಂ ಮಾಡಿ ವಿವಾಹಮಂಟಪಮಂ ಸ್ಥಪತಿರತ್ನಕ್ಕೆ ವಿರಚಿಸೆಂದು ಬೆಸಸಿದಾಗಳ್.

॥ ಮಂದಾನಿಲರಗಳೆ. ॥

ಸ್ಫುರಿತೇಂದ್ರನೀಲಮಣಿಖಚಿತಭೂಮಿ
ಚೆಲುವಿಂಗದು ನೆಟ್ಟನೆ ಜನ್ಮಭೂಮಿ ॥
ಮರಕತಮಣಿವಿರಚಿತವಿಮಳಭಿತ್ತಿ
ಪೊಗಲ್ಕರಮರಿದದು ಬೇಱೆ ಭಿತ್ತಿ ॥
ಪಳುಕಿನ ಕಂಭಂಗಳ ಪೊಳೆವ ಪೊಳಪು
ನವವಿದ್ಯುದ್ದಾಮದ ಪೊಳೆವ ಪೊಳಪು ॥
ಲಲಿತೋನ್ನತಮಣಿಮಯಕೂಟದಂದ
ಮದುಪಲವುಂ ದೇಸೆಯ ಮಾಟದಂದ ॥
ಮೆಟಿಲಿಕ್ಕಿದ ಮುಕ್ತಾದಾಮಶೋಭೆ
ಲಕ್ಷ್ಮೀಲಲನಾದರಹಾಸಶೋಭೆ ॥
ಚಂದನದೆಳದಳದೋರಣಂಗಳವು
ಸೂಚಿತಮಂಗಳಕಾರಣಂಗಳವು ॥
ತುಂಗಕನಕಭೃಂಗಾರುವಿರಾಜಿ
ರಾಜನ್ಮರಕತಮಯಶುಕವಿರಾಜಿ ॥
ಪುಣ್ಯಾಂಬುಪೂರ್ಣಕುಂಭಾಗ್ರಮುಚಿತ
ಕಂಕೇಲಿಪಲ್ಲವೋಲ್ಲಾಸರಚಿತ ॥
ಮುಜ್ಜ್ವಲಮಣಿದರ್ಪಣದೀಪ್ತಿರಮ್ಯ
ಮಾವೇಷ್ಟಿತಸೂತ್ರತ್ರಿತಯಸೌಮ್ಯ ॥
ಮಾಲಂಬಿತಮಣಿಘಂಟಾನಿನಾದ
ಮದುಕನಕಕಿಂಕಿಣೀಮೃದುನಿನಾದ ॥

ಮುನ್ಮೀಲಿತನವಕುಸುಮೋಪಹಾರ
ಮುದ್ದೀಧಿತಿತಾರಾನಿಕರತಾರ ॥
ಮನೆ ಪೊಸಹೂನ್ನದ ಪಸರಮೆನಿಸಲಿದು
ಮದನನ ಮಂಗಳಭವನಮೆನಿಸಲಿದು ॥
ರತಿಯ ವಿವಾಹಾಗಾರಮೆನಿಸಲಿದು
ಸಕಳವಿಳಾಸನಿವಾಸಮೆನಿಸಲಿದು ॥
ಮದನನಸಾರಸರ್ವಸ್ವಮೆನಿಸಲಿದು
ಸುರತೋತ್ಪತ್ತಿ ಸ್ಥಾನಮೆನಿಸಲಿದು ॥
ವಿಭವದ ಮೂಲಸ್ಥಾನಮೆನಿಸಲಿದು
ಕಾಮದೇವನಾಸ್ಥಾನಮೆನಿಸಲಿದು ॥
ಓರಂತೆ ನೆರೆದುದೆನೆ ಜನಸಮೂಹ
ಮಾಗಳೆ ಸಮೆದತ್ತು ವಿವಾಹಗೇಹ ॥

ಜಾಗದ ನೆಲೆವಡಲಗೆಗಳ
ಜಾಗಂಗಳ ಪಸುರ್ಗಳೆಸೆಯೆ ರತ್ನದ ಕೇರ್ಗಳ್ ॥
ಜಾಗಂಬೊಯ್ದಂತಿರೆ ಪರ
ಭಾಗಂಬಡೆದುವು ವಿವಾಹಗೇಹಾಂತರದೊಳ್ ॥ ೩೧

ನುಡಿವ ನಡೆ ನೋಡುವಾಡುವ
ಪೊಡೆವಡುವವುರ್ದಪ್ಪಿಕೊಳ್ವ ತಮ್ಮಿನಿಯರ ಕಾ ।
ಲ್ವಿಡಿವಂದದ ಚಿತ್ರದ ಪೆ
ಣ್ಬಿಡೆಯಿಂ ಸ್ತ್ರೀರಾಜ್ಯದಂದಮದಱಿಡೆಯೆಡೆಯೊಳ್ ॥ ೩೦

ಬಿಡುಮುತ್ತಿನ ಬಳಸಿದ ಕಡೆ
ನಡುವಣ ಚೆಂಬೊನ್ನ ಪಟ್ಟವಣೆ ರನ್ನದ ಕ ।
ನ್ನಡಿವೆರಸು ಸರ್ವಧಾನ್ಯದ
ನಡುವಿರೆ ಪೊಸರಣ್ಮೆ ಪೆರಸಿದೆಳದಳಗಳಸಂ ॥ ೩೩

ವ॥ ಆಚಂಚತ್ಪಂಚರತ್ನವೇದಿಕಾಂತರಾಳವಳಯಮಲಂಕಾರವಾಗಿ,

ಬೆಳಗುವ ಮಂಗಳದೀಪಾ
ವಳಿಗಳ ಬೆಳಗತ್ತಮಿತ್ತ ಮಚೆಲ್ವುತ್ತಿದವೊಲ್ ।
ತಳತಳಸಿ ಬೆಳಗೆ ಬೆಳಗನೆ
ಮೊಳೆತಂತೊಪ್ಪಿದುವು ತೊಳಪ ರನ್ನದ ಕೇರ್ಗಳ್ ॥ ೩೪

ವ॥ ಆಗಳಾವಿವಾಹದೊಸಗೆಯೊಳೊಸಗೆಮರುಳ್ಗೊಂಡಂತೆ ಇತ್ತ ವಸುಂಧರಾಸೌಂದರಿಯುಂ ಅತ್ತ ಲಕ್ಷ್ಮೀಮತಿಮಹಾದೇವಿಯುಮೆಕ್ಕೆಕ್ಕೆಯೊಳ್ ಮಂಡಳಿಕಮಹಾಸಾಮಂತಮಂತ್ರಿಮಂಡಳಾಂತಃಪುರಪುರಾಂಗನಾನಿಕರಕ್ಕೆ ಮಣಿಮಯಭಾಜನಂಗಳೊಳ್ತೀವಿದ ಪಂಚರತ್ನದ ಕೆಳಯು ಕತ್ತುರಿಯು ಕೊಳತಳ ಕಪ್ಪುರದ ಪಳಕಿನ ಬಾಯಿನಂಗಳಂ ಬೀಱಿ ಸಾಹಿಯಾಣದ[1] ಚಿನ್ನದ ನವದಿದ[2] ಭರ್ಮದ ಜೊಂಗದ ದೇವಾಂಗದ ಸಕಳಪಟ್ಟೆಗಳುಮಂ ಮೆಟ್ಟುಮೆಡೆಗಳೊಳ್ಲಂ ಪಾಸಿಕಾರೋಹಣದ ಕಕ್ಕರವಳಯಿಗೆಯ ಚಿತ್ರಾವಳಿಯ ಪಳವೆಡೆಯ ತುಳ[3]ವೆಡೆಯ ನೆಳಲಪಾಣಿಯ ಬಣ್ಣದ ಕಣದ ಬಣ್ಣವಣ್ಣಿಗೆಯ ಜವಳಗಳನೆ ಮೊಗಂನೋಡದೆ ಸೂಸಿದಾಗಳ್,

ಇದಿರೊಳ್ ಸೂಸುವ ಹೇಮಭಾಜನಚಯಕ್ಕತ್ಯಂತ[4]ವಸ್ತ್ರಕ್ಕೆ ಮೆ
ಚ್ಚಿದನರ್ಘ್ಯಾಭರಣಕ್ಕೆ ಲೆಕ್ಕಮಣಮಿಲ್ಲಿಂತಿತ್ತರಾರ್ ಮುನ್ನ ತ ।
ಪ್ಪದಿನಂ ಜಂಗಮಕಲ್ಪವೃಕ್ಷಮೆನೆ ಕೊಟ್ಟೀಮಾಳ್ಕೆಯಿಂ ಭೋಜನಾಂ
ಗದ ವಸ್ತ್ರಾಂಗದ ಭೂಷಣಾಂಗದಳವಂ ಚಕ್ರೇಶ್ವರಂ ತಾಳ್ದಿದಂ ॥ ೩೫

ವ॥ ಆಗಳ್ ಪಂಚರತ್ನಗರ್ಭವಿವಿಧೌಷಧಿಸಂದರ್ಭಶಾತಕುಂಭಕುಂಭಸಂಭೃತಮಂಗಳಜಳಂಗಳಿಂದಂ ಮಿಸಿಸೆ ಮಿಂದಳಂಕಾರಮಂದಿರಕ್ಕೆ ವಂದು ನೆಱೆಯೆ ಕೈಗೆಯ್ಯೆ,

---

1ಕ.—ಸುಯಿಯಾಣದ. 2ಕ.—ಧವಳವಟ್ಟದ.

3ಕ.—ಚಿತ್ರಾವಳಿಯುಪಳಿಯತುಳಿ 4ಕ.—ತ್ಯಂಗ

ಕರೆವೆರಸಿದ ಪೊಸದುಗುಲದ
ತೆರಳ್ಕೆವೆತ್ತುಡೆ ಹಟತ್ಕಟೀಸೂತ್ರಪರಿ ।
ಸ್ಫುರಿತದೊಳಂ ಕಟ್ಟಿದ ಪೊಂ
ಜುರಿಗೆಯೊಳಂ ಜನಮನೇಂ ಮನಂಗೊಳಿಸಿದುದೋ ॥ ೩೬

ತರಳತರವೃತ್ತಮೌಕ್ತಿಕ
ಪರಿಕರಮೇಕಾಂತಕಾಂತಮೆಳಕ್ಕಿವಳಿ ಕಂ ।
ಧರದೊಳಮರ್ದೆಸೆಯೆ ಪೋಲ್ತುದು
ಪರಿವೇಷಂಗೊಂಡ ಚಂದ್ರನಂ ಮುಖಚಂದ್ರಂ ॥ ೩೭

ಹಿಮವದ್ಗಿರಿಕಟಕದಿ[1]ನೊಗೆ
ವಮರಸರಿತ್ಸ್ರೋತಮೆಂಬ ಮಾತಂ ಪಡೆದೇಂ ।
ಹಿಮಗೌರಹಾರಮೆಸೆದುದೊ
ಹಿಮಶೈಲಶಿಲಾವಿಶಾಲವಕ್ಷಸ್ಸ್ಥಳದೊಳ್ ॥ ೩೮

ಶ್ರೀಮತಿಯ ಮನಮನೆಱಗಿಸ
ಲೀಮಣಿಮಯಮಕುಟಮಾಗಳುಂ ಸಾಲ್ವುದೆ ತ ।
ತ್ಕೋಮಳೆ ಮುಳಿದಿರೆ ತಿಳಿಪ
ಲ್ಕೀಮಕುಟಮೆ ಸಾಲ್ಗುಮೆನಿಸಲಾರ್ತುದು ಮಕುಟಂ ॥ ೩೯

ಕೇಯೂರಕಟಕಸಮಿತಿ ಯು
ಗಾಯತಬಾಹುಗಳನುನ್ಮಿಷದ್ರತ್ನಹಟ ।
ಚ್ಛಾಯೆಯೊಳೆ ಮುಸುಕಿ ದೇಹ
ಚ್ಛಾಯೆಯುಮಂ ಪುದಿಯೆ ರತ್ನತರುವನೆ ಪೋಲ್ತಂ ॥ ೪೦

ಮನಸಿಜನಂಗನಾಜನವಶೀಕರಣೌಷಧಮಂಗಜನ್ಮನಂ
ಬಿನ ಮದಶಕ್ತಿ ಮನ್ಮಥನ ಮೋಹನಯಂತ್ರಮಿದಪ್ಪುದಲ್ಲದಂ ।

---

1 ಕ.—ನಿಕಟದಿ.

ದಿಸಿತುವರಂ ಮನಂಗೊಳಿಸದೆಂಬಿನಮುಜ್ಜ್ವಳಮಂಗಳಪ್ರಸಾ
ಧನವೆ ಮನೋಜರಾಜಜಯಸಾಧನಮಾದುದು ವಜ್ರಜಂಘನಾ ‖ ೪೧

ವ‖ ಅನ್ನೆಗಂ ಶ್ರೀಮತಿಯುಂ ಅನಂತಸಾಮಂತಸೀಮಂತಿನೀಪರಿವೃತೆಯುಂ ಅತಿಪ್ರೌಢವಾರವನಿತಾಪರಿವೃತೆಯುಂ ಆಗಿ ಪಾಲ್ಗಡಲ ತೆರೆಯ ನೊರೆಯ ದೊರೆಯ ದುಕೂಲಾಂಬರಮನುಟ್ಟು ಆತ್ಮೀಯಘನಜಘನದ ನುಣ್ಪಿನೊಳ್ ನುಣ್ಪುವೆಗೆತ್ತು ಝುಣಝುಣಾಯಮಾನಮಣಿಕಿಂಕಿಣೀವಿರಾಜಿತಕನಕಕಾಂಚೀಕಳಾಪಮಂ ಅನಂಗರಾಗರಸಪ್ರವಾಹಕ್ಕೆ ಕಟ್ಟೆಗಟ್ಟುವಂತೆ ಕಟ್ಟಿ ಸಾಂದ್ರಚಂದನದ್ರವಾನುಲಿಪ್ತೋದ್ದೃಪ್ತಕುಚಕಳಶಂಗಳಂ ತರಳತರತಾರಹಾರದಿಂದಳಂಕರಿಸಿ ಚಂಪಕದಳದಾಮಕೋಮಳನಿಜಭುಜಲತೆಗಳನನೇಕಮೌಕ್ತಿಕಮಣಿವಿಭೂಷಣಂಗಳಿಂ ಕುಸುಮಿಸಿ ಮನ್ಮಥೋತ್ಸವಾಭಿಮುಖಮುಖಚಂದ್ರನಂ ಚಂದ್ರಕವಳದಿಂ ತೊಡೆದೋರೊಂದೆ ವಜ್ರದ ಪಂಚಲೋಹಮುಮನವರ್ಕಮರ್ಕೆವೆತ್ತ ಮುತ್ತಿನ ಮುಗುಳ್ಗಳುಮನಿಟ್ಟಾಮುಗುಳನೆ ಬಿಱಿಮುಗುಳ್ಗೆತ್ತೆಱಗಿದ ಮಱಿದುಂಬಿಯಂತೆ ಸೊಗಯಿಸೆ ತೀವಿದ ಕೊಗ್ಗಿಯ ಕತ್ತುರಿಯುಂ ಕತ್ತುರಿಯೊಳಂಟ ಪರಿಚೆಯುಂ ಪರಿಚೆಯೊಳ್ಪರಿಚಯಂಬಡೆದ ಮದವಟ್ಟೆಯುಂ ಮದವಟ್ಟೆಯೊಳೊಡಂಬಟ್ಟ ವಿಪುಳಕಪೋಳತಳಲಿಖಿತವಿಚಿತ್ರಪತ್ರಲೇಖೆಯುಂ ಪತ್ರಲೇಖೆಯುಂ ಮುಗುಳ್ನಗೆನಗುವಂತಿರ್ದಧರಮುಂ ಅಧರಮನಧರಂಮಾಡಿ ಪೊಳೆವ ಸುಲಿಪಲ್ಲ ಪೊಳಪುಂ ಸುಲಿಪಲ್ಲ ಪೊಳಪೆಂಬ ತನ್ನ ಬಾಳ ಪೊಳಪನೆ ಮೆಱೆದು ನೆಱೆದು ಸಮೆಱಿದ ಮದನನೊಡ್ಡಣದಂತೆ ಸಮೆಱೆದ ಪುರ್ವುಂ ಪುರ್ವೆಂಬ ಕರ್ಬಿನಬಿಲ್ಲಿಂ ಬರ್ದುಂಕಿದ ಮದನನ ಅರಂಬೆಂಬಿನಮಿಂಬಾಗಿರ್ದ ನೆಲೆವೊಟ್ಟುಂ ನೆಲೆವೊಟ್ಟನೊಳೊಟ್ಟೈಸಿ ಪಳಂಚಲೆವ ಕುರುಳೋಳಿಯುಂ ಕುರುಳೋಳಿಯೊಳ್ ಮುನ್ನಮೆ ಸೊಗಯಿಸುವ ಚಿನ್ನಪೂಗಳುಂ ಚಿನ್ನಪೂಗಳೆಡೆಯೆಡೆಯೊಳ್ ನಿಮಿರ್ದು ಮಿಱುಮಿಱುಗುವ ತಲೆದುಡುಗೆಯುಂ ತಲೆದುಡುಗೆಯೊಳೊಡಂಬಡಂ ಪಡೆದು ಮಿಳಿರ್ದು ಪೊಳೆವ ಪೊಂದಳಿರುಂ ಪೊಂದಳಿರೊಳೊಂದಮಿಂದಿಯುಲ್ಲದೊಂದಿನಾಡೆಯುಮಂದಂಬಡೆದು ಪದನಱಿದು ತಳಿದ ಮೃಗಮದಸಲಿಲದೊಳ್ ಮೆಲ್ಲಮೆಲ್ಲನುಳ್ಕಲರ್ದು ಚೆಲ್ವಿಂಗೆ ಮುಡಿಗವಿದಂತೆ ತೋಱುವ ತೋರಮಲ್ಲಿಗೆಯ ಮುಡಿಯುಮೆಸೆಯೆ ಕೈಗೆಯ್ದಾಗಳ್,

ಹಾರಾದ್ಯಾಭರಣಂಗಳ
ನಾರೂಪಾಶ್ಚರ್ಯವಾಗೆ ಮಾಣಿಕಚಟ್ಟಂ ।
ನೀರಂಜಿಸಿ ದಳವಿಡಿದ ಮ
ಹಾರತ್ನದ ದೊರೆಗೆವಂದುದಾಸ್ತ್ರೀರತ್ನಂ ॥ ೪೦

ವ॥ ಆಗಳನೇಕಪ್ರಸಾಧನಪ್ರಯೋಗಪ್ರವೀಣೆಯರಪ್ಪತಿಪ್ರಾಢಪಾರಂಧ್ರಿಯರ್ ನೋಡಿನೋಡಿ,

ಮರಕತರತ್ನಚ್ಛವಿ ಪ
ದ್ಮರಾಗರತ್ನಪ್ರಭಾಪರಿಸ್ಫುರದಧರಂ ।
ಹರಿನೀಳರತ್ನಕೇಶಂ
ಧರಿತ್ರಿಗೀಯುವತಿರತ್ನವೇನೊಪ್ಪಿದುದೋ ॥ ೪೩

ಎಳವಿದಿರ ಬಣ್ಣವೊಳ್ನಡು
ಕಳಶಮನವ್ವಳಿಪ ಮೊಲೆ ಪೊದಪ್ಪೆಳಸುವ ಬಾಯ್ ।
ಬಳಸುವ ಕಣ್ ಮಿಳಿರ್ವ ಕುರುಳ್
ನಳಿವೊಗವೆನೆ ಸೊಬಗಿವಳ್ಗೆ ನಾಚ್ಚರ್ತನಮೋ ॥ ೪೪

ಮದನನ ಮಣಿದರ್ಪಣಕಂ
ಮದನನದೀರತ್ನಶುಕ್ತಿಗಂ ಸೆಣಸುವುದಂ ।
ಕದಳೀಗರ್ಭದೊಳೆಣೆಯೆಂ
ಬಿದಾವ ಚದುರಿವಳ ಬಾಹುಮೂಲದ ಪೊಳಪಂ ॥ ೪೫

ಈಧರೆಯ ಪೆಂಡಿರುದ್ಧಪ
ಯೋಧರೆಯ ಮನೋಜರಾಗರಸಪೂರಿತಬಿಂ।
ಬಾಧರೆಯ ಕಂಬುಕಮ್ರಶಿ
ರೋಧರೆಯ ಬೆಡಂಗನಾರುಮೇನೆಯ್ದುವರೇ ॥ ೪೬

ಅಣಮೆಮೆಯಿಕ್ಕದೊಪ್ಪುಗುಮೆ ಕಣ್ಮಲರೆಂತು ಗೆ ದೇವಸೌಂದರೀ
ಗಣದ ವಿಳಾಸಮಂಜಿಸುವವೋಲ್ ಪಡೆಯಂ ಮುಡಿಯಲ್ಲಿ ತೋರ್ಪ ನಾ।

ಗಿಣಿಯುರ ಕೆಯ್ತ್ತವೆಂತೊ ಕಳೆ ಪಾಱುವ ಪಾಱುವಳಂದವಂ ಬೆಡಂ
ಗಣಿಯುರವಿಾಕೆಗೆಂದು ಪೊಗೞ್ವರ್ ಕೆಲರಲ್ಲಿ ಹಿಮಾಂಶುವಕ್ತ್ರೆಯಂ ॥ ೪೭

ವ॥ ಅಂತು ನೆಱೆಯೆ ಕೈಗೆಯ್ದು ವಧೂವರರಿರ್ವರುಮಂ ಮೌಹೂರ್ತಿಕಗಣನಿರೂಪಿತಪ್ರಶಸ್ತ ಮುಹೂರ್ತದೊಳತಿಪ್ರಮೋದನಿರ್ಭರಪ್ರಣಯಪ್ರಹತಮಂಗಳಪಟಹರವಂಗಳುಮತಿಮಧುರಮಂದ್ರಮನೋಹರಮಂಗಳಗೀತಾರವಂಗಳುಮಲಕ್ತಕದ್ರವಾರುಣಚರಣರಣಿತನೂಪುರಮುಖರಿತದಿಗಂತರಾಂತಃಪುರಜನಾಶೀರ್ವಾದಕೋಳಾಹಳಮುಮೆಸೆಯೆ ಮುಂದಿಟ್ಟುತಂದು ವಿವಾಹಮಂಟಪದ ನಡುವಣ ಮಣಿಮಯವೇದಿಕೆಯ ಹಾಟಕಪೀಠದ ಮೇಲೆ ಪಾಸಿದ ದುಗುಲದ ದಳಂಬದೊಳಿರಿಸಿದಾಗಳನೇಕಮುಕುಟಬದ್ಧ ಚೂಡಾಮಣಿಚಕ್ರಚುಂಬನೋಚಿತಚರಣಕಮಳನಪ್ಪ ಸಕಳಚಕ್ರವರ್ತಿ,

ನೆಱೆದತ್ತೆ ತಾನುಮಿಾದಂಪತಿಯ ಬಯಕೆ ಸಂಪೂರ್ಣಮಾಯ್ತುತ್ಸವಂ ಕ
ಣ್ದೆಱೆದಂತಾಯ್ತೆನ್ನ ಸಾಮ್ರಾಜ್ಯದ ಫಲಮೆನುತುಂ ರಾಗಮಂ ಬೀಱಲಾದ।
ೞ್ಕಱ ಪೆಂಪಂ ತೋಱಲಾಗಳ್ ಕನಕಕಳಶಮಂ ತಾನೆ ಬಂದೆತ್ತಿ ಕೈನೀ
ರೆಱೆದಂ ಶ್ರೀವಜ್ರದಂತಕ್ಷಿತಿಪತಿ ಸತತೋತ್ಸಾಹಸಂದೋಹದಿಂದಂ ॥ ೪೮

ವ॥ ಅಂತು ಕೈನೀರೆಱೆದು ಪಾಣಿಗ್ರಹಣಂಗೆಯಿಸಿದಾಗಳ್ ವಜ್ರಜಂಘಂ ಶ್ರೀಮತಿಯ ನಿಕಾಮಕೋಮಳಕರತಳಪಲ್ಲವಸ್ಪರ್ಶನಸುಖೋನ್ಮೀಳಿತಲೋಚನನಾಗೆ,

ಇನಿಯನ ಕೆಂದಳಂ ತಳಮನೊಯ್ಯನೆ ಸೋಂಕೆ ಪೊದಲ್ದ ನಾಣ ಪೆಂ
ಪಿನೊಳೊಗೆತರ್ಪ ಘರ್ಮಜಲಬಿಂದುಗಳಿಂ ನಮಿತಾನನಾಬ್ಜೆ ಬೆ।
ಳ್ಪಿನ ಬಸಿವಿಂದುಕಾಂತಕರಸಂಕುಳಮೊಯ್ಯನಪುಂಕೆ ಸೋಂಕೆ ಸೋಂ
ಕಿನೊಳೊಱೆವಿಂದುಕಾಂತಮಣಿಪುತ್ರಿಕೆಯಂದದಿನೊಪ್ಪಿ ತೋಱಿದಳ್ ॥ ೪೯

ವ॥ ಆಪ್ರಸ್ತಾವದೊಳ್,

ಪರಿವ ಕಟಾಕ್ಷಂಗಳನೋ
ಸರಿಸುತ್ತುಂ ನಿಮಿರ್ವ ಸುಯ್ಗಳಂ ಕುಸಿಯುತ್ತುಂ।
ಶರಪಾಶಂಗಳ ನಡುವಣ
ಹರಿಣಿಯುವೋಲ್ ಮನದೊಳಾಗಳಾಕುಳೆಯಾದಳ್ ॥ ೫೦

ವ॥ ಆಗಳ್ವಜ್ರಜಂಘಂ,

ಪುಳಕಪ್ರೋದ್ಭೇದಘರ್ಮೋದಕವಿಸರಮನೊತ್ತಂಬದಿಂ ತಾಗೆಯುಂ ನಿ
ಶ್ಚಳಧೈರ್ಯವ್ಯಾಜತಿರ್ಯಗ್ವಳನತರಳಿತಂ ದೃಷ್ಟಿ ಪೇೞ್ಗಿತ್ತು ನಿರ್ವ್ಯಾ ।
ಕುಳವಾಗಳ್ ರಾಜಪುತ್ರಸ್ಮಿತಮಧುಮಧುರಾಪಾಂಗಜೈತ್ರಾಂಗಜಾಸ್ತ್ರಂ
ಗಳ್ ಕೋಳಂ ನೂತನಪ್ರೇಮದೆ ನಿಮಿರ್ದೆಡೆಯೊಳ್ ದೃಷ್ಟಿಯುಂ ಕಾವ
ನಾವಂ ॥ ೫೧

ವ॥ ಅಂತಭಿನವಸಂಗಸಮುತ್ಪನ್ನಸಾಧ್ವಸರಸರಮಣೀಯತರಮುಗ್ಧವಧೂವದನವಿಲೋಕನಸುಖಮನನುಭವಿಸಿ,

ಇನಿವಿರಿದೊಂದುಮೋಹಮುಮನೊಡಂಬಡುವಳ್ಕಱುಮೆನ್ನ ನಿನ್ನ ಮು
ನ್ನಿನ ಭವದೊಂದು ಕೂರ್ಮೆಯೊಳೆ ಕೂಡಿದುದೀಭವದಿಂದಮಾದ ವಾ ।
ಸನೆ ಮಱುಮೆಯ್ಗಮಕ್ಕುಮದಱಿಂದೆನಗಂ ನಿನಗಂ ಸಮಂತು ಮು
ನ್ನಿನ ಭವಮೀಭವಂ ಮಱುಭವಂ ಸಫಲಂ ಮೃಗಲೋಲಲೋಚನೇ ॥೫೨

ವ॥ ಎಂದು ಕೆಚ್ಚವಿರ್ದ ಮಚ್ಚುಮನುರ್ಚಿಪೋದ ಮೋಹಮುಮನಳವಿಗಳಿದಲಂಪುಮಂ ಬಳವಿವಡೆದಳ್ಕಱುಮನೋರೋರ್ವರೊಳ್ ನೆಱೆದನೇಕವಿಧನಿಧುವನಸುಖಸುಧಾರಸಾಧೀನಚಿತ್ತರುಂ ಚಿತ್ತಜನೆ ವಿವಿಧವಿಳಾಸವಿಭ್ರಮೋಪದೇಶೋಪಾಧ್ಯಾಯನಾಗೆಯುಮುಪವನಾಂತರಾಳಕನಕಕದಳೀಭವನಂಗಳೇ ನಿವಾಸಭವನಂಗಳಾಗೆಯುಂ ಭ್ರಮದ್ಭ್ರಮರಭರಭಗ್ನಮಾಧವೀಲತಾಲತಾಂತಸಮಧಿಕಮಕರಂದಬಿಂದುಚಿತ್ರಿತವಿಪುಳಪುಳಿನತಳಂಗಳೇ ವಿಶ್ರಮಣಭೂಮಿಗಳಾಗೆಯುಂ ದರದಳಿತಕಮಳವನಗಳಿತಮಧುರಸಮದಮದಿರಾಮೋದಮುದಿತಮಧುಕರನಿಕರನಿನಾದೋಪವೀಣಿತಕ್ರೀಡಾಸರೋವರಂಗಳೇ ಜಳಕೇಳೀಕುತೂಹಳನಿಳಯಂಗಳಾಗೆಯುಂ ಸಕಳಕಳೋತ್ಕಳಿತಸರಸಸಹಕಾರಕೋರಕಕಬಳನಮದಮಧುಕರಕೋಕಿಳಕೋಳಾಹಳಾಕುಳಿತಕೃತಕಕೇಳೀಶೈಳಶಿಖರಂಗಳೇ ಸಕಳದಿಗವಲೋಕನನಿಕೇತನಂಗಳಾಗೆಯುಂ ಸರಸಸರಸಿಜಸಂದರ್ಭಗರ್ಭಸರೋವರಸಲಿಲಲುಳಿತಶಿಶಿರಸುರಭಿಮಂದಮಾರುತಾಂದೋಳಿತಚಂದನವನವೀಧಿಗಳೇ ವಿಹಾರಮಾರ್ಗಂಗಳಾಗೆಯುಂ ವಸಂತಸಮಯಸಮುದಿತಕುಸುಮಕಿಸಲಯಂಗಳೇ ವನಕೇಳೀವಿಳಾಸಭೂಷಣಂಗಳಾಗೆಯುಂ ತ್ರಿಭುವನೈಕಪವಿತ್ರೀಭೂತ

ಮಹಾಪೂತಜಿನಾಲಯಮೇ ನಿರತಿಶಯಭಕ್ತಿಪುರಸ್ಸರಪೂಜಾವಿಚಿತ್ರವಿರಚನಾದಿಸಂಪದಾಸ್ಪದಮಾಗೆಯುಂ ಪಾತ್ರದಾನವಿಧಾನಮೆ ವಿನೋದಮಾಗೆಯುಂ ಇಂತು ನಿತ್ಯೋತ್ಸವಂಗಳ್ ಕೆಲವುಕಾಲಂ ಸಲೆ ಸಲ್ಗೆವೆರಸಿದ ತನ್ನ ನಣ್ಪಿನೊಟ್ಟಜೆಯಂ ತೋಱಿ ವಜ್ರಬಾಹುಮಹೀಪತಿಯಂ ಕರೆದುಮಮಿತತೇಜಂಗೆ ಭವದೀಯಾತ್ಮಜೆಯಂ,

ಕುಡು ಕುಡದಂದುಮೆನ್ನ ತನಯಂ ಭವದಾತ್ಮಜೆಗೀಶನೆಂದು ಬೆ
ಳ್ಗೊಡೆಯೊಡೆಯಾತನರ್ಥಿವಡೆ ಕೊಳ್ಕೊಡೆಗಾಗಳೆ ವಜ್ರಬಾಹು ದಾಂ।
ಗುಡಿವಿಡೆ ರಾಗಮರ್ಥಿಯೊಳೆ ಸೌಂದರಿಯುಂ ಕುಡೆ ಬಂಧುಗಳ್ ಮನಂ
ಬಡೆ ಕಡುರಯ್ಯಮಾಯ್ತಮಿತತೇಜನೊಳೆಂದು ವಿವಾಹಮಂಗಳಂ ॥ ೫೩

ವ॥ ಆವಿವಾಹಕಲ್ಯಾಣಾನಂತರಂ ನಿಜತನೂಜೆಯುಮಳಿಯನೊಡನೆ ಕಳುಪುವುದ್ಯೋಗಮನೆತ್ತಿಕೊಂಡು,

ಎನಗೀಷಟ್ಖಂಡಭೂಮಂಡಳಪತಿಯೆನಿಸಲ್ಸಾಲ್ಗುಮುದ್ಯದ್ಯಶೋಲಾಂ
ಛನಮಿಾಶ್ವೇತಾತಪತ್ರಂ ಕಳೆದುಳಿದುವುಮಂ ತನ್ನಿಮಿನ್ನೆಂದು ವಾರಾಂ।
ಗನೆಯರ್ ಜಾತ್ಯಶ್ವವೃಂದಂ ಸಮದಕರಿಕುಳಂ ತಾರಹಾರಂಗಳೆಂದಿಂ
ತಿನಿತಾನುಂ ವಸ್ತುಮಂ ತಾಂ ತರಿಸಿದನಧಿಕಪ್ರೀತಿಯಿಂ ವಜ್ರದಂತಂ ॥ ೫೪

ವ॥ ಅಂತು ತರಿಸಿ ಮತ್ತಮಾತ್ಮೀಯಸ್ಥಪತಿರತ್ನವಿರಚಿತಮಣಿಕನಕಖಚಿತಶಿಬಿಕಾಂದೋಳಾದಿಯಾನಂಗಳುಮಂ ಕನಕಯೋಗಾಳಂಕೃತಂಗಳಾಗಿ ಸೊಗಯಿಸುವ ಕರಿಯ ಪಿರಿಯಮೆಯ್ಯ ನಿಡಿಯಕಿವಿಯ ಕುಣಿವ ಮೆಟ್ಟ ವಜ್ಜರಿಗತ್ತಿಗಳುಮಂ ವ್ಯೂಹದೊಳ್ ನಿಟ್ಟುವಟ್ಟ ಮಣಿಮಯಮಂಡನಾಯೋಗದೊಳೊಡಂಬಟ್ಟ ಪಿಡಿಗಳುಮಂ ಮುಳಿವ ತಿಳಿವ ಗಂಡರ ಪೆಂಡಿರ ನುಡಿಗಳನೆ ಬಣ್ಣಿಸುವ ಪುರುಳಿಗಳುಮಂ ಅಕಾಂಡತಾಂಡವಾರಂಭಶೌಂಡಶಿಖಂಡಿಮಂಡಳಮುಮಂ ಲೀಲಾಲಸಗಮನಮಂ ಗಜಗಮನೆಯರ್ಗುಪದೇಶಂಗೆಯ್ವ ದೀವದ ರಾಜಹಂಸೆಗಳುಮಂ ಕುಬ್ಜವಾಮನಬಧಿರಮೂಕಕಿರಾತೋನ್ಮತ್ತಜಡಜನಂಗಳುಮಂ ಗಾಯಕವಾದಕನರ್ತಕಕಥಕಪುಣ್ಯಪಾಠಕವೈತಾಳಿಕನಿಕರಮುಮಂ ಕೊಟ್ಟು ಪಂಡಿತೆಯುಮನೊಡವೋಪಂತು ಮಾಡಿ ರಾಜಾಧಿರಾಜನಳಿಯನ ಮೊಗಮಂ ನೋಡಿ,

ಬಗೆದುಂ ನಿನ್ನನ್ವವಾಯೋನ್ನತಿಯನಿವಳತಿಸ್ನೇಹಸಂಬಂಧವುಂ ನೀಂ
ಬಗೆದುಂ ಸಂದೆಮ್ಮ ನಣ್ಪಂ ಬಗೆದುಮಱಿಯದೇನಾನುಮೊಂದಾಗಳುಂ ಮೆ।
ಲ್ಲಗೆ ನೀಂ ಕಳ್ಪಿಪ್ಪುದೆಮ್ಮಂ ನೆನೆದೆರ್ದೆಗಿಡದಂತಾಗೆ ಪಾಲಿಪ್ಪುದಿಂತೀ
ಮೃಗಶಾಬೇಕ್ಷಣಾಕ್ಷಿಯುಂ ಮನ್ನಿಸುವುದಿನಿತನಾಂ ಬೇಡಿದೆಂ ವಜ್ರಜಂಘಾ ॥ ೫೫

ವ॥ ಎಂದು ನುಡಿದು ಲಕ್ಷ್ಮೀಮತಿಮಹಾದೇವಿಯುಂ ತಾನುಮಾತ್ಮೀಯ ಪ್ರಿಯಾತ್ಮಜೆಯುಮೊಗಮನಕ್ಕರ್ತು ನೋಡಿ,

ಮನಮಱಿದಂಜಿ ಬೆರ್ಚಿ ಬೆಸಕೆಯ್ ನಿಜವಲ್ಲಭನೇನನೆಂದೊಡಂ
ಕಿನಿಸದಿರೊಂದಿದಗ್ರಮಹಿಷೀಪದದಲ್ಲಿ ಪದಸ್ಥೆಯಾಗು ನಂ ।
ದನರನಗಣ್ಯಪುಣ್ಯಧನರಂ ಪಡೆಯೆಂದವರರ್ಪ್ಪಿಕೊಂಡು ತ
ತ್ತನುಜೆಯಗಲ್ಕೆಯೊಳ್ ನೆಗಪಿದರ್ ಬಸಮಲ್ಲದ ಬಾಷ್ಪವಾರಿಯಂ ॥ ೫೬

ವ॥ ಆಗಳ್ ವಜ್ರದಂತನನಂತಸಾಮಂತಾಂತಃಪುರಪರಿವಾರಂ ಬೆರಸು ಪೋಗಿಮಗಳುಮನಳಿಯನುಮಂ ಕಿಱಿದಂತರಂಬರಂ ಕಳುಪಿ ಮಗುಳ್ವಾಗಳ್,

ಪೊಡೆವಡುವಪ್ಪಿಕೊಳ್ವ ನೆನೆಯುತ್ತಿರಿಮೆಂಬ ಸಮಸ್ತವಸ್ತುವಂ
ಕುಡುವ ಪಲರ್ಮೆಯಿಂ ಪರಸಿ ಸೇಸೆಯನಿಕ್ಕುವ ಬುದ್ಧಿವೇಳ್ವ ಕೈ ।
ಯೆಡೆ ನಿಮಗೆಂದೊಡಂಬಡಿಪ ನಲ್ಲರಗಲ್ಕೆಗೆ ಕಣ್ಣ ನೀರ್ಗಳಂ
ಮಿಡಿವ ಬಹುಪ್ರಕಾರಜನಸಂಕಟಮೊಪ್ಪಿದುದಾಪ್ರಯಾಣದೊಳ್ ॥ ೫೭

ವ॥ ಅಂತು ವಜ್ರದಂತಚಕ್ರವರ್ತಿ ಕಳುಪಿ ಮಗುಳೆ, ವಜ್ರಬಾಹುಮಹೀಭುಜಂ ವಜ್ರಜಂಘನುಮಂ ಶ್ರೀಮತಿಯುಮಂ ಮುಂದಿಟ್ಟು ಕತಿಪಯ ಪ್ರಯಾಣಂಗಳಿಂ,

॥ ಉಜ್ಜ್ವಳ ॥

ಜಳವಿಹಂಗಮಭೃಂಗನಿನಾದವ್ಯಾಪ್ತಸರೋವರಸಂಕುಳಂ
ಗಳೊಳೆ ಪೂತದಿಮುರ್ತ್ತಿಯ ಸುತ್ತಿಂ ಸುತ್ತಿದ ಸೈಕತಭೂತಳಂ ।
ಗಳೊಳೆ ಮೆಲ್ಲನೆ ಬೀಡುವಿಡುತ್ತುಂ ಪೋಗಿ ಮಹೀಭುಜನೆಯ್ದಿದಂ
ಫಳವಿನಮ್ರಮಹೀಜಸಹಸ್ರಫಾಟಮನುತ್ಪಳಖೇಟಮಂ ॥ ೫೮

ವ॥ ಆಗಳ್ ನಿರಂತರಸಮುತ್ಥಾಪಿತಂಗಳುಂ ಕನಕರಜತಮಯಾನೇಕಸ್ಥಾಸಕಾಲಂಕೃತಂಗಳುಂ ವಿಚಿತ್ರಚೀನಾಂಶುಕರುಚಿರಂಗಳುಂ ಪಿನದ್ಧವಿವಿಧ

ಮಣಿದರ್ಪಣಧ್ವಜಂಗಳುಂ ಆಲಂಬಿತಜಾಂಬೂನದಘಂಟಾಜಾಲವಿರಾಜಿತಂಗಳುಂ ಆಮೋದಕುಸುಮದಾಮನಿಕಾಮಕಮನೀಯಂಗಳುಂ ಅಪ್ಪ ತೋರಣಂಗಳನೆ ನುಗುಳುತ್ತುಂ ಕಾಶ್ಮೀರಮೃಗಮದಚ್ಛಟಾಸಿಕ್ತಾಂಗಣಮುಂ ಅಂಗಣರಚಿತಮೌಕ್ತಿಕರಂಗಬಲಿಯುಂ ಬಲಿಕುಸುಮನಿಪತದಳಿಕುಳಾರಬ್ಧಗೀತಮುಂ ಗೀತಾನುಗತವಾದ್ಯಲಯಲಲಿತವಿಳಾಸಿನೀನೃತ್ಯಮುಮಪ್ಪಪ್ಪಳಖೇಟಮಂ ಪುಗುವಾಗಳ್,

ತಳಿರ್ಗಳ ತೊಂಗಲಿಂದಮಲರೋಳಿಗಳಲ್ಲುಗುವಂತೆ ಕೆಂದಳಂ
ಗಳನುದಿರ್ಪಕ್ಕಿಗಳ್ ನಿಮಿರ್ದ ದಾಂಗುಡಿಯಂತಿರೆ ನೀಳ್ದ ತೋಳ್ಗಳು।
ಚ್ಚಳದಳಿಗಾನದಂತೆ ಮಣಿಕಂಕಣನಾದಮೊಪ್ಪೆ ಸೇಸೆಯಂ
ತಳಿದರನಂಗಜಂಗಮಲತಾಲಲಿತಾಂಗಿಯರಂದು ರಾಗದಿಂ ‖ ೫೯

ವ॥ ಆಪ್ರಸ್ತಾವದೊಳಪೂರ್ವವಧೂವರರಿರ್ವರುಂ ಶ್ರೀಮತೀವಜ್ರಜಂಘರಂ ನೋಡಲೆಂದು,

ಅಳಕೋತ್ಸಾರಿತಕೇಶಸಂಚಯಮನೀವೀಬಂಧನಾವಿಷ್ಕೃತೆ
ಸ್ಖಳಿತಂ ವಿಸ್ಮೃತಪಕ್ಷ್ಮಪಾತನವಪೂರ್ವಾಳೋಕನಾಕೌತುಕಾ।
ಕುಳಿತಾಂತಃಕರಣಂ ಸ್ವಕೀಯಭವನವ್ಯಾಪಾರಚಿಂತಾಂತರಂ
ಗಳನೆಲ್ಲಂ ಮಱೆದಿಂತು ಕೂಡೆ ನೆರೆದತ್ತೆತ್ತಂ ಪುರಸ್ತ್ರೀಜನಂ ‖ ೬೦

ವ॥ ಅಂತು ನೆರೆದು,

ದಿವಿಜೇಂದ್ರಾವಾಸದೊಳ್ ಮುನ್ನೊಡನೆ ದಿವಿಜಭೋಗಂಗಳಂ ಭೋಗಿಸಿರ್ದೀ
ಭವದೊಳ್ ಬಂದಿಲ್ಲಿ ಜಾತಿಸ್ಮರರೆನೆ ನೆರೆದೋರೊರ್ವರೊಳ್ ಮತ್ತಮತ್ಯು।
ತ್ಸವದಿಂದಂ ಮರ್ತ್ಯಭೋಗಂಗಳನನುಭವಿಸಲ್ ನೋಂತರಿಂತೀಗಳಿಂತುಂ
ತವರಂತೇಂ ಪುಣ್ಯಮಂ ಪುಂಜಿಸಿದರೊ ಪಿರಿದುಂ ಶ್ರೀಮತೀವಜ್ರಜಂಘರ್ ‖

ವ॥ ಎಂದತಿಪ್ರಮೋದಪ್ರಮತ್ತಪುರಜನಜನಿತಾನುರಾಗದೊಡನಾದಂಪತಿಯುಮೊಡನೆ ರಾಜಮಂದಿರಮಂ ಪೊಕ್ಕು ರಾಜ್ಯಲಕ್ಷ್ಮೀದೇವತೆಯು ಪರಿವಾರದೇವತೆಯರೆನಿಸುವ ವಾರಪಾಂದರಿಯರ ಸೂಸುವ ಪರಮಾನಂದಸ್ಮಿತಸುಧಾಸ್ಯಂದಸಂತತಾದ್ರ್ರಂಗಳಪ್ಪಾದ್ರ್ರಾಕ್ಷತಸಿತಕುಸುಮಾಂಜಳಿಗಳನಿದಿ

ಗೊಂಡು ಪಂಡಿತೆಗೆ ವಿವಿಧವಿನೋದಂಗಳಂ ತೋಱಿ ಮೆಱೆದು ದಾನಸ
ನ್ಮಾನಾದಿಗಳೊಳ್ ಸಂತೋಷಂಬಡಿಸಿ ಪುಂಡರೀಕಿಣಿಗೆ ಕಳುಪಿ ಕೆಲವುದಿವ
ಸ ವಿರ್ಪನ್ನೆಗಂ ಶ್ರೀಮತಿಗೆ ಗರ್ಭಚಿಹ್ನಂಗಳ್ ತೋಱಿ,

ರಮಣೀಯಂ ಪುಷ್ಪಿತಲತೆ
ಕಮನೀಯಮುಮಾಯ್ತು ಕಾಯ್ತುದೆನೆ ಭುವನಮುನು ।
ಕ್ರಮದಿಂ ನಾಲ್ವತ್ತೊಂಭ
ತ್ತಮಳ್ಗಳ್ ಪುಟ್ಟಿದುವು ಗುಣದಮಳ್ ಪುಟ್ಟಿದವೋಲ್ ॥ ೬೦

ವ॥ ಅನ್ನೆಗಂ ವಜ್ರಬಾಹುಮಹಾರಾಜಂ ಮತ್ತೊಂದು ದಿವಸಂ,

ಶರದುದಿತೇಂದುಕುಂದಧವಳೋನ್ನತಸೌಧತಳಸ್ಥಿತಂ ಮನೋ
ಹರಗಗನಾಂಬುರಾಶಿನವಫೇನಸಮಾನಮನುದ್ಧಕೂಟಮಂ ।
ದರಮನದೊಂದುನೀರದಮನಟ್ಟಿಯೆ ನೋಡಿ ಜಿನೇಂದ್ರರುಂದ್ರಮಂ
ದಿರಮನದೊಂದನೀದೊರತೆ ಮಾಡಿಪೆನೆಂದದಱಂದಮಂ ನೃಪಂ ॥ ೬೧

ವ॥ ಬರೆಯಲೆಂದು ಬಟ್ಟಗೆವಲಗೆಯುಂ ತರಿಸಿ ತಿಟ್ಟವಿಟ್ಟು ಬರೆವನ್ನೆಗಂ,

ಸಿರಿಯು ಶರೀರದ ರೂಪಿನ
ನರರೈಶ್ವರ್ಯದ ಪೊದಪ್ಕೆಗಳ್ ಕರಗುವವೋಲ್ ।
ಶರದಂಬುಧರಂ ಭೋಂಕೆನೆ
ಕರಗಿದೊಡೆರ್ದೆ ಕರಗಿ ಕೊರಗಿದಂ ಧರಣೀಶಂ ॥ ೬೨

ವ॥ ಅಗಳ್,

ಘನದ ಕರಗಿದುದನಱಿದಪೆ
ಘನದ ವಿಳಾಸಮನದೆಂತು ನಂಬುವುದೊ ಘನಾ ।
ಘನದಿಂದಮಱಿಯಲಾದುದು
ಘನಾಘನಂ ಜವನ ದಾಟಿಗಿಲ್ಲೆಂಬಿನಿತಂ ॥ ೬೩

ಅನ್ನೋಡೆ ನೋಡೆ ನೋಡೆ ಮ
ನನ್ನೋಡುವವೊಲ್ ಶರದ್ಘನಂ ಕರಗಿದುದೆಂ ।
ತೆನ್ನನೆನಗೆಂಬೆನೆಂದೊಡ
ಮೆನ್ನಳಿಪಿಂಗೆನ್ನ ತನುವೊಡಂಬಟ್ಟಪುದೇ ॥ ೬೪

ಜವನಾಣೆಗವಾಜ್ಞೆಗವುಂ
ಟೆ ವಕ್ರವಾಖಳನ ತುಱಿವುವುಂ ಸೋಂಕುವುನಾ ।
ರವಧರಿಪರೆಂತುವುವನುವು
ನವಯುವದೊಳ್ ಗೆಲ್ವ ಬಗೆಯನೀಗಳ್ ಬಗೆವೆಂ ॥ ೬೭

ವ॥ ಎಂದಾವುಹಾನುಭಾವನಾಜವಂಜವವಿಭಾವಕ್ಕೇವಯಿಸಿ ವಜ್ರಜಂಘ ನೊಳಾತ್ಮೀಯಧರಾಭಾರವುಂ ನಿಱಿಸಿ ವಸುಂಧರೆವೆರಸು ಪಲಂಬರರಸಿಯು ರುಂ ಶ್ರೀಮತೀತನೂಜರ್ ವೀರಬಾಹುಪ್ರಭೃತಿಗಳಪ್ಪ ನಾಲ್ವತೊಂಭತ್ತು ಮಳ್ಗಳುಮೈನೂರ್ವರುರ್ವೀಶ್ವರರುಂ ಬೆರಸು ಪರಿಚ್ಛೇದಿಸಿ ಯವು ಧರಮುನೀಂದ್ರಪಾದಪದ್ಮೋಪಕಂಠದೊಳ್ ಜಾತರೂಪಧರನಾಗಿ ಮೋಕ್ಷ ಲಕ್ಷ್ಮೀಕಟಾಕ್ಷೈಕಲಕ್ಷ್ಯನಾದನನ್ನೆಗಮಿತ್ತಂ,

ನಿವ್ಮನೆ ನೋಡಿ ಮದ್ಗುರುವಿಯೋಗವುನಾಱಿಪೆವೀಗಳೀತಪ
ಕ್ಕವ್ಮ ಮನಂದರಲ್ ನಿವುಗೆ ಸಲ್ಲದೊಡಂಬಡಿಮೆಂದು ಕಾಲ್ಗಳಂ ।
ತವ್ಮಯ ನೆತ್ತಿಯೊಳ್ ನಿಱಿಸಿ ಮಾರ್ಕೊಳ್ ಮಾಣದೆ ಪೋದ ಮಕ್ಕಳಂ
ದೇವ್ಮನದೊಳ್ ಪಳಂಚಿದರೊ ಚಕ್ರಿತನೂಜೆಯು ವಜ್ರಜಂಘನಾ ॥ ೬೮

ವ॥ ಅನ್ನೆಗಮಿತ್ತ ವಜ್ರದಂತಚಕ್ರವರ್ತಿಯುಂ ಸಕಳಮುಕುಟಬದ್ಧಪ ರಿವೃತನಾಸ್ಥಾನಮಂಟಪಮಧ್ಯಸ್ಥಿತಸಿಂಹಾಸನದೊಳೊಂದುದಿವಸಂ ಸುಖಾ ಸೀನನಾಗಿರೆ,

ವಿಕಸತ್ಕಾಂಚನಪದ್ಮವುಂ ವಿನಯದಿಂ ತಂದೊಂದನುದ್ಯಾನಪಾ
ಳಕನಿತ್ತಲ್ಲಿ ತದಬ್ಜವುಂ ನೃಪವರಂ ವಕ್ತ್ರಾಬ್ಜದೊಳ್ ಸಾರ್ಚೆ ಕಂ ।
ಪುಕರಂ ಪೊಂಪುಱಿಯೆಂದು ಸೋಲ್ತು ಸಿರ್ವಿನಂ ಘ್ರಾಣೇಂದ್ರಿಯೌತ್ಸುಕ್ಯವುಂ
ಪ್ರಕಟಂಮಾಡಿ ನೃಪಂಗಲಂಪುವಡೆದತ್ತಂಭೋಜಗಂಧಾಸವಂ ॥ ೬೯

ವ॥ ಮತ್ತಮಾಲೀಲಾಕಮಳಮನೆ ಲೀಲೆಯಿಂ ತಿರಿಪಿದಾಗಳ್,

ತಿರಿಪೆಸಳ್ಗಳ್ ಮುಸುಱುವ ಮಧು
ಕರಂಗಳಂ ಸೋಯೆ ಪರಿವ ಮಕರಂದರಸಂ ।
ಪರಿವೇಷಂಗೊಂಡಂತಿರೆ
ಕರಮೆಸೆದುದು ನೃಪನ ಕಯ್ಯ ಲೀಲಾಂಭೋಜಂ ॥ ೭೦

ದಿನಪಾಸ್ತಸಮಯದೊಳ್ ಮು
ನ್ನಿನ ದಿವಸಂ ತತ್ಪಯೋಜದೊಳ್ ಮಡಿದಳಿ ತೊ ।
ಟ್ಟನೆ ಬೀಪೆ ತೂಗಿ ತಲೆಯಂ
ಜನನಾಥಂ ವಿಸ್ಮಯಸ್ಮಿತಂಬೆರಸಿನಿಸುಂ ॥ ೭೧

ಈಮಧುಪಂ ದಳಿತಾಂಭೋ
ಜಾವೋದಾಸಕ್ತನಕ್ಕಟಾ ಮಡಿದುದು ಪೇ ।
ಳೇಮನುಜರಖಿಳಕರಣ
ಗ್ರಾಮಮನೊಂದೊಡಲೊಳಂತೊಡಂಬಡಿಸಿದರೋ ॥ ೭೨

ಒಂದೊಂದೆ ರಸದ ಸೋಲಮ
ದೊಂದೊಂದೆನೆ ಕೊಲ್ಗುವೋವೊ ಲಂಪಳರಪ್ಪೆ ।
ಮ್ಮಂದಿಗರಂ ಬಗೆವಂದದೆ
ಕೊಂದಿಕ್ಕವೆ ಸಕಳವಿಷಯವಿಷಮವಿಷಂಗಳ್ ॥ ೭೩

ಪಾಕದೊಳತಿವಿಷಮಂ ಕಿಂ
ಪಾಕಫಳಪ್ರತಿಮಮಖಿಳವಿಷಯಸುಖಂ ಪೇ ।
ಪೇಕಳಪಿ[1] ಸುಟಿವೆನಱಿಯು
ತ್ತೇಕೆ ವಿಮೋಹಿಸುವೆನೇಕೆ ಬರ್ದುಕುವೆನಿದಱೊಳ್ ॥ ೭೪

ತೃಣಶಿಖರಾಧ್ಯುಷಿತಾಂಭಃ
ಕಣಸಂಚಳಮಮರಚಾಪಚಪಳಂ ವಿದ್ಯುತ್ ।
ಕ್ಷಣಿಕಂ ನಿಟ್ಟೆಯೆ ತನುಭೃ
ದ್ಗಣಯೌವನರೂಪವಿಭವಭೋಗಾಭೋಗಂ ॥ ೭೫

ತೆಱಪನೆ ಪೊರ್ದಿಪರ್ಗಂ ಮಾ
ಯ್ದುಱುಗುಲಿ ಜವನದಱಿನಿನಿಸು ಪೊೞ್ತಂ ತನ್ನಂ ।
ಮಱೆದಿರಲಕ್ಕುಮೆ ತಳರದೆ
ತಱಿಸಲದಿನ್ನೆಱೆದುಮಱಿಮಮಿರ್ಪುದೆ ಚದುರಂ ॥ ೭೬

---

[1] ಕ.— ವಿಷಯಂಗಳಿನಿಂ । ತೇಕಳಿಪಿ.

ಕಿಱಿಯಂ ಮುತ್ತಂ ಧನದಂ
ಬಱಿಯಂ ತೋಱಿದಂ ಗೃಹಸ್ಥನೆನ್ನದೆ ಮುಂಬಿ ।
ಟ್ಟೞಿಸಿ ಕೊಲುತಿರ್ಪ ಜವನೆಂ
ಬೞಿಕೆಯ ಪಗೆವಂಗದೆಂತು ಪಂಗಿಗನಪ್ಪೆಂ ॥ ೭೭

ನಿಧಿ ರತ್ನವ್ರಾತಮಂತಃಪುರಮೆಸೆವ ಷಡಂಗಂ ಬಲಂ ಹೈಮ[1]ಶೈಲಾ
ವಧಿಷಟ್ಖಂಡಂ ಮಹೀಮಂಡಳಮನಿಧನಮಲ್ತೆಮ್ಮನೀಡಾಡಿ ಸಲ್ಗುಂ ।
ನಿಧನಕ್ಕಂತಪ್ಪಮಂ ಮುಂ ಬಿಸುಡುವುದೆ ಚದುರ್ ನೆಟ್ಟನೆಂದಲ್ತೆ ಮುಂಪೋ
ದಧರಾಧೀಶರ್ ತಪೋಮಾರ್ಗದೊಳೆಸಗಿದರಾಮಾರ್ಗಮಿನ್ನೆಮ್ಮ ಮಾರ್ಗಂ॥

ವ॥ ಎಂದು ನಿರ್ವಾಣಸಾಮ್ರಾಜ್ಯಮನೆ ಬಯಸಿ ಸಕಳಸಾಮ್ರಾಜ್ಯಮಂ ರಾಜಾಧಿರಾಜಂ ನಿಜಾಗ್ರತನೂಜಂಗಮಿತತೇಜಂಗೆ ಕೊಟ್ಟಾಗಳಾತನಿಂತೆಂದಂ—

ಇನಿತಂ ನಿಮ್ಮ ಮನಕ್ಕೆ ಕೊಕ್ಕರಿಕೆಯಂ ಮಾಡಿರ್ದ ಸಾಮ್ರಾಜ್ಯಮಂ
ತೆನಗೊಳ್ಪಂ ಪಡೆದಪ್ಪುದಿಂತೆನಗಿದಾಚಂದ್ರಾರ್ಕಮೋ ದೇವ ನೀ ।
ಮೆನಗೀಗಳ್ ದಯೆಗೆಯ್ವೊಡಿಂತು ಬೆಸಸಲ್ ಸಾಲ್ಕಿಂದೆ ಪೋಪೆಂ ತಪೋ
ವನಕೆನ್ನಟ್ಟೆಯೆ[2] ಪೊರ್ದದಿರ್ಕೆ ಭವದಾಜ್ಞಾಲಂಘನಂ ಭೂಪತೀ ॥ ೭೯

ವ॥ ಎಂಬುದುಂ ವಜ್ರದಂತಚಕ್ರವರ್ತಿ,

ನೀನೆಮ್ಮಂ ಮಿಱಿದೆ ರಾ
ಜ್ಯಾನುಷ್ಠಾನಮನೊಡಂಬಡೀಗಳ್ ನಿಜಸಂ ।
ತಾನಕ್ಕೆ ಮಗಂಬಡೆಯೆ[3] ತ
ಪೋನಿಯಮಂ ಮಗನೆ ಕಡೆಯೊಳಿರ್ದಪುದಲ್ತೇ ॥ ೮೦

ವ॥ ಎಂದಾಗಳಮಿತತೇಜಂ ದಂತಾಂಶುಧೌತಕಪೋಳಫಳಕನಾಗಿ,

ಪಿರಿದೊಂದಾಗ್ರಹದಿಂದಮಾದ ದಯೆಯಿಂದಂ ದೇವರೆನ್ನಂ ಧರಾ
ಭರದೊಳ್ತಂದು ತೊಡರ್ಚೆ ಪೂಣ್ದು ತಲೆಗೋದಿ[4]ರ್ದಂ ಬೞಿಕ್ಕೆಂತುಮಾ।

---

[1] ಕ. ಖ.— ಹರ್ಮ್ಯ. [2] ಖ.—ವಸಕಂಮತ್ತೆಯೆ.
[3] ಕ.—ಬಳೆಯೆ. [4] ಖ.—ತಲೆಗಂಡಿರ್ದಂ.

ಧರಣೀಭಾರಮನಾಂ ಬಿಸುಪ್ಪೊಡದು ಚಿಃ ಲೋಕಕ್ಕೆ ಖ್ಯಾತ್ಯಾಸಮಿಾ
ಕರಣಂ ಭೌತಿಕಮೋದಕವ್ಯತಿಕರಂ ತಾನೆಂಬುದಂ ಮಾಡದೇ ॥ ೮೧

ವ॥ ಎಂಬುದುಮಾತನ ಪರಿಚ್ಛೇದಮನಱಿದು ತತ್ಸಹೋದರರ್ಸಾಸಿರ್ವ ರೋರೊರ್ವರುಮೊಲ್ಲದಿರ್ದೊಡಮಿತತೇಜಂಗಮನುಂದರಿಗಂ ಪುಟ್ಟಿದ ಪುಂಡರೀಕನೆಂಬ ಬಾಳಕನಂ ಸಂತಾನಪಾಲನಾರ್ಥಂ ನಿಱಿಸಿ ಷಷ್ಟಿ[1]ಸಹಸ್ರಾಂಗನಾಜನಮುಂ ವಿಂಶತಿಸಹಸ್ರಮುಕುಟಬದ್ಧರುಂ ಸಹಸ್ರಪ್ರಮಿತನಿಜತನೂಜರುಂ ಪಂಡಿತೆಯೆಂಬ ಪೆಸರನಾಪ್ರಸ್ತಾವ[2]ದೊಳ್ ನನ್ನಿಮಾಡಿದ ಪಂಡಿತೆಯುಂ ಬೆರಸು ಯಶೋಧರಮುನೀಂದ್ರಪಾದಪದ್ಮೋಪಾಂತದೊಳ್ ವಜ್ರದಂತಮಹಾರಾಜಾಧಿರಾಜಂ ದಿಗಂಬರಾಂಬರವಿಳಾಸದಿಂ ತ್ರಿಲೋಕಶಿಖರಿಶೇಖರನಾದಂ; ಲಕ್ಷ್ಮೀಮತೀಮಹಾದೇವಿಯುಮನುಂದರಿವೆರಸು ಚಕ್ರವಲ್ಲಭವ್ಯಪಾಯದೊಳ್[3] ಪುಂಡರೀಕನಂ ಕೈಕೊಂಡಿರೆ,

ತನುವಿಧುವೊಂದನುಳ್ಳ ನಭದೊಳ್ ಶಿಶುಕೇಸರಿಯೊಂದನುಳ್ಳ ಕಾ
ನನದೊಳದೊಂದು ಕುಟ್ಮಳಮನುಳ್ಳ ಸರೋವರದೊಳ್ ಪೊಣರ್ಚಿ ನೆ।
ಟ್ಟನೆ ದೊರೆಯಾದುದೀಕುಲಮುಮೀಶಿಶುವೊರ್ಬನಿನೆಂಬಿನಂ ಜಗ
ಜ್ಜನಮತಿಮುಗ್ಧಬಾಳನರಪಾಳಕಮಾದುದು ಚಕ್ರಭೃತ್ಕುಲಂ ॥ ೮೨

ವ॥ ಅಂತದಂ ಕಂಡು ಕಪ್ಪಮಿಾಯದೆ ಚಪ್ಪರಿಸುವ ಮಂಡಳಿಕರುಮಂ ಅಡಂಗದಾಟವಿಕರುಮಂ ಬತ್ತಿ[4]ಬರ್ಪ ಪಾರ್ಷ್ಣಿಗ್ರಾಹಕರುಮಂ ಅಱಿದು ಲಕ್ಷ್ಮೀಮತಿಮಹಾದೇವಿ ವಜ್ರಜಂಘಂಗೆ ಬಱಿಯನಟ್ಟುವ ಕಜ್ಜಮಂ ಮಂತ್ರಿವರ್ಗದೊಳಾಳೋಚಿಸಿ,

ವನಜಾನೀಕಮೆ ಪಳ್ಳವೋಪ ತೆಱದಿಂ ಕಿಪ್ತೆರ್ದು ಭೂಪಂ ತಪೋ
ವನಮಂ ಪುತ್ರಕಳತ್ರಮಿತ್ರಸಹಿತಂ ಪೊಕ್ಕಂ ಕರಂ ಬಾಳನೊ ।
ರ್ಬನಿವಂ ರಾಜ್ಯದೊಳರ್ದನಾನಬಲೆಯೆಂ ಕಾದಿರ್ದನೇಮಾತೊ ತ ।
ನ್ನನೆ ನಚ್ಚಿರ್ದುದು ಕಾಗುಮೆಂಬ ಬಗೆಯಿಂದಿಂತೀಮಹೀಮಂಡಲಂ ॥ ೮೩

1ಕ.—ಅಷ್ಟ. 2ಕ.—ಪದ.
3ಕ.—ವಿಯೋಗ. 4ಕ.—ಎತ್ತಿ.

ಜಳಧಿತರಂಗತಾಟಿತಧರಾತಳಭಾರಮಿದೆತ್ತ ಬಾಳನೆ
ತ್ತಳವಿನಿತುಂಟೆ ತಾಳ್ದಲಿದನೊಟ್ಟಜೆಯಿಂ ಕೊಳಲೆಂದು ವೈರಿಗಳ್ ।
ತಳರ್ದಪರೆಂತು ತನ್ನ ಬಲಮಿಲ್ಲದೆ ತಾಳ್ದುವೆನೊಪ್ಪಗೊಳ್ಗೆ ತ
ನ್ನಳಿಯನನೆಯ್ದಿ ಪಾಲಿಸುಗೆ ಬಂದಿದನೀಗಳನಾಥಯೂಥಮಂ ॥ ೮೪

ವ॥ ಎಂದು ಬರೆದು ರತ್ನಕರಂಡಕದೊಳಿಟ್ಟು ಮುಚ್ಚಿ ಮುದ್ರಿಸಿದೋಲೆಯುಮನಪೂರ್ವೋಪಾಯನಮುಮಂ ಪರಿಣತಾಶೇಷಶಾಸ್ತ್ರಾರ್ಥರುಮುನ್ನತಾನ್ವಯರುಂ ಗಂಧರ್ವಪುರಾಧಿನಾಯಕರುಮಪ್ಪ ಚಿಂತಾಗತಿ[1]ಯುಂ ಮನೋಗತಿಯುಮೆಂಬ ವಿದ್ಯಾಧರರ ಕಯ್ಯೊಳ್ಕೊಟ್ಟೆಮ್ಮಳಿಯನಂ ತಡೆಯದೆ ಮುಂದಿಟ್ಟೊಡಗೊಂಡು ಬನ್ನಿಮೆಂದಟ್ಟಿದೊಡಾಗಳಾಗಗನಚರರ್ ವಿಮಾನಾರೂಢರತಿತ್ವರಿತಗಮನದಿಂ ಪೋಗೆ ವೋಗೆ,

ಗಾಳಿಯನೆಡೆಗಲಿಸಿದುದು[2] ವಿ
ನೀಳಘನಾಘನಮನಳಱಿ ಪಱಿದುದು ಮುಕ್ತಾ ।
ಜಾಳಪರಿಲಂಬಿಲೋಲದು
ಕೂಳಪತಾಕಾವಿರಾಜಮಾನವಿಮಾನಂ ॥ ೮೫

ಪಾಱುವ ವಿಮಾನದೊಂದ
ಳ್ಳೀಱಿಂ ಪಱಿದುಗುವ ಮುಗಿಲ ನೀರ್ಗಳ ಪಲವುಂ ।
ಬೀಱುಗಳೊಳೆಳಸಿ ಖಚರರ
ನಾಱಿಸಿದುದು ಗಗನದೊಳ್ ವಿಯತ್ತಳಪವನಂ ॥ ೮೬

ವ॥ ಅಂತು ಬಂದುತ್ಪಳಖೇಟಮನೆಯ್ದಿ ವಜ್ರಜಂಘನುಮಂ ಶ್ರೀಮತಿಯುಮಂ ಕಂಡು ದೂರಾವನತಮಸ್ತಕರಾಗಿ[3]ತಮ್ಮ ತಂದುಪಾಯನಂ[4]ಬೆರಸು ರತ್ನಕರಂಡಕಮಂ ಮುಂದಿಟ್ಟಾಗಳದಱ ಮುದ್ರಿಕೆಯ ನೊಡೆದಂತಸ್ಸ್ಥಿತಕಾರ್ಯಪತ್ರಮಂ ಬಾಜಿಸಿ ನೋಡಿ, ವಿಸ್ಮಯಾಕ್ರಾಂತಚಿತ್ತನಾಗಿ,

ಅಱಿಪದೆ ಪದಗಳಪದೆ ಪೊಂ
ಪುಱಿವೋಗೆ ಯಶಃಪ್ರಕಾಶಮಾಗಳ್ ಧರೆಯಂ[5] ।

1ಕ.—ಚಿತ್ರಗತಿ. 2ಕ.—ಗಲಿಸಿದುದೆನೆ. 3ಖ.—ದೂರೋತ್ಸಾರಿತಪ್ರಣತರಾಗಿ.
4ಗ.—ತಂದಪಾವುಡಂ. 5ಕ.—ಪ್ರಕಾಶಮಾಭುವನದೊಳೇಂ.

ಪಲಿಕೆಯುದ್ಧ ತೊಲ್ತಿ ನುಲಿವಂ
ತುಲಿದಂ ಸಾಮ್ರಾಜ್ಯಲಕ್ಷ್ಮಿಯಂ ಚಕ್ರಧರಂ ॥ ೮೭

ತಂದೆ ಕುಡೆ ರಾಜ್ಯಮಂ ತೃಣ
ದಿಂದಂ ಲಘುವಾಗೆ ಬಗೆದು ಬಗೆದರ್ ತಾಮುಂ ।
ತಂದೆಯು ಬಗೆದುದನೆಂದೊಡ
ಗುಂದಲೆ ಪೊಗಲಿಲ್ಕೆ ಚಕ್ರಿನಂದನರಳವಂ ॥ ೮೮

ವ॥ ಎಂದು ನಿಜಸಭಾಜನಕ್ಕೆಲ್ಲಂ ಪೊಗಲ್ದು ತದ್ವಾರ್ತಾಕರ್ಣನೋದೀರ್ಣಶೋಕವ್ಯಾಕುಳೆಯಾಗಿರ್ದ ನಿಜವಲ್ಲಭೆಯಲ್ಲಿಗೆ ಬಂದು,

ಗುರುಶೋಕಾವೇಗಮಾದಂ ಗುರುವೆನಗಮದೇಕೆನ್ನಪುಂ ನಮ್ಮ ಜನ್ಮಾಂ
ತರದಿಂದಂ ಬಂದ ಮೋಹಂ ಬಿಡದಲೆವುದಱಿಂದಾದೊಡಂ ಧೈರ್ಯದಿಂ ಸಂ।
ಸರಣಾಂಭೋರಾಶಿಯಂ ದಾಂಟುವ ಬಗೆಯನೆ ಕಯ್ಕೊಂಡನೆಂದಂದೆ ಮಾವಂ
ಚರಿತಾರ್ಥಂ ನೀನಣಂ ಚಿಂತಿಸದಿರು ನಮಗಿನ್ನುಂಟೆ ಶೋಕಾವಕಾಶಂ

ವ॥ ಎಂದು ಆಶೋಕಾವೇಗಮನಾಱಿಸಿ, ಬಂದ ವಿದ್ಯಾಧರರಂ ಯಥೋಚಿತಪ್ರತಿಪತ್ತಿಗಳಿಂ ಸಂತೋಷಂಬಡಿಸಿ[1] ನಿಜಪ್ರಿಯಪ್ರಧಾನಮಂತ್ರಿಮತಿವರನೊಳಂ ಸೇನಾಯಕನಕಂಪನೊಳಂ ಪುರೋಹಿತನಾನಂದನೊಳಂ ಪ್ರಧಾನಶ್ರೇಷ್ಠಿಧನಮಿತ್ರನೊಳಮಾಳೋಚಿಸಿ,

॥ ಹ ರಿ ಣಿ ॥

ನೆಣಸುಮಹಿತರ್ ಮೇಲೇಱುವುದ್ಯೋಗಮಂ ಬಗೆದಿರ್ದರೆ
ನ್ನಣುಗಿನಳಿಯಂಗೆನ್ನಿಂ ಮೇಗಿಲ್ಲ ಕೂರ್ಪವರಿಂತಿದೇಂ ।
ಗಣಿದದೆಡೆಯೇ ಪೋಪೆಂ ಪೋಗೆಂದು ಮಾಣದೆ ಪುಂಡರೀ
ಕಿಣಿಗೆ ಪಯಣಂಬೋಗಲ್ ನಿಶ್ಚೈಸಿದಂ ಧರಣೀಶ್ವರಂ ॥ ೯೦

ವ॥ ಅಂತತಿತ್ವರಿತಗಮನನಿಶ್ಚಿತಮನನಾಗಿ ಬಲಾಧ್ಯಕ್ಷನಂ ಬರಿಸಿ, ಮನಮೊಳ್ಳುನ್ಮದಗಂಧಸಿಂಧುರಚಯಮಂ ಚಂಡಾಜಿವಿಕ್ರಾಂತಮತ್ತ್ಯ[2]ನಿಳಾಕ್ರಾಂತಹಯೌಘಮಂ ಊರ್ಜಿತಜಯಪ್ರಖ್ಯಾತಜಂಘಾಳಪ ।

---

[1] ಗ.—ಪ್ರತಿಪತ್ತಿಯಿಂ ಮನ್ನಿಸಿ. [2] ಕ.—ಚಂಡಾಂಶುವಿಕ್ರಾಂತಮತ್ತ.

ತ್ತಿನಿಕಾಯಂ ಕದನೈಕದುರ್ಜಯಮುದಸ್ಕಂಧಪ್ರಯಾಣಕ್ಷಮಾ
ವನಿಪಾಳವ್ರಜವಿಾಗಳೆನ್ನೊಡನೆ ಬರ್ಕೆಂದಂ ರಣಾನಂದದಿಂ ‖ ೯೧

ವ‖ ಅಂತು ಬೆಸಸಿದಂದದೊಳೆ ಬಂದು ಮುಂದೆ ನಿಂದ ಚತುರಂಗಬಲಂ ಬೆರಸಬಳಾಬಾಳವೃದ್ಧವೃದ್ಧೋಕ್ಷಶಕಟಸಂಕಟಮಪ್ಪ ಕಟಕಮಂ ಮೆಲ್ಲ ಮೆಲ್ಲನೊಡಗೊಂಡು ಬರ್ಪಂತು ಕೊರ್ಬಾಳತುಂದಿಳ[1]ಜರತ್ಪಾಮಂತಸಂ ದೋಹಕ್ಕಪ್ಪಯಿಸಿ ಶುಭದಿನಮುಹೂರ್ತದೊಳ್ ಪ್ರಯಾಣಭೇರಿಯಂ ಪೊಯಿಸಿ, ಪೊಱಮಟ್ಟಾಗಳ್,

ಕೊಡೆ ತಪೆ ತಳ್ತ ಸೀಗುರಿ ಕರೀಂದ್ರಘಟಾಳಿ ತುರಂಗಸೈನ್ಯಮು
ರ್ಕುಡುಗದೆ ಬರ್ಪ ನಾಯಕಬಲಂ ರಥಸಂತತಿ ಖಡ್ಗಿವೃಂದಮೋ।
ಗಡಿಸದ ಗಾಡಿಕಾರ್ತಿಯರ ಬರ್ಪ ನಿಯೋಗಿಗಳಾದ ಚೆಲ್ವನಾ
ವೆಡೆಯೊಳಮಿಾಯೆ ಕಣ್ಗೊಸಗೆಯುಂ ಪಡೆದತ್ತು[2]ಸಮಸ್ತಸಾಧನಂ ‖ ೯೨

ವ‖ ಅಂತು ಪುಂಡರೀಕಿಣಿಗಭಿಮುಖನಾಗಿ ಪಯಣಂಬಂದು ಸರ್ಪಸ ರೋವರಮೆಂಬ ಕೊಳನಂ ಬಳಸಿದ ಮಾಧವೀಲತೆಯ ಮಂಟಪಂಗಳೊ ಳಂ ಚೂತಲತೆಯ ಬಳ್ಳಿಗಾವಣಂಗಳೊಳಂ ಅಶೋಕಲತೆಯ ವಿಳಾಸ ಗೃಹಂಗಳೊಳಂ ನವಮಾಲಿಕಾಲತೆಯಿಱಂಬುಗಳೊಳಂ[3] ತಮಾಳಲತೆಯ ಕೊಂಬೆಯಂಗಳೊಳಂ[4] ತಾಂಬೂಲಲತೆಯಳಂಕಾರಭವನಂಗಳೊಳಂ ಎಳ ಲತೆಯ ಗಣಿಕಾವಾಸಂಗಳೊಳಮಿಂಬಱಿದು ಬೀಡಂ ಬಿಡಿಸಿದಾಗಳ್,

ಇದು ಗಹನಾಂತರಾಳಮಿದಱೊಳ್ ನೆಲಸಿರ್ದ ಮದೀಯತೋಯದಿಂ
ದೊದವಿದ ನೀರಜಾವಳಿಯ ಚೆಲ್ವು ನಿರರ್ಥಕಮಾಗದಿಂದು ಪೊ।
ರ್ದಿದ ಜನದಿಂ ಕರಂ ಸಫಲಮಾದುದು ಪೆಂಪಿನಗಾದುದೆಂದು ರಾ
ಗದಿನುಲಿವಂತುಟಾಯ್ತು ಕಳಹಂಸನಿನಾದದಿನಾಸರೋವರಂ ‖ ೯೩

ಆಗಳೆ ಮಾಡ್ಪಿ ಪುಷ್ಪರಚನಾಳಿಗೆ[5] ಜೈನಗೃಹಕ್ಕೆ ಕಾಂತಕಾಂ
ತಾಗಣಕರ್ಣಪೂರಕುಸುಮಾಭರಣಾಳಿಗೆ ಯೋಗ್ಯಮಾಗಿ ಮೇ।

---

[1]ಕ.—ಕೊರ್ಬಾಳರುಂ ದೀಕ್ಷಾಳ. [2]ಖ.—ಕಣ್ಗೆ ಪಸರಂಬಡೆದತ್ತು. [3]ಗ.—ಲತೆಯ. ಱೊಂಜೆಗಳೊಳಂ; ಕ.—ಲತೆಯಕುಂಜಗಂಳೊಳಂ. [4]ಖ.—ಗೊಂಚಲ್ಗಳೊಳಂ. [5]ಕ—ಚಿತ್ರರಚನಾಳಿಗೆ.

ಲಾಗಿ ತೆರಳ್ದು ಪೊಕ್ಕು ಪೊಱಮಟ್ಟು ಮದೇಭಗಣಕ್ಕೆ ಮಂಡನಾ
ಯೋಗಮುಮಾದುವಾಕೊಳದ ಕೋಮಳ ನೀರಜಪುಷ್ಪಜಾತಿಗಳ್‖ ೯೪

ಚಳಕಳಹಂಸಸಾರಸರಥಾಂಗಮದಾಳಿನಿನಾದಕೈರವೋ
ತ್ಪಳಶತಪತ್ರಮಂದಮಕರಂದರಸೋತ್ಕಟಗಂಧಬಂಧುರಂ ।
ಲಳಿತನೃಪಾಂಗನಾಳಕಚಯಂಗಳನಾಡಿಪುದಾಯ್ತು ಸಂತತೋ
ಚ್ಛಳಿತತರಂಗಶೀಕರತುಷಾರಜಳಂ ಸರಸೀಸಮೀರಣಂ ‖ ೯೫

ವ॥ ಅಂತಾಮಂಡಳೇಶ್ವರನಾಸರೋಜಷಂಡದೊಳ್ ಬೀಡಂಬಿಟ್ಟಿರ್ಪನ್ನೆ ಗಂ ಸ್ವರ್ಗಾಪವರ್ಗಮಾರ್ಗದಂತಪಗತಕಲ್ಮಷರುಂ, ಅಂಬರದಂತೆ ಸನ್ಮಾರ್ಗರುಂ, ಅಂಭೋಧಿಯಂತೆ ಗಂಭೀರಾಶಯರುಂ, ಆದಿತ್ಯನಂತೆ ನಿರ್ಧೂತತಮಸ್ತಮರುಂ, ಚಂದ್ರನಂತೆ ಸರ್ವಸತ್ತ್ವಸೌಮ್ಯರುಂ, ಅನಿಲನಂತೆ ನಿಸ್ಸಂಗರುಂ, ಚಿಂತಾಮಣಿಯಂತೆ ಭವ್ಯಜನಮನೋಭಿಲಷಿತಫಲಪ್ರದರುಂ, ಮೇರುವಿನಂತಚಳಿತಧೈರ್ಯಗುಣರುಮಪ್ಪ ಧರ್ಮವರಸಾಗರಸೇನರೆಂಬ ಗಗನಚಾರಣರ್ ಕಾಂತಾರಚರ್ಯಾಮಾರ್ಗದೊಳ್ ತಮ್ಮ ವಾಸಕ್ಕೆ ಬರ್ಪರಂ ಶ್ರೀಮತಿಯುಂ ತಾನುಂ ಕಂಡು ಸಸಂಭ್ರಮಂಬೆರಸಿದಿರಂ ನಡೆದು ಬದ್ಧಾಂಜಳಿಪುಟಘಟಿತನಿಟಿಲರಾಗಿ ನಿಲ್ಕೆಂದು ನಿಲಿಸಿ,

ಇದಿಗೆರ್ಗಳ್ವಿದು ಕಾಲ್ಗರ್ಚುವು
ದುದಾತ್ತಮಪ್ಪೆಡೆಯೊಳಿರಿಪುದರ್ಚಿಪುದೆಱಗಿ ।
ಪುರ್ದು ಕರಣಶುದ್ಧಿವಡೆವುದು
ಪಡೆದನ್ನಮನೀವುದೆಂಬ ನವವಿಧಪುಣ್ಯಂ ‖ ೯೬

ವ॥ ತಮಗೆ ದೊರೆಕೊಳೆ,

ನೆಱೆದಿತ್ತಿ ಭಕ್ತಿ ದಯೆ ಪುದಿ
ದಱಿವೌದಾರ್ಯಂ ಕ್ಷಮಾಗುಣಂ ಶಕ್ತಿಯುಮೆಂ ।
ಬಱಿಕೆಯಗುಣಮೇೞಱೊಳಂ
ನೆಱೆದಿತ್ತರ್ ಮುನಿಯುಗಕ್ಕೆ ದಾನಮನವರ್ಗಳ್ ‖ ೯೭

ಸುರತೂರ್ಯಧ್ವಾನಮೆಯ್ತಂ ಪರ್ಲರ ಸರಿ ಪೊದಟ್ದಿರ್ದ ರೈಧಾರೆ ದೇವೇಂ
ದ್ರರ ಹೋದಾನ ಪ್ರಸಿದ್ಧಧ್ವನಿ ಸುರಭಿಸಮೀರಪ್ರಚಾರಂ ಜಗಕ್ಕ ।

ಜ್ವರಿ ಪಂಚಾಶ್ಚರ್ಯಮೆತ್ತಂ ನೆಗಪೆ ಶಿಬಿರದೊಳ್ ವಿಸ್ಮಯಾಕ್ರಾಂತನಿರ್ದಂ
ಪಿರಿದೊಂದಾನಂದದಿಂದಂ ಸುಕವಿಜನಮನೋಮಾನಸೋತ್ತಂಸಹಂಸಂ ॥

ವ॥ ಅಂತು ಬೀಡಿಂಗಮಾಶ್ಚರ್ಯಂ ನೆಗಪೆ,

ಕ್ಷಿತಿಚಕ್ರಾರ್ಚಿತ[1]ಚಕ್ರವರ್ತಿಪದಮುಂ ದೇವೇಂದ್ರರಾಜ್ಯೋದಯೋ
ನ್ನತಿಯುಂ ಭವ್ಯಜನಂಗಳಾಶೆವಡುತಿರ್ಪಾರ್ಹಂತ್ಯಮುಂ ಸಾರ್ಗಮು।
ನ್ನಿತದಾನಂಗರಿದುಂಟೆ ಸೌಖ್ಯಮೆನುತುಂ ದಾನಪ್ರಭಾವಕ್ಕೆ ಸಂ
ಚಿತಪುಣ್ಯೋದಯನಾಗಳಾದಮೊಸೆದಂ ಸಂಸಾರಸಾರೋದಯಂ ॥೯೯

ಗ॥ ಇದು ದೇವೇಂದ್ರಮುನೀಂದ್ರವಂದ್ಯಪರಮಜಿನೇಂದ್ರಮುಖ
ಚಂದ್ರವಾಕ್ಚಂದ್ರಿಕಾಪ್ರಸರಪ್ರಸಾದೋದೀರ್ಣಸೂಕ್ತಿ
ಕಲ್ಲೋಲಮಾಲಾಕೀರ್ಣಕವಿತಾಗುಣಾರ್ಣವ
ಪ್ರಣೀತಮಪ್ಪಾದಿಪುರಾಣದೊಳ್
ಚಾರಣಯುಗಳದಾನೋತ್ಸವವರ್ಣನಂ
ಚತುರ್ಥಾಶ್ವಾಸಂ
ಸಂಪೂರ್ಣಂ.

1ಖ.—ಚಕ್ರೋಚಿತ.

ಪಂಚಮಾಶ್ವಾಸಂ.

ಶ್ರೀಮತಿವೆರಸಾಗಳತಿ
ಪ್ರೇಮದೆ ಮುನಿಯುಗಳನಿಕಟಮಂ ಸಾರ್ದಿನಿತೇ ।
ಕೀವೋಹಮಿವರೊಳೆನೆಗೆಂ
ದಾಮಹಿಮಹಿತಂ ಸರಸ್ವತೀಮಣಿಹಾರಂ ॥ ೧

ವ॥ ಬೆಸಗೊಂಡಾಗಳ್ ವೃದ್ಧಕಂಚುಕಿ,

ಇನಿತುವರಂ ವ್ಯಾಮೋಹಂ
ನಿನಗೇಕಾದಪುದು ಬಗೆದು ಭಾವಿಸಿ ನೋಡೀ ।
ಮುನಿಯರ್ ನಾಲ್ವತ್ತೊಂಭ
ತ್ತನೆಯುಮಳ್ಗಳ್ ನಿನ್ನ ತನಯರಲ್ಲರೆ ನೃಪತೀ ॥ ೨

ವ॥ ಎಂಬುದುಮರಸನಱಿದುಸಿರದಿರಿಮೆಂದು ತನ್ಮುನಿಗಳ ಪಾದಪ್ರಕ್ಷಾಳನೋದಕದೊಳ್ ಪೊರಳ್ದು ಪುಷ್ಪವರ್ಷದ ಪೂಗಳೊಳ್ ಪುದಿದು ದಾನಾನುಮೋದಪ್ರಭಾವದಿಂದುಪಶಮಭಾವಮಂ ತಾಳ್ದಿ ಮುನಿಪತಿಯ ಮುಖಾರವಿಂದಮಂ ನೋಡುತಿರ್ದ ಶಾರ್ದೂಲವರಾಹಗೋಲಾಂಗೂಲನಕುಳಂಗಳಂ ನೋಡುತ್ತುಮವರ್ಕೆ ಭಕ್ಷ್ಯಧೂಪಂಗಳಂ ತರಿಸಿ ನೀಡುತ್ತುಮಿದಾರ್ತ್ಮೀಯುಪರಮಪ್ರಸಾದಭೂಮಿಗಳಾಗಿರ್ದ ಮಂತ್ರಿಸೇನಾನಾಯಕಪುರೋಹಿತಶ್ರೇಷ್ಠಿಪದನಿಯುಕ್ತರಪ್ಪ ಮತಿವರಾಕಂಪನಾನಂದಧನಮಿತ್ರರೆಂಬ ನಾಲ್ವರ ಭವಾವಳಿಯುಂ ಬೆಸಗೊಳೆ ದಮವರಮುನಿನಾಥನವಧಿಬೋಧದಿಂದನುಕ್ರಮಂದಪ್ಪದೆ,

ಕೆದಱಿದಪುದು ದೆಸೆದೆಸೆಗಮ್ಮೃ
ತದ ಪನಿಯುನಿದೊಂದು ಮುನಿಪಮುಖಚಂದ್ರಮನೆಂ ।
ಬುದನೆನಿಸೆ ದಶನದೀಧಿತಿ
ಮೃದುಮಧುರಗಭೀರನಿನದದಿಂ ಮುನಿ ನುಡಿದಂ ॥ ೩

ವ॥ ಈಮತಿವರನೀಭವಕ್ಕಯ್ದನೆಯ ಭವದೊಳೀಜಂಬೂದ್ವೀಪದ ಪೂ

ರ್ವವಿದೇಹದ ವತ್ಸಕಾವತೀವಿಷಯದ ಪ್ರತಿಬದ್ಧಪ್ರಭಾಕರೀಪುರದೊಳ್ ಮತಿವೃದ್ಧನೆಂಬ[1]ರಸನಾಗಿ,

ವಿವಿಧಾರಂಭಪರಿಗ್ರಹಂ ವಿಷಯಸೌಖ್ಯಾಯತ್ತನತ್ಯಂತಲೋ
ಭವಿಷಗ್ರಸ್ತನುಪಾದ್ರಿಯೊಳ್ ದ್ರವಿಣಮಂ ಬಯ್ತುದ್ಧತಂ ತನ್ನುಸಿರ್ ।
ತವೆ ಪಂಕಪ್ರಭೆಯೊಳ್ ದಶಾಬ್ಧ್ಯುಪಮೆಯಿಂ ದುಃಖಾಗ್ನಿಯೊಳ್ ಬೆಂದು ಮ
ತ್ತವನಲ್ಲಿಂ ಪೊಱಮಟ್ಟು ಮುನ್ನ ಧನಮಂ ಬಯ್ತುರ್ದಗಾರಣ್ಯದೊಳ್ ॥ ೪

ಪುಲಿಯಾಗಿ ಪುಟ್ಟೆ ತನ್ಮಂ
ಡಲನಾಥಂ ಪ್ರೀತಿವರ್ಧನಂ ರಿಪುನೃಪರಂ ।
ಚಲದಲೆದು ಬಂದು ಚಾತು
ರ್ಬಲಯುತನಾನಗದ ಬಳಸಿ ಬೀಡಂ ಬಿಟ್ಟಂ ॥ ೫

ಬಿಡೆ ತಿರ್ದಿದ ಶಕುನದ ನಯ
ದಡಿವಿಡಿದು ಪುರೋಹಿತಂ ನೃಪಂಗೀನುಡಿಯಂ ।
ನುಡಿದಂ ಕನಕದ ಪೂಜೆಯ
ಪಡೆಪಾದಪುದಿಲ್ಲಿ ಮುನಿಯ ದಾನದಿನಧಿಪಾ ॥ ೬

ಈಗಳೆ ನಿನಗೆಂಬುದುಮನು
ರಾಗದಿನಾಪ್ರೀತಿವರ್ಧನಂ ಮುನಿವರರೆಂ ।
ತೀಗಿರಿಗೆ ಚರಿಗೆವರ್ಪರ
ನಾಗತಮತಿ ಬಗೆಯ ನೀನುಪಾಯಾಂತರಮಂ ॥ ೭

ಎನೆ ಪೊಲಲ ಬೀದಿವೀದಿಗ
ಳನಿತುಮನೆಂರಂತೆ ತಳಿದು ಗುಡಿಗಟ್ಟಿಸಿ ಸೀಂ ।
ನನೆಯ ಮುಗುಳಲರ ತುಱುಗಲ
ನನಂತಮಂ ನೆಱೆಯೆ ಕೆದಱವೇಪ್ ನೃಪತಿಳಕಾ ॥ ೮

---

[1] ಗ.—ಪ್ರಭಾವತೀಪುರದೊಳತಿವೃದ್ಧನೆಂಬ; ಖ.—ಪುರದೊಳುಮತಿಗೃದ್ಧನೆಂಬ.

[2] ಗ.—ಬಯ್ತಾಗಳಾರಣ್ಯದೊಳ್.

ಎಂದೊಡೆ ನೃಪನಾತನ ಪೇ
ೞ್ದಿಂದದೊಳದನಂತೆ ಮಾಡವೇೞ್ದೊಡೆ ಮುನಿಪಂ ।
ಸಂದ ಪಿಹಿತಾಸ್ರವಂ ಪುಗು
ತಂದಂ ನೋಂತೊಂದು ತಿಂಗಳಿಂಗಾಪುರಮಂ ॥ ೯

ತಳಿಯೆ ಕೆಸಱಾದ ಧರೆ ಪೂ
ಗಳ ತುಱುಗಲೊಳೆಸೆಯೆ ಪೊಱಲಿದಪ್ರಾಸಕಮೆಂ ।
ದೊಳಪುಗದೆ ನಿಯಮದಿಂ ನಿ
ರ್ಮಳಚರಿತಂ ಚರಿಗೆವೊಕ್ಕನರಸನ ಬೀಡಂ ॥ ೧೦

ಪುಗೆ ನೃಪನಿದಿರಂ ಬಂದಾ
ವಗಮರ್ಥಿಯೊಳಱಿದು ನಿಱಿಸೆ ದಾನೋನ್ನತಿಯೊಳ್ ।
ಗಗನತಳದಿಂದಮೊರ್ಮೆಯೆ
ನೆಗೆದತ್ತಾಶ್ಚರ್ಯಮಾಗೆ ಪಂಚಾಶ್ಚರ್ಯಂ ॥ ೧೧

ವ॥ ಆಗಳಾಪರ್ವತದೊಳಿರ್ದ ಶಾರ್ದೂಲಂ ಜಾತಿಸ್ಮರನಾಗಿ ಪರಿತ್ಯಕ್ತಾಹಾರಶರೀರನಾಗಿ ಉಪಶಾಂತಸ್ವಾಂತನಿರ್ದುದೆಂಬುದಂ ತನ್ಮುನೀಂದ್ರರವಧಿಜ್ಞಾನದಿಂದಱಿದು ಆಪ್ರೀತಿವರ್ಧನನಂ ಪ್ರತಿಬೋಧಿಸುವ ಬಗೆಯೊಳಾಶಾರ್ದೂಲನ ಪೂರ್ವಭವವೃತ್ತಾಂತಮುಮಂ ಕಾಲಲಬ್ಧಿದೊರೆಕೊಳೆ ಶರೀರಪರಿತ್ಯಾಗಂಗೆಯ್ದಿರ್ದುದೆಂಬುದುಮನಱಿಪಿ ತದ್ಗಿರಿತಟದೊಳ್ ಮುನ್ನೆ ಪೂಳ್ದ ಸುವರ್ಣಪೂರ್ಣಕಟಾಹಂಗಳಂ ತೋಱಿದಾಗಳ್ ಚೋದ್ಯಂಬಟ್ಟು,

ಪಿರಿದುಂ ಪೂಜೆಯನರಸಂ
ಪರಿವಾರಂಬೆರಸು ಮಾಡೆ ಮುನಿಪತಿಯು ಪದಾಂ ।
ಬುರುಹದ ಮೊದಲೊಳ್ ನೋಂತುದು
ಭರದಿಂ ಪದಿನೆಂಟು ದಿವಸಮಂ[1] ಶಾರ್ದೂಲಂ ॥ ೧೨

ವ॥ ಅಂತು ನೋಂತು,

---

[1] ಕ.—ಪನ್ನೊಂದುದಿವಸ.

ಸುಡುವುದರಾಗ್ನಿಯುಮೊಡಲಂ
ಮಿಡುಕುವಿನಂ ಕಡಿವ ಕಟ್ಟಿಱುಂಪೆಗಳುಮದಾ ॥
ಮಡೆಯುಮುರಿಸುವುದೊ ನರಕದ
ಕಡುದುಃಖದೊಳಗಿದು ಸುಗಿದು ನಮೆದೆನಗೀಗಳ್ ॥ ೧೩

ವ॥ ಎಂದು ಧೈರ್ಯಮನೆ ಮನದೊಳವಲಂಬಿಸಿ ಸಮಾಧಿವಡೆದೀಶಾನಕಲ್ಪದೊಳ್ ದಿವಾಕರಪ್ರಭಮೆಂಬ ವಿಮಾನದೊಳ್ ದಿವಾಕರಪ್ರಭನೆಂಬದೇವನಾದಂ. ಆಪ್ರೀತಿವರ್ಧನನುಮಾಭಟ್ಟಾಕರರ್ ದಯೆಗೆಯ್ದ ದೀಕ್ಷೆಯೆಂಬ ಕಲ್ಪಲತೆಯ ಫಲದಿಂದಮೃತಪದವಿಯುಂ ಪಡೆದಂ. ಆತನ ಸೇನಾನಾಯಕಮಂತ್ರಿಪುಂಗವಪುರೋಹಿತರ್ ಮೂವರುಂ ನೃಪನ ದಾನಾನುಮೋದದ ಫಲದಿಂದಮುತ್ತರಕುರುವಿನೊಳಾರ್ಯರಾಗಿ ಜೀವಿತಾಂತ್ಯದೊಳೀಶಾನಕಲ್ಪದೊಳ್ ಸೇನಾನಾಯಕನಪ್ಪಾರ್ಯಂ ಪ್ರಭಾಕರವಿಮಾನದೊಳ್ ಪ್ರಭಾಕರನೆಂಬೊಂದೇವನಾದೊಂ ; ಮಂತ್ರಿಯಪ್ಪಾರ್ಯಂ ಕಾಂಚನವಿಮಾನದೊಳ್ ಕನಕಪ್ರಭನೆಂಬ ದೇವನಾದಂ ; ಪುರೋಹಿತನಪ್ಪಾರ್ಯಂ ತುಷಿತಾಖ್ಯವಿಮಾನದೊಳ್ ಪ್ರಭಂಜನನೆಂಬೊಂ ದೇವನಾದಂ; ಮುನ್ನ ಪೇೞ್ದ ಶಾರ್ದೂಲಚರನಪ್ಪದೇವಂ ಬೆರಸು ಅಂತು ನಾಲ್ವರ್ ದೇವರ್ ಲಲಿತಾಂಗದೇವನಾದಂದು ನಿನಗೆ ಪರಿವಾರದೇವರಾದರ್; ಆಲಲಿತಾಂಗದೇವನೈ ನೀನಿಲ್ಲಿ ಬಂದು ವಜ್ರಜಂಘನಾದೈ; ನಿನ್ನ ದೇವಿಯಪ್ಪ ಸ್ವಯಂಪ್ರಭೆಯುಮೀಗಳ್ ಶ್ರೀಮತಿಯಾದಳ್; ಶಾರ್ದೂಲಚರನಪ್ಪ ದಿವಾಕರದೇವಂ ಬಂದು ಮತಿಸಾಗರನೆಂಬಂಗಮಾತನ ಭಾರ್ಯೆ ಶ್ರೀಮತಿಗಂ ತನೂಜನಾಗಿ ನಿನಗೆ ಮಂತ್ರಿಮತಿವರನಾದಂ; ಪ್ರಭಾಕರಾಮರಂ ಬಂದು ಅಪರಾಜಿತಂಗಮಾರ್ಜವೆಗಂ ನಂದನನಾಗಿ ಸೇನಾನಾಯಕನಕಂಪನಾದಂ; ಕನಕಪ್ರಭದೇವಂ ಬಂದು ಶ್ರುತಕೀರ್ತಿಗಮನಂತಮತಿಗಂ ತನಯನಾಗಿ ಪುರೋಹಿತನಾನಂದನಾದಂ; ಪ್ರಭಂಜನಕಲ್ಪಜಂ ಧನದತ್ತಂಗಂ ಧನದತ್ತೆಗಂ ಪುತ್ರನಾಗಿ ನಿಜಶ್ರೇಷ್ಠಿ ಧನಮಿತ್ರನಾದಂ; ಅದು ಕಾರಣದಿಂದಿವರೊಳಪ್ಪ ಸ್ನೇಹಂ ಪಿರಿದಾದುದು. ಈಭವಕ್ಕೆಂಟನೆಯ ಭವದೊಳ್ ಭರತದೊಳ್ ನೀನಾದಿತೀರ್ಥಪ್ರವರ್ತಕನಾದಂದೀಶ್ರೀಮತಿ ದಾನತೀ

1ಕ.—ನಡೆವೆನಗೀಗಳ್.

ರ್ಥಪ್ರವರ್ತಕಂ ಶ್ರೇಯಾಂಸನಕ್ಕುಂ; ಈನಿನ್ನ ಮಂತ್ರಿ ಮತಿವರನಂದು ನಿನಗೆ ಭರತೇಶ್ವರನೆಂಬನಾತ್ಮಜನಕ್ಕುಂ; ಈಭವದೀಯಸೇನಾನಾಯಕನ ಕಂಪನನುಂ ಬಾಹುಬಲಿಯೆಂಬ ತನಯನಕ್ಕುಂ; ಈಭವತ್ಪುರೋಹಿತನಾನಂದಂ ವೃಷಭಸೇನನೆಂಬೊಂ ತನೂಜನಕ್ಕುಂ; ಈನಿನ್ನ ಶ್ರೇಷ್ಠಿ ಧನಮಿತ್ರನನಂತವೀರ್ಯನೆಂಬ ತನೂಭವನಕ್ಕುಮೆಂಬುದುಮತಿಪ್ರೀತಿಯಿಂ ವಿಕಸಿತವದನಸರೋಜನಾಗಿ,

ಪಿಂಗಿದುದೀಗಳೆನ್ನ ಬೆಸಗೊಂಡೆಡೆಯೊಂದು ತಮಂ ತ್ವದೀಯವಾ
ಕ್ಯಂಗಳನಿನ್ನುಮೊಂದೆನಗೆ ವಿಸ್ಮಯಮಾದಪುದೀತ್ವದಂಘ್ರಿಪ।
ದ್ಮಂಗಳನೈದೆ ಮಚ್ಚಿ ನೆಲಸಿರ್ದಪುವೀಪುಲಿ ಪಂದಿ ಕೋಡಗಂ
ಮುಂಗುರಿಯೆಂಬ ನಾಲ್ಕಱ ಭವಾವಳಿಯಂ ಬೆಸಸಿಂ ಮುನೀಶ್ವರಾ ॥ ೧೪

ವ॥ ಎಂಬುದುಂ ಗಗನಚಾರಣರಿಂತೆಂದು ಬೆಸಸಿದರ್:—ಈಶಾರ್ದೂಲಂ ಪ್ರಾಗ್ಜನ್ಮದೊಳೀವಿಷಯದ ಹಸ್ತಿನಾಪುರದ ಪರದಂ ಧನದತ್ತಂಗಮಾತನ ಪರದಿತಿ ಧನದತ್ತೆಗಮುಗ್ರಸೇನನೆಂಬೊಂ ತನೂಜನಪ್ರತ್ಯಾಖ್ಯಾನಕ್ರೋಧದಿಂ ತಿರ್ಯಗಾಯುಷ್ಯಂಗಟ್ಟಿ,

ಅರಸನ ಕೋಷ್ಠಾಗಾರದ
ಕರಣಂಗಳ ಕಾಪನೆಯ್ದೆ ಬಂಚಿಸಿ ಕಳ್ದುಂ।
ಕರೆದುಮೊಳಗೊಳಗೆ[1]ಸುಟಿಯು।
ತ್ತಿರೆ ನೃಪನದನಱಿದು ಪಿಡಿದು ತರವೇಳ್ದಾಗಳ್ ॥ ೧೫

ಘಾತಿಸಿ ಚಪೇಟಚರಣಾ
ಘಾತದೊಳಟಿದಿಲ್ಲಿ ಬಂದತಿಕ್ರೋಧನನಿಂ।
ತೀತೆಱದಿಂ ಪುಲಿಯಾದನ
ತೀತಭವಾಂತರದೊಳೀವರಾಹನುಮರಸಾ ॥ ೧೬

ವ॥ ಈವಿಷಯದ ವಿಜಯಪುರದೊಳಾನಂದನೃಪತಿಗಂ ವಸಂತಸೇನೆಗಂ

---

[1] ಖ.—ಕಿರಿದೊಂದುದಿವಸ.

ಹರಿಕಾಂತನೆಂಬ ತನಯನಪ್ರತ್ಯಾಖ್ಯಾನಮಾನದೊಳ್ ತಂದೆಗವಿನೀತನಾಗಿ ಪೇೞ್ದುದಂ ಗೆಯ್ಯದೆ,

ಶಿಲೆಯೊಳ್ ತಾಟಿಸಿ ತನ್ನಯ
ತಲೆಯಂ ಜರ್ಜರಿತಮಸ್ತಕಂ ಮಡಿದತ್ಯಾ ।
ಕುಲನೀವರಾಹದೇಹಮ
ನಲಸದೆ ಪೊತ್ತಿರ್ದು ನಮೆದಪಂ ಧರಣಿಪತೀ ॥ ೧೩

ವ॥ ಈವಾನರಂ ಪೂರ್ವಜನ್ಮದೊಳ್ ಧಾನ್ಯಪುರದೊಳ್ ವಣಿಗ್ವರಂ ಕುಬೇರದತ್ತಂಗಂ ತದ್ವನಿತೆ ವಸುದತ್ತೆಗಂ ನಾಗದತ್ತನೆಂಬೊಂ ಮಗನಪ್ರತ್ಯಾಖ್ಯಾನಮಾಯೆಯುಂ ಕೈಕೊಂಡು ,

ಬಂಚಿಸಿ ತನ್ನನುಜೆಯು ಧನ
ಮಂ ಚಪಳಂ ಕೊಂಡು ಪುಸಿದು ಕಳವಳಿಸಿ ಖಳಂ ।
ಪಂಚತ್ವಮನೈದಿ ಮರು
ಚ್ಚಂಚಳಮನನೀಗಳಲ್ತೆ ವಾನರನಾದಂ ॥ ೧೪

ವ॥ ಈನಕುಳಂ ಪೋದ ಭವದೊಳ್ ಸುಪ್ರತಿಷ್ಠಪುರದೊಳ್ ಅಪ್ರತ್ಯಾಖ್ಯಾನಲೋಭಾಭಿಭೂತಂ ದ್ರವ್ಯಲೋಲುಪನೆಂಬೊಂ ಕಲ್ಲುರಿಗನಾಗಿ,

॥ ಉ ಜ್ಜ್ವಳಂ[1] ॥

ಪುರವರೇಶನ ಮಾಡಿದ ಚೈತ್ಯಕ್ಕಿಟ್ಟಿಗೆಗಳ್ ಬರೆ ನೋಡಿ ಕ
ಲ್ಲುರಿಗನೊಯ್ಯನೆ ಪೂರಿಗೆಗೊಟ್ಟೈದಾಱನೆ ಕೊಂಡವನತ್ತಯಿಂ ।
ದೊರಸಿ ನೋೞ್ಪುದುಮೊಂದವಱೊಳ್ ಪೊನ್ನಿಟ್ಟಿಗೆಯಾದೊಡೆ ರಾಗದಿಂ
ಪಿರಿದು ಬಿಟ್ಟಯುಮಂದಿರ ಕಯ್ಯಿಂದಿಟ್ಟಗೆಗೊಂಡವನೊಟ್ಟಿದಂ ॥ ೧೫

ವ॥ ಬಂದುದಿವಸಮಾತಂ ಕೆಲದೂರ್ಗೆ ಪೋಗುತ್ತುಂ ತನ್ನ ಮಗಂಗಿಟ್ಟಿಗೆಗೊಳ್ವ ಬೆಸನಂ ಪೇೞ್ದು ಪೋದೊಡವನೊಂದುಮಂ ಕೊಳ್ಳದಿರೆ ಮಗುೞ್ದು ಬಂದು,

---

[1] ಶ.—ಮುದ್ರಿಕೆ.

ಬಡಿ[1]ಯೊಳ್ ನಿಜತನಯನ ತಲೆ
ಯೊಡೆವಿನೆಗಂ ಬಡಿದ ಕಾರಣಂ ಕೊಂಡುಯ್ವರ್ ।
ಪಡೆವುಗಿಡುವಿನೆಗವೆಂದಾ
ಕಡುಲೋಭಂ ತನ್ನ ಕಾಲ್ಗಳಂ ಪಿಡಿದುಡಿದಂ ॥ ೨೦

ವ॥ ತದ್ವೃತ್ತಾಂತಮೆಲ್ಲಮನಱಿದು ತತ್ಪುರಾಧೀಶಂ ದಂಡಿಸೆ ಗತಜೀವಿತನಾಗಿ ಬಂದಿಲ್ಲಿ ನಕುಳನಾದಂ; ಇಂತೀಶಾರ್ದೂಲವರಾಹಗೋಲಾಂಗೂಲನಕುಲಂಗಳ್ ನಾಲ್ಕುಂ ಭವದ್ದಾನಾನುಮೋದದಿಂ ಜಾತಿಸ್ಮರಂಗಳಾಗಿ ಭೋಗಭೂಮಿಗೆ ಬದ್ಧಾಯುಷ್ಯಂಗಳಾದುವು. ಅಂತು ದಿವ್ಯಮಾನುಷಗೋಚರಮಪ್ಪ ಸುಖಂಗಳಂ ನಿನ್ನೊಡನನುಣುತ್ತುಂ ಬಂದು ಭರತದೊಳ್ ನೀಂ ಭವಿಷ್ಯತ್ತೀರ್ಥಕರನಾದಂದನುಕ್ರಮದೊಳ್ ನಿನಗನಂತವೀರಾಚ್ಯುತವೀರರೆಂಬ[2]ತನಯರಪ್ಪರೆಂದಿಂತು ಚಾರಣಮುನೀಂದ್ರರ್ ಬೆಸಸಿ ಸತ್ಪಥೋನ್ನತಿಯಂ ನನ್ನಿಮಾಡುವಂತೆ ಸತ್ಪಥಾತಿಥಿಗಳಾದರ್. ಅರಸನುಂ ಶ್ರೀಮತಿಯುಮುಂದೆಲ್ಲರುಮವರ ಗುಣಂಗಳನೆ ಮತಿವರಾದಿಗಳೊಳ್ ನುಡಿಯುತ್ತುಮಿರ್ದು ಮಱುದಿವಸಂ ಸಮಸ್ತಸಾಮಗ್ರಿಯಿಂ ಪಯಣದ ಮೇಲೆ ಪಯಣಂಬೋಗಿ ಪುಂಡರೀಕಿಣಿಯನೆಯ್ದಿ,

ವಿಗಳದ್ಬಾಷ್ಪಾಂಬುದೀನಾನನೆಯೆನಿಸಿದ ಲಕ್ಷ್ಮೀಮತೀದೇವಿಯಂ ಮೆ
ಲ್ಲಗೆ ಸಂತೈಸುತ್ತುಮಾತ್ಮಾನುಜೆಯ ಮನದ ನಿರ್ವೇಗಮಂ ಪಿಂಗಿಸುತ್ತುಂ ।
ಬಗೆಯುತ್ತುಂ ಮಂತ್ರಿವರ್ಗಂಗಳೊಳತಿನಯಮಂ ಪುಂಡರೀಕಂಗೆ ಸಾಮಾ
ದಿಗಳಿಂ ನಿಷ್ಕಂಟಕಂಮಾಡಿದನಖಿಳಮಹೀಚಕ್ರಮಂ ವಜ್ರಜಂಘಂ ॥ ೨೧

ವ॥ ಅಂತಾತ್ಮೀಯಭಾಗಿನೇಯನನಾರಾಜ್ಯದೊಳ್ ಪದುಳಂಮಾಡಿ ಮಹಾಸಾಮಂತಮಂತ್ರಿಮಂಡಳಕ್ಕಪ್ಪಯಿಸಿ ನಿಜವಿಜಯರಾಜಧಾನಿಗುತ್ಪಳಖೇಟಕ್ಕೆವಂದು,

ದಿವಿಜೇಂದ್ರಾವಾಸಸೌಖ್ಯಕ್ಕತಿಶಯಮೆಸೆವೀಸೌಖ್ಯಮಾದೇವಿಗಂ ರೂ
ಪವಿಳಾಸಶ್ರೀಯೊಳೀದೇವಿಯೆ ಮಿಗಿಲಮರಾಕಾರಮಂ ಗೆಲ್ದುದೀಮಾ ।

---

[1] ಗ.—ದಡಿ. [2] ಖ.—ಅಚ್ಯುತವೀರಸುವೀರರೆಂಬ.

ನವದೇಹಾಕಾರವೆಂಬಂತಿರೆ ಭುವನಜನಂ ಶ್ರೀಮತೀವಕ್ತ್ರಚಂದ್ರ
ಚ್ಛವಿ ಚೆಲ್ವಂ[1]ಮೊಳ್ಪಿನಂ ಭೋಗಿಸಿದನಖಿಳಭೋಗಂಗಳಂ ವಜ್ರಜಂಘಂ ‖

ವ‖ ಅಂತನೇಕಸಂವತ್ಸರಂಗಳ್ ಸಲ್ವಿನೆಗಮೊಂದುದಿವಸಂ ರಜನೀಸಮಯದೊಳನರ್ಘ್ಯಮರಕತಮಣಿಶಿಲಾಸಂಪಾದಿತಮೇದಿನೀವಿಭಾಗದೊಳ್ ಅಮರಖಚರಕಿನ್ನರಮಿಥುನಸನಾಥವಿಚಿತ್ರಭಿತ್ತಿವಿರಾಜಿತದೊಳತಿಬಹಳಕಾಳಾಗರುಧೂಪಧೂಮಾಮೋದದೊಳತಿವಿಶದಮಣಿಪ್ರದೀಪಿಕೋದ್ದ್ಯೋತದೂರೀಕೃತತಮಸ್ತಮದೊಳನೇಕರತ್ನರಚಿತಪ್ರತಿಪಾದುಕವಿನ್ಯಸ್ತಕಾಂಚನಮಂಚೋಪಶೋಭಿತದೊಳ್ ಪಯಃಪಯೋಧಿಫೇನಸಂಕಾಶದುಕೂಲೋಪಪ್ರಚ್ಛದಾಚ್ಛಾದಿತವಿಚಿತ್ರನೇತ್ರೋಭಯೋಪಧಾನಶಯ್ಯಾತಳದೊಳನೇಕವಿಳಾಸಿನೀವಿಳಾಸಾವಾಸಭವನದೊಳಾದಂಪತಿಗಳನ್ಯೋನ್ಯಾಂಗಸ್ಪರ್ಶಸುಖೋನ್ಮೀಳಿತವಿಲೋಚನರಂತಂತೆ ನಿದ್ರಾರಸವಶಗತರಾಗಿರ್ದರ್; ಅನ್ನೆಗಮಲ್ಲಿ ಮುಚ್ಚಿರ್ದ ಹರಿನೀಲಗವಾಕ್ಷಜಾಲಕವಾಟಪುಟಂಗಳಂ ತೆಱೆಯಲ್ಮಱೆದು ಸೂರ್ಯಕಾಂತದ ಧೂಪಗುಂಡಿಗೆಯೊಳಳವಱಿಯದೆ ಸೆಜ್ಜೆವಳನಿಕ್ಕಿದ ಕೇಶಸಂಸ್ಕಾರ[2]ಕಾಳಾಗರುಧೂಪಂ,

ಮೊದಲೊಳ್ ನೀಳ್ದು ಪೊದಱ್ದು ಪರ್ಬಿ ಪದಪಂ[3]ಕೈಕೊಂಡು ಮಂದೈಸಿ ಮಾ
ಣದೆ ತನ್ನಂದದೊಳೇಳ್ಗೆಗುಂದದೆ ನಿರುದ್ಧೋಚ್ಛ್ವಾಸಮಪ್ಪನ್ನೆಗಂ ।
ಪುದಿದಾದಂಪತಿಯುಂ ಪುದುಂಗೊಳಿಸಿ ಲೋಕಾಶ್ಚರ್ಯಮಂ ಮಾಡಿ ಕೊಂ
ದುದು ಕೃಷ್ಣಾಗರುಧೂಪಧೂಮನಿವಹಂ ಕೃಷ್ಣೋರಗಂ ಕೊಲ್ವವೊಲ್ ೨೩

ಬಿಡದೆ ಪೊಗೆ ಸುತ್ತೆ ತೋಳಂ
ಸಡಿಲಿಸದಾಪ್ರಾಣವಲ್ಲಭರ್ ಪ್ರಾಣಮನಂ ।
ದೊಡೆಗಳೆದರೋಪರೋಪರೊ
ಳೊಡಸಾಯಲ್ಪಡೆದರಿನ್ನವೇಂ ಸೈಪೊಳವೇ ‖ ೨೪

ಭೋಗಾಂಗಮಾಗಿಯುಂ ಕೃ
ಷ್ಣಾಗರುಧೂಪಂ ಮುಸುಂಕಿ ಕೊಂದಿಕ್ಕಿದುದಾ[4]।

---

[1]ಕ.—ವಜ್ರದಂತಚ್ಛವಿ ಪೆರ್ಚಿಂ. [2]ಕ.—ಶೇಷಸಂಸ್ಕಾರ. [3]ಖ.—ಪರಪಂ. [4]ಖ.—ಕೊಂದುದುನೋಡಾ.

ಭೋಗಿಗಳನಿಂತು ಸಂಸೃತಿ
ಭೋಗಂಗಳ್ ಭೋಗಿಭೋಗದಿಂ ವಿಷಮಂಗಳ್ ‖ ೨೫

ಅನಿತು ಸುಖದನಿತು ಭೋಗದ
ಮನುಜಯುಗಂ ನೋಡೆ ನೋಡೆ ತತ್ಕ್ಷಣದೊಳ್ ತಾ ।
ನಿನಿತೊಂದು ದೆಸೆಯನೆಯ್ದಿದು
ದೆನೆ ಜಡರೇನೆಂದು ನಂಬುವರ್ ಸಂಸೃತಿಯಂ ‖ ೨೬

ಬೆಳಗುವ ಸೊಡರ್ಗುಡಿ ಕಿಡೆ ಮನೆ
ಯೊಳಗೆ ತಮಂ ಪರ್ಬುವಂತೆ ಜೀವಂ ತನುವಿಂ ।
ತೊಲರಲೊಡಂ ವಿಚ್ಛಾಯತೆ
ಗೊಳಗಾದುವು ತೊಳಗುವವರ ಸೌಂದರತನುಗಳ್ ‖ ೨೭

ವ‖ ಆಗಳಾದಿತ್ಯೋದಯದಿನವರಂ ನೋಡಿ ಹಾಹಾಕ್ರಂದನಧ್ವನಿಗಳಂ ತಃಪುರಕ್ಕಂ ಪುರಕ್ಕಂ ನೆಗಪೆ ಮತಿವರಾದಿಗಳ್ ತದ್ದಂಪತಿಗಳ್ಗೆ ಶರೀರಶೋಭೆಯಂ ಮಾಡಿ ಚಂದನಹರಿಚಂದನೇಂಧನಂಗಳೊಳ್ ದಹನಕ್ರಿಯೆಯಂ ನಿರ್ವರ್ತಿಸಿ ತದಗ್ಧಪಧೂಮದೊಳಲ್ಲಿಯೆ ವಿಗತಜೀವಿತಂಗಳಾದ ತಿರ್ಯಗ್ಜಾತಿಗಳುಮಂ ಸಂಸ್ಕರಿಸಿ, ಬಳಿಯಂ ಶ್ರೀಮತೀತನಯಂ ವಜ್ರಬಾಹುವೆಂಬಂಗೆ ಧರಾಭಾರಮಂ ಕೊಟ್ಟು, ರಾಜ್ಯದೊಳ್ ನಿಱಿಸಿ ತಪೋಭರದೊಳ್ ನಾಲ್ವರುಂ ನಿಂದು ಜೀವಿತವ್ಯಪಾಯದೊಳಧೋಗ್ರೈವೇಯಕದೊಳಹಮಿಂದ್ರಪದವಿಯಂ ತಾಳ್ದಿದರ್; ಅಂತು ಪಂಚತ್ವಮನೈದಿದ ವಜ್ರಜಂಘಂಗಂ ಶ್ರೀಮತಿಗಮಾತಿರಿಕಂಗಳ್ಗ ಮುತ್ತಮಪಾತ್ರದಾನಾನುಮೋದದ ಪುಣ್ಯಫಲದಿಂದಮಿಾಜಂಬೂದ್ವೀಪದ ಮಂದರಮಹೀಧರದುತ್ತರದಿಗ್ಭಾಗದೊಳದುತ್ತರಕುರುವೆಂಬುತ್ತಮಭೋಗಭೂಮಿಯೆ ಜನ್ಮಭೂಮಿಯಾದುದು; ಅಲ್ಲಿ,

ದರ್ಪಣಸಮತಳಮೆನೆ ಸಂ
ಸರ್ಪದ್ರತ್ನಾಂಶುಜಾಳಜಟಿಳತಮೆನೆ ಕಂ ।
ದರ್ಪಸುಖನಿಳಯಮೆನೆ ಸಂ
ತರ್ಪಣಕರಮಖಿಳಭೋಗಭೂಮಿವಿಭಾಗಂ ‖ ೨೮

ವ‖ ಮತ್ತಮಲ್ಲಿ,

ಹಿಮವೆಂದಾತಪಬಾಧೆಯೆಂದು ಮಱೆಯೆಂದಿಲ್ಲಾ ನೆಲಂ ಪಂಚರ
ತ್ನಮಯಂ ನಾಲ್ಪೆರಲಲ್ಲದಾಗದೆಳವುಲ್ ನೀಲೋತ್ಪಳಾಬ್ಜಾಕರಾ ।
ಳಿ ಮನಂಗೊಳ್ಪುದು ಮೆಲ್ಲನಲ್ಲಿ ಸುೞಿಗುಂ ಮಂದಾನಿಳಂ ನೀರ್ ಸುಧಾ
ಸಮಮುದ್ಯಾನವನಂ ಮದೋತ್ಕಪರಪುಷ್ಟೋದ್ದಾಮಕೋಳಾಹಳಂ ॥ ೬೯

ಪಗಲಿರುಳೆಂಬ ಭೇದಮನಯಂ ಬಡವರ್ ಕಡುಬಲ್ಲಿದರ್ ವಿಷಾ
ಹಿಗಣಮನೇಕರೌದ್ರಮೃಗಜಾತಿಗಳಾಳರಸೆಂಬುದೊಂದು ದಂ ।
ದುಗಮಳಿಪಾಯಿಲಂ ಮುಱುಕಮಾಮಯಮುಪ್ಪಪಮೃತ್ಯುವೆಂಬಿವ
ಲ್ಲಿಗೆ ಪೊಱಗೆಂದೊಡಿಂ ಸುಖಮನೇವೊಗೞ್ದಪ್ಪುದೊ ಭೋಗಭೂಮಿಯಾ॥

ವ॥ ಮತ್ತಮಲ್ಲಿ,

ಮದ್ಯವಿಭೂಷಣವಸ್ತ್ರಾ
ತೋದ್ಯಸ್ರಗ್ಭವನಭಾಜನಾಶನದೀಪ ।
ಪ್ರೋದ್ಯಜ್ಜ್ಯೋತಿಸ್ಥಿತಿಯೊಳ
ಮುದ್ಯೋತಿಸೆ ತುದಿಯೊಳಂಗಮಿಂತು ದಶಾಂಗಂ ॥ ೭೧

ವ॥ ಎನಿಸಿದ ನಾನಾರತ್ನಮಯಂಗಳುಮಪ್ರತಿಹತಪ್ರಭಾದ್ಯೋತಿತ
ದಿಙ್ಮುಖಂಗಳುಮಪ್ಪ ಕಲ್ಪವೃಕ್ಷಂಗಳ್,

ಕುಡಿದೊಡೆ ಸೊರ್ಕಿಸದವು ನಾ
ಣ್ಗಿಡಿಸದವು ಮನಕ್ಕಲಂಪನೀವುವು ರತಮಂ ।
ನಡೆಯಿಪುವೆನಿಸುವ ಮಧುಗಳ
ನೆಡೆಯುಡುಗದೆ ಕುಡುಗುಮುಚಿತಮದ್ಯಾಂಗಕುಜಂ ॥ ೭೦

ಮಕುಟಂ ಕೇಯೂರಂ ಕ
ರ್ಣಕುಂಡಲಂ ಕೊಪ್ಪು ಸರಿಗೆ ದುಸರಂ ಮಣಿಮು ।
ದ್ರಿಕೆ ತಿಸರಮೆಂಬ ಭೂಷಾ
ನಿಕರಮನಾಭೂಷಣಾಂಗತರು ಕುಡುತಿರ್ಕುಂ ॥ ೭೭

ಪಟ್ಟೆ ಚಿತ್ರಾವಳಿ ಜೋಗಂ
ಪಟೆಯುಂ ದೇವಾಂಗಮೆಂಬ ವಸನಂಗಳನೇಂ ।

ಘಟಿಯಿಸುವವೊ ಮಡಿವಳ್ಳನ
ಪಟಿಯುತನನೆ ಪೋಲ್ತು ವಿಶದವಸನಾಂಗಕುಜಂ ॥ ೩೪

ಅತಿಮೃದುರವದಾಯಿಗಳಂ
ತತಘನಸುಷಿರಾವನದ್ಧವಾದ್ಯಂಗಳನೇಂ ।
ಮತಮಱಿದೋಲಗಿಪುದೊ ದಂ
ಪತಿಗೆಂದುಮವಾರ್ಯವೀರ್ಯತೂರ್ಯಕ್ಷ್ಮಾಜಂ ॥ ೩೫

ಮಗಮಗಿಪ ಜಾದಿ ಪೊಂಗೇ
ದಗೆ ಮಲ್ಲಿಗೆಯೆಂಬ ಪಲವು ಪೂಮಾಲೆಗಳಂ ।
ಬಗೆಯಱಿದೋಲಗಿಪುದು ಮಾ
ಲೆಗಾಱನಂ ಪೋಲ್ತುದಗ್ರಮಾಲ್ಯಮಹೀಜಂ ॥ ೩೬

ಹಾಟಕಭಿತ್ತಿಸಮನ್ವಿತ
ನಾಟಕಶಾಲೆಗಳ ವಿವಿಧಸೌಧಂಗಳ ಕೊಂ ।
ಡಾಟಮನೆ ಮೆಱೆದು ಮೆಚ್ಚಂ
ಪಾಟಿಸುವುವು ಮಿಥುನತತಿಗೆ ಗೃಹಮಹಿಜಾತಂ ॥ ೩೭

ಅನತಿಶಯಸೌಖ್ಯಭಾಜನ
ಜನಕ್ಕೆ ಭಾಜನಮಿವಪ್ಪುವೆಂಬಂತೆ ಕನ ।
ತ್ಕನಕಮಣಿಖಚಿತಬಹುಭಾ
ಜನಂಗಳಂ ಭಾಜನಾಂಗತರು ಕುಡುತಿರ್ಕುಂ ॥ ೩೮

ಅಮರ್ದಿನ ಸವಿಯೊಳಗೀಸವಿ
ಸಮನೆನೆ ತೇಜೋಬಳಾಯುರಾರೋಗ್ಯಸಮೇ ।
ತಮನವ್ಯಕಾನ್ನಮನೊಲ್ದೀ
ಗುಮಾಗಳುಂ ಭೋಜನಾಂಗಕಲ್ಪಾವನಿಜಂ ॥ ೩೯

ಆಪೊತ್ತುಂ ಮಣಿದೀಪಕ
ಳಾಪೋದ್ಯಜ್ಜ್ಯೋತಿಗಳ್ ದಿಶಾಮಂಡಲಮಂ ।

ವ್ಯಾಪಿಸುತಿರೆ ಸೊಗಯಿಸುವುವು
ದೀಪಾಂಗಜ್ಯೋತಿರಂಗಕಲ್ಪಕುಜಂಗಳ್ ॥ ೪೦

ನೀಡಿದ ಕಯ್ಗೆ ನೀಡಿರದೆ ಬೇಡಿದ ಭೋಗಮನೇನಾದೊಡಂ
ನೀಡುವ ಕಲ್ಪವೃಕ್ಷನಿಕರಂಗಳೆ ಭೋಗದಲಂಪನಾವಗಂ ।
ಮಾಡೆ ಮನಂ ವಿನೋದರಸದೊಳ್ ತಡಮಾಡೆ ಮಗುಱ್ದು ಮನ್ಮಥ
ಕ್ರೀಡೆಗೆ ನೋಡೆ ನಾಡೆ ಗುಱಿಯಪ್ಪುವು ದಂಪತಿ ಭೋಗಭೂಮಿಯೊಳ್ ॥

ವ॥ ಮತ್ತಮಲ್ಲಿ ಕುಶೀಲಕುತ್ಸಿತಾಚಾರಕುವೇಷಕುದೃಷ್ಟಿಗಳುಂ ಗೃಹೀತವ್ರತಪರಿಚ್ಯುತರುಂ ಮಾಯಾಚಾರಪರಿಣತಮಪ್ಪ ಪಾತ್ರದಾನಿಗಳುಂ ತಿರ್ಯಗ್ಜಾತಿತ್ವಮಂ ಪೊರ್ದಿದ ಮಿಥುನಂಗಳಾಗಿ ಪುಟ್ಟಿ ಪರಸ್ಪರವೈರಂಗಳಿಲ್ಲದೆ ಅನಾಮಯಂಗಳುಮಪಗತಬಾಧಂಗಳುಮಾಗಿ ರಮಿಯಿಸುವುವು. ಮತ್ತಮುತ್ತಮಪಾತ್ರದಾನಾನುಮೋದಫಲದಿಂದಲ್ಲಿ ಪುಟ್ಟುವ ಜೀವಂಗಳ್ ನಾರೀಪುರುಷಸಂಯೋಗನಿಯೋಜಿತಶುಕ್ಲಾರ್ತವಂಗಳೊಳ್ ಜೀವಯುಗಳಂಗಳಾಗಿ ನೆಲಸಿ ಕಲಿಲಘನಫೇನ[1]ಬುದ್ಬುದಾದಿಪರಿಣತಿಯಿಂ ನವಮಾಸಾವಸಾನಸಮಯದೊಳ್ ಸ್ತ್ರೀಪುರುಷಯುಗಳಮೆಯಾಗಿ ಪುಟ್ಟುಗುಂ; ಪುಟ್ಟಿದಾಗಳೆ ಮಾತಾಪಿತೃಯುಗಳಂಗಳ್ ಸೀಂತುಮಾಗುಳಿಸಿಯುಂ ಪರಾಸುಗಳಾಗೆ ನಿಜಶರೀರಂಗಳ್ ಮಂಜು ಕರಗುವಂತೆ ಕರಗೆ ಸಹಜದೊಳಪಾಪಿಗಳುಮಾರ್ಜವಂಗಳುಂ ಅತಿಮೃದುಗಳುಮಪ್ಪುದಱಿಂದೆ ನಾಕಲೋಕಪ್ರಾಪ್ತಂಗಳಕ್ಕುಂ; ಅವರ್ಕೆ ಪುಟ್ಟಿದ ಯುಗಳಂಗಳ್ ಏೞುದಿವಸಮುಂ ಪುರಾತನಪುಣ್ಯಕರ್ಮಕಾಮಧೇನುಸ್ತನೋಪಮಾನನಿಜಾಂಗುಳಿಜನಿತರಸಾಯನಾಸ್ವಾದದೊಳಮುತ್ತಾನಶಯ್ಯೆಯೊಳಂ ಕಳುಪಿ, ಪೆಱಗೇೞುದಿವಸದೊಳ್ ತೆಮಳ್ದುಂ, ಪೆಱವೇೞುದಿವಸಕ್ಕೆ ತಳರ್ನಡೆನಡೆದುಂ, ಪೆಱವೇೞು ದಿವಸದೊಳ್ ಪದುಳಂ ನಡೆದುಂ, ಪೆಱವೇೞುದಿವಸದೊಳ್ ಕಳಾಕಳಾಪಪ್ರವೀಣಂಗಳಾಗಿಯುಂ, ಪೆಱವೇೞುದಿವಸದೊಳ್ ವಿಜ್ಞಾನವಿದಂಗಳಾಗಿಯುಂ, ಪೆಱವೇೞುದಿವಸದೊಳ್ ಸಂಪೂರ್ಣನವಯೌವನಂಗಳಾಗಿ ಶುಭಲಕ್ಷಣಲಕ್ಷಿತಶರೀರಂಗಳಾಗಿಯುಂ, ಅಂತು ನಾಲ್ವತ್ತೊಂಭತ್ತು ದಿವಸದೊಳ್ ಸಮುಚ

[1] ಕ.—ಪೇಶ್ಯ.

ತುರಸ್ರಸಂಸ್ಥಾನಸಂವಾಹನಂಗಳಱು ಸಾಸಿರಬಿಲ್ನಿಡಿಯುವಾಗಿ ದಿನತ್ರಯದೊಳ್ ಬದರೀಫಳಮಾತ್ರಾಹಾರಿಗಳುಮಾರೋಗ್ಯಶರೀರಂಗಳುಂ ಸೌಂದರಾಕಾರಂಗಳುಂ ತ್ರಿಪಲ್ಯೋಪಮಜೀವಿಗಳುಮಾಗಿ,

ತೊಲಗದ ಜವ್ವನಂ ತವದ ಮೆಚ್ಚು ಮುರಲ್ಚುವ ನೋಟಮುತ್ತಿಯುಂ
ಸಲಿಸುವ ಭೋಗಮೊಲ್ದಗಲದೋಪರ ಕೂಟಮನಂಗರಾಗದೊಳ್ ।
ನಲಿವ ವಿನೋದಮಾದಮೆರ್ದೆಯೊಳ್ ತಡಮಾಡೆ ಸುಖಂಗಳೊಳ್ ಪಳಂ
ಚಲೆವುದು ಸಾಕಲೋಕಮುಮನೇನಿರದೀವುದೊ ಭೋಗಭೂತಳಂ ॥೪೦

ವ॥ ಅಂತನೇಕಭೋಗನಿವಾಸಮೆನಿಸುವ ಭೋಗಭೂಮಿಯೊಳ್,

ಅಗರುವ ಧೂಪಧೂಮದೊಳೆ ಸೊರ್ಕಿದ ಸೊರ್ಕುಗಳಾಗಳಲ್ಲಿ ತೊ
ಟ್ಟಗೆ ತಿಳಿದಂತೆ ತನ್ಮನುಜದಂಪತಿ ದಂಪತಿಯಾಗೆ ತೋಳ್ ತ ।
ಳ್ತಗಲದಲಂಪಿನಿಂಪು ತವದಱ್ಕಱಳುರ್ಕೆ ನಿಮಿರ್ಕೆಗುಂದದಾ
ವಗಮತಿಸೌಖ್ಯಮಂ ಪಡೆವುದೀದೊರೆಯುನ್ನತಿ ಪಾತ್ರದಾನದಾ ॥ ೪೩

ದಾನಾನುಮೋದದಿಂದಂ
ತಾನಾಲ್ಕುಂ ಮೃಗಮುಮಲ್ಲಿ ಪುಟ್ಟಿದುವೆನೆ ಪೇ ।
ಪೇನಂ ಸುಖಮುಂ ಮಾಡದೊ
ದಾನದ ದಾನಾನುಮೋದದನುಪಮಪುಣ್ಯಂ ॥ ೪೪

ವ॥ ಒಂದು ದಿವಸಂ ಆವಜ್ರಜಂಘರ್ಾಯರ್ನಾತ್ಮೀಯಪ್ರಾಣೇಶ್ವರಿವೆರಸು,

ತುಱುಗಿದುದೊಂದು ಕೊಂಬು ತಳಿರಿಂ ಮುಗುಳಿಂ ಪೆಱತೊಂದುಕೊಂಬುಸು
ತ್ತಿಱಿದುದು ತಳ್ತು ಬಲ್ನಿಡಿಯಕಾಯ್ಗಳ ಗೊಂಚಲನೊಂದುಕೊಂಬು ಪೂ ।
ತ್ತಱಿಗಿದುದೊಂದೆ ಮಾಮರದೊಳೊಂದೆಳಗೊಂಬದುನೋಡ ನೋಡ ಪ
ಣ್ತಱಿಗಿದುದೇನಿದಂಗಜಮಹೀಭುಜನಿಕ್ಕೆಯೊ ಚಿತ್ರಶಾಲೆಯೋ ॥ ೪೫

ವ॥ ಎಂದು ಮತ್ತಮನೇಕಕುಸುಮಕಿಸಲಯಫಳಪರಿಣತಫಳಾವನಮ್ರಾಮ್ರತರುನಿರಂತರಿತವನಲಕ್ಷ್ಮಿಯನೊಱಲ್ದು ನೋಡುತಿರ್ಪನ್ನೆಗಂ ಗಗನತಳಜಳಧಿಯೊಳ್ ಬಹಿತ್ರದಂತೆ ಪರಿವ ಸೂರ್ಯಪ್ರಭನೆಂಬ ದೇವನ ವಿಮಾನಮುಂ ನೋಡಿ,

ಪೋದ ಭವಂಗಳಂ ನೆನೆವಿನಂ ಗಗನಾಂತರದಲ್ಲಿ ಸೂರ್ಯಯು
ಗ್ಮೋದಯಮೊಂದುಮಿಲ್ಲದುದಿದಾದಪುದೆಂಬಿನೆಗಂ ವಿಶಾಲಪು ।
ಣ್ಯೋದಯಮೆಂದು ದಂಪತಿಗೆ ಸಾರ್ತರೆ ಸಾರ್ತರೆ ವಂದುದಾರರಾ
ಗೋದಯಮಂ ನಿಮಿರ್ಚಿದುದು ಕಣ್ಗೆ ವಿಯತ್ತಳಚಾರಣೋದಯಂ ॥೪೬

ವ॥ ಅಂತವತರಿಸಿದ ಚಾರಣದ್ವಂದ್ವಕ್ಕಾದ್ವಂದ್ವಮಿದಿರ್ವಂದು ಭಕ್ತಿಭರಾನತಿನಿಪತತ್ಕರ್ಣಪೂರಪಲ್ಲವಂ ತದೀಯಪಾದಪಲ್ಲವಂಗಳನಾನಂದಾಶ್ರುಮಿಶ್ರಿತಜಳಂಗಳೊಳ್ ತೊಳೆದುಂ ನಿಜೋತ್ತರೀಯಪಲ್ಲವಂಗಳೊಳ್ ತೊಡೆದುಂ ಸಮುತ್ತುಂಗಮಣಿಮಯಾಸನದೊಳ್ ಕುಳ್ಳಿರಿಸಿ,

ಮುನಿವೃಂದಾರಕವಂದ್ಯ ನಿಮ್ಮ ಚರಣಾಂಭೋಜಂಗಳಂ ಕಂಡು ಕ
ಣ್ಬೆನಿಗಳ್ ಮಾಣ್ದಪುವಿಲ್ಲ ಕಾರಣಮಿದೇಂ ಚಿತ್ತಕ್ಕತಿಪ್ರೀತಿ ತೊ ।
ಟ್ಟನೆ ಕೈಗಣ್ಮುವುದೇಕೆ ಪೂರ್ವಭವದೊಳ್ ಬಂಧುತ್ವಮುಂಟಕ್ಕುಮಿಂ
ತಿನಿತೊಂದಿಲ್ಲದೊಡಾಗಲಾಯ್ತೆನಗಿದಂ ಕೇಳ್ವೊಂದು ಕೌತೂಹಳಂ ॥ ೪೭

ವ॥ ಎಂಬುದುಮವರೊಳಗ್ರಮುನಿ ಮುಗುಳ್ನಗೆನಕ್ಕು ಮಹಾಬಳವಿಯತ್ತಳಚರನಾದ ಭವದೊಳಾಂ ನಿನಗೆ ಸಚಿವನೆಂ ಸ್ವಯಂಬುದ್ಧನೆಂಬೆನಾಗಿ,

ಪಡೆದು ಸಮಾಧಿಯಂ ನಿನಗೆ ನಿನ್ನ ವಿಯೋಗದ ದುಃಖದೊಳ್ ತಪ
ಕ್ಕೊಡರಿಸಿ ಘೋರವೀರತಪದೊಳ್ ತನುವಂ ಬಡಮಾಡಿ ನೋಂಪಿಯೊಳ್ ।
ಮುಡಿಪಿ ನಿರಾಕುಳಂ ಮೊದಲ ಸಗ್ಗದೊಳಾಂ ಮಣಿಚೂಳನಾಮಮಂ
ಪಡೆದಮರೇಂದ್ರಲೋಕಸುಖಸಾರಸಮುಚ್ಚಯದಂತನೆಯ್ದಿದೆಂ ॥ ೪೮

ವ॥ ಅಲ್ಲಿಂ ತಳರ್ದು ಜಂಬೂದ್ವೀಪದ ಪೂರ್ವವಿದೇಹದ ಪುಷ್ಕಳಾವತೀವಿಷಯದ ಪುಂಡರೀಕಿಣಿಯನಾಳ್ವ ಗುಣಪ್ರಿಯಂ ಪ್ರಿಯಸೇನಮಹೀಭುಜಂಗಂ ತತ್ಸೌಂದರಿ ಸುಂದರಿಗಂ,

ಪ್ರೀತಿಂಕರನೆಂಬೆಂ ತನು
ಜಾತನೆನಾಂ ಪ್ರೀತಿದೇವನೆನ್ನಿಂ ಕಿಱಿಯಂ ।
ಖ್ಯಾತಯಶನೀತಪೋಧನ
ನೀತಪದಿಂದವಧಿಬೆರಸು ಚಾರಣಗುಣಮಂ ॥ ೪೯

ಪಡೆದವಧಿಬೋಧದಿಂದೀ
ಯೆಡೆಯೊಳ್ ನೀಂ ಬಂದು ಪುಟ್ಟಿದುದನಱಿದಱಿವಂ ।
ಕುಡಲೆಂದು ಬಂದೆವಿದು ನಿನ
ಗೆಡೆಯುಡುಗದೆ ಕುಡುಗುಮುಚಿತಮುಕ್ತಿಶ್ರೀಯುಂ ॥ ೫೦

ನಿನಗೆ ಜಯವರ್ಮನಾದಂ
ದಿನ ಭವದಿಂದಿತ್ತ ಭೋಗಕಾಂಕ್ಷೆಯೆ ತಿಣ್ಣಂ ।
ಮನದೊಳ್ ಸಮ್ಯಕ್ತ್ವದ ದೆಸೆ
ಯಿನಿತಿಲ್ಲ ದಲಮ್ಮ ಕೈಕೊಳಲ್ಕಿದು ಕಾಲಂ ॥ ೫೧

ಘನಮಿಥ್ಯಾತ್ವದವಾನಳ
ಪಿನದ್ಧಜೀವಕ್ಕೆ ದೃಷ್ಟಿಮೋಹಪ್ರವಿನಾ ।
ಶನಮಿಲ್ಲದಂದು[1] ಪುಟ್ಟುದು
ಮನದೊಳ್ ಸ್ವರ್ಮೋಕ್ಷಸಾಧನಂ ಸಮ್ಯಕ್ತ್ವಂ ॥ ೫೨

ದೊರೆಕೊಳೆ ಕಾಲಲಬ್ಧಿ ಬಗೆದಂತಿರೆ ಕೂಡೆ ಗುರೂಪದೇಶಮಾ
ವರಿಸೆ ಜಿನೇಂದ್ರಭಕ್ತಿ ಪೊಱಪೊಣ್ಮೆ ದಯಾರಸಮಿಂತು ನಾಡೆಯುಂ ।
ಪರಿಕರದಿಂ ಮನಕ್ಕಱಿವು ಸಾರೆ ಭವಾಬ್ಧಿತಟಂ ಸಮೀಪಮಾ
ಗಿರೆ ದೊರೆಕೊಂಡ ದೃಷ್ಟಿವಿಭವಂ ಕಳೆಗುಂ ಖಿಳಕರ್ಮಬಂಧಮಂ ॥ ೫೩

ಸಮವಾಯಮುಪ್ಪುದಲ್ತಿಂ
ದು ಮನಂ ಬಸಮಾಡಿ ದೋಷವಿರಹಿತನಾಪ್ತಂ ।
ಕ್ರಮದಾಪ್ತನೆ ಪೇೞ್ದುದದಾ
ಗಮಮಾಗಮದರ್ಥಮಾವುದದುವೆ ಪದಾರ್ಥಂ ॥ ೫೪

ಪರಮೋಪಶಮಂ ಧರ್ಮಾ
ನುರಾಗಮನುಕಂಪೆ ನೆಱೆದ ನಂಬುಗೆಯೆಂಬೀ ।
ಪರಮಜಿನಗದಿತಗುಣಪರಿ
ಕರದೊಳ್ ಕೂಡಿದುದೆ ನಿರುಪಮಂ ಸಮ್ಯಕ್ತ್ವಂ ॥ ೫೫

---

[1] ಖ.—ಘನಮಿಥ್ಯಾತ್ವಾಶುಭ ಭಾ । ವನಂದಜೀವಕ್ಕೆ ದೃಷ್ಟಿಮೋಹಪ್ರವಿಕಾ । ಸನಮಿಲ್ಲದಂದು.

ಜೀವಾದಿನವಪದಾರ್ಥದೊ
ಳಾವಗಮರ್ಥಿಯನೆ ಮಾಡು ಮೂಢತ್ರಯದೊಳ್ ।
ಭಾವಮನೆ ಬಿಸುಡು ಬೆಳಗುಗು
ಮೀವಿಧದಿಂ ನೆಗಪೆ ನಿನ್ನ ದರ್ಶನರತ್ನಂ ॥ ೫೬

ಜಿನಮತಪದಾರ್ಥಶಂಕಾ
ಪನಯನಮುಂ ಭೋಗಕಾಂಕ್ಷೆಯೊಳ್ ವಿಮುಖತೆಯುಂ ।
ಮುನಿಜನತನುಮಳವಿಚಿಕಿ
ತ್ಸನವರ್ಜನಮುಂ ತ್ರಿಮೂಢತಾನಿರಸನಮುಂ ॥ ೫೭

ಉಪಗೂಹನಮುಂ ಸದ್ಧ
ರ್ಮಪಥಚ್ಯುತಭವ್ಯಸಂಹತಿಸ್ಥಾಪನಮುಂ ।
ವಿಪುಳಗುಣವತ್ಸಳತ್ವಮು
ಮುಪಗತಮಳಜೈನಶಾಸನೋದ್ಭಾಸನಮುಂ ॥ ೫೮

ವ॥ ಎಂದು ಪೇೞ್ದೀಯೆಂಟುಗುಣಂಗಳುಂ ಸಮ್ಯಗ್ದರ್ಶನಾವಯವಂಗಳ್,

ಇವಱಿಂ ಸಮ್ಯಗ್ದರ್ಶನ
ಮವಶ್ಯಮುಜ್ಜ್ವಳಿಕುಮದುವೆ ಸಮ್ಯಗ್ಜ್ಞಾನ ।
ಕ್ಕವಕಾಶಮಕ್ಕುಮಂತದು
ಕವಲ್ತು ಸಮ್ಯಕ್ಚರಿತ್ರಮಂ ಪ್ರಕಟಿಸುಗುಂ ॥ ೫೯

ಈಸಂಸಾರಾಂಭೋಧಿಯ
ನೀಸುವ ನಿನಗಿದುವೆ[1] ನಾವೆ ತಡಿಗಾಣ್ಬೆಯನಾ ।
ಯಾಸದೊಳೆ ನಿನಗೆ ಮುಕ್ತಿ
ಪ್ರಾಸಾದಮನಡರಲಿವುವೆ ಸೋಪಾನಂಗಳ್ ॥ ೬೦

ಸೂಕ್ತಂ ಭವ್ಯಜನಪ್ರ
ವ್ಯಕ್ತಂ ಜೈನಾಗಮೋಕ್ತಮಿಂ ನಿನಗೆ ಮದೀ ।
ಯೋಕ್ತಮಿದೆರ್ದೆಯೊಳ್ ನೆಲಸುಗೆ
ಮುಕ್ತಿಶ್ರೀಹಾರವಿಭ್ರಮಂ ಸಮ್ಯಕ್ತ್ವಂ ॥ ೬೧

---

1 ಕ.—ಬಗೆಗಿದುವೆ.

ಎಂದೆಂದೊಡಮ್ಮ[1] ನೀನುಂ
ಸಂದೆಯಮಣಮಿಲ್ಲದಿದನೆ ನಂಬಿನಿತಂ ನೀ ।
ನೊಂದಿದ ನಾರೀರೂಪದ[2]
ದಂದುಗದೊಳ್ ತೊಡರ್ದು ಬಿಡದೆ ನವೆಯುತ್ತಿರ್ಪೈ ॥ ೬೦

ರಮಣೀಜಾತಿಯೊಳಲ್ತೆ ನಂಬಿದವರ್ಗಳ್ ಸಮ್ಯಕ್ತ್ವಮಂ ಪುಟ್ಟರಾ
ರುಮಧೋಭೂಮಿಯೊಳಂತೆ ಮೂಱುಮಮರಾವಾಸಂಗಳೊಳ್ ಪೇಪ್ವೊಡು।
ತ್ತಮಸಮ್ಯಕ್ತ್ವಫಲಂ ಪಗುಂತಿ ಮಗಳೇ ನೀನಿಂತಿದಂ ನಂಬನು
ಕ್ರಮದಿಂದಂ ದೊರೆವೆತ್ತ ಸಪ್ತಪರಮಸ್ಥಾನಂಗಳಂ ಪೊರ್ದುವೈ ॥ ೬೩

ವ॥ ಎಂದತಿಪ್ರೀತಿಯಿಂ ಪ್ರೀತಿಂಕರಾಚಾರ್ಯರ್ ವಜ್ರಜಂಘಾರ್ಯರ್ಗಂ ಶ್ರೀಮತ್ಯಾರ್ಯೆಗಂ ಶಾರ್ದೂಲಾರ್ಯಾದಿಗಳ್ಗಂ ಮುಕ್ತಿಸಾಮ್ರಾಜ್ಯಪದವಿಗಿದುವೆ ಯುವರಾಜಚಿಹ್ನಮೆನಿಸಿದ ಸೂತ್ರಾನುಗತಮಪ್ಪ ಸಮ್ಯಗ್ದರ್ಶನಮೆಂಬ ಕಂಠಿಕೆಯಂ ಕಂಠಿಕಾಬಂಧನಮಂ ಮಾಡಿ,

ದರ್ಶನಮಘಸಮಿತಿಗೆ ಸ
ದ್ದರ್ಶನದಿಂದಪ್ಪುದಕ್ಕೆ ನಿಮಗಕ್ಕೆ ಪುನ ।
ರ್ದರ್ಶನಮೆಂದಾರಾಧಿತ
ದರ್ಶನರಾಚಾರಣರ್ ನಭಕ್ಕೊಗೆದಾಗಳ್ ॥ ೬೪

ಆದಂಪತಿಗಳ್ ಜೊಮ್ಮನೆ
ಪೋದಂತಿರ್ದವರ ಗಗನತಳಗಮನದೊಳಂ ।
ದಾದ ಬೆಡಂಗಂ ನೋಡಿದ
ರಾದರದಿಂ ತಮ್ಮ ಕಣ್ಬೊಲಂಗಳವಿನೆಗಂ[3] ॥ ೬೫

ವ॥ ನೋಡಿ ತಮ್ಮ ಮನದೊಳವರುಪದೇಶಪರಾನುಗ್ರಹಬುದ್ಧಿಯುಂ ಸನ್ಮಾರ್ಗದರ್ಶನಕೌಶಲಮುಂ ನಿಸರ್ಗಸ್ನೇಹಸಂಬಂಧಮುಮಂತರಂಗದೊಳ್ ತಣ್ಮಲೆಯೆ,

[1]ಕ. —ಎಂದೆಂದರಬ್ಬ. [2]ಖ. —ನೊಂದಿದನಾದಿಯರೂಪದ.
[3]ಖ.—ಕಣ್ಬೊಣರ್ ದಣಿವಿನೆಗಂ.

ಪರಮತಪೋಧನರ್ ಪುಗುವರೆಂಬುದಸಂಭವಮಲ್ತೆ ಭೋಗಭೂ
ಚರರ ನಿವಾಸಮಂ ಕಿಱಿದು ನಮ್ಮ ಪುರಾತನಪುಣ್ಯಮಿಲ್ಲಿಗಂ ।
ಬರಿಸಿದುದೀಮುನೀಶ್ವರರನೀಯುಪದೇಶದಿನಾದುದುದಗ್ರಸಂ
ಸರಣಮಹಾಸಮುದ್ರತರಣಂ ಚರಣಂ ಶರಣಂ ಮುನೀಂದ್ರರಾ॥ ೬೬

ಮುನ್ನಮಹಾಬಳನಾದಂ
ದೆನ್ನಂ ಪ್ರಿಯಸಚಿವನಾಗಿ ಸಂಬೋಧಿಸಿ ಮಾ ।
ನೋನ್ನತರೀಗಳುಮಿಕ್ಕಿಯೊ
ಳೆನ್ನಂ ಸಮವಿಲ್ಕೆ ಬಂದರಿಂತುಟೆ ಮೋಹಂ ॥ ೬೭

ಕಾಮಸುಖೋಚಿತಮತಿಗಳ್
ನಾಮೆತ್ತ ಮುಮುಕ್ಷುವೃತ್ತಿಯಂ ತಾಳ್ದದವರ್ ।
ತಾವೆತ್ತಿಂತುಮನುಗ್ರಹ
ಮೀಮುನಿಪತಿಗೆಮ್ಮೊಳಾಯ್ತಿದೇಂ ವಿಸ್ಮಯಮೋ ॥ ೬೮

ವಾಮಂ ಕರತಳಮದು ಕೆಂ
ದಾಮರೆಯರಲೆನಿಪುದುಚಿತಪರ್ಯಂಕದೊಳು ।
ದ್ದಾಮಮುಪದೇಶಹಸ್ತಮ
ವಾಮಂ ಮಾರ್ದವಮನಭಿನಯಿಪ್ಪುದು ಮುನಿಯಾ ॥ ೬೯

ವ॥ ಎಂದು ತದ್ಗಗನಚಾರಣಮುನಿಗುಣಮಣಿಹಾರಮನಾತ್ಮೀಯಹೃದಯದೊಳನಿಬರುಂ ತಾಳ್ದಿ ಸಮ್ಯಗ್ದರ್ಶನಮನಸ್ಖಲಿತಮಾರಾಧಿಸಿ ಪಲ್ಯೋಪಮತ್ರಯಾಯುಷ್ಯಾವಸಾನದೊಳೋಷಧಿಗಳಂತೆ ಫಳಪಾಕಾಂತದೊಳ್ ಕ್ಷುತವಿಜೃಂಭಣವ್ಯಾಜದಿಂ ಲೋಕಾಂತರಿತರಾಗಿ,

ಮನೆಯಿಂದಂ ಮನೆಗೆಂದು ಪೋಪ ತೆಱದಿಂ ಮೇಣ್ ಸೂಸೆ ಪಾಸೆಂಬ ಮಾ
ತಿನ ಪಾಂಗಿಂದನಿತುಂ ಯುಗಂ ತಳರ್ದು ತದ್ಭೋಗಾವನೀಭಾಗದೊಳ್ ।
ತನುಗಳ್ ವೈಕ್ರಿಯಕಂಗಳಂತೆ ಕರಗುತ್ತಿರ್ದನ್ನೆಗಂ ಪುಣ್ಯಸಂ
ಜನಿತೈಶ್ವರ್ಯದಿನಿಂತು ಬಂದು ನೆಲಸಿತ್ತೀಶಾನಕಲ್ಪಾಗ್ರದೊಳ್ ॥ ೭೦

ವ॥ ಅಲ್ಲಿ ವಜ್ರಜಂಘಾರ್ಯಂ ಸುರತಸುಖನಿವಾಸದೊಳ್ ಶ್ರೀಪ್ರಭವಿಮಾನದೊಳ್ ಶ್ರೀಧರನೆಂಬದೇವನಾದಂ, ಶ್ರೀಮತ್ಯಾರ್ಯೆಯುಂ ಸಮ್ಯಕ್ತ್ವ

ಮಾಹಾತ್ಮ್ಯದಿಂ ಸ್ತ್ರೀರೂಪಮಂ ಪತ್ತುವಿಟ್ಟು ತತ್ಸ್ವಯಂಪ್ರಭವಿಮಾನದೊಳ್ ಶ್ರೀಧರಂಗೆ ಸಾಮಾನಿಕದೇವಂ ಸ್ವಯಂಪ್ರಭನೆಂಬ ದಿವಿಜನಾದಂ ಶಾರ್ದೂಲಾರ್ಯನುಂ ಚಿತ್ರಾಂಗವಿಮಾನದೊಳ್ ಚಿತ್ರಾಂಗದಾಮರನಾದಂ; ವರಾಹಾರ್ಯನುಂ ನಂದನವಿಮಾನದೊಳ್ ಮಣಿಮುಕುಟಕೇಯೂರಮಣಿಕುಂಡಲವಿಭೂಷಣನಾಗಿ ಮಣಿಕುಂಡಲನೆಂಬೊಂ ದಿವಿಜನಾದಂ; ವಾನರಾರ್ಯನುಂ ನಂದ್ಯಾವರ್ತವಿಮಾನದೊಳ್ ಸುರನಾರೀಮನೋಹರಂ ಮನೋಹರನೆಂಬನಿಮಿಷನಾದಂ; ನಕುಳಾರ್ಯನುಂ ಪ್ರಭಾಕರವಿಮಾನದೊಳ್ ಮನೋರಥಾವಾಪ್ತದಿವ್ಯಭೋಗಂ ಮನೋರಥನೆಂಬ ಕಲ್ಪಜನಾದಂ; ಇಂತಿನಿಬರುಂ ಸಹಾಯರೊಡನೆ,

ನಯನಾನಂದವಿಳಾಸರೂಪನಮರೀನೀಲಾಲಕಾಲೀಢಪಾ
ದಯುಗಂ ತತ್ಕುಚಕೂಟಘಟ್ಟಿತವಿಶಾಲೋರಸ್ಸ್ಥಲಂ ಸ್ವರ್ಗಲ ।
ಕ್ಷ್ಮಿಯ ಮೇಲಱ್ಕೆಱೊಳಂದದೇಂ ನಲಿದನೋ ಸಂಭೋಗಸಮ್ಮರ್ದನಿ
ರ್ದಯನಿಷ್ಪೀಡಿತದೇವವಾರವನಿತಾಬಿಂಬಾಧರಂ ಶ್ರೀಧರಂ ‖ ೨೧

ವ॥ ಒಂದು ದಿವಸಮಾದೇವನವಧಿಬೋಧದಿಂ ಪ್ರೀತಿಂಕರಾರ್ಯರ[1]ಕೇವಲಜ್ಞಾನೋತ್ಪತ್ತಿಯನಱಿದು ದೇವನಿಕಾಯದೊಡನನೇಕವಿನೋದದೊಳ್ ಪೂರ್ವ[2]ಪ್ರಭೆಯುಂ ತಾಳ್ದಿರ್ದತ್ತುಂಗಶ್ರೀಪ್ರಭಾಚಳಕ್ಕೆ ಪೋಗಿ,

ವಿವಿಧಾರ್ಚನೆಗಳನರ್ಚಿಸಿ
ವಿವಿಧಸ್ತುತಿಶತಸಹಸ್ರದಿಂ ಸ್ತುತಿಯಿಸಿ ಬಂ ।
ದವನತಮುಕುಟಂ ಶ್ರೀಧರ
ದಿವಿಜಂ ಬೆಸಗೊಂಡನಖಿಳಭವಭಯಹರನಂ ‖ ೨೨

ಪ್ರೀತಿಂಕರ ಶಂಕರ ವಿ
ದ್ಯಾತಿಶಯನಿಧಾನ ನಿನ್ನ ದಯೆಮೆರೆಸಿದತಿ ।
ಪ್ರೀತಿಯೊಳಾನತ್ಯುತ್ತಮ
ಜಾತಿಗಳೊಳ್ ಪುಟ್ಟಿ ಸುಖಮನುಣುತುಂ ಬಂದೇಂ ‖ ೨೩

---

[1] ಗ.—ಪ್ರಿಯಂಕರಾಚಾರ್ಯರ. [2] ಗ. — ದೇವನಿಕಾಯಮೊಡವರೆಯುತಿವರ ಪಿನೊಳ ಪೂರ್ವ; ಕ. — ದೇವನಿಕಾಯಸಹಿತಂಬಂದವರಿರವಿನೆಳೊಳಪೂರ್ವ.

ಆನೆಂಬರಚರನಾದಂ
ದಾನಾಲ್ವರೊಳಲ್ಲಿ ಮೂವರುಂ ಮಂತ್ರಿಗಳಂ ।
ತೇನಾದರಖಿಳಮಿಥ್ಯಾ
ಜ್ಞಾನಾವೃತಚರಿತರುಚಿತಪರಹಿತಚರಿತಾ ॥ ೭೪

ಬೆಸಸೆನೆ ದಿವಿಜನ ಮನದೊಳ್
ಪಸರಿಸಿದ ತಮಸ್ತಮಂ ತೆರಳ್ದಿರೆ ಪರಮಂ ।
ಬೆಸಸಿದನಾಗಳ್ ಭವ್ಯ
ಪ್ರಸಾದಕರನಿಜವಚೋಂಶುಗಳ್ ಬೆಳಗುವಿನಂ ॥ ೭೫

ಸಂಭಿನ್ನಮಹಾಮತಿಗಳ್
ಗಂಭೀರನಿಗೋದದೊಳ್ ತಮೋಮಯದೊಳ್ ದುಃ ।
ಖಾಂಭೋಧಿಯ ಕಡೆಗಾಣದೆ
ಜೃಂಭಿತದುಷ್ಕರ್ಮದಿಂದೆ ನವೆದಪರಿನ್ನುಂ ॥ ೭೬

ಶತಮತಿ ಮಿಥ್ಯಾಜ್ಞಾನಾ
ವೃತಮತಿ ಸಂದಂ ದ್ವಿತೀಯನರಕಕ್ಕೀಸಂ ।
ಸ್ಮೃತಿಯೊಳ್ ಧರ್ಮಾಧರ್ಮ
ಸ್ಥಿತಿಯೆ ವಲಂ ಸ್ವರ್ಗನರಕಸುಖದುಃಖಕರಂ ॥ ೭೭

ಧರ್ಮಮಮರೇಂದ್ರಗತಿಯನ
ಧರ್ಮಮಧೋಗತಿಯನೆಸಗುವೆಸಕದೊಳೀಗಂ ।
ಧರ್ಮಾಧರ್ಮಕ್ರಿಯೆಗಳೆ
ನೆರ್ಮಂ ಜೀವಕ್ಕೆ ಮನುಜಗತಿಯೊಳೆ ಮಾೞ್ಕುಂ ॥ ೭೮

ಪುಸಿಯದುದು ಪರಾಂಗನೆಗಾ
ಟಿಸದುದು ಕೊಲ್ಲದುದು ಮೋಹಮಿಲ್ಲದುದಱಿವಂ ।
ಪೊಸಯಿಸುವುದು ವೈರಾಗ್ಯದ
ದೆಸೆಗೆಸಪುದು ಧರ್ಮಮದಱ ತಱೆವುದಧರ್ಮಂ ॥ ೭೯

ಮಾಂಸಮಧುಮದ್ಯಸೇವನೆ
ಹಿಂಸಾರುಚಿ ಪರಮಜಿನಮತಾರುಚಿ ಕ್ರೂರತ್ವಾ ।

ಸಂಸರ್ಗಮೆಂಬಿವಲ್ಲದೆ
ಸಂಸಾರಭ್ರಮಣಕಾರಣಂ ಪೆಱವೊಳವೇ ॥ ೮೦

ಕಳಿಪಂ ಕಳ್ವನಗುರ್ವು ಪರ್ವೆ ಕೊಲಿಪಂ ಕೊಲ್ವಂ ಪರಸ್ತ್ರೀಯರಂ
ಕೊಳಿಪಂ ಕೊಳ್ವನೆನಿಪ್ಪ ಪಾಪಿಯುಮತಿಕ್ರೂರಾತ್ಮನುಂ ಸಾಧುಸಂ ।
ಕುಳಮಂ ಕಂಡೊಡೆ ಕಾಯ್ವನುಂ ಪೞಿವನುಂ ಧರ್ಮಕ್ಕತಿದ್ರೋಹನುಂ
ಖಳನುಂ ಕಳ್ಳುಣಿಯುಂ ಘುಳುಮ್ಮನಿೞಿಗುಂ ಶ್ವಭ್ರಾಂತಮಂ ತಾಪಿನಂ॥೮೧

ವ॥ ಆನರಕಂಗಳುಂ ರತ್ನಶರ್ಕರಾವಾಳುಕಾಪಂಕಧೂಮತಮೋಮಹಾತಮಃಪ್ರಭಾನಾಮಮಂ ತಾಳ್ದಿದುವವಱೊಳ್,

ಮೇಗಣ ನಾಲ್ಕಱೊಳೈದಱ
ಮೇಗಣ ಭಾಗದೊಳಗುರ್ವ ಘರ್ಮಂ ಹಿಮದಿಂ ।
ದಾಗಳೆ ಮುರುಂಟುವರ್ ಮಹಿ
ಭಾಗದೊಳುೞಿದವಱೊಳನ್ನವೇೞುಂ ನರಕಂ ॥ ೮೨

ವ॥ ಮತ್ತವಱೊಳನುಕ್ರಮಂದಪ್ಪದೆ,

ಮೂವತ್ತಿರ್ಪತ್ತೈವ
ತ್ತಾವಗೆ ಪದಿನೈದು ಪತ್ತು ಮೂಱೈಯ್ದೂನಂ ।
ಭಾವಿಪೊಡಿಂತಿವು ಲಕ್ಕೆಗ
ಳೇವೊಗಳ್ವುದೊ ಬೞಿಯುಮೆಯ್ದೆ ನರಕಬಿಲಂಗಳ್ ॥ ೮೩

ವ॥ ಆಬಿಲಂಗಳುಮಿಂದ್ರಕಶ್ರೇಢೀಬದ್ಧಪ್ರಕೀರ್ಣಕಂಗಳೆಂದು ಮೂಱುತೆಱನಕ್ಕುಂ. ಅವಱ ಮೇಗಣಟ್ಟೆಗಳೊಳಟ್ಟೆ ಜೇನ ಪುಟ್ಟೆಗಳನನುಕರಿಸುವತಿರೌದ್ರ[1]ಬೀಭತ್ಸಕುತ್ಸಿತೋತ್ಪತ್ತಿಸ್ಥಾನಂಗಳೊಳ್ ಕೃಷ್ಣನೀಲಕಪೋತಲೇಶ್ಯಾಬಹ್ವಾರಂಭಪರಿಗ್ರಹತ್ವಾದ್ಯಶುಭಪರಿಣಾಮಂಗಳಿಂ ಜೀವಂ ನೆಲಸಿ ಬೞಿಯುಮಂತರ್ಮುಹೂರ್ತದೊಳಾಹಾರಶರೀರೇಂದ್ರಿಯೋಚ್ಛ್ವಾಸಭಾಷಾಮನಃಪರ್ಯಾಪ್ತಿಗಳೊಳ್ ನೆರೆದು,

---

[1]ಗ.—ನುಕರಿಸುವ ಬಟ್ಟೆಯ ನಾಯ ತೋಳನ ಬಳ್ಳುವಿನ,
ನರಿಯಾಕಾರದ ಪೆರವುಮತಿರೌದ್ರ.

ಕೊಟ್ಟಸುಗಟ್ಟಿಗಳಿಂದಂ
ತೊಟ್ಟನೆ ಪಱಿಪಟ್ಟು ಬೀೞ್ವವೊಲ್ ಬಿರ್ದರ್ ನಭಂ।
ಮುಟ್ಟೆ ಸಿಡಿಲ್ದಡೆಗಿಡುವಿನ
ಮೊಟ್ಟೆದ ಕೈದುಗಳ ಮೇಲೆ ಬಿರ್ದನನಾಗಳ್ ॥ ೮೪

ಮನದೊಳ್ ಮುನಿಸೊದವೆ ಪುರಾ
ತನನಾರಕರೋವದಿವನನಿಱಿ ತಱಿ ಕೊಲ್ ಮೆಲ್।
ಎನೆ ಬಗೆದು ಬಗೆದು ಮನದೊಳ್
ಜನಿಯಿಸುಗುಮವಂಗೆ ಖಿಳವಿಭಂಗಜ್ಞಾನಂ ॥ ೮೫

ವ॥ ಅಂತು ಪುಟ್ಟಿದ ವಿಭಂಗಜ್ಞಾನದಿಂದಪಗತನರಕಲೋಕವೃತ್ತಾಂತರಾದಿಂಬೞಿಯುಮೋರೊರ್ವರ ನೆಱಂಗಳುಮನನ್ಯೋನ್ಯವೈರಕಾರಣಂಗಳುಮನುಗ್ಘಡಿಸಿತ್ತುಮೋರೊರ್ವರೋರೊರ್ವರನಿಕ್ಷುಯಂತ್ರಂಗಳೊಳ್ ಕಬ್ಬಂ ಪಿೞಿವಂತೆ ಪಿೞಿವರುಂ, ಕಾಯ್ದ ವಜ್ರಮೂಷೆಯೊಳಿಕ್ಕಿ ಲೋಹಮಂ ಕರಗಿಸುವಂತೆ ಕರಗಿಸುವರುಂ, ಬಾಷ್ಪಮಾಪೆ ತಿದಿಯುಗಿವರುಂ, ಮಿಡುಮಿಡುಕೆ ಬಡಿತಂಗಾಸುವರುಂ, ನೋಡೆ ನೋಡೆ ಕಣ್ಗಳಂ ಮೀಂಟುವರುಂ, ನುಡಿಯೆ ನುಡಿಯೆ ನಾಲಗೆಯಂ ಪಿಡಿದು ಪೆಡತಲೆಯಿಂದುರ್ಚುವರುಂ, ಕಾಯ್ದ ಕರ್ಬೊನ್ನ ಸೂಜಿಗಳಂ ಬೆರಲ್ಗಳೊಳ್ ಬೆಟ್ಟುವರುಂ, ನಟ್ಟು ಪರಗುವರುಂ, ತಳ್ತಳನೆ ಕುದಿವ ಕರ್ಬೊನ್ನ ಕಾಯ್ಗೊಂಡೆಣ್ಣೆಯೊಳ್ ಬಳಲೆ ತೆಗಪುವರುಂ, ಪಸಿಯತೊವಲ ತಿದಿಯೊಳ್ ಪುದಿದು ಪುಟಪಾಕಂಸುಡುವರುಂ, ಕಾಯ್ದ ಕಾವಲಿಗಳೊಳ್ ಪೆರ್ಮರನಾಗೆ ತಾಳಿಸುವರುಂ, ಕೂಟಶಾಲ್ಮಲಿಗಳನಡರವೇೞ್ದಿದಿರಂ ಬೞಿಯನುರ್ಚುವರುಂ, ಉರಿವ ಕೈದೀವಿಗೆಗಳೊಳ್ ಮೊಗಮಂ ಚುರ್ಚುವರುಂ, ಬಳ್ಳನುರಿವ ಪುಣ್ಗಳೊಳ್ ಕ್ಷಾರವಾರಿಗಳನೆಱೆದೊರಸಿ ಕರ್ಚುವರುಂ, ಅಂತುಮಲ್ಲದೆಯುಂ,

ಅಡಗಿನ ಬಸನಿಗನ್ನೆ ತಿನ್
ಪಿಡಿಯೆಂದವನಡಗನವನ ಬಾಯೊಳ್ ಗಿಡಿವರ್।
ಕುಡಿ ಕಳ್ಳನೆಂದು ಕರಗಿಸಿ
ಕುಡಿಯಿಸುವರ್ ಲೋಹರಸಮನೆರ್ದೆಗರಗುವಿನಂ ॥ ೮೬

ಪ್ರುಸಿಬಸನವೆಂದು ಕೆಲಬರ್
ಕುಸಿವರ್ ನಾಲಗೆಯನಿಕ್ಕುಪೊಳ್ ಪರವಧುದು ।
ವ್ಯಸನಂ ನಿನಗೆಂದಮರ್ದ
ಪ್ಪಿಸುವರ್ ಕೆಂಪಿಸೆಯೆ ಕಾಯ್ದಯಃಪುತ್ರಿಕೆಯಂ ॥ ೮೩

ವ॥ ಅಂತು ಸದ್ಯಸ್ಸಂತಾಪಿತಲೋಹಪುತ್ರಿಕಾಪರಿರಂಭಸಂಭೃತಪ್ಲೋಷಚಲಜ್ಜಾಂಗಳಗಳದ್ರುಧಿರವಿಚಳದಸ್ಥಿನಿರ್ಯನ್ಮಜ್ಜಾಶುಷ್ಯತ್ಕಂಠಸ್ವಿದ್ಯದ್ವದನನಿಮೀಳನ್ನೇತ್ರಸೀದದ್ಗಾತ್ರಮುಹ್ಯನ್ಮಾನಸಾಕ್ರಂದತ್ಸ್ವರಪರಿಗತರ್ ಸೈರಿಸಲಾಱದೆ ತಡತಡಿಸಿ ಪರಿತಂದತಿದ್ರುತಪ್ರವಾಹದಿನಾರುಷ್ಕರದ್ರಾವಾವರ್ತಗರ್ತಗಂಭೀರೆಯಂ ಗಂಭೀರನಾರಕಭೀಷಣಮಕರಮುಖಕುಹರನಿಪತಿತಾಕ್ರಂದದಾರ್ತಪರುಷಸ್ವರವಿರಸಭಯಂಕರೆಯಂ ಭಯಂಕರಶಿಂಶುಮಾರವಿಕಟದಂಷ್ಟ್ರಾಕ್ರಕಚಪಾಟ್ಯಮಾನನಾರಕನಿಕರರುಧಿರಚ್ಛಟಾಚ್ಛುರಣಾರುಣಿತಸಲಿಲಪರಿಕಾನಿಕರಕರಾಳೆಯಂ ಕರಾಳನಕ್ರಚಕ್ರಚರ್ವಿತನಿಕೀರ್ಣನಿರಯಜನಿಕುರುಂಬಶಲ್ಯಶಕಲಪರಿಪೂರಿತಧವಳಪ್ಲವದುರ್ನಿರೀಕ್ಷಣವಿಷಮೆಯಂ ವಿಷಮಕಠೋರಕೂರ್ಮಘರ್ಮನಿರ್ಘರೋಚ್ಛ್ವಾಸಭರದ್ವೈಧೀಭವದಂಭಃಪ್ರಕಟಿತಾಗಾಧರಂಧ್ರಾವರ್ತಮಾನಜಳಚರಸಂಚರಣವಿಸ್ಮಯನೀಯಭಯಾನಕೆಯಂ ಭಯಾನಕೋಭಯತಟಗುಹಾಗಹ್ವರನಿರ್ಯಜ್ಜರದಜಗರಗಳಗಳತಗರಳಶಬಳಿತಸಲಿಲಪ್ರವಾಹೆಯಂ ಪ್ರವಾಹಾತ್ಯುಷ್ಣತಾಪಹಸಿತಪ್ರಳಯಕಾಲಪ್ರೌಢತರತರಣಿಯಂ ವೈತರಣಿಯಂ ಪೊಕ್ಕಾಗಳ್,

ಸುಡುವುದು ನಂಜುನೀರ್ ಪಿಡಿದು ನುಂಗುವುವಲ್ಲಿಯ ಮೀಂಗಳೆತ್ತಮೋ
ರಡಿ ಮಿಡುಕಲ್ಕೆ ಬಾರದೆಮಗಾರ್ ಶರಣೆಲ್ಲಿಗೆ ಪೋಪೆವೆಂದು ಮೆ ।
ಳ್ಪಡಿನಸಿಪತ್ರನಂದನಮನೊಯ್ಯನೆ ಸಾರ್ವುದುಮಲ್ಲಿ ಮೈಯೊಳ
ರ್ದಿಡುವುವು ಪತ್ರಪುಷ್ಪಫಲಸಂಕುಳದಂದದ ಶಸ್ತ್ರಕೋಟಿಗಳ್ ॥ ೮೮

ವ॥ ಅಂತು ಶಾರೀರಮಾನಸಕ್ಷೇತ್ರಜಪರಸ್ಪರೋದೀರಿತದನುಜೋದೀರಿತಂಗಳೆಂಬಯ್ದುಂ ತೆಱದ ದುಃಖಂಗಗಳೊಳ್ದರ್ದು ನಿಮಿಷಮಾತ್ರಮುಪ್ಪೊಡಮುಸಿರ್ಪೊತ್ತುಂ ಪಡೆಯದೆ,

॥ ಮಾ ಲಿ ನಿ ॥

ನರಕನಗರಲಗ್ನಾಕಸ್ಮಿಕಾಗ್ನಿಸ್ಫುಲಿಂಗ
ಸ್ಫುರದವಿರಳಲಾಕ್ಷಾಗೇಹಪೂರ್ವೈಕಭಾವ ।
ತ್ವರಿತವಿಚಳದಸ್ಥಿಗ್ರಂಥಿಸಂಸ್ಥಾನಬಂಧರ್
ಖರಪರುಷನಿನಾದರ್ ನಾರಕರ್ ಬರ್ದುಱ್ತಿರ್ಪರ್ ॥ ೮೯

ವಾನರವಾರಣೋಷ್ಟ್ರಖರಮತ್ಸ್ಯಕಳೇವರಪೂತಿಗಂಧಮೋ
ನೇನೊಳವುಳ್ಳುವೊಂದೆಡೆಗೆ ಬಂದುಮಿವಂದಿರ ಮೆಯ್ಯ ಗಂಧದು ।
ದ್ಧಾನಿಗೆ ವಾರದೆಂಬಿನಮದೇಂ ನೆಱೆ ಪ್ರೋಲ್ತುದೊ ಚಂಡಹುಂಡಸಂ
ಸ್ಥಾನದೆ ಗುಂಡುದೀವಿದ ತಡಂಗಮನಂಗದ ಪಾಂಗಮಂದಿರಾ ॥ ೯೦

ದೊರೆಕೊಂಡ ಕೃಷ್ಣಲೇಶ್ಯಾ
ಪರಿಣಾಮಮೆ ಕೃಷ್ಣವರ್ಣಮುಂ ಪುಟ್ಟಿಸಿದಂ ।
ತಿರೆ ಕರಿಕರ್ ಪೇಡಿಗಳತಿ
ಪರುಷಸ್ವರಪರುಷನಯನಪರುಷಶರೀರರ್ ॥ ೯೧

ಏೞೆ ಧನು ಮೂಱುಮೊೞನಿಂ
ಪೇೞೆ ಷಡಂಗುಲಮೆ ಮೊದಲ ನಾರಕರೊಡಲಂ ।
ತೇೞುವರಂ ತದ್ವಿಗುಣಂ
ಸೂೞೊಳ್ ನಾರಕರ ಕಠಿನದೇಹೋತ್ಸೇಧಂ ॥ ೯೨

ಮೊದಲಿಂದಂ ತುದಿಯೆಯ್ದೆ ಸಂದ ನರಕಾಯುಷ್ಯಾಬ್ಧಿ ಕೇಳೊಂದು ಮೂ
ಱಿದಱಿಂದಂ ಬೞಿಕೇೞು ಪತ್ತು ಪದಿನೇೞಿರ್ಪತ್ತೆರಡ್ಮೂಱು ಪೆ ।
ರ್ಚಿದ ಮೂವತ್ತೆನೆ ತಮ್ಮ ಮುಂ ನೆರಪಿದಾಯುಷ್ಯಂಬರಂ ಮಾಯಮಾ
ಗದು ಮೆಯ್ಸಣ್ಣಿಗೆಯೊಳ್ ಮಗುೞ್ಚಿದೊಡಮೇಂ ದುಃಖಕ್ಕವರ್ನೋಂತರೋ

ಕ್ರಮದೊಳಸನ್ನಿಯಿಂ ಸರಿಸೃಪಾವಳಿಯುಂ ವಿಹಗಾಳಿಯುಂ ಭುಜಂ
ಗಮತತಿಯುಂ ಮೃಗಾರಿಗಣಮುಂ ಲಲನಾಜನಮುಂ ಮನುಷ್ಯದು ।
ಸ್ತಿಮಿಕುಳಮುಂ ಹಿಮಾಂಶುನಯನಾಗ್ನಿಕಷಾಯಹೃಷೀಕಷಣ್ಮುನಿ
ಕ್ರಮನರಕಂಗಳೊಳ್ ನೆಲಸುಗುಂ ದಿವಿಜೋತ್ತಮ ನಂಬು ನೀನಿದಂ ॥ ೯೪

ವ॥ ಮುನ್ನೆ ನಿನ್ನ ಬೆಸಗೊಂಡ ಶತಬುದ್ಧಿಯುಮತ್ಯಂತಪಾಪಬುದ್ಧಿಯಿಂದಮಿಂತುಟಪ್ಪ ದುಃಖಮನೆರಡನೆಯ ನರಕದೊಳನುಭವಿಸಿದಪ್ಪನೆಂಬುದುಂ ಶ್ರೀಧರಾಮರನತ್ಯಂತಧರ್ಮಸಂವೇಗಪರಾಯಣನಾಗಿ ಸರ್ವಾಂಗಾಲಿಂಗಿತಮಹೀತಳಂ ಗುರೂಪದೇಶದಿಂದಾತನಂ ಪ್ರತಿಬೋಧಿಸಲಲ್ಲಿಗೆ ಪೋಗಿ,

ಅಱಿಯಮೆ ತಿಣ್ಣಂ ನಿನಗೇ
ನಱಿವೊ ಮಹಾಬಳನೆ ನಿನ್ನನೆಲೆ ಶತಮತಿ ನಿ ।
ನ್ನಱಿಯಮೆಯೆ ನಿನ್ನನಿನಿತಂ
ಮಱುಗಿಸಿದುದು ಪಾಪಕರ್ಮ ನೀಂ ಕಂಡುಂಡೈ ॥ ೯೫

ಇನ್ನುಂ ನಿಜಮಿಥ್ಯಾಜ್ಞಾ
ನೋನ್ನತಿಯುಂ ಬಿಸುಟು ನಂಬು ಸಮ್ಯಕ್ತ್ವಮನಿಂ ।
ತೆನ್ನನೆ ಕಂಡಿಂ ತಿಳಿಯೆನೆ
ಸನ್ನುತಸಮ್ಯಕ್ತ್ವರತ್ನಮಂ ಕೈಕೊಂಡಂ ॥ ೯೬

ವ॥ ಕೈಕೊಂಡು ಕಾಲಾಂತರದಿಂದಾನರಕದಿಂದಾತಂ ಬಂದು ಪುಷ್ಕರವರದ್ವೀಪದ ಪೂರ್ವಮಂದರದ ಪ್ರಾಗ್ವಿದೇಹದ ಮಂಗಳಾವತೀವಿಷಯದ ರತ್ನಸಂಚಯಪುರಮನಾಳ್ವ ಮಹೀಧರಂಗಂ ತತ್ಸೌಂದರಿ ಸುಂದರಿಗಂ ಜಯಸೇನನೆಂಬ ಮಗನಾಗಿ ಪುಟ್ಟಿ, ವಿವಾಹಸಮಯದೊಳ್ ತನ್ನನಾಶ್ರೀಧರದೇವನೇ ಬಂದು ಮಗುಳ್ದುಂ ಮೂದಲಿಸೆ, ಯಮಧರಗುರುಗಳ ಪಾದಮೂಲದೊಳ್ ದುಶ್ಚರತಪಶ್ಚರಣಪರಾಯಣಂ ಜೀವಿತಾಂತ್ಯದೊಳ್ ಸಮಾಹಿತಚಿತ್ತನಾಗಿ,

ಪಡೆದಂ ಬ್ರಹ್ಮೇಂದ್ರತೆಯಂ
ಗಡಮಾತಂ ಬಗೆದು ನೋಡೆ ನಾರಕನೆತ್ತಲ್ ।
ಗಡ ದೇವನೆತ್ತ ಕರ್ಮಮೆ
ಕಡುಬಲ್ಲಿತ್ತದಱ ತಿರಿವದೇಂ ಬಹುವಿಧಮೋ ॥ ೯೭

ವ॥ ಅನ್ನೆಗಂ,

ಉಪಕಾರಸ್ಮರಣೆ ಮನ
ಕ್ಕೆ ಪುಟ್ಟೆ ತದ್ದಿವಿಜವಲ್ಲಭಂ ಶ್ರೀಧರನಂ ।

ನಿಪುಣಂ ಪೂಜಿಸಿದಂ ಗಡ
ಮುಪಕಾರಮನಱಿಯದಾತನುಂ ಮಾನಸನೇ ‖ ೯೮

ವ॥ ಅನ್ನೆಗಂ,

ದಿವಿಜವನಿತಾಸವಿಭ್ರಮ
ಧವಳಾಪಾಂಗಮೆ ನಿಜಾಯುರಂಭೋನಿಧಿಯುಂ ।
ತವೆ ಪೀರ್ದುದೆನಿಸೆ ತೊಟ್ಟನೆ
ದಿವದಿಂದಂ ಶ್ರೀಧರಂ ಪರಿಚ್ಯುತನಾದಂ ‖ ೯೯

ವ॥ ಆಗಿ ಜಂಬೂದ್ವೀಪದ ಪೂರ್ವವಿದೇಹದ ವತ್ಸಕಾವತೀವಿಷಯದ ಸುಸೀಮಾನಗರಮನಾಳ್ವ ಸುದೃಷ್ಟಿಮಹೀಪಾಳಂಗಂ ಸುಂದರಸುನಂದಾಮಹಾದೇವಿಗಂ,

ತವೆ ನೋಡಲ್ ನೋಡಿ ಮೆಚ್ಚಲ್ ಮನದೊಳಸೆದಳಂ ಮೆಚ್ಚಿ ನಾನಾವಿಶೇಷ
ಸ್ತವದಿಂದಂ ಕೀರ್ತಿಸಲ್ಕತ್ತಳಗಮಮರನಾಥಂಗಮೆಂಬನ್ನೆಗಂ ರೂ ।
ಪವಿಳಾಸಶ್ರೀಯೊಳಾಶ್ರೀಧರನಧಿಕಯಶಶ್ರೀಧರಂ ಪುತ್ರನಾದಂ
ಸುವಿಧಿಶ್ರೀನಾಮದಿಂದಂ ಸುಕವಿಜನಮನೋಮಾನಸೋತ್ತಂಸಹಂಸಂ ‖ ೧೦೦

ಪ್ರಿಯಪುಷ್ಪಸ್ತಬಕಂಗಳಿಂ ತುಱುಗಿದೊಂದಿಮ್ಮಾವನತ್ಯಂತಕಾಂ
ತಿಯೊಳಾಶಾಂತರಮೆಲ್ಲಮಂ ತೊಳಪ ಸಂಪೂರ್ಣೇಂದುವಂ ತನ್ನ ಶೋ ।
ಭೆಯ ತನ್ನುಜ್ಜ್ವಳಕಾಂತಿಯೊಂದುವಿಭವಂ ಗೆಲ್ವನ್ನೆಗಂ ಯೌವನೋ
ದಯದೊಳ್ ನೋಡಿದರಂ ಮನಂಗೊಳಿಸಿದಂ ಸಂಸಾರಸಾರೋದಯಂ ‖ ೧೦೧

ಗ॥ ಇದು ದೇವೇಂದ್ರಮುನೀಂದ್ರವಂದ್ಯಪರಮಜಿನೇಂದ್ರಮುಖ
ಚಂದ್ರವಾಕ್ಚಂದ್ರಿಕಾಪ್ರಸರಪ್ರಸಾದೋದೀರ್ಣಸೂಕ್ತಿ
ಕಲ್ಲೋಲಮಾಲಾಕೀರ್ಣಕವಿತಾಗುಣಾರ್ಣವ
ಪ್ರಣೀತಮಪ್ಪಾದಿಪುರಾಣದೊಳ್
ಸುವಿಧಿಮಹಿಮೋತ್ಪತ್ತಿವರ್ಣನಂ
ಪಂಚಮಾಶ್ವಾಸಂ
ಸಂಪೂರ್ಣಂ.

ಷಷ್ಠಾಶ್ವಾಸಂ.

ಶ್ರೀಯುಂ ಸೊಗಯಿಸುವ ವಚಃ[1]
ಶ್ರೀಯುಂ ತನ್ನೀಷ್ಟ್ಗೆಯೊಳ್ ಪೊದಪ್ದೆಸೆಯೆಯುಮಾ !
ಶ್ರೀಯುಮನೇಂ ಸುಭಗವಯು[2]
ಶ್ರೀಯುಮನಾಂತನೊ ಸರಸ್ವತೀಮಣಿಹಾರಂ ॥ ೧

ನೆಗಳ್ದ ಭಯಘೋಷಚಕ್ರಿಯ
ಮಗಳ ಮನೋರಮೆಯು ಮದುವೆಗಂ ರಾಜ್ಯದ ಪ ।
ತ್ತುಗೆಗಂ ಗುರೂಪರೋಧ
ಕ್ಕಗಿದು ಮನಂದಂದನೇಂ ಜಿತಾತ್ಮನೊ ಪುರುಷಂ ॥ ೨

ವ॥ ಅಂತಗಣ್ಯಪುಣ್ಯನಿಧಿಯೆನಿಸಿದ ಸುವಿಧಿಗಮಾತನ ಮನೋರಮೆ ಮನೋರಮೆಗಂ ಶ್ರೀಮತೀಚರನೆನಿಸಿದಾಸ್ವಯಂಪ್ರಭದೇವಂ ದೇವಲೋಕದಿಂದವತರಿಸಿ,

ಪ್ರಿಯುವನಿತಾಚರನೆ ಗಡಂ
ಪ್ರಿಯತನಯುಂ ಕೇಶವಾಂಕನಾದನಿದೇಂ ವಿ ।
ಸ್ಮಯಕರವೊ ಸಂಸೃತಿಸ್ಥಿತಿ
ಬಯಸುವುದೆಂತಯ್ಯ[3] ಪೇೞಿಮಿಂತಪ್ಪುದುಮಂ ॥ ೩

ವ॥ ಮತ್ತಮಾವಿಷಯದೊಳ್ ಶಾರ್ದೂಲಚರನಪ್ಪ ಚಿತ್ರಾಂಗದೇವಂ ದೇವಲೋಕದಿಂದವತರಿಸೆ ಬಂದು ಸಮಾನಪುಣ್ಯತ್ವಂ ಕಾರಣಮಾಗಿ ಸುವಿಧಿಸಮಾನನಪ್ಪ ಮಂಡಳಿಕಂ ವಿಭೀಷಣಂಗಂ ಪ್ರಿಯದತ್ತೆಯೆಂಬ ತತ್ಪ್ರಿಯು ಲಲನೆಗಂ ವರದತ್ತನೆಂಬೊಂ ಮಗನಾದೊಂ; ವರಾಹಾರ್ಯಚರನಪ್ಪ ಮಣಿಕುಂಡಲದಿವಿಜಂ ನಂದಿಷೇಣಂಗಮನಂತಮತಿಗಂ ವರಸೇನನೆಂಬೊಂ ತನಯನಾದಂ; ವಾನರಾರ್ಯಚರನಪ್ಪ ಮನೋಹರಾಮರಂ ರತಿಷೇಣಂಗಂ ಚಂದ್ರಮತಿಗಂ ಚಿತ್ರಾಂಗದನೆಂಬೊಂ ತನಯನಾದಂ; ನಕುಳಾ

---

[1]ಖ—ಜಯ. [2]ಖ.—ವಚ. [3]ಕ.—ದೇಕಯ್ಯ.

ರ್ಯಚರನಪ್ಪಮನೋರಥಕಲ್ಪಜಂ ಪ್ರಭಂಜನಂಗಂ ಚಿತ್ರಮಾಲೆಗಂ ಶಾಂತಮದನನೆಂಬ ಪುತ್ರನಾಗಿ,

ಪೂರ್ವಭವಸ್ನೇಹಮದೋ
ರೊರ್ವರನಲೆದೊಂದು ಮಾಡೆ ತಮ್ಮನಿಬರುಮಂ ।
ದೊರ್ವುರ್ವೀ ನೆರೆದತಿಲಲಿತತ[1]
ರೋರ್ವೀತಳಸುಖಮನುಣುತುಮಿರೆ ಪಲಕಾಲಂ ॥ ೪

ವ॥ ಒಂದುದಿವಸಂ ಸುವಿಧಿಧರಾಧೀಶಂ ತಮ್ಮ ಮಾವನಪ್ಪಭಯಘೋಷಚಕ್ರವರ್ತಿ ವಿಮಳವಾಹನಜಿನಚರಣವಂದನಾಭಕ್ತಿಗೆ ಪೋಗೆ, ತಾನುಂ ವರದತ್ತವರಸೇನಚಿತ್ರಾಂಗದಶಾಂತಮದನರೆಂಬ ನಾಲ್ವರ್ ಸಹಾಯರುಂ ತನ್ನಮಗಂ ಕೇಶವನುಂ ಬೆರಸು ಪೋಗಿ ಸುವಿಧಿ ಸುವಿಧಿಯಿಂ ಜಿನೇಂದ್ರಪಾದಾರವಿಂದಂಗಳಂ ವಂದಿಸುತ್ತಿರ್ಪನ್ನೆಗಮಭಯಘೋಷಂ ಧರ್ಮಾಮೃತರಸಮನಾಸ್ವಾದಿಸಿ ಸಂಸಾರಶರೀರಭೋಗನಿರ್ವೇಗಪರಾಯಣನಾಗಿ,

ಸಾಸಿರ್ವರ್ ವನಿತೆಯರ
ಯ್ಯಾಸಿರ್ವರ್ ಪ್ರಿಯತನೂಜರಱಿಕೆಯ ಪದಿನೆ ।
ಣ್ಛಾಸಿರ್ವರರಸುಗಳ್ ವೆರ
ಸಾಸಾಸಿಗನುಚಿತದೀಕ್ಷೆಯಂ ಕೈಕೊಂಡಂ ॥ ೫

ಸುವಿಧಿಯುಮಾತ್ಮತನೂಭವ
ಭವವಿಪುಳಸ್ನೇಹನಿಗಳದಿಂದಮೆ ತೊಡರ್ದಾ ।
ಧವಳಾತಪವಾರಣಕಕು
ದವಿಭೂತಿಯ[2]ನುೞಿದು ನೆಗೞ್ದುಪಾಸಕನಾದಂ ॥ ೬

ಪದಪು ಜಿನೇಂದ್ರಪಾದಕಮಳಂಗಳೊಳಾವಗಮಾಗೆ ಕರ್ಮಬಂ
ಧದ ಬಿಗಿಪೊಯ್ಯನೊಯ್ಯನೆ ಸಡಿಲ್ದಿರೆ ಬಾಡವರೂಪದಿಂದೆ[3] ಕೊ ।
ಲ್ಲದ ಪರನಾರಿಗಾಟಿಸದ ಕಳ್ಳದಸತ್ಯದೊಳೊಂದದಾಗಳುಂ
ಕುದಿದಪತೃಷ್ಣೆಯಂ ಕುಸಿದು ಮಾಣಿಸುವಯ್ದುಮಣುವ್ರತಂಗಳಂ ॥ ೭

---

[1]ಕ.—ನೆರದತಿಬಲಯುತರುರ್ವೀತಳ. [2]ಕ.—ಚಮರವಿಭೂತಿ.
[3]ಖ.—ಬಾದರರೂಪದಿಂದೆ; ಕ.—ಬಾಂಧವರೂಪದಿಂದೆ.

ದೆಸೆಗಳ ಮೇರೆಯುಂ ನಿಱಿಸಿ ಪೋಪುದುಮಾಭರಣಪ್ರಸೂನಸ
ದ್ವಸನವಿಲೇಪನಾದಿಗಳೊಳಂ[1] ಕೆಲವಂ ಗುಱಿಮಾಡಿಕೊಂಡು ಸೇ।
ವಿಸುವುದುಮಸ್ತ್ರದಂಡವಿಷಪಾಶವಿಶೇಷಮನೀಯದಿರ್ಪುದೊಂ
ದೆಸಕಮುಮೆಂದು ಮೂಱುತೆಱದಿಂ ನೆಗೞ್ದಿರ್ದ ಗುಣವ್ರತಂಗಳಂ ॥ ೮

ವಿವಿಧಪ್ರಾಣಿಗಣಂಗಳೊಳ್ ಸಮತೆ ಸಂದಾಹಾರದಾನಂ ಜಿನ
ಸ್ತವನಕ್ಕಂ ಜಿನಪೂಜೆಗಂ ಮನಮನೊಲ್ದೀರಂತೆ[2] ತಂದಾದಮು।
ತ್ಸವದಿಂ ನೋಂಪುದು ಜೀವಿತಾಂತ್ಯದೆಡೆಯೊಳ್ ಸನ್ನ್ಯಾಸಮಂಮಾೞ್ಪುದೆಂ
ಬಿವು ನೇರ್ಪಟ್ಟೆಸೆವನ್ನೆಗಂ ನೆಗೞ್ದವಂ ಶಿಕ್ಷಾವ್ರತಂ ನಾಲ್ಕುಮಂ ॥ ೯

ವ॥ ಅಲ್ಲಿ,

ನುತಸಮ್ಯಕ್ತ್ವಮಣುವ್ರತಸ್ಥಿತಿ ಸಮುತ್ಪ್ರೇಭಾವನಂ ಪ್ರೋಷದ
ಬ್ರತಮೆಂದುಂಪಸಿಯೊಂದುಮಂಮುಱಿಯೆನೆಂಬೀಪ್ರೌಢಿ ಮಾಡೆಂ ಪಗಲ್।
ರತಿಯುಂ ಸ್ತ್ರೀಯರೊಳೆಂಬುದೊಂದು ನಿಯಮಂ ಸದ್ಬ್ರಹ್ಮಚರ್ಯವ್ರತಂ
ಸತತಾರಂಭಪರಿಗ್ರಹಚ್ಯುತಿ ಪರಿತ್ಯಕ್ತಾನುಮೋದೋದಯಂ ॥ ೧೦

ಪರಮಮುನಿಗದಿತಮಾರ್ಗಾ
ಚರಣಮುಮೆಂದಿಂತು ನೆರೆಯೆ ಭೂಭುವನದೊಳಂ।
ಪರೆದೇಕಾದಶನಿಳಯಮು
ನರಸನನುಕ್ರಮದಿನಿನಿತುಮಂ ಕೈಕೊಂಡಂ ॥ ೧೧

ವ॥ ಅಂತು ಕೈಕೊಂಡುತ್ಕೃಷ್ಟಚಾರಿತ್ರದೊಳ್ ನೆಗೞ್ದು ಜೀವಿತಾವ ಸಾನದೊಳ್ ಸಂಸಾರಕ್ಷಪಕನಾಗಿ ಸಮಾಧಿವಿಧಿಯಿಂ ಶರೀರಪರಿತ್ಯಾಗಂ ಗೆಯ್ದು,

ಎನಗಿದು ಚೋದ್ಯಂ ಪನ್ನೊಂ
ದನೆಯದು ನೆಲೆ ತನ್ನ ನೆಗೞ್ದದಂತದು ಪದಿನಾ।
ಱನೆಯ ನೆಲೆಗುಯ್ದುದೆಂಬುದ
ನೆನೆ ಸುವಿಧಿನರೇಂದ್ರನಚ್ಯುತೇಂದ್ರನುಮಾದಂ ॥ ೧೨

---

1 ಖ.—ವಿಲೇಪನಂಗಳೊಳಮಂ. 2 ಖ.—ಮನಮನೋರಂತೆಯ್ದೆ.

ವ॥ ಕೇಶವನುಮಾತ್ಮೀಯಗುರುವಿಯೋಗದೊಳ್ ಪರಿತ್ಯಕ್ತಸಕಲರಾಜ್ಯ ಪರಿಚ್ಛೇದಂ ಪ್ರವ್ರಜ್ಯಪದವಿಯೊಳ್ ಪರಿತ್ಯಕ್ತನುಮಾಗಿ ತದಚ್ಯುತ ಕಲ್ಪದೊಳ್ ಪ್ರತೀಂದ್ರನಾದಂ,

॥ ತ್ರಿಪದಿ ॥

ವರದತ್ತಂ ಮೊದಲಾಗೆ ಧರಣೀಶರವರ್ಗೆಲ್ಲಂ
ಸುರಲೋಕಂ ಸುವಿಧಿಯೊಡನಾದುದಂತುಟೆ
ನೆರೆದರನಿತೀ ಸುರಲೋಕಂ ॥ ೧೩

ವ॥ ಅಂತು ಮೇರುಮೂಲದಿಂ ತಗುಳ್ದುಋರಜ್ಜು ನೆಗೆದೆಡೆಯೊಳಚ್ಯುತಕಲ್ಪಮಿರ್ದುದು. ಅಲ್ಲಿ ತನ್ನ ನಾಲ್ವರುಂ ಸಹಾಯರಪ್ಪ ಸಾಮಾನಿಕದೇವರುಂ ತತ್ಪ್ರತೀಂದ್ರನುಂ ಬೆರಸಚ್ಯುತೇಂದ್ರಂ ನವಪಂಚಾಶದಧಿಕತ್ರಿಶತವಿಮಾನಾಧೀಶನುಂ, ತ್ರಯಸ್ತ್ರಿಂಶತ್ಪರಿಮಿತತ್ರಯಸ್ತ್ರಿಂಶಾಮರಪರಿವೃತನುಂ, ಅಯುತಪ್ರಮಿತಸಾಮಾನಿಕಸುರಾನೀಕನುಂ, ಚತುರಯುತಮಿತಾಂಗರಕ್ಷಕಪರಿವೃತನುಂ, ಲೋಕಪಾಲಚತುಷ್ಟಯಾಧಿಷ್ಠಿತನುಂ, ಹಸ್ತ್ಯಶ್ವರಥಪದಾತಿವೃಷಭಗಂಧರ್ವನರ್ತಕೀಪ್ರಮುಖಸಪ್ತಾನೀಕಸಮೇತನುಂ, ಅಂತರ್ಮಧ್ಯಬಾಹ್ಯಪರಿಷತ್ಪ್ರಕಟಿತವಿಭವನುಂ, ದ್ವಾತ್ರಿಂಶತ್ಪ್ರಮಾಣಪ್ರಧಾನದೇವೀನಿವಹವಿಳಾಸಧವಳವಿಲೋಚನಗೋಚರನುಂ, ತ್ರಿಷಷ್ಟಿಸಂಖ್ಯಾತವಲ್ಲಭಿಕಾವಿಭ್ರಮಭ್ರೂಲತಾತ್ರಿಭಾಗಭಾಜನನುಮಾಗಿ,

ಮಾದೇವಿಯರೆಣ್ಬರ್ ಮದ
ನೋದಯಮುಂ ಕುಡೆ ಮನಃಪ್ರವೀಚಾರದೊಳಂ ।
ತಾದೇವಂ ಸಂಚಿತಪು
ಣ್ಯೋದಯದಿಂದನಿತು ಮಹಿಮೆಯಂ ಕೈಕೊಂಡಂ ॥ ೧೪

ದೇವಿಯರೊಳೊರ್ಬರೊರ್ಬರ್
ದೇವಿಯ ಪರಿವಾರರಪ್ಸರೋಗಣಮುಂ ತ ।
ದ್ದೇವೀವಿಕರಣಸಂಭವ
ದೇವಿಯರುಂ ಪಲಬರೆನಗೆ ಪೊಗೞಲಳುಂಬಂ ॥ ೧೫

ಸ್ಮರಿಯಿಪನಿರ್ಪತ್ತಿಚಿಹ್ನಂ
ಸಿರಬರಿಸಕ್ಕೊವರ್ಗೆ ಮನದೊಳುಣಿಸಂ ಸುಯ್ಪಂ ।
ಸುರಯಿಯು ಕಂಪನೆ ಗೆಲೆ ತ
ತ್ಸುರಪತಿ ಪನ್ನೊಂದು ತಿಂಗಳಂಗೊರ್ವರ್ಗೆ ಗಡಂ ॥ ೧೬

ದ್ವಾವಿಂಶತ್ಯಂಬುಧಿಮಿತ
ಜೀವಿತಮುಂ ಮೂಱುಮೊಳದ ದಿವ್ಯಾಂಗಮುಮಾ ।
ದೇವಂಗಾಯ್ತು ಜಿನಾಗಮ
ಭಾವನೆಯಿಂ ಪಿರಿದುಮಕ್ಕುಮಿದು ಪಿರಿದಾಯ್ತೇ ॥ ೧೭

ವ॥ ಅಂತು ದಿವ್ಯಭೋಗಸಂಪತ್ಪರಂಪರಾಪರಿಗತನಾಗಿ,

ದೆಸೆಯೆಲ್ಲಂ ಪಂಚರತ್ನದ್ಯುತಿಜಟಿಳತನಾನಾವಿಮಾನಂಗಳೊಳ್ ರಂ
ಜಿಸೆ ದೇಹಚ್ಛಾಯೆಯೆಲ್ಲಂ ಸಹಜಮಣಿವಿಭೂಷಾಮಯೂಖಂಗಳೊಳ್ ರಂ।
ಜಿಸೆ ತನ್ನಾಸ್ಥಾನಮೆಲ್ಲಂ ಲಲಿತಸುರವಧೂರವ್ಯಸಂಗೀತದಿಂ ರಂ
ಜಿಸೆ ಪೀರ್ದಂ ದಿವ್ಯಭೋಗಾಮೃತರಸಮನೊಱಲ್ದೆತ್ತಿಯಿಂದಚ್ಯುತೇಂದ್ರಂ॥

ಸಮೆತಂದಪುದು ಸಮುದ್ರೋ
ಪಮಮೆನೆ ಮಂದಾರಮಾಳಿಕಾಮ್ಲಾನತೆಯುಂ ।
ಸಮಕೊಳಿಸಲಾರ್ತರ್ದಿಲ್ಲ ದ
ಲಮರೇಂದ್ರನದೊಂದು ಮುಖಪರಿಮ್ಲಾನತೆಯುಂ ॥ ೧೯

ಜಿನಪತಿಪದಪಂಕಜಮನೆ
ಮನದೊಳ್ ಬಗೆದಮರೆ ಮುಗಿದ ಕೈವೆರಸು ಸುರಾಂ ।
ಗನೆಯರ್ ನಿಜವದನಮನಿ
ಮ್ಮನೆ ನೋಳ್ಪಿನ[1]ಮಚ್ಯುತಂ ಪರಿಚ್ಯುತನಾದಂ ॥ ೨೦

ವ॥ ಅಂತಾದೇವನಲ್ಲಿಂ ತಳರ್ದು ಜಂಬೂದ್ವೀಪದ ಪ್ರಾಗ್ವಿದೇಹದ ಸೀ
ತಾನದಿಯ ಬಡಗಣ ತಡಿಯ ಪುಷ್ಕಳಾವತೀವಿಷಯದ ಪ್ರತಿಬದ್ಧಪುಂಡ
ರೀಕಿಣೀಪುರದೊಳ್,

---

[1] ಖ.— ವದನಮನಿರ್ದುಸಮಾರ್ಪಿನ.

ಅಮರೇಂದ್ರಾವಳಿಯಿಂದಮಿಂದ್ರಗಿರಿಯೊಳ್ ಜನ್ಮಾಭಿಷೇಕಕ್ಕೆ ನೋಂ
ತು ಮಹೀವಲ್ಲಭನಪ್ಪುದೊಂದು ಪದದೊಳ್ ರಾಜ್ಯಾಭಿಷೇಕಕ್ಕಮಾ।
ಪದಮೆ ನೋಂತುನ್ನತವಜ್ರಸೇನವಿಭುಗಂ ಶ್ರೀಕಾಂತೆಗಂ ಪುತ್ರನಾ
ಗಿ ಮನೋಜಾಕೃತಿ ವಜ್ರನಾಭಿವೆಸರಿಂದುತ್ಸಾಹಮಂ ತಾಳ್ದಿದಂ ॥ ೨೧

ವ॥ ಮತ್ತಮಾಪುಣ್ಯದಂಪತಿಗೆ ಮುಂ ಪೇೞ್ದ ಶಾರ್ದೂಲಾರ್ಯಸುರವರದತ್ತಚರಸಾಮಾನಿಕನುಂ, ವರಾಹಾರ್ಯದಿವಜವರಸೇನಾಚರಸಾಮಾನಿಕನುಂ, ವಾನರಾರ್ಯವೈಮಾನಿಕಚಿತ್ರಾಂಗದಚರಸಾಮಾನಿಕನುಂ, ನಕುಳಾರ್ಯಾಮರಶಾಂತಮದನಚರಸಾಮಾನಿಕನುಮನುಕ್ರಮದೊಳ್ ವಿಜಯವೈಜಯಂತಜಯಂತಾಪರಾಜಿತರೆಂಬ ನಾಲ್ವರ್ ತನೂಜರಾದರ್. ವಜ್ರಜಂಘನಾದ ಭವದೊಳಾತನ ಮಂತ್ರಿಪುರೋಹಿತಸೇನಾಧಿಪಪ್ರಧಾನರಾಜಶ್ರೇಷ್ಠಿಗಳಪ್ಪ ಮತಿವರಾನಂದಾಕಂಪನಧನಮಿತ್ರರೆಂಬ ನಾಲ್ವರುಮಧೋಗ್ರೈವೇಯಕದೊಳಹಮಿಂದ್ರರಾಗಿರ್ದವರಲ್ಲಿಂ ಬಂದು ಸುಬಾಹುಮಹಾಬಾಹುವೀರಮಹಾವೀರರೆಂಬ ತನಯರಾಗಿ ವಜ್ರನಾಭಿಗೆ ಸಹೋದರರಾದರ್. ಅಶ್ರೀಮತ್ಯಾರ್ಯಾಸ್ವಯಂಪ್ರಭದೇವಂ ಕೇಶವಚರಪ್ರತೀಂದ್ರಂ ಬಂದಾಪುರದೊಳ್ ವಣಿಗ್ವಂಶಾಗ್ರಣಿ ಕುಬೇರನಿಂದಧಿಕನೆನಿಸಿದ ಕುಬೇರದತ್ತಂಗಮನಂತಮತಿಗಂ ಧನದೇವನೆಂಬ ಪ್ರಿಯತನೂಭವನಾದಂ. ಇಂತು,

ನಿಗಳಂಬೋಲ್ ತೊಡದೊಂದು ಮೋಹನಿಗಳಂ ತಜ್ಜನ್ಮದೊಳ್ ನೋಡೆ ತೊ
ಟ್ಟಗೆ ಮತ್ತಂ ಪೊಸತಾಗೆ ತಮ್ಮ ಮನದೊಳ್ ತಳ್ಪೊಯ್ದು ತಳ್ತತ್ತಗು।
ಳ್ಪುಗಳೊಳ್ ಪೊಕ್ಕವು ವಜ್ರಲೇಪದ ತಗುಳ್ಪಂ ಪೋಲ್ವಿನಂ ವಜ್ರನಾ
ಭಿಗಳಿಪ್ರೀತಿಯನುಂಟುಮಾಡಿದರವರ್ ಜನ್ಮಾಂತರಸ್ನೇಹದಿಂ ॥ ೨೨

ವ॥ ಅಂತುವಜ್ರನಾಭಿ ಚೆಲ್ವಿಂಗೆ ನಾಭಿಯುಂ ವಿಳಾಸಕ್ಕಾವಾಸಮುಂ ಅಳವಿಂಗೆ ದಳಮುಂ ಅಱಿವಿಂಗೆ ಗುಱಿಯುಂ ಕಳೆಗೆ ಕುಲಭವನಮುಂ ಪ್ರತಾಪಕ್ಕಡರ್ಪುಮಾಗಿ ಬಳೆವನ್ನೆಗಂ; ವಜ್ರಸೇನಮಹಾರಾಜಂ ಆಕುಮಾರನೊಳಾದೊಂದು ಯೋಗ್ಯತೆಗೆ ಸಂತೋಷಂಬಟ್ಟು,

ನೆಱೆದಂ ಭೂತಳರಾಜ್ಯಭೂರಿಭರಮಂ ತಾಳಲ್ಕೆ ಮತ್ಪುತ್ರನೀ
ಪೊಱೆಗಿನ್ನೀತನೆ ಯೋಗ್ಯನೆಂಬ ಬಗೆಯಿಂ ರಾಜ್ಯಾಭಿಷೇಕೋತ್ಸವಂ।

ಪೊಱಪೊಣ್ಮುತ್ತಿರೆ ರಾಜ್ಯಮಂ ಕುಡೆ ಮಗಂಗಾಶ್ಚರ್ಯದೊಳ್ ತಳ್ತದೇ
ನೊಱೆಯಿಂದುರ್ಚಿದ ಬಾಳ್ವೊಲಾದುದೆಪರಿಛ್ಛೇದಂ ಧರಾಧೀಶನಾ ‖ ೨೩

ವ‖ ತದನಂತರಮೇ ಲೋಕಾಂತಿಕಾಮರವೃಂದಂ ಬಂದು ಬಿಚ್ಚಳಿಸೆ ವಜ್ರಕ್ಕೆ ಬಳವಿತ್ತಂತೆ ವಜ್ರಸೇನಮಹಾರಾಜಂ ಪರಿನಿಷ್ಕ್ರಮಣಕಲ್ಯಾಣಪರಿಣತಮನನಾಮ್ರವನೋದ್ಯಾನದೊಳ್ ಸಹಸ್ರಸಂಖ್ಯಾವನಿಪಾಲಕರೊಡನೆ,

ಬಡಗವೊಗದಿರ್ದ ಕರ್ಮದ
ತೊಡರಂ ಪಱಿವಂತೆ ಕೇಶಪಾಶಮನಂತಾ ।
ಗಡೆ ಪಱಿದು ತಪಂಗೊಂಡಂ
ಪೊಡರ್ವರಿಯುಂ ವಜ್ರನಾಭಿಯುಂ ಬೆಂಕೊಂಡಂ ‖ ೨೪

ವ‖ ಅಂತಾತ್ರಿಲೋಕಗುರು ಧರಾತಳಂ ಪೊಗೞ್ವಿನಂ ಯತ್ಯಾಶ್ರಮದೊಳ್ ನಿಂದಂ, ಈಧರಾಧಿಪಂ ಗುರುರಾಜ್ಯಾಶ್ರಮದೊಳ್ ನಿಂದಂ ; ಆಮುನೀಂದ್ರಂ ತಪೋನುಷ್ಠಾನದೊಳ್ ನಿಷ್ಠಿತನಾದಂ, ಈನರೇಂದ್ರಂ ರಾಜ್ಯಾನುಷ್ಠಾನದೊಳ್ ನಿಷ್ಠಿತನಾದಂ ; ಆಮುನೀಶಂ ಮುಮುಕ್ಷುವೃತ್ತಿಯೊಳ್ ನೆಗೞ್ದಂ, ಈ ಕ್ಷಿತೀಶಂ ಕ್ಷತ್ರವೃತ್ತಿಯೊಳ್ ನೆಗೞ್ದಂ ; ಆಮುನಿನಾಥಂ ತ್ರಿಗುಪ್ತಿಯೊಳ್ ನೆರೆದಂ, ಈ ಮಹೀನಾಥಂ ಮಂತ್ರಗುಪ್ತಿಯೊಳ್ ನೆರೆದಂ ; ಆತಪಸ್ವಿ ಪರೀಷಹಂಗಳಂ ಗೆಲ್ದಂ, ಈತೇಜಸ್ವಿ ಬಲ್ಲಿದರಂ ಗೆಲ್ದಂ ; ಆಮಹಾಯೋಗಿ ಗುಣಂಗಳಂ ಪಾಲಿಸಿದಂ, ಈ ಮಹಾಭೋಗಿ ನೆಲನಂ ಪರಿಪಾಲಿಸಿದಂ ; ಆಮುನಿಯ ಮನೋಗಾರದೊಳ್ ಧ್ಯಾನಚಕ್ರಂ ಪುಟ್ಟಿತ್ತು, ಈರಾಜ್ಯಾಶ್ರಮಮುನಿಯ ಆಯುಧಾಗಾರದೊಳ್ ಚಕ್ರರತ್ನಂ ಪುಟ್ಟಿತ್ತು ; ಆಮುನಿಚಕ್ರವರ್ತಿಯ ಮನದೊಳ್ ಮೂಱುರತ್ನಂಗಳ್ ಬೆಳಗಿದುವು, ಈಸಕಳಚಕ್ರವರ್ತಿಯ ಮನೆಯೊಳ್ ಪದಿನಾಲ್ಕುರತ್ನಂಗಳ್ ಬೆಳಗಿದುವು ; ಆಮುನಿವೃಷಭಂಗೆ ಕೇವಲಜ್ಞಾನೋತ್ಪತ್ತಿಯಾದುದು, ಈರಾಜ್ಯವೃಷಭಂಗೆ ಸಕಳಸಾಮ್ರಾಜ್ಯಸಂಪತ್ತಿಯಾದುದು ; ಆಪರಮೇಶ್ವರಂಗೆ ದೇವೇಂದ್ರರ್ಕಳೆಱಗಿದರ್, ಈ ಧರಾಧೀಶ್ವರಂಗೆ ನರೇಂದ್ರರ್ಕಳೆಱಗಿದರ್ ; ಆತ್ರಿಲೋಕತಿಲಕಂಗೆ ದಿವ್ಯಧ್ವನಿ ನೆಗೞ್ದುದು, ಈಕುಲತಿಲಕಂಗೆ ದಿಗ್ವಿಜಯದುಂದುಭಿಧ್ವನಿ ನೆಗೞ್ದುದು ;

ಆಮುನಿರಾಜಂ ಕರ್ಮಂಗಳಂ ಗಾಳಿಸಿದಂ, ಈರಾಜರಾಜಂ ಷಟ್ಖಂಡ ಮಂಡಳಮಂ ಬಾಯ್ಕೇಳಿಸಿದಂ ; ಆಭವ್ಯವರರತ್ನಾಕರಂ ಚತುಸ್ತ್ರಿಂಶದತಿಶಯಭೋಗದೊಳ್ ಕೂಡಿದಂ, ಈಪುರುಷರತ್ನಾಕರಂ ದಶಾಂಗಭೋಗದೊಳ್ ಕೂಡಿದಂ. ಇಂತು,

ಗೃಹಪತಿರತ್ನಮಾಗೆ ಧನದೇವನಿಳಾತಳನಾಥನಾಮಹಾ
ಮಹಿತಳಭೋಗಮಂ ನೆಱೆಯೆ ಭೋಗಿಸೆ ಸಂಸೃತಿಭೋಗಮೆಯ್ದೆ ನಿ ।
ಸ್ಪೃಹತೆಯನಾಮಹೀಪತಿಗೆ ತಂದುದು ಭವ್ಯತೆ ಪುಣ್ಯಜೀವಮಂ
ಸಹಜಸುಖಾಸ್ಪದಂಬರೆಗಮುಯ್ವಿನಮಲ್ಲಿ ತೊಡಂಕಲೀಗುಮೇ ॥ ೭೫

॥ವ ಅಂತು ವಿಷಯವಿರಕ್ತನಾಗಿ,

ನೆಗೞ್ದೀಷಟ್ಖಂಡಮಂ ಸಾಧಿಸಿದೊಡೆ ಫಲಮೇಂ ಭೋಗದಿಂ ಸಾಧ್ಯಮೇಂ ಬಂ
ಧುಗಳಿಂದಂ ಬರ್ಪುದೇಂ ಸುತ್ತಿದ ಪರಿಜನದಿಂದಪ್ಪುದೇನೊಂದುಮಿಲ್ಲ ।
ಜ್ಜಿಗಮೊಂದುಂಟಲ್ಲಿ ಗಾಂಪಿಂ ತೊಡರ್ವನೆ ಪಡೆವೆಂ ಶಾಶ್ವತಶ್ರೀಯುನೆಂಬು
ಜ್ಜುಗದೊಳ್ ಚಿತ್ತಂ ಕರಂ ತಣ್ಮಲೆಯೆ ನೆಱೆಯೆ ನಿಶ್ಚೈಸಿದಂ ಸಾರ್ವಭೌಮಂ

ವ॥ ಅಂತು ನಿಶ್ಚಯಿಸಿ ವಸುಂಧರಾಭಾರಮಂ ವಜ್ರದಂತನೆಂಬ ನಿಜಾಗ್ರತನೂಜನೊಳ್ ನಿಱಿಸಿ ನಿಜಗುರುಚರಣಸಮೀಪದೊಳ್,

॥ ಅ ಕ್ಕ ರ ಂ ॥

ನಿಜತನೂಭವರೈಸಾಸಿರ್ವರ್ ಪದಿನಾಱುಸಾಸಿರ್ಬರ್ ಮಕುಟಬದ್ಧರ್
ನಿಜಲತಾಂಗಿಯರಯ್ವತ್ತುಸಾಸಿರ್ವರೆಣ್ಬರುಮಣುಗಿನ ಸೋದರರ್ಕಳ್ ।
ನಿಜಸಹಾಯಂ ಗೃಹಪತಿರತ್ನಂ ಧನದೇವನುಂ ಬೆರಸಾಗಳ್ ವಜ್ರನಾಭಿ
ನಿಜದ ರೂಪುಮಂ ನಿರ್ಗ್ರಂಥರೂಪುಮಂ ಕೈಕೊಂಡೇ ನೆಗೞ್ದನಿಂತೀಮಾಷ್ಕೆ
ಯಿಂ ॥ ೭೭

ವ॥ ಅದೆಂತೆಂದೊಡೆ ಹಿಂಸಾನೃತಸ್ತೇಯಾಬ್ರಹ್ಮಪರಿಗ್ರಹಪರಿತ್ಯಾಗಮೆಂಬಯ್ದುಂ ಮಹಾವ್ರತಂಗಳೊಳ್ ನೆರೆದು,

ನಡೆವ ನುಡಿವುಣ್ಬ ಕೊಳ್ವಡು
ವೆಡೆಯೊಳ್ ತಾಂ ಕಾಯು[1]ಮಲಮನುಗುಪ್ಪೆಡೆಯೊಳೊಡಂ ।

[1] ಗ.—ಕೊಳ್ವರಿ ಬಿಡುವೆಡೆಯೊಳ್ಕಾಯ.

ಬಡನೆನಿಸದೋವಿ ಜೀವವು
ನಡಕಂಬೆರಸಯ್ದುಸಮಿತಿಯೊಳ್ ಮುನಿ ನೆಗಳ್ದಂ ॥ ೨೮

ವ॥ ಮತ್ತಮಿವು ಮೊಲಾದಗಿರ್ಪತ್ತೆಂಟುಮೂಲಗುಣಂಗಳೊಳ್ಮುತ್ತರ ಗುಣಂಗಳೊಳಮುತ್ತರೋತ್ತರಂ ನೆಗಳ್ದು,

ಮನಮುಂ ನುಡಿಯುಂ ಮೆಯ್ಯುಂ
ತನಗೆ ವಶಂಮಾಡಿ ಗುಪ್ತಿಗುಪ್ತಂ ಮುನಿಯೆಂ ।
ಬಿನೆಗಂ ನೆಗಳ್ದಂ ಗುಪ್ತಿಯೆ
ತನಗಿಲ್ಲದೆ ಕರ್ಮರಿಪುಗೆ ಮುನಿವುದು ಮೊಗ್ಗೇ ॥ ೨೯

ವ॥ ಮತ್ತಂ ಚತುರಶೀತಿಶತಸಹಸ್ರಗುಣಮಣಿಭೂಷಣವಿಭೂಷಿತನುಂ ಅಷ್ಟಾದಶಸಹಸ್ರಶೀಲರತ್ನಾಕರನುಂ ಆಗಿ ಪಂಚದಶಪ್ರಮಾದಂಗಳಂ ಬಂಚಿಸಿ,

ಏಕಧನುರ್ಧರನಾದನಿ
ಳಾಕಾಂತೆಯನೊಲಿಸುವಂದು ಮುನಿಪತಿಯಾಗಿ ।
ರ್ದೇಕೆಂದಱಿಯೆಂ ದಶಧನು
ರಾಕಳಿತಕರಾಗ್ರನಾದನೆನಗಿದು ಚೋದ್ಯಂ ॥ ೩೦

ವ॥ ಎಂಬಿನಮುತ್ತಮಕ್ಷಮಾಮಾರ್ದವಾರ್ಜವಸತ್ಯಶೌಚಸಂಯಮತಪಸ್ತ್ಯಾಗಾಕಿಂಚನ್ಯಬ್ರಹ್ಮಚರ್ಯಾಪರ್ಯಾಪ್ತದಶಧರ್ಮಂಗಳುಮಂ ಕೈಕೊಂಡು ಸಾಕಾರನಿರಾಕಾರಗತಮಪ್ಪನಶನಮೆಂಬ ಮೊದಲ ತಪದೊಳಂ, ಏಕೈಕಬಳೋನಾದ್ಯೇಕಸಿಕ್ಥಪ್ರಮಾಣಾಹಾರಂಬರಂ ಬರ್ಪವಮೋದರ್ಯಮೆಂಬೆರಡನೆಯ ತಪದೊಳಂ, ಇತೆಂಬೆಡೆಯೊಳಿಂತೆಂಬವರ್ ನಿಱಿಸಿದೊಡಲ್ಲದೆ ನಿಲ್ಲೆನೆಂಬ ನಿಯಮಮಂ ಮೊದಲಾಗೆ ವೃತ್ತಿಪರಿಸಂಖ್ಯಾನನಾಮಮಾದ ಮೂಱನೆಯ ತಪದೊಳಂ, ಕ್ಷೀರದಧಿಘೃತಲವಣತೈಲಾದಿರಸಂಗಳಂ ಪರಿತ್ಯಾಗಂಗೆಯ್ವ ರಸಪರಿತ್ಯಾಗಮೆಂಬ ನಾಲ್ಕನೆಯ ತಪದೊಳಂ, ಸ್ತ್ರೀಪುನ್ನಪುಂಸಕಮೃಗಪಶುಪರಿವರ್ಜಿತವಿವಿಕ್ತಸ್ಥಾನಂಗಳೊಳ್ ನೆಲಸುವ ವಿವಿಕ್ತವಾಸಮೆಂಬಯ್ದನೆಯ ತಪದೊಳಂ ನೆಱೆದು, ಕಾಯಕ್ಲೇಶಮೆಂಬಾಱನೆಯ ತಪಮನೆತ್ತಿಕೊಂಡು,

ಸುತ್ತಲುಮುರಿಮಾಲೆಗಳನೆ
ಪೊತ್ತಿಸಿದವೊಲಳುರೆ ತಪನಕಿರಣಾಳಿ ಮುನೀಂ ॥
ದ್ರೋತ್ತಮಗುರು ಕಲ್ಲನೆ ನಿಂ
ದೆತ್ತಿದ ಬೆಳ್ಗೊಡೆಯ ನೆೞಲೊಳಿರ್ಪಂತಿರ್ದಂ ॥ ೩೧

ಮೊರೆದೆಱಗಿ ಕೊಳ್ವ ಮೞೆ ಭೋ
ರ್ಗರೆದೂದುವ ಗಾಳಿ ಸಿಡಿದು. ಪೊಯ್ವ ಸಿಡಿಲ್ ಕಾ ।
ರಿರುಳೊಳಗುರ್ವಂ ಪಡೆದಿರೆ
ಮರವಾನಸನೆನೆ ತಪಸ್ವಿ ಮರವೊದಲಿರ್ದಂ ॥ ೩೨

ತನು ಪಂಜಿವೊಲ್ ಬೆಳರ್ತಿ
ರ್ಪಿನೆಗಂ ಹಿಮಮೊಕ್ಕಿದರಲೆವೊಲ್ ಪುದಿದಿರೆಯುಂ ।
ತನು ತನಗಲ್ತೆಂದೇಕಾಂ
ತನಿವಾಸದೊಳಂತು ಬೆಳ್ಪವಾಸದೊಳಿರ್ದಂ ॥ ೩೩

ವ॥ ಮತ್ತಮಭ್ಯಂತರತಪಷ್ಷಟ್ಕದೊಳಂ ಪ್ರಾಯಶ್ಚಿತ್ತವಿನಯವೈಯಾವೃತ್ಯಸ್ವಾಧ್ಯಾಯಧ್ಯಾನವ್ಯುತ್ಸರ್ಗಂಗಳಂ ಕೈಕೊಂಡು ಪನ್ನೆರಡುತಪದೊಳ್ ನೆಱೆದಿರ್ಪತ್ತೆಗಡುಪರೀಷಹಂಗಳಂ ಗೆಲ್ದು ಗಣಧರಗಣಮುಂ ಬಿಟ್ಟೇಕವಿಹಾರಿಯಾಗಿ ಬೞಿಯಂ ತ್ರೈಲೋಕ್ಯಕ್ಷೋಭಕಾರಣತೀರ್ಥಕರಪುಣ್ಯಹೇತುಗಳಪ್ಪ ಷೋಡಶಭಾವನೆಗಳಂ ಭಾವಿಸಿ, ಭಾವನೆಯೊಳಾದ ಬುದ್ಧಿತಪೋವಿಕ್ರಿಯೌಷಧಿರಸಬಲಾಕ್ಷೀಣಾಭಿಧಾನಸಪ್ತರ್ಧಿಗಳೊಳಂ ನೆಱೆದು, ಬೞಿಯಂ ಮೋಹನೀಯಕರ್ಮೋಪಶಮದೊಳ್ ವಿಶುದ್ಧಾತಿಶಯವಿಶೇಷದಿನುಪಶಮಶ್ರೇಣ್ಯಾರೋಹಣಂಗೆಯ್ದು ನಿರವಶೇಷಮೋಹೋಪಶಮೋದ್ಭೂತಯಥಾಖ್ಯಾತಚಾರಿತ್ರಸಂಪನ್ನನಂತರ್ಮುಹೂರ್ತದಿಂ ಸ್ವಸ್ಥಾನಸ್ಥಿತನಾಗಿ ಕಾಲಾಂತರದೊಳ್ ಶ್ರೀಪ್ರಭಾದ್ರಿಶಿಖರದೊಳ್ ಪ್ರಾಯೋಪಗಮನವಿಧಿಯಿಂ ತ್ವಗಸ್ಥಿಭೂತಸರ್ವಾಂಗಂ ಧೈರ್ಯಮನೆ ಮನದೊಳವಲಂಬಿಸಿ,

ಬಿಸಿಲೈಕಿಲ್ ಪಸಿವುಗ್ರದಂಶಮಶಕವ್ಯಾಬಾಧೆ ನೀರಪ್ಕೆ ಪೊಯ್ವ ಸಿಡಿಲ್ ತಿಂಬರೆವಾವು ಪಾಯ್ವ ಪುಲಿಯೆಂಬೀಬಾಧೆಯೊಳ್ ಮೆಯ್ವನೊಡ್ಡಿಸಿ ಮೆಯ್ಯೊಳ್ ಮಿಡುಕುಳ್ಳ ತಾಣಮುಣಮಿಲ್ಲೆಂಬಂತು ನಿಷ್ಪಂದನಾಗಿ ಸಮನ್ವೀತಮನಂ ಗುಣಂಗೊಳಿಸಿದಂ ಯೋಗೀಂದ್ರವೃಂದಂಗಳಂ ॥ ೩೪

ವ॥ ಅಂತಿರ್ದನಿತ್ಯಾದಿದ್ವಾದಶಾನುಪ್ರೇಕ್ಷಾನುಸ್ಮರಣಪರಿಣತಾಂತಃಕರಣನಾಗಿ ಮತ್ತಮೆರಡನೆಯ ಸೋಪಾನಮುಪಶಮಶ್ರೇಣಿಯನೇಱ ಚತುರ್ವಿಧಶುಕ್ಲಧ್ಯಾನದೊಳ್ ಪೂರ್ವಾಪರವಿಷಯವಿವಿಕ್ತಾರ್ಥವ್ಯಂಜನವೀರ್ಯವಿಧಿವ್ಯಂಜನಯೋಗಸಂಕ್ರಮಣಲಕ್ಷಣಲಕ್ಷಿತಮಪ್ಪ ಪೃಥುಕ್ತ್ವವಿತರ್ಕವಿಚಾರವೆಂಬ ಮೊದಲ ಶುಕ್ಲಧ್ಯಾನದೊಳ್ ಸಮಾಹಿತನುಪಶಾಂತಗುಣಸ್ಥಾನದೊಳ್ ಪ್ರಾಣಪರಿತ್ಯಾಗಂಗೆಯ್ದು ಸರ್ವಾರ್ಥಸಿದ್ಧಿಯೊಳಹಮಿಂದ್ರನಾದಂ; ಅದು ಜಂಬೂದ್ವೀಪೋಪಮಾನವಿಸ್ತಾರಪರಿಣಾಹಪರಿಣಾಮಮಂ ಕೈಕೊಂಡು,

ಪನ್ನೆರಡುಯೋಜನಂ ಲೋ
ಕೋನ್ನತಿಯೆನೆ ತತ್ತ್ರಿಷಷ್ಟಿಪಟಲದ ತುದಿಯೊಳ್ ।
ರನ್ನದ ಕಳಶಕ್ಕೆಣೆಯೆಂ
ಬನ್ನೆಗಮದು ಸುಖಸುಧಾಕರಂ ಸ್ವಸ್ತಿಕರಂ ॥ ೩೫

ಅದು ನೀಲಮಯಮಹೀತಳ
ಮದು ನವಪುಷ್ಪೋಪಹಾರತಾರಕಿತಮದ ।
ಭ್ಯುದಯಸುಖನಿಳಯಮದು ಮೋ
ಕ್ಷದ ನೆರೆಮನೆ ಲಂಬಮಾನಮುಕ್ತಾದಾಮಂ ॥ ೩೬

ನೆರೆದಹಮಿಂದ್ರರ ತನುಪರಿ
ಕರದ ನೆೞಲ್ಗಳ್ ಪಳಚ್ಚನೆಸೆದಿರೆ ನೋೞ ।
ಕ್ಕೆರಡನೆಯ ನಾಕಲೋಕದ
ವಿರಚನೆಯನೆ ಪಡೆವುದದಱ ರನ್ನದ ಕೇರ್ಗಳ್ ॥ ೩೭

ವ॥ ಅದಱ ಪರಾರ್ಧ್ಯರತ್ನರಚನಾವಿಚಿತ್ರೋಪಪಾತಶಯನತಳದೊಳಂತರ್ಮುಹೂರ್ತದೊಳ್ ಪರ್ಯಾಪ್ತಿಯಂ ಕೈಕೊಂಡು,

ಧಾತುಮಳದೋಷರಹಿತಂ
ವೀತನಖಶ್ಮಶ್ರುಕೇಶಲೋಮಂ ಶೋಭಾ ।
ನ್ವಿತಪರಿಪೂರ್ಣಯೌವನ
ಮಾತತಶುಭಲಕ್ಷಣಂ ಮನೋಹರರೂಪಂ ॥ ೩೮

ಪಳುಕಿನ ಪಾಪೆಯನಮರ್ದಿಂ
ತೊಳೆದಂತೊರ್ಮೊಱಿದ ದಿವ್ಯವಪು ಮಣಿಮಯಕಂ |
ಡಳಮಕುಟಕಟಕಭೂಷಣ
ವಿಳಾಸದಿಂದೇಂ ವಿಳಾಸಮಂ ತಾಳ್ದಿದುದೋ ‖ ೩೯

ಬಾಡದ ಬಾಸಿಗಮುಡೆ ಚೆ
ಲ್ವೋಡದ ದಿವ್ಯಾಂಬರಂ ಮನಂಗೊಳೆ ಸುಖದೊಳ್ |
ಮೂಡುವ ಮುಪ್ಕಾಡುವ ತಡು
ಮಾಡುವ ಬಗೆಯಿಲ್ಲದಲ್ಲಿ ಬಗೆ ಪೆಱತುಂಟೇ ‖ ೪೦

ಅಣಿಮಾದ್ಯಷ್ಟಗುಣಂಗಳ
ಕಣಿಯಿರ್ಪಂತಿರ್ದುಮಖಿಳಸುರಲೋಕಶಿಖಾ |
ಮಣಿಗಳ್ ಲೋಕೈಕಶಿಖಾ
ಮಣಿಗಳುಮಲ್ಲಿರ್ದು ವಿನತಮಸ್ತಕರಪ್ಪರ್ ‖ ೪೧

ಶುಭಭಾವಶುಕ್ಲಲೇಶ್ಯಾ
ನುಭಾವದಿಂ ಧವಳಪುಂಡರೀಕನಿಕಾಶ |
ಪ್ರಭೆ ದೊರೆಕೊಂಡುದು ಪರಿಣಾ
ಮಭೇದಮೇಂ ಚಿತ್ರವಿಧಮೊ ತನುಭೃದ್ಗಣದಾ ‖ ೪೨

ಪದಿನಾಱು ತಿಂಗಳಿಂದಂ
ತುದಿಯೊಳ್ ಪದಿನೈದು ದಿವಸಮಾದೊಡೆ ಸುಯ್ವಂ |
ತೊದಳುಂಟೆ ನಿಃಪ್ರವೀಚಾ
ರದಿಂದಮಹಮಿಂದ್ರನಖಿಳಸುಖಮಂ ಪಡೆವಂ ‖ ೪೩

ಸ್ತ್ರೀಸಂಸರ್ಗಂ ಸುಖಮೆಂ
ಬೀಸಂಸಾರಿಗಳೆ ಜಡರದಪ್ಪೊಡೆ ತನುಗಾ |
ಯಾಸಕರಂ ಶುಕ್ಲಾರ್ತವ
ವಾಸಿತಮಾಪಾತಮಾತ್ರರಮಣೀಯತರಂ ‖ ೪೪

ಅದಱಿಂದಂ ತನ್ನೊಳ್ ಪು
ಟ್ಟಿದ ಸಂತಸದಿಂದಮಾದ ಸುಖಮದು ಸುಖಮ |

ಲ್ಲದುದಲ್ತು ವಸ್ತುವಿಂದಾ
ದುದೆ ವಸ್ತುವೆ ಕುಂದೆ ಕುಂದುಗುಂ ನಿರ್ವಿದರ್ಪುದೇ ॥ ೪೫

ನಾಕನಿಕಾಯದ ಸುಖ
ಮೇನುಂ ದೊರೆಯಲ್ಲದರ್ಕೆ ಮೋಕ್ಷದ ಸುಖದಿಂ ।
ದೇನಾನುಂ ಕುಂದುಗುವುದು
ತಾನೆನೆ ಬಣ್ಣಿಸುವನಾವನಲ್ಲಿಯ ಸುಖಮಂ ॥ ೪೬

ನೆನೆದಹಮಿಂದ್ರಂ ತಣಿವೊಂ
ಮನದೊಳ್ ಮೂವತ್ತುಮೂಱುಸಾಸಿರವರ್ಷ ।
ಕ್ಕನತಿಶಯಸುಧಾಶನದೊಳ್[1]
ವನನಿಧಿ ಮೂವತ್ತುಮೂಱುಮಂ ಸಲೆ ಬಾೞ್ವಂ ॥ ೪೭

ಧನದೇವನುಮೆಣ್ಬರ್ ತ
ನ್ನನುಜರುಮಹಮಿಂದ್ರರಾಗೆ ನೆಱೆದವರೊಳ್ ಮು ।
ನ್ನಿನ ಭವದ ಪುಣ್ಯಕಲ್ಪಾ
ವನಿಜದ ತನಿವಣ್ಣ ರಸದೆ ತಣ್ಣನೆ ತಣಿವಂ ॥ ೪೮

ವ॥ ಅನ್ನೆಗಮಿತ್ತ ಮೇರುಗಿರಿಯೇ ತನಗೆ ನಾಭಿಯಾಗೆ ಸೊಗಯಿಸುವ ಜಂಬೂಮಹೀರುಹಲಾಂಛನದ್ವೀಪಾಂತರ್ಗತಭರತಕ್ಷೇತ್ರಮಧ್ಯಮಧ್ಯಮಖಂಡದೊಳ್ ಮುಖ್ಯಂ ವ್ಯವಹಾರಮೆಂಬೆರಡುಂ ಕಾಲದೊಳಗಾದಿಮಧ್ಯಾವಸಾನವಿರಹಿತಮುಂ ವರ್ತನಾಲಕ್ಷಣಮುಂ ಪರಿಣಾಮದ್ರವ್ಯಪರಿವರ್ತನಕಾರಣಮುಂ ಲೋಕಾಕಾಶಪ್ರದೇಶಪ್ರಮಾಣಪರಿಮಾಣಮುಂ ಅಸ್ಮದಾದ್ಯನುಮೇಯಮುಂ ಸರ್ವಜ್ಞಪ್ರತ್ಯಕ್ಷಗೋಚರಮುಮಪ್ಪುದು ಮುಖ್ಯಕಾಲಂ. ವ್ಯವಹಾರಕಾಲಮೆಂಬುದು ಮುಖ್ಯಕಾಲನಿರ್ವರ್ತಿತಕ್ರಿಯಾರೂಪಂ; ಅದು ಸಮಯಾವಳಿಕೋಚ್ಛ್ವಾಸಸ್ತೋಕನಿಮೇಷನಾಳಿಕಾಮುಹೂರ್ತದಿವಸಪಕ್ಷಮಾಸರ್ತ್ವಯನಸಂವತ್ಸರಾದಿಗಣನಾನುಕ್ರಮದಿಂದಂ ಪೆರ್ಚಿದೆಣಿಕೆಯೊಳ್ ಕೂಡಿದುದು. ಅದು ಶರೀರಬಳಾಯುರ್ದೇಹಪ್ರಮಾಣೋಪಚಯಾಪಚಯಹೇತುತ್ವದಿಂದಮುತ್ಸರ್ಪಿ

1ಕ.—ಕ್ಕನತಿಶಯಸುಖಾಸನದೊಳ್

ಣಿಯುಮವಸರ್ಪಿಣಿನಾಮುಮಂ ಪಡೆದುದದೊಂದು ಪತ್ತುಕೋಟಿಕೋಟಿ ಸಾಗರೋಪಮಸಂಖ್ಯೆಯುಂ ತಾಳ್ದಿ ಸುಷಮಸುಷಮುಂ ಸುಷಮುಂ ಸುಷಮ ದುಷ್ಷಮುಂ ದುಷ್ಷಮಸುಷಮುಂ ದುಷ್ಷಮುಂ ಅತಿದುಷ್ಷಮುಂ ಎಂದು ಒಂದೊಂದು ಷಡ್ಭೇದಭಿನ್ನಮಾದುವು. ಅಲ್ಲಿ ಮುನ್ನಮವಸ ರ್ಪಿಣಿಯೊಳುತ್ತಮಭೋಗಭೂಮಿಸ್ಥಿತಿಯೊಳ್ ನಾಲ್ಕುಕೋಟಿಕೋಟಿ ಸಾಗರೋಪಮಪ್ರಮಾಣಂ ಸುಷಮಸುಷಮಮೆಂಬಕಾಲಮುಂ ಮಧ್ಯ ಮಭೋಗಭೂಮಿಸ್ಥಿಯೊಳ್ ಮೂಱುಕೋಟಿಕೋಟಿಸಾಗರೋಪಮಪ್ರ ಮಾಣಂ ಸುಷಮಮೆಂಬಕಾಲಮುಂ ಜಘನ್ಯಭೋಗಭೂಮಿಸ್ಥಿತಿಯೊಳ್ ಎರಡುಕೋಟಿಕೋಟಿ ಸಾಗರೋಪಮಪ್ರಮಾಣಂ ಸುಷಮದುಷ್ಷಮ ಮೆಂಬ ಕಾಲಮುಂ ಕ್ರಮದೊಳ್ ಷಟ್ಚತುರ್ದ್ವಿಸಹಸ್ರಚಾಪೋತ್ಸೇಧಂ ಗಳುಂ ತ್ರಿದ್ವ್ಯೇಕಪಲ್ಯೋಪಮಾಯುಷ್ಯಂಗಳುಂ ತ್ರಿದ್ವ್ಯೇಕದಿನಾಂತರಿತ ಬದರಾಕ್ಷಧಾತ್ರೀಫಳಪ್ರಮಾಣಾಹಾರಂಗಳುಮಪ್ಪ ಮಿಥುನಂಗಳ್ಗೆ ಸಂ ಭೋಗ್ಯಮಾಗಿ ಸಲೆ ಜಘನ್ಯಭೋಗಭೂಮಿಯ ಕಡೆಯ ಪಳಿತೋಪಮದೆಂ ಟನೆಯ ಭಾಗಮುೞಿದುದೆಂಬನ್ನೆಗಂ,

ಉತ್ತಮಮಧ್ಯಮಾಧಮಗುಣಂ ನಿಜದಾನದ ಭೋಗಭೂತಳ
ಕ್ಕೆತ್ತಮೊಡಂಬಡಂ ಪಡೆಯೆ ಬೇಡಿದ ಭೋಗಮನಿತ್ತು ಪೇೞಿಮಿ ।
ತ್ತಿತ್ತಿ ವರ್ಗಿತ್ತೆನೆಂಬ ಬಗೆ ತೊಟ್ಟನೆ ಪುಟ್ಟಿರೆ ಮುನ್ನಮಿತ್ತು ಬೆ
ಳ್ಕಿತ್ತನಿಸಿರ್ದ ಪಾರ್ಥಿವರೊಳೇಂ ದೊರೆಯಾದುದೊ ಕಲ್ಪಪಾರ್ಥಿವಂ ॥

ಮರಗಳ್ ಮುನ್ನಿತ್ತನಿಸಂ ೪೯
ಮರವಟ್ಟುವು ಪೆಟ್ಟುವೆರ್ಚಿ ಕುದಿದಿತ್ತೊಡಮಾ ।
ಧರಣಿತಳಕ್ಕವಿವೇಕಿಯ
ಮರಮಾನಸನಿತ್ತ ಚಾಗಮೇನಿರ್ದಪುದೇ ॥ ೫೦

ಪಿಂಗದೆ ಬೆಳಗುವ ಗುಣಮುದು
ಪಿಂಗಲೊಡಂ ಜ್ಯೋತಿರಂಗಭೂಜಂಗಳ್ ತೇ ।
ಜಂಗಳ್ ಮಸುಳ್ದುವು ದಾನಗು
ಣಂಗಳ್ ಕಿಡೆ ತೇಜದುಡುಕಮೇಂ ಪಿರಿದಾಯ್ತೋ ॥ ೫೧

---

[1]ಗ.—ಜಂಗಳ್ ನೆರೆ ಕೆಟ್ಟುವು ದಾನಂಗಳ್

ವ॥ ಅನ್ನೆಗಮಾಷಾಢಪೌರ್ಣಮಾಸೀವಾಸರಸಾಯಂತನಸಮಯದೊಳ್ ಪರಭಾಗಂಬಡೆದು ಗಗನೋಭಯಭಾಗದೊಳ್ ದಿಗ್ಭಿತ್ತಿಗಳುಂ ಭೋಗಭೂಮಿಜರ ಚಿತ್ತಭಿತ್ತಿಗಳುಂ ಬಡನೊಡನೆ ಬೆಳಗೆ ಕಾಲರಾಜನ ಜಗದ್ಗೃಹಪ್ರವೇಶಕ್ಕೆ ನಿಱಿಸಿದ ಕನಕಕಳಶಯುಗಳಮುಮಂ ಪೌರ್ಣಮಾಸೀಸೌಂದರಿಯ ಸಿಂದೂರಾರುಣಕ್ರೀಡಾಗೋಳಕಂಗಳುಮಂ ಪೋಲ್ತು,

ಗಗನಗಜಕ್ಕಿಕ್ಕಿದ ಪೊಂ
ನ ಗಂಟೆಯೆರಡೆನಲುಮಂಬರಾಂಭೋನಿಧಿಯೊಳ್ ।
ನೆಗೆದುರಿವೌರ್ವಾನಳನು
ರ್ಬುಗಳೆನಲುಂ ನೆಗೆದುವಹಿಮಹಿಮಕರಬಿಂಬಂ ॥ ೫೨

ವ॥ ಅಂತವಂ ಕಂಡು ಬೆರ್ಚಿ ಬೆಗಡುಗೊಂಡ ಭೋಗಭೂಮಿಜರಂ ಜಾಜ್ವಲ್ಯಮಾನಮಕುಟಕುಂಡಳನುಂ ನಾನಾಭರಣಭಾಸುರೋದಾರವಿಗ್ರಹನುಂ ನಿಜತೇಜೋನಿರ್ಭರನಿರ್ಭರ್ತ್ಸಿತರವಿಗ್ರಹನುಂ ಜನ್ಮಾಂತರಾಭ್ಯಾಸಜನಿತಾವಧಿಬೋಧೋದಯವಿದಿತಕಾಲನಿಯೋಗನುಂ ಅಷ್ಟಶತಾಧಿಕಚಾಪಸಹಸ್ರೋತ್ಸೇಧನುಂ ಪಲ್ಯೋಪಮದಶಮಭಾಗಾಯುಷ್ಯನುಮಪ್ಪಗ್ರಿಮಕುಳಧರಂ ಪ್ರತಿಶ್ರುತಿಯೆಂಬಂ,

ಜ್ಯೋತಿರ್ಭಜಾತತೇಜಂ ಪಸರಿಸುವುದಱಿಂದಿಂನೆಗಂ ಕಂಡುದಿಲ್ಲಿಂ
ತೀತೇಜೋರೂಪಮಾಗಿರ್ದಪುವಿನಶಶಿಬಿಂಬಂಗಳೀತೋರ್ಪುದೇನಾ ।
ಜ್ಯೋತಿರ್ಲೋಕಂ ಮನಂಗುಂದದಿರಿಮಿವು ಮನಸ್ತಾಪಮಂ ಮಾಡವೆಂದಾ
ಭೀತಾತ್ಮಾರ್ಯರ್ಕಳಂ ಸಂತಯಿಸಿದನಮೃತಾಸಾರಸಾರಪ್ರಣಾದಂ ॥ ೫೩

ವ॥ ಆಮನ್ವಂತರಮಸಂಖ್ಯೇಯವರ್ಷಕೋಟಿ ಕುಂದುತ್ತುಂ ಬರ್ಪಿನಂ ತತ್ಪ್ರಸ್ತಾವದೊಳ್ ತ್ರಿಶತಯುತಸಹಸ್ರದಂಡೋಚ್ಛ್ರಿತಶರೀರನುಂ ಪಲ್ಯೋಪಮದಶಭಾಗಾಯುಷ್ಯನುಮಪ್ಪ[1] ಸನ್ಮತಿಯೆಂಬೆರಡನೆಯ ಮನು ಪುಟ್ಟಿದಂದು,

ತಾರಗೆಗಳಗೆಗಳಂತಿರೆ
ತಾರಾಪಥದೊಳ್ ನಿರಂತರಂ ತುಱುಗಿರೆ ಕಂ।

---

[1] ಗ—ಮುಖಮಾಪೋತಪರಮಾಯುಷ್ಯನುಮಪ್ಪ.

ಡೋರಂತೆ ನಡುಗುವಾರ್ಯರ
ನಾರಾಧಿತಬೋಧನಾತನಿಂತಿರೆ ನುಡಿದಂ ॥ ೫೪

ಉದಯಾಸ್ತಸಮಯವಿರಾಜಿತಂ
ದ್ರದಿವಾಕರಮಂಡಲಕ್ಕಮಿಲ್ಲಿಂದಂ ತೋ ।
ರ್ಪುದು ತಾರಕಾಳಿ ನಭಮಂ
ಪುದಿದಿರ್ಕುಮಿದರ್ಕೆ ನಿಮಗೆ ಮನಕತಮುಂಟೇ ॥ ೫೫

ವ॥ ಎಂದವರ್ಗೆ ಸನ್ಮತಿವಿಕಾಸಮಂ ಮಾಡಿದುದಱಿನಾಮನುಗೆ ಸನ್ಮತಿಯೆಂಬ ಪೆಸರಾದುದು. ಆತನಿಂ ಬಳಿಯಮಸಂಖ್ಯೇಯಸಂವತ್ಸರಪ್ರಮಿತಮನ್ವಂತರಾವಸಾನದೊಳಷ್ಟಶತವಿಶಿಖಾಸನೋತ್ಸೇಧನುಮಸಂಖ್ಯೇಯಾಯುಷ್ಯನುಮಾಗಿ ಮೂಱನೆಯ ಕುಳಧರನಾದಂ. ಆಕಾಲದೊಳ್,

ಎಳಸಿ ಬಳಸಿರ್ಪ ಮೃಗಸಂ
ಕುಳಂಗಳಂದನಿತುಮೊಡನೆ ಕೋಳ್ಮಸಗಿದೊಡಾ ।
ಕುಳರಾದಾರ್ಯಜನಕ್ಕವ
ನೆಳವಡಿಸುವ ಬಗೆಯನಾಮಹಾತ್ಮಂ ಪೇೞ್ದಂ ॥ ೫೬

ವ॥ ಅದಱಿಂದಾತನಂ ಕ್ಷೇಮಂಕರನೆಂದು ಪೆಸರನಿಟ್ಟರ್. ಆತನಿಂಬಳಿಯಮನಿತಾನುಂ ಕಾಲದಿಂ ಪಂಚೋತ್ತರಸಪ್ತತಿಯುತಸಪ್ತಶತಕಾರ್ಮುಕೋತ್ಸೇಧಕಾಯನುಂ ತುಟಿತಾಬ್ದಪ್ರಮಿತಜೀವಿತನುಮಾಗಿ ನಾಲ್ಕನೆಯ ಕುಳಧರಂ ಪುಟ್ಟಿ ಪಾಪಸತ್ವಂಗಳ್ ಕಾಡೆ ಲಕುಟಯಷ್ಟ್ಯಾದಿವಿಧಿಯನುಪದೇಶಂಗೆಯ್ದಾತಂ ಕ್ಷೇಮಂಧರನೆಂಬ ಪೆಸರಂ ಪಡೆದಂ. ಅಲ್ಲಿಂ ಬಳಿಯಮನೇಕ ಕೋಟಿಸಂವತ್ಸರಂಗಳ್ ಪೊಂದಿದಿಂಬಳಿಯಂ ಪಂಚಾಶದಭ್ಯಧಿಕಸಪ್ತಶತಕೋದಂಡಪ್ರಮಾಣಮೂರ್ತಿಯುಂ ಕಮಳಪ್ರಮಿತಾಯುಷ್ಯನುಮಾಗಿ ಕಮಳವದನಂ ಪಂಚಮಕುಳಧರಂ ಪುಟ್ಟಿ,

ಸೀಮಾವಿವಾದದಿಂ ತ
ದ್ಭೂಮಿಜರೋರೊರ್ವರಂ ಪಳಂಚಲೆವೆಡೆಯೊಳ್ ।
ಸೀಮೆಗಳ ತೊಡರನುಡುಗಿಸಿ
ಸೀಮಂಕರನೆಂಬುದೊಂದು ಪೆಸರಂ ಪಡೆದಂ ॥ ೫೭

ವ॥ ಆತನ ವಿರಾಮದೊಳನೇಕಾಬ್ಧಕೋಟಿಗಳ್ ಕಡೆಯೊಳ್ ಪಂಚವಿಂ
ಶತ್ಯನ್ವಿತಸಪ್ತಶತಬಾಣಾಸನೋಚ್ಛ್ರಾಯನುಂ ನಳಿನಪ್ರಮಾಣಾಯುಷ್ಯ
ನುಮಾಗಿ ನಳಿನಾನನನಾಬಿನೆಯ ಕುಳಧರಂ ಪುಟ್ಟಿ ಮರ್ಯಾದಾವಿಪ್ರತಿಪ
ತ್ತಿಯಿಂದಮುಳ್ಳಾರ್ಯಜನಕ್ಕಾಘಾಟಶುದ್ಧಿಯಂ ಮಾಡಿ ಸೀಮಂಧರನೆಂಬ
ನಾದಂ. ಆಮಹಾಪುರುಷನಿಂ ಬಳಿಯಮನೇಕವರ್ಷಕೋಟ್ಯಂತರದೊಳ್
ಸಪ್ತಶತಶಿಳೀಮುಖಾಸನೋನ್ನತಾಪಘನನುಂ ಪದ್ಮಪ್ರಮಿತಾಯುಷ್ಯನುಮಾ
ಗಿ ಪದ್ಮವದನನೇಬಿನೆಯ ಕುಳಧರಂ ಪುಟ್ಟಿ,

ಬನಕಂ ಪೊಲಕಂ ನಡೆಯ
ಲ್ಕಿನಿಸಾಱದೆ ಮಱುಗುವಾರ್ಯರಂ ಕಂಡು ಮನೋ।
ಜನಿತದಯಂ ಕರಿಹರಿವಾ
ಹನಂಗಳಂ ಪಡೆದು ವಿಮಳವಾಹನನಾದಂ॥ ೫೮

ವ॥ ಆತನಿಂ ಬಳಿಯಮಸಂಖ್ಯಾತವರ್ಷಂಗಳ್ ಸಲೆ ಪಂಚಸಪ್ತತ್ಯುತ್ತರ
ಷಟ್ಛತ[1]ಬಾಣಾಸನೋತ್ಸೇಧನುಂ ಪದ್ಮಾಂಗಪ್ರಮಿತಾಯುಷ್ಯನುಮಪ್ಪೆಂಟ
ನೆಯ ಮನು ಪುಟ್ಟಿ,

ಸುತಮುಖಕಮಳಾಲೋಕನ
ಮತಿವಿಸ್ಮಯಮಾಗೆ ಮಱುಗುವಾರ್ಯಜನಕ್ಕಾ।
ಯತಿಯುಕ್ತಂ ತದ್ಯುಕ್ತಿಯ
ನತಿವಿದಿತಂಮಾಡಿ ತಿಳಿಪಿದಂ ಚಕ್ಷುಷ್ಮಂ॥ ೫೯

ವ॥ ಅಂತಾತನಿಂ ಬಳಿಯಂ ಕೆಲವುಕಾಲಂ ಕಳಿಯೆ ಪಂಚಾಶದಧಿಕಷ
ಟ್ಛತಚಾಪೋತ್ಸೇಧವಪುವುಂ ಕುಮುದಪರಿಮಿತಾಯುಷ್ಯನುಮಪ್ಪೊಂಭತ್ತ
ನೆಯ ಮನು ಪುಟ್ಟಿ,

ಪೆಸರಿಲ್ಲದಾರ್ಯರೆಂಬೀ
ಪೆಸರೊಳ್ ಮುಂ ನಡೆಯದೀವ್ಯವಹಾರಂ।
ಪೆಸರಿಲ್ಲದೊಡೆಂದಾಮನು
ಪೆಸರಿಟ್ಟು ಯಶಸ್ವಿಯೆಂಬ ಪೆಸರಂ ಪಡೆದಂ॥ ೬೦

[1] ಖ.—ಶತ.

ವ॥ ಆತನಿಂ ಬೞಿಯುಮನೇಕಸಂವತ್ಸರಸಹಸ್ರಾತಿಕ್ರಮದೊಳ್ ಪಂಚವಿಂಶತ್ಯಧಿಕಷಟ್ಛತಧನುರುತ್ಸೇಧನುಂ ಕುಮುದಾಂಗಸಂಖ್ಯಾತವರ್ಷಾಯುಷ್ಯನುಮಾಗಿ ದಶಮಕುಲಧರಂ ಪುಟ್ಟಿ ಚಂದ್ರನಂ ತೋಱಿ ಕೂಸುಗಳನಾಡಿಸುವುದಂ ತೋಱುವನಪ್ಪುದಱಿಂದಾತನಭಿಚಂದ್ರನೆಂಬ ನಾಮಮೆಸೆಯೆ ಪೆಸರ್ವಡೆದಂ. ಆಮನುವಿನ ಕಡೆಯೊಳನೇಕವರ್ಷಸಹಸ್ರಂ ಸಲೆ ಷಟ್ಛತಕಾಂಡಾಸನೋತ್ಸೇಧಶರೀರನುಮಯುತಪ್ರಮಾಣಾಯುಷ್ಯನುಮಾಗಿ ಪನ್ನೊಂದನೆಯ ಕುಳಧರಂ ಪುಟ್ಟಿ,

ಮಂಜಿನ ಮೞೆಯೊಳ್ ಮಸುಳ್ದಿರೆ
ಕಂಜಪ್ರಿಯಕುಮುದಬಂಧುಗಳ್ ಜನಮುಂ ನೀ ।
ಮಂಜಲಿಮೆಂದಱಿವಮರ್ದಿನ
ಮಂಜಮೆಗೊಟ್ಟಱಿದು ನಿಱಿಸಿದಂ ಚಂದ್ರಾಭಂ ॥ ೬೧

ವ॥ ಆತನ ಕಡೆಯೊಳಸಂಖ್ಯೇಯವರ್ಷಾನಂತರವಿರಾಮದೊಳ್ ಪಂಚಸಪ್ತತ್ಯುತ್ತರಪಂಚಶತಶರಾಸನೋತ್ಸೇಧಸಂಹನನುಂ ಅಯುತಾಂಗಾಯುಷ್ಯನುಮಾಗಿ ಪನ್ನೆಱಡನೆಯ ಕುಲಧರಂ ಪುಟ್ಟಿದಂದು,

ತುಱುಗಿದ ಮುಗಿಲಾಮುಗಿಲಿಂ
ದೆಱಗುವ ಮೞೆ ಕದಡಿ ಬರ್ಪ ತೊಱೆ ಬೆಟ್ಟು ತೆವರ್ ।
ಮೊಱಡುಪಜಲಧಿಗಳೆನೆ ಜನ
ಮಱಿಯುಱಿಯೆ ದಲುದ್ದಬಿದ್ದಮಾಯ್ತವನಿತಳಂ ॥ ೬೨

ವ॥ ಅಂತು ಕರ್ಮಭೂಮಿಸ್ಥಿತಿಯೊಳುಪನದ್ಯುಪಸಮುದ್ರಮುಪಪರ್ವತಂಗಳತಿಪ್ರಕಟಮಾಗೆ ಸೋಪಾನಪದ್ಧತಿಗಳೊಳ್ ಗಿರಿದುರ್ಗಾರೋಹಣಮುಮಂ ದ್ರೋಣಿಯಾನಪಾತ್ರಾದಿಗಳೊಳ್ ಜಲದುರ್ಗೋತ್ತರಣಮುಮನುಪದೇಶಂಗೆಯ್ದು,

ಇದು ಕರ್ಮಭೂಮಿಯುಂದಂ
ಪೊದಳ್ದು ತೋಱಿದುದು ಭೋಗಭೂಮಿಸ್ಥಿತಿ ಕುಂ ।
ದಿದುದೆಂದು ಪೇೞ್ದು ಮನು ಜಸ
ಮೊದವೆ ಮರುದ್ದೇವನೆಂಬ ಪೆಸರಂ ಪಡೆದಂ ॥ ೬೩

ವ॥ ಆತನ ಕಡೆಯೊಳ್ಚಿತಮನ್ವಂತರವ್ಯತಿಕರಣದೊಳ್,

ಆತತಯಶೋವಿತಾನನ
ಜಾತಭಯಂ ಪೂರ್ವಪರಿಮಿತಾಯುಷ್ಯಂ ಸಂ।
ಜಾತದಯಂ ಪಂಚಾಶದು
ಪೇತಧನುಃಪಂಚಶತಸಮುಚ್ಛ್ರಿತದೇಹಂ ॥ ೬೪

ವ॥ ಪದಿಮೂಱನೆಯ ಕುಲಧರಂ ಪುಟ್ಟಿ,

ಪಸರಿಸೆ ಜರಾಯುಪಟಲಂ
ಪಸುಗೂಸುಗಳೊಡಲೊಳವನಗಲ್ಚುವ ಮತಿಯಂ।
ವಸುಮತಿಗಱಿಪಿ ಮಹಾತ್ಮಂ
ಪ್ರಸೇನಜಿನ್ನಾಮಧೇಯಮಂ ಪ್ರಕಟಿಸಿದಂ ॥ ೬೫

ವ॥ ಆತನಿಂ ಬಳಿಯಮಸಂಖ್ಯೇಯವರ್ಷಪ್ರಮಿತಮನ್ವಂತರಾತಿಕ್ರಮ
ದೊಳ್ ಪದಿನಾಲ್ಕನೆಯ ಮನು ಪುಟ್ಟಿದಂ. ಆತಂ,

ಶಶಿವಿಶದಯಶಂ ನಿಜಕುಲ
ವಿಶೇಷಕಂ ಕರುಣಿ ಪಂಚವರ್ಗಾಧಿಕಪಂ।
ಚಶತಶರಾಸನತನು ಬುಧ
ಕುಶೇಶಯೋದ್ಬೋಧಕರಲಸತ್ತಿಗ್ಮಕರಂ ॥ ೬೬

ಸುಕದ ಕಣಿಯೆನಿಸಿ ಪೂರ್ವ
ಬ್ಬಕೋಟಿಪರಮಾಯು ನಾಭಿನಾಮಮುಮಾಯ್ತು।
ರ್ಭಕನಿಕರನಾಭಿನಾಳ
ಪ್ರಕರನಿಕರ್ತನಮನಱಿಯೆ ಪೇೞ್ದುದಱಿಂದಂ ॥ ೬೭

ಸಹಜಮಣಿಭೂಷಣಂಗಳ
ಬಹಳೋದ್ಯದ್ದೀಪ್ತಿಯಿಂದೆ ಚಂದ್ರಾದಿತ್ಯ।
ಗ್ರಹತಾರಾನಕ್ಷತ್ರಾದಿ
ನಹರ್ನಿಶಂ ಬೆಳಗುವಮರಗಿರಿಯನೆ ಪೋಲ್ತಂ ॥ ೬೮

ಮಕರಸರಿಜ್ಝಳನಿಧಿಮ
ತ್ಸ್ಯಕೂರ್ಮಚಂದ್ರಾರ್ಕಲಕ್ಷಣಂ ಪದಯುಗದೊಳ್ ।
ಪ್ರಕಟಂ ನೆಲಸೆ ಚರಾಚರ
ಮೆ ಕಾಲ್ಗೆ ಬಂದೆಱಗಿದಂದದಿಂ ಸೊಗಯಿಸುಗುಂ ॥ ೬೯

ಮನುಗಳೊಳೀತನೆ ಪದಿನಾ
ಲ್ಕನೆಯಾತಂ ತಪ್ಪದಪ್ಪನೆನಿಸಿಯುಮಂತಾ ।
ಮನುಗಳೊಳೀತನೆ ಮೊದಲಿಗ
ನೆನಿಸಿದನೇಂ ನಾಭಿ ನಾಭಿಯೋ ಗುಣಗಣದಾ ॥ ೭೦

ವ॥ ಆನಾಭಿರಾಜನ ಕಾಲದೊಳ್ ಪಯೋಧರಕಾಲಸ್ವರೂಪಂ ಚಿತ್ರರೂಪದಿಂ ನಭೋಭಾಗಮಂ ಪರ್ವಿದಾಗಳ್,

ತ್ರಿದಶಶರಾಸನಂ ತಳರ ತೋರಣಮಾಗಿರೆ ಕುಕ್ಕಿನೋಳಿ ಚೆ
ಲ್ವಿದಿರ್ಗೊಳೆ ಬರ್ಪ ಸೊಂನಲಿಗೆಯಾಗೆ ನಿಜಧ್ವನಿ ತೂರ್ಯಮಾಗೆ ರಾ ।
ಗದಿನಿನರಶ್ಮಿಯೆಂಬ ಕಸವಂ ಕಡೆದಂಬರಮೆಂಬ ಪಾಱನೇ
ಱಿದುದಸಿತಾಂಬುವಾಹಕುಳಮೆಂಬ ಕುಟುಂಬಕದಂಬಕೋತ್ಕರಂ ॥ ೭೧

ನವಮೇಘಧ್ವನಿ ಪುಷ್ಕರಧ್ವನಿ ತರತ್ತಾರಾಳಿ ಪುಷ್ಪೋಪಹಾ
ರವಿಳಾಸಂ ರುಚಿರಾಂಬುದಂ ಯವನಿಕಾವಿನ್ಯಾಸಮಾದಲ್ಲಿ ಚಿ ।
ತ್ರವಿಧಂ ಬಂದವಸರ್ಪಣೀನಟನ ಪೇಪ್ರೋಂದಂದದಿಂದೆತ್ತಮಾ
ಡೆ ವಿಯದ್ರಂಗದೊಳಂದದೇಂ ನಲಿದುದೋ ವಿದ್ಯುನ್ನಟೀನರ್ತನಂ ॥ ೭೨

ವ॥ ಅಂತು ಕೊಂಡ ಪದವಪೆಗಳೊಳ್ ಕಳಮಷಷ್ಟಿಕಾವ್ರೀಹಿಯುವಯಾವನಾಳಗೋಧೂಮಕಂಗುಸ್ಯಾಮಾಕಕೋದ್ರವನೀವಾರತಿಳತಳಮಸೂರಿಕಾಕುಳುತ್ಥಮುದ್ಗಮಾಷರಾಜಮಾಷಾಢಕೀನಿಷ್ಪಾವಚಣಕಕುಸುಂಭಕಾರ್ಪಾಸಸರ್ಷಪಜೀರಕಧಾನ್ಯಕಾದಿವಿವಿಧಧಾನ್ಯಭೇದಂಗಳುಂ ಕಲ್ಪವೃಕ್ಷಪರಿಕ್ಷಯದೊಳ್ ಪ್ರಜಾಜೀವನೋಪಾಯಹೇತುಗಳಕೃಷ್ಟಪಚ್ಯಂಗಳಾಗಿ,

ಬೆಳೆದೆಱಗಿರೆಯುಮಂ ಪು
ಲ್ಗಳೆಂದೆ ಬಗೆದಳುರ್ವ ಪಸಿವನಾಮೇಗೊಂಡೇಂ ।

ಗಳ ಗೆಯ್ವೆವೆಂದು ಪಶ್ಚಿಮ
ಕುಳಧರನೆನೆ ನೆಗೞ್ದ ನಾಭಿಯಲ್ಲಿಗೆ ವಂದರ್ ॥ ೨೩

ಬಂದತಿದೀನಮುಖರ್ ನೆಱೆ
ದೆಂದರ್ ಮರಪಟ್ಟು ಕುಡದೆ ಕಲ್ಪಮಹೀಜಂ ।
ನಿಂದುವು ಜಠರಾನಳನಿಂ
ಬೆಂದುವು ತನು ಬಾೞ್ವುಪಾಯಮಾವುದು ದೇವಾ ॥ ೨೪

ಒಡಲನುಣಿಸಿಲ್ಲದಾಗಳ್
ನಡಪುವುದರಿದಾವನನ್ಯಶರಣರೆವೆಮ್ಮಂ ।
ನಡಪುಪದೇಶದಿನಲ್ಲದೊ
ಡೊಡಗೆಡೆದಪೆವಸುವನಿಲ್ಲಿ ನಿನ್ನಡಿವೊದಲೊಳ್ ॥ ೨೫

ಎಂಬುದುಮಂಜದಿರೆಂದಮೃ
ತಾಂಬುವನನುಗುೞ್ವಭಯವಚನದಿಂದಾಱಿಸಿ ರ ।
ಕ್ತಾಂಬುಜದ ಚೆಲ್ವನಭಯಕ
ರಾಂಬುಜಮಳವಡಿಸೆ ನಾಭಿರಾಜಂ ನುಡಿದಂ ॥ ೨೬.

ಬಗೆಯಲ್ವೇಡ ಸುಧಾಮಹೀರುಹದೊಳಾದೌದಾರ್ಯಮಂ ವೀರ್ಯಮಿ
ಯುಗದೊಳ್ ತತ್ತರುಗಿಲ್ಲ ಪಕ್ವಫಲನಮ್ರಾಮ್ರಾದಿಭೂಜಂಗಳೀ ।
ಯುಗದೊಳ್ ಕಲ್ಪಕುಜಂಗಳಂತಿವಱ ಪಣ್ ಭೋಜ್ಯಂಗಳಾರೋಗ್ಯಹೇ
ತುಗಳೀ ಪಣ್ಗಳೆ ಭೋಜ್ಯಮೆಂದು ವಿಳಸದ್ಭಾಗ್ಯೋದಯಂ ತೋಱಿದಂ ॥

ವ॥ ತೋಱಿ ಫಳಪಾಕಾಂತಂಗಳಪ್ಪೌಷಧಿಗಳಂ ಸ್ತಂಬಕರ್ಯಾದಿನಾನಾವಿಧಧಾನ್ಯಂಗಳಂ ಪದನಱಿದುಡುಗುವ ಕಣಂಮಾಡುವೊಕ್ಕುವಡುಕುವ ಬಯ್ತಿಡುವಕ್ಕಿಮಾಡುವ ವಿವಿಧಭಾಜನಂಗಳೊಳಡುವ ಘೃತಲವಣತೈಲಕ್ಷೀರದಧಿವ್ಯಂಜನಂಗಳೊಳ್ ಸಂಸ್ಕಾರಂಮಾಡುವಳವಿಯಱಿದುಣ್ಬುಪಾಯಮುಮಂ ಪುಂಡ್ರೇಕ್ಷುದಂಡಂಗಳಂ ಕಡಿಕಡಿದು ಯಂತ್ರಪೀಡನೆಯಿಂ ರಸಂಗೊಳ್ವ ತೆಱನುಮನಱಿಯೆ ಪೇೞ್ದು,

ಚ್ಯುತಿಯಾಗೆ ಭೋಗಭೂಮಿ
ಸ್ಥಿತಿ ಕಲ್ಪಮಹೀರುಹವ್ಯಪಾಯದೊಳಂತುಂ ।

ಕ್ಷಿತಿಪತಿ ಕಲ್ಪಮಹೀಜ
ಸ್ಥಿತಿಯಿಂ ತಾನಿಂತು ಜನಮನೇಂ ನಿಱಿಸಿದನೋ ‖ ೭೮

ಕುಳಧರನುಂ ಕುಳಕರನುಂ
ಕುಳತಿಳಕನುಮೆನಿಪ ನಾಭಿರಾಜಂಗೆ ಲತಾ ।
ಲಳಿತೆ ದಳಿತಾಂಬುಜಾನನೆ
ವಿಳಾಸಲಾವಣ್ಯಕಾಂತಿಯುತೆ ಸತಿ ರತಿವೊಲ್ ‖ ೭೯

ಮರುದೇವಿಯೆಂಬಳಂಬರ
ಚರನರಸುರಯುವತಿರೂಪಸರ್ವಸ್ವಮನಾ ।
ದರದೆ ಬಿದಿ ನೆಱಪಿ ಲಲನಾ
ಸ್ವರೂಪದಿಂ ನಿಱಿಸಿತೆನ್ನದಿನ್ನೇವೊಗಳ್ವೆಂ ‖ ೮೦

ಪೊಳೆವಲರ್ಗಣ್ ಚಾಮರಮೆನೆ
ಲಳಿತಭ್ರೂಲತೆ ಪತಾಕೆಯೆನೆ ಪೆರ್ಮೊಲೆ ಪೊಂ ।
ಗಳಸಮೆನೆ ಮದನಮಂಗಳ
ವಿಳಾಸಚಿಹ್ನಂಗಳವಯವಂಗಳ್ ಸತಿಯಾ ‖ ೮೧

ಮದಕೋಕಿಳಕಳನಿನದೆಯ
ವದನಸುಧಾಸೂತಿ ಬೆಳಗೆ ಪೆಳಱಿದ ತಮಮಿಂ ।
ಪುದಿದು ಪೆಱಗಿರ್ದುದೆನಿಪ್ಪುದು
ಮದಗಜಗಮನೆಯ ವಿನೀಳಕೇಶಕಳಾಪಂ ‖ ೮೨

ಘನಕುಚಕಳಶೆಯ ಮುಖರಸ
ವನಧಿಯಿನೊಗೆದೊಂದುವಿಂದುಬಿಂಬಕರಂ ಚೆ ।
ಲ್ವೆನೆ ಮೆಱೆವ ಕುಮುದಕುವಳಯ
ವನಂಗಳಾಕೆಯ ಕಟಾಕ್ಷವಿಕ್ಷೇಪಂಗಳ್ ‖ ೮೩

ಮದನತರುಕುಸುಮಮಂಜರಿ
ಮದನಾಂಬುಧಿವೇಳೆ ಮದನಮದಗಜವಿಳಸ ।

ನ್ಮದಲೇಖೆ ಮದನಲಕ್ಷ್ಮೀ
ಮದಲಕ್ಷ್ಮೀಯೆನಲ್ ಮದೇಭಗಮನೆಯೆ ತಕ್ಕಳ್ ‖ ೮೪

ಮೊಗಮಂ ತಾವರೆ ಕಣ್ಣನುತ್ಪಳದಳಂ ಧಮ್ಮಿಲ್ಲಮಂ ಸೋಗೆ ಸೆ
ಳ್ಳುಗುರಂ ಕೇದಗೆ ಪುರ್ಬನಂಗಜನ ಬಿಲ್ ದಂತಾಳಿಯಂ ಮುತ್ತು ಕೈ ।
ಮುಗಿದಾರಾಧಿಸಿ ಪೋಲ್ತುವೆನ್ನದೆ ಸರೋಜಾತಾದಿನಿಸ್ಸಾರವ
ಸ್ತುಗಳೊಳ್ ಪೋಲಿಸುವಂತುಟೇವ್ಮರುಳನೇ ರೂಪಂ ವಿಚಿತ್ರಾಂಗಿಯಾ ‖

ಪಿರಿದುಂ ವಿಭೂತಿಯಿಂದಂ
ಸುರರಾಜನ ಬೆಸದೊಳಮರನಾಯಕರೆಲ್ಲಂ ।
ನೆರೆದು ವಿವಾಹಮನಾಕೆಗೆ
ದೊರೆಕೊಳಿಸಿದರಿಂತು ನೋಂತ ಕಾಂತೆಯರೊಳರೇ ‖ ೮೬

ಆಭುವನನಾಭಿಯೆನಿಸಿದ
ನಾಭಿಮಹೀಭುಜಭುಜಾಂತರಾಳಂ ಲಕ್ಷ್ಮೀ ।
ನ್ಯಾಭಾಸಿ ಮತ್ತಮತಿಶಯ
ಶೋಭೆಯನಾಕಾಂತೆಯಿರವಿನೊಳ್ ನೂರ್ಮಡಿಕುಂ ‖ ೮೭

ಧವಳಾಪಾಂಗವಿಲೋಕನಾಮೃತಮಯಂ ಭ್ರೂಲಕ್ಷ್ಮರಮ್ಯಂ ಮನೋ
ಭವರಾಜ್ಯೋದಯಹೇತು ಚಾರುಮರುದೇವೀವಕ್ತ್ರಚಂದ್ರಂ ಸಲೀ ।
ಲವಿಳಾಸಸ್ಮಿತಚಂದ್ರಿಕಾಪ್ರಸರದಿಂದೋಪಂಗೆ ನೇತ್ರೋತ್ಪಳೋ
ತ್ಸವಮಂ ಮಾಡಿಯುಮೇನೊ ಮಾಡುವುದು ತಚ್ಚಿತ್ತಾಂಬುಧಿಕ್ಷೋಭಮಂ‖

ವ॥ ಅಂತನ್ಯೋನ್ಯಪ್ರೇಮಸಂಜಾತಸ್ವಾಂತಸಂಪತ್ಪರಂಪರಾಪರಿಗತಮಾಗಿ ನಿಳಿಂಪದಂಪತಿಯನೆ ಪೋಲ್ವ ದಂಪತಿಗೆ ಪವಿತ್ರೀಭೂತಮಪ್ಪ ಭೂತಳೋದ್ದೇಶದೊಳುತ್ಪತ್ಸ್ಯಮಾನಭಾವಿತೀರ್ಥಕರಪುಣ್ಯದೂತಾಹೂತಂ ಪುರುಹೂತಂ ಬಂದು,

ಕೆದಱಿ ಮನುಷ್ಯದಂಪತಿಗಳದರ್ಗವನೊಂದೆಡೆಯೊಳ್ ತೆರಳ್ಚಿ ನಾ
ಕದ ಫಣಿಲೋಕದಂದದ ಪೊಱಲ್ಗಳನೀಪೊಱಲೊಂದು ರಮ್ಯಹ ।
ರ್ಮ್ಯದ ಬೆಳೆಗಂಬರಂ ನೆಱೆಯದೆಂಬಿನಮುಜ್ಜ್ವಳಪಂಚರತ್ನಭಾ
ಸ್ವದಸದನಂಗಳಂ ನೆಱೆದುದಂ ಸಮೆದಂ ಪುರಮಂ ಪುರಂದರಂ ‖ ೮೯

ಕನಕಗಿರಿಶಿಖರರತ್ನಾಂ
ಶುನಿಕಾಯಂ ಬೆಳಗೆ ವೊಳೆದು ಪಜ್ಜಳಿಸುತ್ತಿ ।
ಪಿರ್ನಪಥಮಣಿಮುಕುರದೊಳಂ
ದ್ರ್ಯನ ಪ್ರೊಱಲಾಪ್ರೊಱಲ ನೆಱಲನನುಕರಿಸಿರ್ಕುಂ ॥ ೯೦

ಅಪ್ಪುರಲಲನೆಯ ಕೇಶಕ
ಳಾಪದವೊಲ್ ಮಧುಪನಿಕರನಿಳಯಂ ಸುಮನ ।
ಶ್ರೀಪರಿಪೂರ್ಣಮನಂಗನ
ಕಾಪೆನೆ ಸೊಗೆಯಿಪುದು ಬಳಸಿದುದ್ಯಾನವನಂ ॥ ೯೧

ತುಂಬಿ ಗಿಳಿ ಪುರುಳಿ ಕೋಗಿಲೆ
ಯೆಂಬಿವು ವೆರಸಮರತರುಗಳಿಂದ್ರನ ಬೆಸದಿಂ ।
ದಂ ಬಂದುವೆಂದೊಡುಪವನ
ಮಂ ಬಣ್ಣಿಸಲೆನಗೆ ನಾಡೆಯುಂ ಕುಱಿಪಲ್ತೇ ॥ ೯೨

ವಿಳಸದಳಿಗೀತಮುತ್ಕೋ
ಕಿಳನಾದಂ ಸಾಳಕಾನನಂ ಸತ್ತಿಳಕಂ ।
ಲಳಿತಲತಾಂಗಂ ರಮಣೀ
ವಿಳಾಸಮಂ ವನವಿಳಾಸಮೇನಿಱಿಸಿದುದೋ ॥ ೯೩

ಎಳಸುವ ಪುರುಳಿಯ ಗಳಪುವ
ಗಿಳಿಯ ತೆಱಂದಿರಿದು ಮೊರೆವ ಪೆಣ್ದುಂಬಿಯ ಬಿ ।
ಚ್ಚಳಿಪ ಪರಭೃತದ ಕಳಕಳ
ದೊಳೆ ಮಸುಳ್ದುದು ದಿವಿಜಯುಗಳಕಳಕಳನಿನದಂ ॥ ೯೪

ಸಾರಸಹಕಾರಧಾರಾ
ಸಾರಂ ಕೊಳದಳವಿಯಂತೆ ಸುರಿತರೆ ಪಲವುಂ ।
ಧಾರಾಗೃಹಂಗಳತನುವಿ
ಕಾರಮನೊದವಿಪುದು ದೇವದಂಪತಿಗದಱೊಳ್ ॥ ೯೫

ಕುಸುಮಾಪಚಯವ್ಯಸನಾ
ವಸಕ್ತಸುರಯುವತಿಪಾಣಿಪಲ್ಲವರಾಗಂ ।

ಮುಸುಕಿದುದೆನಿಸಿದುದಸುಗೆಯ
ಪೊಸದಳಗರ್ಗಳೊಳೆಸೆವ ಕೆಂಪು ನಂದನವನದೊಳ್ ॥ ೯೬

ಬಾಸಣಿಸಿದುದುತ್ಕಟಕುಸು
ಮಾಸವಸಾರಭದೆ ದೆಸೆಗಳೊಡನಳಕುಳಮಂ ।
ವಾಸವವನಿತಾವದನಾ
ಬ್ಜಾಸವಸೇಕಪ್ರಭಿನ್ನಮುಕುಳಂ ವಕುಳಂ ॥ ೯೭

ಕಿಱುನಿಱಿಯೊಳ್ ಕಿಱಿದೆಲೆಗಳ
ತುಱುಗಿದ ಚೆಲ್ವೆಳಸಿ ಬಳಸಿ ವನವನಿತೆಯ ಕ ।
ಣ್ಣುಱಿಯೆನೆ ನಿಱಿಗೊಂಡಿರೆ ನಿಱಿ
ನಿಱಿಗನ ನಿಱಿದಳಿರ ನಿಱಿಯನಱಿಯೆಂ ಪೊಗೞಲ್ ॥ ೯೮

ಶತಮುಖನರಸಿಗೆ ಕರ್ಣಾ
ವತಂಸಮಾಗಲ್ಕೆ ನೋಂತ ಪಲ್ಲವಪುಷ್ಪ ।
ಪ್ರತತಿಯನೆ ಮೆಱೆದು ಚೆಲ್ವಿಡೆ
ಗತಿಶಯಮೆನಿಸಿದುದು ಪಾರಿಜಾತಕುಜಾತಂ ॥ ೯೯

॥ ತ್ರಿಪದಿ ॥

ಸುರಯಿಯೊಳ್ಗಿಳಿ ಮಗುಳ್ವರಗಿಳಿ ಬಿರಯಿಗೆ
ಮೊರೆವಂತೆ ಮೊರೆವ ಮಱಿದುಂಬಿ ತಳಿರೊಳ್ ।
ಪರಭೃತಂ ಮಗುಳ್ವ ಪರಭೃತಂ ॥ ೧೦೦

ವ॥ ಸೊಗಯಿಸುಗುಂ. ಮತ್ತಮಲ್ಲಿ,

ಸರಯೂತರಂಗಶೀಕರ
ಪರಿಚಿತಮೇಳಾಲವಂಗಕುಸುಮರಜೌಘ ।
ಸರಮುಬಳಾಳಕಸಂಚಳ
ತರಳಂ ಪುೞಿಲೊಳಗೆ ಸುೞಿವುದುಪವನಪವನಂ ॥ ೧೦೧

ವ॥ ಮತ್ತಮಕೃತ್ರಿಮಪ್ರಣಯರಸವಿಸರವಶಗತವಿಬುಧಮಿಥುನಶತ ರತರಭಸಬಧಿರೀಕೃತಕೃತಕಗಿರಿಗಳೊಳಂ ಕೃತಕಗಿರಿಪರೀತನೂತಚೂತ

ಲತಾಲಿಂಗಿತಶಾತಕುಂಭರಂಭಾವನಾಂತರ್ಗತಮಣಿಭವನಂಗಳೊಳಂ ಮಣಿಮಯಭವನಮರಕತಸೋಪಾನಪಙ್ಕ್ತಿಂತನ್ಯವಮಾನದೀಪ್ತಿಸಂತಾನಾವೃತನಾನಾನೀರಜರಜಃಪಿಂಜರಿತಜಳಜಳಾಶಯಂಗಳೊಳಂ ನೆಱೆದು ಸೊಗಯಿಸುವುದ್ಯಾನವನದ ಕುಸುಮಕಿಸಲಯಪರಾಗಪಿಶಂಗಿತರಂಗತ್ತರಂಗಮಾದಂತೆ,

ಕನಕಸರೋಜಸಂಕುಳರಜಃಪಟಲಾರುಣಿತಂ ಸಮಗ್ರಕಾಂ
ಚನಮಯಸಾರದೀಪ್ತಿಜಟಿಳಂ ಕಳಗೀತವಿಹಂಗಭೃಂಗನಿ ।
ಸ್ವನಸುಭಗಂ ವಿಚಿತ್ರತರಪತ್ರಮಯಂ ನೆಱೆ ಪೋಲ್ಕುಮಾಪುರಾಂ
ಗನೆಯ ಪೊದಟ್ಟಿ ಹೇಮರಶನಾತ್ರಯಮಂ ಪರಿಖಾತ್ರಯಾಂತರಂ ॥ ೧೦೨

ಪರಿಖಾತ್ರಿತಯಕ್ಕೆ ಚತು
ಶ್ಶರಾಸನಾಂತರದೆ ಸುರಶರಾಸನಭಾಭಾ ।
ಸುರಮೊಪ್ಪಿತೋಱುಗುಂ ಪಂ
ಚರತ್ನಪಾಂಶೂಚ್ಚದೀಪ್ತಿದೀಪ್ರಂ ವಪ್ರಂ ॥ ೧೦೩

ವ॥ ಆವಪ್ರಪ್ರಮದೆಗೆ,

ಆಕಾಶಾಂತಮನೆಯ್ದೆ ನೀಳ್ದ ವಿಕಟಾಟ್ಟಾಲಂಗಳೊಳ್ ಕೇತನಾ
ನೀಕಂಗಳ್ ರವಿರಶ್ಮಿಗಳ್ ಪುಗಲೆವೇಡೀರಶ್ಮಿಗಳ್ ಸಾಲ್ಕುಮಿಂ ।
ತೇಕಜ್ಜಂ ಬೆಳಗೆಂಬವೊಲ್ ತುಱುಗಿ ತಳ್ತಿಂಬಪ್ಪಿನಂ ಕಾಂಚನ
ಪ್ರಾಕಾರಂ ನಿಲೆ ತಾಳ್ದುಗುಂ ಕೃತಯುಗಪ್ರಾಕಾರದಾಕಾರಮಂ ॥ ೧೦೪

ಶಾಳಹರಿನೀಲಮಣಿಕಿರ
ಣಾಳಿ ಪೊದಪ್ಡೆಸೆಯೆ ರಾಹುಗೆತ್ತಿಗಿದಿರ್ದ ।
ಟ್ಟಾಳಕೆಗಳಲ್ಲಿ ನಾಡೆಯು
ಮಾಳೋಚಂಬೆರಸು ತಡೆದು ನಡೆವಂ ದಿನಪಂ ॥ ೧೦೫

ಎರಡೆರಡಟ್ಟಳೆಗೆ ತರಂ
ತರದಿಂದೊಂದೊಂದು ಗೋಪುರಂ ಪ್ರವಿರಾಜ ।
ನ್ಮರಕತಮಣಿತೋರಣಪರಿ
ಕರಿತಂ ಪುರವಧುಗೆ ವದನಮಿರ್ಪಂತಿರ್ಕುಂ ॥ ೧೦೬

ವ॥ ಅದಱೊಳಗೆ ಸುತ್ರಾಮನೆ ಸೂತ್ರಧಾರನಾಗಿಯುಂ ಕಲ್ಪಜರೆ ಶಿಲ್ಪಿಗಳಾಗಿಯುಂ ಸಮೆದ ಚೆಲ್ವಿಂಗೆ ಸರ್ವತೋಭದ್ರಮೆನಿಸಿದ ಸರ್ವತೋಭದ್ರಂಗಳೊಳಂ ಛಂದೋವಿದ್ಯೆಯಂತೆ ನಾನಾಚ್ಛಂದಮಪ್ಪ ವಳಭಿಚ್ಛಂದಗಳೊಳಂ ನಾಭಿರಾಜಾಂಗಸಂಗತಮಪ್ಪ ನಂದ್ಯಾವರ್ತದಂತೆ ಸೊಗಯಿಸುವ ನಂದ್ಯಾವರ್ತದೊಳಂ ಜನಿಷ್ಯಮಾಣವೃಷಭಜಿನಾವತರಣಮಂಗಳನಿಹಿತಕಳಶದರ್ಪಣದಂತೆ ಪ್ರಶಸ್ತಸ್ವಸ್ತಿಕಾಯಮಾನಸ್ವಸ್ತಿಕಾದಿನಾನಾಮಣಿಮಯಪ್ರಾಸಾದಂಗಳೊಳಂ ವಿವಿಧವಿಧಿಸನಾಥಚತುಶ್ಶೃಂಗಾಧಿಕವೇದಿಕೆಗಳೊಳಂ ವಂದಿವೃಂದಕ್ಕೆ ಚಿಂತಾಮಣಿಭೂಮಿಯುಂ ಗಾಯಕನಿಕಾಯಕ್ಕೆ ಗಂಧರ್ವಭೂಮಿಯುಂ ಕೃತಸುಕೃತಕ್ಕೆ ತಜ್ಜನ್ಮಭೂಮಿಯುಮಿರ್ಪಂತಿರ್ದ ನಗರಲಲನೆಯ ಲಪನಕ್ಕೆ ಕೇಳೀಲೀಲಾಲಲಾಮಲಕ್ಷ್ಮಿಯಂ ತಾಳ್ದಿ,

ಧೃತದೇವೇಂದ್ರವಿಮಾನರುಂದ್ರಮಹಿಮಂ ಶ್ರೀಸಪ್ತಕಕ್ಷಾಸಮ
ನ್ವಿತಮಾಲೋಲದುಕೂಲಕೇತನಕುಳಂ ಮಾಣಿಕ್ಯಹರ್ಮ್ಯಾವಳೀ।
ವೃತಮುದ್ಯೋತಿತಸಪ್ತಭೂಮಿಕಮನೇಕೋದಗ್ರಕೂಟಂ ವಿರಾ
ಜಿತಘಂಟಂ ಕಳಧೌತತುಂಗಕಳಶಂ ಚೆಲ್ವಾಯ್ತು ರಾಜಾಲಯಂ॥ ೧೦೭

ವ॥ ಅಂತು ಸಮೆದ ಪುರವರಕ್ಕರಾತಿನಿಕರಕ್ಕಯೋಧ್ಯೆಯಪ್ಪುದಱಿಂದಯೋಧ್ಯೆಯುಮನೇಕನಿಕೇತನಸಮನ್ವಿತಮಪ್ಪುದಱಿಂ ಸಾಕೇತಮುಂ ವಿನೀತಜನಾಕೀರ್ಣಮಪ್ಪುದರಿಂ ವಿನೀತೆಯುಂ ಭವಿಷ್ಯತ್ಕೌಶಲವಿಷಯಸಹಚರ್ಯದಿಂ ಸುಕೌಶಲೆಯುಮೆಂಬ ಪೆಸರ್ಗಳನಿಟ್ಟು ನಾಭಿರಾಜಂಗೆ ರಾಜ್ಯಾಭಿಷೇಕಂಗೆಯ್ದು ಮರುದೇವಿಮಹಾದೇವಿ ವೆರಸು ಸಾಮ್ರಾಜ್ಯಪಟ್ಟಮಂ ಕಟ್ಟಿ ಸಕಳಜನಮುಮನಾಜ್ಞಾಕರಣವಿಧಾನದೊಳ್ ನಿಯೋಜಿಸಿ ದಿವಿಜಕುಜಜನಿತವಸನಪ್ರಸವವಿಲೇಪನಾಭರಣಂಗಳಿಂ ಪೂಜಿಸಿ ಭಗವದಮರಲೋಕಾವತರಣವಿನಿಹಿತಾಂತಃಕರಣನಾಗಿರ್ಪನ್ನೆಗಂ,

ಸುರರಾಜಂ ತಾನೆ ರಾಜ್ಯಾಭಿಷವಣವಿಧಿಯಂ ಮಾಡಿದಂ ಸ್ವರ್ಗದಿಂದಂ
ಪುರುದೇವಂ ಬಂದಪಂ ನಂದನನೆನಗೆನಿಸಲ್ಕಾನೆ ಸಂಸಾರಸಾಖ್ಯಾ।
ಕರನಾಗಿರ್ದಪ್ಪೆನೆಂಬುತ್ಸವದೊಳೆ ಸುಖದಿಂದಿರ್ದನೊಪ್ಪಿರ್ದಯೋಧ್ಯಾ
ಪುರದೊಳ್ ಶ್ರೀನಾಭಿರಾಜಂ ಸುಕವಿಜನಮನೋಮಾನಸೋತ್ತಂಸಹಂಸಂ॥

ವ॥ ಆಪ್ರಸ್ತಾವದೊಳ್,

ಲಯಮಂ ಕರ್ಮತಮಸ್ತಮಕ್ಕೆ ಜಯಮಂ ಧರ್ಮಕ್ಕೆ ಪೀನಂ ಪರಾ
ಜಯಮಂ ದೋಷಗಣಕ್ಕೆ ಲಕ್ಕೆತೆಱದಿಂ ಮುಂ ಮಾಡಿ ಸರ್ವಾರ್ಥಸಿ।
ದ್ಧಿಯನೀಯಲ್ಕೆ ವಿನೇಯಸಂತತಿಗಭಿಪ್ರಾಯಾರ್ಥಸರ್ವಾರ್ಥಸಿ
ದ್ಧಿಯಿನುದ್ಧತತಮಂ ಬರಲ್ಕೆ ಬಗೆದಂ ಸಂಸಾರಸಾರೋದಯಂ ॥ ೧೦೯

ಗ॥ ಇದು ದೇವೇಂದ್ರಮುನೀಂದ್ರವಂದ್ಯಪರಮಜಿನೇಂದ್ರಮುಖ
ಚಂದ್ರವಾಕ್ಚಂದ್ರಿಕಾಪ್ರಸರಪ್ರಸಾದೋದೀರ್ಣಸೂಕ್ತಿ
ಕಲ್ಲೋಲಮಾಲಾಕೀರ್ಣಕವಿತಾಗುಣಾರ್ಣವ
ಪ್ರಣೀತಮಪ್ಪಾದಿಪುರಾಣದೊಳ್
ನಾಭಿರಾಜರಾಜ್ಯಲಾಭವರ್ಣನಂ
ಷಷ್ಠಾಶ್ವಾಸಂ
ಸಂಪೂರ್ಣಂ.

ಶ್ರೀನಿಳಯಮಿದುವೆ ನಾಭಿ
ಸ್ಥಾನಮೆನಲ್ ನೆಱೆದಯೋಧ್ಯೆಗವತರಿಸಲ್ ತ್ರಿ ।
ಜ್ಞಾನಧರಂ ಬಗೆದಂ ಭ
ವ್ಯಾನಂದಕರಂ ಸರಸ್ವತೀಮಣಿಹಾರಂ ॥ ೧

ವ॥ ಅನ್ನೆಗಮಿತ್ತಲ್,

ಯುಗಮಂ ನಿಪ್ಪೊಸತಪ್ಪಿನಂ ಕೃತಯುಗಂಮಾಡಲ್ ಸುರೇಂದ್ರಾಳಿಗಾ
ವಗಮುತ್ಸಾಹಮನುಂಟುಮಾಡಲೆಡೆಗೊಟ್ಟೀಧರ್ಮಮಂ ನೀಂ ಜಲ ।
ಕ್ಕಗೆ ಮಾಡಲ್ಬಗೆದರ್ಪುದೆಂದು ನಯದಿಂ ಸಾಕೇತಮುತ್ಕೇತುಬಾ
ಹುಗಳಿಂದಂ ಕರೆವಂತದೇನೆಸೆದುದೋ ಸರ್ವಾರ್ಥಸಿದ್ಧೀಶನಂ ॥ ೨

ವ॥ ಅನ್ನೆಗಮಮರಪತಿ ಪರಮನ ಚರಮಗರ್ಭಾವತರಣಮನವಧಿ
ಯಿಂದಮಱಿದಱುದಿಂಗಳುಂಟೆನೆ ಮುನ್ನಮೆ,

ಸುರಿವುದು ತಡೆಯದಯೋಧ್ಯಾ
ಪುರದೊಳ್ ನೀನಿಂದೆ ತೊಡಗಿ ವಸುಧಾರೆಯನಾ ।
ದರದಿನೆನೆ ಸಹಜಭಕ್ತಿಯ
ಭರದಿಂ ಸುರಪತಿಯ ಬೆಸದಿನೊಸೆದಂ ಧನದಂ ॥ ೩

ವ॥ ಮತ್ತಂ ಕುಲಶಿಖರಿಶೇಖರಾಯಮಾಣಪದ್ಮಾದಿಸರೋವರನಿವಾಸಿನಿಯರಪ್ಪ ಶ್ರೀಹ್ರೀಧೃತಿಕೀರ್ತಿಬುದ್ಧಿಲಕ್ಷ್ಮಿಗಳೆಂಬಱುವರುಮನಾತ್ಮೀಯಗುಣಗಣಮಣಿವಿಭೂಷಣಂಗಳಿಂ ಜಿನಜನನಿಯನಳಂಕರಿಸಲುಮನಾದ್ಯನಿಧನಜಿನನಿಳಯರುಚಿರರುಚಕಾಚಳದ ಪೂರ್ವದಿಗ್ಭಾಗದ ವೈಡೂರ್ಯಕಾಂಚನಕನಕಾರಿಷ್ಟದಿಕ್ಸ್ವಸ್ತಿಕನಂದನಾಂಜನಮೂಳಕಂಗಳೆಂಬೆಂಟುಂ ಕೂಟಂಗಳೊಳ್ ರಮಿಯಿಸುವ ವಿಜಯೆ ವೈಜಯಂತೆ ಜಯಂತೆ ಅಪರಾಜಿತೆ ನಂದೆ ನಂದೋತ್ತರೆ ಆನಂದೆ ನಂದಿವರ್ಧನೆಯೆಂಬೆಣ್ಬರುಂ ದಿಗ್ವನಿತೆಯರಂ ಪರಮಜಿನೋತ್ಸವದೊಳ್ ಶೃಂಗಾರಂಬೆರಸು ಭೃಂಗಾರುಧಾರಿಗಳಾಗಲುಂ ತತ್ಕುಳದರಿಷ್ಟಪ್ರಾಗ್ದಿಗ್ದೇಶದಮೋಘ ಸುಪ್ರಬುದ್ಧ ರುಂದ್ರ ವಿಮಳ ರುಚಕ ರುಚಕೋತ್ತರ ಚಂದ್ರ ಸುಪ್ರತಿಷ್ಠಮೆಂಬ ಕೂಟಾಷ್ಟ

ಕಂಗಳೊಳ್ ರವಿಯಿಸುವ ಸುಪ್ರತಿಷ್ಠಿತೆ ಸುಪ್ರಣಿಧಿ ಸುಪ್ರಬುದ್ಧೆ ಯಶೋಧರೆ ಲಕ್ಷ್ಮೀಮತಿ ಕೀರ್ತಿಮತಿ ವಸುಂಧರೆ ಚಿತ್ರೆಯೆಂಬೆಣ್ಬರುಂ ದಿಗಂಗನೆಯರಂ ನಾಭಿರಾಜಾಂಗನೆಗೆ ಮಣಿದರ್ಪಣಮಂ ಪಿಡಿಯಲುಂ ತನ್ಮಹೀಧರವರುಣಾಶಾವಿಶೇಷಕಮಾಗಿರ್ದ ಲೋಹಿತಾಕ್ಷ ಜಗತ್ಕುಸುಮ ಪದ್ಮ ನಳಿನ ಕುಮುದ ಸೌಮನಸ ಯಶೋಭದ್ರ ಸರ್ವತೋಭದ್ರಂಗಳೆಂಬ ದ್ವಿಗುಣ ಚತುಃಕೂಟಂಗಳೊಳಂ ಸಂಚರಿಸುವಿಳಾದೇವಿ ಸುರಾದೇವಿ ಪೃಥ್ವಿ ಪದ್ಮಾವತಿ ಕಾಂಚನೆ ನವಮಿಕೆ ಸಿತೆ ಭದ್ರೆಯೆಂಬೆಣ್ಬರುಮಾಶಾವಧೂವರರನಾದಿಪುರುಷಾಂಬಿಕೆಗೆ ಗಾಯಕೀನಾಯಕಿಯರಾಗಿ ವಿಚಿತ್ರಾತಪತ್ರಂಗಳಂ ಪಿಡಿಯಲುಂ ತದ್ಗಿರೀಂದ್ರೋತ್ತರಕಕುದ್ದೇಶದ ಸ್ಫಟಿಕಾಂಜನ ರಜತ ಕುಂಜಳ ರುಚಿರ ರುಚಕ ... ಸುದರ್ಶನಂಗಳೆಂಬೆಂಟುಂ ಕೂಟಂಗಳೊಳರ್ಪಲಂಬೂಷೆ ಚಿತ್ರರೇಖೆ ಪುಂಡರೀಕಿಣಿ ವಾರುಣಿ ಆದರ್ಶೆ ಶ್ರೀ ಹ್ರೀ ಧೃತಿಯೆಂಬೆಣ್ಬರುಂ ದಿಕ್ಕನ್ಯೆಯರಂ ಮರುದೇವಿಮಹಾದೇವಿಗೆ ಚಾಮರಮನಿಕ್ಕಲುಂ ಮತ್ತಮಾ ಪರ್ವತದ ಪೂರ್ವದಿಗ್ಭಾಗದೊಳ್ ನೆಲಸಿದ ವಿಮಳ ನಿತ್ಯಾವಳೋಕ ಸ್ವಯಂಪ್ರಭ ನಿತ್ಯೋದ್ಯೋತಂಗಳೆಂಬ ನಾಲ್ಕುಕೂಟಂಗಳರಸಿಯರಪ್ಪ ಚಿತ್ರೆ ಕನಕಚಿತ್ರೆ ತ್ರಿಶಿರೆ ಸೂತ್ರಾಮಣಿಯೆಂಬನಾಲ್ವರುಂ ವಿದ್ಯುತ್ಕುಮಾರಿಯರನುದ್ಯದ್ವಿಳಾಸಮಣಿದರ್ಪಣಮನಾವಿಳಾಸರತ್ನಾಕರೆಯಿರ್ದಲ್ಲಿ ಕಣ್ಗೆ ಸೊಗಯಿಸಿ ತಳದಳಿಸಿ ಬೆಳಗಲುಂ ತದವನೀಧರವಿದಿಙ್ನಿಳಯಂಗಳಪ್ಪ ವೈಡೂರ್ಯ ರುಚಕ ಮಣಿಪ್ರಭ ರುಚಕೋತ್ತರಂಗಳೆಂಬ ವಿಕಟಕೂಟಾಧೀಶೆಯರಪ್ಪ ರುಚಕೆ ರುಚಕಾಸ್ಯೆ ರುಚಕಾಂತೆ ರುಚಕಪ್ರಭೆಯೆಂಬೀನಾಲ್ವರುಂ ದಿಕ್ಕುಮಾರಿಕಾಮಹತ್ತರಿಕೆಯರುಮಂ ಮತ್ತಮಾನಗದ ನೆಗೆದ ರತ್ನಕೂಟ ರತ್ನಪ್ರಭ ಸರ್ವರತ್ನ ರತ್ನೋಚ್ಚಯಂಗಳೆಂಬ ಕೃತಕದ್ವಿಕೃತಕವಿಕಟಕೂಟಂಗಳೊಳ್ ಕೊಂಡಾಟದಿಂದಿರ್ಪ ವಿಜಯೆ ವೈಜಯಂತೆ ಜಯಂತೆ ಅಪರಾಜಿತೆಯೆಂಬ ವಿದ್ಯುತ್ಕುಮಾರೀಪುರಂಧ್ರಿಯರಂ ತೀರ್ಥಕರಕುಮಾರಜಾತಕರ್ಮಕರಣಗರ್ಭಶೋಧನಾದಿಗಳ್ಗೆ ವನಿತಾಗೂಢವ್ಯಾಪಾರದೊಳ್ ನೆಗೞಲುಂ ಮತ್ತಮನ್ಯನಗನಿವಾಸಿಗಳಪ್ಪ ಮಾಳಿಕೆ ಮಾಳಿನಿ ಕನಕದೇವಿ ಕನಕಚಿತ್ರೆ ಪುಷ್ಪಚೂಳಿಕೆ ಮಾಳತಿ ಸುರದೇವಿ ತ್ರಿಶಿರೆ ಮೊದಲಾಗಿ ಪೆಱರುಮಮರಕಾಂತೆಯರನಿಂತೆನಿತಾನುಂ ತೆಱದ ಬೆಸಂಗಳಂ ಧರ್ಮಾನುರಾಗದಿಂ ಸೌಧರ್ಮೇಂದ್ರಂ ಬೆಸಸುವುದು ಮಾಕೆಗಳ್ ಬಂದು,

ಪದೆವ ಮನಂ ಬೆರಸೆಱಗಿದ
ಪದದೊಳದೇಂ ಚೆಲ್ವುವಡೆದುವೋ ಜಿನಜನನೀ ।
ಪದಪಲ್ಲವತಳದೊಳ್ ಸುರ
ಸುದತೀಚಯದಳಕವಲ್ಲರೀಕುಸುಮಂಗಳ್ ॥ ೪

ವ॥ ಅಂತು ಸುರಸುದತೀಸಂದೋಹಮಮರಕಾಮಿನೀಮಹತ್ತರಿಕಾನಿಯ
ಮಿತಾತ್ಮೀಯನಿಯೋಗದಿಂ ಜಿನಜನನಿಯ ಮನಮನಱದೋಲಗಿಸುವಲ್ಲಿ,

ತುಡುಗೆಯ ಮಣಿದೀಧಿತಿಗಳ
ಪೊಡರ್ಪು ಮೇಗೊಗೆದು ಕೊಡೆವೊಲೆಸೆದಪುದೆಂಬೀ ।
ನುಡಿಗಳ್ಗೆ ಪಂಚರತ್ನದ
ಕೊಡೆಯಂ ಪಿಡಿದಮರಿಜನದ ಮನದಡಿವಿಡಿಗಳ್ ॥ ೫

ಮೃದುಕರತಳವದನದ ಚೆ
ಲ್ವೊದವಿರೆ ಮಣಿವಳಯಕಳರವಂ ಸೊಗಯಿಸೆ ಚೆ ।
ಲ್ವಿದಿರ್ಗೊಳೆ ಬೀಸುವ ಚಮರೀ
ಜದಿನೊರ್ವಳ್ ಹಂಸೆ ಪಾಯ್ವ ಲತೆಯನೆ ಪೋಲ್ತಳ್ ॥ ೬

ಈಕೆಯ ಮುಖೇಂದುಬಿಂಬದಿ
ನೀಕನಕಸರೋಜಮೆಂತುಮಲರ್ದತ್ತೆಂದೀ ।
ಲೋಕಂ ಪೊಗೞ್ವುದು ಕನಕಾ
ಬ್ಜಾಕಾರದ ಡಮಕೆವಿಡಿದ ಸುರಸೌಂದರಿಯಂ ॥ ೭

ಅರುಣಸರಸೀರುಹಂ ಮೃದು
ಕರತಳವಿನ್ಯಾಸಮಮರೆ ಜಿನಜನನಿಯರೊ ।
ಳ್ಗೆರುಳಂ ಸಮಱುವ ಕನ್ಯಕೆ
ಕರಮೆಸೆದಳ್ ತಳಿರೊಳಳಿಗಳಂ ಮುಚ್ಚುವವೋಲ್ ॥ ೮

ತಾಮರೆಗಂ ಚಂದ್ರಂಗಂ
ತಾಮಸಮಂ ಕಳೆದು ಕಾಣ್ಕೆಮಾಡ್ಪಂತೆವೊಲಾ ।

ತಾಮರಸನಿಭಾಸ್ಯೆಗೆ ಸುರ
ಕಾಮಿನಿ ಕಟ್ಟಿದಿರೊಳಿಸೆಯೆ ಕನ್ನಡಿವಿಡಿದಳ್ ॥ ೯

ಬಿನ್ನಮೆ ಕುರುಳ ನೆೞಲ್ಗಳ್
ತನ್ನೊಳೆ ತಳ್ಪೊಯ್ದು ನೆಗೞ್ದ ಕಱೆಯನೆ ಪೋಲ್ತುಂ ।
ನುನ್ನಂ ಸೊಗಯಿಸುತಿರೆ ಸಿರಿ
ಗನ್ನಡಿ ಕನ್ನಡಿಪುದಾದುದಿಂದುಶ್ರೀಯಂ ॥ ೧೦

ಅಡಿಯೂಡಲ್ಕಲತಗೆಯಂ
ತುಡಲ್ಕೆ ತುಡುಗೆಯನುಡಲ್ಕೆ ದಿವ್ಯಾಂಬರಮಂ ।
ಮುಡಿಯಲ್ ಪೂಮಾಲೆಯನೋ
ಗಡಿಸದೆ ಕುಡುವಮರಿ ಕಲ್ಪಲತೆಯನೆ ಪೋಲ್ತಳ್ ॥ ೧೧

ತಳದೊಳ್ ತಂಬುಲದೆಲೆಗಳ್
ಪೊಳೆಪಮರ್ದಿರೆ ದೇವಕನ್ಯೆ ಮತ್ತೊರ್ವಳ್ ಕೋ ।
ಮಳಲತೆಯ ನಿಮಿರ್ದ ಕುಡಿಯೊಳ್
ಗಿಳಿ ಪಾಯ್ದತ್ತೆನಿಸಿ ಸತಿಗೆ ತಂಬುಲಮಿತ್ತಳ್ ॥ ೧೨

ಭೀಷಣರಮಣೀಯತೆ ಸುರ
ಯೋಷಿನ್ನಿಕರಕ್ಕೆ ಕಿತ್ತ ಬಾಳಂ ಭೂಷಾ ।
ವೇಷದಿನಮರ್ದತ್ತೆನೆ ಕಳ
ಭಾಷಿಣಿಗಮರಿಯರೆ ಬಳಸಿ ಮೆಯ್ಗಾಪಾದರ್ ॥ ೧೩

ಅತಿಲಲಿತತರ್ಜನೀತ
ರ್ಜಿತಪರಿಜನೆಯರ್ ವಿಚಿತ್ರವೇತ್ರಲತಾಶೋ ।
ಭಿತತಳಕಮಳೆಯರಂತಃ
ಪ್ರತಿಹಾರಿಯರಾದರಮರಕಾಂತೆಯರರೆಬರ್ ॥ ೧೪

ಕಳಕಳಪಮರಿಯರಂ ಕ
ಣ್ಣೊಳೆ ಬಗ್ಗಿಸುವಲ್ಲಿ ಕಾಮುಕಾಮುರ್ಕಕರಸಂ ।
ಚಳನಮನೆ ಪೋಲ್ತು ಕರಮೆರ್ದೆ
ಗೊಳಿಸಿದುದಾಕೆಗಳ ವಿಭ್ರಮಭ್ರೂಭಂಗಂ ॥ ೧೫

ಗಮಕಂ ಪ್ರಯೋಗಮಾಭೋ
ಗಮಳಂಕಾರಂ ಪೊಗರ್ ನಯಂ ಮಿಱುಗು ಪೊದ ।
ೞ್ದಮರೆ ಕೊಳೆ ಪಾಡುವಮರಿ ದ
ಲಮರ್ದಂ ಮುಕ್ಕುಳಿಸಿ ಯುಗುಳ್ವ ತೆಱನಂ ಪೋಲ್ತಳ್ ‖ ೧೬

ಜೇನ ಮೞೆ ಕೊಂಡುದಮರ್ದಿನ
ಸೋನೆಯೆ ಸುರಿದತ್ತು ರಸದ ತೊಱೆ ಪರಿದತ್ತೆಂ ।
ಬೀನುಡಿಯನೆ ನುಡಿಯಿಸಿದ
ತ್ತಾನಾಕಸ್ತ್ರೀಯ ಗೇಯಮಾಸ್ಥಾಯಿಕೆಯೊಳ್ ‖ ೧೭

ಕರಣಾಂಗಹಾರಮೃದುಪದ
ಪರಿಕ್ರಮಂಗಳ ಬೆಡಂಗುಗಳ ಜತಿಯೊಳಳಂ ।
ಕರಿಸಿದುದೆಂಬಿನಮಾಡುವ
ಸುರನರ್ತಕಿ ಜಿನನ ಜನನಿಯಂ ಮೆಚ್ಚಿಸಿದಳ್ ‖ ೧೮

ವದನರಸಂ ಮದನರಸಂ
ಪೊದೞ್ದುದೆನಿಸುವಿನಮಮರಿ ನರ್ತಿಸೆ ಚೆಲ್ವಂ ।
ಪುದಿದುದುಱಚಲ್ಲಿಯೊಳೆಸೆದುದು
ತದುರೋಜಸರೋಜಮುಕುಳಯುಗಸಂಚಳನಂ ‖ ೧೯

ಇದಱ ದನಿ ಮದವದಳಿಕಳ
ಮೃದುನಿನದದೊಳಂ ಮನೋಜಕಾರ್ಮುಕಗುಣನಾ ‖
ದದೊಳಂ ಸೆಣಸುವುದೆನೆ ಸುರ
ಸುದತಿ ಪೆಱಳ್ ಮೆಱೆದು ಬೀಣೆಯಂ ಬಾಜಿಸಿದಳ್ ‖ ೨೦

ತಳದ ಕಡುಗೆಂಪು ಪುದಿದ
ವ್ವಳಿಸಿರೆ ಸುರಯುವತಿ ಮಧುರತಂತ್ರೀನಾದಂ ।
ಕೊಳೆ ಬೀಣೆಯ ದಂಡಿಗೆಯುಂ
ತಳಿರ್ತುದೆಂಬೊಂದು ಶಂಕೆಯಂ ಪುಟ್ಟಿಸಿದಳ್ ‖ ೨೧

ವ॥ ಮತ್ತಮಾಕೆಗಳ ವದನೇಂದುಬಿಂಬಂಗಳ ಬೆಳಗುಗಳೊಳ್ ಗಗನಮಂಡಲಂಗಳೆಲ್ಲಮಿಂದುಮಂಡಲಮಯಮುಂ, ನಿಕಾಮಕೋಮಳಪದಪಲ್ಲವವಿನ್ಯಾಸಂಗಳೊಳ್ ಮಣಿಕುಟ್ಟಿಮಮೆಲ್ಲಂ ಪಲ್ಲವಮಯಮುಮಂ, ಅನರ್ಘ್ಯಾಭರಣಕಿರಣಜಾಲಂಗಳೊಳ್ ನರೇಂದ್ರಭವನಮೆಲ್ಲಮಿಂದ್ರಚಾಪಮಯಮುಮಂ, ವಿಲೋಲಲೋಚನಮಯೂಖಸಂತಾನದೊಳ್ ದೆಸೆಗಳೆಲ್ಲಂ ನೀಲೋತ್ಪಳಮಯಮುಮಂ, ಅಂಗಪ್ರಭಾಪ್ರವಾಹದೊಳ್ ದಿವಸಮೆಲ್ಲಂ ಲಾವಣ್ಯಮಯಮುಮಾಗಿ ನಾಭಿರಾಜನ ಭವನಮೆಲ್ಲಮಿಂತು ಮದನಾಮೃತಮಯಮುಂ ಶೃಂಗಾರಮಯಮುಮಂ ಸೌಕುಮಾರ್ಯಮಯಮುಮಾಗಿ ತೋಱೆ, ಸುರಮಹತ್ತರಿಕೆಯರಮರಗಣಿಕೆಯರಂ ಪೆಸರ್ವೆಸರೊಳ್ ಕರೆದು, ನಿಪುಣಿಕೆಯುಂ ಜಿನಜನನಿಯ ಸೆಜ್ಜೆಯನುಜ್ಜ್ವಳಂಮಾಡಲುಂ, ಚಂದ್ರಿಕೆಯುಂ ಚಂದ್ರಕಾಂತದ ಕರಗಮಂ ತೀವಲುಮಮೃತಮತಿಯುನಮೃತಾಹಾರದ ಬೋನಮನೆತ್ತಲುಂ, ಲವಲವಿಕೆಯುಂ ಪರಿಯಣಮಂ ಬಿತ್ತರಿಸಲುಂ, ಪದ್ಮಿಕೆಯನಗಲಂತಂದು ಮುಂದಿರಿಸಲುಂ, ಮನೋಹರಿಯುಂ ಪಡಿಸಣಮಂ ನೋಡಲುಂ, ಮಾಳತಿಕೆಯುಂ ಬಡ್ಡಿಸಲುಂ, ಉತ್ಪಳಿಕೆಯುಂ ಕೈಘಟ್ಟನೀಡಲುಂ, ಮಂದಾರಿಕೆಯುಂ ಮಂದಾರಮಾಲಿಕೆಯನೆತ್ತಲುಂ, ವಿಳಾಸವತಿಯುಂ ಪಸದನಂಗೊಳಿಸಲುಂ, ಲವಂಗಿಕೆಯುಂ ಲವಂಗಪಲ್ಲವರಸದೊಳ್ ವಿಳಾಸಾವಾಸಭವನಮನುತ್ತರಿಸಲುಂ, ಪ್ರಭಾವತಿಯುನಿಂದ್ರನೀಲಮಣಿಭವನದೊಳ್ ಮಣಿಪ್ರದೀಪಮಂ ಬೆಳಗಲುಂ, ಚಿತ್ರಲೇಖೆಯುಂ ಮಣಿಸ್ತಂಭಸಾಲಭಂಜಿಕಾಸ್ತಂಭಂಗಳೊಳ್ ಕುಂಕುಮರಸಪತ್ರಲೇಖೆಯುಂ ವಿರಚಿಸಲುಂ, ಮಯೂರಿಕೆಯುಂ ಧಾರಾಗೃಹಕ್ಕೆ ಗೃಹಮಯೂರಂಗಳಂ ನಡೆಯಿಸಲುಂ, ಚೂತಲತಿಕೆಯುಂ ಕನಕಪಂಜರಾಂತರ್ಗತಕೋಕಿಳಕ್ಕೆ ಚೂತಲತಿಕಾಂಕುರಂಗಳಂ ನೀಡಲುಂ, ಮೃಣಾಳಿಕೆಯುಂ ಭವನಕಳಹಂಸೆಗೆ ಬಾಳಮೃಣಾಳನಾಳಂಗಳಂ ನೀಡಲುಮಿಂತು ಪೆಱವುಮಿಸುವೆಸಂಗಳನವರವರ್ಗೆ ತಕ್ಕುವಂ ತಕ್ಕಂದದಿಂ ಪೇಳ್ದಾಗಳ್,

ವಸುಧೆಯನೇನಿವಳ್ದಿರರುಣಾಬ್ಜದಳಂಗಳೊಳಟ್ಟಿಯಿಂದಮ
ರ್ಚಿಸಿದರೊ ಪೇಟಿಮೆಂಬಿನೆಗಮುಣ್ಮುವ ಪಾದತಳಂಗಳೊಂದು ಕೆಂ।
ಪೆಸೆವಿನಮತ್ತಲಿತ್ತಲೆಡೆಯಾಡುವ ದಂದುಗದಾಗಳೇಂ ಪೊದ
ಪ್ದೆಸೆದುದೊ ಚಾರುದೇವಗಣಿಕಾಮಣಿನೂಪುರಮಂಜುಶಿಂಜಿತಂ ॥ ೨೭

ಮನಮೊಲ್ದಿಂದ್ರನಿವಾಸಸಂಭವಶುಚಿದ್ರವ್ಯಂಗಳಿಂ ಗರ್ಭಶೋ
ಧನಮಂ ದೇವಿಯರಿರ್ದು ಮಾಡೆ ಪೆಱದಿನ್ನೇನೆಂಬುದಾಕಾಂತೆಗಂ ।
ದು ನಯಂ ಬೇಱೆ ಬೆಡಂಗು ಬೇಱೆ ಪೊಳೆವಂಗಚ್ಛಾಯೆಯುಂ ಬೇಱೆ ತೊ
ಟ್ಟನೆ ಮೆಯ್ದೋಱೆ ವಿಶುದ್ಧಮಪ್ಪ ಪಳಿಕಿಂ ಪೆಣ್ಮಾಡಿದಂತೊಪ್ಪಿದಳ್ ॥ ೬೩

ವ॥ ಮತ್ತಮಮರಾಧೀಶಶಾಸನದೊಳ್ ನಾಭಿರಾಜರಾಜಮಂದಿರಾಂಗಣ
ದೊಳ್,

ಧನದಂ ಕಾಂಚನಪಂಚರತ್ನಮಯಮಂ ರೈವೃಷ್ಟಿಯಂ ಮಾಡುವ
ಲ್ಲಿ ನಭೋಭಾಗದಿನಿಂದ್ರಚಾಪಮನಿತುಂ ಭೂಭಾಗದೊಳ್ ಬಂದು ತೊ ।
ಟ್ಟನೆ ಬೇರೂಱಿದುವೋ ಕವಲ್ತುವೊ ಚಳದ್ವಿದ್ಯುಲ್ಲತಾದೀಪ್ತಿಯೆಂ
ಬಿನಮೇಂ ನಾಡೆ ಬೆಡಂಗನಾಳ್ದುದೊ ವಿಯದ್ದಿಗ್ಭಾಮಿಭೂಮಂಡಲಂ ॥ ೬೪

ಕೂಡಿತ್ತುದ್ದಾಮರತ್ನಾಂಶುಗಳೊಳೆ ಧರಣೀಭಾಗಮಾಗಳ್ ಬೆಡಂಗಂ
ಮಾಡಿತ್ತಂದೊಂದು ಮಂದಾರದ ಸರಿ ವಿರುವದ್ಭೃಂಗಸಂಗೀತಿ ಚೆಲ್ವಂ ।
ನೀಡಿತ್ತಾರುಂದ್ರದೇವಾನಕದೊಡನೆ ಜಯೋದ್ಘೋಷಣಂ ಮಂದಮಂದಂ
ತೀಡಿತ್ತಾಲೋಲಗಂಗಾಲಲಿತಲಹರಿಕಾಸಾರಸಾರಂ ಸಮೀರಂ ॥ ೬೫

ವ॥ ಅಂತು ಧನದಂ ಸಾರ್ಧಕೋಟಿತ್ರಯಪ್ರಮಿತಪಂಚರತ್ನವೃಷ್ಟಿಯಂ
ಪ್ರತಿದಿನಂ ಸುರಿಯೆ,

ಧರೆ ರತ್ನಗರ್ಭಮಾದುದು
ಸುರರೆಲ್ಲಂ ಹರ್ಷಗರ್ಭರಾದರ್ ಪಿರಿದ ।
ಚ್ಚರಿಯೆನೆ ಹಿರಣ್ಯಗರ್ಭನ
ನಿರುಪಮಗರ್ಭಾವತರಣಮಂಗಳವಿಧಿಯೊಳ್ ॥ ೬೬

ವ॥ ಮತ್ತೊಂದು ದಿವಸಮಾಮರುದೇವಿಮಹಾದೇವಿ ಚತುರ್ಥಸ್ನಾನ
ದೊಳ್ ಕಲ್ಪದ್ರುಮದುಕೂಲವಸನೆಯುಮೂರ್ಜಿತದಶನಮಯೂಖರಜಳ
ಪ್ರಕ್ಷಾಳಿತದಶನವಸನೆಯುಂ ಸರ್ವಾಂಗೀಣಮೌಕ್ತಿಕಾಭರಣಕಿರಣಾಕೀ
ರ್ಣಸುವರ್ಣದುರ್ಲಕ್ಷಹರಿಚಂದನಾಂಗರಾಗೆಯುಂ ಝುಂಕಾರಾನುಮಿತ
ಕುಂತಳಕುಳಕಾಂತಿಮಧುಕರನಿಕರನಿಭೃತನಿಳಯಮನೋಹರಸನ್ಮಲ್ಲಿ
ಕಾದಾಮಪರಾಗೆಯುಮಾಗಿ,

ಪೊಳೆವಮೃತಾಂಶುಬಿಂಬದಧಿದೇವತೆ ದುಗ್ಧಪಯೋಧಿಯಿಂದಮಾ
ಗಳೆ ಪೊಱಮಟ್ಟು ಬಂದ ಕಮಳಾಸನೆ ನಾಭಿನರೇಂದ್ರನೆಯ್ದೆ ಸಂ।
ಗಳಿಸಿದ ಕೀರ್ತಿ ಮೂರ್ತಿಮತಿ ತದ್ವದನಾಬ್ಜವಿಳಾಸವಾಸದೊಳ್
ತಳರದೆ ನಿಂದ ವಾಗ್ವನಿತೆಯೆಂಬಭಿಶಂಕೆಯನುಂಟುಮಾಡಿದಳ್ ॥ ೨೭

ವ॥ ಅಂತು ಸೊಪ್ಗೆವಂದನೇಕಮಸೃಣಭಿತ್ತಿವಿಲಿಖಿತೋಪವನಲತಾಭವನಮನೋಭವಕೇಳೀಲಂಪಟನಿಳಿಂಪದಂಪತಿ ವಿದ್ಯಾಧರಮಿಥುನಮನ್ಮಥೋದ್ದೀಪನದೊಳಾತ್ಮೀಯದೇಹಪ್ರಭಾಪ್ರವಾಹಲಲಿತಮಣಿದೀಪ್ತಿಪ್ರಸರದೊಳತುಚ್ಛಮಳಯಜಚ್ಛಟಾಸಿಕ್ತಮರಕತಮಣಿಕುಟ್ಟಿಮಪ್ರಕೀರ್ಣಮಧುಕರಕುಳಶಬಳಮಲ್ಲಿಕಾಮುಕುಳದೊಳತಿಬಹಳಕಾಳಾಗರುಧೂಪಧೂಮಜಾಳೋದ್ಗಾರಿಹರಿನೀಲಗವಾಕ್ಷಜಾಲದೊಳವಿರಳಮುಕ್ತಾದಾಮನಿಕಾಮಕಮನೀಯವಿತಾನದೊಳಮೃತಕಿರಣಮಣಿಪೀಠಿಕಾಧಿಷ್ಠಿತಪರ್ಯಂಕದೊಳ್,

॥ ಲ ಲಿ ತ ರ ಗ ಳೆ ॥

ಶ್ರೀಗೆ ಕುಳಸದನಮೆನೆ ತೊಳಪ ಮಣಿಭವನದೊಳ್ ।
ರಾಗರಸಮೊದವೆ ಸರಸಿರುಹಸಮವದನದೊಳ್ ॥

ಪೊಳೆವ ಪಚ್ಚದೊಳೆ ಸೊಗಯಿಸುವ ಮೃದುತಲ್ಪದೊಳ್ ।
ಲಲಿತಗಂಗಾನದೀಲಹರಿಕಾತಲ್ಪದೊಳ್ ॥

ದೇವವನಿತೆಯರೆ ಪರಿವಿಡಿಯೊಳಡಿಗುಟ್ಟೆಯುಂ ।
ದೇವಗಣಿಕೆಯರೆ ಕೊಳೆ ಪಾಡೆ ದನಿ ಮುಟ್ಟೆಯುಂ ॥

ದೇವಿ ಮರುದೇವಿ ವಿಶದೀಕೃತಾಶಾಂತದೊಳ್ ।
ಭಾವಿಜಿನಜನನಿ ಸತಿ ಪವಡಿಸಿ ನಿಶಾಂತದೊಳ್ ॥

ಚಂಡಗಜಗಮನೆ ಪರಿಖಂಡಿತಾಘೌಳಿಯುಂ ।
ಕಂಡಳೀರೆಂಟುಮೊಳ್ಗನಸಿನೆಸೆವೋಳಿಯುಂ ॥

ಕರಟತಟಗಳಿತಮದರುಚಿರಮುಖತೇಜನಂ ।
ಶರದಮಳಜಳದನಿಭಧವಳಗಜರಾಜನಂ ॥

ಹಿಮಶಿಖರಿಶಿಖರಸಮವಿಗ್ರಹಸನಾಥನಂ ।
ಕುಮುದದಳಧವಳರುಚಿರುಚಿರವೃಷನಾಥನಂ ॥

ಬಾಲಹಿಮಕಿರಣದಂಷ್ಟ್ರಾನನಜ್ಯೋತಿಯಂ ।
ಲೋಲಲಾಂಗೂಲಮದಸಿಂಧುರಾರಾತಿಯಂ ॥

ಕರಿಕರೋದ್ಧೃತಪಯಃಪೂರ್ಣಘಟಮಳಯೆಯಂ ।
ದರದಳಿತಕರಕಳಿತಸರಸಿರುಹನಿಳಯೆಯಂ ॥

ಪ್ರಕಟಮೃದುಮಧುರರಸನಿಪತದಳಿಮಾಳೆಯಂ ।
ವಿಕಚನವಮಾಳಿಕಾಕುಸುಮನವಮಾಳೆಯಂ ॥

ಕುಮುದವನವನಧಿವನವಿಸರಶರಕಿರಣನಂ ।
ವಿಮಳತರಗಗನತಳತಿಳಕಹಿಮಕಿರಣನಂ ॥

ವಿದಿತಕರನಿಕರದಳಿತಾಬ್ಜಿನೀಷಂಡನಂ ।
ಉದಯಗಿರಿಶಿಖರಗತತರುಣಮಾರ್ತಂಡನಂ ॥

ಲಲಿತವಿದ್ಯುಲ್ಲತಾರುಚಿರರುಚಿಮಾಳೆಯಂ ।
ಮಿಳಿರ್ವ ಜಳದೊಳಗೆಪೊಳೆವೆರಡುಮೆಳೆವಾಳೆಯಂ ॥

ಕಳಿತಸರಸಿಜರಜೋರಂಜಿತಾಚ್ಛಾಂಭಮಂ ।
ಜಳಜದಳನಯನಯುಗಮೊಂದರ್ದ ಮಣಿಕುಂಭಮಂ ॥

ಚಳಿತಜಳವಿಹಗರವರಮ್ಯದಿಗ್ವಳಯಮಂ ।
ಜಳಜಕುಳನಿಭೃತಜಳಪದ್ಮಿನೀನಿಳಯಮಂ ॥

ಶರದಮಳಗಗನತಳವಿಭವಸಂಕಾಶಿಯಂ ।
ಕರಿಮಕರಕರದಳಿತವೀಚಿವಾರಾಶಿಯಂ ॥

ಸೌಂದರಾನೇಕಮಣಿರುಚಿಜಳಸ್ಯಂದಿಯಂ ।
ಮಂದರೋತ್ತುಂಗಕಂಠೀರವಸ್ಯಂದಿಯಂ ॥

ವ್ಯಾಳಸುರಸೌಂದರೀಜನಿತಬಹುಮಾನಮಂ ।
ಸ್ಥೂಳಮಣಿಖಚಿತಸುರಪರಿವೃಢವಿಮಾನಮಂ ॥

ಫಣಿಫಣಾಸ್ಫುರಿತಮಣಿದೀಪಿಕಾವ್ಯೂಹಮಂ ।
ಕ್ವಣಿತಮಣಿಕಿಂಕಿಣೀನಿನದಫಣಿಗೇಹಮಂ ॥

ವಿರಚಿತೋದ್ದಾಮಸುರಪತಿಧನುಬ್ರಾತಮಂ ।
ಸುರುಚಿರಾಂಶೂಲ್ಲಸದ್ರತ್ನಸಂಘಾತಮಂ ॥

ಧೃತಧಗದ್ಧಗಿತರವನಿರ್ಮಳಶಿಖಾಳಿಯಂ ।
ಸತತಗತಿಪಥಮನಡರ್ವುಜ್ಜ್ವಳಜ್ವಾಲೆಯಂ ॥

ರಜತಗಿರಿರುಂದ್ರನಂ ಜಿತಶರಚ್ಚಂದ್ರನಂ ।
ನಿಜವದನವನಜಮಂ ಪುಗುವ ವೃಷಭೇಂದ್ರನಂ ॥

ನೋಡಿ ಗಜಗಮನೆ ಕನಸೆಂದು ಬಗೆವನ್ನೆಗಂ ।
ತೀಡೆ ಕಿವಿಗುಚಿತಮಂಗಳನಿನದಮನ್ನೆಗಂ ॥

ನಿಜಮುಖಾಂಬುಜಮುಮಂಬುಜಮುಮೊಡನಲರ್ವಿನಂ ।
ನಿಜದ ಚೆಲ್ವಮರೆ ನಿಡುಪುರ್ವುಗಳ್ ನಿಮಿರ್ವಿನಂ ॥

ತಱಿತಪಾಗಿರ್ದ ಕುಂಕುಮದ ನಿಜವದನಮಂ ।
ತೆಱೆದ ಕಣ್ಗಳೊಳೆ ಧವಳಿಸಿದ ನಿಜವದನಮಂ ॥

ಚಲಿತಧಮ್ಮಿಲ್ಲದೊಳ್ ತೊಡರ್ದ ಪೂಮಾಲೆಯಂ ।
ಲಲಿತಮುಖಸೌರಭಕ್ಕೆಱಗುವಳಿಮಾಳೆಯಂ ॥

ಬಗೆಗೊಳಿಸಿ ತಳರ್ದುಗಜಗಮನೆ ಸುರನಾರಿಯರ್ ।
ಮುಗಿದ ಕೈವೆರಸು ಬರೆ ಜನಮನೋಹಾರಿಯರ್ ॥

ಬಂದು ಜಗದಧಿಪನಂ ಸೋಂಕಿ ಕುಳ್ಳಿರ್ಪುದುಂ ।
ಬಂದ ಬರವವನಿಪತಿಗೊಸಗೆಯಂ ತರ್ಪುದುಂ ॥

ಕುಂದದಳಧವಳದಶನಾಂಶುಗಳ್ ಪೊಳೆವಿನಂ ।
ಸಂದ ಕನಸುಗಳನವನೊಸೆದು ಸತಿ ಬಗೆವಿನಂ ॥

ಕ್ರಮದಿನಱಿಪುವುದುಮವನಱಿದು ಧರಣೀಶ್ವರಂ ।
ನಿಮಗೆ ಮಗನುಚಿತಧವಳಾತಪತ್ರೇಶ್ವರಂ ॥

ದಿವದಿನವತರಿಪನಪರಿಮಿತಪುಣ್ಯೋದಯಂ ।
ದಿವಿಜಪತಿಕೃತಮಹಾಶ್ಚರ್ಯಮಹಿಮೋದಯಂ ॥

ದುರಿತಬಳತಿಮಿರದಳಚಳನಕರಖರಕರಂ ।
ಲಲಿತಬುಧಕುವಲಯಾನಂದಕರಹಿಮಕರಂ ॥

ತಡೆಯದೆನೆ ವನಜಮುಖಿ ಪಿರಿದುಮನುರಾಗದಿಂ ।
ದಡಿಗಡಿಗೆಸೊಗಯಿಸಿದಳಾಗವೊಗರಾಗದಿಂ ॥

ನೆಗೞ್ದ ಕವಿತಾಗುಣಾರ್ಣವನ ವರ್ಣಿಸುವುದಂ ।
ಪೊಗೞ್ದು ಬಗೆದೋದುವರ್ ಮನದೊಳಾಟಿಸುವುದಂ ॥
ಪಡೆವರೀಷೋಡಶಸ್ವಪ್ನದ ಫಲಂಗಳಂ ।
ಪಡೆಯಲಣಮಾಗದ ಸುಖಂಗಳಂಮಂಗಳಂ ॥

ಕಂಡುಪ್ಪವಡಿಸಿ ಮಜ್ಜನ
ಮಂಡನವಿಧಿಯಂ ಲತಾಂಗಿ ನಿರ್ವರ್ತಿಸಿ ಭೂ ।
ಮಂಡಳಪತಿಗಱಿಪಿದೊಡೆರ್ದೆ
ಗೊಂಡದಱ ಫಲಂಗಳನಿತುಮಂ ಮನು ತಿಳಿದಂ ॥ ೨೮

ನಿಮಗೆ ತನೂಜಂ ದಿವದಿಂ
ದವೋಘಮವತರಿಸಿದಪ್ಪನಖಿಳವಿನೇಯ ।
ಪ್ರಮದಕರಂ ದಿವಿಜೇಂದ್ರ
ಪ್ರಮೋದಕರನೆನೆ ಗುಣಾಕರಂ ತೀರ್ಥಕರಂ ॥ ೨೯

ಎಂಬುದುಮಧೀಶವಚನಕ
ದಂಬಕಮೆಂಬೊಂದು ತೆಂಕಣೆಲರೊಳ್ ನನೆಪೋ ।
ಯ್ತುಂಬಿನಮಾಕೆಯ ತನುಲತೆ
ತುಂಬಿದುದತಿಬಹಳಪುಳಕವಿಪುಳಶ್ರೀಯಿಂ ॥ ೩೦

ವ॥ ಅನ್ನೆಗಂ ಪೂರ್ವೋಕ್ತಸರ್ವಾರ್ಥಸಿದ್ಧೀಶ್ವರನಾಭುವನಾಂಬಿಕೆಯ ಮುಖಾಂಬುಜಾತಮಂ ಪೊಕ್ಕುಮಾಗರ್ಭಸರೋವರಾಂಬುವಿನೊಳ್ ಚಂದ್ರಬಿಂಬದಂತೆ ಸಂಕ್ರಮಿಸಿದಾಗಳಾಗರ್ಭಸ್ಥಿತಾರ್ಭಕನ ವದನಚಂದ್ರನಿರ್ಗತಾಚ್ಛಜಳಚಂದ್ರಿಕೆಯೊಳೊದವಿದಂತಾಮಹಾದೇವಿಯ ಮುಖೇಂದುಮಣಿದರ್ಪಣಲಾವಣ್ಯರಸವಿಸರಮನೊದವಿಸೆ ವಿಕಚಧವಳಕಮಳದಳದೀರ್ಘವಿಳೋಚನಂಗಳಾಲಾವಣ್ಯರಸಪ್ರವಾಹಕ್ಕಾಯತಪ್ರಯಾಣಂಗಳಂ ಪೋಲ್ತುಗರ್ಭಂ ಬಳೆಯೆ ಬಳೆಯೆ,

॥ ಉ ಜ್ಜ್ವ ಳ ॥

ಬಸಿಱ ತೆಳ್ಪಳಿದತ್ತೆ ಮೊಗಂ ಬೆಳ್ಪೇಱಿದುದೇ ಕುಚಚೂಚುಕಂ
ಮಸುಳ್ದವೇ ತ್ರಿವಳೀರುಚಿಯುಂ ಮೇಣ್ಕುಂದಿತೆ ಮುನ್ನಿನ ಚೆಲ್ವನ ।

ಪ್ಪಸಿಯುಬಾಸೆಗೆ ಕರ್ಪಸದತ್ತೀ ಚೋದ್ಯಮಿದೆಂದು ಮಱಲ್ದು ಬ
ಣ್ಣಿಸಿದರಿಂದ್ರನ ಕಾಂತೆಯುರಂತರ್ವರ್ತ್ತಿಯನಾನೃಪಪತ್ನಿಯುಂ ‖ ೩೧

ಜ್ಞಾನಮಯಂ ತೇಜೋನಿಧಿ
ತಾನಿರ್ದುಂ ತಾಯ ಗರ್ಭದೊಳ್ ಪೀಡೆಯನಂ ।
ತೇನಂ ಮಾಡಿದನಿಲ್ಲ ಕೃ
ಶಾನುವ ನೆಲೆಯಳುರದಂತೆವೊಲ್ ಕನ್ನಡಿಯುಂ ‖ ೩೦

ವ॥ ಗರ್ಭಾವತರಣಂ ಆಷಾಢಬಹುಳಬಿದಿಗೆಯುತ್ತರಾಷಾಢಾನಕ್ಷತ್ರದ ಬೆಳಗಪ್ಪ ಜಾವದೊಳ್ ಗರ್ಭಕ್ಕವತರಿಸಲೊಡಂ ದೇವೇಂದ್ರಂ ಚತುರ್ನಿಕಾಯಾಮರರ್ವೆರಸಿ ಪ್ರಥಮಕಲ್ಯಾಣಮಂ ನಿರ್ವರ್ತಿಸಿದಂ.

ಪಳಿಕಿನ ಕೊಡದೊಳ್ ಸೊಡರ್ಗುಡಿ
ಬೆಳಗುವವೊಲ್ ಶುದ್ಧಗರ್ಭಗೃಹದೊಳ್ ತೇಜೋ ।
ನಿಳಯಂ ಬೆಳಗಿದನಱಿವಿನ
ಬೆಳಗಿನ ಮೊಳೆ ಮೊಳೆತು ಬಳೆವುದೊಂದಚ್ಚರಿಯೇ ‖ ೩೩

ಸುರತಾರಂಭವಿಭೂತಿಯೊಂದು ತಣಿವಂ ಚಿತ್ತಕ್ಕೆಮಾಡಲ್ ಮುಖಾಂ
ಬುರುಹಾಮೋದಮೆ ಸಾಲ್ಗುಮೆಂದು ಮನದೊಳ್ ತಾಳ್ದಿರ್ದದೊಂದಕ್ಕಱಿಂ।
ಮರುದೇವೀವದನಾಂಬುಜಾತರಸಮಂ ಪೀರ್ದಂ ನೃಪಂ ತುಂಬಿ ಕೇ
ಸರಮಂ ಮುಟ್ಟದೆ ಬಂದು ಪದ್ಮಿನಿಯ ಪದ್ಮಾಮೋದಮಂ ಪೀರ್ವವೊಲ್ ‖

ವ॥ ಅಂತು ನಿಜಮನೋನಯನಕಾಂತ ಕಾಂತಾವದನರಸಸರಸಿಜಸೌರಭಮನಾಸ್ವಾದಿಸಿ,

ಕಿಡಿಸಲ್ ಪಂಕಜದರ್ಕನೇಂ ನೆಱೆಯದೋ ನೇತ್ರೋತ್ಪಳಾನಂದಮಂ
ಪಡೆಯಲ್ ಸಾಲದೊ ಮನ್ಮಥಂಗೆ ಜಯಮಂ ಮೋಹೀಯದೋ ಸಾಲದೇಂ ।
ಗಡವಿಾಕಾಂತೆಯ ವಕ್ತ್ರಚಂದ್ರನೆಲೆ ತಾನೇನೆಂದು ಚಂದ್ರಂ ನಭ
ಕ್ಕಡರ್ದಂ ಗೆಲ್ಲದೆ ತನ್ನೊಳುಳ್ಳಮೃತಮಂ ಬಿಂಬಾಧರಸ್ಥಾಮೃತಂ ‖ ೩೫

ವ॥ ಅಂತು ನಾಭಿರಾಜನನುನಯಪ್ರಚುರವಚನರಚನೆಗಳನಂತಃಕರುಣಾನುರಾಗಮಂ ಮಾಡೆಯುಮಮರಮನೋರಮೆಯರುಂ ಮನೆಮುಱಿದು

ನಿಜಮನೋರಥಂಗಳಂ ಸಲಿಸೆಯುಮನುಕ್ರಮದೊಳ್ ಪರಿಪೂರ್ಣಪ್ರಸವ
ಸಮಯದೊಳ್,

ಬರೆ ಚೈತ್ರಂ ಕೃಷ್ಣಪಕ್ಷಂ ದೊರೆಕೊಳೆ ನವಮೀವಾಸರಂ ಪೊರ್ದೆಲೋಕೋ
ತ್ತರಮಾಗಿರ್ದುತ್ತರಾಷಾಢದೊಳತಿಶುಭದಂ ಬ್ರಹ್ಮಯೋಗಂ ಮನಂಗೊಂ
ಡಿರೆ ಭಾಸ್ವನ್ನಾಭಿರಾಜಾಂಗನೆ ವಿಶದಯಶೋಭಾಗಿಯಂ ಭವ್ಯಪದ್ಮಾ
ಕರಬೋಧಾದಾಯಿಯಂ ತಿಗ್ಮಕರನುದಯದೊಳ್ ಪುತ್ರನಂ ಪೆತ್ತಳಾಗಳ್ ॥

ವ॥ ಆತ್ರಿಳೋಕತಿಳಕನ ಜನ್ಮೋತ್ಸವದೊಳೇಕಸಮಯಸಮವತೀರ್ಣಸರ್ವರ್ತುಕನಂದನವಿಕಸದಶೋಕವಿಕಚಮಲ್ಲಿಕಾಬದ್ಧಕುಟ್ಮಳಾಡಂಬರಕದಂಬಸಾನಂದಾರವಿಂದವಿಕಸಿತಸಿಂಧುವಾರಪ್ರಬುದ್ಧಲೋಧ್ರಂಗಳಂ[1] ರಾಗವಂ ಬೀಱುವಂತೆ ಮುಗುಳ್ನಗೆನಗುವಂತೆ ಪುಳಕಮನೊಳಕೊಂಡಂತೆ ನಗೆಗಣ್ಗಳ ಪೊಳೆಪಂ ಕೆದಱಿದಂತೆ ಚಿನ್ನಪೂಗಳಂ ಮೆಱೆವಂತೆ ಚಂದ್ರಕಬಳಮಂ ತೊಡೆವಂತೆ ಮಹೀಕಾಂತೆ ಸೊಗಯಿಸೆ, ನಿಜಪರಿರಕ್ಷಣಕ್ಷಮಕ್ಷಮಾವಲ್ಲಭಲಾಭಪ್ರಮುದಿತಮೇದಿನೀಹೃದಯದಂತೆ ಜಳಮಪಗತಕಲುಷಮಾಗೆ, ಕರ್ಮಭೂತಳೋಪಸರ್ಗವಿಧ್ವಂಸನನಿಮಿತ್ತಮಾಗಿ ನೀರಾಜನಂಗೆಯ್ವಂತೆ ತದ್ಧರಾನಳಂ ದಕ್ಷಿಣಾವರ್ತಮಾಗಿ ಪಜ್ಜಳಿಸೆ, ಗಗನಗಂಗಾಶೀಕರನಿಕರಂಗಳಿಂದಮಾನಂದನಯನಜಲಂಗಳಂ ಸೂಸುವಂತೆ ದಿವ್ಯಾನಿಳಂ ತೀಡೆ, ಶರದ್ವಿಧುವಿಶದತದೀಯಯಶಃಪ್ರಸರಕ್ಕವಕಾಶಂಗುಡುವಂತೆ ಜಲಧರಪಟಲನಿರೋಧರಹಿತಮಾಕಾಶಮತಿಪ್ರಕಾಶಿತಾಶಾಂತಮಾಗೆ,

ಪುರುಪರಮೇಶ್ವರನಿಳೆಗವ
ತರಿಸಿದನಿಂದರಸುವಡೆದೆವೆಂಬಂತೆ ವಲಂ ।
ಪರಮಾನಂದಪರಂಪರೆ
ದೊರೆಕೊಂಡತ್ತಿಂತು ಪಂಚಭೂತಂಗಳೊಳಂ ॥ ೨೬

ವ॥ ಆಗಳುತ್ತುಂಗಪ್ರಾಸಾದಕೂಟಕೋಟಿಗಳ ಮೇಲೆ ಪುರಶ್ರೀವಿಳಾಸಿನಿಯ ರಾಗದ ದಾಂಗುಡಿ ಮಿಳಿರ್ವಂತೆ ಮಿಳಿರ್ವ ನವಾಮ್ರಕಮ್ರಕಿಸ

[1]ಕ—ಪ್ರಬುದ್ಧ ಲೋಕ ಹೃದಯದಂತೆ ಮಾರ್ದವಂಗಳಿಂ.

ಲಯುರಕ್ತಾಂಶುಕಧ್ವಜಂಗಳುಂ, ಆಕೆಯ ಶೃಂಗಾರಮೆ ಪಲ್ಲವಿಸಿದಂತೆ ಮಹಾದ್ವಾರತೋರಣಸ್ತಂಭಂಗಳೊಳಗೆಸೆವಭಿನವೋಲ್ಲಸತ್ಪಲ್ಲವಸಂದಾನಿತಪಾಂದರವಂದನಮಾಲೆಗಳುಂ, ಆಕೆಯ ವಿಳಾಸಹಾಸಮೆ ಪೊಱಪೊಣ್ಮಿದಂತೆ ಬೀದಿಬೀದಿಗಳೊಳೆಡೆಗಿಱಿದು ಕೆದಱಿದ ಕುಸುಮರಜಂಗಳುಂ, ಆಕೆಯ ನಿರ್ಭರಾನಂದಸಾಂದ್ರಲಾವಣ್ಯದ್ರವಮೆ ದೆಸೆದೆಸೆಗೆ ಪಸರಿಸಿದಂತೆ ಕುಂಕುಮಚ್ಛದಪಂಕಚ್ಛಟಾಚ್ಛಾದನದೊಳೆ ಸೊಗಯಿಸುವ ಗೃಹಾಂಗಣಂಗಳುಂ, ಆಕೆಯ ಪರಿವಾರವಾರಾಂಗನಾಗಣದಂತೆ ಯೌವನಮದಮುದಿತಮಾರ್ದಳಿಕಮಾಂಶಿಕಪ್ರಹನ್ಯಮಾನವಾದ್ಯಮೃದಂಗವಂಶನಿನದಲಯಚ್ಛಂದಸುಂದರನಟತ್ಸಂದರೀಸಂದೋಹಮುಂ ಅಪೂರ್ವರಮಣೀಯಮಾಗೆ,

ವಿತತೋದ್ಧೃತ್ಪಟವಾಸವಾಸಿತದಿಶಾಕಾಂತಾಗಣಂ ನಿರ್ಭರೋ
ತ್ಥಿತಪಿಷ್ಟಾತಕಪಿಂಜರೀಕೃತವಿಯಚ್ಚಕ್ರಂ ಧ್ವನತ್ತೂರ್ಯಸಂ ।
ತತಿನಾದಪ್ರತಿಪೂರಿತಾಖಿಳಕುಳಕ್ಷೋಣೀಧ್ರಕುಂಜಂ ಜಗ
ಕ್ಕತಿಚೋದ್ಯಾವಹಮಾಗೆ ಪೆಂಪುವಡೆದತ್ತಂತಾತ್ಮಜನ್ಮೋತ್ಸವಂ ॥ ೩೮

ವ॥ ಆಪ್ರಮೋದಪ್ರಸ್ತಾವದೊಳ್,

ತ್ರಿದಶಾನೇಕಾನಕಂಗಳ್ ಮೊಳಗಿದುವು ಕರಾಸ್ಫಾಳನಂ ದೇವರಿಂದಾ
ಗದೆ ಮುಂ ಕಲ್ಪದ್ರುಮಂಗಳ್ ಪೊಸತಲರ್ದಲರಂ ತಾಮೆ ಸಾಲ್ವನ್ನೆಗಂ ಸೂ
ಸಿದುವೇಕಾಯಿತ್ತು ಕಿರೀಟಕ್ಕವನತಿಯೆನೆ ದೇವೋತ್ತಮಾಂಗಂಗಳುಂ ಬಾ
ಗಿದುವಾತ್ರೈಲೋಕ್ಯನಾಥೋದಯಮನಱಿಪುವಂತಾತ್ರಿಳೋಕಕ್ಕಮಾಗಳ್॥

ಭವನವನಜ್ಯೋತಿಃಕ
ಲ್ಪವಾಸದೊಳ್ ಕ್ರಮದೆ ಶಂಖಭೇರೀಕಂಠೀ ।
ರವಘಂಟಾಧ್ವನಿಗಳ್ ನೆಗ
ೞ್ದುವು ಭೋಂಕೆನೆ ಸಕಳವಿಷ್ಟಪಾಶ್ಚರ್ಯಂಗಳ್ ॥ ೩೯

ತ್ರಿದಶಾಸನಂಗಳಲ್ಲಾ
ಡಿದುವು ಜಗದ್ಗುರುಗೆ ಬೇಗಮುಚ್ಛ್ವಾಸನದಿಂ ।
ದಿದಿರೇೞೆಮೊಂದು ಪೇೞ್ವವೊ
ಲದೇಂ ಕರಂ ತೀರ್ಥಕರರ ಪುಣ್ಯಂ ಪಿರಿದೋ ॥ ೪೦

ವಾಸವನಾಸನಕಂಪದಿ
ನಾಸಮಯದೊಳವಧಿಯಂ ಪ್ರಯೋಗಿಸಿ ಬೋಧಾ!
ವಾಸಪ್ರಿಯನುದಯಮನಱಿ
ದಾಸನದಿಂದೆರ್ದು ಮೂಱುಸೂಳ್ ಪೊಡೆವಟ್ಟಂ ॥ ೪೧

ವ॥ ಅಂತು ಪೊಡೆವಟ್ಟು ಜನ್ಮಾಭಿಷೇಕೋದ್ಯುಕ್ತಚಿತ್ತನಾದಾಗಳ್ ಚತುರ್ನ್ನಿಕಾಯಾಮರೇಂದ್ರಸಮುದಯಮಂಭೋಧಿವೇಳಾವಿಳಾಸದಿಂ ಸಾಮಾನಿಕತ್ರಯಸ್ತ್ರಿಂಶತ್ಪಾರಿಷದಾತ್ಮರಕ್ಷಲೋಕಪಾಳಾಭಿಯೋಗ್ಯಕಿಲ್ಬಿಷರೊಡನೆ ಗಜತುರಗರಥಪದಾತಿವೃಷಭಗಂಧರ್ವನರ್ತಕೀಪರಿಹಾಸಿಕಂ ಬೆರಸು ಬಂದು ಮುಂದೆ ನಿಲ್ವುದುಂ,

ನೆಗಪ್ದಾದೇವೇಂದ್ರರೆಲ್ಲಂ ಬಳಸಿ ಬರೆ ಮದಶ್ರೀಯುತೈರಾವತಸ್ಕಂ
ಧಗತಂ ನಾನಾತಪತ್ರಸ್ಥಗಿತದಶದಿಶಾಮಂಡಲಂ ದೇವತೂರ್ಯ್ಯ।
ನುಗದೇವೀಗೀತಜೈನಸ್ತವಸಮುಪಹಿತಾತ್ಮೀಯಚಿತ್ತಂ ವಿಳಾಸಂ
ಮಿಗೆ ಸೌಧರ್ಮೇಂದ್ರನಂದಾಶಚಿ ವೆರಸು ಮಹೋತ್ಸಾಹದಿಂ ಬಂದನಾಗಳ್

ವ॥ ಅಂತು ಗಗನತಳದಿನವನೀತಳಕ್ಕವತರಿಸಿ ವಿವಿಧಮಣಿನಿಕೇತನಾಗ್ರಾವಲಗ್ನಕೇತುಮಾಳಾವಿಳಸಿತಸಾಕೇತಮಂ ಬಳಸಿ ದೇವನಿಕಾಯಮಿರೆ ಸೌಧರ್ಮೇಂದ್ರಪ್ರಮುಖಚತುರ್ನಿಕಾಯಾಮರೇಂದ್ರವೃಂದಂ ನಾಭಿರಾಜರಾಜಗೇಹಾಂಗಣದೊಳ್ ಸಂದಣಿಸಿ ಬಂದಿರೆ ಶುಚಿಶಚಿಮಹಾದೇವಿ ತಿರೋಹಿತಶರೀರೆಯಾಗಿ,

ಮರುದೇವೀವಿಳಸತ್ಪ್ರಸೂತಿಗೃಹಮಂ ರತ್ನಪ್ರಭಾಭಾರಭಾ
ಸುರಮಂ ಪೊಕ್ಕು ತದಂಗನಾಂಕತಳದೊಳ್ ಬಾಲಾರ್ಕನಂ ಪೋಲ್ತು ಭಾ।
ಸುರತೇಜೋಧಿಕನಪ್ಪ ಬಾಳನನೊಱಲ್ದಕ್ಕರ್ತು ನೋಡುತ್ತುಮಿ
ರ್ಬ್ಬರುಮಂ ಮೂಮೆ ಸುರೇಂದ್ರಕಾಂತೆ ಬಲಗೊಂಡುದ್ಯನ್ಮನಃಪ್ರೀತಿಯಿಂ॥

ಎಱಗಿ ಜಗತ್ತ್ರಯಗುರುಗೆರ್ದೆ
ಯೆಱಕದೆ ಪೊಗಟ್ದಖಿಳಭುವನಜನನಿಯನಾಗಳ್।
ಮಱೆಯಿಸಿ ಮಾಯಾನಿದ್ರೆಯಿ
ನುಱೆ ಮಾಯಾಶಿಶುವನಿರಿಸಿ ಮುಂದಂಬಿಕೆಯಾ ॥ ೪೪

ಪಡೆಯಲ್ಕಾಗದ ನಿಧಿಯಂ
ಬಡವಂ ಪಡೆದಂತೆ ಕಮಳದಳಕರತಳದಿಂ ।
ಪಿಡಿದೆತ್ತಿಕೊಂಡ ಸಂತಸ
ದೊಡವೆಯನಾಂ ಪೊಗೞಲಱಿಯೆನಿಂದ್ರಾಂಗನೆಯಾ ॥ ೪೫

ಅಲರ್ದಲರ್ಗಣ್ಗಳ ನೋಟದೆ
ಸುಲಲಿತತನು ಶಿಶುವ ಮೆಯ್ಯ ತೀಟದೆ ತನಗ ।
ಗ್ಗಲಿಸಿದಲಂಪಂ ಕುಡೆ ಪೊಸ
ತಲರ್ದಂಕುರಿಸಿರ್ದ ಕಲ್ಪಲತೆಯನೆ ಪೋಲ್ತಳ್ ॥ ೪೬

ಮಂಗಳಮನೆ ಪಾಡುತ್ತುಂ
ಮಂಗಳಧಾರಿಣಿಯರಾಗಿ ಮುಂದಂ ನಡೆವಾ ।
ಶಾಂಗನೆಯರಿಂದೆ ದಿವಿಜೇಂ
ದ್ರಾಂಗನೆ ಕರಮೆಸೆದು ಹಂಸಗತಿಯೊಳ್ ಬಂದಳ್ ॥ ೪೭

ವ॥ ಅಂತು ಬಂದು ಜಗತ್ತ್ರಯಪತಿಯಂ ತ್ರಿದಶಪತಿಯ ನೀಡಿದ ಕೇಯೂರರಶ್ಮಿರಂಜಿತಭುಜಯುಗಳಕ್ಕೆ ನೀಡಿದಾಗಳ್ ದಿವಿಜಕುಜಜನಿತಸುಗಂಧದ್ರವ್ಯದ್ರವಸ್ಥಾಸಕಾಂಕಮಂ ನಿಜಾಂಕಮನೇಱಿಸಿಕೊಂಡು,

ತ್ರಿಜಗನ್ನಾಥನ ಮಜ್ಜನಕ್ಕೆ ಮಣಿಪೀಠಾಕಾರದಂತಾಗಿ ವಿ
ಶ್ವಜಗತ್ಪೂಜಿತಮಾಗಿ ಪೆಂಪುವಡೆದಾಹೇಮಾಚಳೇಂದ್ರಕ್ಕೆ ಕ ।
ಲ್ಪಜರಂ ಪೋಗಲೆ ಸನ್ನೆಗೆಯ್ಯೆ ಭಗವಜ್ಜನ್ಮಾಭಿಷೇಕೋತ್ಸವ
ಧ್ವಜಮಂ ಪೋಲ್ತುದು ರತ್ನರಂಜಿತಭುಜಾದಂಡಂ ಸುರಾಧೀಶನಾ ॥ ೪೮

ವ॥ ಆಗಳ್ ಸೌಧರ್ಮೇಂದ್ರನೇಱಿದೈರಾವತಗಜೇಂದ್ರಕ್ಕೆ ನಿಜಗಜೇಂದ್ರಂಗಳಂ ಪಕ್ಕುಮಾಡಿ,

ಹಿಮಕರಬಿಂಬನಿಭಚ್ಛ
ತ್ರಮನೀಶಾನೇಂದ್ರನೆತ್ತಿದಂ ತತ್ಕರವಿ ।
ಭ್ರಮದಿಂ ಪದಪೊದವೆ ಸನ
ತ್ಕುಮಾರಮಾಹೇಂದ್ರರಿಕ್ಕಿದರ್ ಚಾಮರಮಂ ॥ ೪೯

ಲಟಹಯುತಂಗಳ್ ದುಗ್ಧ
ಚ್ಛಟೋಜ್ಜ್ವಲಂಗಳ್ ತದಮರಚಮರರುಹಂಗಳ್ ।
ಸ್ಫುಟಹಸಿತಮುಕ್ತಿಲಕ್ಷ್ಮೀ
ಕಟಾಕ್ಷವಿಕ್ಷೇಪರುಚಿಯನೇಂ ತಾಳ್ದಿದುವೋ ॥ ೫೦

ವ॥ ಆಗಳ್,

ಎಱಗುವ ಮಕುಟಂಗಳ್ ಚೋದ್ಯಮೆಂದತ್ತಮಿತ್ತಂ
ನಿಱಿವ ಕರಯುಗಂಗಳ್ ಪೊಯ್ವ ದೇವಾನಕಂಗಳ್ ।
ಮುಱುಕದಮರಕಾಂತಾನರ್ತನಂಗಳ್ ಬೆಡಂಗಂ
ಮೆಱೆಯೆ ದಿವಿಜವೃಂದಂ ತಂದುದಂದೊಂದು ಚೆಲ್ವಂ ॥ ೫೧

ವ॥ ಆಪ್ರಸ್ತಾವದೊಳ್,

ನೆಗಪ್ದೈರಾವತದಂತಿಗಾದುದು ಮೊಗಂ ಮೂವತ್ತೆರಪ್ನ್ಲೋಟ್ಪೊಡಾ
ಮೊಗಮೊಂದೊಂದಱೊಳೆಂಟು ಕೋಡವಱೊಳಂತೊಂದೊಂದಱೊಳ್ ಪೂಗೊಳಂ।
ನೆಗಪ್ದೊಂದೊಂದೆಸದಿರ್ಕುಮಾಕೊಳಗಳಂತೊಂದೊಂದಱೊಳ್ ಚಿತ್ರಪ
ತ್ರಗಣಂ ಪದ್ಮಿನಿ ನಾಡೆ ಚೆಲ್ವನೊಳಕೊಂಡೊಂದೊಂದೆ ಕಣ್ಗೊಪ್ಪುಗುಂ ॥

ಪೊಸಪೂವಬ್ಜಿನಿಯೊಂದಱೊಳ್ ಸೊಗಯಿಕುಂ ಮೂವತ್ತೆರಱ್ಪೂವಿನೊಳ್
ಪೊಸಗಂಪಂ ಪುದಿದೊಪ್ಪಿ ತೋಱುವೆಸಳ್ಗಳ್ಮೂವತ್ತೆರಪ್ಚೆಲ್ವನ ।
ಪ್ಪೆಸಳೋರೊಂದಱ ಮೇಲೆ ಲೀಲೆ ಮಿಗೆ ಮೂವತ್ತಿರ್ವರೋರಂತೆ ನ
ರ್ತಿಸೆ ದೇವಾಂಗನೆಯರ್ ಬೆಡಂಗನೊಳಕೊಂಡತ್ತಿಂದ್ರರುಂದ್ರದ್ವಿಪಂ॥ ೫೨

ವದನಕ್ಕೆಮ್ಮ ತಳಕ್ಕೆ ನೀಳ್ದ ನೆಗೆಗಣ್ಗಂ ತಾಂ ಗಡಂ ತನ್ನ ನೀ
ಳ್ದ ದಳಂಗಳ್ ಗಡ ಪೋಲ್ವೆಯೆಂಬ ಸೆಣಸಿಂ ಮಿಕ್ಕೇವದಿಂದಿಕ್ಕಿ ಮೆ ।
ಟ್ಟಿದರೀಕಾಂತೆಯರೀಸರೋರುಹದಳವ್ರಾತಂಗಳಂ ತಪ್ಪದೆಂ
ಬುದನೆಂಬನ್ನೆಗಮೇಂ ಬೆಡಂಗೆಸೆದುದೋ ದೇವಾಂಗನಾನರ್ತನಂ ॥ ೫೪

॥ ಮಾ ೪ ನಿ ॥

ನವಕಮಳದಳಂಗಳ್ ಭೀಕರಂ ಬಲ್ಪುಮಾಗಿ
ರ್ಪುವೆ ತಳಕೆ ತಳಂಗಳ್ ನೋಯುವೇ ಮೆಟ್ಟಿದಂದೆಂ ।

ದವಱಿಸಳನವಳ್ದರ್ ಮೆಟ್ಟಿದರ್ ಮೆಟ್ಟರೆಂಬಂ
ತವಯುವದೊಳ್ ಲೀಲಾನೃತ್ಯದಿಂ ಕಣ್ಗೆವಂದರ್ ॥ ೫೫

ನಡೆನೋಡಲ್ ರೂಪು ಕೇಳಲ್ ನುಡಿ ಪುರದ ಜನಕ್ಕಾಯ್ತು ಮುನ್ನಂತೆ ಮೇಗ
ಣ್ಗಡರ್ದಾಗಳ್ ಮೆಯ್ಯ ಕಾಣಲ್ ಕಳಕಳಮಿನಿಸಂ ಕೇಳಲಾಯ್ತಂತುಮತ್ತಂ
ನಡೆಗೊಂಡಾಗಳ್ ತನುವ್ಯಕ್ತಿಯನಱಿಯಲಣಂ ಬಾರದಾಯ್ತತ್ತಣಿಂ ಕಾ
ಣ್ಬೆಡೆಗಂ ಗೆಂಟಾದುದೆಂಬಂತಿರೆ ಗಗನತಳೋದಗ್ರಮಿಯಾಯ್ತಿಂದ್ರಸೈನ್ಯಂ ॥

ವ॥ ಆಗಳ್ ಮೇರುಗಿರೀಂದ್ರಂಬರಮಿಂದ್ರನೀಲಶಿಲಾತಳಮಣಿಮಯಸೋಪಾನಪಙ್ಕ್ತಿತ್ರಯರೂಪದಿನಂಬರಮೆ ಜಿನರಾಜಭಕ್ತಿಯಿಂ ಪರಿಣಾಮಿಸಿದಂತೆ ಸೊಗಯಿಸಿರ್ದ ಸೋಪಾನಪಙ್ಕ್ತಿಮಾರ್ಗಂಗಳೊಳ್ ನಿಜಸ್ತಂಬೇರಮಘಂಟಾಟೋಪಂ ಬೆರಸಿಂಬಾಗಿ ಪೋಗೆ ಪೋಗೆ,

ಕಡುಗೆಂಪೇಱಿತ್ತು ನಾನಾಭರಣಕಿರಣದಿಂದಾಗಳಾಕಾಶದೊಂದೊಂ
ದೆಡೆ ಬಿಳ್ಪೇಱಿತ್ತು ಚಂಚಚ್ಚಮರರುಹಸಹಸ್ರಂಗಳಿಂ ವ್ಯೋಮದೊಂದೊಂ
ದೆಡೆ ಕರ್ಪೇಱಿತ್ತು ದೇವದ್ವಿರದದ ಘಟೆಯಿಂದಂನಭೋಭಾಗದೊಂದೊಂ
ದೆಡೆಯೆಂಬಂತಾಗೆ ಚೆಲ್ವಾವೆಡೆಯುಮೆಸೆವಿನಂ ರಯ್ಯಮಾಯ್ತಿಂದ್ರಸೈನ್ಯಂ ॥

॥ ಪೃಥ್ವಿ ॥

ಅದೊಂದೆಡೆ ಸುರಾನಕಪ್ರಕಟಘೋಷದಿಂ ಚೆಲ್ವವೆ
ತ್ತದೊಂದೆಡೆ ಸುರಾಂಗನಾಮಧುರಗೀತಿಯಿಂದೊಳ್ಪವೆ ।
ತ್ತದೊಂದೆಡೆ ಸುರೇಂದ್ರಸೌಂದರಿಯರಾಟದಿಂ ಗಾಡಿವೆ
ತ್ತದೇಂ ಗಗನಮಂಡಲಂ ನೆಱೆಯೆ ಶೋಭೆಯಂ ಪೆತ್ತುದೋ ॥ ೫೭

ನಾಕಿನಿಕಾಯಂ ಜ್ಯೋತಿ
ರ್ಲೋಕಮನವಯವದಿನುಱೆಯೆ ಪೋಗೆ ಬೞಿಕ್ಕಾ ।
ಳೋಕಿಪುದಾಯ್ತದನುತ್ಪಳ
ಕೋಕನದಾಕರಮೆ ಗೆತ್ತು ವಿಸ್ಮಯದಿಂದಂ ॥ ೫೮

ವ॥ ಅಂತು ಪೋಗಿ ಮಂದರಾಚಳಮನೈದಿದಾಗಳ್,

ಇದಿರಂ ಬರ್ಪಂತುಟಾಯ್ತುಚ್ಚಳಿಸುವಮರತೂರ್ಯಪ್ರತಿಧ್ವಾನದಿಂ ರಾ
ಗದಿನಲ್ಕೆರ್ತಾಡುವಂತಾಯ್ತನಿಲವಶಚಳಚ್ಛಾಖಿಶಾಖಾಳಿಯಿಂ ಬಂ |
ದಿದಿರ್ಗೊಳ್ವಂತಾಯ್ತು ಕಲ್ಪಕ್ಷಿತಿರುಹಬಹುಪುಷ್ಪಾರ್ಘ್ಯದಿಂದೆಂಬಿನಂ ಚೆ
ಲ್ವಿದಿರ್ಗೊಂಡಂತಿಂದ್ರಶೈಲಕ್ಕತಿಶಯಮಹಿಮಂ ಬಂದೊಡಂದಾದಿದೇವಂ॥ ೬೦

ಕಂಬುಲತಾಸುಲಲಿತಲವ
ಣಾಂಬುಧಿಪರಿಧಾನಮಾಗೆ ಚೆಲ್ವಂ ಪಡೆದೀ |
ಜಂಬೂದ್ವೀಪಪ್ರಭುಗಿದು
ಪೊಂಬೆಸದೊಳ್ ಸಮೆದ ಮಕುಟಮಿರ್ಪಂತಿರ್ಕುಂ ॥ ೬೧

ಎಳಸಿ ಸುರಸಮಿತಿ ಕಲ್ಪಂ
ಗಳ ದೆಸೆಯನೆ ಬಿಸುಟು ರಮಿಯಿಸುತ್ತುಮದಲ್ಲಿಂ |
ತಳರದುದಱನೀಸುರನಗ
ಮೊಳಕೊಂಡುದು ತಾನೆ ನಾಕಲೋಕಶ್ರೀಯಂ ॥ ೬೨

ಸಾಸಿರಯೋಜನಮುಮುರ್ದು ಸು
ರಾಸುರಸಂಸೇವ್ಯಮಾಗಿ ತೊಂಭತ್ತೊಂಬೈ |
ಸಾಸಿರಯೋಜನಮಂ ನೆಗೆ
ದೀಸುರಗಿರಿ ಪೆಂಪನೇಂ ಪುದುಂಗೊಳಿಸಿದುದೋ ॥ ೬೩

ಜಿನಸವನಮುಂಗಳಕ್ಕಾ
ನೆ ನೋಂತೆನೆಂಬಂತೆ ಶಿಖರಿ ನಿಜಶಿಖರದ ಪೆಂ |
ಪನೆ ಮೆಱೆದು ಪೊಸತೆ ಮಾಡಿದು
ದೆನಗಂ ವಿಸ್ಮಯಮನದಱನೀನಗಮಾಗಳ್ ॥ ೬೪

ಜಿನನಿಳಯಂಗಳ್ ನಾಲ್ಕುಂ
ಬನದೊಳಮವು ನಾಲ್ಕು ನಾಲ್ಕು ನೆಲಸಿರೆ ಗಿರಿ ಪಾ |
ವನಮುಂ ಪ್ರಸಿದ್ಧಮುಂ ಸುರ
ವಿನುತಮುಮಾಯ್ತಿದಱ ದೊರೆಗೆ ಗಿರಿಗಳುಮೊಳವೇ ॥ ೬೫

ವ॥ ಎಂದು ಮಂದರಮಹೀಧರದ ಮಹಿಮೆಯನಮರೇಂದ್ರನಮರಸಮಿತಿಗೆಲ್ಲಂ ಪೇೞ್ದು ಪೊಗೞುತ್ತುಮದಂ ತ್ರಿಃಪ್ರದಕ್ಷಿಣಂಗೆಯ್ದು,

ತೆರಳ್ದು ಸುರಭೂರುಹಪ್ರಸವಧೂಳಿಯುಂ ಪೊಕ್ಕಳಂ
ಸುರುಳ್ದು ಸರಸೀಸರೋರುಹದಳಂಗಳಂ ಬಂದು ಪಂ ।
ದರೋಪವನಸಂಭವಂ ನಯದಿನಾಡಿಸಿತ್ತಾಗಳ
ಪ್ಸರಃಪ್ರಕರದೊಳ್ಗುರುಳ್ಗಳನದೊಂದು ಮಂದಾನಿಳಂ ॥ ೬೬

ಸುರಗಿರಿಯುಂ ಸುರನಿಕರಂ
ತರತರದಡರ್ಪುಗಳಮರಗಣಿಕೆಯರ ಮನಂ ।
ವಿರುಪದಳನಿಕರದೊಡನೊಡ
ನಿರದೆಱಗಿದುವಮರತರುಲತಾಂತಾವಳಿಯೊಳ್ ॥ ೬೭

ಸುರಗಿಗಿವು ಲಂಬಣಕ್ಕಿವು
ಬರಗಲೆಗಿವು ಮುಗುಳ್ಗಳಿವ್ಮ ಪೇಱಳೆಗಿವು ನೂ ।
ಪುರರಚನೆಗಿಂತಿಪೆಂದಾ
ದರದಿಂದಂ ಕೊಯ್ದರಾಯ್ದು ದಿವಿಜಾಂಗನೆಯರ್ ॥ ೬೮

ಪೊಸಗಂಪುಗೊಂಡುಪುಪಱೊಳ್
ಪಸದನಮುಂ ನೆಱೆಯೆ ತಮಗೆ ಮಾಡಿಯುಮೆಂತುಂ ।
ಪೊಸಪೂವಿನ ಪೊಸದುಡುಗೆಯು
ಪಸಪ್ರೋಡಿದುದಿಲ್ಲ ದಿವಿಜವನಿತೆಯರ್ಗಳ್ ॥ ೬೯

ಅಮರೇಶ್ವರನಿಂ ಶಚಿಯಿಂ
ನಮಗಿದನಾಘ್ರಾತಪೂತಮೆನಿಸಿ ಪರೀತ ।
ಭ್ರಮರಾವತಂಸಮಾದುದು
ನಮೇರುಮಂದಾರಪಾರಿಜಾತಸ್ತಬಕಂ ॥ ೭೦

ಘನಸಾರಸರಳಚಂದನ
ವನಮೃದುಪಲ್ಲವಮನಗ್ರಹಸ್ತದೆ ಕೊಂಡೊ ।
ಯ್ಯನೆ ಬೀಸೆ ಚೆಲ್ವುವಡೆದುದು
ಜಿನಂಗೆ ಚಾಮರಮನಿಕ್ಕುವಂತಮರಗಜಂ ॥ ೭೧

ಇಡಿದಿರೆ ಪೂತಮರದ್ರುಮ
ದಿಡುವುಗಳೊಳ್ ಬದ್ಧವಣದ ಪುಡಿಪ್ರೊಲ್ ಬೆಸ್ಕೊಳ್ ।
ಬಿಡದಲುಗೆ ಕುಸುಮಕುಳರಜ
ಮಡರ್ದುದು ಸುರಗಿರಿಯನಿಂದ್ರರುಂದ್ರಗಜೇಂದ್ರಂ ॥ ೭೦

ವ॥ ಅಂತು ಬಂದು ಪಾಂಡುಕವನದ ಪೂರ್ವೋತ್ತರಾಶಾಮುಖನಿವಾಸಿಯಾಗಿ ಶತಯೋಜನವಿಷ್ಕಂಭದೊಳಂ ಪಂಚಷಷ್ಠ್ಯಯೋಜನವಿಸ್ತಾರದೊಳಮಷ್ಟಯೋಜನೋತ್ಸೇಧದೊಳಮಷ್ಟಮಿಾಚಂದ್ರಾಕೃತಿಯೊಳಮಷ್ಟಮಂಗಳಪರಿವೇಷ್ಟನದೊಳಂ ನೆಱೆದು,

ಕ್ಷೀರೋದವಾರಿಧಾರಾ
ಪೂರದ ಚೆಲ್ವಿಂಗೆ ಸೆಣಸುವಂತಭಿನವನೀ ।
ಹಾರದ ಬೆಳ್ಪನೆ ಬೀರಿಸಿ
ಬೀರಿಸಿ ಪಾಂಡುಕಶಿಳಾತಳಂ ಸೊಗಯಿಸುಗುಂ ॥ ೭೩

ಕಡೆಯೊಳ್ ತಗುಳ್ದ ರತ್ನದ
ಬೆಡಂಗುವೆತ್ತೆಸೆವ ದೀಪ್ತಿವಳಯದ ಚೆಲ್ವಂ ।
ಪಡೆದು ಸಲೆ ದೇವಚಾಪದ
ನಡುವಣ ಲಲಿತಾರ್ಧಚಂದ್ರನಿರ್ಪಂತಿರ್ಕುಂ ॥ ೭೪

ತನ್ಮಧ್ಯಭಾಗದಲ್ಲಿ ಕ
ನನ್ಮಣಿಮಯಸಿಂಹಪೀಠದೆರಡುಂ ಕೆಲದೊಳ್ ।
ಜನ್ಮಾಭಿಷೇಕಕಾರ್ಯದೊ
ಳುನ್ಮನರಪ್ಪಿಂದ್ರರೆರಡುಮಾಸನಮಿರ್ಕುಂ ॥ ೭೫

ವ॥ ಅಲ್ಲಿ ದೇವರಾಜನನೇಕಮಣಿಖಚಿತವಿಚಿತ್ರಸ್ತಂಭಸಂಭೃತಮುಮುತ್ತುಂಗವಸ್ತ್ರಾಂಗಕುಜಸಮುದ್ಭೂತವಸನವಿನಿರ್ಮಿತವಿತಾನವಿರಾಜಿತಮುಂ ತಾರಾತರಳಮುಕ್ತಾಫಳಲಂಬಲಂಬೂಷಭೂಷಿತಮುಂ ಅವಲಂಬಿತಸುರಭಿಕುಸುಮದಾಮಾಕೀರ್ಣಮುಂ ಚತುರ್ನಿಕಾಯಾಮರೇಂದ್ರವೃಂದಸಂಕೀರ್ಣಮುಮಪ್ಪ ಶ್ರೀಮಂಟಪಮಂ ವಿರಚಿಸಿ ಮೃಗರಾಜವಿಷ್ಟರದೊಳ್ ಬಾಳಕನಂ ಪೂರ್ವಾಭಿಮುಖನಿವಿಷ್ಟನಂ ಮಾಡುವುದುಂ,

ತನು ಕಿಱಿದಾದೊಡಮುದ್ಯ
ತ್ತನುಪ್ರಭಾಪ್ರಸರಮೆಸೆದು ಪಸರಿಸಿ ಸಿಂಹಾ ।
ಸನಮಂ ಪುದಿದಿರೆ ದೇವಂ
ಕನಕಕನಚ್ಛಿಖರಿಶಿಖರಶೇಖರನಾದಂ ॥ ೭೬

ವ॥ ಆಗಳಾಸಾಧರ್ಮೇಂದ್ರನುಮೈಶಾನೇಂದ್ರನುಂ ಸಿಂಹಾಸನದೆರಡುಕೆಲದೊಳಂ ದಕ್ಷಿಣೋತ್ತರಭಾಗದೊಳದಿರಾಗಿರ್ದ ಮಣಿಮಯಭದ್ರಾಸನಂಗಳೊಳ್ ಕುಳ್ಳಿರ್ದು ದಿಕ್ಪಾಳರುಮನವರವರ ದಿಗ್ಭಾಗದೊಳೆ ನಿಜಪರಿವಾರವಾಹನಾಂಗನಾಯುಧಸಮೇತಮಿರಿಸಿ ಶೇಷಾಶೇಷದೇವನಿಕಾಯಮುಮನುಚಿತಸ್ಥಾನದೊಳ್ ನಿಱಿಸಿ ಜನ್ಮಾಭಿಷವಣಪರಿಣತಾಂತಃಕರಣನಾದಾಗಳ್,

ಸುರಕರನಿರ್ಭರಹತಿಯಿಂ
ಸುರದುಂದುಭಿನಿನದಮುಮರವನಿತಾವದನಾಂ ।
ಬುರುಹದಿನೊರ್ಮೆಯೆ ಮಂಗಳ
ಪರಂಪರಾಗೀತನಿನದಮೊದವಿತ್ತೆತ್ತಂ ॥ ೭೭

ದುರಿತಘನತಿಮಿರಮೆತ್ತಂ
ತೆರಳ್ದು ಜಿನಸವನಮಂಗಳಕ್ಕಗಿದಾಗಳ್ ।
ಪರೆವಂತಾದುದು ಕಾಳಾ
ಗರುಧೂಪಶ್ಯಾಮಧೂಮಮಾತ್ತವ್ಯೋಮಂ ॥ ೭೮

ಕಳಮಧವಳಾಕ್ಷತಂಗಳ
ಪೊಳೆವಲರ್ಗಳ ಚಂದನದ್ರವೋನ್ಮಿಶ್ರಜಲಂ ।
ಗಳ ಪೊಳೆಪಿನೊಳೆಸೆದು ಮಿಯು
ತ್ತಳಂ ಬರಂ ನೆಗೆದುದಿಂದ್ರನರ್ಘ್ಯೋದ್ಧರಣಂ ॥ ೭೯

ವ॥ ಅಲ್ಲಿಂ ಬಳಿಯಮಶೋಕಪಲ್ಲವೋಲ್ಲಸಿತಚಂದನಚರ್ಚಿತಮಾಳತೀಮಾಳಾವೇಷ್ಟಿತಮಣಿದರ್ಪಣಪ್ರಸಾರಿತವಿಮಳಾರ್ಣವಪಯಃಪೂರ್ಣಕಳಧೌತಕಳಶಂಗಳಂ ಕಳಶೋದ್ಧಾರಮಂತ್ರಪೂರ್ವಕಂ ಪ್ರಣತಿಪ್ರಸ್ತವನಪುರಸ್ಸರಂ ಮಾಡಿ ಪ್ರಥಮಕಲ್ಪೇಶ್ವರನುಮೈಶಾನೇಂದ್ರನುಮೆತ್ತಿಕೊಂಡು,

ಇತರೇಂದ್ರರ್ ಪರಿಚಾರಕಪ್ರಭೃತಿಯಿಂ ಮುಂದಾಡೆ ದೇವಾಂಗನಾ
ನ್ವಿತದೇವಾಧಿಪಕಾಂತೆ ಕನ್ನಡಿ ಸೊಡರ್ ಪೂಮಾಲೆ ಭೃಂಗಾರಮು।
ಕ್ಷತಮೆಂಬುಜ್ಜ್ವಳಮಂಗಳೋಪಕರಣದ್ರವ್ಯಂಗಳಂ ನೀಡೆ ಸಂ
ತತಮೇನಂದು ಜಿನಾರ್ಭಕಂಗೆಸೆದುದೋ ಜನ್ಮಾಭಿಷೇಕೋತ್ಸವಂ ॥ ೮೦

ಕ್ಷೀರಾಬ್ಧಿಯ ನೀರಲ್ಲದೆ
ಧೀರನ ಮಜ್ಜನಕೆ ಪೆಱವು ನೀರ್ ತಗವೆಂದಾ।
ವಾರಾಶಿವರಂ ಸುರಜನ
ದಾರಿ ಮನೋಹಾರಿ ನೀಳ್ದುವೆರಡುಂ ಕೆಲದೊಳ್ ॥ ೮೧

ವ॥ ಅಂತು ಸೌಧರ್ಮೇಂದ್ರನುಮೈಶಾನೇಂದ್ರನುಮೆರಡುಂ ದೆಸೆಯೊಳಮರನಿಕರುಂಬಮೋಳಿವಟ್ಟಷ್ಟಯೋಜನಗಂಭೀರೈಕಯೋಜನಮುಖವಿಸ್ತಾರಶಾತಕುಂಭಕುಂಭಂಗಳಂ ಕೊಂಡು,

ಅಯ್ದನೆಯ ಜಲಧಿವರಮಿರ
ದೆಯ್ದುವ ಮೊಗೆವಂತೆ ಮೊಗೆದುವೋರೊರ್ಬರ ಕೈ।
ಗೆಯ್ದಿಸುವ ಬೇಗಮಂ ಮನ
ಮೆಯ್ದಿದುದಿಲ್ಲಮರಚರಿತಮೇನಚ್ಚರಿಯೋ ॥ ೮೨

ಕಳಧೌತಘಟಂ ಮುಕ್ತಾ
ಫಳಾಂಚಿತಗ್ರೀವಮೆಳೆದು ಕೊಂಡುದು ತಾರಾ।
ವಳಿಪರಿವೃತನವಸಂಧ್ಯಾ
ಜಳದದ ಗಾಡಿಯುನನೇಕಸುರಕರತಳದೊಳ್ ॥ ೮೩

ಪೊಸಸಂಜೆಮುಗಿಲ ತುಱುಗಲ್
ಮುಸುಕಿದುದು ಪಯಃಪಯೋಧಿಯೆಲ್ಲಮನೆಂಬಂ।
ತಸದಳಮೆಸೆದುದು ಮೊಗೆವು
ದ್ದೆಸದೊಳೆ ತಳತಳಿಸಿ ಪೊನ್ನ ಪೊಸಕಳಸಂಗಳ್ ॥ ೮೪

ವ॥ ಅಂತು ದೇವರ್ ದೇವನೊಳಾವಗಮಾದ ತಮ್ಮಾದರದಿಂ ಮಾಲೆಗಟ್ಟಿ ದುಗ್ಧವಾರಿಪೂರಿತಕನಕಕಳಶಂಗಳಂ ತಂದು ಗೊಂಪಳಿಸಿ ಸಂದಣಿಸಿ ನೀಡಿದಾಗಳ್,

ಸುರಸಂದೋಹದ ತೀವಿತಂದ ಘಟಸಂಘಾತಂಗಳಾನಲ್ಕೆರ
ಟ್ಕರದಿಂ ಬಾರದೆ ಮಾಣೆ ನಿರ್ಮಿಸಿದ ದೋರ್ದಂಡಂಗಳೊಳ್ ಭೂಷಣೋ ।
ತ್ಕರಮಿಂಬಾಗಿರೆ ಭೂಷಣಾಂಗತರುವಂ ಕುಂಭಂಗಳಾತೋಳ್ಗಳೊಳ್
ಕರಮಿಂಬಾಗಿರೆ ಭಾಜನಾಂಗತರುವಂ ಪೋಲ್ತಂ ಸುರಾಧೀಶ್ವರಂ ॥ ೮೫

ವ॥ ಅಂತು ನಿಜಭುಜಸಹಸ್ರೋದ್ಧೃತಕನಕಕುಂಭಮುಖವಿಗಳತ್ಕ್ಷೀರವಾರಿಧಾರೆಯುಂ ಜಯಜಯನಿನದಪೂರ್ವಕಂ ಜಿನಸವನಪ್ರಥಮಪ್ರಾರಂಭದೊಳ್ ಸೌಧರ್ಮೇಂದ್ರನೀಶಾನೇಂದ್ರನುಂ ಮಿಸಿಸಿದಾಗಳ್,

ಆದುಗ್ಧಧಾರೆ ಕರಮಿಂ
ಬಾದುದು ಜಿನಮಸ್ತಕಾಗ್ರದೊಳ್ ಗಂಗಾಕೂ ।
ಟೋದಗ್ರಶಿಖರದೊಳ್ ಚೆ
ಲ್ವಾದಮೆ ಮಿಗೆ ಸುರಿವ ಗಗನಗಂಗಾನದಿವೋಲ್ ॥ ೮೬

ಆಗಳ್ ಕಲ್ಪೇಶ್ವರನನು
ರಾಗದಿನೊಡನೊಡನೆ ಸುರಿಯೆ ಪಾಲ್ಗಡಲೊಂದುಂ ।
ಟಾಗದೆ ಮೇರುವ ತುದಿಯೊಳ್
ಮಾಗಳೆನಲ್ ನೆಱೆದುದಾಪಯಃಪ್ಲವದೆಸಕಂ ॥ ೮೭

ಸುರಜಳದಂಗಳ್ ದುಗ್ಧಾಂ
ಬುರಾಶಿಯೊಳ್ ಪೀಱಿ ಬಂದ ನೀರ್ಗಳನೆತ್ತಂ ।
ಸುರಿದುವು ಜಿನಾರ್ಭಕಾಚಳ
ಶಿರದೊಳ್ ಜಳದಂಗಳಂತು ನಗದೊಳ್ ಸುರಿಗುಂ ॥ ೮೮

ಜಳನಿಧಿ ತೊಱೆಗಳನೆನಿತುಮು
ನೊಳಕೊಳ್ವವೋಲಿನಿಸು ತರಳದಾಶ್ಚರ್ಯಮುಹಾ ।
ಜಳನಿಧಿ ಪಯಃಪ್ಲವಂಗಳ
ನೊಳಕೊಂಡಂ ಸುರರ ಮಿಸಿಸುವವಸರದಾಗಳ್ ॥ ೮೯

ಬಾಳಂ ಬಾಳಮೃಣಾಳದಂತಸುನೆಱಂ ದುಗ್ಧಪ್ಲವಂ ಸ್ಥೂಳಕ
ಲ್ಲೋಳಾಸ್ಫಾಳಿತಹೇಮಶೈಲಮಿದನಿನ್ನೇವಣ್ಣಿದಂ ಶಕ್ರನೆಂ ।

ಬಾಳೋಚಂ ಬೆರಸಿರ್ಪ ದೇವಗಣಮಂ ನಂಬಿಪ್ಪುದಾಯ್ತಾಗಳಾ
ಲೀಳೋಚ್ಛ್ವಾಸಮೆ ತೊಳ್ದ ದೇವರೊಡನಾನಾನಾವಿಮಾನಂಗಳಂ ॥ ೯೦

ಪಸರಿಸಿದ ಪಯಃಪೂರದ
ಪೊಸವೆಳ್ಪು ನಿಜಾಂಗರುಚಿಯು ಪೋಱಪೊಱಗೆ ಪೊದ ।
ಪ್ದೆಸೆದಿರೆ ಬೆಳ್ಮುಗಿಲಿಂದಂ
ಮುಸುಕಿದ ಬಾಳಾರ್ಕಬಿಂಬಮಿರ್ಪಂತಿರ್ದಂ ॥ ೯೧

ಉರದೊಳ್ ಹಾರಂಗಳನೊ
ಳ್ಗುರುಳ್ಗಳೊಳ್ ಚಿನ್ನಪೂಗಳಂ ಪೋಲ್ತು ಮನೋ ।
ಹರಮಾದುದಮರಕಾಂತೆಯ
ರುರದೊಳ್ ಕುರುಳೊಳ್ ತಗುಳ್ದ ದುಗ್ಧಲವಂಗಳ್ ॥ ೯೨

ಆಕಾಶಕ್ಕುಚ್ಚಳಿಸುವ
ನೇಕಪಯಶ್ಶೀಕರಂಗಳಿಂದಂ ಜ್ಯೋತಿ ।
ರ್ಲೋಕಮಿದೊಂದುಂಟೆಂಬ ವಿ
ವೇಕಮನೊಡರಿಸಿದುದಮರಸಮಿತಿಯ ಮನದೊಳ್ ॥ ೯೩

ಕೆಲದೊಳ್ ತೆರಳ್ದು ಸೂಸುವ
ಜಲಲವಮಂಜರಿಗಳುಂಟುಮಾಡಿದುವು ದಿಶಾ ।
ಲಲನೆಯರ ವಕ್ತ್ರಮಂಡನ
ವಿಲಾಸದೊಳ್ ನೆಗಳ್ದ ಕರ್ಣಪೂರಶ್ರೀಯಂ ॥ ೯೪

ಜಿನನಾಥಸ್ನಪನಾಂಬು ತಜ್ಜಿನತನುಶ್ರೀಸಂಗದಿಂ ತಾನೆ ಪಾ
ವನಮಾಯ್ತೇ ತನಗಿಕ್ಕೆಯಾದ ಕಡಲಂ ಕುಂಭಂಗಳಂ ಪೊಕ್ಕ ದೇ ।
ವನಿಕಾಯಂಗಳನಿಂದ್ರರಂ ಸುರವಧೂವೃಂದಂಗಳಂ ಮೇರುನಂ
ದನಭೂಪ್ರಾಂತಮುಮಂ ಪವಿತ್ರಮೆನಿಸಿತ್ತಾನೀರ್ಗದಾಶ್ಚರ್ಯಮೋ ॥ ೯೫

ತ್ರಿದಶೇಂದ್ರಪ್ರಮುಖಾಮರರ್ ಕಳಕಳಪ್ರಧ್ವಾನದಿಂ ಶಾತಕುಂ
ಭದ ಕುಂಭಂಗಳ ನೀರನೊರ್ಮೊದಲೆ ಭೋರ್ಭೋರೆಂದು ಪೊಯ್ವಾಗಳ ।
ತ್ತ ದಿಗಂತಂ ದಿವಿಜೇಂದ್ರದುಂದುಭಿನಿನಾದೋನ್ಮಿಶ್ರಮೇನುಣ್ಮಿ ಪೊ
ಣ್ಮಿದುದೋ ಮಂದರಕಂದರೋತ್ಥಿತಪಯಃಕಲ್ಲೋಲಕೋಲಾಹಳಂ ॥

ವ॥ ಅಂತು ತಜ್ಜಿನೇಂದ್ರಸವನಸಮಯದೊಳಮರೇಂದ್ರಕರತಳೋದ್ಧಳಿತಕಾರ್ತಸ್ವರವಿಳಾಸಕಳಶಮುಖವಿಗಳಿತಸ್ಥೂಲದುಗ್ಧವಾರಿಧಾರಾಸಹಸ್ರಂಗಳೊಂದೊಂದಱೊಳ್ ಕೂಡಿ ಮಂದರಾಚಳಮರಕತಶಿಳಾತಳಮಂ ಸೋಂಕಿದಲ್ಲಿ ಪಸುರ್ಪಸೆದು ಪದ್ಮರಾಗಗ್ರಾವಂಗಳೊಳ್ ಕೆಂಪೆಸೆದು ಚಂದ್ರಕಾಂತಶಿಳಾತಳದೊಳೇಕವರ್ಣಮಾಗಿಯುಂ ವನಷಂಡಂಗಳೊಳ್ ತಱುಂಬಿಯುಂ ಸರೋಜಷಂಡಂಗಳೊಳ್ ತುಂಬಿಯುಂ, ಪರಿದು, ತತ್ಪ್ರವಾಹಂ ಜ್ಯೋತಿರ್ಲೋಕಮನೆಯ್ದಿ ವಂದಾಗಳ್,

ಬೆಳಗುವ ತಾರಕಾನಿಕರಮಾಕಡಲೊಳ್ ನಸುತೇಂಕುದೇಂಕಿ ಬೊ
ಬ್ಬುಳಿಕೆಗಳಂತೆ ತೋಱಿದುವು ತೀವ್ರಕರಂ ಕರಮೆಯ್ದೆ ಕಾಯ್ದು ಪ।
ಜ್ಜಳಿಸುವ ಲೋಹಪಿಂಡಮನೆ ಭೋಂಕನೆ ನೀರೊಳಗರ್ದಿದಂತೆವೊಲ್
ಪೊಳೆಪುಡಿದಿರ್ದನೆಂದೊಡಱಿಯೆಂ ಪೊಗೞಲ್ ಜಿನಮಜ್ಜನಾಂಬುವಂ॥

ಜಿನಸವನಾಂಬುವಿನೊಳ್ ಭೋಂ
ಕೆನೆ ಚಂದ್ರಂ ತೇಂಕಿ ಹಂಸವೃದ್ಧನನಿನಿಸಂ।
ನೆನೆಯಿಸಿ ಕೊಳದೊಳಗಣ ಸಿತ
ವನರುಹಲಕ್ಷ್ಮಿಯುಮನಿನಿಸು ತನಗೊಳಕೊಂಡಂ॥ ೯೮

ಕಳಧೌತೋಜ್ಜ್ವಳಕುಂಭನಿರ್ಗತಪಯಃಪೂರಂ ಪೊದಪ್ದೆಯ್ದೆ ಮೇ
ಖಳೆಗಳ್ ನಾಲ್ಕುಮನೀನಗಂ ಸುರನಗಂ ಮುನ್ನೀಗಳಿಂತೋ ಹಿಮಾ।
ಚಳಮಾಯ್ತೆಂಬಿನಮುರ್ವಿ ಪರ್ವಿ ಪರಿದತ್ತಾಶಾಂತರಕ್ಕಂ ವಿಯ
ದ್ವಳಯಕ್ಕಂ ಕನಕಾದ್ರಿಕಂದರತಟಾಚ್ಛಾಚ್ಛೋಚ್ಛಳಚ್ಛೀಕರಂ॥ ೯೯
ನರಲೋಕಂಬರಮುಣ್ಮಿ ಪೊಣ್ಮಿದ ಪಯಃಪೂರಂಗಳಿಂದಂ ಮಹೀ
ಧರಕಾಂತಾರನದೀನದಪ್ರಕರಮುಂ ವಿಶ್ವಾವನೀಭಾಗಮುಂ।
ನರನಾರೀಜನಮುಂ ಪವಿತ್ರತರಮಾಯ್ತೆಂದಂದೆ ಕೇಳ್ವಂಗೆ ಬಿ
ತ್ತರಿಪಂಗಾದಮಳಂಬಮಲ್ತೆ ಭಗವಜ್ಜನ್ಮಾಭಿಷೇಕೋತ್ಸವಂ॥ ೧೦೦

ವ॥ ತದನಂತರಮೆ ಸುರೇಂದ್ರಸಮಿತಿ ಸುರತರುಪ್ರಸೂನಕರ್ಪೂರಪಾಂಸುಗೋಶೀರ್ಷಚಂದನದ್ರವಪರಿಮಳಸುಗಂಧಿಜಲಸಂಭೃತಹಾಟಕಘಟತಘಟಕೋಟಿಗಳನೆತ್ತಿಕೊಂಡು ಸುರಿದಾಗಳ್,

ವರಗಂಧದ್ರವ್ಯಸಂದೋಹಮೆ ಜಿನತನುಗಂಧಕ್ಕೆ ಸೋಲ್ತು ದ ಲಜ್ಜಾ
ಭರದಿಂ ನೀರಾಗಿ ತಾನುರ್ಕಿದುದೆನಿಸಿ ನಗೇಂದ್ರೋಪಕಂಠಂಗಳೊಳ್ ನಿ।
ರ್ಝರಮಂ ಮಾಡುತ್ತುಮುದ್ಯಲ್ಲವನಿವಹದೆ ದೇವೇಂದ್ರಲೋಕಕ್ಕಮತ್ಯಾ
ದರಮಂ ಮಾಡುತ್ತುಮೇನಾಱಿಸಿದುದೊ ದಿವಿಜವ್ರಾತಮಂ ಗಂಧತೋಯಂ

ಮಜ್ಜನಪೀಠಂ ಸುರಗಿರಿ
ಮಜ್ಜನಜಳಮಮೃತಜಳಧಿಜಳಮಮರೇಂದ್ರಂ।
ಮಜ್ಜನವಲ್ಲನುಮೆನೆ ಜಿನ
ಮಜ್ಜನಮಹಿಮೆಯ ಬೆಡಂಗನೇವಣ್ಣಿಪುದೋ॥ ೧೦೨

ಎನಿತಾನುಂ ಪಱೆಗಳ್ ಘನ
ನಿನದಮನನುಕರಿಸೆ ಮನದೊಳೊದವಿದಲಂಪಿಂ।
ಜಿನಸವನಗಂಧತೋಯದಿ
ನನಿಮಿಷಲೋಚನರ್ಗೆ ಮಾದುದವಭೃಥಸವನಂ॥ ೧೦೩

ಜಳಗಂಧಾಕ್ಷತೆ ಪುಷ್ಪಾ
ವಳಿ ಚರು ದೀಪಪ್ರದೀಪಧೂಪಫಲಂಗಳ್।
ಕುಳಿಶಾಯುಧನರ್ಚಿಸೆ ತೊಳ
ತೊಳತೊಳಗಿದುವೆಳಸಿ ಬಳಸಿ ಜಿನನಡಿದಳರೊಳ್॥ ೧೦೪

ವ॥ ಅಂತರ್ಚಿಸಿ,

ಜಯ ಗುಣಮಣಿರತ್ನಾಕರ
ಜಯ ಭುವನತ್ರಯಲಲಾಮ ಜಯ ಮನಸಿಜದು।
ರ್ಜಯ ಜಯ ವಿನೇಯಬಾಂಧವ
ಜಯ ಮಂದರಶಿಖರಿಶಿಖರರತ್ನೋತ್ತಂಸಾ॥ ೧೦೫

ವ॥ ಎಂದಿಂತು ಪರಿಸಮಾಪ್ತಿ ಸವನಾರ್ಚನಸ್ತವನಸಮಯಾನಂತರದಿಂ ದ್ರಾಣಿ ಭಗವದಂಗಸಂಗತಜಳಕಣಂಗಳಂ ದೇವಾಂಗವಸ್ತ್ರಂಗಳೊಳೊತ್ತಿ ಕಳೆದು ಸಹಜಸುರಭಿಗಂಧಬಂಧುರೌದಾರಿಕವಪುವಂ ನಿಜಪ್ರಮೋದಪ್ರಬೋಧಿತನಿಜದಿವ್ಯಪರಿಮಳಾಮೋದಿತದಿಗಂಗನಾಮುಖಂಗಳಪ್ಪ ಸುಗಂಧದ್ರವ್ಯಂಗಳಂ ಪೂಸಿ ಇಕ್ಷ್ವಾಕುಕುಳತಿಳಕಂಗೆ ತಿಳಕಮನಿಟ್ಟು ಮು

ಕ್ತಿಸಾಂಮ್ರಾಜ್ಯಕಂಠಿಕಾರ್ಹಂಗೆ ಮಣಿಮಯಕಂಠಿಕೆಯುಂ ಕಟ್ಟಿ ವಿಜಯ ಶ್ರೀನಿವಾಸಬಾಹುಬಾಹುಯುಗಳಕ್ಕೆ ಕೇಯೂರಹಾರಾಂಗದಕಟಕಾಳಂ ಕಾರಂಮಾಡಿ ಸಿಂಹವಿಷ್ಟರಾರೋಹಣೋಚಿತಕಟಿತಟಂಗೆ ಕಟಿತಟದೊಳ್ ಮಾಣಿಕ್ಯಮಣಿಕಿಂಕಿಣೀದಾಮಮಂ ತಗುಳ್ಚಿ ಸುರಾಸುರೇಂದ್ರವೃಂದವಂದಿತ ಪಾದಂಗೆ ಮೃದುಪದಂಗಳೊಳ್ ಕಳರವರಣಿತನೂಪುರಂಗಳಂ ತುಡಿಸಿ ದಿವಿ ಜೇಂದ್ರೋತ್ಸಂಗಸಂಗತಂಮಾಡಿದಾಗಳ್,

ಪರಮನ ನಿರತಿಶಯಾಂಗ
ಸ್ವರೂಪಮಂ ನೆಱೆಯೆ ನೋಡಲಾವೆಡೆಗಂ ತ।
ನ್ನೆರಡುಂ ಕಣ್ಗಳ್ ನೆಱೆಯದೆ
ಸುರೇಂದ್ರನುಂ ಗಡ ಸಹಸ್ರಲೋಚನನಾದಂ ॥ ೧೦೬

ವ॥ ಅಂತು ನಿರ್ವರ್ತಿತಜನ್ಮಾಭಿಷೇಕನನೇಕದುಂದುಭಿಬಧಿರಿತಸಕಳ ದಿಙ್ಮಂಡಳನಾಖಂಡಳನಮರಸಮಿತಿವೆರಸಯೋಧ್ಯಾಪುರಕ್ಕಭಿಮುಖನಾದಾ ಗಳ್,

ಪರಮಜಿನಸವನಜಳನಿ
ರ್ಝರಮುಂ ಸುರಬಲಪಯೋಧಿಕಳಕಳಮುಂ ಮಾ।
ಣ್ದಿರೆ ನೋಡೆ ಬಿನ್ನನಿರ್ದುದು
ಸುರಶೈಳಮದೊಂದು ಮದುವೆಗಳಿಪಿದ ಮನೆವೊಲ್ ॥ ೧೦೭

ವ॥ ಆಗಳ್ ಕಲ್ಪಾಮರೇಂದ್ರಪ್ರಬಲಬಳಸಮಿತಿ ಗಗನತಳದಿಂದಮಂದಂ ಬಡೆದು ವಿನೀತಾಪುರಕ್ಕವತರಿಸಿ,

ಗಗನಾಭೋಗದೊಳೊಪ್ಪಿ ಬರ್ಪ ಪಲವುಂ ಯಾನಂಗಳಂ ತೋರ್ಪ ವೇ
ದಿಕೆಗಳ್ಗೆತ್ತು ವಿಳೋಳಕೇತುತತಿಯುಂ ಮಾಂಗೆತ್ತು ಮಾದ್ಯದ್ಗಜಾ।
ಳಿಗಳಂ ನಾವೆಯೆಗೆತ್ತು ದೇಹರುಚಿಯುಂ ರತ್ನಾಂಶುಗೆತ್ತಿಂದ್ರಸೇ
ನೆಗಳಂ ವಾರ್ಧಿಯೆ ಗೆತ್ತು ನೋಡಿದುದು ಬಂದೆತ್ತಂ ಪುರಸ್ತ್ರೀಜನಂ ॥ ೧೦೮

ವ॥ ಅಂತವತರಿಸಿ ಚಂಚಚ್ಚೀನಾಂಶುಕಮಣಿದರ್ಪಣಾನೇಕಪ್ರಸೂನ ಪಲ್ಲವೋಲ್ಲಸಿತವಿವಿಧಮಂಡನಮಾಲಾಲಂಕೃತರಾಜಮಾರ್ಗದಿಂದಂ ಪರಿಮಿ ತಾಮರೇಂದ್ರಸಮಾಜಂ ಬೆರಸು ರಾಜಭವನಮಂ ಪೊಕ್ಕು,

ಕಳಧೌತೋಜ್ಜ್ವಳಕೂಟಕೋಟಿಘಟಿತಶ್ರೀಗೇಹದಿಂ ಮುಂದೆ ಮಂ
ಗಳಕಾರ್ಯೋಚಿತಮಾಗೆ ಮುನ್ನಮೆ ಸುರಾನೀಕಂ ಜನಂಗಳ್ ಮನಂ।
ಗೊಳೆ ಮಾಡಿಟ್ಟ ವಿಚಿತ್ರಮಂಟಪದ ಸಿಂಹಾಸಂಧಿಯೊಳ್ ಬಾಲನಂ
ಕುಳಶಾಸ್ತ್ರಂ ಪಿರಿದುಂ ವಿಭೂತಿವೆರಸಿಟ್ಟೇಂ ಸಂತಸಂಬಟ್ಟನೋ ॥ ೧೦೯

ವ॥ ಆಗಳ್ ಸುತಮುಖನಿರೀಕ್ಷಣಸಮಯಸಮುಪಜನಿತಪುಳಕಕಳಿಕಾಕಳಿತಕಲ್ಪವೃಕ್ಷನಪ್ಪ ನಾಭಿಮಹೀಜಂ ಇಂದ್ರಾಣೀವದನಚಂದ್ರಚಂದ್ರಿಕಾವಿಘಟಿತನಿಕೃತನಿದ್ರಾಮುದ್ರಿತನಯನನೀಳೋತ್ಪಳೆಯಪ್ಪ ಜಗದ್ಗುರುಜನನಿಯುಂ ಬಂದು ನಿಜತನೂಜವದನವನಜಮನಕ್ಕರ್ತು ನೋಡಿ,

ಆದೊರೆಯ ವಿಭವದೊಳ್ ಪರ
ಮಾದರದಿಂ ದಿವಿಜಸಮಿತಿಯಿಂ ತಮ್ಮ ಮಗಂ।
ಗಾದ ಮಹಿಮೆಗೆ ಮನಂಗೊಳ
ಲಾದುತ್ಸವಮರಿದು ಪೊಗೞಲಾದಂಪತಿಯಾ ॥ ೧೧೦

ವ॥ ಆಗಳ್,

ದೊರೆ ನಿಮಗಿಲ್ಲ ಭೂಭುವನದೊಳ್ ಪೆಱರಿರ್ವರೆ ನೋಂತಿರೀಜಗ
ದ್ಗುರುಗೆ ಪಿತೃದ್ವಯಂಗಳೆನಿಸಲ್ ಮೆಱೆವರ್ ಪೆಱರಾರೊ ನೀವೆ ಪೂ।
ಜ್ಯರಿರೆಮಗೆಂದು ದಿವ್ಯವಸನಪ್ರಸವಾಭರಣಂಗಳಿಂದಮಾ
ದರಮುಮರ್ವಂತು ತದ್ದ್ವಯಗಳಮಂ ಪರಿಪೂಜಿಸಿದಂ ಸುರೇಶ್ವರಂ ॥ ೧೧೧

ವ॥ ಅಂತು ಪೂಜಿಸಿ ಜನ್ಮಾಭಿಷೇಕವ್ಯತಿಕರಮನವರ್ಗೆ ಮಹೋತ್ಸಾಹಕರಮಾಗೆ ಸವಿಸ್ತರಮಱಿಪಿ ಜಾತಕರ್ಮೋತ್ಸವದೊಳ್ ಪರಿಜನಮುಂ ಪುರಜನಮುಮೊಸಗೆಮರುಳ್ಗೊಂಡು ನಿರ್ಭರಕ್ರೀಡಾರಸಪರವಶರಾದಾಗಳ್,

ನೆಲೆಮಾಡಂಗಳೊಳೋಳಿವಟ್ಟ ಗುಡಿಗಳ್ ಗಂಧಾಂಬುವಿಂದಾದ ಪೂ
ವಲಿಯಿಂ ಚೆಲ್ವೆಸೆದಿರ್ದ ಬೀದಿಗಳನೇಕಾತೋದ್ಯನಾದಂಗಳೊಳ್।
ನಲಿಯುತ್ತುಂ ಕುಣಿಯುತ್ತುಮಿರ್ಪ ಗಣಿಕಾಸಂದೋಹದಿಂ ಚೆಲ್ವನ
ಗ್ಗಲಿಸುತ್ತಿರ್ತುವು ತತ್ಪುರಕ್ಕೆ ಸುರರಾಜಾವಾಸಸಾಮ್ರಾಜ್ಯಮಂ ॥ ೧೧೨

ಪುರಜನಮೆತ್ತಿಯಿಂ ಮುಡಿವ ಕೞಿಡೆ ತುಱುಂಬುವ ಕಿಂಕಿರಾತಶೇ
ಖರರಜದಿಂದೆ ಚಾರುಪಟವಾಸದ ಧೂಳಿಯು ಪರ್ಬಿನಿಂದಮಾ ।
ಭರಣದ ಮಾಣಿಕಂಗಳ ಪೊದಲ್ದರುಣಾಂಶುಗಳಿಂದಮಂದು ಪಿಂ
ಜರಿತಪಿಶಂಗಿತಾರುಣಿತದಿಙ್ಮುಖಮಾದುದು ತನ್ಮಹೋತ್ಸವಂ ॥ ೧೧೩

ನೂತನಮಣಿಭೂಷಣಬಾ
ಳಾತಪಸಿತಮಣಿಮರೀಚಿಚಂದ್ರಾತಪಪಿ ।
ಷ್ಟಾತಕಪರಾಗಪಿಂಜರಿ
ತಾತಪಮಯಮಾದುದಾಧರಾಧಿಪಭವನಂ ॥ ೧೧೪

ವ॥ ಅಂತು ಪುರಮುಮಂತಃಪುರಮುಮಾದಿಪುರುಷಜನ್ಮೋತ್ಸವಸುಧಾಂಬುರಾಶಿಯೊಳ್ ಕೂಡಿ ಮೂಡಿ ಮುೞ್ಕಾಡುವುದಂ ನೋಡಿ ತಾನುಮಾನಂದನಾಟಕಮನಾಡಲ್ಬಗೆದು ಕೃತಾನುಕರಣಮೆ ನಾಟಕಮಪ್ಪುದಱಿಂ ಭಗವಜ್ಜನ್ಮಾಭಿಷೇಕಸಂಬಂಧಿಯಾಗೆ ತನ್ನ ಪೊಸತೆ ಸಮೆದ ಸಮವತಾರರೂಪಮುಮಂ ದಶಾವತಾರರೂಪಗರ್ಭಸಂದರ್ಭಂಗಳಪ್ಪ ಶೇಷಾಶೇಷರೂಪಕಂಗಳುಮಂ ಸುರಾಸುರಸಭೆಗಂ ನಾಭಿರಾಜಾದಿಮನುಜಸಭೆಗಂ ಮೆಚ್ಚಿಯುಲೆಂದು ಶುದ್ಧವಿಚಿತ್ರಮೆಂಬ ಪೂರ್ವರಂಗಪ್ರಸಂಗದೊಳ್ ಜರ್ಜರಪೂಜಾಮಂಗಳಪದೋಚ್ಚಾರಣ[1]ಪುಷ್ಪಾಂಜಲಿವಿಕ್ಷೇಪಣಾದಿನಾಂದಿವಿಧಿಯಂ ನಿರ್ವರ್ತಿಸಿ ದೃಶ್ಯಶ್ರವ್ಯದೃಢಮಾತ್ರಾದಿ[2]ಪ್ರಯೋಗಂಗಳೊಳಂ ನಾನಾವಿಧವಾದ್ಯಂಗಳೊಳಂ ಆಂಗಿಕಾಭಿನಯಂಗಳೊಳಮೆಸೆಯೆ ಮಘವನಘವಿಘಾತಾರ್ಥಮುದ್ಧತಾಭಿನಯಪ್ರಾಯಮುಮಾರಭಟೀವೃತ್ತಿಯುಕ್ತಮುಮಪ್ಪ ತಾಂಡವಮನಾಡಲುದ್ಯೋಗಂಗೆಯ್ದು ಮಂಗಳಾಳಂಕಾರಾಲಂಕೃತನಾಗಿ ನಾಟ್ಯವಿದಾಚಾರ್ಯನಂ ಪೋಲ್ತು ರಂಗಂಬೊಕ್ಕು,

ಲೋಕಾಕಾರಮನಭಿನಯಿ
ಪಾಕಾರಂ ನೆಗಪೆ ನಿಂದು ವೈಶಾಖಸ್ಥಾ ।
ನಾಕಾರದೊಳ್ ಮರುದ್ವ್ರತ
ನಾಕುಳಿಶಾಯುಧನದೊಂದು ಚೆಲ್ವಂ ಪಡೆದಂ ॥ ೧೧೫

1ಕ—ಪಟಹೋಚ್ಚಾರಣ. 2ಖ—ದೃಷ್ಯದ್ರವ್ಯದೃಢಸೂತ್ರಾದಿ.

ಸೂಸಿದ ಪುಷ್ಪಾಂಜಳಿಯುನೆ
ಬಾಸಣಿಸಿದ ಮದವದಳಿಕುಳಂಗಳ ಚೆಲ್ವಂ ।
ಮಾಸಿಸಿದುವು ವಾಸವನ ವಿ
ಳಾಸಂಬೆರಸಡರೆ ತೊಡರೆ ಬಳಸುವ ಕಣ್ಗಳ್ ॥ ೧೧೬

ರಸಭಾವಾಲಸನಯನ
ಪ್ರಸರಂಗಳ ಪೊಳೆವ ಪೊಳೆಪುಗಳ್ ಬಳ್ವಳ ನೀ ।
ಳ್ದಿಸೆದುವು ರಂಗದೊಳೆತ್ತಂ
ಪೊಸಯಿಸುತುಂ ಯವನಿಕಾವಿಳಾಸಮನಾಗಳ್ ॥ ೧೧೭

ಪದವಿನ್ಯಾಸದ ತುಱುಗಲ್
ಪೊದಟೆ ಲಯಂಬೆರಸು ರಂಗಮಂ ಬಳಸಿದನಾ ।
ತ್ರಿದಶಾಧಿನಾಥನಳೆವನೊ
ಲುದನ್ವದಾವೇಷ್ಟಿತಾಖಿಳಾವನಿತಳಮಂ ॥ ೧೧೮

ವ॥ ಆಗಳ್ ನಾಕಲೋಕವಾದ್ಯಂಗಳೊಳನೇಕಭೇದಂಗಳಪ್ಪ ಪವಾದಕ ಪರಿವಾದಕವಾದ್ಯಂಗಳೊಳ್ ಕಿನ್ನರೀಜನಮಧುರಗೀತಾನುಗತಂಗಳನುಕ್ರಮದೊಳ್ ನೆಗಟೆ,

ಕರಣಂ ರೇಚಕಮಂಗಹಾರಮಿನಿತೆಂದೋದುತ್ತುಮಿರ್ಪೋದದ
ತ್ತಿರಲೀನಾಟ್ಯರಸಂ ಸಮಸ್ತಸುರವೃಂದಾಧೀಶಸಿಂದಂ ಪೊನ ।
ಲ್ವರಿದತ್ತೆಂಬಿನಮಾಡುವಲ್ಲಿ ಮಕುಟವ್ಯಾಲಗ್ನರತ್ನಪ್ರಭಾ
ಪರಿವೇಷಂ ಲಲಿತೇಂದ್ರಚಾಪರುಚಿಯಂ ಮಾಡಿತ್ತು ದಿಕ್ಚಕ್ರದೊಳ್ ॥ ೧೧೯

ಕುಳಶೈಲಂಗಳ್ ಪದಾಘಾತದೊಳಲುಗುವಿನಂ ತಾರಕಾಸಂಕುಳಂ ತೋ
ಳ್ಗಳದೊಂದಳ್ಳೇಱಿನೊಳ್ ಪೂವಲಿವೊಲುದುರ್ವಿನಂ ವಾರ್ಧಿಗಳ್ ರೇಚಕೋಥ್ಥಾ ।
ನಿಳತೀವ್ರಾಘಾತದಿಂದುಚ್ಚಳಿಪಿನಮಖಿಳಾಶಾಂತರಂ ದೇವತೂರ್ಯಾ
ವಳಿಗೀತಧ್ವಾನದಿಂದಂ ಪುದುಪಿನವೆಸೆದತ್ತಿಂದ್ರನಾನಂದನೃತ್ಯಂ ॥ ೧೨೦

ಎಳೆಯೊಳ್ ತೋಱಿದ ರೂಪನಾಗಳೆ ನಭೋಭಾಗಾಗ್ರದೊಳ್ ತೋರ್ಪನಾ
ಗಳೆ ಗೆಂಟಾಗಳೆ ಸಾರೆಯಾಗಿ ಪೊಳೆವಂ ಸೂಕ್ಷ್ಮಾಂಗನಾಗಿರ್ಪನಾ ।

ಗಳ್ ದಿಗ್ವ್ಯಾಪಕನಪ್ಪನಿಂತು ಪಲವುಂ ಚೋದ್ಯಂಗಳಂ ವಿಕ್ರಿಯಾ
ಬಳದಿಂದಾಡಿ ಮಹೇಂದ್ರಜಾಲಿಗನುಮಂ ಪೋಲ್ತಂ ಸುರಾಧೀಶ್ವರಂ ॥ ೧೨೧

ವ॥ ಅಂತು ತನ್ನ ತಾಂಡವಾರಂಭದೊಳಳವಿಗಳಿದ ರಾಗದಿಂ ನಿರ್ಮಿಸಿದ ಭುಜಶಾಖಾಸಹಸ್ರಂಗಳೊಳ್ ದಾಂಗುಡಿವಿಟ್ಟನಂಗಜಂಗಮಲತೆಗಳನನುಕರಿಸಿ ದೇವಗಣಿಕೆಯರಾಡುವಾಗಳ್,

ರಸಭಾವಾಭಿನಯಂಗಳಂ ಭುಜಲತಾಭ್ರೂಚಾಪನೇತ್ರೋತ್ಪಲ
ಪ್ರಸರಂಗಳ್ ಪಸರಂಗೆಯುತ್ತಿರೆ ಲಸನ್ನೇತ್ರಂಗಳಂ ಕೂಡೆ ಬಂ ।
ಚಿಸುತುಂ ಮೆಟ್ಟುವ ಮೆಟ್ಟನೊಳ್ಪು ಜನತಾನೇತ್ರಂಗಳಂ ನಾಡೆ ಚೆ
ಲ್ವೆಸೆದತ್ತಿಂದ್ರನ ನೀಳ್ದತೋಳ್ದುಱುಗಲೊಳ್ ದೇವಾಂಗನಾನರ್ತನಂ ॥

ಆನಂದಂಬೆರಸಂಕದಚ್ಚರಸೆಯರ್ ದೇವೇಂದ್ರನೈರಾವತಾ
ಳಾನಸ್ತಂಭಸಮಂಗಳಪ್ಪ ಭುಜಸಂದೋಹಂಗಳೊಳ್ ವೀರಕಾಂ ।
ತಾನೀಕಕ್ಕೆಣೆಯಾಗಿ ಕೂಡೆ ಕುಣಿದರ್ ಮತ್ತಂ ಕೆಲರ್ ನೋಡಿ ಸೂ
ಚೀನಾಟ್ಯಂಗಳನಾಡಿದರ್ ಖರನಖಪ್ರಾಂತಂಗಳೊಳ್ ಶಕ್ರನಾ ॥ ೧೨೩

ತ್ರಿದಶಗಣಾಧಿನಾಯಕನ ಪರ್ವಿದ ತೋಳ್ದುಱುಗಲ್ಗಳೊಳ್ ಪಳಂ
ಚಿದೆ ಗಗನಂಬರಂ ನೆಗೆದು ಸೂಸುವ ಬಾಹುಪರಿಭ್ರಮಂಗಳೊಳ್ ।
ಬೆದಱಿದೆ ಶಕ್ರನೃತ್ಯದೊಳೊಡಂಬಡೆ ನರ್ತಿಸುವಲ್ಲಿ ಜತ್ತವ
ಟ್ಟದ ಮಣಿಯಂತದೇಂ ಪದುಳವಾದುದೊ ದಿವ್ಯವಧೂಕದಂಬಕಂ ॥ ೧೨೪

ಯುವಸಂಘಾತಮದೊಂದು ತೋಳ್ದುಱುಗಲೊಳ್ ಮತ್ತೊಂದು ತೋಳ್ಗೋಳಿಯೊಳ್
ಯುವತೀವ್ರಾತಮನೇಕಭೇದರಸಭಾವಂಗಳ್ ಪೊದಱ್ದೊಣ್ಮೆ ಪೊ ।
ಣ್ಮುವಿನಂ ನರ್ತಿಸೆ ಸೂತ್ರಧಾರವಿಧಿಯಿಂ ಸುತ್ರಾಮನಂದಿಂತು ತಾಂ
ಡವಲಾಸ್ಯಂಗಳ ಚೆಲ್ವನೊರ್ಮೆಯೆ ತದೀಯಾಸ್ಥಾನದೊಳ್ ತೋಱಿದಂ ॥

ವ॥ ಅಂತು ದೇವೇಂದ್ರಕರಸರೋಜಾಕರದೊಳ್ ಸಮುತ್ಫುಲ್ಲಮುಖಪದ್ಮಂಗಳಂ ಪದ್ಮಿನಿಗಳೆನಿಸಿ ಸುರೇಂದ್ರತಾರಹಾರಮುಕ್ತಾಫಳಪ್ರತಿಬಿಂಬಿತತನುಗಳಂ ವಿದ್ಯಾದೇವತೆಗಳೆನಿಸಿ ದಿವಿಜಸೌಂದರಿಯರ್ ಗೊಂದಣಂಮಾಡುವಲ್ಲಿ ಕಡೆಗಣ್ಣೊಳ್ ತುಳುಂಕಿಯುಂ ಕದಪಿನೊಳ್ ಪೊಂಪುಳಿಯಾಗಿಯುಂ

ಭ್ರೂವಿಭ್ರಮದೊಳ್ ಪೊನಲ್ವರಿದುಂ ಅರುಣಾಧರದೊಳ್ ಕೊಳಂಗೊಂಡುಂ ದರಹಸಿತದೊಳ್ ಬೆಳ್ಪಂಗೆಡೆದುಂ ಅಂಗರಾಗದೊಳ್ ರಂಗಂಬಡೆದುಂ ಸಿರಿಸದಾಮಕೋಮಲೆಯರ ಭುಜಲತೆಗಳೊಳ್ ಪಸರಿಸಿಯುಂ ಘನಸ್ತನಂಗಳೊಳೆಡಪಿಯುಂ ಗಂಭೀರನಾಭಿಯೊಳ್ ಸುಟಿಗೊಂಡುಂ ನಿತಂಬದೊಳ್ ತುಱುಂಬಿಯುಂ ಮೃದುಪದದೊಳಂದಂಬಡೆದುಂ ಆಕೆಗಳಂಗೋಪಾಂಗದೊಳಂತು ನಾಟ್ಯರಸಮೆ ತೀವಿ ತುಳುಂಕುಗುಟ್ಟೆ ದಿವಿಜಸಾಮಾನಿಕಜನಕ್ಕಂ ನಾಭಿರಾಜಾದಿಮನುಜಸಭೆಗಂ ಅತ್ಯಾಶ್ಚರ್ಯಮಂ ಮಾಡಿದಾಗಳ್,

ಧರೆ ರಂಗಂ ಗಗನಂ ಮನೋಹರತರಂ ನಾಟ್ಯಾಲಯಂ ನರ್ತಕಂ
ಸುರರಾಜಂ ಸಭೆ ದೇವಮರ್ತ್ಯಸಭೆ ಸಂದಾರಾಧ್ಯನೀಶಂ ಜಗ |
ದ್ಗುರು ತನ್ನೃತ್ಯಫಲಂ ತ್ರಿವರ್ಗವಿಭವಂ ತಾನೆಂದೊಡೇಮಾತೊ ಸಾ
ಸಿರಮುಂ ನಾಲಗೆಯುಳ್ಳವಾಸುಕಿಯುಮಿನ್ನೇನೆಂದದಂ ಬಣ್ಣಿಪಂ || ೧೨೬

ವ|| ಅಂತು ಪುರಂದರನಾನಂದನೃತ್ಯಾವಸಾನದೊಳೀಪರಮೇಶ್ವರಂ ಧರ್ಮಾಮೃತವರ್ಷದಿಂ ಭವ್ಯಸಸ್ಯಸಮೃದ್ಧಿಯಂ ಮಾಡುವುದಱಿಂ ವೃಷಮೆಂಬುದು ಧರ್ಮಮದಱಿಂದೊಪ್ಪುವುದಱಿಂದಂ ಸ್ವರ್ಗಾವತರಣಸಮಯದೊಳ್ ನಿಜಜನನೀವದನವನಜಮಂ ಸ್ವಪ್ನದೊಳ್ ಧವಳವೃಷಭಾಕಾರದಿಂ ಪೊಕ್ಕುದಱಿಂದಂ ವೃಷಭಸ್ವಾಮಿಯೆಂದು ಪೆಸರನಿಟ್ಟು ಮಜ್ಜನಮಂಡನಕ್ರಿಯೆಗಳ್ಗೆ ದೇವಿಯರನೇ ದಾದಿಯರ್ಮಾಡಿ ಸಮಯಾನುರೂಪವೇಷದ ಸುರಕುಮಾರಕರನೊಡನಾಡಿಗಳ್ಮಾಡಿ ದೇವಸಮಾಜಂ ಬೆರಸು,

ಕ್ರಮದಿಂ ಜನ್ಮಾಭಿಷೇಕೋತ್ಸವಮನಮರಶೈಲಾಗ್ರದೊಳ್ ಮಾಡಿ ಲೋಕೋ
ತ್ತಮನಂ ಕೊಂಡೊಯ್ದಯೋಧ್ಯಾಪುರದೊಳೊಸಗೆಯಂಮಾಡಿ ಜನ್ಮೋತ್ಸವಪ್ರ
ಕ್ರಮಮೆಂದಾನಂದನೃತ್ಯಪ್ರಮದಮನಧಿಕಂಮಾಡಿ ತನ್ನಿಂದ್ರಲೋಕ
ಕ್ಕಮರೇಂದ್ರಂ ಪೋದನಾಗಳ್ ಸುಕವಿಜನಮನೋಮಾನಸೋತ್ತಂಸಹಂಸಂ

ವ॥ ಅನ್ನೆಗಮಿತ್ತಲ್,

ಕಿವಿಗಿಂಪಂ ತೊದಳೊಳ್ ಪೊದೞ್ದ ನುಡಿಗಳ್ ಕಳ್ಕಱಂ ರಾಗದಾ
ಡುವ ಕೂಸಾಟದ ಚೆಲ್ವುಗಳ್ ಕುಡೆ ಪಿತೃದ್ವಂದ್ವಕ್ಕೆ ನಿಚ್ಚಂ ಮನೋ।
ದ್ಭವನಂ ಬಂಧುಜನಕ್ಕೆ ಮುಗ್ಧಮುಖಚಂದ್ರಾಲೋಕಮಾಲೋಕನೋ
ತ್ಸವಮಂ ಪೆರ್ಚಿಸೆ ಜಾಣನಿಂತೊದವಿದಂ ಸಂಸಾರಸಾರೋದಯಂ ॥ ೧೨೪

ಗ॥ ಇದು ದೇವೇಂದ್ರಮುನೀಂದ್ರವಂದ್ಯಪರಮಜಿನೇಂದ್ರಮುಖ
ಚಂದ್ರವಾಕ್ಚಂದ್ರಿಕಾಪ್ರಸರಪ್ರಸಾದೋದೀರ್ಣಸೂಕ್ತಿ
ಕಲ್ಲೋಲಮಾಲಾಕೀರ್ಣಕವಿತಾಗುಣಾರ್ಣವ
ಪ್ರಣೀತಮಪ್ಪಾದಿಪುರಾಣದೊಳ್
ಮಹೇಂದ್ರನಾನಂದನೃತ್ಯಂ
ಸಪ್ತಮಾಶ್ವಾಸಂ
ಸಂಪೂರ್ಣಂ.

ಅಷ್ಟಮಾಶ್ವಾಸಂ.

ಶ್ರೀಪತಿ ಸುರದಾರಕರೊಡ
ನಾಪ್ತೊತ್ತುಂ ನೆಱೆದು ರತ್ನಧೂಳೀಪಟಲ ।
ವ್ಯಾಪಿತತನು ಮೃದುಮುಗ್ಧಾ
ಳಾಪಂ ಬಳೆದಂ ಸರಸ್ವತೀಮಣಿಹಾರಂ ॥ ೧

ಕನಕಮಣಿಕಿಂಕಿಣೀಮೃದು
ನಿನದಂ ಕಟಿತಟದೊಳೆಸೆಯೆ ದಾದಿಯರೊಡವಂ ।
ದಿನಿಸಂ ನಡೆಯಿಸೆ ಲಲಿತೇಂ
ದ್ರನೀಲಮಣಿಭೂಮಿಯೊಳ್ ತಳರ್ನಡೆನಡೆದಂ ॥ ೨

ಸರಸಿಜದಿಂ ಮಕರಂದ
ಸ್ಫುರಿತಂ ಪುದಿದೊದವಿದಪ್ಪದೆಂಬಿನಮುದ್ಯ ।
ತ್ಪರಿಮಳಮುಖಸರಸಿಜದೊಳ್
ದರಹಸಿತಂ ನೆಗೞ್ವಿನಂ ತೊದಳ್ನುಡಿನುಡಿದಂ ॥ ೩

ವ॥ ಅಂತು ಬಾಲ್ಯಕಾಲಮಂ ಬಾಳಕೇಳೀಲೀಲೆಯಿಂ ಕಳಿಪಿ ಕುಮಾರಕಾಲದೊಳ್ ಸುಕುಮಾರಪರಿವೃತಂ ಮಹೋತ್ಪನ್ನಮತಿಶ್ರುತಾವಧಿಬೋಧನಪ್ಪುದಱಿಂ ವಿಶ್ವವಿದ್ಯೇಶ್ವರನುಂ ಅಪಗತಾನೇಕಲೋಕವ್ಯಾಪಾರಕನುಂ ಜನ್ಮಾಂತರಾಭ್ಯಸ್ತಕಳಾಕುಶಲನುಂ ಪ್ರತ್ಯಕ್ಷೀಕೃತಸಕಲವಾಙ್ಮಯನಪ್ಪುದಱಿಂದಂ ಛಂದೋವಿದ್ಯಾಳಂಕಾರಪದವಿಚಾರಕಾವ್ಯಗೀತನೃತ್ಯಾತೋದ್ಯಾದಿಗೋಷ್ಠಿಗಳೊಳಂ ಶುಕಶಿಖಂಡಿಹಂಸಸಾರಸಕ್ರೌಂಚಕರಿಕಳಭಮಲ್ಲಾದ್ಯನೇಕಾಕಾರವಿಕೃತಾಮರಪರಿಪಠನನಟನಮೃದುಕೂಜಿತರಸಿತದರಹಸಿತಕ್ರೇಂಕಾರಾರೋಹಣಾಯೋಧನಾದಿನಾನಾವಿನೋದಂಗಳೊಳಮಮರಾಧಿಪಪ್ರಹಿತಪ್ರತಿದಿನಪ್ರವರ್ಧಮಾನಸುರತರುಪ್ರಸೂನಗ್ರಥಿತಸುರಭಿದಾಮದುಕೂಲಾಂಬರವಿಚಿತ್ರಭೂಷಣಸುರಭಿವಿಲೇಪನಪ್ರಮುಖಭೋಗೋಪಭೋಗಂಗಳೊಳಂ ಪ್ರತಿದಿನಪ್ರವರ್ಧಮಾನತನುವಯೋವಿಭವನನುಕ್ರಮದೊಳೆ ಬಳೆಯೆ,

ಕರಿಕಳಭಂ ಮದದ್ವಿರದಲಕ್ಷ್ಮಿಯೊಳೊಂದಿದವೋಲ್ ಕಿಶೋರಕೇ
ಸರಿ ಮೃಗರಾಜಲೀಲೆಯೊಳಳಂಕರಿಸಿರ್ದವೊಲೆಯ್ದೆ ಮುಗ್ಧಸಾಂ ।
ದರಸುರಭೂರುಹಂ ಕುಸುಮಶೋಭೆಯೊಳಗ್ಗಲಿಸಿರ್ದವೊಲ್ ಮನೋ
ಹರಮೆನಿಸಿತ್ತು ಯೌವನವನೋದಯಮಿಂದ್ರನರೇಂದ್ರವಂದ್ಯನಾ ॥ ೪

ಪರಮೌದಾರಿಕದಿವ್ಯಮೂರ್ತಿ ವಸನಾಳಂಕಾರಮಂದಾರಶೇ
ಖರರಮ್ಯಂಧೃತಯೌವನಂ ಮರುಳಿಸಲ್ತಾನಾತುರ್ಮತ್ಯಂತಸಾಂ ।
ದರಕಾಂತಾಜನಮಂ ಮಗುಳ್ದದಣಿಮಿಲ್ಲಂತಾಕೆಗಳ್ಗೇನದ
ಚ್ಚರಿಯೋ ಚಿತ್ರದ ರೂಪು ರೂಪವಿಭವಂ ಮುಕ್ತ್ಯಂಗನಾಕಾಂತನಾ ॥ ೫

ಅನಿಮಿರಿದೊಂದು ಯೌವನಮದಕ್ಕೆಡೆಯಾಗಿಯುಮಂದು ರಾಗಸಂ
ಜನನಮನೆಯ್ದೆ ತಾಳ್ದದವಿನಶ್ವರಕೀರ್ತಿಯೊಳಂ ಸರಸ್ವತೀ ।
ವನಿತೆಯೊಳಂ ವಿಚಾರಿಸೆ ತಟಿದ್ದ್ಯುತಿಚಂಚಲೆಯೆಂಬುದೊಂದು ಭಾ
ವನೆಯೊಳೆ ರಾಜ್ಯಲಕ್ಷ್ಮಿಯೊಳನಾದರಮಾಯ್ತು ಮನಂ ಚಿದಾತ್ಮನಾ ॥ ೬

ವ॥ ಅಂತು ಪರಮಾತಿಶಯರೂಪರಸಗಂಧಸ್ಪರ್ಶಗುಣವತ್ಪರಮಾಣು ಪರಿವೃತಮೂರ್ತಿಯಪ್ಪ ಪರಮನ ಪರಿಪೂರ್ಣಯೌವನಶ್ರೀಯಂ ನಾಭಿರಾಜಂ ನೋಡಿ,

ವನಿತಾಚಿತ್ತವಿಕಾರಕಾರಿ ನೆಱೆದತ್ತೀಗಳ್ ಕುಮಾರಂಗೆ ಯೌ
ವನಮೀತಂಗೆ ವಿವಾಹಮಂಗಳಮನಾಂ ಮಾಡಲ್ಕೆವೇೞ್ಕುಂ ತಪೋ ।
ವನಮಂ ಗಂಧಗಜಂ ವನಂಬುಗುವವೋಲ್ ಪೊಕ್ಕಾಗಳೇಗೆಯ್ವುದೀ
ತನ ಚಿತ್ತಕ್ಕಮನಂಗರಾಗರಸಮಂ ಮಾೞ್ಪಂದಮಿನ್ನಾವುದೋ ॥ ೭

ಕುಲರೂಪವಿಭವಯೌವನ
ವಿಳಾಸವತಿ ಪೇೞಿಮಾವಳನ್ನೀತನನಾ ।
ಳ್ವಳೊ ಚಿತ್ತಸರೋವರದೊಳ್
ಕಳಹಂಸೆವೊಲಗಲದಚ್ಕೞಿಂ ರಮಿಯಿಸುವಳ್ ॥ ೮

ವ॥ ಎಂದು ತನ್ನ ಮನದೊಳ್ ಬಗೆದು ಸಕಳವಿಷ್ಟಪಪ್ರಣೂತನನೀತನನಂತರಾಯುಮಾನಪರಮಾನಂದಸಮಯದೊಳ್ ಮುಕ್ತಿಸಾಂಮ್ರಾಜ್ಯ

ದೊಳತಿಪ್ರಾಜ್ಯಸಂಜನಿತನಿಸ್ಪೃಹನನವರತಕಲ್ಯಾಣಪರಿಮಿತದೊಳ್ ನಿರಂತರಂ ತಂತ್ರಾವಾಪಚಿಂತಾಂತರಾಯಪ್ರಾಯಸುಖಲವದೊಳೇಮಹೀತಳರಾಜ್ಯದೊಳ್ ನಿಱಿಸುವುದುಂ ಮದುವೆನಿಱಿಸುವುದುಂ ಎನಗಶಕ್ಯಾನುಷ್ಠಾನಮಾದೊಡಂ ಎನ್ನ ಬಗೆದ ಬಗೆಯನೊಡಂಬಡುಗುಮೊಡಂಬಡನೆಂಬ ಸಂಭ್ರಮದೊಳ್ ಆಸ್ಥಾನಮಂಡಪಮಂಡನೀಭೂತಮಣಿಮಯಾಸನಪ್ರಾಚ್ಯಾಚಳಶಿಖಂಡರತ್ನಮಾಗಿರ್ದ ಕುಮಾರನಂ ಸಾರೆವಂದು ಯಥೋಚಿತಹೇಮಾಸನದೊಳ್ ಕುಳ್ಳಿರ್ದು ನಾಭಿರಾಜಂ,

ಉದಯಾಚಳಕ್ಕೆ ಪೆಸರಿನ
ನುದಯದಿನಾದಂತಿರೆಮಗೆ ಗುರುಗಂ ಗುರುವೆಂ ।
ದೊದವಿದ ಪೆಂಪಿದು ನಿನ್ನಿಂ
ದುದಯದಿನಾಯ್ತು ಮರಮೌಳಿಲಾಲಿತಚರಣಾ ॥ ೯

ತುಂಗಭವದ್ಬೋಧದ ಬೆಳ
ಗಿಂಗೊಳಗಪ್ಪನಿತನೆನ್ನ ಬಗೆ ಪುಗದು ತಮಂ ।
ಪಿಂಗೆ ದಿನಪತಿಯ ಬೆಳಪ ನ
ಭೋಂಗಣಮಂ ಜ್ಯೋತಿರಿಂಗಣಂ ಬೆಳಗುಗುಮೇ ॥ ೧೦

ಇದು ದಲವಸ್ತುವೆನ್ನದೆ ಮದುಕ್ತಿಯನೊಯ್ಯನೆ ಕೇಳ್ದು ದಿವ್ಯಚಿ
ತ್ತದೊಳವಧಾರಿಸೆಂತೆನೆ ಜಗದ್ಗುರು ಲೋಕಹಿತಾರ್ಥದಿಂದೆ ಸ ।
ಲ್ವುದು ವಲಮಿಂತಿದಂ ಬಗೆದು ಪುತ್ರಕಳತ್ರಪರಿಗ್ರಹಕ್ಕೆ ಮಾ
ಣದೆ ಬಗೆದರ್ಪುದೊಲ್ಲೆನಿದನೆಂದೊಡೆ ಸೃಷ್ಟಿಯೆ ಕೆಟ್ಟು ಪೋಗದೇ ॥ ೧೧

ಮನುಮಾರ್ಗನಿಪುಣನೆನಿಸಿದ
ನಿನಗಾಮಿರಾಜಮಾರ್ಗಮಂ ತೋಱಿ ಜಗ ।
ಜ್ಜನಕೆ ನಗೆಯಲ್ತೆ ಕಳಭಂ
ವನಪಥಮಂ ಯೂಥಪತಿಗೆ ತೋರ್ಪಂತಕ್ಕುಂ ॥ ೧೨

ಶಾಂತಾತ್ಮ ಮದುವೆನಿಲ್ ನೀ
ನಿಂತೆನ್ನ ಗೃಹಸ್ಥಧರ್ಮದಿಂದಂ ನೀನೆಂ ।

ತಂತೆ ಸಲೆ ನೆಗಟೆ ಜಗತೀ
ಸಂತತಿ ನಿಲೆ ನಿನ್ನ ಧರ್ಮಸಂತತಿ ನಿಲ್ಕುಂ ॥ ೧೩

ಸುತನೆಂಬ ಮೇಳದಿಂ ನಿನ
ಗತರ್ಕ್ಯಬೋಧಂಗೆ ಯುಕ್ತಿಯುಂ ತೋಱಿ ಜಗ ।
ನ್ನುತ ನೋಡ ನನ್ನಿಯಾದುದು
ಸುತಂಗೆ ಕಥೆವೇೞ್ದರೆಂಬ ನಾಣ್ಣುಡಿ ಜಗದೊಳ್ ॥ ೧೪

ಎನೆ ದೇವನ ದರಹಸಿತಾ
ನನದೊಳ್ ತನಗಿಂಬುಕೆಯ್ದು ಬಗೆಯುಂ ಪದಿನಾ ।
ಲ್ಕನೆಯ ಮನು ಜಲಕನಱಿದಂ
ದನಿತುಂ ಭುವನಮುಮನಾಗಳಾಳ್ದಂತೊಸೆದಂ ॥ ೧೫

ವ॥ ಅಂತು ತನ್ನ ಪರೋಧದೊಳಂ ಪ್ರಜಾನುಗ್ರಹಬುದ್ಧಿಯೊಳಂ ಪೋಗಲಾಱದೊಡಂಬಟ್ಟಾದಿಪುರುಷನೊಡಂಬಡನಱಿದು ನಿಶ್ಶಂಕನಾಗಿ ದಿವಿಜೇಂದ್ರನನುಮತದೊಳ್ ಕಚ್ಛಮಹಾಕಚ್ಛರ ತಂಗೆಯರಪ್ಪ ಯಶಸ್ವತಿಮಹಾದೇವಿಯುಂ ಸುನಂದಾಮಹಾದೇವಿಯುಮೆಂಬ ಕನ್ಯಾರತ್ನಂಗಳಂ ಮಹೋತ್ಸಾಹದಿಂದಮೆರಡುದೆಸೆಯೊಳಿರ್ದ ದೇವೇಂದ್ರಶಿಲ್ಪಿಗಳ್ ಸಮೆಯಿಸಿದ ಪಂಚರತ್ನಮಯವಿವಾಹಮಂಟಪದೊಳ್ಡೆಯಱಿದು ನಿಱಿಸಿದ ಕನಕರಜತಮಯಾನೇಕಭಂಗಿಭೃಂಗಾರಂಗಳುಮವಱೊಳ್ ಸಂಗತಂಗಳಾಗಿ ಮಣಿವಿತಾನನಾನಾಮಯೂಖಂಗಳೊಳ್ ಸೆಣಸಿ ಬೆಳಗುವ ಮಣಿಮುಕುರಂಗಳಂ ಅವರ್ಕೆ ತಾಂಗಾಗಿ ಪಚ್ಚೆಯ ಪಸಲೆಯ ಪಸುರನಸಕಳದು ನಿಮಿರ್ದ ನೆಲೆವಡಲಗೆಯ ಜಾಗಂಗಳುಮವನೆ ಸಂಗಡಂಗೊಂಡಿರ್ದ ಸತ್ತಿಸಂಗಡಂಗಳಂ ಅವಱ ಕೆಲದೊಳನೇಕನಾಕಲೋಕೋದ್ಯಾನಪಲ್ಲವೋಲ್ಲಾಸಿತಂಗಳುಂ ಪದ್ಮಾದಿಸರೋವರಮಂಗಳಜಳವಿಳಸಿತಂಗಳುಮಾಗಿ ಸರ್ವಧಾನ್ಯದ ವಿವಾಹವೇದಿಕೆಯ ಮೇಲೆ ನಾಲ್ಕುಂದೆಸೆಯುಮನಳಂಕರಿಸಿರ್ದ ಪೂರ್ಣಕಳಶಂಗಳುಮಂ ಅವನಳಂಕರಿಸಿ ವಧೂವರರ ರಾಗಾಂಕುರಂಗಳಪರ್ಣತಿರ್ದ ರತ್ನಪ್ರದೀಪಂಗಳುಮೆಸೆಯೆ ಬಳಸಿದ ಚೆಂಬೊನ್ನ ಮಾಂಗಾಯ ಗೊಂಚಲ್ಗಳ ಪೊಂದಳರ ತೊಂಗಲ್ಗಳ ಸುತ್ತುಂಗೊಂಡ ಸುರಿಗೆಯ ಮುತ್ತಿನ ಝುಂಝುಕಂಗಳ ನಡುವೆ,

ಕಡೆಯಿಕ್ಕಿದ ಬಿಡುಮುತ್ತಿನ
ಪೊಡರ್ದರ್ಣ್ಮಿವ ಬೆಳಗು ಪೊಳೆವ ದುಗುಲದ ಪಸೆಯೊಳ್ ।
ತೊಡರ್ದಿರೆ ಪೆಱತಲ್ತಿದೆ ಪಾ
ಲ್ಗಡಲೆನಿಸಿದುದಾವಿವಾಹವೇದಿವಿಳಾಸಂ ॥ ೧೬

ಭೃಂಗಾರಹೇಮಚಾಮರ
ಮಂಗಳಮಣಿದರ್ಪಣಪ್ರದೀಪಂಗಳ್ ಜಾ ।
ಗಂಗಳ್ ದೇವಾಂಗವಿತಾ
ನಂಗಳ್ ತುಱುಗಲ್ ಬೆಡಂಗುವಡೆದತ್ತದಱೊಳ್ ॥ ೧೭

ರಂಜಿಸೆ ಚರಣಾಲಕ್ತಕ
ರಂಜನೆ ಮಣಿಕುಟ್ಟಿಮಂಗಳಂ ಸುರಗಣಿಕಾ ।
ಗುಂಜನ್ಮಣಿರಶನಾಮಣಿ
ಮಂಜೀರಕಮಂಜುಶಿಂಜಿತಂ ರಂಜಿಸುಗುಂ ॥ ೧೮

ಪರಿಪೂರ್ಣೋತ್ಸವಮುತ್ಸವ
ಮುರಜಧ್ವನಿಯಿಂದಮಾವಧೂವರರಂ ಪೋ ।
ಬರವೇಪೆಂಬಂತಿರ್ದುದು
ಸುರವಾರಸ್ತ್ರೀವಿಳಾಸಪರಿಣಯನಗೃಹಂ ॥ ೧೯

ಸುರಸಂಗೀತಕಮತ್ತವೊಂದು ದಿಶೆಯೊಳ್ ಮತ್ತೊಂದು ದಿಗ್ಭಾಗದೊಳ್
ನರಸಂಗೀತಕವೊಂದು ಮೆಯ್ಯೊಳಮರರ್ ಮತ್ತೊಂದು ಮೆಯ್ಯೊಳ್ ನರರ
ನೆರೆದಿಂಬಾಗಿರೆ ದೇವಮಾನವಸಭಾಸಂದೋಹದಿಂ ನಾಡೆಯುಂ
ಪರಭಾಗಂಬಡೆದೇಂ ಬೆಡಂಗಿಡಿದುದೋ ತನ್ನಾಭಿರಾಜಾಲಯಂ ॥ ೨೦

ನರಾಮರವಧೂಜನಂ ಬೆರಸಿ ರಾಗದಿಂದಾಡೆ ನೋ
ಟ್ಟರಲ್ಲಿ ಪಿರಿದೊಂದು ಸಂದೆಯಂದೆ ನೋಡೆ ಪೋಗಿಂತಿವಳ್ ।
ನರಾಂಗನೆಯಿವಳ್ ಸುರಾಂಗನೆ ದಲೆಂಬಿನಂ ಮಾಡುಗುಂ
ಕರಂ ಮನದೊಳಲ್ಲಿ ಮರ್ತ್ಯರಮಣೀಶ್ರಮಾಂಭಃಕಣಂ ॥ ೨೧

ಇದು ಜನ್ಮಸ್ನಪನಕ್ಕೆ ನೂರ್ಮಡಿ ಮಿಗಿಲ್ ಕಲ್ಯಾಣಮೆಂದಲ್ಕಱಿಂ
ತ್ರಿದಶೇಂದ್ರಂ ತ್ರಿದಶಾಪ್ಸರಃಪರಿವೃತಂ ಬಂದಾವಿವಾಹಕ್ಕೆ ತ ।
ಕ್ಕುದನೆಲ್ಕೆರ್ತು ನಿರಂತರಂ ಸಮಱಿದಂ ಪೆಣ್ದಂಡಮಿಂದ್ರಾಣಿಯೆಂ
ದುದನೆಂದೆಂದೆಡೆಯಾಡುತಿರ್ಪುದೆನೆ ಮತ್ತೇನೆಂದದಂ ಬಣ್ಣಿಪೇಂ ॥ ೨೦

ವ॥ ಅಂತನುಪಮಱಿದೊಸಗೆಯೊಳಮರರಾಜನುಂ ಸನಾಭಿಗಳ್ ವೆರಸು ನಾಭಿರಾಜನುಂ ಬಂದು ವಿಳಾಸವತಿಯೆನಿಸಿದ ಯಶಸ್ವತಿಯೊಳಂ ಮನೋನಯನಾನಂದೆಯೆನಿಸಿದ ಸುನಂದೆಯೊಳಂ ಬಂದೇ ಪಸೆಯೊಳ್ ಪಾಣಿಗ್ರಹಣಂಗೆಯಿಸಿದಾಗಳ್,

ಅತನುಶ್ರೀಕಾಮಿನೀದರ್ಪಣಮೆನಿಸುವ ತದ್ವಕ್ತ್ರಶೀತಾಂಶು ನೇತ್ರಾ
ಸಿತನೀರೇಜಾತಯುಗ್ಮಕ್ಕಮೃತಸಲಿಲಸಂಸೇಕಮಂ ಮಾಡಿ ಕಲ್ಪ ।
ವ್ರತತೀಸಂಯುಕ್ತಕಲ್ಪಕ್ಷಿತಿರುಹಮನೆ ಪೋಲ್ತಿರ್ದನಾಕಾಂತೆಯರ್ ತ
ಮ್ಮತಿರಾಗಂ ಪೆರ್ಚೆ ತನ್ನಿರ್ಕೆಲದೊಳಮಿರೆ ತನ್ನಾಭಿರಾಜಾಗ್ರಪುತ್ರಂ ॥

ವ॥ ಅಂತಾಜಗತ್ಪವಿತ್ರಚರಿತ್ರಕ್ಷತ್ರನಂದನೆಯೊರೊಳ್ ಆನಾಭಿರಾಜನಂದನಂ, ಆನಿಜಕುಲತಿಲಕೆಯೊರೊಳ್ ಆಮನುಕುಲತಿಲಕಂ, ಆಮಧುಕರನಿಕರಕಾಂತಕುಂತಳಾಳಂಕೃತಾರ್ಧೇಂದುಸಾಂದರಲಲಾಟೆಯೊರೊಳ್ ಆಕುಟಿಲಕುಂತಳಮಂಡಿತವಿಪುಳಲಲಾಟಂ, ಆವಿಕಚನೀಲೋತ್ಪಳಲೋಚನೆಯರೊಳ್ ಆವಿಮುಕುಳಕಮಳದಳವಿಲೋಲಲೋಚನಂ, ಆಚಂಪಕಕಳಿಕಾವಿಳಾಸನಾಸಿಕಾವಂಶೆಯರೊಳ್ ಆಲಾವಣ್ಯಾಂಭಃಪ್ಲವಪ್ರಣಾಳಾಯಮಾನೋತ್ತುಂಗನಾಸಾವಂಶಂ, ಆಮದನಮಂಗಳಮುಕುರಾನುಕಾರಿಕಪೋಲತಳೆಯರೊಳ್ ಆಕಲ್ಯಾಣಕಾರ್ತಸ್ವರಾದರ್ಶಸದೃಶಕಪೋಲತಳಂ, ಆಮಣಿಮಯಕುಂಡಳಮರೀಚಿಮಂಜರೀಮನೋಹರಕನ್ಯೆಯರೊಳ್ ಆಪರಾರ್ಘ್ಯರತ್ನಕರ್ಣಪೂರಮಯೂಖಪ್ರವಾಹಸಂದೋಹಾಲಂಕೃತಕರ್ಣಂ, ಆಪರಿಸ್ಫುರನ್ಮಯೂಖದಶನೆಯರೊಳ್ ಆರಾಜದ್ವಜ್ರೋಜ್ಜ್ವಳದ್ದಶನಂ, ಆಪ್ರವಾಳಪಾಟಲಾಧರಿಯರೊಳ್ ಆನವಾಮ್ರಮೃದುಪಲ್ಲವಾಧರಂ, ಆರೇಖಾತ್ರಯಬಂಧುರಕಂಧರೆಯರೊಳ್ ಆಕಂಬುಕುಬ್ಜಕಮನೀಯಕಂಧರಂ, ಆರಾಜಹಂಸೋನ್ನತಾಂಸೆಯರೊಳ್ ಆಕನಕಶಿಖರಿಶಿಖರೋನ್ನತಾಂಸಂ,

ಆಶಿರೀಷಕುಸುಮದಾಮಸುಕುಮಾರಬಾಹುಲತೆಯರೊಳ್ ಆಪರಿಘಪರಿವೃತ್ತದೀರ್ಘಬಾಹುಯುಗಳಂ, ಆಬಾಹುಮೂಲಪರ್ಯಂತವಿಶ್ರಾಂತಕುಚಮಂಡಲೆಯರೊಳ್ ಆಲಕ್ಷ್ಮೀಲೀಲಾವಿಹಾರಾಚಳರುಚಿರವಕ್ಷಸ್ಸ್ಥಳಂ, ಆ ಕಾಮಕಾರ್ಮುಕಯಷ್ಟಿಮುಷ್ಟಿಸಮಾಯತಮಧ್ಯೆಯರೊಳ್ ಆರಾಜಕಂಠೀರವಮಧ್ಯಂ, ಆಮದನಚಕ್ರವರ್ತಿಕ್ರೀಡಾಚಳೋನ್ನತಜಘನೆಯರೊಳ್ ಆಮಹೇಂದ್ರವಿರಚಿತಸಿಂಹಾಸನಾರೋಹಣೋಚಿತಜಘನಂ, ಆಕನಕಕದಳೀಸ್ತಂಭವಿಭ್ರಮಜಂಘಾಯುಗಳೆಯರೊಳ್ ಆಭುವನಭರಣೋತ್ತರಣಸ್ತಂಭರಮಣೀಯಜಂಘಾಯುಗಳಂ, ಆನವಮಣಿಗಣಮರೀಚಿಕುಸುಮೋಲ್ಲಸಿತಪದಪಲ್ಲವೆಯರೊಳ್ ಆಪುರಂದರಚೂಡಾರತ್ನಪ್ರತಿಬಿಂಬಚುಂಬಿತನಖೋಲ್ಲಸಿತಪದಪಲ್ಲವಂ, ಆಲಾವಣ್ಯಜಳಧಿವೇಳೆಯರೊಳ್ ಆಲಾವಣ್ಯಾರ್ಣವಕಲ್ಲೋಲಂ, ಆಮನೋಜರಾಜಚಿತ್ರಪತಾಕೆಯರೊಳ್ ಆಮನಸಿಜವಿಜಯಕೇತನವಂಶಂ ನೆರೆದಿರೆ,

ಸಮಲಾವಣ್ಯಪ್ರಸರದ
ಸಮವಿಭವದ ಸಮವಿಳಾಸದಗ್ಗಳಿಕೆಯೊಳಾರ್ ।
ಸಮನಿವರ್ಗೆನೆ ಸಮರಸದೊಳ್
ಸಮಸಂದತ್ತವರ್ಗೆ ಸಮಸಮಾಯೋಗಸುಖಂ ॥ ೭೪

ವ॥ ಅಂತಾಗರ್ಭೇಶ್ವರಿಯರ್ ಆಪುರುಪರಮೇಶ್ವರನ ಮನಸ್ಸರೋವರದೊಳ್ ತಮ್ಮ ಪಾದಪದ್ಮಂಗಳಂ ನೆಲೆಗೊಳಿಸಿಯುಂ, ಆನವಮಾಳಿಕೋದ್ದಾಮಕೋಮಳೆಯರ್ ಆತ್ರಿಲೋಕತಿಳಕನ ಮನೋಮದೇಭಮಂ ತಮ್ಮ ರಂಭಾಸ್ತಂಭಾಯಮಾನೂರುಸ್ತಂಭಂಗಳೊಳಾಳಿಸಿಯುಂ, ಆಜಿತಾಮರಕಾಮಿನಿಯರ್ ಆಮಹಾನುಭಾವನ ಮನೋಮದಕಳಹಂಸನಂ ತಮ್ಮ ಜಘನವಿಪುಳಪುಳನತದೊಳಾಳಿಸಿಯುಂ, ಆಮದಾಲಸಗಮನೆಯರ್ ಆ ಜಗತ್ಪತಿಯಮನೋಯಾನಪಾತ್ರಮಂ ತಮ್ಮ ತಳೋದರಜಳಧಿನಾಭಿಗಂಭೀರಾವರ್ತದೊಳ್ ಸುಳಿಯಿಸಿಯುಂ, ಆತನೂದರಿಯರ್ ಆನಾಭೇಯನ ಮನಸ್ಸರಸ್ತಟಮಂ ತಮ್ಮ ವಳಿತ್ರಯತರಂಗಂಗಳಿಂದಮಳ್ಕಿಸಿಯುಂ, ಆಕುಸುಮಸುಕುಮಾರತನುಗಳ್ ಆಭುವನಭವನಮೂಲಸ್ತಂಭತನೂಜನ ಮನೋಮಂಗಳಗೇಹಮಂ ತಮ್ಮ ಕುಚಕುಂಭಂಗಳಿನಲಂಕರಿಸಿಯುಂ, ಆ

ಮದಕೋಕಿಳಕಲಾಲಾಪೆಯರ್ ಆಸಕಳಕಳಾನಿಳಯನ ಮನೋಮೃಗಮಂ ತಮ್ಮ ಮೃದುಮೃಣಾಳಕೋಮಳಬಾಹುಪಾಶಂಗಳೊಳ್ ತೊಡರ್ಚಿಯುಂ, ಆಚಂಪಕಮುಕುಳವಿಳಾಸನಾಸಾವಂಶೆಯರ್ ಆವಿಶ್ವೇಶ್ವರನ ಮನೋಮಧುಕರಮಂ ತಮ್ಮ ಮುಖಾರವಿಂದದೊಳ್ ನಲಿಯಿಸಿಯುಂ, ಆನೀಲನೀರೇಜನಯನೆಯರ್ ಆಮನುವಂಶಭವ್ಯಕುಮುದಾಕರಬಾಂಧವನ ಮನೋಲತಾಂತಮಾಲೆಯಂ ತಮ್ಮ ಕೇಶಹಸ್ತದಿಂ ಕೈಕೊಂಡುಂ ಇಂತು,

ಆಪುಣ್ಯವತಿಯರಿರ್ಬರು
ಮಾಪರಮೇಶ್ವರನ ಮನಮನಿರ್ಕುಳಿಗೊಳೆ ಮ |
ತ್ತಾಪೀನವೃಷಸ್ಕಂಧನು
ಮಾಪದ್ಮಾಸ್ಯೆಯರ ಮನಮನಿರ್ಕುಳಿಗೊಂಡಂ ‖ ೨೫

ವ‖ ಅಂತಾಲತಾಂಗಿಯರೊಳ್ ಆದಿಪುರುಷನಶೇಷಸಂಸಾರಸುಖಮನನುಭವಿಸುತ್ತಿರ್ಪಿನಂ, ಅನೇಕಸಂವತ್ಸರಂಗಳ್ ಅವಿದಿತಸ್ವರೂಪಂಗಳೇಕಸಂವತ್ಸರಸಮಾನಂಗಳಾಗಿ ಪೋಗೆ ಯಶಸ್ವತಿಮಹಾದೇವಿ ಮತ್ತೊಂದುದಿವಸಂ ಚತುರ್ಥಸ್ನಾನದೊಳ್ ಸುಧಾರಮ್ಯಹರ್ಮ್ಯತಳದೊಳೇಬಿನೆಯ ನೆಲೆಯೊಳ್ ಪುರುಪರಮೇಶ್ವರನೊಡನೆ ಪವಡಿಸಿ ಯಾಮಿನೀವಿರಾಮಸಮಯದೊಳ್,

ಗಗನಾಂಭೋರಾಶಿಶಂಖೋಪಮಹಿಮಕರನಂ ದೀಪ್ಯಮಾನಪ್ರತಾಪ
ಸ್ಥಗಿತಾಶಾಚಕ್ರಚಂಡಾಂಶುವನಮರಮನೋಹಾರಿಹೇಮಾದ್ರಿಯಂ ವ್ಯೋ |
ಮಗಕಲ್ಲೋಲಾಬ್ಧಿಯಂ ತಾಮರಸಕರಪಯೋಜಾಶ್ರಿತಶ್ರೀಯನಾಳೋ
ಕಗತಾಂಶುವ್ರಾತರತ್ನೋಜ್ಜ್ವಳಸುರತರುವಂ ಸ್ವಪ್ನದೊಳ್ ದೇವಿ ಕಂಡಳ್

ವ‖ ಆಗಳಮರವಾದಕವಾದ್ಯಮಾನದುಂದುಭಿಶಂಖಕಾಹಳಾಪ್ರಭಾತಪಟಹಧ್ವನಿಗಳ್ ದೆಸೆದೆಸೆಗೆಸೆಯೆಯುಂ, ಅನೇಕಮಾಗಧಮಂಗಳಪಾಠಕಕೋಳಾಹಳಂಗಳ್ ನೆಗೞೆಯುಂ, ಉದಯಾಚಳಚೂಡಾಮಣಿಮರೀಚಿನಿಚಯಚುಂಬಿತಾಂಬುಜವನಲಕ್ಷ್ಮಿಯೊಡನೆ ಲಬ್ಧಪ್ರಬೋಧೆಯಾಗಿ ಪೂಜಿತಕುಲದೇವತೆ ರಾಜ್ಯಾಧಿದೇವತೆಯಂತೆ ಗೃಹೀತಮಂಗಳಪ್ರಸಾಧನೆಯುಂ ಪರಿವಾರವಾರಾಂಗನಾಪರೀತೆಯುಮಾಗಿ ಮನೋವಲ್ಲಭನಲ್ಲಿಗೆ ವಂದು ತದರ್ಧಾಸನಮನಲಂಕರಿಸಿ ತನ್ನ ಕಂಡ ಕನಸುಗಳನನುಕ್ರಮಂದಪ್ಪದಱಿಪುವುದುಂ

ಅನಿತುಮಂ ಪುರುಪರಮೇಶ್ವರನವಧಾರಿಸಿ, ತತ್ಸ್ವಪ್ನಫಲಂಗಳನಿಂತೆಂದು ಬೆಸಸಿದಂ.

ಪರಿಪೂರ್ಣೇಂದುವಿನನ್ವಯಾಭ್ರತಿಳಕಂ ತಿಗ್ಮಾಂಶುವಿಂ ತೀವ್ರಭಾ
ಸುರತೇಜಂ ಸುರಶೈಲದಿಂ ಸಕಳಭೂಭೃನ್ಮುಖ್ಯನಂಭೋಧಿಯಿಂ ।
ಪರಮಾಗಾಧಗುಣಂ ಪಯೋರುಹವಿಳಾಸಸ್ಥಾನೆಯಿಂ ಭೂವಧೂ
ವರನಬ್ಜೇಕ್ಷಣೆ ಕಲ್ಪವೃಕ್ಷದಿನಿಳಾಲೋಕೈಕಕಲ್ಪದ್ರುಮಂ ॥ ೨೭

ನಿನಗೆ ಭರತಾವನೀತಳ
ಮೆನಿತನಿತುಮನಾಳ್ವನೊರ್ವನಾದಪ್ಪಂ ನಂ ।
ದನನಾತನನುಜರಘಕುಳ
ವನದಹನರ್ ಪಲರುಮಪ್ಪರಪ್ರತಿಮಲ್ಲರ್ ॥ ೨೮

ವ॥ ಎಂದು ಬೆಸಸಿದಾಗಳ್,

ಪುಳಕಂ ಪುದಿದಿರೆ ರಾಗಂ
ಪೊಳೆಪಂ ತನುರುಚಿಗೆ ಕೂಡೆ ತಂಬೆಲರಲೆಪಿಂ ।
ಕಳಕೆಯೊಳೆ ತುಱುಗಿ ತಳಿರೊಳೆ
ತಳತಳಸಿದುದೆಂದಶೋಕಲತೆಯನೆ ಪೊಲ್ತಳ್ ॥ ೨೯

ವ॥ ಅನ್ನೆಗಂ ವ್ಯಾಘ್ರನುಂ ದಿವಾಕರಪ್ರಭಾಕರನುಂ ಮತಿವರಮಂತ್ರಿಯುಂ ಅಧೋಗ್ರೈವೇಯಕದಿವಿಜನುಂ ಸುಬಾಹುಮಹೀಪತಿಯುಂ ಸರ್ವಾರ್ಥಸಿದ್ಧಿಯೊಳ್ ಪುಟ್ಟಿದಹಮಿಂದ್ರಂ ಬಂದು ಯಶಸ್ವತಿಮಹಾದೇವಿಯ ಗರ್ಭಾವಾಸದೊಳ್ ಶುಕ್ತಿಪುಟೋದರವರ್ತಿಯಪ್ಪ ನಿರ್ಮಳೋದಕಬಿಂದುವಿನಂತೆ ಸಂಕ್ರಮಿಸೆ ಗರ್ಭಮಂ ತಾಳ್ದಿ,

ನೆಗಳ್ದ ಹಿರಣ್ಯಗರ್ಭನಮನಃಪ್ರಿಯವಲ್ಲಭೆ ರತ್ನಗರ್ಭಭೂ
ಮಿಗೆ ಫಳಗರ್ಭವಲ್ಲರಿಗೆ ಬಾಳದಿವಾಕರಗರ್ಭವಾಸವಾ ।
ಶೆಗೆ ಕಳಹಂಸಗರ್ಭಕಳಹಂಸಿಗೆ ಸಿಂಹಕಿಶೋರಗರ್ಭಸಿಂ
ಹಿಗೆ ದೊರೆಯಾಗಿ ಗರ್ಭನಿಳಯಾರ್ಭಕನುನ್ನತಿಯಂ ನಿಮಿರ್ಚಿದಳ್ ॥ ೩೦

ಜಗದ ಬಡತನಮನೊರ್ವೆಯೆ
ಬಗೆದಂತಿರೆ ಕಿಡಿಪ ಚಕ್ರಿ ತನ್ನಿರ್ದೆಡೆಯೊಳ್ ।
ನೆಗೆಟ್ದು ಬಡತನಮನದನೇ
ಕೆ ಗಡಂ ಸ್ಥೈರಿಸುವನೆನೆ ಪೊದಟ್ದುದು ಮಧ್ಯಂ ‖ ೩೧

ಚತುರಂತಕ್ಷಿತಿ ಗರ್ಭ
ಸ್ಥಿತನದು ಗಡಿಮೆಂದು ಮುದ್ರಿಪಂತಾಯ್ತು ಯಶ ।
ಸ್ವತಿಯ ಪದನ್ಯಾಸಂ ವಿಳ
ಸಿತಲಾಕ್ಷಾರಸಮಪೂರ್ವಮಣಿಕುಟ್ಟಿಮದೊಳ್ ‖ ೩೨

ವ॥ ಅಂತು ಗರ್ಭಚಿಹ್ನಂಗಳ್ ತೋಱೆ, ಲೀಲಾಭವನೋಪವನಕೃತಕ ಗಿರಿಗಳಿರ್ದಂತೆ ವಿಜಯಾರ್ಧಹಿಮವದಚಳಕೂಟಂಗಳೊಳ್ ವಿಹಾರಿಸಲುಂ, ನಿಜಗೃಹೋಪವನಕ್ರೀಡಾಸರೋವರಂಗಳಿರ್ದಂತೆ ಗಂಗಾಜಲಲವಣಾಬ್ಧಿ ವೇಳಾವನಸರಸೀಸಲಿಲಂಗಳೊಳ್ ಜಲಕ್ರೀಡೆಯಾಡಲುಂ, ವಿಳಾಸಮಂದಿರಪ ರಿಸರನಂದನಲತಾನಿಕೇತನಂಗಳಿರ್ದಂತೆ ಮಳಯಾಚಳಚಂದನನಂದನಂಗ ಳೊಳ್ ರಮಿಯಿಸಲುಂ, ಕುಮಾರಭೃತ್ಯಕುಶಲಭಿಷಕ್ಪರಿಷತ್ಸಂಪಾದಿತಕಲ್ಯಾ ಣಾಮೃತಾಹಾರಂಗಳಿರ್ದಂತೆ ಷಟ್ಖಂಡಕ್ಷೇತ್ರಮೃತ್ತಿಕೆಯನೆ ಸವಿನೋಡ ಲುಂ, ಸೇವಾಭಿಜ್ಞವಾರಾಂಗನಾಶೃಂಗಾರಸುಧಾಸಿಕ್ತಸೂಕ್ತಿಗಳಿರ್ದಂತೆ ನಿಸ್ಸ ಹಾಯಸಾಹಸೋತ್ಕೀರ್ಣಮಹಾಹವಾರ್ಣವಪ್ರವೀರಪ್ರಾರಬ್ಧಾರಭಟೀಸ ಮುದ್ಭಟಕಥೆಗಳನೆ ಕೇಳಲುಂ, ಮೃದುಮಧುರವಿದಗ್ಧಮುಗ್ಧಪರಿಹಾ ಸಮನೋಹರಾಳಾಪಶುಕಶಾರಿಕೆಗಳಿರ್ದಂತೆ ಪಂಜರಗತಕುಂಜರಾರಾತಿಕಿ ಶೋರಕೇಸರಿಗಳನೆ ತರಿಸಿ ನೋಡುತ್ತಿರಲುಂ,

ಕೆಲದೊಳ್ ಶ್ರೀದರ್ಪಣಂ ಬಂದಿರೆಯುಮೊಸೆದು ವಕ್ತ್ರೇಂದುವಂ ಖಡ್ಗ
ದೊಳ್ ನೋ
ಡಲುಮಾತೋದ್ಯಪ್ರಗೀತಧ್ವನಿಗಳಿರೆ ಧನುರ್ದಂಡಟಂಕಾರಮಂ ಕೇ ।
ಳಲುಮಚ್ಕಿರ್ಪೆಚ್ಚೆ ತತ್ಕಾಂತೆಗೆ ನೆಗೆಟ್ದುವು ಗರ್ಭಸ್ಥನುತ್ಸಾಹಮಂ ತೋ
ಳ್ಪಲಮಂ ಸಾಮ್ರಾಜ್ಯಮಂ ಸೂಚಿಸುವವೊಲತಿಚೋದ್ಯಂಗಳೀದೌಹೃದಂ
ಗಳ್ ‖ ೩೩

ವ॥ ಅಂತು ಚಕ್ರವರ್ತಿಜನ್ಮೋತ್ಸವಸೂಚಕಮಪ್ಪನೇಕದೋಹಳಸಂದೋಹಂ ನೆಗಳೆ ಸುಖಪ್ರಸೂತಿಸಮಯದೊಳ್,

ಮನುಗೋತ್ರಾಂಭೋಧಿಚಂದ್ರಂ ಮನುಕುಲಸರಸೀವಿಭ್ರಮೋತ್ತಂಸಹಂಸಂ
ಮನುವಂಶಪ್ರಾಜ್ಯಶೈಲದ್ಯುಮಣಿ ಮನುನೃಪಾಮ್ನಾಯದುರ್ಗಾದ್ರಿಸಿಂಹಂ
ಮನುಭೂಪಾಳಾನ್ವಯಶ್ರೀಭವನಕಳಶಮೆಂಬಂತು ವಿಖ್ಯಾತಪುಣ್ಯಂ
ಮನುಧಾತ್ರೀಪಾಲಚೂಡಾಮಣಿ ಜನಿಯಿಸಿದಂ ಚಕ್ರವರ್ತಿಪ್ರಧಾನಂ ॥ ೩೪

ವ॥ ಆಪ್ರಸ್ತಾವದೊಳ್

ಎಸಗಿದುದು ಸಮೀರಂ ಶೈತ್ಯಸೌರಭ್ಯಮಾಂದ್ಯಾ
ವಸಥಮೆಸೆದುದಾಶಾಚಕ್ರಮಂಭೋದಮಾರ್ಗಂ ।
ಪೊಸತೆ ತೊಳೆದುದೀಗಳ್ ಪಾಲೊಳೆಂಬಂತುಟಾಯ್ತೇ
ನೆಸೆದು ಸೊಗಯಿಸಿತ್ತಾ ಚಕ್ರಿಜನ್ಮೋತ್ಸವಾಹಂ ॥ ೩೫

ವ॥ ಆಗಳ್ ಸರಭಸಪ್ರಚಾರಿತಪರಿಜನಪದಕ್ಷೋಭವಿಚಳಿತಮಹೀತಳಮುಂ, ಪ್ರತಿನಿಕೇತನೋತ್ಥಾಪಿತವಿಚಿತ್ರಕೇತನಮುಂ, ಮೃಗಮದಜಳಚ್ಛಟಾಸಿಕ್ತಪ್ರಾಂಗಣಮುಂ, ಮಧುಕರನಿಕರಝುಂಕಾರಹಾರಿಕುಸುಮೋಪಹಾರಮುಂ, ಮಹೀಪತಿನಿವೇದನಸಂಭ್ರಮಗಮನಸ್ಖಲಿತವೃದ್ಧಕಂಚುಕಿನಿಕರಮುಂ, ಅಂತಃಪುರಪರಿಜನನಿರ್ದಯಸಂಮರ್ದನಪತಿತಕುಬ್ಜವಾಮನವರ್ಷಧರನಿಕರುಂಬಮುಂ, ನಾಭಿವಿಲಂಬಮಾನಲಂಬಸ್ತನವಿಸ್ರಸ್ತಾಂತರೀಯೋತ್ತರೀಯವೃದ್ಧಧಾತ್ರೀನರ್ತನನಿರೀಕ್ಷಣಜನತಾಜನಿತಹಾಸನಿವಾಸಮುಂ, ಯುಗಪದುತ್ಥಿತಮಂಗಳಗೀತನೃತ್ಯೋನ್ಮಿಶ್ರಿತಾನೇಕಾನಕಲಯಾನುಗತಲೀಲಾಲಾಸ್ಯಪ್ರಸಕ್ತಕಾಮಿನೀಕಮನೀಯಮುಮಾಗಿ,

ಮನುಜಾಧೀಶಸಮೂಹಸಂಚರಣದಿಂ ಸಾಮಂತಸೀಮಂತಿನೀ
ಜನಸಮ್ಮರ್ದದಿನುತ್ಸವಧ್ವಜಪಟಪ್ರಸ್ತಾರದಿಂ ರತ್ನವಂ ।
ದನಮಾಲಾಪ್ರಚುರಪ್ರಭಾಪ್ರಸರದಿಂದಾನಂದಭೇರೀಬೃಹ
ದ್ಧ್ವನಿಯಿಂದಾಲಯಮಾಯ್ತದೊಂದು ಪಿರಿದುಂ ಚೆಲ್ವಿಂಗೆ ರಾಜಾಲಯಂ ॥

ವ॥ ಆಗಳ್ ನಾಭಿರಾಜಕಚ್ಛಮಹಾಕಚ್ಛಪ್ರಮುಖಪ್ರಭುಗಳ್ ನೆರೆದು ಜಾತಕರ್ಮೋತ್ಸವಮಂ ಮಾಡಿದ ತದನಂತರದೊಳ್,

ಭಾವಿಭರತೇಶಪದಮುಮಿ
ಳಾವಿಪುಳಪ್ರೇಮಭರಮುಮೆರ್ದೆಗೊಂಡಿರೆ ಸ।
ದ್ಭಾವದಿನಿಟ್ಟುದು ಬಂಧುಜ
ನಾವಳಿ ಕೂಸಿಂಗೆ ಭರತನೆಂಬೀಪೆಸರಂ ॥ ೩೭

ವ॥ ಅಂತು ನಿಜದೇಹಪ್ರಭಾಪ್ರವಾಹಜಲಂಗಳೊಳಂ ಕರಚರಣತಳರಕ್ತಾಂಭೋರುಹಂಗಳೊಳಂ ಅತಿಮೃದುಳಬಾಹುಬಾಳಮೃಣಾಳಕಾಂಡಂಗಳೊಳಂ ರಾಜ್ಯಲಕ್ಷ್ಮೀಲೀಲಾಕರನಪ್ಪುದಂ ನನ್ನಿಮಾಡುತ್ತುಮಂತಃಪುರಕಾಂತಾಕರಪರಂಪರಾಸಂಚಾರರತ್ನದರ್ಪಣನುಂ ಬಂಧುಜನಕರಕಮಳವನವಿಹಾರಕೇಳೀಕಳಹಂಸನುಂ ಗುರುಜನನಯನೇಂದೀವರಾನಂದನಶರಚ್ಚಂದ್ರನುಮಾಗಿ,

ದರಹಸಿತಂ ಹಸಿತಂ ಸುಂ
ದರಮನ್ಮಥಲಸಿತರುಚಿತರಂಗಿತಮೆಂಬೀ।
ಪರಿವಡಿಯ ಬಾಲಕೇಳಿಯೆ
ಕರಮೆ ಮರುಳ್ಚಿದುದು ತಾಯುಮಂ ತಂದೆಯುಮಂ ॥ ೩೮

ನುಡಿಯ ತೊದಳ್ ನಡೆಯ ತಳರ್
ಜಡೆಗಳ ಕೆಂಪಲರ್ದ ಮೊಗದ ಕಿಱುನಗೆ ಕೆಂಪಂ।
ಪಡೆದಧರಮಣಿಯ ಚೆಲ್ವಡಿ
ಗಡಿಗೆಸೆದುವು ಬಾಳಭಾವದೊಳ್ ಪುರುಸುತನಾ ॥ ೩೯

ಕೊರಲೊಳ್ ಶಾರ್ದೂಲನಖಾಂ
ಕುರಂಗಳುಂ ಹರಿನಖಾಂಕುರಂಗಳುಮಂದೇಂ।
ಕರಮೆಸೆದಿರ್ದುವೊ ಶೌರ್ಯಾಂ
ಕುರಂಗಳೆಂಬಿನೆಗಮಾದಿದೇವಾತ್ಮಜನಾ ॥ ೪೦

ನುಡಿಯ ಪೊದಪ್ಕೆಯೊಳೊಳ್ನುಡಿ
ನುಡಿದಂ ನಿಜಸಕಳಚಕ್ರವರ್ತಿತ್ವಕ್ಕಂ

ದಡಿಯಿಡುವಂತೆ ನಿರಂತರ
ಮಡಿಯಿಟ್ಟಂ ಪದ್ಮರಾಗಕುಟ್ಟಿಮತಳದೊಳ್ ॥ ೪೧

ವ॥ ಅಂತು ನಿಜಾನ್ವಯಲೀಲಾಲಲಾಮಂಗೆ ಲೋಕಯಾತ್ರಾಪ್ರವರ್ತನನಿಮಿತ್ತಮಾದಿಬ್ರಹ್ಮನನ್ನಪ್ರಾಶನಚೌಲೋಪನಯನಾದಿಕ್ರಿಯೆಗಳನನುಕ್ರಮದಿಂ ತಾನೆ ಮಾಡಿ ಸಹಪಾಂಸುಕ್ರೀಡಾನೇಕವಿಭ್ರಮಕ್ರೀಡಾರಸೋದಾರರಾಜದಾರಕಪರಿವೃತನಾಗಿ, ಮೃಗಮದಕರ್ದಮಸಂಪಾದಿತಲೇಖಾಮಂಡಿತಗಂಡಸ್ಥಳನುಂ, ಕುಂಕುಮಪಾಂಸುಪಟಲಸಾಂದ್ರಸಿಂದೂರಿತಮಸ್ತಕಪಿಂಡನುಂ, ದಕ್ಷಿಣಕರಾಳಂಬಿತನಿಬಿಡನಿವೇಷ್ಟಿತಾಂಶುಕವಿಶಾಲಸ್ಥೂಲವೃತ್ತಹಸ್ತನುಂ, ಮದಾಂಧವಿಜಯಸಿಂಧುಸಿಂದೂರೀಕೃತನುಂ, ದಶೈಕಾದಶವರ್ಷದೇಶೀಯನುಂ, ಅಂತಃಪುರದಾಸೇರಕನನೇಱಿ ಕಿಂಚಿದಾಕುಂಚಿತಾಗ್ರತರ್ಜನೀನಿಶಿತಾಂಕುಶನಂತಃಪುರಪ್ರಮದವನಪ್ರವಿಷ್ಟನಾಗಿ, ಕೃತಕಗಿರಿಶಿಖರಂಗಳಂ ಗಿರಿದುರ್ಗೋತ್ತುಂಗಶಿಖರಂಗಳೆಂದು ಪಾಯಿಸಿಯುಂ, ಅತಿನಿಬಿಡಬಾಳಕದಳೀಷಂಡಂಗಳಂ ವನದುರ್ಗಂಗಳೆಂದೆ ಪಡಲ್ವಡಿಸಿಯುಂ, ಶತಸಹಸ್ರಮುಖಾವಹಜಾನುದಘ್ನದೀರ್ಘಿಕಾಂಭಃಕುಲ್ಯಾಪ್ರವಾಹಂಗಳಂ ಜಲದುರ್ಗಂಗಳೆಂದೆ ನೂಂಕಿ ಕದಡಿಯುಂ, ಲೀಲಾಕಮಲಾಕರಾನೀಕರಕ್ತಕಮಳಂಗಳನಾಸ್ಯಾನುಶೋಣಿತಶೋಣರಿಪುನೃಪಶಿರಂಗಳೆಂದೆ ತುಳಿಯಿಸಿಯುಂ, ಉದ್ದಂಡಪುಂಡರೀಕಂಗಳಂ ಶ್ವೇತಾಪತ್ರಂಗಳೆಂದೇ ಮಾಡಿ ಪಿಡಿಸಿಯುಂ, ಅಭಿನವೋದ್ವೃತ್ತಧೌತಶಂಖಶಶಾಂಕವಿಶದಜಳಾರ್ದ್ರಜಳಕುಸುಮಂಗಳಂ ಸಾರ್ವಭೌಮೋಚಿತದ್ವಾತ್ರಿಂಶಚ್ಚಾರುಚಾಮರಂಗಳಂ ಮಾಡಿ ಪಿಡಿಸಿಯುಂ, ಸಮುಲ್ಲಸದಶೋಕಪಲ್ಲವಂಗಳನನೇಕವಿಜಯವೈಜಯಂತಿಗಳೆಂದೇ ಮಾಡಿಸಿಕೊಂಡೆತ್ತಿಯುಂ, ವಂದಿಬಾಳಕವೃಂದಜಯಜಯಾನಂದಕೋಳಾಹಳಮೊಸೆಯೆ ಲತಾಗೃಹಮೆಂಬರಾಜಗೃಹಕ್ಕೆವಂದು,

ವಿವಿಧಕಳಿಂಗವಂಗಖಗಘೂರ್ಜರಮಾಳವಕೋಳಪಾಂಡ್ಯಪ
ಲ್ಲವನೃಪಮಂಡಲಂಗಳೆಳಿವಂಗಿವು ಜೀವಿತಮೆಂದು ಕೊಟ್ಟು ಪೊ ।
ಣ್ಮುವ ನಿಜವಿಕ್ರಮೈಕರಸಮಂ ಶಿಶುಭಾವದೊಳಂ ನಿರಂತರಂ
ಭುವನಜನಕ್ಕೆ ಸೂಚಿಸಿದನೀತೆರದಿಂ ಪುರುದೇವನಂದನಂ॥ ೪೨

ವ॥ ಅಂತು ನಿಖಿಳಜಗದಾಶ್ಚರ್ಯಶೌರ್ಯರಸಬಹಳಬಾಲಕ್ರೀಡಾಚಮತ್ಕಾರಿತವೀರಚಕ್ರನುಂ ನಿಜೋದಯಾನಂದಿತಜಗಚ್ಚಕ್ರನುಮಾಗಿ ಯೌವನಪ್ರಾಪ್ತನಾಗೆ,

ತಂದೆಯ ರೂಪೆ ತಂದೆಯ ವಿಳಾಸಮೆ ತಂದೆಯ ಚೆಲ್ವೆ ತಂದೆಯೊಂ
ದಂದಮೆ ತಂದೆಯೊಂದು ನುಡಿಯೋಜೆಯೆ ತನ್ನೊಳಮರ್ಕೆವೆತ್ತುದಾ।
ನಂದಕರಂ ಕರಂ ಸೊಗೆಯಿಸುತ್ತಿರೆ ಶೋಭಿಸಿದಂ ಕುಮಾರನಾ
ನಂದಿತರೂಪನಂದೆಸೆಯೆ ತಂದೆಯೊಳಚ್ಚಿನೊಳೊತ್ತಿದಂತೆವೋಲ್ ॥ ೪೩

ವಿಪುಳಯಶಃಪಿಂಡಂ ಪು
ಣ್ಯಪುಂಜಮಾಕ್ಷತ್ರಧಾಮಧಾಮಂ ತಾನಾ ।
ನೃಪಸುತನೆನ್ನದೆ ಪೆಱತೊಂ
ದು ಪಾಂಗಿನೊಳ್ ನೆಗಳ್ದ ಭರತನಂ ಬಣ್ಣಿಪರಾರ್ ॥ ೪೪

ವ॥ ಮತ್ತಮಾಕುಮಾರನಿಂ ನೇರ್ಗಿಱಿಯನಾಗಿ ಮುನ್ನ ಪೇಳ್ದ ಪುರೋಹಿತನಾನಂದನುಂ ದಿವಾಕರನುಂ ಅಧೋಗ್ರೈವೇಯಕಾಹಮಿಂದ್ರನುಂ ಮಹಾಪೀಠನುಮಾಗಿ ಸರ್ವಾರ್ಥಸಿದ್ಧಿಯೊಳ್ ಪುಟ್ಟಿದ ಅಹಮಿಂದ್ರಂ ಬಂದು ವೃಷಭಸೇನನೆಂಬೊಂ ತನಯನಾದಂ; ಶ್ರೇಷ್ಠಿಧನಮಿತ್ರನುಂ ಅಧೋಗ್ರೈವೇಯಕಾಹಮಿಂದ್ರನುಂ ಮಹಾಪೀಠನುಮಾಗಿ ಸರ್ವಾರ್ಥಸಿದ್ಧಿಯೊಳ್ ಪುಟ್ಟಿದಹಮಿಂದ್ರನುಂ ಬಂದುಮನಂತವಿಜಯನೆಂಬ[1]ತನೂಜನಾದಂ; ಶಾರ್ದೂಲಾರ್ಯನುಂ ಚಿತ್ರಾಂಗದೇವನುಂ ವರದತ್ತನೃಪನುಮಚ್ಯುತಸಾಮಾನಿಕನುಂ ವಿಜಯನೃಪನುಮಾಗಿ ಸರ್ವಾರ್ಥಸಿದ್ಧಿಯೊಳ್ ಪುಟ್ಟಿದಹಮಿಂದ್ರಂ ಬಂದನಂತವೀರ್ಯನೆಂಬಂ ತನೂಭವನಾದಂ; ವರಾಹಾರ್ಯನುಂ ಮಣಿಕುಂಡಲಾಮರನುಂ ವರಸೇನಭೂಮಿಪನುಮಚ್ಯುತಸಾಮಾನಿಕನುಂ ವೈಜಯಂತಭೂಪನುಮಾಗಿ ಸರ್ವಾರ್ಥಸಿದ್ಧಿಯೊಳಹಮಿಂದ್ರನಾಗಿ ಪುಟ್ಟಿದ ದಿವಿಜೇಂದ್ರಂ ಬಂದಚ್ಯುತನೆಂಬನಾತ್ಮಜನಾದಂ; ವಾನರಾರ್ಯನುಂ ಮನೋಹರದಿವಿಜನುಂ ಚಿತ್ರಾಂಗದಾವನಿಪನುಂ ಅಚ್ಯುತಸಾಮಾನಿಕಾಮರನುಂ ಮಹೀಪಾಳನುಮಾಗಿ ಸರ್ವಾರ್ಥಸಿದ್ಧಿಯೊಳ್ ಪುಟ್ಟಿದಹಮಿಂದ್ರಂ ಬಂದು ವೀರನೆಂಬೊನಾತ್ಮಭವನಾದಂ; ನಕುಳಾರ್ಯನುಂ ಮನೋರ

---

[1]ಕ—ಅನಂತವೀರ್ಯನೆಂಬ. [2]ಕ—ಅನಂತವಿಜಯನೆಂಬ.

ಥದಿವ್ಯನುಂ ಶಾಂತಮದನಮಹೀನಾಥನುಮಚ್ಯುತಸಾಮಾನಿಕನುಮಪರಾಜಿತನೃಪನುಮಾಗಿ ಸರ್ವಾರ್ಥಸಿದ್ಧಿಯೊಳ್ ಪುಟ್ಟಿದಹಮಿಂದ್ರಂಬಂದು ಸುವೀರನೆಂಬೊಂ ನಂದನನಾದಂ; ಇಂತು ಭರತಕುಮಾರಂ ಬೆರಸುಪೆಟ್ಬರ್ ಕುಮಾರರಾದಿಯಾಗಿ ನೂರ್ವರ್ ಕುಮಾರರುಮನನಿಬರಿಂ ಕಿಱಿಯಳ್ ಬ್ರಾಹ್ಮಿಯೆಂಬ ಮಗಳಂ ಪಡೆದು,

ಘಳಲಲಿತಂ ವಿನೂತಕಳಕಾಕಳತಂ ಕಡುರಮ್ಯಮಾಯ್ತು ಕೋ
ಮಳಲತೆಯೆಂಬಿನಂ ಚರಮದೇಹಶತಾತ್ಮಜರಿಂದಮಾಮಹೋ ।
ತ್ಪಳಮುಖಿಯಿಂದಮಾಸತಿ ಯಶಸ್ವತಿ ವಿಶ್ವಮಹೀತಳಂ ಗುಣಂ
ಗೊಳೆ ಪಡೆದಳ್ ತದಗ್ರಮಹಿಷೀಪದದೊಳ್ ಪಿರಿದೊಂದು ಮೈಮೆಯಂ ॥

ವ॥ ಮುನ್ನ ಪೇೞ್ದ ವಜ್ರಜಂಘನ ಸೇನಾನಾಯಕನಕಂಪನನುಮಧೋಗ್ರೈವೇಯಕಾಹಮಿಂದ್ರನುಂ ಮಹಾಬಾಹುಮಹೀಪತಿಯುಮಾಗಿ ಸರ್ವಾರ್ಥಸಿದ್ಧಿಯೊಳ್ ಪುಟ್ಟಿದಹಮಿಂದ್ರಂ ಬಂದು ಸುನಂದಾಮಹಾದೇವಿಯ ಗರ್ಭದೊಳ್ ಬಂದವತರಿಸಿ,

ತನುವಳಿರೇಖೆಗಳ್ ಕಿಡೆಯುಮೆೞ್ದು ಬೆಡಂಗಿನದೊಂದು ರೇಖೆಯಂ
ತನಗೆಡೆಮಾಡಿ ಪೊಂಗೆ ನಡು ಬಂದುದಯಂಗೆಯಲಿರ್ದ ಪೂರ್ಣಚಂ ।
ದ್ರನನೊಳಕೊಂಡು ಬೆಳ್ಪಿಸೆವ ವಾಸವದಿಗ್ವನಿತಾನನಂಬೊಲಾ
ನನರುಚಿ ಚೆಲ್ವನೇಂ ನೆಱೆಯೆ ತಾಳ್ದಿದುದೋ ಬಿಸಕಾಂಡಪಾಂಡುರಂ॥ ೪೭

ಒದವಿದ ಕರ್ಪನೆೞ್ದು ಪರಿವೃತ್ತಪಯೋಧರಚೂಚುಕಕ್ಕೆ ಮಾ
ಡದೆ ವಳಿಭಂಗಮಂ ಕಳಿಯೆ ತೋರ್ಪುದನಂತೆ ತನೂದರಕ್ಕೆಮಾ।
ಡದೆ ಕಡುವೆಳ್ಪಮಂ ನಿಮಿರ್ದ ಸುಯ್ಯುಮನಾನನಪಂಕಜಕ್ಕೆ ಮಾ
ಡದೆ ಬಳೆದೊಂದು ಗರ್ಭಮೆ ಮನಂದರಲಾತುರ್ದದು ಮಂದಯಾನೆಯಾ ॥

ವ॥ ಅಂತು ಗರ್ಭಂ ಬಳೆಯೆ,

ದಿಗಿಭನಿಭಂಗಳಪ್ಪ ಸಮರದ್ವಿರದಂಗಳ ಯುದ್ಧಕೇಳಿಯಂ
ಬಗೆಗೊಳೆ ನೋಡಲುಂ ನೆಗೞ್ದ ಮಲ್ಲರುಮಂ ಪಿಡಿದೊತ್ತಿ ಗೆಲ್ದ ಜೆ ।
ಟ್ಟಿಗರೆನೆ ಸಂದ ಮಲ್ಲರನೆ ಪೋರಿಸಲುಂ ಪಿರಿದೊಂದು ದೋಹಳಂ
ನೆಗೞ್ದುದು ಗರ್ಭದರ್ಭಕನ ದೋರ್ಬಲಗರ್ಬಮನಂದು ಪೇೞ್ವಪೋಲ್ ॥

ವ॥ ಅಂತು ಗರ್ಭದೋಹಳಂ ನೆಗಪೆ,

ಜನನೀಗರ್ಭಾವತಾರೋತ್ಸವಮುದಿತಸುರಾನೀಕಮುದ್ವೃತ್ತವಿಶ್ವಾ
ವನಿಭೃದ್ಬಾಹಾಬಳೋನ್ಮೂಲನಪಟುತರದೋರ್ವಿಕ್ರಮಂ ದೇವತೂರ್ಯ
ಧ್ವನಿಮಿಶ್ರಾತೋದ್ಯನೃತ್ಯಂ ಮನುನೃಪತಿಕುಲಶ್ರೀಯಶಶ್ರೀಜಯಶ್ರೀ
ವನಿತೌಘಂ ಪುಣ್ಯಪುಂಜೋದಯನುದಯಿಸಿದಂ ವಂಶಲಕ್ಷ್ಮೀಲಲಾಮಂ ೪೯

ವ॥ ಆಬಾಳಕನ ಜನ್ಮೋತ್ಸವದೊಳ್,

ವಾರವಿಲಾಸಿನೀಲಟಹನರ್ತನಚಂಚಳಕಾಂಚಿದಾಮಮಂ
ಜೀರಕಕಿಂಕಿಣೀರಣಿತದಿಂ ವಿಕಸತ್ಕುಸುಮೋಪಹಾರವಿ।
ಸ್ತಾರದಿನಂದದೇಂ ಸೊಗಯಿಸಿರ್ದುದೊ ತತ್ಪುರಮುತ್ಪತಾಕಮು
ತ್ತೋರಣಮುದ್ವಿಳಾಸರಸಮುತ್ಪಟಹಸ್ವನಮುತ್ಸವಾನಕಂ॥ ೫೦

ವ॥ ಅಂತು ಜನ್ಮೋತ್ಸವಾನಂತರಮಾಬಾಳಕಂಗೆ ಬಾಹುಬಲಿಯೆಂಬ ಸ್ವಾರ್ಥಾಭಿಧಾನಮನಿಟ್ಟಾತನ ಲಲಿತೋತ್ತಾನಶಯಿತದರಹಸಿತತರಂಗಿತಗತಿಸ್ಖಲಿತಮುಗ್ಧಜಲ್ಪಿತಾದಿಬಾಲ್ಯವಿಳಾಸಂಗಳಿಂದಂ ಕರಿಕರೋದ್ಧೂತಧೂಳೀವಿಳಾಸಪಾಂಸುಕೇಳಿಯಿಂದಂ ಮಲ್ಲಮೇಷೋದ್ಧತರಾಜದಾರಕನಿಯುದ್ಧದಿಂದಮಾನಂದಿತಹೃದಯನಾಗಿ ನಾಭಿರಾಜಾನಂದನನಂದನನಿರ್ಪನ್ನೆಗಂ ಯೌವನಪ್ರವೇಶಸಮಯದೊಳ್,

ದಳಿತಾಂಭೋಜಾಸ್ಯನಿಂದೀವರದಳನಯನಂ ಪಕ್ವಬಿಂಬಾಧರಂ ಕೋ
ಮಳವಂಶಶ್ಯಾಮನಂಭೋಧರರವನಳಿನೀಕುಂತಳಂ ವ್ಯೂಢವಕ್ಷ।
ಸ್ಸ್ಥಳನಾಜಾನುಪ್ರಲಂಬಪ್ರಬಲಭುಜಯುಗಂ ಚಾರುವೃತ್ತೋರುಯುಗ್ಮಂ
ಕುಳಶೈಲೇಂದ್ರೋನ್ನತಂ ಬಾಹುಬಲಿ ಸಕಲಸೌಂದರ್ಯಸಂಪನ್ನನಾದಂ॥

ಆಕಮನೀಯಮವಿಲೋಕನ
ನಾಕಾಲದ ಕಾಮದೇವನೆಂದೊಡೆ ಕಾಂತಾ।
ನೀಕದ ಮರುಳ್ಪುದಂ ಮದ
ನಾಕುಳತೆಯನುಂತೆ ಪೇಳ್ವುದೊಂದೆಗ್ಗಲ್ತೇ॥ ೫೨

ಕನಸಿನೊಳಮಾಕುಮಾರನೆ
ಮನಮಂ ತಣ್ಣಿಲೆಯೆ ಚಿತ್ತಜಂ ಚಿತ್ತಭವಂ।
ಮನಸಿಜನನಂಗನಂಗಜ
ನೆನೆ ನೆಗಲ್ದುವು ಬಾಹುಬಲಿಗೆ ಪಲವುಂ ಪೆಸರ್ಗಳ್॥ ೫೩

ವ॥ ಮುನ್ನಂ ವೃಷಭೇಶ್ವರಂ ವಜ್ರಜಂಘನಾದ ಭವದೊಳಾಮಹಾತ್ಮಂಗೆ ತಂಗೆಯಾದ ಸುಂದರಿಯೆ ಕತಿಪಯಭವಪರಿಭ್ರಮಣದಿಂ ಬಂದು ಬಾಹುಬಲಿಕುಮಾರನಿಂ ನೇರ್ಗಿಱಿಯಳಾಗಿ,

ಸೌಂದರತನುರುಚಿಯೊಳ್ ಸುರ
ಸೌಂದರಿಯೆನೆ ಸೌಂದರಾಂಗಿ ಸೌಂದರಿಯೆಂಬಳ್।
ಸೌಂದರವೃಷಭಮಹೀಭುಜ
ಸೌಂದರಿಗೆ ಸುನಂದೆಗಂದು ನಂದನೆಯಾದಳ್॥ ೫೪

ವ॥ ಅಂತು ಭರತೇಶ್ವರಂ ಬಾಹುಬಲಿಕುಮಾರಂ ಮೊದಲಾಗೆ ನೂರ್ವರ್ ಕುಮಾರರುಮನಿರ್ವರ್ ಕನ್ಯೆಯರುಮನಾದಿಪುರುಷಂ ನೋಡಿ ಮನದೊಳಾದಱ್ಕಱಿಂ ನಿಜಾನ್ವಯಭೂಷಣತನಯವರ್ಗಕ್ಕೆ ಭೂಷಣವಿಶೇಷಂಗಳಂ ತನಗಮಿಂದ್ರಂಗಂ ಸಕಳಚಕ್ರವರ್ತಿಗಂ ತುಡಲ್ಕೆಯೋಗ್ಯಮಪ್ಪ ಸಾಸಿರದೆಂಟು ತೋರಮುತ್ತಿನ ಸರದಿಂ ಪ್ರಚ್ಛಂದಂ ಮೊದಲಾಗೆ ವಿಜಯಚ್ಛಂದಾರ್ಧಹಾರದೇವಚ್ಛಂದಾರ್ಧಹಾರರಶ್ಮಿಕಳಾಪಗುಚ್ಛನಕ್ಷತ್ರಮಾಳಾರ್ಧಗುಚ್ಛಮಾಣವಕಾರ್ಧಮಾಣವಕಂಗಳೆಂಬ ಪನ್ನೊಂದು ನಾನಾರತ್ನದ ಸುವರ್ಣಪದಕವಿರಚನಾದಿಭೇದದಿಂ ಪ್ರತ್ಯೇಕಶೀರ್ಷಕಾಶಶೀರ್ಷಕಾಮಘೌಟಕಪ್ರಕಾಂಡಕತರಳತರಬಂಧೋಪಪದಪಂಚಕಸಮೇತಂಗಳಾಗಿ ಪಂಚಪಂಚಾಶತ್ಪ್ರಮಾಣಂಗಳೊಳಾದ ಹಾರಂಗಳುಮಂ ಪೆಱವುಂ ಪ್ರತ್ಯಂಗೋಚಿತಾತ್ಯಂಗಮಣಿಭೂಷಣಂಗಳುಮಂ ಸ್ವಮತಿಪರಿಕಲ್ಪನದಿಂ ಯುಗಾರಂಭದೊಳ್ ಪಡೆದು,

ಇವರ್ಗಿವು ತಕ್ಕುವೆಂದವರ್ಗಮಂ ದಯೆಯಿಂ ದಯೆಗೆಯ್ವ ರಾಗದಿಂ
ದವರವನೆಲ್ಲಮಂ ನೆಱೆಯೆ ತೊಟ್ಟು ತದುಜ್ಜ್ವಳರತ್ನದೀಪ್ತಿ ದಿ।
ಗ್ವಿವರನಭೋವಿಭಾಗಪರಿಪೂರಿತಮಾಗಿರೆ ತಮ್ಮನೊಲ್ದು ನೋ
ಳ್ಪವರ್ಗಳ ಕಣ್ಗೆ ದೀಪ್ತಿಪರಮಾಣುಗಳಿಂ ಸಮೆದಂತೆ ತೋಱಿದರ್॥ ೫೫

ವ॥ ಮತ್ತೊಂದುದಿವಸಮಮರಕುಮಾರಕರಪಲ್ಲವವಿಧೂಯಮಾನಚಾರುಚಾಮರಜನಿತಮಂದಮಾರುತಾಂದೋಳಿತಸೂಕ್ಷ್ಮಕ್ಷೌಮಾಂಬರಪಲ್ಲವಂ ಅನೇಕದಿವಿಜವಂದಿವೃಂದಸಂಸ್ತೂಯಮಾನತ್ರಿದಿವಾವತರಣಜನ್ಮಾಭಿಷೇಕನಾನಾಪ್ರತಿಬುದ್ಧನಿಸರ್ಗಮಹಿಮಾಕರ್ಣನೋದೀರ್ಣದರಹಸಿತವದನಸರಸೀರುಹಂ, ಅವಗತದಿವಿಜದನುಜಮನುಜಮುಕುಟಮಣಿಮರೀಚಿಪುಂಜಪಿಂಜರಿತೋತ್ತುಂಗಸಿಂಹಾಸನಾಸೀನವೃಷಭೇಶ್ವರಂ, ಸಕಳಕಳಾಪವಿದ್ಯೋಪದೇಶೋತ್ಸುಕಾಶಯಕುಶೇಶಯನಾಗಿರ್ಪನ್ನೆಗಂ,

ಸ್ಫುರದೀಷತ್ಪ್ರೋದ್ಗತೋರೋರುಹಮುಕುಳೆಯರುನ್ಮತ್ತಹಂಸೀಕ್ವಣನ್ನೂ
ಪುರೆಯರ್ ಮಾಣಿಕ್ಯಕಾಂಚೀರುಚಿರುಚಿರವರಾರೋಹೆಯರ್ ತಾರತಾರಾ ।
ತರಳೋದ್ಯದ್ದೀಪ್ತಿಮುಕ್ತಾಫಲವಿಳಸದಳಂಕಾರೆಯರ್ ಬ್ರಹ್ಮಿಯುಂ ಸೌಂ
ದರಿಯುಂ ಮೆಯ್ವೆಕ್ಕಿ ದೂರಾಂತರದೊಳೆ ಪೊಡೆವಟ್ಟೆಯ್ದೆ ವಂದಿರ್ದರಾಗಳ್ ॥

ತೆಗೆದುತ್ಸಂಗದೊಳಟ್ಟೊ
ಯ್ಯಗೆ ಮೊಗಮಂ ನೋಡಿ ಕರ್ಚಿ ಕದಪಂ ನುಡಿದಂ ।
ಜಗದಧಿಪತಿ ನಿಮ್ಮಿರ್ಬರ
ನೆಗಪ್ತೆ ಮಕ್ಕಳಿರ ವಿನಯವಿಳಸನನಿಳಯಂ ॥ ೫೭

ವ॥ ಅದುಕಾರಣಂ,

ಈವಯಸಮನೀಶೀಲಮ
ನೀವಿನಯಮನೆಯ್ದೆ ವಿದ್ಯೆಯಿಂ ಪುದಿದೊಡೆ ಮ ।
ತ್ತೇವೇೞ್ಪುದೊ ನೀವೆ ಜಗ
ತ್ಪಾವನೆಯರಿರಕ್ಕ ನಿಮಗಮಗ್ಗಳರೊಳರೇ ॥ ೫೮

ವ॥ ಅದಱಿಂ ನಿಮಗೆ ವಯಸಮೆಂಬುದು ವಿದ್ಯಾಭ್ಯಾಸಯೋಗ್ಯಮೆಂದು ವಿಶಾಲಹೇಮಪಟ್ಟಕದೊಳ್ ಆತ್ಮಹೃತ್ಪದ್ಮಪದ್ಮೆಯುಂ ಸರಸ್ವತಿಯುಂ ಪೂಜಾಪೂರ್ವಕಮಧಿವಾಸಿಸಿ ನಿಜತನೂಜೆಯರಿರ್ವರುಮನೆರಡುಂ ಕೆಲದೊಳಿರಿಸಿ,

ಮುನ್ನಂ ತ್ರಿಲೋಕಗುರು ಸಿ
ದ್ಧನ್ನಮಯೆಂದಱಿಪಿ ಮುಖ್ಯಮಂಗಳಪದಮಂ।
ಕನ್ನೆಗೆ ಪಿರಿಯಾಕೆಗೆ ಬಳಿ
ಯನ್ನಯದಿಂ ಬರೆದು ತೋಱಿದಂ ಲಿಪಿಗಳುಮಂ॥ ೫೯

ವ॥ ಅಂತಕಾರಾದಿಹಕಾರಾಂತಸ್ವರವ್ಯಂಜನಭೇದಭಿನ್ನಶುದ್ಧಾಕ್ಷರಂಗಳುಮಂ ಅಯೋಗವಾಹಚತುಷ್ಕಮುಮಂ ಸಂಯೋಗಾಕ್ಷರಂಗಳುಮಂ ಬ್ರಾಹ್ಮಿಗೆ ದಕ್ಷಿಣಹಸ್ತದೊಳುಪದೇಶಂಗೆಯ್ದು,

ಸುಂದರಿಗೆ ಗಣಿತಮಂ ದಳಿ
ತೇಂದೀವರನಯನೆಗೆಡದ ಕಯ್ಯೊಳ್ ಭವ್ಯಾ।
ನಂದಕರಂ ಸ್ಥಾನಕ್ರಮ
ದಿಂದಂ ಪುರುದೇವನಱಿಯೆ ತೋಱಿದನಾಗಳ್॥ ೬೦

ವ॥ ಮತ್ತಂ ಸ್ವಯಂಭುವಾಭಿಧಾನಪದವಿದ್ಯಾಚ್ಛಂದೋವಿಚಿತ್ಯಲಂಕಾರಂಗಳೆಂಬ ಮೂಱುಂ ಪೆಸರ್ವಡೆದ ವಾಙ್ಮಯಮುಮಂ, ಸಮಸ್ತಕಳಾಕಲಾಪಮುಮಂ ಆದಿಬ್ರಹ್ಮನುಪದೇಶಂಗೆಯ್ದು ನಿಜಾತ್ಮಜೆಯರಿರ್ವರುಮಂ ವಿದ್ಯಾಪರಿಪೂರ್ಣೆಯರುಮಪ್ಪಂತು ಮಾಡಿ ಭರತಂಗೆ ಭರತಮುಮನರ್ಥಶಾಸ್ತ್ರಮುಮಂ, ವೃಷಭಸೇನಂಗೆ ಗೀತವಾದ್ಯಾರ್ಥಸಂಗ್ರಹಮಪ್ಪ ಗಾಂಧರ್ವಶಾಸ್ತ್ರಮುಮಂ, ಅನಂತವಿಜಯಂಗೆ ವಿಚಿತ್ರಚಿತ್ರಕಳೆಯುಮಂ, ವಾಸ್ತುವಿದ್ಯೆಯುಮಂ ಉಪದೇಶಂಗೆಯ್ದು, ಬಾಹುಬಲಿಗೆ ಕಾಮತಂತ್ರಸಾಮುದ್ರಿಕಾಯುರ್ವೇದಧನುರ್ವೇದಹಸ್ತ್ಯಶ್ವತಂತ್ರರತ್ನಪರೀಕ್ಷೆಗಳುಮಂ ಮತ್ತಮಿವು ಮೊದಲಾಗೆ ಪೆಱವುಂ ಲೋಕೋಪಕಾರಿಗಳಪ್ಪ ಶಾಸ್ತ್ರಂಗಳನಿತೊಳವನಿತುಮಂ ಮತ್ತಿನ ತನೂಜವರ್ಗಕ್ಕೆಲ್ಲಮುಪದೇಶಂಗೆಯ್ದಂ ಇಂತು,

ಉತ್ತಮವಿದ್ಯೆಗಳ್ಗೆ ಗುಱಿಯಾದ ತನೂಭವರೆಯ್ದೆ ಚಿತ್ತಮಂ
ಪತ್ತಿಸೆ ಪತ್ತಿದಂಗನೆಯರೊಳ್ ಬೆಸಕೆಯ್ವಮರೇಂದ್ರರಾಗಸಂ।
ಪತ್ತುಮನಂಗೊಳುತ್ತುಮಿರೆ ಲಕ್ಕೆಯ ಲೆಕ್ಕದೊಳೊಂದಿ ಪೂರ್ವಮಿ
ರ್ಪತ್ತು ನಿರಂತರಂ ನಡೆದುದಾವೃಷಭಂಗೆ ಕುಮಾರಕಾಲದೊಳ್॥ ೬೧

ವ॥ ಆಪ್ರಸ್ತಾವದೊಳ್ ಫಳಪಾಕವಿರಾಮಂಗಳಪ್ಪ ಗರ್ಭಷಷ್ಠಿವ್ರೀಹಿಯುವಗೋಧೂಮಾದಿಮಹೌಷಧಂಗಳುಂ ತ್ರಿಳಾತಸೀಕುಸುಂಭಾದಿದೀಪ್ರಾಷಧಿಗಳುಂ ಯಾವನಾಳಕಂಗು[1]ಕೋದ್ರವಾದಿಸರ್ವೌಷಧಿಗಳುಂ ಮುನ್ನಮಕೃಷ್ಟಪಚ್ಯಂಗಳಪ್ಪುವೆಂದು ವಿರಳಂಗಳಾಗಿಯುಂ ಅನಲ್ಪಕಲ್ಪಾವನಿಜಂಗಳಪೇತರಸವೀರ್ಯಪಾಕಂಗಳಾಗಿಯುಂ ಆಧಿವ್ಯಾಧಿಬಾಧಿತಶರೀರರ್ ಮಾನವರಭಿಮಾನಮಂ ಬಿಸುಟು ನಾಭಿರಾಜನನುಮತದಿಂದನಾದಿಬ್ರಹ್ಮನಲ್ಲಿಗೆ ವಂದು ಮೊಯ್ಯಿಕ್ಕಿ ಪೊಡೆವಟ್ಟು,

ವಿರಳಫಳಂಗಳಾದುವಖಿಳೌಷಧಿಗಳ್ ರಸವೀರ್ಯಪಾಕಮುಂ
ವಿರಳಮೆ[2]ವೃಕ್ಷಜಾತಿಗಳೊಡಲ್ ಪಸಿವಾದಮಳುರ್ವೆ ನಿಪ್ಪುಟಂ ।
ಕರಗಿದುದೆಮ್ಮ ಬಾಳ್ವೆ ತೆಱನಾವುದು ದೇವ ಶರಣ್ಗೆವಂದೆವಾ
ದರದೆಮಗಪ್ಪುದಂ ಬೆಸಸಿ ಕಾವುದು ಲೋಕಮನಾದಿಪೂರುಷಾ ॥ ೬೦

ವ॥ ಎಂಬುದುಂ ತದೀಯಕರುಣಾರಸಪ್ರೇರಿತಾದ್ರಾಶಯಂ ತತ್ಪ್ರಜಾಜೀವನೋಪಾಯಮಂ ಪೂರ್ವಾಪರವಿದೇಹಸ್ಥಿತಿಸಮಾನಮಾಗೆ ಷಟ್ಕರ್ಮಂಗಳುಮಂ ವರ್ಣಾಶ್ರಮವಿಭಾಗಂಗಳುಮಂ ಗ್ರಾಮಗೃಹಾದಿಭೇದಂಗಳುಮಂ ಭೋಗಭೂಮಿವಿರಾಮದೊಳ್ ಈಕರ್ಮಭೂಮಿಪ್ರಾರಂಭದೊಳೆಮಗೆ ನಿಱಿಸಲ್ವೇೞ್ಕುಮೆಂದು ಮನದೊಳ್ ಬಗೆದು, ಅವರಂ ಅಂಜದಿರಿಮೆಂದು ತದಭಿಮುಖಪ್ರಕಂಪಿತಕರಪಲ್ಲವದಿಂ ಸಂತಯಿಸಿ ತದನಂತರಂ ಭಗವದನುಸ್ಮರಣಮಾತ್ರದಿಂದಮರಸಮಿತಿವೆರಸಮರೇಂದ್ರಂ ಬಂದು,

ನಿಜಮುಕುಟಮಣಿಮರೀಚಿಯಿ
ನಜನ ಪದಾಂಬುಜದ ಕೆಂಪನಿರ್ಮಡಿಸಿ ಕುಲ ।
ಧ್ವಜ ಬೆಸಸು ನಿನ್ನವೋಲೀ
ಪ್ರಜಾಪತಿತ್ವಕ್ಕೆ ಮುನ್ನ ನೋಂತರುಮೊಳರೇ ॥ ೬೧

ವ॥ ಎಂದು ನುಡಿದು ತದನುಮತದಿಂ ಶುಭದಿನನಕ್ಷತ್ರಮುಹೂರ್ತದೊಳ್ ಜಗದ್ಗುರುವಿನನುಮತದೊಳಯೋಧ್ಯಾಮಧ್ಯಮಪ್ಪ ತನ್ಮಹಾದಿಗ್ವಿಭಾಗಂಗಳೊಳ್ ಜಿನೇಂದ್ರಮಂದಿರಂಗಳಂ ನಿರ್ಮಿಸಿ ಬೞಿಕಂ ದೇ

[1] ಖ—ಕಂಬು. [2] ಗ—ತೊರೆದುವು.

ವಮಾತೃಕಸಾಧಾರಣಾನೂಪಜಾಂಗಳಭೇದಂಗಳುಮಂ, ಅನಂತಪಾಳಪಾಳಿ ತದುರ್ಗಪರಿವೃತಾಂತಂಗಳುಂ ಲುಬ್ಧಕಾರಣ್ಯಚರಪುಳಿಂದಶಬರಾದಿಪರಿರಕ್ಷಿ ತಾಂತರಾಳದೇಶಂಗಳುಮಪ್ಪ ಕಾಶಿಕೌಸಲಕಳಿಂಗವಂಗಕಾಶ್ಮೀರಕರಹಾಟಕ ರ್ನಾಟಚೋಳಕೇರಳಪಾಂಚಾಲಮಾಳವಮಹಾರಾಷ್ಟ್ರಸೌರಾಷ್ಟ್ರವನವಾ ಸಾಂಧ್ರಕಾಂಭೋಜಬಾಹ್ಲಿಕತುರುಷ್ಕಕೇಕಯಸೌವೀರಾಭೀರಚೀರಶೂ ರಸೇನಪರಾಂತಿಕವಿದೇಹಸಿಂಧುಗಾಂಧಾರಕುರುಜಾಂಗಣವಿದರ್ಭವತ್ಸಾವಂತಿ ವನಭೇದಿಪಲ್ಲವದಶಾರ್ಣಕಛಮಹಾಕಛಮಗಧಾವನಿರಮ್ಯಕಕುರುಸ ಮುದ್ರಕಾದಿವಿವಿಧವಿಷಯಂಗಳುಮಂ, ತಜ್ಜನಪದಮಧ್ಯಂಗಳೊಳ್ ಪ ರಿಖಾವಪ್ರಪ್ರಾಕಾರಗೋಪುರಾಟ್ಟಾಳಕಾಳಂಕೃತಂಗಳಪ್ಪ ರಾಜಧಾನಿಗ ಳುಮಂ, ಅವಱ ಬಳಸಿಯುಂ ಯಥೋಚಿತಪ್ರದೇಶಂಗಳೊಳ್ ಏಕವೃ ತ್ತಿಪರಿವೃತ್ತಂಗಳುಂ ಅತಿಸಮೃದ್ಧಕೃಷೀವಲಕುಳಾಧಿಷ್ಠಿತಂಗಳು ಮಪ್ಪ ಅಭಿರಾಮಜಲಾಶಯಂಗಳುಮಂ, ಪ್ರಭೂತಯವಸೋದಕಂಗ ಳುಮಂ ಸಮಸ್ತಸಸ್ಯಸಂಪತ್ಸಂಪನ್ನಸುಕ್ಷೇತ್ರಂಗಳುಮಂ, ಕ್ರೋಶ ದ್ವಿಕ್ರೋಶಸೀಮಾಭಾಗಯೋಜನಪಂಚಶತಕುಟುಂಬಿಕುಲಾವಿರ್ಭಾವಿತಾಧ ಮೋತ್ತಮಭೇದಂಗಳುಮಂ ಸರಿದ್ಗಿರಿದರೀಭೂರುಹಸೇತುವನಸೀಮೋಪ ಲಕ್ಷಿತಂಗಳುಮಪ್ಪ ಮಹಾಗ್ರಾಮಂಗಳುಮಂ, ಪೂರ್ವೋಕ್ತರಾಂಭಃಪ್ಲ ವಂಗಳುಮಂ ಪರಿಖಾವಪ್ರಪ್ರಾಕಾರಗೋಪುರಾಟ್ಟಾಲಪರಿವೃತಂಗಳುಮಂ ನಾನಾಭವನವಿನ್ಯಾಸೋದ್ಯಾನಲೀಲಾಜಲಾಶಯಂಗಳುಮಂ ಪ್ರಧಾನಪುರು ಷಾಧ್ಯಾಸಿತಂಗಳಪ್ಪ ಪುರಂಗಳುಮಂ, ಗಿರಿಸರಿತ್ಸಂರುದ್ಧಂಗಳಪ್ಪ ಖೇಟಂಗ ಳುಮಂ, ಉರ್ವೀಧರನಿರುದ್ಧಂಗಳಪ್ಪ ಖರ್ವಡಂಗಳುಮಂ, ಪಂಚಶತಗ್ರಾ ಮಪರೀತಂಗಳಪ್ಪ ಮಡಂಬಂಗಳುಮುಂ, ಸಮುದ್ರೋತ್ಕೀರ್ಣನಿವಾಸಂಗ ಳಪ್ಪ ಪಟ್ಟಣಂಗಳುಮಂ, ನಿಮ್ನಗಾತಟನಿಕಟವರ್ತಿಗಳಪ್ಪ ಮಹಾದ್ರೋ ಣಾಮುಖಂಗಳಮಂ, ಶಿಲಾವ್ಯೂಢಧಾನ್ಯಸಂಚಯೋಪಭೋಗಿಜನನಿವಾಸಿ ಗಳಪ್ಪ ಸಂವಾಹಂಗಳುಮಂ, ಘೋಷಾಕರಸಂಗ್ರಹಾಕರಗೋವ್ರಜಂಗಳು ಮಂ, ಅವನಾಳ್ವ ತೆಱಗೊಳ್ವ ಬಿಟ್ಟಬೆಸಕೆಯ್ಸಿಕೊಳ್ವ ಭೋಗಿಪ ನಿಯೋಗಂಗಳುಮಂ ಮಾಡಿದಂ, ಇಂತು,

ಗುರು ಬೆಸಸೆ ಸಮೆದು ಪಲವುಂ
ಪುರಂಗಳಂ ದೇವನಿಡೆ ಪುರಂದರವೆಸರಂ ।
ಧರಿಯಿಸಿ ಭಕ್ತಿಭರಾನತ
ಕಿರೀಟನಮರೇಂದ್ರನಮರಲೋಕಕ್ಕೆ ಗೆದಂ ॥ ೬೪

ವ॥ ತದನಂತರಂ ಪ್ರಜಾಪತಿಯುಂ ಪ್ರಜೋಪಜೀವನನಿಮಿತ್ತವಾಗೆ ಸೇವಾಧವೋರ್ಚಿತಮೆನಿಸುವ ಸುಕರ್ಮಂಗಳುಮಂ, ಅನೇಕಲಿಪಿವಿಧಾನಂಗಳಪ್ಪ ಮಷಿಯುಮಂ, ಕೃಷೀವಲಕುಲೋಚಿತಮಪ್ಪ ಕೃಷಿಯುಮಂ, ಶಾಸ್ತ್ರಾನುಗತಮಪ್ಪ ವಿದ್ಯೆಯುಮಂ, ವಣಿಗ್ವ್ಯವಹಾರಾನುಕಾರಿಯಪ್ಪ ವಾಣಿಜ್ಯಮುಮಂ, ಹಸ್ತಕೌಶಲಕಳಿತಮಪ್ಪ ಚಿತ್ರಕಳಾಪಪತ್ರಚ್ಛೇದ್ಯಾದಿಸಮನ್ವಿತಮಪ್ಪ ಶಿಲ್ಪಮುಮಂ ಪಡೆದು, ತನ್ನ ಪಡೆದ ಸಕಳಕ್ಷತ್ರಿಯವಣಿಕ್ಛೂದ್ರರೆಂಬ ಮೂಱುವರ್ಣಂಗಳೊಳಗೆ ಕ್ಷತತ್ರಾಣಾದಿಗುಣೋಪೇತಮಪ್ಪ ಅಖಿಳಕ್ಷತ್ರಿಯಸಮೂಹಕ್ಕೆ ಶಸ್ತ್ರಕರ್ಮಮುಮಂ, ವಣಿಗ್ವಂಶಕ್ಕೆ ಪಾಶುಪಾಲ್ಯಕೃಷಿಪಣ್ಯಕರ್ಮಂಗಳುಮಂ, ಮತ್ತಂ ಸ್ಪೃಶ್ಯಾಸ್ಪೃಶ್ಯಕಾರುಗಳುಮೆಂದಿರ್ತೆಱದ ಶೂದ್ರಸಂತತಿಗೆ ಶುಶ್ರೂಷಾನಿಯೋಗಂಗಳುಮಂ, ಯಥಾಯೋಗ್ಯಮುಪದೇಶಂಗೆಯ್ದು ವರ್ಣಸಂಕರಮಾಗಲೀಯದೆ ತಮ್ಮ ತಮ್ಮ ಜಾತಿಗಳೊಳ್ ನಣ್ಪುಮಂ ಕೊಳ್ಕೊಡೆಯುಮಂ ನಿಯೋಜಿಸಿ,

ಜನಪದಂಗಳನೆಯ್ದೆ ಮಾಡಿ ಪುರಂಗಳಂ ಸಮಕಟ್ಟಿ ಮೂ
ಱನಿಸಿ ವರ್ಣಮನಿಂತುಮುಂ ಸಮಕಟ್ಟಿಯುಂ ಬೞಕಂ ಜಗ।
ಜ್ಜನಕನೊಟ್ಟಿದ ಪೊನ್ನ ರಾಶಿಗಳಂ ಜಗಜ್ಜನಕಿತ್ತು ತ
ತ್ಕನಕವರ್ಣದಿನೇಕವರ್ಣಮೆ ಮಾಡಿದಂ ಜಗಮೆಲ್ಲಮಂ ॥ ೬೫

ವಿತತಾಷಾಢದ ಬಹುಳ
ಪ್ರತಿಪದ್ದಿನದಂದು ಕೀರ್ತಿ ನೆಗೞ್ದಿರೆ ಭಗವ ।
ತ್ಕೃತಯುಗಮಾದುದಱಿಂದಂ
ಕೃತಯುಗಮೆಂಬರ್ ಪುರಾಣವಿದರಿದನೀಗಳ್ ॥ ೬೬

ವ॥ ಅಂತು ಕೃತಯುಗಾರಂಭಸೂತ್ರಧಾರನೆನಿಸಿದಾದಿಬ್ರಹ್ಮಂಗೆ ರಾಜ್ಯಾಭಿಷೇಕಂಗೆಯ್ವ ಬಗೆಯಂ ಬಗೆದು,

ಸುರಕಾಂತಾನೃತ್ಯಮೆತ್ತಂ ಪಸರಿಸಿರೆ ನಭೋಭಾಗದೊಳ್ ದೇವತೂರ್ಯ
ಸ್ವರಮಾಶಾಚಕ್ರದೊಳ್ ಬಳ್ವಳಿಳಿದಿರೆ ನಾನಾವಿಮಾನಂಗಳೊಳ್ ಭಾ
ಸುರರತ್ನಜ್ಯೋತಿಗಳ್ ತಳ್ತಳಿಸಿರೆ ಸುರವೃಂದಾನ್ವಿತಂ ಬಂದನಾಗಳ್
ಸುರರಾಜಂ ರಾಜದೈರಾವತವಿಮಳತಳಸ್ಕಂಧದೇಶಾಭಿರಾಮಂ ॥ ೬೭

ವ॥ ಅಂತು ಭುವನತ್ರಯಚೂಡಾಮಣಿಯ ರಾಜ್ಯಾಭಿಷೇಕದೊಸಗೆಯಂ ನಾಭಿರಾಜಾದಿರಾಜಸಭೆಗಱಿಪಿ ಮಹಾನದ್ಯುಭಯತಟಮೃದುಮೃತ್ಸ್ನವಿಲಸಿತವೇದಿಕಾವಿರಾಜಮಾನದೊಳ್ ಚಂಚತ್ಪಂಚರತ್ನಚೂರ್ಣವಿರಚಿತರಂಗವಲ್ಲೀವಿಳಾಸವಿರಾಜಿತಸುನಾಸೀರಶರಾಸನದೊಳ್ ಪರಸ್ಪರಸ್ಪರ್ಧಮಾನಪರಿಕ್ಷಿಪ್ತಮಲ್ಲಿಕಾಮುಕುಳಮುಕ್ತಾಫಳೋಪಶೋಭಿತದೊಳಿಂದ್ರನೀಲಮಣಿಕುಟ್ಟಿಮಸಂಕ್ರಾಂತಮೌಕ್ತಿಕದಾಮಾಭಿರಾಮದೊಳ್ ಪರಿವಿರಚಿತಚಿತ್ರಾಂಬರವಿತಾನಚ್ಛಾಯಾಚ್ಛುರಿತರಂಗಭೂಮಿಯೊಳ್ ಮಂಗಳೋಪಕರಣಸಮುದ್ಧರಣನಿಯಮಿತಾನೇಕಕಾಮಿನೀಕರಪಲ್ಲವವಿಧೂಯಮಾನಚಾರುಚಾಮರಮರುದಾಂದೋಳಿತಪ್ರಾಕಾರಪ್ರಲಂಬಮಾನಮಂದಾರಮಾಳಾವಿಳಾಸದೊಳ್ ಅನ್ಯೋನ್ಯಹಸ್ತಪರಂಪರೋಪನೀಯಮಾನನಾನಾಸ್ನಾನೋಪಕರಣದೊಳ್ ನಿಯಮಿತಾನೇಕನಾಕಕಾಮಿನೀನಿರುದ್ಧಸಂಚಾರಮಾರ್ಗದೊಳ್ ಪರ್ಯಂಕನಿಹಿತಬಹುಪ್ರಕಾರಭೃಂಗಾರಮಂಗಳಜಲಸಂಭೃತಶಾತಕುಂಭಮಣಿದರ್ಪಣಪ್ರಸಾರಿತದಿಗಂಗನಾಮುಖದೊಳ್ ಅಮರವಾರವನಿತಾಕರಪಲ್ಲವವಿಧೂಯಮಾನವಿಳಾಸದೊಳ್ ಗಂಧರ್ವಸಮಾರಬ್ಧಸಂಗೀತಮೃದುಮೃದಂಗನಾದಪ್ರಮೋದಿತಾಶೇಷರಾಜದ್ರಾಜಭವನದೊಳ್ ಸಂಚರತ್ಸುರವಿಳಾಸಿನೀಲಲಿತಮೃದುಪದವಿನ್ಯಾಸಮಂಜುಗುಂಜನ್ಮಂಜೀರಕಮನೋಹರಝುಂಕಾರಪ್ರವರ್ಧಮಾನಮದಾಳಿಕುಳಕೋಳಾಹಳದೊಳ್ ರಾಜಭವನಾಂಗಣಮಧ್ಯಸ್ಥಿತರಾಜ್ಯಾಭಿಷೇಕಮಂಟಪದೊಳ್,

ಮುನ್ನಮೆ ನಿಱಿಸಿದ ಮಣಿಖಚಿ
ತೋನ್ನತಹರಿಪೀಠದೊಳ್ ಜಗತ್ಪತಿಯಂ ಮಾ ।
ನೋನ್ನತನಂ ಪ್ರಾಙ್ಮುಖದಿಂ
ದನ್ನತಸುರಮೌಳಿಲಾಲಿತಾಂಘ್ರಿದ್ವಯನಂ ॥ ೬೮

ವ॥ ಇರಿಸಿ ಮಹಾಸರಿತ್ಸರಸೀಸಮುದ್ರನಂದೀಶ್ವರದ್ವೀಪವಾಸಿಗಳಿಂದಂ ಬಂದ ತೀರ್ಥೋದಕಗಳಿಂದಂ ತೀವಿದ ಕಳಧೌತಕಳಶಂಗಳನಮರತರುಪಲ್ಲವಪ್ರಸೂನಪರಿಪೂರ್ಣಮುಖಂಗಳನಮರರಾಜಸನಾಜಮುಂ ನಾಭಿರಾಜಂ ಬೆರಸೆತ್ತಿ ಕೊಂಡು,

ದೆಸೆಗಳ್ ದೇವಾಂಗನಾಮಂಗಳಕಳಕಳದಿಂದಂ ದಿಗಂತಂಬರಂ ಘೂ
ರ್ಣಿಸೆ ಕೈಮಿಕ್ಕಿರ್ದ ರಾಗಂ ಬೆರಸು ಸುರಿಯೆ ತದ್ವಾರಿ ಧಾರಾಸಹಸ್ರ ।
ಪ್ರಸರಂಬೆತ್ತತ್ತಮಿತ್ತಂ ಪುದಿದೊದವಿರೆ ಮುಂ ಪೋದ ಜನ್ಮಾಭಿಷೇಕ
ಕ್ಕೆ ಸಮಂ ಮೇಲೆಂಬಿನಂ ಕಣ್ಗೆಸೆದುದು ಜಗತೀರಾಜರಾಜ್ಯಾಭಿಷೇಕಂ ॥ ೬೯

ವ॥ ತದನಂತರಮೆ ಮಾಗಧಾದಿವ್ಯಂತರಾಮರರ್ ಮಾಡಿದ ಧಾರಾಭಿಷೇಕದೊಳಂ ಪೌರರ್ ಮಾಡಿದ ನಳಿನೀಪತ್ರಪುಟಪ್ರಸಾದಿತಸಾರಜಳಪಾದಾಭಿಷೇಚನದೊಳಂ ಅಭಿಷೇಕವಿಧಿಯಂ ನಿರ್ವರ್ತಿಸಿ ವಿಶದಯಶಸ್ಸಿದ್ಧಾಧಿಷ್ಠಾನ ಪವಿತ್ರಮೆನಿಪ ಮಜ್ಜನಪೀಠಮನಧಿಷ್ಠಿಸಿದಾಗಳ್, ಕೆಲಂಬರರುಣಮಣಿಕುಳಪ್ರಭಾಜಾಳಜಟಿಳಿತಪಿಂಜರಂಗಳಾಗಿ ನಿಜರಾಗಪ್ರವಾಹಶಂಕೆಯಂ ಮಾಡುವ ಜಳಂಗಳಿಂದಂ, ಕೆಲಂಬರಿಂದುಕಾಂತಕಳಶಕಿರಣದ್ವಿಗುಣಧವಳನಿಜದಂತಕಾಂತಿಬಹಳಪರಿಹಾಸಚ್ಛಾಯಾವಿಭ್ರಮಮಂ ಪುಟ್ಟಿಸುವ ತೋಯಂಗಳಿಂದಂ, ಕೆಲಂಬರಿಂದ್ರನೀಲಕಳಶರುಚಿನಿಚಯನಿಚಿತಂಗಳಾಗಿ ನಿಕ್ಷಿಪ್ತನೀಳನಳಿನಸ್ಯುತಿಪಟಳವಿಭ್ರಾಂತಿಯಂ ಪಡೆವ ಸಲಿಲಂಗಳಿಂದಂ,

ನಿಮಿರ್ದಲ್ಲಾಡುವ ಕಾಂತಕುಂತಳಕುಳಂ ತುಂಗಸ್ತನಕ್ಷೋಭವಿ
ಭ್ರಮಮುತ್ಕಂಪದರಿದ್ರಮಧ್ಯಮುಚಿತಸ್ವೇದೋದ್ಗಮಂ ಮಜ್ಜನ ।
ಶ್ರಮದೊಳ್ ಗಾಡಿಯನೀಯೆ ಪಾಂದರಿಯರೇಕಚ್ಛತ್ರರಾಜ್ಯಾಭಿಷೇ
ಕಮಿದೆಂಬಂತಿರೆ ಮಜ್ಜನಂಬುಗಿಸಿದರ್ ಮನ್ವನ್ವಯೋತ್ತಂಸನಂ ॥ ೭೦

ವ॥ ಆಗಳ್ ಮಜ್ಜನಾವಸರಮಂಗಳಪಾಠಕಮಧುರನಿನದಮನಾಲಿಸುತ್ತುಂ,

ಅಂಭೋಭಾರವಿಜೃಂಭಿತ
ಕುಂಭಾಂಭೋದಂಗಳಂದದಿಂ ಸುರಿಯೆ ಚತುಃ ।
ಕುಂಭಂಗಳ್ ಭೂಭುವನ
ಸ್ತಂಭನ ಮಜ್ಜನಮನೆಯ್ದೆ ನಿರ್ವರ್ತಿಸಿದಂ ॥ ೭೧

ವ॥ ಅಂತು ನಿಷ್ಪನ್ನಮಜ್ಜನನುಂ ವಿನಿಹಿತನೀರಾಜನನುಮಾಗಿ ಸುರರಾ ಜಸಮರ್ಪಿತಸಂತಾನಕುಸುಮದಾಮಾಂಬರಭೂಷಣಪ್ರಸಾಧಿತಂ ಪುರುದೇವಂ ಮೃಗೇಂದ್ರವಿಷ್ಟರದೊಳಿರೆ ನಾಭಿರಾಜಂ ಬೆರಸುಬಂದು,

ಸಕಲಮಕುಟಬದ್ಧಾಧೀಶನ್ನೆ ದೇವ ನೀನುಂ
ಮಕುಟಧರನುಮಾಗಲ್ವೇಳ್ಕುಮೆಂದಾಗಳಿಂದ್ರಂ ।
ಮಕುಟದೊಡನಲಂಪಿಂ ಪಟ್ಟಮಂ ಕಟ್ಟೆ ಲೋಕ
ಪ್ರಕಟಮೆನೆ ಪೊದಳ್ದಿತ್ತಾದಿದೇವಪ್ರಭಾವಂ ॥ ೬೦

ವ॥ ಅಂತನೇಕಮಕುಟಬದ್ಧಮಣಿಮಕುಟಮಣಿಕರ್ಷಣಮಸೃಣಿತಚರಣಂ ಆಪ್ತಾಧಿರಾಜ್ಯಂ ನಾಭಿರಾಜಸನ್ನಿಧಾನದೊಳಖಿಪ್ರಜಾಪಾಲನದೊಳತಿಪ್ರಯತ್ನಪರನಾಗಿ ತನ್ನ ಮುನ್ನ ಪಡೆದ ವರ್ಣತ್ರಯಕ್ಕಂ ಭರತನಿಂದಮಿನ್ನಪ್ಪ ವಿಪ್ರವರ್ಣಕ್ಕಂ ಯಥೋಚಿತವೃತ್ತಿಗಳನಱಿಪಲೆಂದು,

ವದನಂ ತೋಳ್ ತೊಡೆ ಪಾದಮೆಂಬಿವನಿವಂ ಶುಶ್ರೂಷೆಗೆಯ್ಯಲ್ಕೆ ಲಾ
ಭದಲಂಪಿಂ ನಡೆಯಲ್ಕೆ ಕೈದುವಿಡಿಯಲ್ಕೆಂದಂದಜಂ ಬೇಱೆ ತೋ ।
ಱಿದೊಡಾವರ್ಣಚತುಷ್ಕಮಂ ಕುಮತಿಗಳ್ ತತ್ಸ್ಥಾನದೊಳ್ ಮುನ್ನ ಪು
ಟ್ಟಿದುವೆಂಬರ್ ಪುಸಿನೆನ್ನಿಯೆಂದಱಿಯದೇಂ ಲೋಕಂ ಮರಳ್ಗೊಂಡುದೋ ॥

ವ॥ ಅಂತು ಭವಿಷ್ಯದ್ದ್ವಿಜನ್ಮವರ್ಣಕಧ್ಯಯನಾಧ್ಯಾಪನದಾನಪ್ರತಿಗ್ರಹಯಜನಯಾಜನವಿಶಿಷ್ಟವೃತ್ತಿಯುಮಂ, ಕ್ಷತ್ರಿಯಜಾತಿಗೆ ಸತ್ಯತ್ಯಾಗಪ್ರಜಾಪಾಲನಶರಣಾಗತರಕ್ಷಣಪ್ರಹರಣಕ್ಷಮಾದಿಗುಣಾಚರಣಮುಮಂ, ವಣಿಗ್ವಂಶಕ್ಕೆ ಜಳಸ್ಥಳಯಾತ್ರಾಸಂವೃತಮರ್ಥಪ್ರವರ್ತನಮುಮಂ, ಶೂದ್ರಾನ್ವಯಕ್ಕೆ ಬ್ರಾಹ್ಮಣಾದಿವರ್ಣತ್ರಯಕ್ಕಂ ಶುಶ್ರೂಷಾನ್ಯಕರ್ಮಕರಣೋಪಜೀವನಮುಮಂ ನಿಱಿಸಿ,

ಈಮಾಪ್ಕೆಯೊಳೆಸಗದರಂ
ಹಾಮಾಧಿಕ್ಕಾರದಂಡದಿಂ ದಂಡಿಪುದೆಂ ।
ದಾಮನುಕುಳತಿಳಕಂ ಪೇ
ಳ್ದೀಮಹಿಗಾತ್ಮೀಯಮಹಿಮೆಯಂ ಪ್ರಕಟಿಸಿದಂ ॥ ೬೪

ವ॥ ಮತ್ತಂ ದಂಡಧರರಿಲ್ಲದಂದು ತಂತಮ್ಮ ವೃತ್ತಿಗಳಂ ಪ್ರಜೆಗಳತಿಕ್ರಮಿಸಿ ನಡೆಗುಮೆಂದುಂ, ಅತ್ಯಂತದುಷ್ಟಬಳವಜ್ಜನಗ್ರಸನದಿಂ ದುರ್ಬಳಜನಂಗಳೊಳ್ ಮತ್ಸ್ಯನ್ಯಾಯಮುಂ ಪ್ರವರ್ತಿಸುಗುಮೆಂದುಂ, ಯಥೋಚಿತಧರಣೀಧರರಪ್ಪ ಭೂಪಾಳಕರನವರವರ ಪದವಿಯೊಳ್ ನಿಱಿಸಲ್ ಬಗೆದು ಮೂರ್ಧಾಭಿಷಿಕ್ತಮಂಡಳಿಕರಂ ಚತುಸ್ಸಹಸ್ರಮುಕುಟಬದ್ಧಪರಿವೃತರಂ ಸೋಮಪ್ರಭಹರಿಯಕಂಪನಕಾಶ್ಯಪರಂ ಬರಿಸಿ ತದುಚಿತಪ್ರತಿಪತ್ತಿಗಳೊಳಿರಿಸಿ, ತನಗಾಪ್ತನಪ್ಪ ಸೋಮಪ್ರಭಂಗೆ ಕುರರಾಜಾಭಿಧಾನಮನಿಟ್ಟು ಕುರುಕುಲಾಗ್ರಗಣ್ಯನಂ, ಹರಿಗೆ ಹರಿಕಾಂತನಾಮಮನಿಟ್ಟು ಹರಿವಂಶಧ್ವಜನಂ, ಅಕಂಪನಂಗೆ ಶ್ರೀಧರಾಂಕನಾಮಮನಿಟ್ಟು ನಾಥಾನ್ವಯಪುರಸ್ಸರನಂ, ಕಾಶ್ಯಪಂಗಮೋಘವಾಕ್ಯನಾಮಮನಿಟ್ಟು ಉಗ್ರವಂಶಲಲಾಮನಂ ಮಾಡಿ, ಕಚ್ಛಮಹಾಕಚ್ಛಪ್ರಮುಖಧರಾಧಿನಾಥರುಮನಧಿರಾಜಪದವಿಯೊಳ್ ನಿಱಿಸಿ,

ಸುತರುಮನವರ್ಗವರಭಿಮತ
ಮತಮೆಂತದನಿತ್ತು ನಿಱಿಸಿದಂ ಪ್ರಭು ನಿಜಸಂ ।
ತತಿಯುಂ ತಣಿಪಿ ಸುಹೃತ್ಸಂ
ತತಿಯುಂ ಪೆರ್ಚಿಪ್ಪುದು ರಾಜ್ಯಫಲಮಿನಿತೆ ವಲಂ ॥ ೬೫

ವ॥ ಅಂತಾದಿದೇವನಿಕ್ಷುರಸಸಂಗ್ರಹಣಸಮಯಾಹೂತಭೂತಳಸಪ್ಪುದಱಿಂದಂ ಇಕ್ಷ್ವಾಕುಕುಳತಿಳಕನುಂ, ಪ್ರಜಾಜೀವನೋಪಾಯನಮನದಿಂದೆ ಮನುವುಂ, ಪ್ರಜಾಜೀವನೋಪಾಯಮನನಾದುದಱಿಂ ಪ್ರಜಾಪತಿಯುಂ, ನಿಜಕುಲೋದ್ಧರಣದಿಂ ಕುಲಧರನುಂ, ತೇಜೋವಾಚಕಮಪ್ಪ ಕಾಶ್ಯಪನಂ ಪಾಲಿಸುವುದಱಿಂ ಕಾಶ್ಯಪನುಂ, ಕೃತಯುಗಾರಂಭಕ್ಕಾದಿಯಾದುದಱಿಂದಂ ಆದಿಬ್ರಹ್ಮನುಂ ಎಂಬ ಅಪೂರ್ವಾಭಿಧಾನಮುಂ ಪ್ರಯೋಗಿಪ್ಪನ್ವರ್ಥನಾಮಂಗಳುಂ ಲೋಕಪ್ರಸಿದ್ಧಮಾಗಿರಲ್, ಅಱುವತ್ತಮೂಱುಲಕ್ಕೆ ಪೂರ್ವಂ ರಾಜ್ಯಕಾಲಂ ಸಲೆ,

ಪೆಸರ್ಗಳ್ ಕರ್ಣಾಮೃತಸ್ಯಂದಿಗಳೊದವಿದಪೂರ್ವಾಭಿಧಾನಂಗಳೋರಂ
ತೆಸಗುತ್ತಿರ್ಪನ್ನೆಗಂ ಮಾಡಿದ ಕುರುಹರಿನಾಥೋಗ್ರವಂಶಂಗಳಂತೀ ।
ವಸುಧಾಚಕ್ರಕ್ಕೆ ಸಲ್ವನ್ನೆಗಮೆಸೆದಿರೆ ವರ್ಣಕ್ರಮಂ ಕರ್ಮಭೂಮಿ
ಪ್ರಸರಕ್ಕಿಂತಾದಿಯಾದಂ ಸುಕವಿಜನಮನೋಮಾನಸೋತ್ತಂಸಹಂಸಂ ॥

ನಾನಾಮಾನ್ಯಜನಾಂತರಂಗನಿಹಿತಾನಂದೋದಯಂ ದಿವ್ಯಸಂ
ತಾನಸ್ರಙ್ಮಣಿಭೂಷಣಾಂಬರಧರಂ ಸ್ವಾಧೀನಸಂಗತ್ಯಸಂ ।
ತಾನಂ ಪುತ್ರಕಳತ್ರಮಿತ್ರಸಹಿತಂ ಸಾಕೇತಸಿಂಹಾಸನಾ
ಸೀನಂ ಪಾಲಿಸಿದಂ ಮಹೀವಳಯಮಂ ಸಂಸಾರಸಾರೋದಯಂ ॥ ೩೩

ಗ॥ ಇದು ದೇವೇಂದ್ರಮುನೀಂದ್ರವಂದ್ಯಪರಮಜಿನೇಂದ್ರಮುಖ
ಚಂದ್ರವಾಕ್ಚಂದ್ರಿಕಾಪ್ರಸರಪ್ರಸಾದೋದೀರ್ಣಸೂಕ್ತಿ
ಕಲ್ಲೋಲಮಾಲಾಕೀರ್ಣಕವಿತಾಗುಣಾರ್ಣವ
ಪ್ರಣೀತಮಪ್ಪಾದಿಪುರಾಣದೊಳ್
ಕರ್ಮಭೂಮಿನಿಯೋಗ
ನಿರೂಪಣಂ
ಸಂಪೂರ್ಣಂ.

ನವಮಾಶ್ವಾಸಂ.

ಶ್ರೀಪತಿ ಪುರುಪರಮೇಶ್ವರ
ನಾಪೂರ್ಣಮನೋರಥಂ ನಮನ್ನೃಪಮಕುಟಾ ।
ಟೋಪಂ ತ್ರೈಲೋಕ್ಯಾಂತ
ವ್ಯಾಪಿತಮಹಿಮಂ ಸರಸ್ವತೀಮಣಿಹಾರಂ ॥ ೧

ಸ್ಫುರಿತಮಣಿಖಚಿತಹರಿವಿ
ಷ್ಟರದೊಳಳಂಕರಿಸಿ ನೆಱೆದ ರಾಜನ್ಯಕಮಂ ।
ದರಹಸಿತಮೃದುವಿಲೋಕನ
ಪರಿಭಾಷಣದಿಂದಮಾದಮಾದರಿಸುತ್ತುಂ ॥ ೨

ಎರಡೋಳಿಯೊಳಂ ಮೊದಲೊಳ್
ಭರತೇಶ್ವರಬಾಹುಬಲಿಗಳಿರೆ ಮತ್ತಿನ ಪು ।
ತ್ರರುಮವರ ಕೆಲದೊಳಿರೆ ಸುರ
ಶರಾಸನಂ ನೆಗೆಟ್ದುದವರ ಮಕುಟಪ್ರಭೆಯೊಳ್ ॥ ೩

ಮಗಮಗಿಸುವ ನವಮೃಗಮದ
ದಗರುವ ಮಳಯಜದ ಕಂಪುಮಂ ಸೂಡಿದ ಬಾ।
ಸಿಗದ ಪೊಸಗಂಪುಮಂ ನೆಱೆ
ದುಗಿಬಗಿಮಾಡಿದುವು ಖಚಮರರುಹಪವನಂಗಳ್ ॥ ೪

ಪಸರಿಸಿದ ತೋರಹಾರದ
ಪೊಸವೆಳ್ದಿಂಗಳುಮನಮರ್ದ ಪೆರ್ದುಡುಗೆಗಳೊಳ್ ।
ಮಿಸುಗುವ ಪೊಸಮಾಣಿಕದೆಳ
ವಿಸಿಲುಮನೊಡಗಾಣಲಾದುದಾಸ್ಥಾಯಿಕೆಯೊಳ್ ॥ ೫

ಎಡೆಗೋದಿರದಿರಿಮುದ್ದಂ
ನುಡಿಯದಿರಿಂ ನೃಪತಿ ನುಡಿಯೆ ನುಡಿಯಿಂ ನೀಮಿ।
ರ್ಪೆಡೆಯೊಳಿರಿಂ ನೀಮಱಿವಿರ್
ಮಿಡುಕಿದೊಡೆನೆ ಚಿತ್ರವೇತ್ರದಂಡಧರರ್ಕಳ್ ॥ ೬

ಆಸಭೆಯುಮನೇಱಿದ ಸಿಂ
ಹಾಸನಮುಮನೊಡನೆ ಬೆಳಗೆ ಬೆಳಗಿಂದೆ ಜಗಂ ।
ಬಾಸಣಿಸಿದುದೆನೆ ಸಕಳಸು
ರಾಸುರಪತಿಯುರದೊಳೆಸೆದುದಿಂದ್ರಚ್ಛತ್ರಂದಂ ॥ ೭

ಕನಕಗಿರಿಯೆನಿಪ ಸಿಂಹಾ
ಸನಮುಮನಾಪರಮಚರಮತನುರುಚಿಯುಮನೇ ।
ನನವರತಂ ಪುದಿದುವೊ ನಿಮಿ
ರ್ದನೇಕಚಮರೀಜದುಗ್ಧಜಳಲಹರಿಕೆಗಳ್ ॥ ೮

ವ॥ ಮತ್ತಂ ಸಿಂಹಾಸನಾಸನ್ನಸ್ಥಿತಮಣಿಮಯಪೀಠದೊಳ್ ನಾಭಿರಾಜನುಂ, ಕನಕಪೀಠದೊಳ್ ಕಚ್ಛಮಹಾಕಚ್ಛರುಂ, ಸೋಮವಂಶಲಲಾಮಂ ಸೋಮಪ್ರಭನುಂ, ಹರಿವಂಶಾಗ್ರಗಣ್ಯಂ ಹರಿಕಾಂತನುಂ, ನಾಥವಂಶನಾಯಕನಕಂಪನನುಂ, ಉಗ್ರವಂಶಾಗ್ರಗಣ್ಯಂ ಕಾಶ್ಯಪನುಂ ಇರೆ, ಮತ್ತಂ ಪೆಱರುಮಱಿಕೆಯ ನಾಯಕರುಂ ಮಣಿಮಕುಟಬದ್ಧರಾತ್ಮೋಚಿತಪ್ರದೇಶಾಸನಂಗಳೊಳಿರ್ದೋಲಗಿಸುತ್ತಿರ್ದನ್ನೆಗಮಾದಿದೇವನ ಪರಿನಿಷ್ಕ್ರಮಣಕಲ್ಯಾಣಮತ್ಯಾಸನ್ನಮೆಂಬುದಂ ನಿಜಾವಧಿಬೋಧದಿಂದಮಱಿದು ಸಂಗೀತಪ್ರಸಂಗದಿಂದಮೋಲಗಿಸಲೆಂದು,

ಸುರರಾಜಂ ತನ್ನ ಗಂಧೇಭದ ಕೆಲಗೆಲದೊಳ್ ಸಿಂಧುರಾರೂಢರೆತ್ತಂ
ಬರೆ ಗಂಧರ್ವಾಮರರ್ ಮೆಚ್ಚಱಿದು ಮಧುರಗೀತಂಗಳಿಂ ಮೆಚ್ಚಿಸುತ್ತುಂ ।
ಬರೆ ನಾನಾತೋದ್ಯದಿಂ ವಾದಕದಿವಿಜಗಣಂ ತನ್ನನಾರಾಧಿಸುತ್ತುಂ
ಬರೆ ಮುಂದಿರ್ದಪ್ಸರೋವೃಂದಮುಮಧಿಕಮುದಂ ಬಂದನಾಗಳ್ ಸುರೇಂದ್ರಂ

ವ॥ ಬಂದು ಭಗದಾಸ್ಥಾನಮಂಟಪಮನವನತಮಣಿಕಿರೀಟರತ್ನಪ್ರದೀಪಂಗಳಿಂದಮರ್ಚಿಸಿ ಸಿಂಹಾಸನೋಪಾಂತಸ್ಥಿತಕನಕಪೀಠದೊಳ್ ಕುಳ್ಳಿರ್ದು,

ಪರಮನನೋಲಗಿಸಿ ಕೃತಾ
ರ್ಥರೆಮಪ್ಪೆವೆಮೋಘಮವಸರಂಗುಡಿಸುವುದೆಂ ।
ದಿರದೆನ್ನನಧಿಕಭಕ್ತಿಯೆ
ತರೆ ಬಂದುದು ದೇವದಿವಿಜಪೇಟಕಮನಿತುಂ ॥ ೧೦

ಸಮನಿಸಲಿವರ ಮನೋರಥ
ಮಮರೀನೃತ್ಯಪ್ರಸಂಗಮಕ್ಕಭವ ಭವ ।
ತ್ಕ್ರಮಕಮಳಸೇವೆಯಿಂದಿಂ
ತುಮನಂತಂ ಗೀತವಾದಿತಂ ಫಲಮಲ್ತೇ ॥ ೧೧

ವ॥ ಅಂತುಮಲ್ಲದೆ,

ಅಸಮಪ್ರೇಕ್ಷಣವೀಕ್ಷಣೈಕರಸಮಂ ಪೊರ್ದಿರ್ದುದೀರಾಜಪು
ತ್ರಸಮೂಹಂ ಪರಿಪೂರ್ಣಭಾವರಸಮಂ ಸಂಗೀತಮಂ ತೋಱಿ ಮೆ ।
ಚ್ಚಿಸಲೋರಂತೆ ಸಮಸ್ತದೇವಕುಪಿತ[1]ವ್ಯೂಹಂ ತೆರಳ್ದಿರ್ದುದಿಂ
ಬೆಸಸಿಂ ಭಾರತಿಕಂಗೆ ನಾಟ್ಯಘಟನಪ್ರಸ್ತಾವನಾಟೋಪಮಂ ॥ ೧೨

ಎಂದಿಂದ್ರಂ ಬಿನ್ನವಿಸಲೊ
ಡಂ ದರಹಸಿತಾನನಾಬ್ಜನಾವುದು ನಿಮಗಾ ।
ನಂದಮದಕ್ಕೆನೆ ನುತಸುರ
ವೃಂದಂ ಸಂಗೀತಕಕ್ಕೊಡರ್ಚಲೆವೇೞ್ದಂ ॥ ೧೩

ಪೇೞ್ವಿದುಮನಂಗನಿರ್ದೆಡೆ
ವೇೞ್ವವೊಲೊವೊರ್ದಲೆ ಗೀತವಾದಿತರವಮೇ ।
ವೇೞ್ವಿದೊ ಸಭೆಯಂ ರಸದೊಳ್
ಪೂೞ್ವವೊಲೆಸೆದತ್ತು ದಿವಿಜಪೇಟಕಜನಿತಂ ॥ ೧೪

ಮದನನ ಬಿಲ್ಗೊಳಮೂತನ
ಸುದತಿಯ ಬೀಣೆಯೊಳಮೆಸೆವ ದನಿಯುಮನಿೞಿಸಿ ।
ತ್ತಿದು ದಲೆನಿಸಿದುದು ಸುರತೂ
ರ್ಯದ ರವದೊಳ್ ಪುದಿದ ಸುರವಧೂಗೀತರವಂ ॥ ೧೫

ಅಮರ್ದಿನ ಮೞೆಯೊಳಗೆಸೆದಪು
ದಮೃತಾಂಬುದನಿನದಮೆನಿಸೆ ಸಭೆ ನಿನದಂ ಗೀ ।
ತಮಹಾವಾದಿತಮೆನಿಸಿದು
ದಮರೀಜನಗೀತಮಮರವಾದಿತಮಾಗಳ್ ॥ ೧೬

---

[1] ಖ—ಕುಪತ

ಅಂಬರಭೂಷಣಮಾಲಾ
ಡಂಬರದ ಬೆಡಂಗನಮರನರ್ತಕಿ ಗಡಮೋ ।
ನೆಂಬುದೊ ಧರಣೀಂದ್ರಂಗಮ
ಳುಂಬಂ ಪೊಗೞಲ್ಕೆ ರೂಪು ನೀಳಾಂಜನೆಯಾ ॥ ೧೭

ಕಳೆ ಗೀತಂ ವಾದ್ಯಂ ನೃತ್ಯ
ಲೀಳೆ ಪೆಱಗೊರ್ಪ್ಪದೀಕೆಗಲ್ಲದೆ ಗಣಿಕಾ ।
ತಿಳಕಮಿವಳ್ ನರ್ತನರಸ
ದೊಳೆ ನಿಜ್ಜಂ ಮೆಚ್ಚುಗೊಳ್ವಳಿಂದ್ರನ ಕೈಯೊಳ್ ॥ ೧೮

ಎನಿಸಿದ ನೀಳಾಂಜನೆ ಕ
ರ್ಬಿನ ಬಿಲ್ಲಿಂ ಮಸೆದ ಮದನನಲರ್ಗಣೆ ಬರ್ದುಕಿ ।
ತ್ತೆನಿಸುತ್ತೊಳಪೊಕ್ಕಳ್ ಭೋಂ
ಕೆನೆ ನಿಖಿಳಜನಾಂತರಂಗಮಂ ರಂಗಮುಮಂ ॥ ೧೯

ನಿಲ್ತುವು ರಸಂಗಳಲ್ಲಿ ಮ
ಡಲ್ತನೆ ಭಂಗಿಯೊಳನಂಗಜಂಗಮಲತೆವೊಲ್ ।
ನಿಲ್ತು ಜವನಿಕೆಯ ಮಱೆಯೊಳ್
ಪೊಲ್ತಳವಳ್ ಮುಗಿಲ ಮಱೆಯ ವಿದ್ಯುಲ್ಲತೆಯಂ ॥ ೨೦

ಓಸರಿಸಿದ ಜವನಿಕೆಯೊಡ
ನೋಸರಿಸಿದನಿಸಲೆ ಕಂತು ಪುಷ್ಪಾಂಜಳಿಯಂ ।
ಸೂಸಿದ ಪದದೊಳೆ ಸಭೆಗಂ
ಸೂಸಿದನೊಡನೊಡನೆ ನನೆಯ ಮೊನೆಯಂಬುಗಳಂ ॥ ೨೧

ನೆಗಪೆ ನಿಜಪ್ರತಿಬಿಂಬಂ
ನೆಗೞ್ದಿರಸುಗಳುರದೊಳೆಸೆವ ಹಾರಮಣಿದ್ಯೋ ।
ತಿಗಳೊಳವರೆರ್ದೆಯನಲ್ಲಿಂ
ಪುಗುವುದನನುಕರಿಸಿ ರಂಗದೊಳ್ ಸೊಗಯಿಸಿದಳ್ ॥ ೨೨

ಅತನುರಸೋಪೇತವಿಳಂ
ಬಿತಮಧ್ಯಂ ಧೃತಲಯಂಗಳೊಳ್ ಲಕ್ಷಣಸಂ ।

ಯುತಶ್ವಾನುಗತೌಘ
ಪ್ರತೀತವಾದ್ಯಂಗಳೆಸೆದುವತಿಶುಭದಂಗಳ್ ॥ ೧೩

ತಾಳದ ಲಯಮಂ ನಿಱು ನೀ
ಳ್ಳಾಳಕ ಹಾರದ ಪೊದಱ್ದ ಮುತ್ತೆಂಬಿವು ಮುಂ ।
ಮೇಳಿಸಿ ಕೈಕೊಂಡುವು ಲುಳಿ
ತಾಳಕಿ ಕೈಕೊಂಡಳೆಂಬುದೊಂದಚ್ಚರಿಯೇ ॥ ೧೪

ರಸಭಾವಾಭಿನಯನಂಗಳ್
ಪೊಸವೆ ಪುಗಿಲ್ ಪೊಸವೆ ಚಲ್ಲಿಗಳ್ ಪೊಸವೆ ನಯಂ ।
ಪೊಸವೆ ಕರಣಂಗಳುಂ ನಿ
ಪ್ಪೊಸವೆನೆ ಪೊಸಯಿಸಿದಳಾಕೆ ನಾಟ್ಯಾಗಮಮಂ ॥ ೧೫

ಭಾರತಿ ಸಾತ್ವಕಿ ಕೈಶಿಕೆ
ಯಾರಭಟಿಯುಮೆಂಬ ವೃತ್ತಿಯೊಳ್ ರಸಮಂ ಸಂ ।
ಚಾರಿಸುವ ಭಾವಮಂ ವಿ
ಸ್ತಾರಿಸುವ ಬೆಡಂಗು ಬೇಱೆ ನೀಲಾಂಜನೆಯಾ ॥ ೧೬

ಭಾವದನುಭಾವದೆಸೆವ ವಿ
ಭಾವದ ಪಸುಗೆಗಳೊಳೊಸರ್ವ ರಸದಭಿನಯಮಂ ।
ಭಾವಿಸುವೊಡಾದಿದೇವನ
ದೇವೇಂದ್ರನ ಬಗೆಗಮಸದಳಂ ನರ್ತಕಿಯಾ ॥ ೧೭

ಅಂಗೋಪಾಂಗಂಗಳೊಳೆಸೆ
ವಾಂಗಿಕಮಂ ಗಾನಪಾಠ್ಯದೊಳ್ ವಾಚಕಮಂ ।
ತುಂಗಕುಚೆ ಮೆಱೆದಳಾದಿವಿ
ಜಾಂಗನೆಗಾಹಾರ್ಯಸಾತ್ವಿಕಂ ನಿಜಮೆ ವಲಂ ॥ ೧೮

ಭರತಾಗಮದೊಳ್ ಮೂವ
ತ್ತೆರಡೆನೆ ನೆಗೞ್ದಂಗಹಾರಮುಂ ನೂಱೆಂಟುಂ ।
ಕರಣಮುಮನವಳ ಡವಕೆಯ
ಪರಿಚಾರಿಕೆಯಱುಗುಮಾಕೆಗವು ತೊಡರ್ವೆಡೆಯೆ ॥ ೧೯

ಪುಗುವ ಪೊಱಮಡುವ ತೆಱನೆರ್ದೆ
ಪುಗುವಳ್ ಪೊಱಮಡುವಳೆನಿಸೆ ಪೊಸತಮರ್ದಂ ಮೇ।
ಗುಗುಣ್ಪಿಪಳೆನಿಸೆ ಮುಗುಳ್ನಗೆ
ನಗೆಮೊಗದ ಬೆಡಂಗವಳ್ಗದೇನೊಪ್ಪಿದುದೋ॥ ೩೦

ಪೆಸರಱಿಯದಮರತೂರ್ಯ್ಯ
ಪ್ರಸರಂಗಳ ಜತಿಗೆ ತೊಡರದಿನಿಸೆಳಲದೆ ಬ।
ಣ್ಣಸರಂ ಗೊಂಡಂತಿರೆ ಬ
ಣ್ಣಸರಂ ಸೊಗಯಿಸಿದುದೇನವಳ್ ಪರಿಣತೆಯೋ॥ ೩೧

ಕುಡುಪುಂ ಕಯ್ಯುಂ ಜತಿಯೊಳ್
ತಡತಡವರೆ ವಾದಕಂಗೆ ಪುರ್ವಿಂ ಜತಿಯಂ।
ತೊಡರದೆ ನಡೆಯಿಸಿ ಪುರ್ವದೆ
ಕುಡುಪೆನೆ ನರ್ತಕಿಯೆ ಸಭೆಗೆ ವಾದಕಿಯಾದಳ್॥ ೩೨

ಬಿಂದೊತ್ತಂ ನಡೆಯಿಸುವುದ
ದೊಂದೊತ್ತಿನ ಲಯಕೆ ಲಕ್ಕೆ ತೆಱನಾಡುವುದೇ।
ನೆಂದಾಂ ಬಣ್ಣಿಸುವೆನೊ ಸುರ
ಸೌಂದರಿಯ ವಿಳಾಸವಿಭ್ರಮಭ್ರೂಲತೆಯಂ॥ ೩೩

ಪೊಸವೆಳ್ದಿಂಗಳ್ ದೆಸೆದೆಸೆ
ಗೆಸೆದುದು ಕುಮುದವನಮಲರ್ದುದೆಂಬಂತಿರದೇ।
ನೆಸೆದುದೊ ಕಟಾಕ್ಷಮಾಲಾ
ಪ್ರಸರಂ ಭ್ರೂಲಾಸ್ಯಸೌಂದರಂ ನರ್ತಕಿಯಾ॥ ೩೪

ಎವೆಯಿಕ್ಕದೆ ನೋಡುವನರ
ರಮರರ ಕಣ್ಗಳೊಳನಂಗರಾಜನೆ ಬಯ್ತಿ।
ಟ್ಟವಮರ್ದಂ ಕೊಳೆ ತಳೆದುದು ನಾ
ಭಿಮೂಳಮುಂ ಬಾಹುಮೂಳಮುಂ ಸುರವಧುವಾ॥ ೩೫

ಅವಯವದಿಂದಮೆ ದೇವಾಂ
ಗವಸ್ತ್ರದುಳ್ಳುಡೆಯನಾಕೆಯೋಸರಿಸುವ ಸೂ।

ಸುವ ಹಾರಲತೆಯನಳವಡಿ
ಸುವ ಭಂಗಿಯೆ ಮದನರಾಜರಾಜ್ಯವಿಳಾಸಂ ‖ ೩೬

ಆಡುವ ವಿಳಾಸವುಂ ನಡೆ
ನೋಡುವ ನೋಟಕರನತನುಮತ್ತದ್ವಿರದಂ ।
ಕೋಡಂ ಕಾಣಿಸಿ ಪಿಡಿದೀ
ಡಾಡುವುದೆಂಬಿನೆಗಮಾಡಿ ರಂಜಿಸಿದಳವಳ್ ‖ ೩೭

ಪಾಟಿಸಿ ಮಾಡಿದ ಸೊರ್ಕಿವ
ಳಾಟಮೆ ಪೊಲಮೆನಿಸಿ ನೆಗೞ್ದ ನೀಲಾಂಜನೆ ತ ।
ನ್ನಾಟಮನೊಱಲ್ದು ನೋಡುವ
ನೋಟಕರಂ ತವದ ಮಾಪ್ಕೆಯಿಂ ಮೋಹಿಸಿದಳ್ ‖ ೩೮

ಚರಣದ ಚಾರಿಯು ಚಲ್ಲಿಯ
ಪರಿಕ್ರಮಕ್ರಮದ ಭಂಗಿಗಳ್ ನೆಗಪ್ವೆಡೆಯೊಳ್ ।
ಸುರವಂದಿಗಳಿಂ ಹೋಹೋ
ಯಿರೆಯೆನಿಸಿದುದಾಟಮಿಂತು ನೀಲಾಂಜನೆಯಾ ‖ ೩೯

ಸುರಗಣಿಕಾನಾಟ್ಯರಸಂ
ಪರಮನ ಚಿತ್ತಮುಮನೆಯ್ದೆ ರಂಜಿಸಿದುದು ವಿ ।
ಸ್ಫುರಿತಸ್ಫಟಿಕಂ ಶುದ್ಧಾಂ
ತರಂಗಮೇನನ್ಯರಾಗದಿಂ ರಂಜಿಸದೇ ‖ ೪೦

ಆಮಧುರಾಕಾರಲತಾ
ಕೋಮಳೆ ತನಗಾಗಳಾಯುರಂತಂ ಬರೆ ಸಾ ।
ದಾಮಿನಿವೊಲ್ ಭೋಂಕೆನೆ ಸುರ
ಕಾಮಿನಿ ರಂಗದೊಳದೃಶ್ಯೆಯುಪ್ಪುದುಮಾಗಳ್ ‖ ೪೧

ರಸಭಂಗಭಯದಿನಿಂದ್ರಂ
ಪೊಸತೊಂದಾದೊರೆಯ ಪಾತ್ರಮಂ ತಂದನುಸಂ ।
ಧಿಸುವುದುಮದನಣಮಱಿಯ
ಲ್ಕೆ ಸುರಾಸುರಸಮಿತಿಗಾದುದಿಲ್ಲಾಕ್ಷಣದೊಳ್ ‖ ೪೨

ಆನೀಲಾಂಜನೆಯೆಂದೆ ಮ
ನೋನಯನೋದಿತವಿಮೋಹದಿಂದಿರೆ ಸಭೆ ವಿ ।
ದ್ಯಾನಿಳಯನಱಿದದಂ ದೇ
ಹಾನಿತ್ಯತೆಗಿಂತು ನಾಡೆ ಚೋದ್ಯಂಬಟ್ಟಂ ॥ ೪೩

ನಾರೀರೂಪದ ಯಂತ್ರಂ
ಚಾರುತರಂ ನೋಡೆ ನೋಡೆ ಕರಗಿದುದೀಸಂ ।
ಸಾರದನಿತ್ಯತೆ ಮನದೊಳ್
ಬೇರೂಱಿದುದೀಗಳಿಂತಿದಂ ಕಡೆಗಣಿಪೆಂ ॥ ೪೪

ಕೋಟಿತೆಱದಿಂದವೆಸೆವೀ
ನಾಟಕವಂ ತೋಱಿ ಮಾಣ್ದಳಲ್ಲಳ್ ಬಗೆಯೊಳ್ ।
ನಾಟುವಿನಮಮರಿ ಸಂಸೃತಿ
ನಾಟಕಮುಮನೆನಗೆ ನೆಱೆಯೆ ತೋಱಿದಳೀಗಳ್ ॥ ೪೫

ತನುರೂಪವಿಭವಯೌವನ
ಧನಸೌಭಾಗ್ಯಾಯುರಾದಿಗಳ್ಗೆಣೆ ಕುಡುಮಿಂ ।
ಚಿನ ಪೊಳೆಪು ಮುಗಿಲ ನೆೞಲಿಂ
ದ್ರನ ಬಿಲ್ ಬೊಬ್ಬುಳಿಕೆಯುರ್ಬು ಪರ್ಬಿದ ಭೋಗಂ ॥ ೪೬

ನರಕದೊಳೆಯ್ದಿದ ದುಃಖದ
ಕರತನಮದು ಬಗೆವೊಡಾರ್ಗಗುರ್ವಲ್ತೆ ಭಯಂ ।
ಕರವಲ್ತೆ ತಿರ್ಯಗ್ಗತಿ[1]
ದುರಂತದುಃಖಪ್ರತಾನಮಂ ಬಗೆವಾಗಳ್ ॥ ೪೭

ನಾನಾಯೋನಿಗಳೊಳ್ ಸುೞಿ
ದೇನಾನುಂ ದುಷ್ಕೃತಂ ಸಡಿಲ್ದೊಡೆ ಪಡೆಗುಂ ।
ಮಾನುಷ್ಯಮನತಿದಾರುಣ
ಮಾನಸಶಾರೀರದುಃಖಪೀಡಿತನಕ್ಕುಂ ॥ ೪೮

1ಖ.—ಕರತಿರ್ಯಗ್ಗತಿದುಸ್ತರ.

ಚಿಂತಾಶೋಕವಿಷಾದ
ಭ್ರಾಂತಿಸಮುದ್ಭೂತದುಃಖದಿಂ ನರಕದೊಳೋ |
ರಂತೆ ವಲಂ ಮಾನಸಗತಿ
ಸಂತೋಷಮದೆಂಬುದುಂಟೆ ಸಗ್ಗಂಗಳೊಳಂ || ೪೯

ಅಱುದಿಂಗಳಾಯುವುಂಟೆನೆ
ಮಱುಗುವುದುಂ ನಲ್ಲರಲ್ಲಿ ತಮ್ಮಿಂ ಮುನ್ನಂ |
ಪಱಿಪಟ್ಟು ಬರೆ ಕನಲ್ವುದು
ಮಱಿಪದೆ ಕಲ್ಪಜರ್ಗೆ ನರಕದುಃಖಕ್ರಮಮಂ || ೫೦

ಕಷ್ಟಂ ದುಃಖಾನಳಪರಿ
ಪುಷ್ಟಂ ಚಿಃ ಗತಿಚತುಷ್ಟಯಂ ಪ್ರಾಣಿಗೆ ಸಂ |
ತುಷ್ಟತೆಯನೆಯ್ದೆ ಪಡೆದುಮ
ಭೀಷ್ಟಸುಖಪ್ರದಮದೊಂದೆ ಮುಕ್ತಿಸ್ಥಾನಂ || ೫೧

ಎಯ್ದಿದುದದಱೊಳಳವಡದುದು
ಮೆಯ್ದದುದನೆ ಬಯಸುತಿರ್ಪುದುಂ ಜೀವಕ್ಕೇ |
ಗೆಯ್ದುಮಿದುಸಹಜಮನ್ನೆಗ
ಮೆಯ್ದುಗುಮೆನ್ನೆಗಮುದಾತ್ತಮುಕ್ತಿಶ್ರೀಯಂ || ೫೨

ಎನಿತೊಡಲಂ ತಾಳ್ದಿದುದಿ
ಲ್ಲೆನಿತೊಡಲಂ ಬಿಸುಟುದಿಲ್ಲ ವಿಷಯಾನಳನಿಂ |
ದೆನಿತೆನಿತಂ ಮಱುಗಿದುದಿ
ಲ್ಲನಂತಸಂಸಾರಗಹನದೊಳ್ ಜೀವಂಗಳ್ || ೫೩

ಜನನೀಜನಕಸಹೋದರ
ವನಿತಾಸುತಪುತ್ರಮಿತ್ರಸಂಬಂಧಮದೆಂ |
ತೆನಿತೆನಿತು ಭವದೊಳಾಯ್ತಿ
ಲ್ಲೆನಿತನಿತಂ ನೆನೆವುದೆನಿತನವಧರಿಸುವುದೋ || ೫೪

ತನುಗೆ ಪೊಱೆ ತುಡುಗೆ ನವಲೇ
ಪನಮೆ ಮುಳಂ ಗೀತಮಳ್ಕೆ ನೃತ್ಯಂ ಬಗೆಯ |

ಲ್ಕೆ ನಗೆ ದಲುನ್ಮತ್ತವಿಳಾ
ಸನಮಿಂತಿನಿತಱೊಳವೊಂದಱೊಳ್ ಪುರುಳುಂಟೇ ॥ ೫೫

ತ್ರಿದಶಸ್ತ್ರೀಜನದೊಳಮಮೃ
ತದೊಳಮಣಂ ಮೞ್ಗಿದುರಿವ ಮದನಾಗ್ನಿಯ ಕೊ।
ರ್ಬಿದರಾಗ್ನಿಯ ಪೆರ್ಚೇಂ ಮ
ೞ್ಗಿದಪುದೆ ಲಲನೆಯರೆೊಳಶನದೊಳ್ ಮಾನವರಾ ॥ ೫೬

ಎನಿತಾನುಮಂಬುನಿಧಿಗಳ
ನನೇಕನಾಕಂಗಳಲ್ಲಿ ಕುಡಿದುಂ ಪೋಯ್ತು ।
ಲ್ಲೆನಗೆ ನರಭೋಗವೆಂಬೀ
ಪನಿಪುಲ್ಲಂ ನಕ್ಕೆ ತೃಷ್ಣೆ ಪೇೞ್ ಪೋದಪುದೇ ॥ ೫೭

ವಿದಿತಂಮೂರ್ಧಾಭಿಷಿಕ್ತರ್ ಪಲಬರರಸುಗಳ್ ಪ್ರಾಜ್ಯಸಾಮ್ರಾಜ್ಯಲಕ್ಷ್ಮೀ
ಪದಮಂ ಕೈಕೊಂಡು ತಮ್ಮಂ ಮಱೆದು ವಿಷಯಭೋಗಾಸವಾತ್ಯಂತಸೇವಾ
ಮದದಿಂದಂ ಧರ್ಮಪೋತಚ್ಯುತರನವಧಿಸಂಸಾರವಾರಾಸಿಮಧ್ಯಾ
ಸ್ಪದಸರ್ವಗ್ರಾಸಿಭೀಮಾಂತಕವದನಮಹಾಗರ್ತದೊಳ್ ಮಗ್ನರಾದರ್ ॥ ೫೮

*ವನದಹನಂ ವನಾಂತರಮನೊರ್ಬುಳಸಾಗಿರೆ ಮುತ್ತಿ ಸುತ್ತಿ ಸು
ತ್ತಿನ ನಡುವಿರ್ದ ಮಾಮರನನಟ್ಟಿದುದೀಮರನಂ ತಗುಳ್ದುದೆಂ ।
ಬನೊಳಿಣೆಯಾಗೆ ಸತ್ತರನೆ ಸಾಯುದರಂತೆಣಿಸುತ್ತುಮಿರ್ಪ ಜೆ
ಳ್ತನದನಿತಲ್ಲದಾಮರನನಾದವದಗ್ನಿ ಬರ್ದುಂಕಲೀಗುಮೋ ॥ ೫೯

ಬಗೆದೀಡಾಡೆ ದುರಂತದುಃಖತತಿಗಳ್ ಬೆನ್ನಟ್ಟೆ ದುರ್ಮೋಹಮ
ತ್ಸ್ಯಗಣಂಗಳ್ ಕಡಿದಿಕ್ಕೆ ಲೋಭಮಕರಾನೀಕಂಗಳಾಟಂದು ನು ।
ಣ್ಣಗೆ ನುಂಗುತ್ತಿರೆ ಮಾರರಾಗಶಿಶುಮಾರಂಗಳ್ ಮಹೋಗ್ರಂಗಳಿ
ನ್ನೆಗಮೋರಂತೆ ತೊೞಲ್ದೆನಿಂ ತಿರಿಯಲಾಱೇಂ ಭವಾಂಭೋಧಿಯೊಳ್ ॥ ೬೦

ವ॥ ಎಂದು ಸಂಸಾರಶರೀರಭೋಗವಿರಕ್ತಾಂತರಂಗನುಂ ಮುಕ್ತಿಕಾಂತಾನುರಕ್ತಚಿತ್ತನುಮಾಗಿರ್ಪನ್ನೆಗಂ, ಪೂರ್ವಭವಾಭ್ಯಸ್ತಸಮಸ್ತಾಗಮಾರ್ಥರುಂ ಉಚಿತಶುಭಭಾವನಾಧ್ಯಾಸಿತಾಂತಃಕರಣರುಂ ತ್ರಿಭುವನಗುರುಪರಿ

*59, 60 ಈಪದ್ಯಗಳು ಖ ಗ ಪುಸ್ತಕಗಳಲ್ಲಿಲ್ಲ.

ನಿಷ್ಕ್ರಮಣಕಲ್ಯಾಣಶಾರದಾಗಮಪ್ರತೀಕ್ಷಣದಿವ್ಯಹಂಸರುಂ ಬ್ರಹ್ಮಕಲ್ಪಾಂತನಿವಾಸಿಗಳುಮಪ್ಪ ಸಾರಸ್ವತಾದಿತ್ಯವಹ್ನ್ಯರುಣಗರ್ದತೋಯತುಷಿತಾವ್ಯಾಭಾದಾರಿಷ್ಟರೆಂಬೆಣ್ಬರುಂ ಲೋಕಾಂತಿಕದೇವರ್ ಬಂದು,

ಸುರಭೂಜಪ್ರಸವಂಗಳಂ ಸುರಿದು ಪಾದಾಂಭೋಜದೊಳ್ ದೇವ ಭೀ
ಕರಕರ್ಮದ್ವಿಷರಂ ಪಡಲ್ವಡಿಸಲುಂ ಭವ್ಯರ್ಕಳಂ ಘೋರಸಂ ।
ಸರಣಾಂಭೋನಿಧಿಪಾರಮಂ ಸಲಿಸಲುಂ ಸಾಲ್ಗುಂ ತದುದ್ಯೋಗವಿ
ನ್ನಿರವೇಂ ತ್ರೈಭುವನೋಪಕಾರಕರಣವ್ಯಾಪಾರಪಾರಾಯಣಾ ॥ ೬೧

ಪರಮಾರ್ಹಂತ್ಯಮನೆಯ್ದಲಿರ್ದದಱಿಂ ಮೇಲುಂಟೆ ಸತ್ವಂ ಚರಾ
ಚರಮಂ ನೆಟ್ಟನೆ ಪರ್ವಲಿರ್ದದಱಿಂ ಮೇಲುಂಟೆ ವಿಜ್ಞಾನಮಿಂ ।
ತೆರಡರ್ಕಂನೆಲೆಯಾಗಿಯುಂ ವಸುಮತೀಸಾಮ್ರಾಜ್ಯದೊಳ್ ನೀಂ ನಿರಾ
ದರನಾಗಿರ್ದದೆ ತತ್ಸುಖಾನುಗುಣಮಂ ಪೇೞ್ಗುಂ ಗುಣಾಂಭೋನಿಧೀ ॥ ೬೨

ವ॥ ಅದುಕಾರಣದಿಂದೀವಸುಂಧರಾರಾಜ್ಯಮೋಹಮೆಂಬ ವಜ್ರಲೋಹನಿಗಳಮಂ ಪಱಿಯೆ ಪೊಯ್ವ ರಾಜಕುಂಜರಂಗೆ ನಿನಗಪವರ್ಗಮಾರ್ಗಂ ನಿರರ್ಗಳಮೆ ವಲಮಾದೊಡಮೇಂ,

ವಿಶದಯಶ ಧರ್ಮಮಷ್ಟಾ
ದಶಕೋಟ್ಯನುಕೋಟಿಸಾಗರೋಪಮಕಾಲಂ ।
ಪ್ರಶಮಿಸಿ ನಿಂದುದದಂ ನೀಂ
ವಿಶದಂಮಾೞ್ಪುದು ಜಗದ್ವಿಶೇಷಕಚರಿತಾ ॥ ೬೩

ವ॥ ಎಂದವರ್ ಪ್ರತಿಬೋಧಿಸಿ ಪೋಗಲೊಡಂ ಪರಿನಿಷ್ಕ್ರಮಣಕಲ್ಯಾಣೋತ್ಸವೋತ್ಸುಕರಾಗಿರಲಾಸಕಳಸುರಸಮಾಜಂ ಬೆರಸಮರರಾಜಂ ಮುಂ ಮಾಡಿದ ಜನ್ಮಾಭಿಷೇಕಕ್ಕಂ ಬೞಿಕ್ಕ ಮಾಡಿದ ರಾಜ್ಯಾಭಿಷೇಕಕ್ಕಮಿದುವೆ ಮಿಗಿಲೆಂಬಂತಾಗಿ ಪಂಚಮಹಾಂಬುಧಿಪವಿತ್ರಜಳಪರಿಪೂರ್ಣಸುವರ್ಣಕಲಶಂಗಳಿಂದಮಭಿಷೇಕಂಗೆಯ್ದು ತದನಂತರದೊಳ್ ಭರತರಾಜನಂ ಬರಿಸಿ ರಾಜ್ಯಾಭಿಷೇಕಂಗೆಯ್ದು,

ಕರವಾಳಾಂಶುಚಯಾಂಜನಂಗಳೊಳರಿಕ್ಷ್ಮಾಭೃಜ್ಜಯಶ್ರೀವಶೀ
ಕರಣಂಮಾಡಿ ಹಿಮಾದ್ರಿವಾರಿಧಿನಿರುದ್ಧೈಕಾತಪತ್ರಕ್ಷಮಾ ।

ಭರಮುಂ ಭೂರಿಭುಜಾಗ್ರದೊಳ್ ನಿಱಿಸಿ ಬೋಧಾವಾಪ್ತಿಯಿಂದಂ ಸುಖಾ
ಕರನಾಗೆಂದು ಫಲಪ್ರದೋಕ್ತಿ ತಳೆದಂ ಶೇಷಾಕ್ಷತೌಘಂಗಳಂ ॥ ೬೪

ವ॥ ಅಂತು ತಳೆದು,

ಭರತಂಗಭಿಷೇಕಪುರ
ಸ್ಸರಮೂರ್ಜಿತರಾಜ್ಯಪದವಿಯಂ ಕೊಟ್ಟು ನಿಜಾ ।
ದರದಿಂದೆ ಬಾಹುಬಲಿಗಂ
ಪರಮಂ ಯುವರಾಜಪದವಿಯಂ ದಯೆಗೆಯ್ದಂ ॥ ೬೫

ವ॥ ಅಂತು ದಯೆಗೆಯ್ದಯೋಧ್ಯಾಪೌದನಪುರಾಧಿಪತ್ಯದೊಳಿರ್ವರುಮಂ ನಿಱಿಸಿ ನಿರ್ಭರಪ್ರಮೋದಪರಂಪರಾಪರೀತದಿವಿಜಮನುಜಸಮಾಜದೊಳ್,

ಭಗವತ್ಪರಿನಿಷ್ಕ್ರಮಣ
ಪ್ರಗುಣೀಕೃತಸುರಮೃದಂಗರವಮೊಂದೆಡೆಯೊಳ್ ।
ನೆಗೞ್ದುದು ರಾಜ್ಯಸಮರ್ಪಣ
ಯುಗಪತ್ಪ್ರತಿಹತಮುಮಂದರವಮೊಂದೆಡೆಯೊಳ್ ॥ ೬೬

ನೆಗೞ್ದ ತಪೋರಾಜ್ಯದ ಬಗೆ
ಮಿಗೆ ನಿಂದಂ ವೃಷಭನಾಥನತ್ತೊಂದೆಡೆಯೊಳ್ ।
ಜಗತೀರಾಜ್ಯದ ಬಗೆ ಕೈ
ಮಿಗೆ ನಿಂದಂ ಭರತರಾಜನಿತ್ತೊಂದೆಡೆಯೊಳ್ ॥ ೬೭

ಸುರಶಿಲ್ಪಿಗಳಿಂ ಶಿಬಿಕಾ
ವಿರಚನೆ ದೆಸೆಗೆಸೆಯುತಿರ್ದುದತ್ತೊಂದೆಡೆಯೊಳ್ ।
ನರಶಿಲ್ಪಿಗಳಿಂ ಮಂಡಪ
ವಿರಚನೆ ನೆಗೞುತ್ತುಮಿರ್ದುದಿತ್ತೊಂದೆಡೆಯೊಳ್ ॥ ೬೮

ಮುಂದಾಡಿದಳಿಂದ್ರನ ಸತಿ
ಬಂದಮರೀಸಹಿತಮೀಶನಿದಿರೊಂದೆಡೆಯೊಳ್ ।
ಬಂದಾಡಿದಳ್ ಸುನಂದೆಯೊ
ಳೊಂದಿ ಯಶಸ್ವತಿ ಮಹೀಶನಿದಿರೊಂದೆಡೆಯೊಳ್ ॥ ೬೯

ಸುರವೃಂದಾರಕರಿಂದಂ
ಪರಿವೃತನಾದಂ ಚಿದಾತ್ಮನತ್ತೊಂದೆಡೆಯೊಳ್ ।
ನರವೃಂದಾರಕರಿಂದಂ
ಪರಿವೃತನಾದಂ ಮಹಾತ್ಮನಿತ್ತೊಂಡೆಯೊಳ್ ॥ ೭೦

ಧರೆಯಂ ಮೆಟ್ಟದೆ ಮೆಟ್ಟುವ
ಸುರಲಲನಾನೃತ್ತಮತ್ತಲಭವನ ಸಭೆಯೊಳ್ ।
ಕರಮೊಸೆದುದು ವಾರಸ್ತ್ರೀ
ಪರಿನರ್ತನಮಿತ್ತಲಧಿಕವಿಭವನ ಸಭೆಯೊಳ್ । ೭೧

ಜನಿತೋತ್ಸವಯುಗಳವ್ಯ
ಗ್ರನಾಕನರಲೋಕಸಕಳಜನಕಳಕಳದಿಂ ।
ದೆನಿತಾನುಂ ವಿಭವದಿನಿಂ
ತು ನಾಡೆಯುಂ ರಮ್ಯಮಾದುದಾನೃಪಭವನಂ ॥ ೭೨

ವ॥ ಮತ್ತಮಾವೃಷಭನಾಥನುಚಿದಪತ್ಯವರ್ಗಕ್ಕೆಲ್ಲಮಿಳಾತಳವಿಭಾಗಮಂ ಪಚ್ಚುಕೊಟ್ಟು ಸಮುತ್ತೀರ್ಣರಾಜ್ಯಭಾರನುಂ ಪರಿನಿಷ್ಕ್ರಮಣೋದ್ಯುಕ್ತಚಿತ್ತನುಮಾಗಿ, ನಾಭಿರಾಜಾದಿಸನಾಭಿಗಳಂ ಬೀಳ್ಕೊಂಡು ಮಂಗಳಾಳಂಕರಣಾಲಂಕೃತಂ ಸೌಧರ್ಮೇಂದ್ರದತ್ತಹಸ್ತಾವಲಂಬಂ ಆರೂಢಶುಭಪರಿಣಾಮಮುಂ ಗುಣಶ್ರೇಣಿಯನೇಱುವುದನಭ್ಯಾಸಂಗೆಯ್ವಂತೆ ಸುದರ್ಶನವೆಂಬ ಶಿಬಿಕೆಯನೇಱಿದಾಗಳ್,

ಪರಮೋತ್ಸಾಹದಿನಾಗಳೇೞಡಿವರಂ ಭೂಪಾಲರುಯ್ದರ್ ವಿಯ
ಚ್ಚರರತ್ತೇೞಡಿಯುಂ ವಿಯದ್ಗಮನದಿಂದಾಂತುಯ್ದರಲ್ಲಿಂ ಸುರಾ ।
ಸುರರಂಭೋದಪಥಕ್ಕಳಂಕರಣಮಾಗುಯ್ದರ್ ಬಳಿಕ್ಕಿಂದ್ರರಾ
ದರದುಯ್ದರ್ ಕಮನೀಯರತ್ನಶಿಬಿಕಾಸ್ಕಂಧರ್ ಜಗನ್ನಾಥನಂ ॥ ೭೩

ವ॥ ಅಂತುವೃಷಭೇಶ್ವರನನಮರೇಶ್ವರರುಯ್ವುದಂ ಕಂಡು ಪುರಜನಂಗಳ್ ಗುಜುಗುಜುಗೊಂಡು ತಂತಮ್ಮೊಳಿಂತೆಂದರ್,

ಅರಸನ ಪುಟ್ಟಿದಿಂಬಳಿಯಮಿಾದಿವಿಜಾಳಿಗೆ ಮಾಣ್ದುದಿಲ್ಲ ಪೋ
ಬರಮಿವರುಯ್ವರುಂ ಮಗುಳೆ ತರ್ಪರುಮಪ್ಪುದಱಿಂದಮಿಲ್ಲಿ ಕೊ ।

ಕ್ಕರಿಕೆಗೆ ಪೇಟಿಮಾವುದೆಡೆ ದೇವನನಿಲ್ಲಿಗೆ ತರ್ಪರೇಕೆ ಮಂ
ದರಶಿಖರಾಗ್ರದೊಳ್ ಮಿಸಿಸಿ ಮುನ್ನಿಪರಿಲ್ಲಿಗೆ ತಂದರಲ್ಲರೇ ‖ ೭೪

ವ॥ ಎಂಬುದುಮಲ್ಲಿಯುಂ ಕೆಲರ್ ವಿವೇಕಿಗಳ್,

ಅರಸನ ಪಂಬಲಂ ಬಿಸುಡಿಮೇಕೆನೆ ಬರ್ಪನೆಯುಪ್ಪೊಡೀಧರಾ
ಭರಮನಶೇಷಮಂ ನಿಜತನೂಭವಗೊರ್ವದೆ ಪಚ್ಚುಕೊಟ್ಟು ಭೋಂ ।
ಕರಿಸುವ ದೇವಕೋಟಿಗಳ ಬಿಜ್ಜೆಗಳೊಳ್ ತೊಡರ್ದೇಕೆ ಪೋಪನೀ
ದೊರೆಯನನಾಳ್ದನಂ ಪಡೆವುಪಾಯಮದಾವುದೊ ಜನ್ಮಜನ್ಮದೊಳ್ ‖ ೭೫

ವ॥ ಎಂದು ತಮ್ಮ ತಮ್ಮ ಬಗೆಗಳನೆ ಬಗೆದು ನುಡಿಯೆ,

ತನಯರನಿಟ್ಟು ಸಂತತಿಯೊಳಂತೆಮಗಂ ಬಗೆವೇಟಿದೇಕೆ ಪೋ
ದನೊ ನೃಪನೆಂತು ಸೈರಿಸುವೆವಯ್ಯ ವಿಯೋಗಮನೆಂದು ಸೋರ್ವ ಕ ।
ಣ್ಬನಿಯ ತೆರಳ್ಕೆ ಗದ್ಗದಿಕೆಗೊಳ್ವ ಸರಂ ಮಿಗೆ ಪೋದರಾತ್ಮನಾ
ಥನ ಬಟಿಯಂ ಮನಂ ಮಱುಕವೊಯ್ಯೆ ಯಶಸ್ವತಿಯುಂ ಸುನಂದೆಯುಂ ‖

ವ॥ ಆಗಳಂತಃಪುರವೃದ್ಧರವರನರಸರೀಗಳ್ ಬಂದಪ್ಪರಂಜದಿರಿಮೆಂದಾಸೆ ವಾತುಗಳೊಳಾಱಿಸಿ ನುಡಿದೊಡಗೊಂಡು ಮಂದಿರಕ್ಕೆ ಮಗುಟ್ದರ್. ಇತ್ತ ನಾಭಿರಾಜಂ ಭರತೇಶ್ವರಕಚ್ಛಮಹಾಕಚ್ಛಪ್ರಮುಖಪ್ರಧಾನಪಾರ್ಥಿವರುಂ ಮರುದೇವಿಮಹಾದೇವಿಯುಂ ಪರಿನಿಷ್ಕ್ರಮಣಕಲ್ಯಾಣಾವಲೋಕನಕುತೂಹಲದಿಂ ವೃಷಭೇಶ್ವರನೊಡನೆ ಸುರಪರಿವೃಢನಯೋಧ್ಯಾಪುರಕ್ಕತಿದೂರಮುಮತ್ಯಾಸನ್ನಮುಮಲ್ಲದ ಸಿದ್ಧಾರ್ಥವನದ ನಡುವಣ ನಿರಂತರನಿಚಿತತರುನಿಕರವಿಗಳಿತಪುಷ್ಪೋಪಹಾರಶೋಭಿತದೊಳ್ ಇಂದ್ರಾಣೀಹಸ್ತವಿನ್ಯಸ್ತಮರತಕಚೂರ್ಣರಂಗವಲ್ಲೀವಿರಾಜಿತದೊಳ್ ಅಮರವಾರಾಂಗನಾರಬ್ಧಮಂಗಳಗೀತಂಗಳೊಳ್ ದೇವಾಂಗವಸ್ತ್ರವಿರಚಿತವಿಚಿತ್ರಮಂಟಪದೊಳ್ ಪರ್ಯಂತನಿವೇಶಿತವಿವಿಧಮಂಗಳದ್ರವ್ಯಪರಿಕರಪರಿಪೂರ್ಣದೊಳ್ ಪಾಂಡುಕಶಿಲಾತಲವಿಳಾಸೋಪಹಾಸಿಚಂದ್ರಕಾಂತಶಿಳಾತಳದೊಳ್ ಶಿಬಿಕೆಯನಿರಿಸಿ ಸುರಾಸ್ಸುರಸಭೆಯುಂ ದೂರೋತ್ಸಾರಿತಂಮಾಡಿ ಜನದ ಕಳಕಳಮಂ ಬಾರಿಸಿ ತನ್ಮಧ್ಯದೊಳ್ ಜಗನ್ನಾಥನನಿರಿಸಿ ಪರಿಚಾರಕಭೃತ್ಯಮಂ ದೇವೇಂದ್ರಂ ಮಾಡಲ್ ಶುಭಭಾವನೆವೆರಸು ಸಮಸ್ತವಸ್ತುಗಳೊಳ್ ಸಮತೆಯಂ ಭಾವಿಸಿ

ಬಾಹ್ಯಾಭ್ಯಂತರಪರಿಗ್ರಹಪರಿತ್ಯಾಗೋನ್ಮುಖಮಾನಸಂ ತ್ರಿಸಾಕ್ಷಿಕನಾಗಿ ವಸ್ತ್ರಾಭರಣಮಾಲ್ಯಾದಿಗಳಂ ಮೆಯ್ಯಿಂ ತೊಲಗಿಸಿ ಪೂರ್ವಾಭಿಮುಖನುಂ ನಿಬಿಡನಿಬದ್ಧಪಲ್ಯಂಕಾಸನನುಮಾಗಿ,

ಮನದ ಪರಿಚ್ಛೇದದಿನಂ
ದು ನಮಸ್ಸಿದ್ಧೇಭ್ಯವೆಂದು ಕರ್ಮಂಗಳ ಬೇ ।
ರನೆ ಪಱಿವ ತೆಱದೆ ಪಱಿದಂ
ಮನಸ್ವಿ ಚಳದಳಿವಿನೀಳಕೇಶಾವಳಿಯುಂ ॥ ೭೭

ನಾನಾಭೂಷಣವಸ್ತ್ರಾ
ನೂನಸ್ರಗ್ರುಚಿಸನಾಥನಿಂ ಕಳೆಯಲೊಡಂ ।
ತಾನೆಸೆದುದಿಲ್ಲದೆಂತುಂ
ಸ್ಥಾನಭ್ರಷ್ಟಂಗೆ ತೇಜವೆಂಬುದುಮುಂಟೇ ॥ ೭೮

ಬರೆ ಚೈತ್ರಕೃಷ್ಣಪಕ್ಷಂ
ದೊರೆಕೊಳೆ ನವಮಿಯೊಳಮುತ್ತರಾಷಾಢಂ ದು ।
ರ್ಧರಜಿನದೀಕ್ಷೆಯನಘಕುಳ
ಕರಚಂಡಂ ಮೂಱುಜಾವದಾಗಳ್ ಕೊಂಡಂ ॥ ೭೯

ವ ॥ ಆಗಳ್ ತದುತ್ಪಾಟಿತವಿನೀಳಕುಟಿಲಕುಂತಳಂಗಳನಮರತರುಕುಸುಮದಾಮೋದ್ದಾಮರಜೋರಂಜಿತಂಗಳನನರ್ಘ್ಯರತ್ನಮಯಪಟಳಿಕೆಯೊಳಾಂತುಕೊಂಡು ಪೋಗಿ,

ಸುರದುಂದುಭಿರವಮೆಸೆದಿರೆ
ಸುರಪತಿ ತಳೆದಮರೆ ಕೆದಱೆ ಹರಿನೀಲಮಣಿ ।
ಸ್ಫುರಿತದ ತೆರೆಗಳ ಕೆಲದೊಳ್
ಪರಭಾಗಂಬಡೆದುವವು ಪಯೋಂಭೋನಿಧಿಯೊಳ್ ॥ ೮೦

ವ॥ ಅಂತು ದೇವೇಂದ್ರಂ ಪರಿನಿಷ್ಕ್ರಮಣಕಲ್ಯಾಣಮುಂ ಮನ್ನಿಸಿ ತನ್ನನಿಂದ್ರಪದಪಯೋಜಂಗಳ್ಗೆ ಬಗಿ ಪೊಡೆವಟ್ಟು ಪೋಗೆ ತದನಂತರದೊಳ್ ಭರತನವನತಭಕ್ತಿಭರನಿರತಂ ತ್ರಿಲೋಕಗುರುಚರಣಸರಸಿಜಂಗಳನರ್ಚಿ

ಸಿ ನಿಜಪರಿಜನಂಬೆರಸು ರಾಜಧಾನಿಗೆ ಪೋದಂ. ಅನ್ನೆಗಮಿತ್ತ ಕಚ್ಛಮಹಾಕಚ್ಛರುಂ ಭರತನ ಮಗಂ ಮರೀಚಿಯುಂ ಬೆರಸು ನಾಲ್ಸಾಸಿರ್ವರ್ ಮಕುಟಬದ್ಧರಪ್ಪರಸುಮಕ್ಕಳ್ ಪೋಗಲೊಲ್ಲದೆ,

ಅರಸನ ನೆಗಳ್ದಂದದೊಳನು
ಚರಂಗೆ ನೆಗಲ್ಕೆವೇಳ್ಕುಮೆಂದಱಿಯದೆ ತ ।
ದ್ಗುರುವಿನ ಮತಮಂ ಭಕ್ತಿಯ
ಭರದಿಂದಂ ಜಾತರೂಪಮಂ ಕೈಕೊಂಡರ್ ॥ ೮೧

ವ॥ ಅಂತು ಕೈಕೊಂಡು,

ಬಲವಿಂದೆ ಕೇವಲಂ ದ್ರ
ವ್ಯಲಿಂಗಿಗಳ್ ತನ್ನನಂದು ಬಳಸಿಯುಮಿರೆ ನಿ ।
ಶ್ಚಲತನು ಬಾಳಕುಜಂಗಳ
ಪಲವಱ ನಡುವಿರ್ದ ಕಲ್ಪಕುಜಮನೆ ಪೋಲ್ತಂ ॥ ೮೨

ವ॥ ಆಗಳಾತ್ರಿಲೋಕೈಕವಲ್ಲಭಂ,

ಇಂದಿಂಗೆಱುದಿಂಗಳ್ ನೆಱೆ
ದಂದಲ್ಲದೆ ಕಯ್ಯನೆತ್ತೆನೆಂದನಶನದಿಂ ।
ನಿಂದಂ ಯೋಗದೊಳತಿನಿ
ಸ್ಪಂದಂ ಮಂದರನಗಂಬೊಲಚಳಿತಧೈರ್ಯಂ ॥ ೮೩

ಮಡದೆಡೆ ನಾಲ್ವೆರಲುಂಗುಟ
ದೆಡೆಯೊಳ್ ಗೇಣಾಗೆ ನಿಲ್ವುದಿಚ್ಛಾಗತಮಂ ।
ದೆಡೆಗೊಳೆ ವಾಚಂಯಮತೆಯೊ
ಳೊಡಂಬಡಂ ಪಡೆದು ನಿಂದನಾದಿಬ್ರಹ್ಮಂ ॥ ೮೪

ನಿಂದ ಶಿಲೆ ತಪನತಪ್ತಮಿ
ದೆಂದಂಬುಜನಿಳಯೆ ಪದ್ಮವಿಷ್ಟರಮಂ ಕುಂ ।
ದೇಂದುಧವಳಾತಪತ್ರಮ
ನಂದು ಕೃತೇಚ್ಛಂಗೆ ಪಡೆದು ಪದೆಪಂ ಮೆಱೆದಳ್ ॥ ೮೫

ಪರಮನೊಳಗೊಳಗದೊಂದಂ
ಪರಿಜಪನಂಗೆಯ್ವುದುಂ ನೆಗೞ್ದವ್ಯಕ್ತಾ ।
ಕ್ಷರದಿಂ ನಿಗೂಢತರನಿ
ರ್ಝರರವಗುಂಜದ್ಗುಹಾತಳಕ್ಕೆಣೆಯಾದಂ ॥ ೮೬

ಸ್ತಿಮಿತೇಕ್ಷಣವಭ್ರೂಭ್ರಂ
ಗಮನಾಪಾಂಗಾವಳೋಕನಂ ಸುಶ್ಲಿಷ್ಟೋ ।
ತ್ತಮದಶನಚ್ಛದವಾನನ
ಮಮರ್ದುದು ಯೋಗಪ್ರಯೋಗದೊಳ್ ಮುನಿಪತಿಯಾ ॥ ೮೭

ನೆಗೞ್ದುದು ದೀಕ್ಷಾನಂತರ
ಮಗಣಿತಪುಣ್ಯೋದಯಂ ಮನಃಪರ್ಯಯಮುಂ ।
ತೊಗೆದ ಚತುರ್ಜ್ಞಾನದೊಳಾ
ವಗಮೆಸದಂ ಜ್ಞಾನರೂಪನಾದಿಬ್ರಹ್ಮಂ ॥ ೮೮

ವ॥ ಅಂತಾಪರಮೇಶ್ವರಂ ಸಪ್ತರ್ಧಿಸಂಪನ್ನನಾಗಿ ನಿಶ್ಚಳಯೋಗನಿಯೋಗದಿಂದವೊಂದೆರಡುತಿಂಗಳ್ ನಿಲೆ, ಕಚ್ಛಮಹಾಕಚ್ಛಮರೀಚ್ಯಾದಿಗಳಾದಿಮುನಿಪತಿ ಮೊಗಮಂ ನೋಡಿ ಕಯ್ಯನೆತ್ತಿ ಕೊಳ್ವುದಂ ಕಾಣದೆ, ಕ್ಷುತ್ಪಿಪಾಸಾಶೀತಾತಪಪ್ರಮುಖಪರೀಷಹಂಗಳಂ ಸೈರಿಸಲಾಱದೆ ಭಗ್ನೋತ್ಸಾಹರುಂ ದೂರೋತ್ಸಾರಿತಾಭಿಮಾನಿಗಳುಮಾಗಿ,

ದಿವಸಮನೊಂದು ಮೇಣೆರಡುಮೂಱನೆ ನಿಲ್ವುದು ಮೂಱುತಿಂಗಳಾ
ಯ್ತುವಚಱನಿಂತು ನಿಂದನೊಳನೇ ಶನಿ ನಿಲ್ವವೊಲಿಲ್ಲಿ ಪಾಟಿಗಿ ।
ನ್ನೆವರೆಗಮಿರ್ದಪಿನ್ನೆಮಗೆ ನಿತ್ತರಿಸಲ್ ನೆಱವಿಲ್ಲ ತಾಱಲಾ
ದುವು ತನು ಕೂೞ ನೀರ ದೆಸೆಯಿಲ್ಲದೊಡಲ್ಗಳನೆಂತು ತಾಳ್ದುವಂ ॥ ೮೯

ಮಿಂದುಂಡು ಕುಡಿದು ಮಗುೞ್ದುಂ
ಬಂದಿರ್ಪೊಡಮಿರ್ಪಮಿನಿತುಮಿಲ್ಲದೆ ಗುಱುಗು ।
ವ್ವೆಂದು ಪಸಿದಿರ್ದು ಬೆದಬೆದ
ಬೆಂದಿನಿಬರ್ ಕಟ್ಟೆ ಕೊಳ್ವ ಕಣಿಯೇಂ ಪೇೞಿಂ ॥ ೯೦

ಇದು ರಾಜವಿದ್ಯೆಯೊಳಗಾ
ವುದು ವಿದ್ಯೆಯೊ ಷಡ್ಗುಣಂಗಳೊಳಗಾವ ಗುಣಂ ।
ಪುದಿದೊದವಿದ ಪೊಯ್ಗಾಪಿ
ಲ್ಲದರಣ್ಯದೊಳಪ್ಪುದಾವ ನೀತಿಗಳೊಳಗೋ ॥ ೯೧

ಬರೆ ಬಂದು ನಡೆಯೆ ನಡೆದಿ
ರ್ದಿರೆ ಕುಳ್ಳಿರ್ದಪ್ಪೊಡೆಟ್ಟು ನಿಂದೊಡೆ ನಿಂದಾ ।
ಳರಸೆನಿಸಿ ನೆಗೞ್ದು ಬನದೊಳ
ಗರಸಂ ನಿಲೆ ನಿಂದೆವಿನಿತು ದಿವಸಂಬರೆಗಂ ॥ ೯೨

ವ॥ ಇನ್ನೆಮಗೆ ನಿಲಲುಂ ನಿತ್ತರಿಸಲುಂ ಬಾರದು. ಬಿಸುಟು ಪೋಪೊಡಂ ಭರತನ ದೆಸೆಯೊಳಪಮಾನಸ್ಥಾನರಪ್ಪೆವದಱಿಂದಂ ನಮ್ಮರಸನಿಂದುನಾಳೆ ಕಯ್ಯನೆತ್ತಿಕೊಂಡು ಪೋಗಿ ಮಗುೞ್ದು ರಾಜ್ಯದೊಳ್ ನಿಲ್ವನ್ನೆಗಮೀಬನದ ಕಂದಮೂಲಫಲಂಗಳಂ ತಿಂದುಮರವಿಂದಮಕರಂದಗರ್ಭಸಂದರ್ಭಸರೋವರಜಲಂಗಳಂ ಕುಡಿದುಂ ನಿತ್ತರಿಸುವಮೆಂದವರೊಳಗೆ ಬಗೆದು, ಕೆಲರ್ ಕಾಣ್ಗುಮೆಂದು ಕುಡಿಯಲುಂ ಪೆಱಗಣಿಂ ಪೆಱಗುಗೆಯ್ದು ಜಗುಳ್ದುಂ, ಕೆಲಬರ್ ಕಂಡೊಡೆ ಕರೆಗುಮೆಂದು ಕೆಲದ ಮರಂಗಳನೊತ್ತುಗೊಂಡುಂ, ಕೆಲಬರೆಮ್ಮನೆೞ್ಬಟ್ಟಿ ಪಿಡಿದುಕೊಳ್ಗುಮೆಂದು ಮಗುೞ್ದು ನೋಡುತ್ತುಂ ಬೀೞುತ್ತುಂ ಮೇೞುತ್ತುಂ ಮೋಡಿಯುಂ ಪೋಗಿ ಪಣ್ಫಲಂಗಳಂ ಪಱಿಯಲುಂ ಕೊಳದ ತಿಳಿನೀರಂ ಕುಡಿಯಲುಂ ಕಯ್ಯಂ ನೀಡುವುದುಂ, ಕಂಡು,

ಈರೂಪೆಂಬುದು ಭುವನಜ
ನಾರಾಧ್ಯಂ ಚಕ್ರಿಜನನಿಷೇವಿತಮಿದಱೊಳ್ ।
ಸಾರದಳಪೆಂದು ಪೆಳ್ಪನೆ
ಬಾರಿಸಿದುವು ಬಿಡದೆ ಜಡಿದು ವನದೇವತೆಗಳ್ ॥ ೯೩

ವ॥ ಆಗಳವರ್ಗಳಾರೂಪಿನೊಳದಂ ನೆಗೞಲಂಜಿ ವಲ್ಕಲವಸನರುಂ ಕೌಪೀನಧಾರಿಗಳುಂ ಭಸ್ಮೋದ್ಧೂಳಿತಾಂಗರುಂ ಜಟಾಧರರುಂ ಏಕದಂಡಿ ತ್ರಿದಂಡಿಗಳಪ್ಪ ಪರಿವ್ರಾಜಕರುಮಾಗಿ ತಮಗೆ ತಾವೇ ವನಪ್ರವೇಶಮುಂ ಮಾಡಿ ಬಹುಪ್ರಕಾರವಿಟಪಿರಾಜಿಗಳೊಳಿರ್ದು ವಿವಿಧಮೂಲಫಲಾಶಿಗಳುಂ

ಸರೋವರನದೀನಿರ್ಝರಾಂಬುಪಾಯಿಗಳುಮಾಗಿ ಪರಿತ್ಯಕ್ತಾನ್ಯದೇವತಾ ಬುದ್ಧಿಗಳನೇಕವನಕುಸುಮಂಗಳಂ ವೃಷಭೇಶ್ವರನ ಪದಪಯೋಜಂಗಳನ ರ್ಚಿಸುತ್ತುಮಿರೆ, ಭರತಸುತಂ ಮರೀಚಿ ಪರಿಗೃಹೀತಪರಿವ್ರಾಜಕನಪಸಿ ದ್ಧಾಂತಭಾಷಿತಂಗಳಿಂ ಮಿಥ್ಯಾತ್ವವೃದ್ಧಿಯಂ ಮಾಡಿ ನಿಜೋಪನ್ಯಸ್ತಮಪ್ಪ ಕಾಪಿಳಸಿದ್ಧಾಂತಮುಮಂ ಯೋಗಶಾಸ್ತ್ರಮುಮಂ ತೋಱಿ ಲೋಕಮಂ ಸರ್ವಜ್ಞಾನಪರಾಙ್ಮುಖಂ ಮಾಡಿರೆ, ಇತ್ತಲಾದಿತೀರ್ಥಕರ್ತಾರನಮರ ಗಿರಿಯಂತಚಳತನುಂ, ಪಾರಾವಾರದಂತಕಲುಷಿತನುಂ, ಅನಿಲನಂತೆ ನಿಸ್ಸಂಗ ನುಂ, ಅಂಬರದಂತೆ ನಿರ್ಲೇಪನುಮಾಗಿ ನಿಲೆ,

ಅತಿಭಾಸುರಮಪ್ಪ ತನು
ದ್ಯುತಿದೀಪ್ತಿ ತಪೋಗ್ನಿಯೊಳ್ ಪೊದಪ್ದೆಸೆದುದು ವಿ ।
ಶ್ರುತಕನಕಮೆನಿತು ಕಾಯ್ದೊಡ
ಮತರ್ಕ್ಯದೀಪ್ತಿಪ್ರಕಾಶನಕ್ಕೆಡೆಯಲ್ತೇ ॥ ೯೪

ಪವನಹತಂಗಳ್ ಮುನಿಪುಂ
ಗವನ ಜಟಾಜಾಳಲತಿಕೆಗಳ್ ನಿಮಿರ್ದುವನು ।
ಪ್ರವಿಶದ್ಧ್ಯಾನಾನಲದ
ಗ್ಧವಿಸ್ಫುರಜ್ಜೀವಕನಕಕಾಳಿಕೆಗಳವೋಲ್॥ ೯೫

ಪೊಸತಲರ್ದಲರ್ಗಳನೊಸೆದ
ರ್ಚಿಸುವಂತಿರೆ ಮುನಿಯ ಪಾದಪದ್ಮದಿನೇಂ ಕ ।
ಣ್ಗೆಸೆದುವೊ ವನಲತೆಗಳ್ ಕುಸು
ಮಸಂಕುಳಂ ಸುರಿಯೆ ಸೆಳೆವ ಸೆಳೆಗೊಂಬುಗಳಿಂ ॥ ೯೬

ವ॥ ಮತ್ತಮಾಮುನೀಂದ್ರನ ತಪಃಪ್ರಭಾವದೊಳ್ ಅನ್ಯೋನ್ಯವೈರಂಗ ಳಂ ಮಱೆದು,

ಕರಿಗಳ್ ಕೇಸರಿಗಳ್ಗೆ ಪುಷ್ಕರಧೃತಸ್ವಚ್ಛಾಂಬುವಂ ನೀಡೆ ಭೀ
ಕರಶಾರ್ದೂಲಕುಳಂ ಕುರಂಗಕುಲದೊಳ್ ತಳ್ವಾಯ್ದು ಬಂದಾಡೆ ಕೇ ।

ೞರಿಣೀಸ್ತನ್ಯಮನನ್ಯವನ್ಯಗಜಪೋತಾನೀಕಮುಂಡಾಡೆ ಶಾಂ
ತರಸಂ ಪೊಂಪುೞಿವೋದುದಾಮುನಿಪನಿಂ ತತ್ಕಾಂತಕಾಂತಾರದೊಳ್ ॥ ೯೭

ವ॥ ಆಪ್ರಸ್ತಾವದೊಳ್ ತತ್ಪೋಸಿಧಿಯ ಸನ್ನಿಧಿಗೆ ಕಚ್ಛಮಹಾಕಚ್ಛರ
ನಯರಪ್ಪ ನಮಿವಿನಮಿಗಳಭಿನವಯೌವನಾರಂಭಪ್ರೇರಿತೇಂದ್ರಿಯ
ಷಯಸುಖಾನುಭವೋನ್ಮುಖಮಾನಸರ್ ಕೃಪಾಣಖೇಟಕವ್ಯಗ್ರಪಾಣಿ
ಳ್ ಬಂದು ಮಹೀತಳಾಲಿಂಗಿತಲಲಾಟಪಟ್ಟರತಿಸುರಭಿಕುಸುಮಫಲಪವಿ
ತ್ರಜಲಂಗಳಿಂದಮಾದಿಪುರುಷನ ಪದಪಯೋಜಂಗಳನರ್ಚಿಸಿ ಯುಕ್ತಾ
ಯುಕ್ತವಿಚಾರದೂರಮತಿಗಳಾಗಿ,

ಕಡಲ ತಡಿಯೆಯ್ದೆ ನೆಲನಂ
ಪಡೆದರ್ ಭವದೀಯಪುತ್ರರುಳ್ಳಳವಿಗಳೊಳ್ ।
ಪಡೆದುದು ಬಂಧುಜನಂ ನಿ
ಮ್ಮಡಿಗಾವೇಂ ಪೋಪ ವ್ಯಸನರ್ಗದಿಂದಂ ಪೊಱಗೇ ॥ ೯೮

ನಂಗವೆಮಗಪ್ಪ ಭಾಗದ
ನಮಕಟ್ಟಂ ದೇವ ಕುಡಲೆವೇೞ್ಪುದು ನಂಟರ್ ।
ಮಗೆಮ್ಮಿಂದಗ್ಗಳಮಾರ್
ಸಮಸ್ತಸುರಮಕುಟಮಣಿಕಿಣೀಕೃತಚರಣಾ ॥ ೯೯

ವ॥ ಎಂದು ತಮ್ಮ ಭೋಗಕಾಂಕ್ಷೆಯನೆ ಬಗೆದು ಪರಮಯೋಗಿಗೆ
ಯೋಗವ್ಯಾಘಾತಮಂ ಮಾಡುವುದುಂ ಪ್ರಕಂಪಿತಾಸನನುತ್ಪನ್ನಾವಧಿ
ಬೋಧಂ,

ಧರಣೇಂದ್ರನಱಿದು ಭೋಂಕನೆ
ಧರಾತಳಂ ಬಿಱಿಯೆ ನೆಗೆದು ಬರ್ಪಂ ದೂರಾಂ ।
ತರದೊಳೆ ಕಂಡಂ ಕಾರ್ತ
ಸ್ವರಗಿರಿಯುಂ ಪೋಲ್ತು ನಿಂದ ನಿಶ್ಚಳತನುವಂ ॥ ೧೦೦

ವ॥ ಕಂಡಾದಿದೇವನ ತಪೋಲಕ್ಷ್ಮಿಗೆ ವಿಸ್ಮಯಾಕ್ಷಿಪ್ತಚಿತ್ತನಾಗಿ ನಿಜಾ
ಕೃತಿಸಂವೃತಿಯಿಂ ತ್ರಿಃಪ್ರದಕ್ಷಿಣಂಗೆಯ್ದು ತ್ರಿಭುವನಗುರುಗೆಱಗಿ ಪೊಡೆ
ವಟ್ಟು ನಮಿವಿನಮಿಗಳ ಮೊಗಮಂ ನೋಡಿ,

ಬಳಕೊಂಡ ಶಾಂತರಸದಿಂ
ಬೆಳಪ ತಪೋಧನರ ಭೀಷಣಾಕಾರದಿನಿಂ ।
ತಳವಟ್ಟ ನಿಮ್ಮ ಕೂಟಂ
ಬೆಳಗಿನ ಕತ್ತಲೆಯ ಕೂಟದಂತಾಗಿರ್ಕುಂ ॥ ೧೦೧

ಕಾರಣವಿಲ್ಲ ಜಗದ್ವ್ಯಾ
ಪಾರಂ ಪರಮಂಗೆ ನಿಮ್ಮ ಕಿತ್ತವ್ಮಮಿದೇಂ ।
ದೂರಂ ಯುಕ್ತಾಯುಕ್ತವಿ
ಚಾರಂ ವಿಷಯಾರ್ಥಿಗೆಂಬುದಂ ಮಾಡುವಿರೇ ॥ ೧೦೨

ಪರಿವರ್ಜಿತಭೋಗನೊಳ
ರ್ಬರುಮೀಗಳ್ ಭೋಗಕಾಂಕ್ಷೆಯಿಂ ಭೋಗಪರಂ ।
ಪರೆಯನಲಸುವುದೆ ವಿಕಸಿತ
ಸರಸಿಜಮಂ ಸಲಿಯೊಳಲಸುವಂತಾಗಿರ್ಕುಂ ॥ ೧೦೩

ನಿರಪೇಕ್ಷನನೇಕರೆವಿರ್
ಪುರುದೇವನನಿನಿತುಬಯಕೆಯುಳ್ಳೊಡೆ ನಿಮ್ಮ ।
ರ್ಬರುಮಿಂ ಮರುಳಾಗದೆಯಾ
ಭರತನನೋಲಗಿಸಿ ಪಡೆಯಿಮಭಿವಾಂಛಿತಮಂ ॥ ೧೦೪

ವ॥ ಎಂಬುದುಂ ಧರಣೇಂದ್ರನಿದಿರೊಳವರಂತರ್ನಿಗೂಢಕೋಪಾವಲೇ
ಪರುಮೀಷದಾರೋಪಿತಭ್ರೂಚಾಪರುಮಾಗಿ,

ಬಳಗಱಿಯದೆ ಪೊಱಗಱಿಯದೆ
ಪಳಾಳಮಂ ನುಡಿವ ನಿಮ್ಮ ನುಡಿಗೆಮಗೀಗಳ್ ।
ನುಡಿಯಲೆಡೆಯಿಲ್ಲ ಮುದುಗ
ಣ್ಣಾಳಾಗಿ ನಿಮ್ಮಂತು ಪಱಿಯೆ ನುಡಿವರುಮೊಳರೇ ॥ ೧೦೫

ವಿನಯದಿನಾಮೀಭುವನೈ
ಕನಾಥನಂ ಸಲ್ಗೆವೆರಸು ಬೇಡುತ್ತಿರೆ ಬಂ ।
ದನುಮಿಸುವ ನಿಮ್ಮ ಮುದುಗ
ಣ್ಣಾನದೊಳದೇನುಂತೆ ಬಟ್ಟೆವೋಪೊಡೆ ಪೋಗಿಂ ॥ ೧೦೬

ುಡುವಂ ಗುರು ಪಡೆವರ್ ಪೆಱ
ಡೆಯೊಳ್ ನೀವಾರ್ಗಿದೇಕೆ ಕಿಡೆನುಡಿದಪಿರಿ।
ಟ್ಟಿಡೆವೆರ್ಗಡೆತನದೊಳದೇ
ಪಡೆವಿರ್ ನಿಮಗೆಮ್ಮ ಕಜ್ಜದೊಳ್ ಪೊರೆಯುಂಟೇ॥ ೧೦೭

ಸುರಭೂರುಹವಿರೆ ಮತ್ತಿನ
ರುರವಂ ಜಳರಾಸಿಯಿರೆ ಕುಳುಂಪೆಯ ನೀರಂ।
ರೆವವೆ ಪುರುಪರಮೇಶ್ವರ
ನಿರೆ ಭರತನನೆಮ್ಮ ಮಹಿಮೆಗಂತದು ದೊರೆಯೇ॥ ೧೦೮

ಜಾದಗೆ ನಮ್ರೋದಬಿಂದುವ
ನಾದರಿಪವೊಲುಱಿದ ಕೆಱೆಯ ತೊಱೆಯುದಕಮನೇ।
ನಾದರಿಕುಮೆ ದೇವನ ದಾ
ನೋದಯಮಂ ಪಾರ್ವೆವೃಱಿದುದರ್ಕೆಱಗುವೆವೇ॥ ೧೦೯

ವ॥ ಎಂಬುದುಂ ಧರಣೇಂದ್ರನವರ ಮಹಾನುಭಾವಮುಮನಾದಿದೇವ
ನೊಳಾದ ನಿರ್ಭರಭಕ್ತಿಯುಮಂ ಮೆಚ್ಚಿ ನಿಜರೂಪಂ ತೋಱಿದಾಗಳ್,

ಮಣಿಮಕುಟದ ಮೇಗೆ ಫಣಾ
ಮಣಿಯುಂ ಮಣಿಕುಂಡಲಾಂಗದಪ್ರಮುಖವಿಭೂ।
ಷಣಮುಂ ನಿಜಾಂಗರುಚಿಯೊಳ್
ಪೆಣೆದಿರೆ ಫಣಿನಾಯಕಂ ಕರಂ ಸೊಗಯಿಸಿದಂ॥ ೧೧೦

ವ॥ ಅಂತು ದಿವ್ಯರೂಪಮಂ ತೋಱಿ,

ಧರಣೇಂದ್ರನೆನಭವನ ಕಿಂ
ಕರನೆಂ ನಿಮಗಪ್ಪ ಭಾಗಮಂ ಕುಡಲೆನ್ನಂ।
ಗುರು ಮುನ್ನಂ ಬೆಸಸಿದನಿ
ನ್ನಿರದೆನ್ನೊಡವನ್ನಿ ಮೆನ್ನ ಪೇೞ್ದುದುಗೆಯ್ವಂ॥ ೧೧೧

ಎಂಬುದುಮಧಿಪಂ ಸಂಮುಖ
ದಿಂ ಬೆಸಸಿದೊಡಲ್ಲದೊಲ್ಲೆವೆನೆ ವಿಕ್ರಿಯೆಯಿಂ।

ದಂ ಬೆಸಸುವಂತೆ ಮಾಡಿ ಮ
ನಂಬಿಡೆ ಪೊಡೆವಡಿಸಿ ನಮಿಯುಮಂ ವಿನಮಿಯುಮಂ ॥ ೧೧೨

ವ॥ ತಾನುಮಮಾದಿಭಟ್ಟಾರಕರ ಪದಪಯೋಜಂಗಳ್ಗೆಱಗಿ ನಿಜವಿಮಾನಮನಾಮಾನವರನೇಱಿಸಿಕೊಂಡು ಪೋಗಿ ರಜತಾಚಲಮನೆಯ್ದಿ,

ಇದು ವಿಜಯಾರ್ಧಪರ್ವತಮಿದಾದಿಜಿನೇಂದ್ರನ ಕೀರ್ತಿಯಂತೆ ಶಾ
ರದಜಳದಾಮೃತಾಂಬುಧಿಪಯಃಪ್ಲವಪಾಂಡುರಮುನ್ಮದಾಳಿನಾ ।
ದದಿನಿದು ಪಾಡಿ ಪೂತ ಸೆಳೆಗೊಂಬುಗಳಾಟದಿನಾಡಿ ನಮ್ಮನಿಂ
ದಿದಿಗೊಳಲಿರ್ಪವೊಲ್ ಸೊಗಯಿಸಿರ್ದುದು ರಮ್ಯಮಿದೊಂದೆ ಧಾತ್ರಿಯೊಳ್

ಎನಗುಳ್ಳಾಯತಿ ಮೇರುಗುಂಟೆ ಪೆಱತೇನುತ್ಸೇಧಮೊಂದುಂಟೆ ಗೋ
ತ್ರನಗಂಗಳ್ ಶಿಖರಂಗಳೊಳ್ ನಿಱಿಸಿ ಸಿಂಧುಬ್ರಾತಮಂ ಪೆಂಪಿನು ।
ರ್ಬಿನೊಳಂ ಬೀಗುವುದಾನಮಂ ಚರಣದೊಳ್ ತಾಳ್ದಿರ್ದೆನೆಂದಂದು ನೋ
ಡಿ ನಗುತ್ತಿರ್ಪವೊಲಾಯ್ತು ನಿರ್ಝರರವಶ್ರೀಯಿಂದಮಾಪರ್ವತಂ ॥ ೧೧೪

ದೊರೆಗಂ ಪೆಂಪಿಂಗಮಾಟಪ್ಪವರ ಮಹಿಮೆಯಂತಾಳ್ದಿದಿರ್ ನೀಮೆ ಗಂಭೀ
ರರಿರಂತಸ್ಸಾರರಿಂ ನೀಮಿರೆ ಪೆಱರೊಳರೇ ಸಕ್ಕಿಮಾಡಲ್ಕೆ ವಿಶ್ವಂ ।
ಭರೆಯೊಳ್ ಸಂದೀಮದೀಯಾಯತಿಯ ದೊರೆಗೆ ನೀಂ ಸಕ್ಕಿಯೆಂಬಂ
ತಿರೆ ನೀಳ್ಪಂ ಪರ್ವಿ ಪೂರ್ವಾಪರಜಳಧಿಗಳಂ ಮುಟ್ಟಿ ನಿಂದತ್ತಗೇಂದ್ರಂ ॥

ಇದಱೊಳ್ ಖೇಚರಕಿನ್ನರಾಮರಯುಗಂ ನಾನಾವಿನೋದಂಗಳಿಂ
ಮದನಾವೇಶಕರಂಗಳಂ ಸಲಿಸುತುಂ ಪ್ರೋತ್ಫುಲ್ಲಚಂಚಲ್ಲತಾ ।
ಸ್ಪದದೊಳ್ ಚೂತಲತಾಲತಾಂತಮಕರಂದಾಮೋದಸಂಸಕ್ತಷ
ಟ್ಪದದೊಳ್ ತಳ್ತಿರೆ ಕಾಮರಾಗಮಯಮಾಯ್ತೀನೀನಗಂ ರಮ್ಯಮೋ ॥

ಮಿಡಿವಂ ಬೀಣೆಯನಿವನಿವ
ಳೊಡನೆಸೆವಳ್ ಬೆರಲ ಕೊರಲ ಕೂಟಂ ಬೆರಲಂ ।
ಮಿಡಿಯಿಸಿದುದೆನಿಸಿ ರಾಗದ
ತೊಡರೊಳ್ ತೊಡರ್ದಿರ್ಪುವಲ್ಲಿ ಕಿನ್ನರಯುಗಳಂ ॥ ೧೧೭

ಶ್ರುತಿಸಾಖ್ಯಾವಹವಲ್ಲಕೀಕ್ವಣಿತದೊಳ್ ಕರ್ಪೂರಪಾಳೀಮಿಮಿ
ಶ್ರಿತತಾಂಬೂಲರಸೋತ್ಕಟಪ್ರಮದದೊಳ್ ನಾನಾರಸಾಸ್ವಾದದೊಳ್ ।

ರತರಾಗೋತ್ಸವಮುಂಗಜೋತ್ಸವಮನಾಳ್ದಿರ್ಪರ್ನ್ನಿಗಂ ಸಿದ್ಧದಂ
ಪತಿಗಳ್ ಕ್ರೀಡಿಸುತಿರ್ಪರೀನಗತಟಶ್ರೀಖಂಡಷಂಡಂಗಳೊಳ್ ॥ ೧೧೮

ಧ್ವನಿಯೆನಿಸಿದಳಂಕಾರ
ಧ್ವನಿಯೆಸೆವಿನಮೆಸೆವುದಲ್ಲಿ ಮಧುರವಿಪಂಚೀ ।
ಧ್ವನಿಯೊಡನನೇಕರಾಗ[1]
ಧ್ವನಿಯೆನೆ ಸೊಗಯಿಪುದು ಕಿನ್ನರಧ್ವನಿ ನಗದೊಳ್ ॥ ೧೧೯

ಉತ್ತಮವನಮದಕರಿಕಟ
ಭಿತ್ತಿಗಳಿಂ ಸುರಿವ ಮದದ ಬಂಧುರಗಂಧಂ ।
ಕತ್ತುರಿ ಮೃಗಮದದೊಳ್ ಪುದಿ
ದೆತ್ತಂ ಮಗಮಗಿಸೆ ಕಂಪು ಪೊಂಪುೞಿ ಪುಗಿಲೊಳ್ ॥ ೧೨೦

ಪೂರ್ವಾಪರಜಳನಿಧಿಗಳ
ಪರ್ವುವರಂ ನೀಳ್ದು ಶಿಖರನಿಕರಂ ನಭಮಂ ।
ಪರ್ವಿರೆ ಸೊಗಯಿಸಿದುದು ಸಕ
ಳೋರ್ವಿಯೊಳುರ್ವೀಧರಂಗಳನ್ನುವುಮೊಳವೇ ॥ ೧೨೧

ವ॥ ಇದು ಭರತಮೆಂಬ ವಿಜಯಾರ್ಧದೊಳ್ ನಿಂದುದಱಿಂ ವಿಜಯಾರ್ಧಮೆಂಬ ಪೆಸರಂ ಪಡೆದುದಿದರ್ಕೆ ಪ್ರಥಮಮೇಖಳಾಸ್ಥಿತೋಭಯಶ್ರೇಣಿಯೊಳ್ ಕರ್ಮಭೂಮಿಯನಿಯೋಗಮೆ ನಿಯೋಗಂ; ಅಲ್ಲಿಯ ಖಚರರುತ್ಕೃಷ್ಟನಿಕೃಷ್ಟಕಾಲಸ್ಥಿತಿಯೊಳ್ ಆಯುಷ್ಯಮಯ್ಬಿಲ್ಲಿಂದಮೇೞುಮೊೞದೇಹಪ್ರಮಾಣದೊಳ್ ಕುಂದುವರಂ ಪೆರ್ಚುವರುಮಲ್ಲ. ಅವರ್ಗೆ ಪ್ರಜ್ಞಪ್ತಿವಿದ್ಯೆ ಮೊದಲಾಗಿ ಕುಲಜಾತಿಸಾಧಿತವಿದ್ಯೆಗಳ್ ಪಲವುಂ ಬೆಸಕೆಯ್ವುವು. ಅಲ್ಲಿ ಸಾಧಿತವಿದ್ಯೆಗಳ್ ಸಾಧಿಸುವಾಗಳ್ ಸಿದ್ಧಾಯತನಪ್ರಭೃತಿನವಕೂಟಂಗಳುಮಂ ದ್ವೀಪಾದಿಸಮುದ್ರತೀರಶುಚಿಪ್ರದೇಶಂಗಳಲ್ಲಿರ್ದು ಸಾಧಿಸುವುದೆಂದವರನಲ್ಲಿಗೆ ವಾಸ್ತವ್ಯಮಾಡಿ ದಕ್ಷಿಣೋತ್ತರಶ್ರೇಣಿಗಳೊಳಿರ್ಪ ವಿದ್ಯಾಧರಾಧೀಶ್ವರರಂ ಬರಿಸಿ ಗಗನವಲ್ಲಭರಥನೂಪುರಚಕ್ರವಾಳಂಗಳೆಂಬ ರಾಜಧಾನಿಗಳಾಗಿ ನೆಗೞ್ದ ನೂಱುಪತ್ತುಂ ಪೊೞಲ್ಗಳನೊಳಕೊಂಡ ದಕ್ಷಿಣೋತ್ತರಶ್ರೇಣಿಗಳಂ

1. ಗ—ನಾಕ

ನಮಿವಿನಮಿಗಳ್ಗೆ ಕೊಟ್ಟು ಗಾಂಧಾರಪನ್ನಗವಿದ್ಯೆಗಳನವರ್ಗೆ ವಿಧಿಪೂರ್ವಕಮಿತ್ತು,

ಇದು ಪುರುದೇವಶಾಸನಮಿವರ್ ನಿಮಗಾಳ್ವರುಮಿರ್ವರೆನ್ನ ಪೇ
ಳ್ದುದನಿದನಿಂತೆ ನಂಬಿ ಬೆಸಕೆಯ್ವುದು ನೀಮಿವರ್ಗೆಂದು ಖೇಚರಾ ।
ಸ್ಪದಸಕಳಾಧಿಪತ್ಯಮುಮನಾಕುಳಮಂತವರ್ಗಿತ್ತನಾರ್ಗಮ
ಭ್ಯುದಯಮನೀಗುಮೆಂಬುದದು ಚೋದ್ಯಮೆ ತತ್ಪುರುದೇವಸೇವನಂ ॥

ವ॥ ಅಂತು ಧರಣೇಂದ್ರನವರನಂಬರಚರೇಂದ್ರಪದವಿಯೊಳ್ ನಿಱಿಸಿ ನಿಜಾಮರಲೋಕಕ್ಕೆ ಪೋದಂ. ಅನ್ನೆಗಮಿತ್ತಲ್,

ಇದು ಬೇಱೊಂದಿಳೆಗತ್ಯುದಗ್ರಮಹಿಮಂ ಹೇಮಾಚಳೇಂದ್ರಂ ಜಗ
ಕ್ಕಿದು ಬೇಱೊಂದತಿನಿಷ್ಪ್ರಕಂಪಸಲಿಲಂ ಗಂಭೀರಕೂಪಾರಮೆಂ ।
ಬುದನೆಂದರ್ಚಿಸೆ ಖೇಚರಾಮರಗಣಂ ನಿಂದಂ ಕೊಳಲ್ ಶಾಶ್ವತಾ
ಸ್ಪದಮಂ ಯೋಗನಿಯೋಗಸಿಕ್ಥಳಮನಂ ಸಂದಾದಿಭಟ್ಟಾರಕಂ ॥ ೧೨೩

ವ॥ ಅಂತು,

ಪರಮಂ ಪೂಣ್ದಱುದಿಂಗಳಂ ನೆಱಪಿ ಚರ್ಯಾಮಾರ್ಗದೊಂದಂದಮಂ
ಧರೆಯೊಳ್ ಮಾರ್ಗವಿಬೋಧನಾರ್ಥಮಱಿಯಲ್ಕೆಂದೆತ್ತಿ ಕಯ್ಯಂ ಸುರೇ ।
ಶ್ವರಶೈಳಂ ತಳರ್ವಂತೆವೊಲ್ ತಳರ್ದನೀರ್ಯಾಗೋಚರಂ ಶುದ್ಧಿ ತ
ಳ್ತಿರೆ ತನ್ನೊಳ್ ಧರೆಯಂಪದಾಂಬುಜರಜಂಗಳ್ ನೀರಜಂಮಾಳ್ಪಿನಂ ॥ ೧೨೪

ವ॥ ಅಂತು ತಳರ್ದನುಕ್ರಮದಿಂದಂ ಗ್ರಾಮನಗರಖೇಡಖರ್ವಡಮಡಂಬಂಗಳೊಳೊಡಂಬಡಿಲ್ಲದೆ ಚರ್ಯಾಮಾರ್ಗದೊಳ್ ನಡೆವಲ್ಲಿ ಜನಪದಪುರಸನಾಭಿಜನಂಗಳ್ ಕಂಡರ್ ಕಂಡಲ್ಲಿಯೆ ಮುಸುಱಿಕೊಂಡು,

ಬೆಸನಾವುದೆಮಗೆ ಬೆಸನಂ
ಬೆಸಸನೆಯೇಬಾಪ್ಪೆಯೆಂದು ಮುಂದಿಟ್ಟರ್ ಸ್ರ ।
ಗ್ವಸನವಿಲೇಪನಭೂಷಾ
ಪ್ರಸರಂಗಳನಲ್ಲಿ ಕೆಲಬರತಿಜಡಮತಿಗಳ್ ॥ ೧೨೫

ಸುತ್ತಿದ ಕರಗೆದ ನೀರುಮ
ನೆತ್ತಿದ ಬೋನಮುಮನಿದಿರೊಳಿಟ್ಟರೆ ಬನ್ನಿಂ ।
ಇತ್ತೇಪ್ಟಾಯೆಂದರ್ ಮುನಿ
ಪೋತ್ತಮನಂ ಮುಗ್ಧಮತಿಗಳೇನಂ ಮಾಡರ್ ॥ ೧೭೬

ಪಸೆಯುಂ ಪಸುರ್ವಂದರುಮಂ
ಪೊಸಯಿಸಿ ಕನ್ನೆಯರನಾನಕಧ್ವನಿದೆಸೆಯೊಳ್ ।
ಪಸರಿಸೆ ತಂದರ್ ಪಿರಿದೊಂ
ದೊಸಗೆಯೊಳಿರದರಸ ಮದುವೆನಿಲ್ಲೆಂದರೆಬರ್ ॥ ೧೭೭

ಸರ್ವಸ್ವಮುಮಂ ಕುಡದಿರ
ಲುರ್ವೀಪತಿ ಬಂದೊಡಾಗದೆಂದತಿಭಕ್ತರ್ ।
ಖರ್ವಡನಿವಾಸಿಗಳ್ ಕೆಲ
ರುರ್ವೀಶರ್ ತೆಗೆದರಾನೆಯುಂ ಕುದುರೆಯುಮಂ ॥ ೧೭೮

ಬಳಗಂ ಬೆರಸರೆಬರ್ ಕಾ
ಲ್ಗಳ ಮೊದಲೊಳುದಶ್ರುಲೋಚನರ್ ಮಿಂದುಂಡೀ ।
ಗಳೆ ಬಿಜಯಂಗೆಯ್ಯೆಂದಿರೆ
ಕುಳಾದ್ರಿಧೈರ್ಯಂಗೆ ಚರಿಗೆ ಮಾಣ್ದತ್ತಿನಿಸುಂ ॥ ೧೭೯

ವ॥ ಅಂತಾಮುನೀಶ್ವರಂಗೆ ನಿಖಿಳಜಗಜ್ಜನಾಶ್ಚರ್ಯಚರ್ಯಾಪರ್ಯಟನದೊಳ್ ಮತ್ತಮಱುದಿಂಗಳ್ ಪೋಗೆ ಸಂವತ್ಸರಂ ನೆಱೆದಂದು ಕುರುಜಾಂಗಣವಿಷಯವಿಶೇಷಕಮಪ್ಪ ಹಸ್ತಿನಾಪುರಮನಾಳ್ವ ಕುರುವಂಶಶಿಖಾಮಣಿಸೋಮಪ್ರಭಂಗೆ ತತ್ಸ್ವಯಂಪ್ರಭಾಶ್ರೀಮತ್ಯಾರ್ಯಾಸ್ವಯಂಪ್ರಭದೇವಕೇಶವಮಹೀಶಾಚ್ಯುತಪ್ರತೀಂದ್ರಂ ಧನದೇವಚರಂ ಸರ್ವಾರ್ಥಸಿದ್ಧಿಯಿಂ ಬಂದು ಪರಮಶ್ರೇಯೋನಿಧಾನಂ ಶ್ರೇಯಾಂಸನೆಂಬೊಂ ಪ್ರಿಯಾನುಜನಾಗಿರ್ದಾತಂ ಅಂದಿನ ಬೆಳಗಪ್ಪ ಜಾವದಾಗಳ್,

ಸುರಶೈಲಂ ಕಲ್ಪವೃಕ್ಷಪ್ರಕರಪರಿವೃತಂ ರಾಜಗೇಹಾಂಗಣಾಳಂ
ಕರಣಂ ಬಂದಿರ್ದುದಂ ಕಂಡಮರಗಿರಿನಿಭಂ ಪ್ರಾರ್ಥಿತಾರ್ಥಪ್ರದಂ ಮಾ ।

1. ಖ—ಸತ್ತ

ಣ್ದಿರದಾದಿಬ್ರಹ್ಮನೇೞ್ತಿರ್ಪುದನೆ ಕನಸುವೇೞ್ದಿಪ್ಪುದೆಂದಗ್ರಜಂಗಾ
ದರದಿಂದಂ ಪೇೞ್ದು ಕಾಣ್ಬುತ್ಸವದೊಳ್ ಪರಮಾನಂದಮುಂ ತಾಳ್ದಿ ನಿಂದಂ ||

ವ|| ಅನ್ನೆಗಮಾದಿಮುನೀಶ್ವರನುಮಾಪುರಾಂತರಾಳದೊಳ್ ಸಂವೇಗವೈರಾಗ್ಯಾಭಿವೃದ್ಧ್ಯರ್ಥಮಾಗೆ ಜಗತ್ಕಾಯಸ್ವಭಾವಭಾವನಾಪರಂ ಸಕಳಶರೀರಗುಣಾಧಿಕದುಃಖಾರ್ದಿತಾವಿನೀತರೊಳ್ ಮೈತ್ರಿಪ್ರಮೋದಕಾರುಣ್ಯಮಾಧ್ಯಸ್ಥವೃತ್ತಿಗಳಂ ಭಾವಿಸುತ್ತುಂ ಯುಗ್ಮಪ್ರಮಾಣಕ್ಷೋಣೀನಿರೀಕ್ಷಣನಿರತನುಮತಿದ್ರುತವಿಲಂಬಿತಗತಿವ್ಯಪೇತನುಮಾಗಿ ನಗರಾರಣ್ಯನಿರ್ವಿಶೇಷನುತ್ತಮಮಧ್ಯಮಜಘನ್ಯಾಗಾರಂಗಳೊಳ್ ಚಂದ್ರಗತಿಯಿಂ ಸಲುತ್ತುಮಾಳೋಕಸಂಭ್ರಮೋಪೇತಪುರಜನಾನುಗಮ್ಯಮಾನಂ ಸೋಮಪ್ರಭರಾಜಮಂದಿರಾಭಿಮುಖನಾಗಿ ಬರ್ಪನ್ನೆಗಂ, ದ್ವಾರಪಾಳಕಂ ಸಿದ್ಧಾರ್ಥನೆಂಬಂ ಪರಿತದುಭಗವದ್ವೃತ್ತಕಪ್ರಸಕ್ತವಚನರಚನಾಮುಖರಮುಖಸರಸೀರುಹನಾಗಿರ್ದ ಸೋಮಪ್ರಭಂಗಂ ಶ್ರೇಯಾಂಸಂಗಮಱಿಪಿದಾಗಳ್,

ಕರಕಳಿತಾರ್ಘ್ಯಪಾದ್ಯನನವದ್ಯಗುಣಂಗೆ ಸಮಸ್ತರಾಜಕಂ
ಬೆರಸಿದಿರೆೞ್ದು ರಾಜಗೃಹದಿಂ ಪೊಱಮಟ್ಟತಿಭಕ್ತಿಯಿಂ ಪದಾಂ |
ಬುರುಹಮನೆಯ್ದೆವಂದೆಱಗೆ ಶೋಭಿಸಿದಂ ಮುನಿಮುಖ್ಯನಾಗಳಾ
ರ್ವರ ನಡುವಿರ್ದ ನೀಳನಿಷಧಂಗಳ ಮಧ್ಯದ ಮಂದರಾದ್ರಿವೋಲ್ || ೧೪೧

ವ|| ಆಗಳಾದಿತೀರ್ಥಕರ್ತಾರನ ದಿಗಂಬರರೂಪಮಂ ಕಾಣಲೊಡಂ ಶ್ರೀಮತಿಯಾದ ಭವದೊಳ್ ವಜ್ರಜಂಘನುಂ ತಾನುಮಿರ್ದ ಸರ್ಪಸರೋವರದೊಳ್ ಚಾರಣಯುಗಳಕ್ಕೆ ವಿಧಿಪೂರ್ವಕಂ ಮಹಾದಾನಮನಿತ್ತುದನಾಗಳಾಗಳ್ ಪುಟ್ಟಿದ ಭವಸಂಸ್ಕಾರದಿಂದಂ ಸವಿಸ್ತರಮಱಿದು,

ಈಯಲ್ಬಂದತ್ತು ಕಲ್ಪಾಂಘ್ರಿಪಮಭಿಮತಮಂ ಪೂರ್ವಪುಣ್ಯಾರ್ಜಿತಂ ಕೊ
ಳ್ಳೀಯಲ್ಬಂದತ್ತಿದೊಂದಕ್ಷಯನಿಧಿಯೆನುತುಂ ತನ್ನನೊಲ್ದಾತ್ರಿಲೋಕ |
ಶ್ರೀಯೆಲ್ಲಂ ಪೊರ್ದಿದಂತೇನೊಸೆದನೊ ಮನದೊಳ್ ಸೂಕ್ತಿಕರ್ಣಾವತಂಸಂ
ಶ್ರೇಯಾಂಸಂ ಪ್ರೋನ್ನತಾಂಸಂ ಸುಕವಿಜನಮನೋಮಾನಸೋತ್ತಂಸ
ಹಂಸಂ || ೧೪೨

ವ|| ಅಂತತಿಪ್ರಮೋದಪ್ರೀಣಿತಾಂತಃಕರಣನಾಗಿ,

ಇದರೊಳ್ ಮಂಗಳಗೀತತೂರ್ಯನಿನದಂ ಕೈಗಣ್ಮೆ ಮಾಂಗಲ್ಯವೇ
ಷದ ಕಾಂತಾತತಿಮಂಗಳೋಪಕರಣದ್ರವ್ಯಂಗಳಿಂದೊಪ್ಪೆ ಪೆ ।
ರ್ಚಿದ ತನ್ನುತ್ತಮಭಕ್ತಿಯಿಂ ನಿಲಿಪುದುಂ ಶ್ರೇಯೋಗೃಹದ್ವಾರದೊಳ್
ನಿಧಿನಿಲ್ವಂತಿರೆ ನಿಂದನೂರ್ಜಿತಗುಣಂ ಸಂಸಾರಸಾರೋದಯಂ ॥ ೧೩೩

ಗ॥ ಇದು ದೇವೇಂದ್ರಮುನೀಂದ್ರವಂದ್ಯ ಪರಮಜಿನೇಂದ್ರಮುಖ
ಚಂದ್ರವಾಕ್ಚಂದ್ರಿಕಾಪ್ರಸರ ಪ್ರಸಾದೋದೀರ್ಣ ಸೂಕ್ತಿ
ಕಲ್ಲೋಲಮಾಲಾ ಕೀರ್ಣಕವಿತಾಗುಣಾರ್ಣವ
ಪ್ರಣೀತಮಪ್ಪಾದಿ ಪುರಾಣದೊಳ್
ಪರಿನಿಷ್ಕ್ರಮಣಕಲ್ಯಾಣವರ್ಣನಂ
ನವಮಾಶ್ವಾಸಂ ಸಂಪೂರ್ಣಂ.

ದ ಶ ಮಾ ಶ್ವಾ ಸಂ.

ಶ್ರೀದಾನತೀರ್ಥವಿಖ್ಯಾತನಿ
ನಾದುದು ಪೆಱರಾದಿತೀರ್ಥಕರನಂ ನಿಱಿಸ ।
ಲ್ಕೇದೊರೆಯರೀಗಳೀಯುಗ
ದಾದಿಯೊಳೀತನೆ ಸರಸ್ವತೀಮಣಿಹಾರಂ ॥ ೧

ವ॥ ಎಂಬಿನಮಾದಿತೀರ್ಥಕರ್ತಾರನಂ ಶ್ರದ್ಧಾದಿಸಪ್ತಗುಣಸಂಪನ್ನನುಂ ಪ್ರತಿಗ್ರಹಾದಿನವವಿಧಪುಣ್ಯಪುರಸ್ಸರನುಮಾಗಿ ನಿಱಿಸಿ, ಕರ್ಮಭೂಮಿಯ ಮೊದಲೊಳಾದಿದಾನತೀರ್ಥಪ್ರವರ್ತಕಂ ಶ್ರೇಯಾಂಸಂ ನಿಜಾಗ್ರಜನಪ್ಪ ಸೋಮಪ್ರಭಂ ಬೆರಸು ಕನಕಕಳಶದೊಳ್ ತೀವಿದಮೃತರಸಸಮಾನ ಧವಳೇಕ್ಷುರಸಧಾರೆ ಪುಣ್ಯಧಾರೆಯಂತೆ ಸೊಗಯಿಸುವಿನಂ ಸಮುತ್ತಾನೀಕೃತವಿಶಾಲಪಾಣಿಪಾತ್ರದೊಳೆಱೆವುದುಂ,

ವಸುಧಾರೆ ನಾಡೆಯುಂ ಕ
ಣ್ಗೆಸದಳಮಾಯ್ತು ಮರಕರಪರಿಚ್ಯುತಮೆತ್ತಂ ।
ಪೊಸಪೂವಿನ ಸರಿ ಪಿರಿದಾ
ಯ್ತು ಸದಳಮೆಸಪೆಲರದೊಂದು ಮೇಲ್ವಾಯ್ದಾಗಳ್ ॥ ೨

ಇವು ಪಾತ್ರದಾನತರುವಿನ
ವಿವಿಧಫಳಾವಳಿಗಳಿವು ತದಂಘ್ರಿಪದ ದಳಂ ।
ನವಕುಸುಮಾಳಿಗಳೆನಿಸಿದು
ವವಿರಳತರರತ್ನಪುಷ್ಪಧಾರಾಸಾರಂ ॥ ೩

ಆನಂದದುಂದುಭಿಧ್ವನಿ
ತಾನೊಡನೊಡನೆಸೆಯೆ ನಭದೊಳೊಡನೆಸೆದುದಹೋ ।
ದಾನಿಯಹೋಪಾತ್ರಮಹೋ
ದಾನಮಹೋದೇಯಮೆಂಬ ದಿವ್ಯಧ್ವನಿಗಳ್ ॥ ೪

ವ॥ ಅಂತು ಕಾಯಸ್ಥಿತಿಯಂ ನಿರ್ವರ್ತಿಸಿ ತದನಂತರಮೆ, ಕುರುಗೋತ್ರಂ ಧರೆಯೊಳ್ ಪವಿತ್ರಮೆನಿಸಲ್ಕಿನ್ನಾತರ್ದಿಂದೆಮ್ಮ ಮಂದಿರಮಿಾಭೂಭುವನೈಕಪೂತಮೆನಿಸಲ್ ಸಾರ್ದಿರ್ದದಾಮುಂ ಕೃತಾ।

ರ್ಥರೆನೆಂದಾದವನನುಗ್ರಹಂಗೆಯುಲೆ ನೀವೋಲ್ಪುಂದೊಡೆಂದಾಗಳ್
ರ್ವರುಮತ್ಯುತ್ತಮಭಕ್ತಿಯಿಂದೆಱಗಿದರ್ ತತ್ಪಾದಪದ್ಮಂಗಳೊಳ್ ॥ ೫

ವ॥ ಅಂತೆಱಗಿದಾಗಳ್,

ಅಕ್ಷಯದಾನಂ ನಿಮಗ
ಕ್ಕಕ್ಷುಣ್ಣಮಿದೆಂದು ಪರಮಮುನಿ ಪರಸೆ ಬಳಿ ।
ಕ್ಕಕ್ಷಯತೃತೀಯೆಯೆಂದಖಿ
ಳಕ್ಷಿತಿಗಂ ನೆಗೞ್ದುದಲ್ತೆ ತತ್ಪುಣ್ಯದಿನಂ ॥ ೬

ವ॥ ಅಂತು ಪರಸಿ ಪೋಱಮಟ್ಟು ಪೋಪ ಯತಿಪತಿಯುಂ ಕ್ಷಿತಿಪತಿಗಳಿರ್ವರುಮಗಲಲಾಱದೊಡನೊಡನೆ ಪೋಗಿ,

ಅಂತು ಮುನಿವೃಷಭನಂ ಕಿಱಿ
ದಂತರಮಂ ಕಳಪಿ ಮಗುೞ್ದುಮಗುೞ್ದುಂ ಕಾಂತಾ ।
ರಾಂತರಮಂ ಪುಗುವನ್ನೆಗ
ಮಂತವರೆವೆಯಿಕ್ಕದಂತೆ ನೋಡಿದರಾಗಳ್ ॥ ೭

ವ॥ ಅಂತೆಂತಾನುಮವರನನುಗಮಿಸಿ ಸೋಮಪ್ರಭನುಂ ಶ್ರೇಯಾಂಸನುಂ ಮಗುೞ್ದು ಬಂದು ದಿವಿಜಕರೋನ್ಮುಕ್ತಮುಕ್ತಾದಿರತ್ನಂಗಳಂ ಪೊೞಲ್ಗೆಲ್ಲಂ ಗೋಸನೆವಿಡಿಸಿ ನೆಗೞ್ದ ದಾನಾತಿಶಯಕ್ಕೆ ವಿಸ್ಮಯಂಬಟ್ಟು ಮಹಾಂಭೋರಾಶಿಗಂಭೀರನಪ್ಪಾದಿಭಟ್ಟಾರಕನ ಚಿತ್ತವೃತ್ತಿಯನಾಮಹಾತ್ಮನಾವವಮಾಪ್ಪೆಯೊಳಱಿದನೆಂದು ಭರತೇಶ್ವರನಕಂಪನಾದಿನೃಪಸಮೂಹಂ ಬೆರಸು ಬಂದು ಪೂಜಿಸಿ,

ಸುರನರಲೋಕವಿಸ್ಮಯಕರಂ ದೊರೆವೆತ್ತುದು ನಿನ್ನ ದಾನಮಾ
ಗುರುವಿನ ಚಿತ್ತವೃತ್ತಿಯನದೆಂತುಪಲಕ್ಷಿಸಲಾರ್ತೆಯೋ ಮಹಾ ।
ಪುರುಷನಧೀಶನಿಂದೆನಗೆ ನೀನತಿಪೂಜ್ಯನೆಯೆಂದು ಪೆರ್ಚಿದಾ
ದರದೊಳೆ ತನ್ನನಿಂತು ಬೆಸಗೊಂಡೊಡೆ ಸಂತಸದಿಂ ಕುರುಧ್ವಜಂ ॥ ೮

ವ॥ ಇಂತೆಂದು ಪೇೞ್ದಂ:—ಈವೃಷನಾಥನೀಭವಕ್ಕೆಂಟನೆಯ ಭವದೊಳ್ ಈಜಂಬೂದ್ವೀಪದ ಪೂರ್ವವಿದೇಹದ ಪುಷ್ಕಳಾವತೀವಿಷಯದ ಉತ್ಪಳ

ಖೇಟವೆಂಬ ಪೊೞಲನಾಳ್ವ ವಜ್ರಬಾಹುಗಮಾತನರಸಿ ವಸುಂಧರೆಗಂ ವಜ್ರಜಂಘನೆಂಬೊಂತನೂಜನಾದಂ. ಆನುಮಾವಿದೇಹದ ಪುಂಡರೀಕಿಣಿಯೆಂಬ ಪೊೞಲನಾಳ್ವ ವಜ್ರದಂತಚಕ್ರವರ್ತಿಗಂ ಆತನ ಮಹಾದೇವಿಲಕ್ಷ್ಮೀಮತಿಗಂ ಶ್ರೀಮತಿಯೆಂಬ ತನೂಜೆಯಾಗಿ ವಜ್ರಜಂಘಂಗೆ ವಲ್ಲಭೆಯೆಂ. ಅಂದು ಸರ್ಪಸರೋವರಮೆಂಬ ಕೊಳನ ತಡಿಯೊಳ್ ಬೀಡಂ ಬಿಟ್ಟಿರ್ದು ಚಾರಣಯುಗಕ್ಕೆ ವಿಧಿಪೂರ್ವಕಂ ಮಹಾದಾನಮನಿತ್ತು ದನೀಗಳಾದಿನಾಥನ ಮುನಿರೂಪಮಂ ಕಾಣಲೊಡಂ ಜಾತಿಸ್ಮರನಾಗಿ ಮಾರ್ಗಸ್ಥಿತಿಯನಱಿದು ನಿಱಿಸಿದೆಂ. ಆದಾನಮಂ ಕುಡುವ ತನಗಂ ಕೊಳ್ವ ಪರಮಪಾತ್ರಕ್ಕಮುಪಕಾರಿಯಪ್ಪಾಹಾರಾದಿವಿರತಣಮದುವುಂ,

ಕುಡುವೊಂ ಕುಡುವುದು ಪಾತ್ರಂ
ಕುಡೆ ಪಡೆವತಿವಿಪುಳಫಲಮೆನಲ್ ನಾಲ್ಕುತೆಱಂ।
ಗಡ ದಾನಮಲ್ಲಿ ಮೊದಲೊಳ್
ಕುಡುವಂ ಶ್ರದ್ಧಾದಿಗುಣಸಮನ್ವಿತನಕ್ಕುಂ ॥ ೯

ವ॥ ಕುಡುವುದುಮಾಹಾರಾಭಯಭೈಷಜ್ಯಶಾಸ್ತ್ರದಾನದಿಂ ಚತುರ್ವಿಧಮಕ್ಕುಂ. ಪಾತ್ರಮುತ್ತಮಮಧ್ಯಮಜಘನ್ಯಭೇದದಿಂ ತ್ರಿವಿಧಮಕ್ಕುಂ. ಅಲ್ಲಿ ದರ್ಶನವಿಶುದ್ಧನುಂ ಶೀಲಸಂಪನ್ನನುಮಪ್ಪ ಸಂಯತನುತ್ತಮಪಾತ್ರಂ; ಶ್ರೀಸಮ್ಯಗ್ದರ್ಶನವಿಶುದ್ಧನುಮಣುವ್ರತಧಾರಿಯುಮಪ್ಪಶ್ರಾವಕಂ ಮಧ್ಯಮಪಾತ್ರಂ ; ದರ್ಶನವಿಶುದ್ಧನಾಗಿಯುಂ ಶೀಲವ್ರತಭಾವನಾರಹಿತನಸಂಯತಂ ಜಘನ್ಯಪಾತ್ರಂ ; ಮಿಥ್ಯಾದೃಷ್ಟಿಯಪ್ಪಂ ತನ್ನನೆಂತುಂ ಸಮಱೆನೆಗಪ್ಡೊಡಮಾತನಪಾತ್ರಮೆ.

ಫಳಮುಂ ಸುಪಾತ್ರದಾನದ
ಫಳಮೆ ದಲುತ್ಕೃಷ್ಟಭೋಗಭೂಮಿಯೊಳಮನಾ।
ಕುಳಕಲ್ಪಾಮರಲೋಕಂ
ಗಳೊಳಂ ಪುಟ್ಟಿಸುಗುಮಪ್ಪ ಕಾರಣದಿಂದಂ ॥ ೧೦

ವ॥ ಉೞಿದ ಮಧ್ಯಮಜಘನ್ಯಪಾತ್ರದಾನಂಗಳ್ ಮಧ್ಯಮಜಘನ್ಯಭೋಗಭೂಮಿಭೋಗಾನುಭವಮನೀಗುಂ ; ಅಪಾತ್ರದಾನಂ ಭೋಗಭೂಮಿ

ಗಳೊಳಂ ಭೋಗಭೂಮಿಪ್ರವಿಭಾಗದ್ವೀಪಂಗಳೊಳ್ ತಿರ್ಯಗ್ಜಾತಿತ್ವಮುಮಂ ಅಂತರ್ದ್ವೀಪಂಗಳೊಳ್ ಕುಮಾನುಷತ್ವಮುಮಂ ಮಾಡುಗುಂ ; ಇದಾಹಾರದಾನಫಲಂ.

ಅಭಯರ್ ನಿರೋಗರುಂ ಶ್ರುತ
ವಿಭವಸಮನ್ವಿತರುಮಪ್ಪರೆಂಬುದು ಪಿರಿದ ।
ಲ್ತು ಭವಾಂಬುಧಿಯುಮನೀಸುವ
ರಭಯೌಷಧಶಾಸ್ತ್ರದಾನಫಳವಿಳಸನದಿಂ ॥ ೧೧

ಎಂಬುದುಮಾಶ್ರೇಯೋವಚ
ನಂ ಬಗೆಯನಲರ್ಚೆ ಭವ್ಯನೃಪನಿಕರಮದೇ ।
ನೆಂಬುತ್ಸಾಹದೆ ನಲಿದುದೊ
ಸಾಂಬುಪಯೋಧರಕೆ ನಲಿವ ಶಿಖಿನಿಕರದವೊಲ್ ॥ ೧೨

ವ॥ ಆಗಳವರ್ಗಳ್,

ಯತಿ ವಿಮಳಯಶಃಪ್ರಸರಂ
ಗತದೋಷಗುಣಂ ತ್ರಿವರ್ಗಫಳನಿಳಯಂ ಸ ।
ತ್ಕೃತಿಯುಂ ದಾನಮುಮಾದಂ
ಪತಿಗಲ್ಲದೆ ಪೇಟ್ ಪೆಱಂಗೆ ಸಮನಿಸದಪುದೇ ॥ ೧೩

ವ॥ ಅದಱಿನೀಯುಗಾದಿಯೊಳಾದಿದಾನತೀರ್ಥಪ್ರವರ್ತನೈಕಪುಣ್ಯಭಾಜನನೈ ನೀನೆ ಯೆಂದು ಪೊಗೞ್ದು ಪೂಜಿಸಿ ಪೋದರ್. ಅನ್ನೆಗಮಿತ್ತ ವೃಷಭಯೋಗೀಂದ್ರನುಂ ಸಕಳಸಾವದ್ಯಾತಿದೂರನುಮಪ್ಪ ಜಿನಕಲ್ಪಿತಮೆಂಬಾಚರಣಮಂ ಕೈಕೊಂಡು, ಯೋಗಯೋಗ್ಯಂಗಳೊಳ್ ಅವಹಿತಧ್ಯಾನಾಧೀನಮಾನಸನಾಗಿ ವಿಹಾರಿಸುತ್ತುಂ ಸಂವತ್ಸರಸಹಸ್ರಂಗಳಂ ಕಳಿಪಿ, ಪುರಿಮತಾಳಪುರಬಹಿರ್ಭಾಗನಿಕಟಶಕಟೋದ್ಯಾನವಟವಿಟಪಿಯ ಕೆಳಗೆ ವಿಶಾಳನಿರಾಕುಳನಿರ್ಜಂತುಕನಿರ್ಮಲಶಿಲಾಪಟ್ಟದ ಮೇಲೆ ನಿಬಿಡನಿಬದ್ಧಪಲ್ಯಂಕಾಸನನುಂ ಪೂರ್ವಾನುಮುಖನುಮಾಗಿರ್ದಾಗಳ್,

ಕರಣಗಣಂ ಕುನುಂಗಿರೆ ಮನಂ ನೊಸಲಲ್ಲಿರೆ ಲೋಚನಂಗಳು
ಳ್ಕೈರೆಮುಗುಟ್ದಿಂಬುವೆತ್ತಿರೆ ಕರದ್ವಯಪಲ್ಲವಮಂಕದೊಳ್ ಮರ

ಲ್ದಿರೆ ತನು ನಿಷ್ಪ್ರಕಂಪಮಿರೆ ದಂತಚಯಂ ಸಮಮಾಗ ತನ್ನೊಳೊಂ
ದಿರೆ ಸಮಸಂದುದಾಪರಮಯೋಗಿಗೆ ಯೋಗನಿಯೋಗಭಾವಸಂ ॥ ೧೪

ವ॥ ಅಂತು ಯೋಗಯೋಗ್ಯಬಾಹ್ಯಸಾಮಗ್ರಿಯೊಳ್ ಮುನ್ನಮೆ ನೆಱೆದು ಪರಮಪದಮನೆ ಮನದೊಳ್ ನಿಱಿಸಿ ಸಮ್ಯಜ್ಞಾನದರ್ಶನಾನಂತವೀರ್ಯಸೂಕ್ಷ್ಮಗುರುಲಘುತ್ವಾವಗಾಹಾವ್ಯಾಬಾಧಂಗಳೆಂಬ ಸಿದ್ಧಪರಮೇಷ್ಠಿಗಳಷ್ಟಗುಣಂಗಳಂ ನೆನೆಯುತ್ತುಂ, ಅಧ್ರುವಾದಿದ್ವಾದಶಾನುಪ್ರೇಕ್ಷಾಭಾವನಾಭಾವಿತಾಂತಃಕರಣನಾಗಿ ಮುನ್ನಮಾಜ್ಞಾವಿಚಯಮಪಾಕವಿಚಯವಿಪಾಕವಿಚಯಸಂಸ್ಥಾನವಿಚಯಮೆಂಬ ನಾಲ್ಕುಂ ಧರ್ಮಧ್ಯಾನಮಂ ಧ್ಯಾನಿಸುತ್ತುಂ, ಜ್ಞಾನಾದಿಪರಿಣಾಮಂಗಳೊಳ್ ನಿರತಿಶಯಲೇಶ್ಯಾವಿಶುದ್ಧಿಯಂ ತಾಳ್ದಿ, ತದನಂತರಮಪ್ರಮತ್ತಗುಣಸ್ಥಾನಂಗಳೊಧಃಪ್ರವೃತ್ತಿಕರಣಪರಿಣಾಮಂಗಳಿಂದಮನಂತಾನುಬಂಧಿಕ್ರೋಧಮಾನಮಾಯಾಲೋಭಂಗಳಂ ವಿಸಂಯೋಜಿಸಿ, ಅಂತರ್ಮುಹೂರ್ತಮಂ ವಿಶ್ರಮಿಸಿ, ಮಗುೞ್ದು ತ್ರಿವಿಧಕರಣಪರಿಣಾಮಪರಿಣತನನುಕ್ರಮದಿಂ ಮಿಥ್ಯಾತ್ವಸಮ್ಯಙ್ಮಿಥ್ಯಾತ್ವಸಮ್ಯಕ್ತ್ವಪ್ರಕೃತಿಯೆಂಬ ದರ್ಶನಮೋಹನೀಯತ್ರಿತಯದ ನಿರ್ಮೂಲದಿಂ ಕ್ಷಾಯಿಕಸಮ್ಯಗ್ದೃಷ್ಟಿಯಾಗಿ, ಬೞಿಯಮಂತರ್ಮುಹೂರ್ತಕಾಲಂ ಪ್ರಮತ್ತಾಪ್ರಮತ್ತಪರಾವರ್ತನಸಹಸ್ರಂಗೆಯ್ದು ಮೋಕ್ಷಪ್ರಾಸಾದಾಧಿರೋಹಣನಿಶ್ರೇಣೀಭೂತಕ್ಷಪಕಶ್ರೇಣಿಪ್ರಯೋಗ್ಯಾಧಃಪ್ರವೃತ್ತಿಕರಣಪರಿಣತನಪೂರ್ವಕರಣಕ್ಷಪಕಪ್ರಥಮಶುಕ್ಲಧ್ಯಾನಪರಿಣತನಾಗಿದೀರ್ಘಾಯುಃಕರ್ಮಮನುೞಿಪಿಮತ್ತಿನುೞಿದ ಕರ್ಮಂಗಳಂ ಸ್ಥಿತ್ಯನುಭಾಗಕಾಂಡಕಘಾತಪ್ರದೇಶಗುಣಶ್ರೇಣೀನಿರ್ಜರಾದಿವಿಧಿಯಿನನುಕ್ರಮಂ ಕಿಡಿಸುತ್ತುಂ ಪ್ರತಿಸಮಯಮನಂತಗುಣಶಕ್ತಿಖಚಿತೈಕಪರಿಣಾಮನಿವೃತ್ತಿಕರಣಕ್ಷಪಕನಾಗಿ ಪೂರ್ವೋಕ್ತವಿಧಾನದಿನಂತರ್ಮುಹೂರ್ತದಿಂ ನಿದ್ರಾನಿದ್ರಾಪಚಳಾಪ್ರಚಳಾಸ್ತ್ಯಾನಗೃದ್ಧಿನರಕಗತಿತತ್ಪ್ರಾಯೋಗ್ಯಾನುಪೂರ್ವತಿರ್ಯಗ್ಗತಿತತ್ಪ್ರಯೋಗಾನುಪೂರ್ವ್ಯೇಕೇಂದ್ರಿಯವಿಕಳೇಂದ್ರಿಯಜಾತ್ಯಾತಪೋದ್ಯೋತಸ್ಥಾವರಸಾಧಾರಣಸೂಕ್ಷ್ಮಂಗಳೆಂಬ ಪದಿನಾಱುಪ್ರಕೃತಿಗಳುಮಂ ನಿರವಶೇಷಂ ಕಿಡಿಸಿ, ಮತ್ತಮಂತರ್ಮುಹೂರ್ತದಿಂ ವಿಶುದ್ಧಪರಿಣಾಮಾತಿಶಯಪರವಶನಪ್ರತ್ಯಾಖ್ಯಾನಕ್ರೋಧಮಾನಮಾಯಾಲೋಭಂಗಳೆಂಬೆಂಟುಕಷಾಯಂಗಳಂ ಕಿಡಿಸಿ,

ಮತ್ತಂ ಕಿಱಕಿಱಿದು ಬೇಗದಿಂ ತನ್ನ ಪರಿಣಾಮವಿಶೇಷದಿಂ ಚತುಸ್ಸಂಜ್ವಲನವನೋಕಷಾಯಂಗಳೆಂಬ ಪದಿಮೂಱುಪ್ರಕೃತಿಗಳುಮಂತರಾಯಕರಣಂಮಾಡಿ, ಮತ್ತಂಕಿಱಕಿಱಿದು ಬೇಗದಿಂ ಕ್ರಮಕ್ರಮದೊಳ್ ನಪುಂಸಕವೇದಮುಂ ಸ್ತ್ರೀವೇದಮಂ ಪುಂವೇದಮುಂ ಪುರಾತನಕರ್ಮದೊಡನೆ ಹಾಸ್ಯರತ್ಯರತಿಶೋಕಭಯಜುಗುಪ್ಸಾಭಿಧಾನನವನೋಕಷಾಯಷಟ್ಕರ್ಮಮಂ ಘಾತಿಸಿ, ಪುಂವೇದಾದಿನವಬಂಧಮುಮಂ ಸಮಯೋನದ್ವ್ಯಾವಳಿಕಾಸಮಯಂಗಳಿಂ ಕಿಡಿಸಿ, ಬೞಿಯಮಪಗತವೇದನಾಗಿ, ಮತ್ತಂ ಪ್ರತಿಸಮಯಪ್ರವರ್ತಮಾನಸಂಜ್ವಲನಚತುಃಕಷಾಯಘಾತಿತಾಶೇಷಾನುಭಾಗಸ್ವಕರ್ಮಕರಣಾಪೂರ್ವಕರಣಸ್ಪರ್ಧಕಾಭಿಘಾತದಿನಂತರ್ಮುಹೂರ್ತಕಾಲದಿಂ ಕಿಡಿಸಿ, ಬೞಿಯಂ ಪೂರ್ವಸ್ಪರ್ಧಕಾನುಭೋಗಮನುಚಿತಕೃಷ್ಟಿವಿಧಾನದಿನನಂತಗುಣಹಾನಿರೂಪದಿಂದ್ವಾದಶಸಂಗ್ರಹಕೃಷ್ಟಿಗಳಂ ಮಾಡುತ್ತುಮಂತರ್ಮುಹೂರ್ತದಿಂ ಕೃಷ್ಟಿರೂಪಗತಚತಷ್ಕಷಾಯಸಮಸ್ತಾನುಭಾಗನಾಗಿ, ಮತ್ತಂ ಕಿಱಕಿಱಿದುಬೇಗದಿಂಕ್ರಮಕ್ರಮದಿಂದಂ ಕ್ರೋಧಮಾನಮಾಯಾಲೋಭಸಂಜ್ವಲನಂಗಳಂ ಮೂಱುಂ ತೆಱದ ಕೃಷ್ಟಿಗಳಂ ಬೇಱೆಬೇಱೆಕಿಡಿಸಿ ಕಷಾಯತ್ರಿಕಕ್ಕೆನಿರ್ಮೂಳವಿಳಯಂಮಾಡಿ, ಮತ್ತಿನಿಸುಂ ಬೇಗದಿಂಲೋಭಸಂಜ್ವಲನದ ಮೊದಲ ಕೃಷ್ಟಿಗತಾನುಭಾಗಮಂ ಕಿಡಿಸಿ ಮತ್ತಂ, ದ್ವಿತೀಯಕೃಷ್ಟಿಗತಾನುಭಾಗಮಂ ಭೇದಿಸುತ್ತಂ, ಬಾದರಸಾಂಪರಾಯಕೃಷ್ಣರೂಪಾನುಭಾಗಮನನಂತಗುಣಹಾನಿರೂಪದಿಂ ಕುಂದಿಸಿ ಸೂಕ್ಷ್ಮಸಾಂಪರಾಯಸಮನ್ವಿತಸೂಕ್ಷ್ಮಸಾಂಪರಾಯಕ್ಷಪಕನಾಗಿ ಯಥೋಕ್ತಪರಿಣಾಮದಿಂ ಸೂಕ್ಷ್ಮಸಾಂಪರಾಯಕೃಷ್ಟಿಗಳಂ ಮಾಡುತ್ತುಮಂತರ್ಮುಹೂರ್ತಕಾಲದಿಂ ಬಾದರಲೋಭಸಂಜ್ವಲನಮಂ ಕಿಡಿಸಿ, ವಿನ್ತಿವೃತ್ತಸಾಮಾಯಿಕಚ್ಛೇದೋಪಸ್ಥಾಪನಾಶುದ್ಧಿಸಂಯಮಾನುಗತಾನುವೃತ್ತಿಕರಣಸ್ಥಾನನಾಗಿ ತದನಂತರಸಮಯದೊಳ್ ಸೂಕ್ಷ್ಮಸಾಂಪರಾಯಸಂಯಮಸಮನ್ವಿತಂಸೂಕ್ಷ್ಮಸಾಂಪರಾಯಕ್ಷಪಕನಾಗಿ ಯಥೋಕ್ತಪರಿಣಾಮಕಾಲದಿಂ ಸೂಕ್ಷ್ಮಸಾಂಪರಾಯಲೋಭಕ್ಕೆ ನಿರ್ಮೂಲಂಮಾಡಿ ನಿರಸ್ತಾಷ್ಟಾವಿಂಶತಿಮೋಹನೀಯಮಳಕಳಂಕನಾಗಿ ವೀತರಾಗದ್ವೇಷಭಾವನಾಭಾವಿತಯಥಾಖ್ಯಾತಚಾರಿತ್ರಕ್ಷೀಣಕಷಾಯವೀತರಾಗಛದ್ಮಸ್ಥಗುಣ

ಸ್ಥನಾನೇಕತ್ವವಿತರ್ಕವಿಚಾರಾಭಿಧಾನಧ್ಯಾನಪರಿಣತನಪರಿಮಿತಪ್ರದೇಶನಿರ್ಜರಾದಿಕ್ರಿಯಾಕಳಾಪಕಳಿತನುಚಿತಕತಿಪಯಸಮಯಂಗಳನಾತ್ಮದ್ವಿಚರಮಸಮಯದೊಳ್ ನಿದ್ರಾಪ್ರಚಲೆಗಳಂ ಕಿಡಿಸಿ ಚರಮಸಮಯದೊಳ್ ಮತಿಶ್ರುತಾವಧಿಮನಃಪರ್ಯಯಕೇವಳಾವಬೋಧವಿಷಯಜ್ಞಾನಾವರಣಂಪಚಕಮುಮಂ ಚಕ್ಷುರಚಕ್ಷುರವಧಿಕೇವಲದರ್ಶನಾವರಣಚತುಷ್ಕಮುಮಂ ದಾನಲಾಭಭೋಗೋಪಭೋಗವೀರ್ಯಾಂತರಾಯಪಂಚಕಮುಮಂ ನಿರ್ಮೂಳಮಪ್ಪಂತೊರ್ವೊದಲೆ ಕಿಡಿಸಿ ತದನಂತರಸಮಯದೊಳ್,

ಅಳಱಿ ಕಿಡೆ ಘಾತಿಗಳ್ ದಾ
ನಳಾಭಭೋಗೋಪಭೋಗವೀರ್ಯಂಗಳೊಳ |
ಗ್ಗಳಿಸಿದನಂತಚತುಷ್ಟಯ
ವಿಳಾಸಿಕೈವಲ್ಯಲಕ್ಷ್ಮಿಯಂ ಯತಿ ಪಡೆದಂ ‖ ೧೪

ಅನತಿಶಯಕೇವಲಜ್ಞಾ
ನನಿರೀಕ್ಷಿತವಿಶ್ವನಾಥನಾದಿಜಿನಂ ಫಾ |
ಲ್ಗುನಬಹುಳೈಕಾದಶಿಯೊಳ
ಮನಂತಸುಖನಿಳಯಮುತ್ತರಾಷಾಢದೊಳಂ ‖ ೧೫

ಧ್ಯಾನಮರೀಚಿಯಿಂ ಬೆದರೆ ಘಾತಿತಮಸ್ತಮಮೆಯ್ದೆ ಭವ್ಯಸಂ
ತಾನಸರೋಜರಾಜಿಗಲರ್ದರಮಾದಮಳಂಬಮಾಗೆ ವೈ |
ಮಾನಿಕಚಕ್ರವಾಕದೊಲವುಣ್ಮಿರೆ ಚೆಲ್ವೆಸೆದತ್ತು ಕೇವಲ
ಜ್ಞಾನದಿನೇಶಬಿಂಬದ ಪೊದಱ್ದುದಯಂ ವೃಷಭೋದಯಾದ್ರಿಯೊಳ್ ‖ ೧೬

ವ॥ ಆಪ್ರಸ್ತಾವದೊಳ್,

ಸುರಪುಷ್ಪಾಸಾರದಿಂದಂ ಸುರಗಣಪಟಹಪ್ರಸ್ಫುರದ್ಧ್ವಾನದಿಂದಂ
ಸುರಕಾಂತಾರಾಗದಿಂದಂ ಸುರವಿರಚಿತಮಂದಾನಿಳಾಂದೋಳದಿಂದಂ |
ಸುರವಂದಿಸ್ತೋತ್ರದಿಂದಂ ದೆಸೆ ಗಗನತಳಂ ತೀವಿ ತಳ್ಳಂಕುಗುಟ್ಟು
ತ್ತಿರೆಯುಂ ಕೈವಲ್ಯಬೋಧೋದಯಮಹಿಮೆ ಜಗಕ್ಕಾದುದಾಶ್ಚರ್ಯಭೂತಂ

ವ॥ ಆಗಳಾದಿದೇವನ ಕೇವಲಜ್ಞಾನಸಂಪೂರ್ಣಚಂದ್ರೋದಯೋಜ್ಜೃಂಭಿತಜಗತ್ರಯಾಂಭೋದಿವೇಳಾಪ್ರಧ್ವಾನಾನುಕಾರಿಘಂಟಾರವಕಂಠೀರವಾರಾ

ವಪಟಹಪ್ರಣಾದಶಂಖನಿಸ್ವನಸಮುತ್ಪನ್ನಬೋಧಾನೇಕಯಾನವಿಮಾನಾ
ರೂಢಕಲ್ಪಜಜ್ಯೋತಿಷ್ಕವಾನವ್ಯಂತರಭವನಾಸುರನಿಕಾಯಪರಿವೇಷ್ಟಿತ
ಶೋಭಿತಮತಿರುಚಿರನಿಜಾಂಗರುಚಿಗಳೊಳಂ ಅನೇಕಾಳಂಕಾರರತ್ನಪ್ರಭಾ
ಪ್ರಸರದೊಳಂ ಗಗನತಳಮನಳಂಕರಿಸಿ ಸೌಧರ್ಮೇಂದ್ರನಿಂದ್ರಾಣೀಸಮೇ
ತಮನೇಕಕಲ್ಪಾಮರೇಂದ್ರಪರಿವೃತನಾಗಿ ಬರೆ,

ಹಾರಾಂಶುಸ್ವಚ್ಛನೀರಂ ಸುರಯುವತಿಮುಖಾಂಭೋಜನೇತ್ರೋತ್ಪಳಶ್ರೀ
ಸಾರಂ ಕಾಶ್ಮೀರರಾಗಾರುಣಿತಕುಚರಥಾಂಗಾಭಿಧಾನೋಜ್ವಳಂ ನೀ ।
ಹಾರಪ್ರಸ್ಪರ್ಧಿಚಂಚಚ್ಚಮರಜಕಳಹಂಸಾಸ್ಪದಂ ಚೆಲ್ವನಿತ್ತು
ತ್ತೋರಂತಂಭೋದಮಾರ್ಗಂ ತಿಳಿದಕೊಳದವೋಲ್ದೇವಸಂದೋಹದಿಂದಂ

ಸುರಕುಸುಮದ ಪೊಸವಾಸಿಗ
ಮೆರಡುಂ ಕರತಳದೊಳೆಸೆದು ತನ್ನಯ ತೋಳೊಳ್ ।
ದೊರೆಯೆನೆ ಬಂದತ್ತು ಸೊಯಂ
ಬರಕ್ಕೆ ಬರ್ಪಂತು ದೇವಗಣಿಕಾನಿಕರಂ ॥ ೧೯

ಯುಗಪದ್ವಾದಿತದೇವದುಂದುಭಿಗಳಿಂದಾಯ್ತುದ್ಧ ಶಬ್ದಾತ್ಮಕಂ
ಜಗಮುತ್ತುಂಗಕಿರೀಟರಶ್ಮಿರಚಿತಾನೇಕೇಂದ್ರಚಾಪಂಗಳಿಂ ।
ಗಗನಂ ತಿಂತಿಣಿಯಾದುದಾಗಳನಿತುಂ ದಿಗ್ಭಿತ್ತಿಗಳ್ ಚಿತ್ರಭಿ
ತ್ತಿಗಳಂತಾದುವು ಕಲ್ಪಜಾಮರತನುಚ್ಛಾಯಾವಿಳಾಸಂಗಳಿಂ ॥ ೨೦

ಜಯ ಜಯ ನಂದ ನಂದ ಪರಮೇಶ್ವರ ಪಾಪವಿನಾಶ ಲೋಕವಿ
ಸ್ಮಯಕರ ಶಂಭು ಶಂಕರ ಮನೋಜಭಯಂಕರ ಭವ್ಯಬಂಧು ನಿ ।
ಮ್ಮಯ ದಯೆಯಿಂದಮಿಾಭವಸಮುದ್ರಮನೀಸುವೆವೆಂಬ ದೇವಕೋ
ಟಿಯ ನಿನದಂ ಪಳಂಚಲೆಯೆ ಘೂರ್ಣಿಸಿದತ್ತು ಸಮಸ್ತದಿಕ್ತಟಂ ॥ ೨೧

ವ॥ ಅಂತು ಸೌಧರ್ಮೇಂದ್ರಂ ಬಂದು ತನ್ನ ಬೆಸದೊಳ್ ಮುನ್ನಮೆ ಧನದವಿನಿರ್ಮಿತಮಾಗಿರ್ದ ಸಮವಸರಣಮಂ ಕಂಡಂ. ಅದು ಭೂಭಾಗ ದಿಂದಮೈಸಾಸಿರದಂಡಂ ಮೇಗೆ ನೆಗೆದಲ್ಲಿ ಪನ್ನೆಱಡುಯೋಜನಸಮವೃ ತ್ತಮುಂ ಏಕೇಂದ್ರನೀಲಶಿಲಾತಲಘಟಿತಮುಸೃಣತಳಮುಂ ದಿಕ್ಚತುಷ್ಟಯ ವ್ಯವಸ್ಥಿತದೇವಮಾನವತಿರ್ಯಗ್ವಿನೇಯಜನಸುಖಾರೋಹಣಹೇತುಭೂತ

ಪದೌಷಧಿಶಕ್ತಿಯುಕ್ತಮಣಿಮಯವಿಂಶತಿಸಹಸ್ರಸೋಪಾನವಿರಾಜಿತಮುಂ ಭುವನತ್ರಯಲಕ್ಷ್ಮೀಲಪನವಿಳೋಕನಮಂಗಳದರ್ಪಣಾಯಮಾನಮುಮ ಪ್ಪ ಭೂಮಿಭಾಗದ ಪರ್ಯಂತಪ್ರದೇಶಮನಳಂಕರಿಸಿ ಚಂಚತ್ಪಂಚರತ್ನ ಪಾಂಶುಮಯಮಾಗಿ,

ವಳಯಾಕೃತಿಯಿಂದಿದನೇಂ
ಬಳಸಿದುದೊ ಸುರೇಂದ್ರಚಾಪಮಂಡಳಮೆನೆ ಬ ।
ಳ್ವಳಬಳೆದ ಪಂಚರತ್ನದ
ಬೆಳಗಿಂದಂ ಬೆಳಪುದಲ್ಲಿ ಧೂಳೀಶಾಳಂ ॥ ೨೨

ವ॥ ಅದಱ ನಾಲ್ಕುದೆಸೆಯೊಳಂ ಮಕರತೋರಣಾಳಂಕೃತಜ್ಯೋತಿರ ಮರದೌವಾರಿಕಪರಿಪಾಳಿತಬಹಿರಂತರ್ಜಗತೀದ್ವಯನಿಹಿತಪ್ರತ್ಯೇಕಾಷ್ಟೋ ತ್ತರಶತಾಷ್ಟಮಂಗಳನವನಿಧಿಸಮನ್ವಿತಜಾತರೂಪಗೋಪುರಾಭ್ಯಂತರಮ ಹಾವೀಧೀಮಧ್ಯದೊಳ್ ದ್ವಾದಶಗೋಪುರವಿರಾಜಿತಸಾಲತ್ರಯಪರೀತಕಂ ಡದ್ವಯಸಮೇತನಂದನಾದಿಷೋಡಶಸರೋವರಪರಿವೇಷ್ಟಿತದಿಕ್ಚತುಷ್ಟಯ ವ್ಯವಸ್ಥಿತತಪನೀಯಷೋಡಶಸೋಪಾನೋಪಶೋಭಿತಜಗತೀತಳಮಧ್ಯ ದೊಳ್ ಅನುಕ್ರಮದೊಳೆಂಟುನಾಲ್ಕುನಾಲ್ಕುಂಬಿಲ್ಲಿಡಿಯಮಾಗಿ ವೈಡೂರ್ಯ ಹೇಮಪಂಚರತ್ನಂಗಳಪ್ಪ ಮೂಱು ಪೀಠಂಗಳ ಮೇಗೆ ಚತುರಶ್ರಾಧೋ ಭಾಗಪರಿವೃತಾಗ್ರಭಾಗಾಧ್ಯಾಸಿತಹಿರಣ್ಮಯಜಿನಬಿಂಬಕದಂಬಂಗಳುಂ ಪ ರಿಲಂಬಿತಹೇಮಘಂಟಾಕಿಂಕಿಣೀಚಾಮರಧ್ವಜಂಗಳುಮಾಗೆ,

ಮಾನಮನೆಂತುಂ ಮಿಥ್ಯಾ
ಜ್ಞಾನಿಗಳೆರ್ದೆಯೊಳಗೆ ನೆಲಸಲೀಯದೆ ನಾಲ್ಕುಂ ।
ಮಾನಸ್ತಂಭಂಗಳ್ ರ
ತ್ನಾನದ್ಧಂಗಳ್ ನಿರಂತರಂ ಸೊಗಯಿಸುಗುಂ ॥ ೨೩

ಮಾನಸ್ತಂಭದಿನಂತಾ
ಮಾನಸ್ತಂಭಂಬರಂ ಸುಧಾಹರ್ಮ್ಯಮಯಂ ।
ತಾನಯ್ದುಯ್ದುವಱಿಡೆಯೊಳ್
ತಾನೊಂದೊಂದರ್ಹದಾಲಯಂ ಸೊಗಯಿಸುಗುಂ ॥ ೨೪

ವ॥ ಅಂತು ಹರ್ಮ್ಯಚೈತ್ಯಾಲಯಾವನಿಯೆಂಬುದು. ಅದಱ ವಿಸ್ತಾರಮರ್ಧಯೋಜನಂ. ಅಲ್ಲಿಂದತ್ತ ಪೂರ್ವೋಕ್ತವರ್ಣನೋಪೇತವಿವಿಧಮಣಿಖಚಿತರಜತಮಯಚತುರ್ಗೋಪುರದ್ವಾರವಿರಾಜಮಾನವೇದಿಕಾವೃತೋಭಯತಟಘಟಿತಮಣಿಮಯಸೋಪಾನಭಾಸಮಾನಮುಮರ್ಧಯೋಜನವಿಸ್ತಾರಮುಮಾಗಿ,

ಬಳಸಿ ಜಳವಿಹಗಜಳಚರ
ಜಳಜೋತ್ಪಳಕಳಿತಮಮಳಜಳಜಳಕೇಳೀ ।
ವಿಳಸನವಿದಗ್ಧಖೇಚರ
ನಿಳಿಂಪದಂಪತಿಯಿನಂಬುಖಾತಿಕೆ ರಯ್ಯಂ ॥ ೨೫

ವ॥ ಅಂತಲ್ಲಿಂದತ್ತ ವಿಚಿತ್ರರತ್ನರಚಿತಜ್ಯೋತಿಷ್ಕದೌವಾರಿಕಾಷ್ಟಮಂಗಳನವನಿಧಿಸನಾಥಜಗತೀಸಮನ್ವಿತತಾರಮಯಚತುರ್ಗೋಪುರವಿಭ್ರಾಜಿತಹಿರಣ್ಮಯವೇದಿಕಾವಳಯಿತಮುಂ ಅಶೋಕಲತಿಕಾಪ್ರತಾನನವಮಾಲಿಕಾವಲ್ಲರೀಸಮುಲ್ಲಾಸಮಾನಮಾಳತೀವ್ರತತಿವಿತಾನಚೂತವಲ್ಲೀವೇಲ್ಲನನಿಸರ್ಗಸಾಂದರಕ್ರೀಡಾಚಳಕೇಳೀಸಮಭಿರಾಮಮುಮಾಗಿ,

ಭ್ರಮದ್ಭ್ರಮರಸಂಕುಲಂ ಕುರುಳ ಬಂಬಲಂ ಪುಷ್ಪವಿ
ಭ್ರಮಂ ನಯನಲೀಲೆಯಂ ಕುಡಿಯ ನೀಳ್ಪು ತೋಳ್ದೊಂಗಲಂ ।
ದಮಂ ನೆಱೆಯೆ ಭಂಗಿ ಭಂಗಿಯನೆ ಪೋಲ್ವ ದೇವೀವಿಳಾ
ಸಮಂ ನಿಜವಿಳಾಸದಿಂ ನಗುವುವಲ್ಲಿ ವಲ್ಲೀವನಂ ॥ ೨೬

ಅದಱಗಲವೊಂದುಯೋಜನ
ಮದಱಿಂದತ್ತಣದು ನಿಷಧಗಿರಿನಿಭಮೆಸದಿ ।
ರ್ದುದು ಬಳಸಿ ಕನಕಶಾಳಂ
ಮೃದುಪವನವಿಲೋಲಕೇತುಮಾಲಾಲಲಿತಂ ॥ ೨೭

ವ॥ ಅದಱ ನಾಲ್ಕುಂದೆಸೆಯೊಳಂ ರಜತಮಯಗೋಪುರಚತುಷ್ಟಯಂ ನೆಲಸಿರ್ದುದು,

ಅದು ದೌವಾರಿಕಯಕ್ಷಾ
ಸ್ಪದಮಂತದಱೆರಡು ಕೆಲದೊಳೆರಡೆರಡು ಪೊದ ।

ಬ್ದೊದವಿದ ಸುರಸಂಗೀತಕ
ಸದನಂಗಳ್ ಧೇವನರ್ತಕೀಶುಭದಂಗಳ್ ॥ ೨೮

ಅವಱ ಕೆಲಂಬಿಡಿದೊಂದೊಂ
ದವಿರಳನವಧೂಪಧೂಮಧೂಸರಿತನಭೋ ।
ವಿವರಂ ವಿವಿಧಮಣಿಪ್ರಕ
ರವಿರಾಜಿತಧೂಪಧೂಮಘಟಮೆಸೆದಿರ್ಕುಂ ॥ ೨೯

ನೆಗೆದಗರುಧೂಪಧೂಮದ
ಮಗಮಗಿಪಮರಿಯುರ ಸುಯ್ಯ ಪರಿಮಳದ ಪೊದ ।
ಳ್ಕೆಗೆ ಸೋಲ್ತು ಸೂಱ ಸೂಱದೆ
ಮೊಗಸಿದುವೆರಡೆಡೆಗಮಲಸದಳಿಗಳ ಬಳಗಂ ॥ ೩೦

ವ॥ ಅಂತು ನಾಲ್ಕುದೆಸೆಯ ವೀಧಿಗಳೊಳಿರ್ದ ನಾಲ್ಕುನಾಲ್ಕುಂ ಗೋಪುರಂಗಳಿಂದಂ ಪದಿನಾಱು ನಾಟಕಶಾಲೆಗಳಿಂದಂ ಪದಿನಾಱು ಧೂಪಘಟಂಗಳಿಂದ ಮೊಪ್ಪಿ ತತ್ಕನಕಶಾಲಾಭ್ಯಂತರದೊಳ್ ತ್ರಿಶಾಲತ್ರಿಪೀಠೋಪಸ್ಥಿತಾರ್ಹತ್ಪ್ರತಿಮೋಪೇತಚೈತ್ಯದ್ರುಮೋಪೇತಾಭಿರಾಮಮಧ್ಯಪ್ರದೇಶಾಶೋಕಸಪ್ತಚ್ಛದಚಂಪಕಚೂತಪಾದಪೋಪಶೋಭಿತಮುಮೇಕಯೋಜನಪ್ರಮಾಣವಿಸ್ತಾರಮುಮಾಗಿ,

ಕುಚಭರಚಳಿತಕೃಶೋದರ
ಖಚರೀಸಂಚರಣರಣಿತನೂಪುರರಶನಾ ।
ಪ್ರಚುರರವವಹನರುಚಿರ
ಪ್ರಚುರಂ ಮೃದುಪವನಮುಪವನಂ ಸೊಗಯಿಸುಗುಂ ॥ ೩೧

ವ॥ ಅಲ್ಲಿಂದತ್ತ ವನವನಿತೆಯ ಕನಕಕಾಂಚೀಕಳಾಪಮನನುಕರಿಸಿ ರತ್ನಾಭರಣತೋರಣಘಂಟಾಜಾಳಮುಕ್ತಾಲಂಬನಪುಷ್ಪದಾಮಾಷ್ಟಮಂಗಳನವನಿಧಿಪ್ರಧಾನಂಗಳುಂ ಯಕ್ಷದೌವಾರಿಕಾಧಿಷ್ಠಿತಂಗಳಪ್ಪ ನಾಲ್ಕುಂ ರಜತಗೋಪುರಂಗಳನೊಳಕೊಂಡ ಕಳಧೌತವೇದಿಕಾಭ್ಯಂತರದೊಳ್ ಮಣಿಪೀಠದ ಮೇಗಣ ಸುವರ್ಣಸ್ತಂಭಾಗ್ರಂಗಳೊಳ್,

ಗಜವೃಷಭಾಂಕುಶಚಕ್ರಾಂ
ಬುಜಹಂಸಮಯೂರಮತ್ಸ್ಯ ಫಣಿವೈರಿಮತಂ ।
ಗಜರಿಪುಚಿಹ್ನ ವಿಶಾಲ
ಧ್ವಜಂಗಳಿಂ ಧ್ವಜಮಹೀತಳಂ ಸೊಗಯಿಸುಗುಂ ॥ ೩೦

ವ॥ ಅಂತು ನಾಲ್ಕುಂದೆಸೆಯೊಳಮಂಬುಧಿವೀಚೀಚಯವಿಳಾಸಮನಿೞಿಸಿ ಮಿಳಿರ್ವ ನಾಲ್ಸಾಸಿರದ ಮೂನೂಱಿರ್ಪತ್ತು ಮಹಾಧ್ವಜಂಗಳಿಂದಂ ನಾಲ್ವತೊಂಭತ್ತು ಲಕ್ಕೆಯುಮಱುವತ್ತೈಸಾಸಿರದ ಮೂನೂಱು[1] ಪರಿವಾರಧ್ವಜಂಗಳಿಂದಮೆಸೆವ ಪತಾಕಾವನಿತಳಮೊಂದುಯೋಜನಂ. ಅಲ್ಲಿಂದತ್ತ ಮಷ್ಟಮಂಗಳನವನಿಧಿಸಮೇತಂಗಳುಂ ನಾಟ್ಯಶಾಲಾದುಂದುಭಿಧೂಪಘಟಾದ್ವಂದ್ವಾಭಿರಾಮಂಗಳುಂ ನಾಗಕುಮಾರದ್ವಾರಪಾಳಕವಿರಾಜಿತಂಗಳುಮಪ್ಪ ಬೆಳ್ಳಿಯ ನಾಲ್ಕುಂಗೋಪುರಂಗಳಿಂದಮೊಪ್ಪಿ ವಳಯಾಕೃತಿಯಾಗಿ ಬಳಸಿದ ಮಾನುಷೋತ್ತರಪರ್ವತಮನಿೞಿಸುವ ಜಾತರೂಪಮಯವಿಶಾಲವಳಯದೊಳಗೆ ಪರಭಾಗಂಬಡೆದು ಚೈತ್ಯವೃಕ್ಷಪರಿಕಲಿತಚತುರ್ದಿಗವಸ್ಥಿತಸಿದ್ಧಪ್ರತಿಮಾವಭಾಸಿಸಿದ್ಧಾರ್ಥವೃಕ್ಷಪರಿಭ್ರಾಜಿತಮಪ್ಪ ಮಧ್ಯಪ್ರದೇಶಮುಮೇಕಯೋಜನವಿಷ್ಕಂಭಮುಮಾಗಿ,

ದೇವೋತ್ತರಕುರುಗಳೆ ನಾ
ನಾವಿಧಕಲ್ಪಾಂಘ್ರಿಪಂಗಳಿಂದಂ ಪತಿಯಿಂ ।
ತೀವಿ ಬಳಸಿರ್ದುವೆನೆ ಕ
ಲ್ಪಾವನಿರುಹಭೂಮಿಭಾಗಮತಿರಮಣೀಯಂ ॥ ೩೧

ವ॥ ಅಲ್ಲಿಂದತ್ತ ಕಾರ್ತಸ್ವರವೇದಿಕಾವಿಭೂಷಣಂಗಳುಂ ನಾಗದೌವಾರಿಕಾಭಿರಾಮಂಗಳುಂ ಅಷ್ಟಮಂಗಳನವನಿಧಿವಿಳಸಿತಂಗಳುಮಪ್ಪ ರಜತಮಯಚತುರ್ಗೋಪುರಂಗಳೊಳಗೆ ನಾಲ್ಕುಂ ಮಹಾವೀಧಿಮಧ್ಯಂಗಳೊಳ್ ರತ್ನತೋರಣಶತಾಂತರಿತಂಗಳುಂ ಜಿನೇಂದ್ರರುಂದ್ರಸಿದ್ಧಾಭ್ಯರ್ಚಿತಂಗಳುಂ ಕದಳಿಕಾತಪತ್ರಚಾಮರಕನಕಘಂಟಾಕಿಂಕಿಣೀಮನೋಹರಂಗಳುಮಪ್ಪ ತೊಂಭತ್ತೊಂಭತ್ತು ರತ್ನತೋರಣಂಗಳುಮಮರ್ದಿರೆ ತದ್ವೇದಿಕಾವಳಯಾಂತರದೊಳರ್ಧಯೋಜನವಿಸ್ತಾರಮಾಗಿ,

[1] ಕ—ನಾಲ್ವತ್ತಾರುಲಕ್ಕೆಯುಮರುವತ್ತುಸಾಸಿರದರುನೂಱು.

ಭಾಸುರತೇಜೋಭಾಸಿ ಸು
ರಾಸುರಗಂಧರ್ವಕಿನ್ನರೋರಗಖಚರಾ ।
ಧ್ಯಾಸಿತವಿಚಿತ್ರರತ್ನ
ಪ್ರಾಸಾದಪರೀತಭೂತಳಂ ಕಮನೀಯಂ ॥ ೩೪

ವ॥ ಅಲ್ಲಿಂದತ್ತ ಗದಾದಿಹಸ್ತಕಲ್ಪಜದೌವಾರಿಕಾಧಿಷ್ಠಿತನವನಿಧಿಮಂಗಳಾಳಂಕೃತೇಂದ್ರನೀಲಗೋಪುರಚತುಷ್ಟಯವಿರಾಜಮಾನಗಗನಸ್ಫಟಿಕಪ್ರಾಕಾರವೇದಿಕಾಕುಡ್ಯದ್ವಯೋಪಶೋಭಿತಮುಂ ಜಗತ್ತ್ರಯಶ್ರೀನಿವಾಸಮುಮಾಕಾಶಸ್ಫಟಿಕಮಯಮುಮನೇಕಗವ್ಯೂತಿವಿಸ್ತಾರಮುಮಾಗಿ ಶ್ರೀಮಂಟಪಮಿರ್ದುದು. ಅದಱೊಳಗೆ ಧೂಳೀಶಾಳದಿಂದಂ ಪ್ರಥಮಪೀಠಂಬರಂ ಮಹಾಮಾರ್ಗೋಭಯಭಾಗಂಗಳೊಳ್ ನೀಳ್ದ ನಿರ್ಮಲಸ್ಫಟಿಕಮಯಭಿತ್ತಿಗಳೆಂಟುಂ ಬೆರಸು ಪದಿನಾಱುಂ ಭಿತ್ತಿಗಳೊಳ್ ನಾಲ್ಕುಂ ವೀಧಿಗಳುಱೆಯೆ ನೆಗಪ್ದಾಪನ್ನೆರಡುಂ ಕೋಷ್ಠಂಗಳೊಳ್,

ಮುನಿನಾಥರ್ ಕಲ್ಪಕಾಂತಾಜನತತಿ ಗಣಿನಿಶ್ರಾವಿಕಾಸಂಕುಳಂ ಭ
ಕ್ತಿನಮಜ್ಜ್ಯೋತಿಷ್ಕದೇವೀಪ್ರತತಿ ವನವಧೂಬ್ರಾತಮೌತ್ಸುಕ್ಯವದ್ಭಾ ।
ವನಭಾಮಾರಾಜಿ ತದ್ಭಾವನಸುರರಖಿಳವ್ಯಂತರಜ್ಯೋತಿರಿಂದ್ರರ್
ವಿನಮತ್ಕಲ್ಪಾಮರೇಂದ್ರರ್ ಮನುಜಸಮಿತಿ ಸಿಂಹಾದಿತಿರ್ಯಕ್ಸಮೂಹಂ॥ ೩೫

ವ॥ ಎಂಬ ದ್ವಾದಶಗಣಂಗಳಿರ್ಕುಂ. ಅಲ್ಲಿಂದತ್ತ ಕ್ರಮದೊಳೆ ವೈಡೂರ್ಯಹೇಮಸರ್ವರತ್ನಮಯಂಗಳುಮಷ್ಟಚತುಷ್ಟಯಚತುರ್ದಂಡೋತ್ಸೇಧಂಗಳುಂ ಪಂಚಾಶದಧಿಕಸಪ್ತಶತಧನುರ್ವ್ಯಾಪ್ತಂಗಳುಮನೇಕಚಾಪೋತ್ಸೇಧಚಿತ್ರಧರ್ಮಚಕ್ರಧರಯಕ್ಷಾಧಿಷ್ಠಿತಂಗಳುಮಪ್ಪ ಮಹಾಧ್ವಜಂಗಳುಮಷ್ಟಾಷ್ಟಮಂಗಳದ್ರವ್ಯಸಂಪನ್ನಂಗಳುಮಪ್ಪ ಪ್ರಥಮದ್ವಿತೀಯತೃತೀಯಪೀಠಂಗಳಿಂದಂ ಮೇಗೆ ಷಡ್ದಂಡಶತವಿಸ್ತಾರಾಯಾಮದೊಳಂ ನವದಂಡಶತೋತ್ಸೇಧದೊಳಂ ನೆಱೆದು,

ಸುರಭಿಸುರಕುಸುಮಕಾಳಾ
ಗರುಧೂಪೋದ್ದಾಮಗಂಧಮಂ ಜಿನತನುಬಂ ।
ಧುರಗಂಧಮೆ ಗೆಲ್ದಿರೆ ನಿ
ರ್ಭರಗಂಧಂ ಗಂಧಕುಟಿ ಕರಂ ಸೊಗಯಿಸುಗುಂ ॥ ೩೬

ಆಗಂಧಕುಟಿಯ ಮಧ್ಯಮ
ಭಾಗದೊಳೆಸೆದತ್ತು ಮೇರುಶಿಖರೋಪಮಮುಂ ।
ದ್ರಾಗಮಣಿಕಿರಣಕೃತಪರ
ಭಾಗಂ ಪ್ರಜ್ವಳಿತಸಕಳಗಗನಾಭೋಗಂ ॥ ೩೭

ಕೇಸರಿಗಣವಿಧೃತಂ ಸಿಂ
ಹಾಸನಮದನಲ್ಲಿ ನಾಲ್ವೆರಲ್ಮುಟ್ಟದೆ ದೇ ।
ವಾಸುರಮುಕುಟಮಣಿದ್ಯುತಿ
ಭಾಸುರಚರಣಾರವಿಂದನಾದಿಜಿನೇಂದ್ರಂ ॥ ೩೮

ಇರೆ ಭಾಮಂಡಲದೀಪ್ತಿಯ
ಪರೆಪುಂ ಛತ್ರತ್ರಯಪ್ರಭಾಪರಿಕರಮುಂ ।
ಪರೆದು ದಿವಾಕರಹಿಮಕರ
ಕರನಿಕರಪ್ರಚುರರುಚಿಗಳಂ ಮಸುಳಿಸುಗುಂ ॥ ೩೯

ಚಾರುವಿಟಪಾವಳೀವೃತ
ಕೋರಕಿತಾಂಕುರಿತಪಲ್ಲವಿತಮುಕುಳಿತ ವಿ ।
ಸ್ತಾರಿತರಮ್ಯಾಶೋಕಮ
ಹೀರುಹಮುಮನಭವನಂಗರುಚಿ ಪುದಿದಿರ್ಕುಂ ॥ ೪೦

ಸುರಪುಷ್ಪವೃಷ್ಟಿ ಮೊಳಗುವ
ಸುರದುಂದುಭಿ ನಭದೊಳೆಸೆಯೆ ಯಕ್ಷಕುಮಾರರ್ ।
ನೆರೆದಿಕ್ಕೆ ಚತುಷ್ಷಷ್ಟಿಚ
ಮರರುಹದ ಪೊದಳ್ದ ಪೊಳೆಪು ದೆಸೆಗೆಸೆದಿರ್ಕುಂ ॥ ೪೧

ವ॥ ಮತ್ತಂ ಘಾತಿಗಳ ಕೇಡಿನೊಳ್ ಗವ್ಯೂತಿಶತಚತುಷ್ಟಯ ಸುಭಿಕ್ಷತೆ ಮೊದಲಾಗೆ,

ಮಿತನಖಕೇಶಶೋಭಿತತನುತ್ವಮಭುಕ್ತ್ಯುಪಸರ್ಗಭಾವ ಮ
ನ್ವಿತಚತುರಾನನತ್ವಮಖಿಳಾಗಮವಿತ್ತ್ವಮಪಕ್ಷ್ಮತಾ ಸಮಾ ।
ಯುತಗಗನಪ್ರಚಾರಮುಪಜೀವವಧಂ ಪರಿಹೀತದೇಹಬಿಂ
ಬತೆವೆರಸಿಂತು ಪತ್ತತಿಶಯಂಗಳವೇಂ ಜಿನನೊಳ್ ಪೊದಳ್ದುವೋ ॥ ೪೨

ವರಸಮಿತಿ ಚೈತ್ಯಕುಜಗೋ
ಪುರಮಾನಸ್ತಂಭಹರ್ಮ್ಯಸಿದ್ಧಾರ್ಥಕುಜೋ ।
ತ್ಕರಮಂಟಪಕೇಳೀಭೂ
ಧರತುಂಗಸ್ತೂಪಕೇತನಸ್ತಂಭಂಗಳ್ ॥ ೪೩

ಜಿನತನುವಿಂ ದ್ವಾದಶಗುಣ
ಮೆನಿಕುಂ ಪ್ರಾಕಾರವೇದಿಕಾನಿಕರಮದೀ ।
ಶನ ತನುಗೆ ಚತುರ್ಗುಣಮಂ
ತನಿತುಂ ತೋರಣಮುಮುದಯಿನಿನಿಸಭ್ಯುದಯಂ ॥ ೪೪

ವ॥ ಇಂತು ಧನದಂ ಸಮೆದ ಸಮವಸರಣಮಂ ಕ್ರಮಕ್ರಮದೊಳ್ ನೋಡುತ್ತಂ ಬಂದು ಗಂಧಕುಟಿಯಂ ತ್ರಿಃಪ್ರದಕ್ಷಿಣಂಗೆಯ್ದು ಸರ್ವಾಂಗಪ್ರಣತನಾಗಿ,

ಇನಿತೆಂದಿನ್ನಿವೆಂದುವೀವಿಧದವೆಂದಾರ್ಬಣ್ಣಿಸಲ್ಬಲ್ಲರೆಂ
ಬಿನಗಂ ನಿರ್ಭರಭಕ್ತಿ ತಮ್ಮ ಮನದೊಳ್ ಕೈಗಣ್ಮೆ ಕೈವೆರ್ಚ್ಚೆಯೊಳಂ ।
ದ್ರನುಮಿಂದ್ರಾಣಿಯುಮಿಂದ್ರವೃಂದಸಹಿತಂ ದೇವೇಂದ್ರಲೋಕಂಗಳ
ರ್ಚನೆಯಿಂದರ್ಚಿಸಿದರ್ ಜಿನೇಂದ್ರಪದಪೀಠೋಪಾಂತಭೂಪ್ರಾಂತಮಂ ॥

ಬೆಳಗೀ ಕರ್ಪೂರಪಾಳೀಚಯದ ಸೊಡರ್ಗಳಂ ಸೀಡು ಮಂದಾರಮಾಲಾ
ವಳಿಯಂ ಕಟ್ಟೆಯ್ದೆ ದಿವ್ಯಾಂಬರರಚಿತವಿತಾನಂಗಳಂ ನೇಱು ಮುಕ್ತಾ ।
ಫಳಲಂಬೂಷಂಗಳಂ ಬಿತ್ತರಿಸನವರತಂ ರಂಗದೊಳ್ ಪಂಚರತ್ನಂ
ಗಳನೆಂದಿಂದ್ರರ್ಕಳಂತಃಪುರದ ಕಳಕಳಂ ರಯ್ಯಮಾಯ್ತುತ್ತಮಿತ್ತಂ ॥ ೪೬

ವ॥ ಅಂತರ್ಚಿಸಿ ಕರ್ಮಾರಿವಿಜಯಾನಂತಚತುಷ್ಟಯಪ್ರಾಪ್ತಿವಾಕ್ಪ್ರಜಾಸ್ಥಾಯಿಕಾವಿಹಾರಶರೀರಪ್ರಕೃತಿಗಳೆಂಬೆಂಟುಮತಿಶಯಂಗಳನತಿಶಯಭಕ್ತಿಯಿಂ ಸ್ತುತಿಯಿಸಿ, ನಿಜೋಚಿತಸ್ಥಾನದೊಳ್ಕುಳ್ಳಿರ್ದಾದಿತೀರ್ಥಕರರನೋಲಗಿಸುತ್ತಿರ್ಪನ್ನೆಗಂ, ಪುರಿಮತಾಳಪುರಾಧೀಶ್ವರಂ ಭರತಮಹೀಶನಿಂನೇರ್ಗಿಱಿಯಂ ವೃಷಭಸೇನಕುಮಾರಂ ನಾನಾವಿಧಾರ್ಚನಾಮಂಗಳದ್ರವ್ಯಹಸ್ತಂ ಸಮಸ್ತಪರಿಜನಪರಿವೃತಂ ಬಂದು ವೃಷಭೇಶ್ವರನ ಶ್ರೀಮುಖಮಂ ಕಾಣಲೊಡಂ ಆಸನ್ನಭವ್ಯತಾಪ್ರೇರಿತನಾಗಿ,

ಭಗವದರುಹನ ಸಮುಕ್ಷದೊ
ಳಗಣ್ಯಪುಣ್ಯಪ್ರಭಾವದಿಂದಂ ಕೊಂಡಂ ।
ಭಗವದ್ರೂಪಮನಿಂದ್ರಾ
ದಿಗಳೆಲ್ಲಂ ಪೊಗಳೆ ಕಾಲಲಬ್ಧಿಯನಾಗಳ್ ॥ ೪೭

ವ॥ ಅಂತು ದೀಕ್ಷಾಗ್ರಹಣಾನಂತರಸಮಯಸಮುತ್ಪನ್ನಸಪ್ತರ್ದ್ಧಿಜ್ಞಾನ ಚತುಷ್ಟಯಂ ಪ್ರಥಮಗಣಧರನಾದಂ. ಅನ್ನೆಗಮಿತ್ತ ಭರತರಾಜನಯೋಧ್ಯೆಯೊಳಾಸ್ಥಾನಮಂಟಪದೊಳಿರೆ ತತ್ಪುರೋಹಿತಾಯುಧಾಧ್ಯಕ್ಷಾಂತಃಪುರವೃದ್ಧಕಂಚುಕಿಗಳ್ ಬಂದು ಮಹೀತಳಾಶ್ಲಿಷ್ಟಜಾನುಲಲಾಟಪಟ್ಟರ್ ಪ್ರಣಾಮಾರ್ಪಣಪುರಸ್ಸರಂ ಶಿರೋವೇಷ್ಟನಪ್ರಲಂಬಚೇಳಾಂಚಳಪಿಹಿತವದನರಾಗಿ,
ಪುರುದೇವಂಗಾದ ಕೈವಲ್ಯದ ಮಹಿಮೆಯನುಗ್ರಾಯುಧಾಗಾರದೊಳ್ ಭಾಸ್ಕರಚಕ್ರೋದ್ಭಾಸಿಚಕ್ರೋದ್ಭವದ ಪಿರಿದುಮಾಶ್ಚರ್ಯಮಂ ಶೋಭಿತಾಂತಃಪುರದೊಳ್ ಮಾದೇವಿಗಾದಾತ್ಮಜನೊಸಗೆಯನಾಮೂವರುಂ ಬಿನ್ನಪಂಗೆಯ್ದಿರೆ ಜಾತಾನಂದನೀಮೂಱುಮೊಸಗೆಗಳೊಳಮಿನ್ನಾವುದಂ ಮುನ್ನಮಾಪ್ಪೆಂ

ಧರ್ಮಾರ್ಥಕಾಮಮೆಂಬಿವು
ಧರ್ಮಾರ್ಥಜನಕ್ಕೆ ನೆಱೆದ ನೆರ್ಮಂತವಱೊಳ್ ।
ಧರ್ಮಂ ಪ್ರಧಾನಮರ್ಥಂ
ಧರ್ಮಾಂಘ್ರಿಪಫಳಮುದರ್ಕೆ ರಸಮದು ಕಾಮಂ ॥ ೪೮

ಅದಱಿಂದಮಿಂವಱೊಳರ್ಹ
ತ್ಪದಪದ್ಮಪ್ರಣತಿಮುಖ್ಯಮೊಸಗೆಯುಮೆಮಗಿ ।
ನ್ನಿದಱಿಂದಮಿಲ್ಲಿ ಮೇಲಾ
ವುದೆಂದು ಬಗೆ ಬೆದಱಿ ಭಕ್ತಿನಿರತಂ ಭರತಂ ॥ ೪೯

ಪುರಜನಸಕಳಾಂತಃಪುರ
ಪರಿಜನಮುದಕರಿಕರೇಣುಪರಿವೃತನಂಭೋ ।
ಧರರವಗಭೀರಭೇರೀ
ಸ್ವರಪೂರಿತಸಕಳಗಗನದಿಗವನಿಮಧ್ಯಂ ॥ ೫೦

ವ॥ ಅಂತು ಬಂದು ಗಗನಮಂಡಳಮನಲಂಕರಿಸಿದಭವನಾಸ್ಥಾನಮಂಟಪಮಂ ಗೆಂಟಱೊಳೆ ಕಂಡು ಮದಗಜೇಂದ್ರಮನಿೞಿದು ರಾಜಚಿಹ್ನಂಗಳನಿರಿಸಿ ಧೂಳಿಶಾಳಮಾನಸ್ತಂಭಾಂಭಃಖಾತಿಕಾವಲ್ಲೀವನೋಪವನಪತಾಕಾವನಿಕಲ್ಪಭೂರುಹಭೂತಳಸ್ತೂಪಪ್ರಾಸಾದಮಾಳಾವಿಳಾಸಿತಮುಮನವಱಿಡೆಯೆಡೆಯ ಕನಕಪ್ರಾಕಾರವೇದಿಕಾನೇಕಗೋಪುರದ್ವಾರಪಾಳಕಾಷ್ಟಮಂಗಳನವನಿಧಿತೋರಣಧೂಪಘಟನಾಟ್ಯಶಾಲಾಚೈತ್ಯವೃಕ್ಷಸಿದ್ಧಾರ್ಥಮಹೀರುಹಮಹಾಶೋಭೆಯುಮಂ ಶ್ರೀಮಂಟಪಶ್ರೀಯುಮನತ್ಯಂತವಿಸ್ಮಯಸ್ಮೇರಮುಖನುಮತಿಚಿರನ್ಯಸ್ತಹಸ್ತಪಲ್ಲವನುಂ ಮುಹುರ್ಮುಹುರಾಂದೋಳಿತಮಸ್ತನುಂ ಉದಂಚದ್ರೋಮಾಂಚಕಂಚುಕಿತನುಮಾಗಿ ನೋಡುತ್ತುಮುತ್ತುಂಗಪ್ರಥಮದ್ವಿತೀಯತೃತೀಯಪೀಠಗಳನನೇಕಾರ್ಚನೆಗಳಿಂದರ್ಚಿಸುತ್ತುಂ ಮೂಱುಸೂೞ್ಬಲಗೊಂಡು ಜಗತ್ತ್ರಯಾಧೀಶ್ವರ ಶ್ರೀಮುಖಾಭಿಮುಖನಾಗಿ ನಿಂದು ಸ್ತುತಿಸಿ,

ತ್ರಿದಶೇಂದ್ರಮೌಳಿಮಣಿ ಶೋ
ಣದೀಪ್ತಿಗಳ್ ಪುದಿದು ಪೊಳೆವಲಕ್ತಕರಸದಿಂ ।
ಪುದಿದಂತೊಪ್ಪಿರ್ದರ್ಹ
ತ್ಪದಂಗಳೆಮಗೀಗೆ ತಡೆಯದರ್ಹತ್ಪದಮಂ ॥ ೫೧

ಭುವನೇಶ್ವರ ನಿಜರೂಪ
ಸ್ತವವಸ್ತುಸ್ತವಗುಣಸ್ತವಂಗಳನವಱಿಂ ।
ತುಮರಂ ಬಣ್ಣಿಸಲಮರೇಂ
ದ್ರವಾಸುಕಿಪ್ರಭುಗರಾರ್ತರಿಲ್ಲೆನ್ನಳವೇ ॥ ೫೨

ಅಳತೆಗೆ ತೂಕಕ್ಕೆಣಿಕೆಗೆ
ಯೊಳಗಾದುವು ಸಕಳವಸ್ತುಗಳ್ ಭುವನಜನ ।
ಕ್ಕಳಯಲ್ ತೂಗಲ್ಕೆಣಿಸ
ಲ್ಕಳುಂಬಮೆನಿಸಿದುವು ನಿನ್ನ ಗುಣಗಣಮರ್ಹಾ ॥ ೫೩

ತನ್ನಿರ್ದೆಡೆಯದೆ ಮೇರುವಿ
ನುನ್ನತಿ ಜಳನಿಧಿಯ ಗುಣ್ಪು ನಭದ ವಿಭುತ್ವಂ ।

ನಿನ್ನ ಗುಣೋನ್ನತಿ ಸಕಳಜ
ಗನ್ನುತ ಭುವನಾಂತರಾಳಮಂ ಪರ್ಬಿರ್ಕುಂ ॥ ೫೪

ಆಕುಳನೆನಾಗಿ ಸುಟಿದೆನ
ನಾಕುಳಮಪ್ಪೆಡೆಯನಱಿಸಿ ಕಾಣೆಂ ಮಱುಂ ।
ಲೋಕದೊಳಂ ನಿನ್ನಿರ್ಕೆಯೆ
ಲೋಕಾಗ್ರಮೆ ಸಂತಮದನೆ ಮಾಡೆನಗರ್ಹಾ ॥ ೫೫

ಭವನಿಗಳದ ತೊಡರಂ ಕಳೆ
ಭವಜಳಧಿಯ ತಡಿಗೆ ಸಾರ್ಚು ಭವಗಹನದುಪ ।
ದ್ರವಮಂ ಕಿಡಿಸು ಭವಾಂತಕ
ಭವನಕ್ಕುಯ್ ತಡೆಯದೆನ್ನ ನೀಂ ಭವಮಥನಾ ॥ ೫೬

ಮರಣದ ಜನ್ಮದ ನಿಗಳಂ
ನಿರಾಕುಳಂ ಪತ್ತುವಿಡುವಿನಂ ಜಿನ ನಿನ್ನಂ ।
ಸ್ಮರಿಯಿಪುದನಣೋರಣ್ವಾಂ
ತರವ್ಯತಿಕ್ರಮಣಮಾತ್ರಮಂ ಮೆಱೆದಪೆನೇ ॥ ೫೭

ತಿಳಕಂ ವಶ್ಯಮೆ ಜಡಜನ
ಮೊಳಗಱಿಯದು ಸಕಳಭವ್ಯತಿಳಕಂಗೆ ಜಗ ।
ತ್ತಿಳಕ ಭವತ್ಪದ ಚಂದನ
ತಿಳಕಂ ತ್ರೈಲೋಕ್ಯವಶ್ಯಮಕ್ಕುಮವಶ್ಯಂ ॥ ೫೮

ಅಮರೇಂದ್ರೋನ್ನತಿ ಖೇಚರೇಂದ್ರವಿಭವಂ ಭೋಗೀಂದ್ರಭೋಗಂ ಮಹೇಂ
ದ್ರಮಹೈಶ್ವರ್ಯಮಿವೆಲ್ಲಮಧ್ರುವಮಿವಂ ಬೇಡ್ಪಂತು ಬೇಳಲ್ಲೆ ನು ।
ತ್ತಮದೀಕ್ಷಾವಿಧಿಯುಂ ಸಮಾಧಿಮರಣಂ ಕರ್ಮಕ್ಷಯಂ ಬೋಧಿಲಾ
ಭಮುಮೋಘಂ ದೊರೆಕೊಳ್ವುದಕ್ಕೆಮಗೆ ಮುಕ್ತಿಶ್ರೀಮನೋವಲ್ಲಭಾ ॥ ೫೯

ವ॥ ಎಂದನೇಕಸ್ತೋತ್ರಪವಿತ್ರೀಕೃತಮುಖಾರವಿಂದನಮರಸಮಾಜವಿಸ್ಮಯಸ್ಮೇರೇಕ್ಷಣೈಕಲಕ್ಷಲಕ್ಷಣನಾಗಿ ನಿಜೋಚಿತಪ್ರದೇಶಸ್ಥಾನದೊಳ್ ಕುಳ್ಳಿರ್ದು,

ನೃಸುರಾಸುರಪರಿಷತ್ಸ
ಸ್ಯಸಂಕುಳಂ ಜಿನವಚೋಮೃತಾಸಾರಮನಂ ।
ದಸದಳಮೆ ಬಯಸೆ ಭರತಂ
ಬೆಸಗೊಂಡಂ ಜಿನನನಖಿಳವಸ್ತುಸ್ಥಿತಿಯಂ ॥ ೬೦

ವ॥ ಅಂತು ಬೆಸಗೊಳೆ,

ಅಂದಪಗತತಾಲ್ವೋಷ್ಠ
ಸ್ಪಂದನಮಸ್ಪೃಶ್ಯಕರಣವರ್ಣಂ ಜಗದಾ ।
ನಂದಕರಂ ಜಳಧರರವ
ಷಾಂದರಮತಿವಿಶದಮಧುರಗಂಭೀರರವಂ ॥ ೬೧

ವ॥ ಅಂತು ನೆಗೞ್ದ ದಿವ್ಯಧ್ವನಿಯೊಳಾಪರಮಯೋಗೀಂದ್ರನಿಂತೆಂದು ಬೆಸಸಿದಂ. ನಿನ್ನ ಬೆಸಗೊಂಡ ತತ್ವಮುಂ ಹೇಯೋಪಾದೇಯರೂಪಟಿಂ ದ್ವಿವಿಧಮಕ್ಕುಂ; ಅಲ್ಲಿ ಸಂಸಾರಕಾರಣಂಗಳ್ ಹೇಯಂಗಳ್; ಮುಕ್ತಿಕಾರಣಂಗಳುಪಾದೇಯಂಗಳ್. ಅವಱೊಳ್ ದ್ರವ್ಯಕ್ಷೇತ್ರಕಾಲಭವಭಾವಭೇದದಿಂ ಪಂಚವಿಧಂ ಸಂಸಾರಂ. ಅಲ್ಲಿ ಮಿಥ್ಯಾದರ್ಶನವಿರತಿಪ್ರಮಾದಕಷಾಯಯೋಗೋಪಾರ್ಜಿತಜ್ಞಾನಾವರಣಾದಿಕರ್ಮಂಗಳ್ ಸಂಸಾರಕಾರಣಂಗಳ್. ಅನಾದಿಬಂಧನಬಂಧದ್ರವ್ಯಭಾವಕರ್ಮವಿಗಮದಿನನಂತಜ್ಞಾನಾದಿನಿಜರೂಪಮಂ ಪಡೆವುದು ಮುಕ್ತಿ. ಸಮ್ಯಗ್ದರ್ಶನಚಾರಿತ್ರಂಗಳ ವಿಕಲ್ಪಂಗಳ್ ಮೋಕ್ಷಕಾರಣಂಗಳ್. ಅಲ್ಲಿ ತತ್ವಾರ್ಥಶ್ರದ್ಧಾನಂ ಸಮ್ಯಗ್ದರ್ಶನಂ; ಆತತ್ವಮುಂ ಜೀವಾಜೀವಾಸ್ರವಬಂಧಸಂವರನಿರ್ಜರಾಮೋಕ್ಷಭೇದದಿಂ ಸಪ್ತವಿಧಂ. ಪ್ರಮಾಣನಯನಿಕ್ಷೇಪಾನುಯೋಗಸದಾದಿಗಳಿಂ ನಿಶ್ಚಯಿಸಿದ ಸಪ್ತತತ್ವಂಗಳೊಳಗೆ ಚೇತನಾಲಕ್ಷಣಮಪ್ಪುದು ಜೀವತತ್ವಂ. ಆಜೀವತತ್ವಮುಂ ಸಂಸಾರಮುಕ್ತಿಭೇದದಿಂ ದ್ವಿವಿಧಮಕ್ಕುಂ. ಅಲ್ಲಿ ಮುಕ್ತಿಜೀವಮೇಕಪ್ರಕಾರಮೇ. ಸಂಸಾರಿಜೀವಂ ತ್ರಸಸ್ಥಾವರವಿಕಲ್ಪದಿಂದಿರ್ತೆಱನಕ್ಕುಂ. ಅಲ್ಲಿಯುಂ ತ್ರಸನಾಮಕರ್ಮೋದಯವಶಂಗಳ್ ತ್ರಸಕಾಯಂಗಳ್. ಸ್ಥಾವರನಾಮಕರ್ಮಪಾಕಾಧೀನಂಗಳ್ ಸ್ಥಾವರಂಗಳ್. ಸ್ಪರ್ಶನರಸನೇಂದ್ರಿಯೋಪೇತಂಗಳಪ್ಪ ಶಂಖಾದಿ ದ್ವೀಂದ್ರಿಯಗಳ್; ಸ್ಪರ್ಶನರಸನಘ್ರಾಣೇಂದ್ರಿಯಸಮನ್ವಿತಂಗಳಪ್ಪ ಪಿಪೀಲಿಕಾದಿ ತ್ರೀಂದ್ರಿಯಂಗಳ್; ಸ್ಪರ್ಶನರಸನಘ್ರಾಣಚಕ್ಷು

ರಿಂದ್ರಿಯಸಮನ್ವಿತಂಗಳಪ್ಪ ಮಧುಕರಾದಿ ಚತುರಿಂದ್ರಿಯಂಗಳ್ ; ಸ್ಪರ್ಶನರಸನಘ್ರಾಣಚಕ್ಷುಶ್ಶ್ರೋತ್ರೇಂದ್ರಿಯಸಮನ್ವಿತಂಗಳಪ್ಪ ಮನುಷ್ಯಾದಿ ಪಂಚೇಂದ್ರಿಯಂಗಳೆಂದಿಂತು ತ್ರಸಜೀವಂಗಳ್ ಚತುರ್ವಿಧಮಕ್ಕುಂ. ಸ್ಪರ್ಶನೇಂದ್ರಿಯಮಾತ್ರಂಗಳ್ ಸ್ಥಾವರಂಗಳೆಂಬುವು. ಅವು ಪೃಥಿವ್ಯಪ್ತೇಜೋವಾಯುವನಸ್ಪತಿಭೇದದಿಂ ಪಂಚವಿಧಂ. ಚೇತನಾರಹಿತಮಜೀವತತ್ವಂ. ಅದು ಗತಿಸ್ಥಿತ್ಯವಗಾಹಶರೀರಾದಿವರ್ತನಾಹೇತುಧರ್ಮಾಧರ್ಮಾಕಾಶಪುದ್ಗಲಕಾಲಭೇದದಿಂ ಪಂಚವಿಧಂ. ಶುಭಾಶುಭರೂಪಮನೋವಾಕ್ಕಾಯಪರಿಸ್ಪಂದಹೇತುಕಮಾಗಿ ಬರ್ಪ ಕರ್ಮದ ಬರವಾಸ್ರವಮೆಂಬುದು. ಕರ್ಮದ ಜೀವನ ಕ್ಷೀರನೀರನ್ಯಾಯಸಂಬಧಂ ಬಂಧಮೆಂಬುದು. ಶುಭಾಶುಭಪರಿಣಾಮಪ್ರಣಾಳಿಕೆಯಿಂ ಬರ್ಪ ಕರ್ಮಮಂ ಬರಲೀಯದೆ ಗುಪ್ತ್ಯಾದಿಗಳಿಂ ತಗುಳ್ವುದುಸಂವರೆಯೆಂಬುದು. ಯಥಾಕಾಲಾನುಭವನತಪೋನಿಮಿತ್ತಮಾಗಿ ಸವಿಪಾಕವಿಪಾಕರೂಪದಿಂ ಪೂರ್ವಾರ್ಜಿತಕರ್ಮನಿರ್ಜರಣಂ ನಿರ್ಜರೆಯೆಂಬುದು. ಮೂಲೋತ್ತರಾದಿಭೇದಭಿನ್ನಕರ್ಮಪ್ರಕೃತಿಗಳ ನಿರ್ಮೂಳೋಚ್ಛಿತ್ತಿ ಮೋಕ್ಷಮೆಂಬುದು. ಸಂಶಯವಿಪರ್ಯಯಸಾನದ್ಯಾವಸಾಯಸ್ವಭಾವರಹಿತಮಾಗಿ ಜೀವಾದಿಪದಾರ್ಥಯಾಥಾತ್ಮ್ಯಾವಗಮಂ ಸಮ್ಯಜ್ಞಾನಂ. ಅದು, ಮತಿಶ್ರುತಾವಧಿಮನಃಪರ್ಯಯಕೇವಲಜ್ಞಾನಭೇದದಿಂ ಪಂಚವಿಧಂ. ಸಂಸಾರಪರಿತ್ಯಾಗೋದ್ಯುಕ್ತಸಮ್ಯಜ್ಞಾನೋಪೇತಭವ್ಯಜೀವನ ಬಾಹ್ಯಾಭ್ಯಂತರಕ್ರಿಯಾನಿವೃತ್ತಿ ಸಮ್ಯಕ್ಚಾರಿತ್ರಮೆಂಬುದು. ಅದು ಸಾಮಾಯಿಕಚ್ಛೇದೋಪಸ್ಥಾಪನಾಪರಿಹಾರಶುದ್ಧಿಸೂಕ್ಷ್ಮಸಾಂಪರಾಯಯಥಾಖ್ಯಾತಚಾರಿತ್ರಭೇದದಿಂ ಪಂಚವಿಧಮೆಂದು ಹೇಯೋಪಾದೇಯತತ್ವಮಮನಱಿಪಿ ಮತ್ತಮಿವಕ್ಕಾಧಾರಭೂತಜಗತ್ರಯಾಂತಸ್ಥಿತೈಕೋನಪಂಚಾಶನ್ನರಕಪ್ರಸ್ತರಭವನವ್ಯಂತರಾವಾಸಾಸಂಖ್ಯಾತದ್ವೀಪಾಬ್ಧಿತ್ರಿಷಷ್ಟಿಸ್ವರ್ಗಪಟಲಂಗಳುಮಂ ವಿಸ್ತರಿಸಿ ತನ್ನಿವಾಸಿಗಳ ದೇಹಾಯುಃಪ್ರಮಾಣಂಗಳುಮಂ ಸುಖದುಃಖಾದಿಗಳುಮಂ ತೀರ್ಥಕರ ಚಕ್ರಧರ ಬಲದೇವ ವಾಸುದೇವ ಪ್ರತಿವಾಸುದೇವ ಕಥಾಸಂಬಂಧಮುಮಂ ನಿರ್ಣಯಂ ಮಾಡಿದಾಗಳ್,

ಸುರದನುಜಮನುಜವರಕಿ
ನ್ನರತಿರ್ಯಗ್ಗಣಮನೆಯ್ದೆ ತಿಳಿಪಿದುದರ್ಹ ।

ತ್ಪರಮೇಶ್ವರಗದಿತಮನೋ
ಹರಧರ್ಮಾಮೃತಮದಿರ್ದೊಡಮೃತಂ ಸವಿಯೇ ॥ ೬೦

ಬ್ರತಸಮ್ಯಕ್ತ್ವವಿಶುದ್ಧಿಯೊ
ಳತರ್ಕ್ಯಗುಣನೆಯ್ದೆ ನೆಱೆದು ಭರತೇಶ್ವರನೂ ।
ರ್ಜಿತಪುಣ್ಯನೊಪ್ಪಿದಂ ಶರ
ದೃತುವಿಕಸತ್ಕಮಳವನಸಲೀಲಶ್ರೀಯಿಂ ॥ ೬೧

ವ॥ ತದನಂತರಂ ಕುರುವಂಶಚೂಡಾಮಣಿಯೆನಿಸಿದ ಸೋಮಪ್ರಭನು ಮಾತನನುಜನಾದಿದಾನತೀರ್ಥಕರಪ್ರವರ್ತನಂ ಶ್ರೇಯಾಂಸನುಂ ಭರತೇಶ್ವರಾನುಜನನಂತವೀರ್ಯನುಂ ಭಟ್ಟಾರಕಪಾದಮೂಲದೊಳ್ ದೀಕ್ಷೆಯಂ ಕೈಕೊಂಡು ಗಣಧರರಾದರ್; ಬ್ರಹ್ಮಿಯುಂ ಸೌಂದರಿಯುಂ ಮತ್ತಂ ಪಿರ್ಕಿಗೆಯರ್ ವಿವಾಹವಿಮುಖೆಯರಾಗಿ ಗುರುಪ್ರಸಾದದಿಂ ದೀಕ್ಷೆಯಂ ಕೈಕೊಂಡು ಗಣಿನೀಗಣಪ್ರಧಾನೆಯರಾದರ್ ; ಮತ್ತಂ ಗೃಹಿತೋಪವಾಸಕವ್ರತಂ ಶ್ರುತಕೀರ್ತಿಯೆಂಬಂ ಶ್ರಾವಕಾಗ್ರಣಿಯಾದಂ ; ಪ್ರಿಯವ್ರತೆಯೆಂಬೊಳಣುವ್ರತಗ್ರಹಣದಿಂ ಶ್ರಾವಿಕಾಪುರಸ್ಸರೆಯಾದಳ್ ; ಭರತರಾಜಪುತ್ರಂ ಮರೀಚಿಯೊರ್ಬನುೞಿಯೆ ಮುನ್ನಂ ಭಗ್ನರಾದ ಕಚ್ಛಮಹಾಕಚ್ಛಾದಿಗಳ ರ್ದ್ರೂಪಮಂ ಕೈಕೊಂಡರ್; ಅನಂತವೀರ್ಯನೀಕ್ಷೇತ್ರದೊಳನೇಕಕಾಲಂ ಪರಾಮೃಷ್ಟಮಾದ ಮುಕ್ತಿಮಾರ್ಗಮಂ ಮುನ್ನಮೆ ಸಮುಱುವೆನೆಂಬಂತೆ ಮೋಕ್ಷಲಕ್ಷ್ಮೀವಲ್ಲಭನಾದಂ ; ಭರತೇಶ್ವರನುಂ ಬಾಹುಬಲಿಕುಮಾರನುಂ ಜಿನೇಶ್ವರಪಾದಪದ್ಮಂಗಳ್ಗೆಱಗಿ ನಿಜರಾಜಧಾನಿಗಳ್ಗೆ ಪೋದರ್. ಇತ್ತ ಸಾಧರ್ಮೇಂದ್ರನುಂ ಧರ್ಮಚಕ್ರವರ್ತಿತ್ವಕ್ಕೆ ದಿಗ್ವಿಜಯಮೆನಿಸಿದ ಭಗವದ್ವಿಹಾರಮನವಧಿಯಿಂದಮಱಿದು, ಅದನೆ ಪುನರುಕ್ತಂ ಮಾೞ್ಪಂತೆ,

ದೇವ ವಿನಯೋತ್ಕರಂ ಸ
ಸ್ವ್ಯಾವಳಿ ಸುಗಿದುಗಿದು ಕೂಡೆ ಬಾಡಿರ್ದುದು ಪಾ ।
ಪಾವಗ್ರಹದಿಂದದನಖಿ
ಳಾವನಿತಳಕಂತು ತಳಿಯ ಧರ್ಮಾಮೃತಮಂ ॥ ೬೨

ಮಿಳಿರೆ ದಯಾಧ್ವಜಮುನ್ನತಿ
ಗೊಳಗಾಗಿರೆ ಧರ್ಮಚಕ್ರಮಾಯುತಿಯಂ ಕೈ ।

ಕೊಳೆ ಭವ್ಯವರೂಥಿನಿ ನಿ
ರ್ಮಳ ನಿನ್ನ ವಿಹಾರಮಾರನೇನೆಱಗಿಸದೋ ॥ ೬೬

ವ॥ ಎಂದು ದೇವೇಂದ್ರನಾದಿಜಿನೇಂದ್ರಂಗೆ ಬಿನ್ನಪಂಗೆಯ್ಯಲೊಡಮನೇಕಭವ್ಯಕೋಟಿಯ ಪುಣ್ಯಪ್ರೇರಣೆಯಿಂದಂ ಸಮವಸರಣಮಂಡಳಂ ಗಗನಮಂಡಳದೊಳ್ ನಡೆಯೆ ಮರುತ್ಕುಮಾರಸಮ್ಮಾರ್ಜಿತಯೋಜನಾಂತರಿತರಮ್ಯಭೂಮಿಭಾಗನುಂ, ಮೇಘಕುಮಾರಸಂಸಿಕ್ತಪ್ರಶಮಿತರಜಃಪ್ರಸರಧರಣೀತಳನುಂ, ಪರಿಪಕ್ವಗಂಧಶಾಲಿವನವಿರಾಜಮಾನವಸುಧಾಸೂಚಿತಾಗಮನನುಂ, ಪ್ರಸನ್ನದಿಕ್ಕನ್ಯಾನನಸಮುದ್ದಿಷ್ಟಾತ್ಮಸನ್ನಿಧಾನನುಂ, ಧೌತಾಸಿನಿಭನಭೋಮಂಡಳನುಂ, ಜನಿತಜಗಜ್ಜನಾನಂದನುಂ, ಸಮಸ್ತಜನಮೈತ್ರೀಸಮೇತನುಂ, ಸಕಳರ್ತುಕುಸುಮಪಲ್ಲವಫಳವಿಳಸಿತತರು ನಿರಂತರಿತರತ್ನಮಯದರ್ಪಣಪ್ರತಿಮಾವನೀತಳವಿಳಾಸನುಂ, ಅನುಕೂಲಶಿಶಿರಸುರಭಿಮಂದಾನಿಲನುಂ, ಅನ್ಯೋನ್ಯಾಹ್ವಾನನಿರತದಿವಿಜನಿನದಪೂರಿತಸಕಳಗಗನತಳನುಂ, ಆದರ್ಶಾದ್ಯಷ್ಟಮಂಗಳಧ್ವಜಮಾಳಾವಿತಾನವಿಚಿತ್ರಾಂಬರನುಂ, ಸಹಸ್ರದಿನಕರಕರಸ್ಪರ್ಧಿಸಹಸ್ರಾರಧರ್ಮಚಕ್ರಪುರಸ್ಸರನುಮಾಗಿ,

ಶಕ ಕಾಶ್ಮೀರಾಂಧ್ರ ಕರ್ನಾಟಕ ಮಗಧಯವಾವಂತಿ ಪಾಂಚಾಳ ಸೌರಾ
ಷ್ಟ್ರ ಕಳಿಂಗಾಭೀರ ಸೌವೀರಕ ಕುರು ಕರಹಾಟಾಂಗ ಗಾಂಧಾರ ವಂಗಾ।
ಶ್ಮಕ ಬಾಹ್ಲೀಕಾದಿ ದೇಶಂಗಳ ಸಕಳವಿನೇಯೋತ್ಕರಕ್ಕೆಲ್ಲಮತ್ಯು।
ತ್ಸುಕಮಂಮಾಡುತ್ತುಮಿರ್ದಂ ಸುಕವಿಜನಮನೋಮಾನಸೋತ್ತಂಸಹಂಸಂ

ವ॥ ಅಂತು ಧರ್ಮಕ್ಷೇತ್ರಂಗಳಂ ವಿಹಾರಿಸಿ ವಿನೇಯಜನಾಶಯಕುಶೇಶಯಂಗಳನಲರ್ಚುತುಂ ಬಂದು,

ಪರಮಾನಂತಚತುಷ್ಟಯೈಕನಿಳಯಂ ಶ್ರೀಮತ್ಸಭಾಮಂಡಳಾಂ
ತರಸಿಂಹಾಸನಸುಸ್ಥಿತಂ ಗಣವೃತಂ ಚಂಚಚ್ಚತುಷ್ಷಷ್ಟಿಚಾ।
ಮರವಿಭ್ರಾಜಿತನಾನತತ್ರಿಭುವನಂ ಕುಂದೇಂದುದುಗ್ಧಾಬ್ಧಿಪಾಂ
ಡುರಕೈಲಾಸನಗೇಂದ್ರದೊಳ್ ನೆಲಸಿದಂ ಸಂಸಾರಸಾರೋದಯಂ ॥ ೬೭

ಆದಿಪುರಾಣದೊಳ್ ಕೇವಲಜ್ಞಾನೋತ್ಪತ್ತಿಪ್ರಕರಣಂ ದಶಮಾಶ್ವಾಸಂ ಸಂಪೂರ್ಣಂ.

ಏ ಕಾ ದ ಶಾ ಶ್ವಾ ಸಂ.

ಶ್ರೀಪರಿಪೂರ್ಣಂ ಭರತಮ
ಹೀಪಾಳಂ ಚಕ್ರಪೂಜೆಗೆಯ್ದಂ ಸಕಳ ।
ಕ್ಷ್ಮಾಪಶಿರೋರತ್ನಾಂಶು
ವ್ಯಾಪಿತಚರಣಂ ಸರಸ್ವತೀಮಣಿಹಾರಂ ೧

ವ॥ ಆಗಳ್

ನೆಲನಾಕಾಶಂ ದಿಶಾಮಂಡಲಮೆನಿತನಿತುಂ ಚಕ್ರವರ್ತಿಪ್ರತಾಪಾ
ನಲತೀವ್ರಜ್ಯೋತಿಯಿಂ ಪರ್ವುವುದನಿದುವೆ ಪೇೞ್ದಪ್ಪುದೆಂಬಂತಿರೌರ್ವ ।
ಜ್ವಲನಜ್ವಾಳಾಕಳಾಪೋದ್ಗಮಮನನುಗುಣಂಮಾಡುತುಂ ದ್ವಾದಶಾರ್ಕೋ
ಜ್ಜ್ವಲತೇಜಶ್ಚಕ್ರರೂಪಂ ಬೆಳಗಿದುದು ದಿಶಾಚಕ್ರಮಂ ಚಕ್ರರತ್ನಂ ॥ ೨

ಅದು ದೇವಲೋಕದಂತೊ
ಪ್ಪಿದುದು ಸಹಸ್ರಾರಸಹಿತಮದು ಚಕ್ರಿಯ ತೇ ।
ಜದ ಜಸದವಾರ್ಯವೀರ್ಯದ
ಪೊದೞ್ದ ಭುಜವೀರ್ಯದೊಂದು ರೂಪನೆ ಪೋಲ್ಕುಂ ॥ ೩

ವ॥ ಆಸುದರ್ಶನಮೆಂಬ ಚಕ್ರರತ್ನಮಂ ಪೂಜಿಸಿಂಬೞಿಯುಂ ದ್ವಾದಶ
ಯೋಜನಾಯಾಮದೊಳಂ ನವಯೋಜನವಿಸ್ತಾರದೊಳಂ ಬೀಡಂ ಬಿಡುವ
ಚಕ್ರವರ್ತಿಯ ಕಟಕಮಂ ತನ್ನ ನೆೞಲೊಳ್ ಕಾವ ಸೂರ್ಯಪ್ರಭಮೆಂಬ
ವಿಚಿತ್ರಮಣಿಮಯೂಖಚಿತ್ರಿತಚ್ಛತ್ರರತ್ನಮುಮುತ್ಖಾತಮಾತ್ರವಿತ್ರಸ್ತ
ಸಮಸ್ತಾರಿಮಂಡಲಮುಂ ವೀರಲಕ್ಷ್ಮೀಕರ್ಣಪೂರನೀಳೇಂದೀವರಶ್ಯಾಮ
ಳಮುಮಪ್ಪ ಸೌನಂದಕಮೆಂಬ ಖಡ್ಗರತ್ನಮುಂ, ವಿಜಯಾರ್ಧಾಚಳಮ
ಹಾಗುಹಾಗಹ್ವರಮುಖವಜ್ರಕವಾಟಪುಟವಿಘಟನಪಟುವಪ್ಪ ಚಂಡವೇಗ
ಮೆಂಬ ದಂಡರತ್ನಮುಂ, ಅಗಾಧಜಲದುರ್ಗಸಮುತ್ತರಣನಿರತಸಕಳಶಿಬಿ
ರಸಂಧಾರಣಶಕ್ತಿಯುಕ್ತಮಪ್ಪ ವಜ್ರಮಯಮೆಂಬ ಚರ್ಮರತ್ನಮುಂ,
ಚಕ್ರವರ್ತಿಯ ಮಣಿಮಕುಟಶಿಖರಾಯಮಾನಮಪ್ಪ ಚೂಡಾಮಣಿಯೆಂ
ಬ ಮಣಿರತ್ನಮುಂ, ಮಹಾಗುಹಾಗಹ್ವರಾಂತರಸೂಚಿನಿರ್ಭೇದ್ಯತಮಸ್ತ
ಮೋ ನಿರಸನಪ್ರಭಾಪ್ರಭೂತಗುಣೋಪೇತಮಪ್ಪ ಚಿಂತಾಜನನಿಯೆಂಬ
ಕಾಕಿಣಿರತ್ನಮುಂ, ನಾಮಗ್ರಹಣಮಾತ್ರದಿಂದಮೆ ಸಮಸ್ತವಸ್ತುವಿಸ್ತಾ

ರಾಂತರ್ನಿಹಿತವಸ್ತುಸಮರ್ಪಣಪರಾಯಣನಪ್ಪ ಕಾಮವೃಷ್ಟಿಯೆಂಬ ಗೃಹಪತಿರತ್ನಮುಂ, ಮ್ಲೇಚ್ಛರಾಜಸೇನಾಪತಿಚ್ಛದಮದಾವಲೇಪಪರಿಲೋಪವಿಳಾಸಿಯುಂ ಷಡ್ವಿಧಸೇನಾನಾಯಕಪರಾಯಣನುಮಪ್ಪಯೋಧ್ಯನೆಂಬ ಸೇನಾನಿರತ್ನಮುಂ, ಮಹಾನದಾವಗಾಹನಸಮಯನೌದ್ರೋಣಿಸಂಕ್ರಮಾದಿವಿಧಾನಪ್ರಾಗಲ್ಭ್ಯನುಂ ಅನುಸ್ಮರಣಮಾತ್ರನಿಷ್ಪಾದಿತಸಪ್ತತಳಾವಿಪ್ರಾಸಾದಪ್ರಕರನುಮಪ್ಪ ಭದ್ರಮುಖನೆಂಬ ತಕ್ಷಕರತ್ನಮುಂ, ಶಾಂತಿಕಪೌಷ್ಟಿಕಕ್ರಿಯಾಕುಶಲನುಂ ಧರ್ಮಕಾರ್ಯಾದಿಕುಶಲನುಮಪ್ಪ ಬುದ್ಧಿಸಾಗರನೆಂಬ ಪುರೋಹಿತರತ್ನಮುಂ, ಕಾಮರೂಪಿಯುಂ ಕಾಮಚಾರಿಯುಮಪ್ಪ ವಿಜಯಾರ್ಧಪರ್ವತಮೆಂಬ ಯಾಗಹಸ್ತಿರತ್ನಮುಂ, ಪವನವೇಗನಿವರ್ತನನಿರೂಪಣಮುಂ ದ್ವಾದಶಯೋಜನೋಲ್ಲಂಘನರಹೋನಿವಾಸಭೂಮಿಯುಮಪ್ಪ ಪವನಂಜಯಮೆಂಬ ತುರಗರತ್ನಮುಂ, ಮನೋಹರಮುಮಪ್ಪ ಸ್ತ್ರೀರತ್ನಮುಮೆಂದಿಂತು ಜೀವಾಜೀವರತ್ನಂ ಬೇಱುವೇಱು ಸಹಸ್ರಯಕ್ಷರಕ್ಷಿತಂಗಳಪ್ಪುವಂ,

ಪೂಜಿಸಿ ಪೊಱಮಟ್ಟಗ್ರತ
ನೂಜೋತ್ಪತ್ತ್ಯುತ್ಸವಕ್ಕೊಡರ್ಚುವ ಪದದೊಳ್ ।
ರಾಜಾಧಿರಾಜನಮರವ
ಹೀಜದ ಲೀಲೆಯನೆ ಲೀಲೆಯಿಂ ಕೈಕೊಂಡಂ ॥ ೪

ಮಲೆಪರ್ಗಭಿಚಾರಕ್ರಿಯೆ
ವಲಮೆನಿಸಲ್ ಚಕ್ರಿ ಪೂಜ್ಯನುಂ ಸಕಳಮಹೀ ।
ವಳಯಕ್ಕೆ ಶಾಂತಿಕರ್ಮಂ
ಬಲಮೆನಿಸಲ್ ಜಾತಕರ್ಮಮೇಂ ನೆಱೆದತ್ತೋ ॥ ೫

ವ॥ ಅಂತು ಭರತೇಶ್ವರಚಕ್ರವರ್ತಿ ಚಕ್ರಪೂಜಾಗ್ರತನೂಜಜಾತಕರ್ಮೋತ್ಸವನಿರ್ವರ್ತನಾತಿಪ್ರೀಣಿತಾಂತಃಕರಣನಾಗಿರ್ಪನ್ನೆಗಮಾತನತೀವ್ರಪ್ರತಾಪಮೆ ತನ್ನೊಳ್ ಸಂಕ್ರಮಿಸಿದಂತೆ ದಿನಕರಕಿರಣಂಗಳೊಳ್ ಪಳಚ್ಚನಪ್ಪ ಪೊಳೆಪುಂ, ಆತನ ಬೆಳ್ಗೊಡೆಯ ಪಜ್ಜಳಿಸುವ ಪಜ್ಜಳಿಕೆಯೆ ತನ್ನೊಳಪೊಕ್ಕಂತೆ ಚಂದ್ರಮಂಡಲಕುಚ್ಚಮಾಗೆ ಪಳಚ್ಚನಪ್ಪ ಬೆಳ್ದಿಂಗ

ಳುಂ, ಆತನ ದಿಗ್ವಿಜಯದೊಸಗೆಯೊಳ್ ದಿಗಂಗನೆಯುರೆತ್ತಿದ ಬೆಳ್ಳಿಯ ಕಳಶಂಗಳಂತೆ ತಳದಳಸಿ ಪೊಳೆವ ಬಿಳಿಯ ಮುಗುಳ್ಗಳುಂ, ಆತನ ಬರವಿನುತ್ಸವಕ್ಕೆ ಸಂತಸಂಬಟ್ಟು ಮಹೀಲಲನೆಯ ನಗೆಮೊಗದಂತೆ ತಿಳಿದ ಕೊಳಂಗಳುಂ, ಆತನಂತಃಪುರಕಾಂತೆಯರ ನಗೆಮೊಗದ ನಗೆಗಣ್ಗಳ ಬೆಡಂಗನೆ ಕಿಱುನಗೆನಗುವಂತೆ ಮೆಲ್ಲಮೆಲ್ಲನುಳ್ಳಲರ್ವ ಮಹೋತ್ಪಳನೀಳೋತ್ಪಳಂಗಳುಂ, ಆತಂಗೆ ತುಱುಂಗಲುಂ ಬಂಬಲುಮಾಗೆ ಬೀಸುವ ಚಾಮರದ ಪೊಳೆಪುಗಳೇ ದೆಸೆದೆಸೆಗೆಸೆವಂತೆ ಪಸರಿಸಿ ನೆಗೆವದ ರಾಜಹಂಸಗಳುಂ, ಆತನ ಪಡೆಗೆ ನಡೆಯಲೆಡೆಮಾಡಿದಂತೆ ಬಳ್ವಳಾದ ದೆಸೆಗಳುಂ, ಆತನ ವಿಜಯಾರ್ಥ ಸೈನ್ಯಕ್ಕೆ ತಡೆಯದೆ ಪಾಯಲ್ಕೆ ವೇೞ್ಕುಮೆಂಬಂತೆ ನೆಲೆಮಾಡಿದ ಮಹಾನದೀನದಗಂಳುಂ, ಆತನ ವಿಜಯಕಟಕಮದಸಿಂಧುರಬಂಧುರಮದಗಂಧಮನೆತ ನಗೆ ಪಡೆವಂತೆ ದೆಸೆದೆಸೆಗೆ ಪೊಣ್ಮುವ ಸಪ್ತಚ್ಛದವನಂಗಳುಂ ತನ್ನ ಬರವಂ ಪ್ರಕಟಂಮಾಡೆ,

ಪೊಸಜಾದಿಯ ಬೆಳೆದೊಱಗಿದ
ಪೊಸಗಱಮೆಯ ಪೊಸತರಲ್ದ ತಾವರೆಗಳ ಕಂ ॥
ಪಸದಳಮೆಸೆದಿರೆ ದೆಸೆದೆಸೆ
ಗೊಸಗೆಯೆ ಬರ್ಪಂತೆ ಕಣ್ಗೆ ವಂದುದು ಶರದಂ ॥ ೬

ಖರಕಿರಣಂಗಳ ಕಾಯ್ಪಿನ
ಕರತನದಿಂ ಚಂದ್ರಕಿರಣದುಜ್ವಳಕೆಯಿನಾ ।
ಭರತನ ಮುಳಿಸೊಸಗೆಯನನು
ಕರಿಸಿದುದೇಂ ಚಕ್ರವರ್ತಿವೃತ್ತಮೊ ಶರದಂ ॥ ೭

ಸುರಿದಪುದು ಮುಗಿಲ ಮುತ್ತಿನ
ಸರಿ ಗಗನದಿನೆನಿಸಿ ಪೊಳೆವುವೆಳವಿಸಿಲೊಳ್ ಬೆ ।
ಳ್ಸರಿ ತೋರವನಿಯ ಪುದುವಿನೊ
ಳರಲ್ದ ತಿಳಿಗೊಳನೆ ನಭದೊಳಚೆದಂತಿರ್ಕುಂ ॥ ೮

ಕಾಂತಿಯೊಳ್ ಪುದಿದು ಬೆಳಪ ಬೆ
ಳಂತಿಗೆ ಬೆಳ್ದಂಗಳಲರ್ದ ಪೊಸಜಾದಿ ದಿಶಾ ।

ಕಾಂತೆಯು ಬೆಳ್ಪಸದನೆದದ
ಗುಂತಿಯನೇಂ ತನಗೆ ನಾಡೆಯುಂ ಮಾಡಿದುದೋ ॥ ೯

ವ॥ ಅಂತು ತನ್ನ ದಿಗ್ವಿಜಯೋದ್ಯೋಗಕ್ಕುಪಯೋಗಿಯಾಗಿ ಬಂದ ಶಾರದಶ್ರೀಯುನಿದಿರ್ಗೊಂಡನೇಕಗಣಕಗಣಗಣಿತಶುಭದಿನನಕ್ಷತ್ರಮುಹೂರ್ತದೊಳ್ ದಿಗ್ವಿಜಯಪ್ರಯಾಣಭೇರಿಯುಂ ಪೊಯ್ಸಿದಾಗಳ್,

ಸಮುದಾರಾತಿಮರಾಳನೀರದರವಂ ಸಂಕ್ರುದ್ಧವೈವಸ್ವತೋ
ಪಮವಿದ್ವಿಷ್ಟಫಣೀಂದ್ರಚಂದ್ರಕರವಂ ದೋರ್ದಂಡಕಂಡೂಯದು ।
ರ್ದಮವೈರಿದ್ವಿರದೇಂದ್ರಕೇಸರಿರವಂ ತಾನೆಂಬಿನಂ ವ್ಯೋಮಭಾ
ಗಮನೆಯ್ದಿರ್ದುದು ಚಕ್ರವರ್ತಿವಿಜಯಪ್ರಸ್ಥಾನಭೇರೀರವಂ ॥ ೧೦

ವ॥ ಆವಿಜಯಪ್ರಸ್ಥಾನಭೇರೀನಿನಾದಾನಂತರಮೆ ಶಾರದನೀರದನಿಕಾಶವಿಶಾಲಧವಳದುಕೂಲಾಂಬರವಿರಾಜಮಾನನುಂ, ಚಂದ್ರಾತಪಪಾಂಡುರಹರಿಚಂದನಾನುಲಿಪ್ತಗಾತ್ರನುಂ, ಅಭಿನವವಿಳಸಿತಮಾಳತೀಮಾಳಾಪರಿಷ್ಕೃತಮಕುಟನುಂ, ಅಪೂರ್ವದೂರ್ವಾಪ್ರವಾಳಾಲಂಕೃತಕರ್ಣಪೂರನುಂ, ಗೋರೋಚನಾರಚಿತವಿಚಿತ್ರತಿಳಕವಿಳಸಿತಲಲಾಟನುಂ, ತಾರಾತರಳಮುಕ್ತಾಫಳಕಲಿತಜಾನುಲಂಬಿತಬ್ರಹ್ಮಸೂತ್ರನುಂ, ಇಂದ್ರಚಾಪವಿಳಾಸೋಪಹಾಸಿರುಂದ್ರೇಂದ್ರಚ್ಛಂದಹಾರಾಭಿರಾಮವಿಶಾಳವಕ್ಷಸ್ಸ್ಥಳನುಂ, ಪುರೋಹಿತೋಚ್ಚಾರ್ಯಮಾಣಪುಣ್ಯಾಶೀರ್ವಚನನಿಘೋಷದತ್ತಕರ್ಣನುಮಾಗಿರ್ದಾಗಳ್,

ದಕ್ಷಿಣಭುಜಮಚಿರಪ್ರತಿ
ಪಕ್ಷಮಹೀಪಾಲವಿಜಯಲಕ್ಷ್ಮೀಲಲನಾ ।
ವಕ್ಷೋಜಸ್ಪರ್ಶನಮನ
ನಕ್ಷರಮುಱಿಪಿದುದು ಪತಿಗಮುಂದಸ್ಪಂದಂ ॥ ೧೧

ಅರಿಮಕುಟರತ್ನಮುಂ ನಿಜ
ಚರಣಕ್ಕಘೃಪ್ರದೀಪಮಾಗಿಪ್ಪುದನಾ ।
ಭರತೇಶ್ವರಂಗೆ ಕಾಣ್ಬಂ
ತಿರೆ ಸೂಚಿಸಿದತ್ತು ದಕ್ಷಿಣಾಕ್ಷಿಸ್ಪಂದಂ ॥ ೧೨

ವ॥ ಆಗಳ್ ನಿಜಸ್ಥಪತಿರತ್ನಪ್ರಯತ್ನನಿರ್ಮಿತಮುಂ, ಕುಮುದದಳಧವಳಮನೋಜವಕಾಮಚಾರಿಸ್ಥೂಲಪೃಷ್ಠಯೋಜಿತಮುಂ, ಅನುಕೂಲಶೂರರಥಕಲ್ಪಪರಿಣತರರಥಚೋದಕಪರಿಭ್ರಾಜಿತಮುಂ ಆಗಿ,

ಬದವಿದ ಚಕ್ರರತ್ನದೊಳದೊಂದೆಣೆಯಾಯ್ತೆನಿಸಿರ್ದ ಚಕ್ರಯು
ಗ್ಮದಿನಮರ್ದಚ್ಚು ವಜ್ರಮಯಮಾಗೆ ಕನನ್ಮಣಿಮೌಕ್ತಿಕಪ್ರಭಾ।
ಸ್ಪದಮಮರೇಂದ್ರರುಂದ್ರಗಿರಿಕುಂಜವಿಚಂಚಳಕೇತನಾಳಿ ಕ
ಟ್ಟದಿರೊಳ್ ಬಂದು ನಿಂದುದಜಿತಂಜಯಮಾತ್ತಮನೋರಥಂ ರಥಂ ॥ ೧೩

ವ॥ ಆಗಳ್ ಮೌಹೂರ್ತಿಕರ್ ಬಂದು ದೇವಾ ವಿಜಯಪ್ರಸ್ಥಾನಲಗ್ನಂ ಸಾರೆವಂದುದೆಂದು ಬಿನ್ನಪಂಗೈದಾಗಳ್,

ರೋದೋಂತರ್ಭಾಗದೊಳ್ ದುಂದುಭಿಗಳೆಸೆಯೆ ಮಾಂಗಲ್ಯಗೀತಪ್ರಣಾದಂ
ವಾದಿತ್ರಧ್ವಾನದೊಳ್ ಸಂದಣಿಸೆ ಗುರುಜನೋದ್ಗೀತನಾನಾವಿಧಾಶೀ।
ರ್ವಾದಂ ಶೇಷಾಕ್ಷತಂಗಳ್ ವೆರಸೆಯೆ ಮಹಾವಂದಿವೃಂದಾಂತಮಾಲಾ
ನಾದಂ ಗಂಭೀರನಾದಂ ನೆಗೞ್ದಿರೆ ತಳರ್ದಂ ರಾಗದಿಂ ಸಾರ್ವಭೌಮಂ ॥

ವ॥ ಅಂತು ತಳರ್ದು ಕೃತಪ್ರಸ್ಥಾನವಿವಿಧಮಂಗಳವಿಧಾನೋಚ್ಛ್ರಿತಚಿತ್ರಾತಪತ್ರಧೋಧೂಯಮಾನಧವಳಚಾಮರಸಹಸ್ರಸಂಛಾದಿತಸಹಸ್ರಕರಪ್ರಭಾಪ್ರಸರರಥಮನೇಱಿ ಮಹಾಮಕುಟಬದ್ಧಪರಿವೃತಂ ರಾಜಭವನಮಂ ಪೊಱಮಟ್ಟು ಚಂಚತ್ಪಂಚರತ್ನತೋರಣಾಲಂಕೃತರಾಜಮಾರ್ಗದಿಂ ಬರ್ಪಾಗಳ್,

ದಿಶಾಯುವತಿಕೇಳಿಕೀರ್ಣಪಟವಾಸಚೂರ್ಣಂ ಜಗ
ತ್ಕುಶೇಶಯನಿವಾಸಿನೀಪ್ರಮದಮುಷ್ಟಿ ಪಿಷ್ಟಾತಕಂ।
ವಿಶಾಲತರತುಂಗಸೌಧತಳಸಂಗಿಪೌರಾಂಗನಾ
ವಶೀಕರಣಚೂರ್ಣಮಾದುದು ಬಳೌಘಧೂಳೀಚಯಂ ॥ ೧೫

ವ॥ ಅಂತು ಬರ್ಪಾಗಳಂಗಜವಿಜಯಕದಳಿಕಾವಿಳಾಸಮಂ ತಾಳ್ದಿ,

ನೊಸಲಂ ತೊಂಗಲ್ಗುರುಳ್ ಮೇಲುದನೊಗೆವ ಕುಚಂ ಬೆನ್ನನಾನೀಳಕೇಶಪ್ರಸರಂ ಚೆಲ್ವಿಂ ಪೊದಪ್ಪೊಳ್ಳಿಱಿಯನೆಡದ ತೋಳ್ ಸೋಗೆಯಂ ನೂಲ

ತೊಂಗಲ್,

ಲ್ದಿಸೆಯುಂ ಕಣ್ಕೆನ್ನೆಯುಂ ಭ್ರೂಲತಿಕೆಗಳುರವುಂ ಸಂಚಳತ್ತಾರಹಾರಂ
ಪಸರಂಬೆತ್ತಿತ್ತವೋರಂತಲೆಯೆ ಭರತನಂ ನೋಡಲೈತಂದಳೊರ್ವಳ್ ‖

ವ‖ ಮತ್ತೊರ್ವಳುತ್ತುಂಗಸೌಧೋತ್ಸಂಗದೊಳ್ ನಿಂದು ಮನುವಂಶಧ್ವಜನಂ ಮಕರಧ್ವಜನೆಂದು ಬಗೆದು,

ಇದು ನಿನ್ನರ್ಚಿಸುವಿಕ್ಷುಚಾಪವಿದು ನಿನ್ನೀಲೋಕಮಂ ಕೈಗೆ ಮಾ
ಡಿದ ಪುಷ್ಪಾಸ್ತ್ರಮಿದಲ್ತೆ ನಿನ್ನ ವಿಜಯಪ್ರಾರಂಭದೊಳ್ ತೋರ್ಕೆಗೆ ।
ತ್ತಿದ ಜೈತ್ರಧ್ವಜಮೆಂದು ತೋರ್ಪ ತೆಱದಿಂ ಭ್ರೂಲಾಸ್ಯಮಂ ನೀಳ್ದಪಾಂ
ಗದ ಬೆಳ್ದಿಂಗಳನೆಡ್ಡಮಪ್ಪ ಕಬರೀವಿಸ್ತಾರಮಂ ತೋಱಿದಳ್ ‖ ೧೭

ವ‖ ಮತ್ತಮೊರ್ವಳುತ್ತುಂಗಪ್ರಾಸಾದೋಪರಿಮತಳದೊಳ್ ನಿಂದು,

ವಿಶದೋಜ್ಜೃಂಭಿತಯೌವ್ವನಾಸವಮದಪ್ರೋಲ್ಲಾಸದಿಂ ಚಿತ್ತಭೂ
ವಶೆಯೊರ್ಬಳ್ ಮನುವಂಶಚಂದ್ರಮುಖಚಂದ್ರಾಲೋಕದಿಂ ಚಂದ್ರಕಾಂ
ತಶಿಲಾಪುತ್ರಿಕೆಯಂತೊಸರ್ತು ಕೊಳಗೊಂಡಾನೀರೊಳರ್ದಿರ್ದು ಚಿ
ತ್ತಶಯಾಕ್ರೀಡಸರೋವತೀರ್ಣರತಿಯೊಂದಾಕಾರಮಂ ತಾಳ್ದಿದಳ್ ‖ ೧೮

ವ‖ ಮತ್ತಮೊಂದೆಡೆಯೊಳೊರ್ವಳ್,

ವಿವಿಧಾತೋದ್ಯಲಯಾನುಬಂಧಿವಿಳಸಲ್ಲಾಸ್ಯಂ ತಗುಳ್ದಲ್ಲಿ ನಾ
ಟ್ಯವಿದರ್ ತಾಂಗೆಯುಮೇಱಿ ನೃತ್ಯಗೃಹಮಂ ಚಕ್ರೇಶ್ವರೋದ್ದಾಮರೂ ।
ಪವಿಳೋಕಾಮೃತತೃಪ್ತಲೋಚನಮನಸ್ಸಂಕಲ್ಪಸಂಭೋಗಸಂ
ಭವಘರ್ಮಾಂಬುಗಳಿಂದಮಿರ್ಮಡಿಸಿದಳ್ ನೃತ್ಯಶ್ರಮಸ್ವೇದಮಂ ‖ ೧೯

ವ‖ ಮತ್ತೊರ್ವಳ್,

ಸಮಾಕುಳಗತಿಸ್ಖಲಚ್ಚ್ಛಳನಸಂಚಳತ್ತಾರಹಾ
ರಮುಂ ತಳದೊಳೊತ್ತುವೊಂದು ನೆವದಿಂದನಂಗಾಸ್ತ್ರವಿ ।
ದ್ಧಮಂ ಪಡೆದು ಗೂಡುವಾಯ್ವೆರ್ದೆಯನೊತ್ತಿ ನಿಷ್ಕಂಪಪ
ಕ್ಷ್ಮಮಾಂತು ತರಳಾಕ್ಷಿ ವಿಸ್ಮಯದೆ ಚಕ್ರಿಯಂ ನೋಡಿದಳ್ ‖ ೨೦

ವ‖ ಮತ್ತಮೊರ್ವಳ್ ಅಭಿನವಯೌವ್ವನಾಸವಮದವಿಳಾಸನಿರಂಕುಶೆ ಕುಂಕುಮಪಂಕಾಂಕಿತೋಚ್ಚಕುಚಯುಗಳಮೆ ಸಿಂದೂರಿತಮಸ್ತಕಪಿಂಡಮುಂ

ಡಲಮವಿರಳಚಳತ್ಕಾಂಚೀಕಳಾಪಮಣಿಕಿಂಕಿಣೀಗಣಝುಂಕಾರಮೆ ಮದಡಿಂಡಿಮರವಾಡಂಬರಮಾಳೆೞಳತುಳಾಕೋಟಿತಳಕ್ವಣಿತಮೆ ನಿಗಳಾಂದುಕಾರವಮಾಗೆ,

ಸಮದಂ ಯಾನಮೆ ಮಂದಮಂದಗಮನಂ ಕಸ್ತೂರಿಕಾಪಂಕಪ
ಟ್ಟಮೆ ಧಾರಾಮದಪಟ್ಟಮಾಯ್ತು ನಿಪಿನಂ ಸೇನಾಮನೋಮರ್ದನೋ ।
ದ್ಯಮದಿಂದಂಗಜಚಕ್ರವರ್ತಿಯ ಗಜಂ ವಾರಾಂಗನಾರೂಪದಿಂ
ದಮೆ ಬರ್ಪಂತಿರೆ ಬಂದು ಚಕ್ರಧರರೂಪಾಶ್ಚರ್ಯಮಂ ನೋಡಿದಳ್ ‖ ೨೧

ವ॥ ಮತ್ತೊರ್ಬಳ್ ನಿಜಪ್ರಸಾಧನಗ್ರಹಣಪ್ರಸ್ತಾವದೊಳ್,

ಪಿರಿದೊಂದುತ್ಸುಕಭಾವದಿಂ ಸರಿಗೆಯಂ ಕಾಲೊಳ್ ಕಟೀಸೂತ್ರಮಂ
ಕೊರಲೊಳ್ ಚಂಪಕಮಾಲೆಯಂ ಕನಕಕಾಂಚೀಸ್ಥಾನದೊಳ್ ರತ್ನನೂ ।
ಪುರಮಂ ಕೈಗಳೊಳಾಗಳಾಗಳೆ ತೊಡರ್ಚುತ್ತುಂ ಜನಂ ಕೂಡೆ ಕ
ವ್ವರೆಗೊಂಡೆಯ್ತರೆ ನೋಡಲೆಂದು ಪರಿದಳ್ ಚಕ್ರೇಶಸೌಂದರ್ಯಮಂ ‖ ೨೨

ವ॥ ಇಂತು ಭರತೇಶ್ವರಚಕ್ರವರ್ತಿಯ ರೂಪಾತಿಶಯಮಂ ನೋಡುವಲ್ಲಿ,

ಗಣಿಕೆಯರ ವಿಳಾಸಾಗಾರದೊಳ್ ಜಾಳಮಾರ್ಗ
ಪ್ರಣಯಿನಿಯರಪಾಂಗಶ್ರೇಣಿಯೊಳ್ ಮೂಱುಬಣ್ಣಂ ।
ಪೆಣೆದೊದವೆ ಗವಾಕ್ಷಸ್ಥೇಂದುಕಾಂತೇಂದ್ರನೀಲಾ
ರುಣಮಣಿಕಿರಣಂಗಳ್ ಪೊಣ್ಮವಂತಾದುವಾಗಳ್ ‖ ೨೩

ವ॥ ಅಂತು ಮನಸಿಜನಾವೇಶಮಂತ್ರದಿಂ ಸ್ತೋಭಂಗೊಂಡ ಪುರಪುರಂಧ್ರೀಕ್ಷೋಭನಾಗೆ ಮನುವಂಶಚಂದ್ರೋದಯಕ್ಷುಭಿತನಗರಕ್ಷೀರಾಂಭೋರಾಶಿಯ ಕಲ್ಲೋಲಮಾಲೆಗಳಂತೆ ದೆಸೆದೆಸೆಗೆ ಪೊಳೆವ ಪುರಾಂಗನಾಜನದಪಾಂಗಮಾಳೆಗಳುಂ ತಡಿಯ ಶೀಕರನಿಕರಂಗಳಂತೆ ಸೊಗಯಿಸುವ ಧವಳಾಕ್ಷತಸಿತಕುಸುಮಮಂಗಳಲಾಜಾಂಜಲಿಗಳುಮನುರಾಗಮಂಪಡೆಯೆ, ಪುರಪ್ರಧಾನಜನಸಹಿತಾಶೇಷಾಶೀರ್ವಾದಪರಂಪರೆಯನಾನುತ್ತುಂ ಪಂಚರತ್ನತೋರಣದ್ಯುತಿಸಮುದ್ದ್ಯೋತಕನಕಪ್ರಾಕಾರಪ್ರತೋಳದ್ವಾರಮನೆಯ್ದೆವಂದಾಗಳ್,

ಗಿರಿರಾಜೋದಗ್ರಸಿಂದೂರಿತಕರಟಿಘಟಾಟೋಪಮುಂ ಕುಂಕುಮಾಂಭಸ್ಸ್ಫುರಿತಾಂಗೋತ್ತುಂಗವಲ್ಗತ್ತುರಗಬಲಮುದೋದ್ದಾಮಮುಂ ಚಿತ್ರನೇತ್ರಾಂಬರನಾನಾಹೇತಿಹಸ್ತೋದ್ಭಟಭಟಪೃತನಾಭೀಳಮುಂ ಚಿತ್ತದೊಳ್ ವೀರರಸಂ ಕೈಗಣ್ಮಿ ಪೊಣ್ಮುತ್ತಿರೆ ನಿಜಬಲಮುಂ ನೋಡಿದಂ ಸಾರ್ವಭೌಮಂ ‖

ಎರಡುಂ ಕೆಲದೊಳಮರಸನ
ಬರವಂ ಪಾಱುತ್ತೆ ಭೂಪರಿರ್ದಲ್ಲಿಯೆ ಮಾ ।
ಣ್ದಿರದೆಱಗೆ ಮಕುಟಮಣಿಗಣ
ಮರೀಚಿ ಪುದಿದತ್ತು ದೆಸೆಯುಮಂ ವಸುಧೆಯುಮಂ ‖ ೩೫

ವ॥ ಅಂತು ಕಿರೀಟಕೋಟಿರತ್ನರಶ್ಮಿರಂಜಿತದಿಕ್ಚಕ್ರಮಾಗಿ ಬಂದೆಱಗಿದ ರಾಜಚಕ್ರಮನನುಕ್ರಮದೊಳ್ ನೇತ್ರತ್ರಿಭಾಗಕಟಾಕ್ಷಸಮಗ್ರೇಕ್ಷಣಭ್ರೂವಿಭ್ರಮದರಹಸಿತಾಳಾಪನಪರಿಹಾಸವಿಸ್ರಂಭಾಳಾಪಂಗಳಿಂ ಸಂತಸಂಬಡಿಸುತ್ತುಂ ಬಂದಂದಿನ ದಿನಮಯೋಧ್ಯಾಪುರಾಸನ್ನದೊಳ್ ನಿಜಸ್ಥಪತಿರತ್ನವಿರಚಿತಮಾಗಿ,

ವಿಜಯಶ್ರೀಗೃಹಮೆನಿಸುವ
ವಿಜಯಪ್ರಸ್ಥಾನಶಿಬಿರನೃಪಮಂದಿರಮಂ ।
ವಿಜಿಗೀಷು ಬಂದು ಪೊಕ್ಕಂ
ವಿಜಯಾಳಂಕಾರಬಾಹು ಭರತಮಹೀಶಂ ‖ ೩೬

ವ॥ ಅಂತು ಪೊಕ್ಕು ಮಂಗಳಶೇಷಾಕ್ಷತಂಗಳನಾಂತುಕೊಂಡು ಹರಿನೀಲಕುಟ್ಟಿಮನಿಹಿತರಜತಹೇಮಭಾಜನಾಲಂಕೃತಮಾಗಿ ವಿಕಸಿತಾಂಭೋಜಹೇಮಕಮಳಮನೋಹರತರಶ್ರೀಯುಂ ತಾಳ್ದಿರ್ದ ಭೋಜನಭೂಮಿಗೆ ರಾಜಹಂಸವಿಳಾಸದಿಂ ಬಿಜಯಂಗೆಯ್ದು ಸಕಲವಿದ್ಯಾಪ್ರವೀಣಗುರುಜನಾರ್ಯಜನವಿಳಾಸಿನೀಜನಪರಿವೃತನತಿಮೃದುರಸನಾಸಮ್ಮರ್ದನಮಾತ್ರದ್ರಾವಣೀಯಘೃತಪೂರಮುಮಂ, ಅಲ್ಪದಶನದಂಶಮಾತ್ರಖಂಡನೀಯಮಂಡಕಮುಮನತ್ಯಂತಕೋಮಳತಾಳುತಳಸಂಘಟ್ಟಮಾತ್ರಕ್ಷೋದನೀಯಮೋದಕಮುಮಂ, ಅನಿಷ್ಮುರೋಷ್ಠಪುಟಮಧ್ಯಸಂಧಾರಣಮಾತ್ರಚರ್ೂಣನೀಯಶಾಕವರ್ತಿಕಮುಮಂ, ಅತಿದೂರೋಚ್ಛ್ವಾಸವಿಕಾಸನಾಸಾಂಜಲಿಪ್ರಟಪೇಯಮಾ

ನೆದುಗ್ಧಹೈಯಂಗವೀನಷುಮಂ, ಸ್ನಿಗ್ಧಮುಮಪ್ಪ ಮನೋಹರಾಹಾರಮು
ಮಂ, ನೀಹಾರಶಕಲಪರಿಣತಕಪಿತ್ಥಫಳಪರಿಮಳಮಧುರದಧಿಯುಮಂ
ಏಕೀಭೂತಸಕಳಭುವನಶಿಶಿರದ್ರವ್ಯಸಂಚಾರದ್ರವಶಂಖಾಕಾರಶಿಖರಿಣೀರಮ
ಣೀಯಮುಮಂ, ಅಮೃತಪಿಂಡಾಯಮಾನಪಿಂಡದುಗ್ಧಸ್ನಿಗ್ಧಮುಮಪ್ಪ ಮ
ನೋಹರಾಹಾರಮುಮಂ,

ಕೆಲದೊಳ್ ರಾಜಕುಮಾರವೃಂದಮಿದಿರೊಳ್ ವಾರಾಂಗನಾವರ್ಗಮಾ
ದಲೆ ವಂದಿಪ್ರಕರಂ ಯಥೋಚಿತನಿಜಸ್ಥಾನಂಗಳೊಳ್ ಗಾಯಕರ್ ।
ಪಲರುಂ ಬಂದುಪಣಿ ನೋಡಿಯುಂ ನುಡಿದುಮಟ್ಟುತ್ತುಂ ಪಸಾಯಂಗಳಂ
ಕೆಲಕೆಲ್ಲಂ ಭರತೇಶನಾರೊಗಿಸಿದಂ ಕಲ್ಯಾಣಕಾಹಾರಮಂ ॥ ೨೭

ವ॥ ಅಂತಾರೊಗಿಸಿದಿಂ ಬಳಿಯಂ ಆಚಾಂತಚಂದ್ರಕಾಂತಪ್ರಸುರಭಿಸ
ಲಿಲನುಂ ಘನಸಾರಚಂದನಸಾರಪ್ರಮೃಷ್ಟಕರತಳನುಮಾಗಿ, ಕೃತಕಸ್ತೂರಿ
ಕಾವಿಲೇಪನನುಂ, ವಿರಚಿತಸುರಭಿಕುಸುಮಶೇಖರನುಂ, ಮೃಗಮದಖದಿ
ರಗುಳಿಕಾಬಹಳಕರ್ಪೂರಪಾಳೀಸಂಮಿಶ್ರತಾಂಬೂಲದ್ವಿಗುಣಿತವದನಾರವಿಂ
ದಾಮೋದನುಮಾಗಿ, ಷಟ್ಖಂಡಮಂಡಳವಿಜಯವಿಳಾಸವಿಹಾರಶೀಲಂ ಕತಿಪ
ಯಪದಂಗಳಂ ವಿಹಾರಿಸಿ, ದುಕೂಲಪ್ರಚ್ಛದಾಚ್ಛಾದಿತಸುಖಾಸನಾಸೀನಂ
ಮಣಿಮಯಸಿಂಹಾಸನಮನವಷ್ಟಂಭಿಸಿ,

ಕಳಕಂಠೀಗೀತಂ ಬಗೆ
ಗೊಳಿಯುಂ ವೀಣಾಕ್ವಣಂ ಮನಂಗೊಳಿಯುಮಿಳಾ ।
ವಳಯೇಶ್ವರನಮರ್ದಿನ ಕಡ
ಲೊಳಗಿರ್ಪಂತಿರ್ದನಂತವಾಸದೊಳಾಗಳ್ ॥ ೨೮

ವ॥ ಅಂತು ಅಂದಿನ ದಿವಸಮಂ ಕಳೆದು ಮಱುದಿವಸಂ ದ್ವಾದಶಯೋಜನ
ಸಂಸರ್ಪದ್ಗಂಭೀರಧೀರಾರಾರವಂಗಳಪ್ಪಾನಂದಿಗಳೆಂಬ ಪನ್ನೆರಡು ಭೇರಿಗ
ಳುಂ, ಅಹಿತಮಹೀಪಾಳಹೃದಯಕವಾಟಪುಟವಿಘಟನಪಟುಗಳಪ್ಪ ವಿಜ
ಯಘೋಷಂಗಳೆಂಬ ಪನ್ನೆರಡು ಪಟಹಂಗಳುಂ, ಆಗಣ್ಯಾಪ್ರಣ್ಯಾಬ್ಧಿಸಂಭವಂ
ಗಳಪ್ಪ ಗಂಭೀರಾವರ್ತಂಗಳೆಂಬಿರ್ಪತ್ತುನಾಲ್ಕುಶಂಖಂಗಳುಂ, ಮತ್ಸ್ಯಮ
ಕರಕುಲಿಶಕಳಶಕುಳೀರವರಾಹವಾನರಕಂಠೀರವಚಮೂರುಮಯೂರಗರು

ಡಫಣಿರಾಜಚಿಹ್ನಂಗಳಪ್ಪ ನಾಲ್ವತ್ತೆಂಟುಕೋಟಿಪತಾಕೆಗಳೆಸೆಯೆ ಪೂರ್ವಾಭಿಮುಖನಾಗಿ ಚಕ್ರರತ್ನಪುರಸ್ಸರಂ ಬಿಜಯಂಗೆಯ್ವಾಗಳ್,

ಅನವರತಗಳನ್ಮದದು
ರ್ದಿನಾನನಂ ವರ್ಷಜಳಸಮನ್ವಿತಮಂಭೋ ।
ದನಿನಾದಂ ಭದ್ರಮನಂ
ಮನೋಜವಂ ಚತುರಶೀತಿಲಕ್ಷಪ್ರಮಿತಂ ॥ ೨೯

ಘನಘಟೆ ನಭದಿಂದಂ ಧಾತ್ರಿಗೆತ್ತೆತ್ತ ಬಂದ
ತ್ತೆನಿಸಿ ಕಳೆದುದೆತ್ತಂ ಚೂತಸಪ್ತಚ್ಛದೈಳಾ ।
ವನಸುರಭಿಮದಾಸಾರಾಸವಾಸಕ್ತಭೃಂಗೀ
ನಿನದಮುಖರಿತಾಶಾಚಕ್ರಗಂಧೇಭಚಕ್ರಂ ॥ ೩೦

ವನಧಿಯ ನೀಳ್ದ ಪೆರ್ದೆರೆಗಳೀನೆಲನಂ ಕವಿದಪ್ಪವೀಗಳಿಂ
ಬಿನಮತಿವೇಗದಿಂ ಪರಿವ ಪಾಱುವ ಲಕ್ಕೆಯನೊಡ್ಡುನೊಳ್ಪ ತ ।
ನ್ನನೆ ನಡೆ ನೋಡಿಸುತ್ತಮಿರೆ ಜಾಯಿಲವೊಂದೆರಡೆಂದು ತೋಱೆ ನೆ
ಟ್ಟನೆ ಪದಿನೆಂಟು ಕೋಟಿವರೆಗಂ ತಳರ್ದತ್ತು ತುರಂಗಸಾಧನಂ ॥ ೩೧

ವಿವಿಧಾಯುಧಪೂರ್ಣಂಗಳ್
ಪ್ರವೀರಪುರುಷಪ್ರತಿಷ್ಠಿತಂಗಳ್ ಚೇತೋ ।
ಜವಹರಿಯೋಗ್ಯಂಗಳ್ ತಳ
ರ್ದವಾಗಳೆಂಭತ್ತುನಾಲ್ಕುಲಕ್ಕೆ ರಥಂಗಳ್ ॥ ೩೨

ಪಾದಾಭಿಘಾತವಿಚಳ
ನ್ಮೇದಿನ್ಯುತ್ಥಿತವಿಶಾಲಧೂಳೀಪಟಲಾ ।
ಚ್ಛಾದಿತಗಗನಂ ನಡೆದುದು
ಪಾದಾತಂ ಚತುರಶೀತಿಕೋಟಿಪ್ರಮಿತಂ ॥ ೩೩

ಎಡೆನೆಱೆಯದು ಭುವನತಳಂ
ನಡೆವ ಚತುರ್ಬಲಕೆ ದಿವಿಜಖೇಚರಸೈನ್ಯ ।
ಕ್ಕೆಡೆನೆಱೆಯದು ಗಗನಮುಮೆನೆ
ಷಡಂಗಬಲಮಿಂತು ತಳರೆ ತಳರ್ದಂ ಭರತಂ ॥ ೩೪

ದೆಸೆಗಳನೆಂಟುಮಂ ನೆಱೆಯೆ ಮುನ್ನಮೆ ಬಳ್ವಳನಾಗೆ ಮಾಡದಾ
ಗಸಮುಮನುಚ್ಚ್ವಮಾಗಿನಿಸನೆತ್ತದೆ ನೀಳ್ದರೆ ಭೂಮಿಭಾಗಮಂ ।
ಪಸರಿಸದೀಬಳಪ್ರವರಮಂ ಭರತೇಶ್ವರನೇಕೆಯೋ ವಿ ನಿ
ರ್ಮಿಸಿದನೆನಲ್ಕೆ ಪೆಂಪುವಡೆದೇಂ ನಡೆದತ್ತೊ ಸಮಸ್ತಸಾಧನಂ ॥ ೩೪

ವ॥ ಅಂತು ಮಹೀಭಾಗಮೆಲ್ಲಂ ಚತುರಂಗಮಯಮುಂ, ದಿಗ್ವಿಭಾಗಮೆಲ್ಲಂ ರಜೋಮಯಮುಂ, ನಭೋಭಾಗಮೆಲ್ಲಂ ದಿವಿಜವಿದ್ಯಾಧರಮಯಮುಂ, ಅಂತರಿಕ್ಷಮೆಲ್ಲಮಾತಪತ್ರಮಂಡಳಮಯಮುಂ, ಸಮೀರಣಸಂಚರಣಮೆಲ್ಲಂ ಮದಗಂಧಮಯಮುಂ, ಸೃಷ್ಟಿಯೆಲ್ಲಮವನಿಪಾಳಮಯಮುಂ, ಭುವನವಿವರಮೆಲ್ಲಂ ಜಯಜಯನಿನಾದಮಯಮುಂ ಆಗಿ ನಡೆವ ನಿಜವಿಜಯಸೈನ್ಯದೊಳನೇಕಮುಕುಟಬದ್ಧಶೇಖರಸಹಸ್ರಪರಿಸ್ರಸ್ತಕುಸುಮಕೇಸರರಜಮುಂ, ಅನವರತವಿತರಣನಿರತರಾಜಕುಮಾರಮುಷ್ಟಿವಿಕೀರ್ಯಮಾಣಸಂತರ್ಪಣಚೂರ್ಣಸಂಕೀರ್ಣಕರ್ಪೂರರಜಮುಂ, ಸಮದವಿಜಯಗಜವಿಶಾಲಕುಂಭಭಿತ್ತಿಪರಿಕ್ಷಿಪ್ತಸಾಂದ್ರಸಿಂದೂರರಜಮುಂ ನೆಱಂ ಬಡೆದು,

ಮದಕರಿತುರಂಗಮಾನವ
ಪದಹತಿಯಿಂ ಗಗನತಳವನೊಡನಡರ್ವ ರಜಂ ।
ಪದೆಪೊದವೆ ದಿಗಂಗನೆಯರ
ಕೆದಱಿದ ಪಟವಾಸಚೂರ್ಣರಜಮನೆ ಪೋಲ್ಗುಂ ॥ ೩೬

ಪರಿಪೂರಿತಸಕಳದಿಗಂ
ಬರತಳಮನುಕೂಲಮಂದಪವನವಿಲೋಲಂ ।
ಕರಮೆಸೆದುದು ಬಹಳರಜೋಂ
ಬುರಾಶಿಯೊಳ್ ಮತ್ಸ್ಯಮಕರಕೇತನನಿಕರಂ ॥ ೩೭

ವ॥ ಆಗಳ್,

ಕರಿಕರಶೀಕರಮದಜಳ
ತುರಂಗಲಾಲಾಂಬುಸೇಕದಿಂದಡಿದುಱಿದಿ ।
ರ್ದ ರಜಂ ನರೇಂದ್ರಚಾಮರ
ಮರುದಭಿಹತಿಯಿಂ ತೆರಳ್ದು ತೂಳ್ದತ್ತಾಗಳ್ ॥ ೩೮

ಸಿವಿಗೆ ತಪೆದುಱುಗಲೊಡನಿ
ಕ್ಕುವ ಕುಂಚಂ ಲೀಲೆವಡೆಯೆ ಚೆಲ್ವೆಸೆದುದು ಷ ।
ಣ್ಣವತಿಸಹಸ್ರಾಂತಃಪುರ
ಮವಯವದೊಳ್ ಭರತಚಕ್ರವರ್ತಿಯ ಕೆಲದೊಳ್ ॥ ೩೯

ಬಾಸಣಿಸಿದ ಚಿನ್ನದ ಪೊಸ
ಮಾಸಣಿಗೆಯ ಪೊನ್ನಸಿವಿಗೆ ಮಣಿಮಯಕಳಶೋ ।
ದ್ಭಾಸಿ ದೆಸೆದೆಸೆಯೊಳೆಸೆಯೆ ವಿ
ಳಾಸಂ ಬೆರಸುಱುಗೆ ಭೋಗಿಯರ್ ಕರಮೆಸೆದರ್ ॥ ೪೦

ಅವಯವದೆ ಕುಣಿದು ಮೆಟ್ಟುವ
ಸವತಿಯ ಬಿಜ್ಜಣಿಗೆ ವಿಡಿದ ಸತ್ತಿಗೆಯ ವಿಳಾ ।
ಸವಮಮರ್ದ ಲೀಲೆಯಿಂ ಪೆಂ
ಡವಾಸದೊಳ್ ಪೆಂಡಿರೊಯ್ಯನೊಯ್ಯನೆ ನಡೆದರ್ ॥ ೪೧

ಕರಿಣೀವೃಂದದ ಮೇಲೆ ತಳ್ತ ತಪೆಗಳ್ ವಾರಾಂಗನಾಗೀತಮಂ
ದ್ರರವಂಗಳ್ ಚಳಕೇಶಪಾಶಕುಸುಮಾಮೋದಾಸವಾಸಕ್ತಭೃಂ ।
ಗರವಂಗಳ್ ಪ್ರಿಯಕುಬ್ಜವಾಮನಗಣಾಲಾಪಂಗಳತ್ಯಂತಸಾಂ
ದರಶುದ್ಧಾಂತವಧೂಕದಂಬಕಮನೇಂ ಮೆಯ್ವೆರ್ಚಿಸಲ್ಕಾರ್ತುದೋ ॥ ೪೨

ಪೊಳೆವಲರಮರ್ದಿನ ಕಪ್ಪುರ
ವಳಂಕಿನ ಕತ್ತುರಿಯ ಕೊಳತ ದುವಾರ್ಭರಣಂ ।
ಗಳ ಪೊಳೆವ ಮಾಣಿಕಂಗಳ
ಬೆಳಗಿದೆ ಸೂಚಿಸಿತು ಭರತನಂತಃಪುರಮಂ ॥ ೪೩

ಶೃಂಗಾರಾಂಭೋಧಿವೇಳಾವಿಳಸನದೆಸಕಂ ಮೇಣ್ ಸ್ಮರಪ್ರಾಜ್ಯಸಾಮ್ರಾ
ಜ್ಯಾಂಗಂ ಮೇಣ್ ಚೈತ್ರಲಕ್ಷ್ಮೀಪರಿಕರವಿಭವಂ ಮೇಣಿದೆಂಬಂತೆ ಲೀಲಾ ।
ಪಾಂಗಜ್ಯೋತ್ಸ್ನಾಮೃತಾಂಭಃಪ್ಲವಧವಳಿತದಿಗ್ಭಿತ್ತಿ ಬಂದತ್ತು ಪುಷ್ಪಾ
ಸ್ತ್ರಾಂಗೇಕಚ್ಛತ್ರಮಾಯಿತ್ತು ಜಗಮೆನೆ ಭರತಾಂತಃಪುರಸ್ತ್ರೀಸಮೂಹಂ ॥

ಲಯದಿಂ ಮೆಲ್ಪಿಂ ಬೆಡಂಗಂ ಪಡೆವ ತುರಗದಿಂ ಚಿತ್ರಿತಚ್ಛತ್ರಕಾಲೀ
ಲೆಯಿನುದ್ದಂ ಬರ್ಪ ಚೇಟೀನಿವಹದ ಬರವಿಂ ಭೂಷಣಾಡಂಬರೋದ್ದ್ಯೋ

ತ್ರಿಯಿನೊಪ್ಪಿರ್ದುದ್ವಿಳಾಸಂ ವಿಳಸಿತಕಮಳಾವಾಸವಿನಾಬರ್ಪುದುಂ ರಾ
ಣಿಯವಾಸಂ ನೋಡಿಮೆಂಬಂತೆಸೆದುದು ಪಲವುಂ ತಂಡದಿಂ ಪೆಂಡವಾಸಂ ॥ ೪೫

ತುರಗಮುಮೊಂದು ಸತ್ತಿಗೆಯುಮೊಂದಿರೆ ಕಾಪಿನ ಬಂಟು ಸುತ್ತಲುಂ
ಬರೆ ಮುಸುಕಿಟ್ಟಪಟ್ಟಣಿಗೆಯುಂ ಪೊಱಪೊಣ್ಮುವ ಕಣ್ಣ ಬಿಳ್ಪುವೋ ।
ಪರ ಮನದೊಳ್ ತೆಱಂಬೊಳೆವ ಬಾಳೆಗಳಂತಿರೆ ನಾಟ್ಯವಿಳಾಸದೊಳ್
ಪೊರೆದಿರೆ ಬಂದುದಂದೊಡನೆ ಸಜ್ಜನವೆಂಡಿರ ತಂಡಮೋಳಿಯೊಳ್ ॥ ೪೬

ಪಡೆಗಡ್ಡಮಿರ್ದ ಬೆಟ್ಟ
ಟ್ಟಡೆ ಮಟ್ಟಮಿಱುಂಬಮೆಂಬಿವಂ ಸಣ್ಣಿಸಿ ಸಾ ।
ರ್ದಡೆ ನಡೆವ ದಂಡರತ್ನಂ
ಪಡೆವಳ್ಳನ ಮುಂದೆ ನಡೆಯೆ ನಡೆದಂ ಭರತಂ ॥ ೪೭

ವ॥ ಅಪ್ರಸ್ತಾವದೊಳ್,

ಅಂತು ನೃಪಂ ನಡೆಯೆ ಲಲಾ
ಟಂತಪತಪನಾಂಶುವಿಂ ಸರೋವರಜಲಮೋ ।
ರಂತಿರೆ ಕಾಯ್ಗೊಂಡದ ನೀ
ರಂತಿರೆ ಕುದಿದತ್ತು ಪೊಳೆಯೆ ಜಲಚರನಿಕರಂ ॥ ೪೮

ಬಾಳಕಳಹಂಸಜಾಳ ಮೃ
ಣಾಳಂಗಳ ನಡುವೆ ಶಿಶಿರಕರಕರಶತದಾಂ ।
ದೋಳದೊಳಿರ್ಪಂತಿರ್ದುದು
ಲೀಳೆಯಿನೇಂ ಲೀಲೆ ರಾಜಹಂಸಂಗರಿದೇ ॥ ೪೯

ತಪನಕರಂ ತನುಗಳನು
ರ್ಚೆ ಪೋಗೆ ಸಾರ್ದತ್ತು ಚಕ್ರವಕ್ಕಿಯ ಪೊಣರುಂ ।
ಗ್ಲಪಿತಮನವಾಗಳುದ್ದಂ
ಡಪುಂಡರೀಕೋಜ್ಜ್ವಳಾತಪತ್ರದ ನೆೞಲಂ ॥ ೫೦

ಪೊಳೆವಿನಕಿರಣಂ ಮೆಯ್ಗ್ಗಳ
ನಳುರ್ದೆ ಕನಲ್ದಗಿದು ಸೋಗೆಯುಂ ಪರಪಿ ನೆೞ ।

ಲ್ಗಳನಾಸೆವಡೆ ಶಿಖಾವಳಿ
ಕುಳತಾಂಡವಮೆಸೆದುದಾಶರತ್ಸಮಯದೊಳಂ ॥ ೫೧

ಕರಿಣೀಗಣಕರಶೀಕರ
ಪರಿಕರದೊಳಮಲೆವ ಚಮರರುಹಪವನಪರಂ ।
ಪರೆಯೊಳಮಾಱದೆ ನೃಪಸಾಂ
ದರೀ ಶ್ರಮಾಂಭಃಕಣಂಗಳುಣ್ಮಿದುವಾಗಳ್ ॥ ೫೨

ಲಾವಣ್ಯರಸದ ಬಿಂದುಗ
ಳಾವರಿಸಿದುವೆನಿಸಿ ಪೊಳೆದುವವನೀಶ್ವರಕಾಂ।
ತಾವದನಂಗಳ್ ಸ್ವೇದಜ
ಲಾವಳಿಯಿಂ ಸಜಲಲವಸರೋಜಂಗಳವೋಲ್ ॥ ೫೩

ಕಡುವೆಂಕೆಯಿಂ ಕಟಾಕ್ಷಂ
ಬಿಡಿದಿಱಿವ ಲಲಾಟಕುಂಕುಮಸ್ವೇದಜಳಂ ।
ಕಿಡಿಸಿದುದು ಕದಪಿನೊಳ್ ಪೊ
ಟ್ತಿಡೆ ಬರೆದರಸಿಯರ ಪತ್ರಲೇಖಾವಳಿಯಂ ॥ ೫೪

ಶರತ್ತಪನತಾಪದಿಂ ಕೊರಗಿ ಕೂಡೆ ಕೋರೈಸಿದಾ
ನರೇಶ್ವರವಧೂಕಂದಂಬಕಮನಾಱಿಸಲ್ಕಾಗಳ್ ।
ಬ್ಜರೇಣುಗಳನೆತ್ತಿ ಬಂದುದಿದಿರ್ವರ್ಪವೋಲ್ ನಂದನೋ
ತ್ಕರಂಬಿಡಿದು ಮಾರುತಂ ಚಳತರಂಗೆಯಿಂ ಗಂಗೆಯಿಂ ॥ ೫೫

ವ॥ ಅಂತು ಮಳಯಜರಸಶಿಶಿರಶೀಕರಾಸಾರಚಾರಿಯಾಗಿ ಬಂದ ಮಂದಾನಿಳನ ಬೞಿಯನೆ ಬಂದು,

ಹಿಮಶೈಲಾಗ್ರಸರಸ್ಸರೋರುಹರಜಃಪಿಂಗಾಂಗೆಯಂ ತೀರಸಾ
ರಮಹೀಜಪ್ರಸವಪ್ರಭೂತಮಕರಂದಾಮೋದಸಂಸಂಗೆಯಂ ।
ಭ್ರಮರೀಗೀತಸಮೇತಹೇಮನಳಿನೀ ಶ್ರೀಸಂಗೆಯಂ ನೋಡಿ ನಾ
ಡೆ ಮನಂಗೊಂಡನಿಳೇಶ್ವರಂ ಲುಳಿತಮತ್ಸ್ಯಾಪಾಂಗೆಯಂ ಗಂಗೆಯಂ ॥ ೫೬

ಆರವ್ಯನದಿಯ ಚೆಲ್ವನಿ
ಳಾರಾಮಾರವಣಾನತ್ತಿಯಿಂ ನೋಡುವಿನಂ ।
ಸಾರಥಿ ಕಣ್ಣಱದೊಯ್ಯನೆ
ತೀರಂ ಕೊಸೆಗೊಂಡು ಚಕ್ರಿಯಂ ಬಿನ್ನವಿಕುಂ ॥ ೫೭

ದಿವಿಜಜನಸೇವಿತಂ ಭುವ
ನವಂದ್ಯಮಾಹ್ಲಾದಿತತ್ರಿಲೋಕಂ ನೋಡೀ ।
ದಿವಿಜನದಿ ನಿನ್ನ ಗುರುವಿನ
ಧವಳಯಶಶ್ರೀಯನಿನಿಸನನುಕರಿಸಿರ್ಕುಂ ॥ ೫೮

ನಿನ್ನಾಜ್ಞೆಯಂತೆ ಗಗನಮು
ನ್ನುನ್ನತಿಯಿಂ ದಾಂಟ ಪೆಱರ್ಗೆ ಲಂಘಿಸಲರಿದೆಂ ।
ಬನ್ನಿಗವೊಪ್ಪಿರ್ದುದು ಲೋ
ಕೋನ್ನತ ನೋಡಿದಱ ಕನಕವೇದಿಕೆಯಿರವಂ ॥ ೫೯

ತ್ರಿದಶಸ್ತುತ ನೋಡ ಪೊದ
ಳ್ದಿದವಿದ ತಾಳೀತಮಾಳ ನೀಳದ ಕರ್ಪಿಂ ।
ಪುದಿದು ಪರಭಾಗವಂ ಪಡೆ
ದಿದಱರಡುಂ ಕೆಲದೊಳೆಸೆವ ವನರಾಜಿಗಳಂ ॥ ೬೦

ಎರಡು ತಟವನದ ಪಸುರೆಸೆ
ದಿರೆ ತನ್ನೊಳೆ ತನ್ನ ಬಣ್ಣವೆಸೆದಿರೆಯುಂ ವಿ ।
ಸ್ಫುರಿತತರಕನಕವೇದಿಕೆ
ಮರಕತವೇದಿಕೆಯ ಚೆಲ್ವ ನಿರ್ಕುಟಿಗೊಳ್ಗುಂ ॥ ೬೧

ವನಕುಸುಮಸ್ತಬಕದ ನೆಱ
ಲಿನಿಸಚ್ಛಾಂಬುವಿನೊಳೆಸೆಯೆ ಮಧುಕರಮದು ಭೋಂ ।
ಕೆನೆ ಪಾಯ್ದಱಂಕೆ ನಾಂದೊಡೆ
ಜಿನುಂಗಿ ನೆಲಸಿದುದು ವಿಕಚಕನಕಾಬ್ಜಿನಿಯೊಳ್ ॥ ೬೨

ಕೊಡೆಯೆಲೆಗಳ ತಿಂತಿಣಿಯಿ
ಟ್ಟೆಡೆಗಳ ಕತ್ತಲೆಯನಿರುಳೆಗೆತ್ತಾತ್ಮೇಶಂ ।

ತಡೆದೊಡೆ ನರೇಂದ್ರ ನೋಡೀ
ನಡುವಗಲೊಳ್ ಚಕ್ರವಾಕವಧು ವಿರಹಿಸುವಳ್ ॥ ೬೨

ಮದಗಂಧವೆಂದೆ ಸಪ್ತ
ಚ್ಛದಗಂಧಮನೀವನೇಭಮಾಘ್ರಾಣಿಸಿ ಪೆ ।
ರ್ಚಿದ ಮಸಕದಿಂದೆ ಪಾಯು
ಲ್ಕದಿರ್ಪುಗೆಯ್ದಪುದು ನೋಡ ವನವೇದಿಕೆಯಂ ॥ ೬೩

ಮದಕಳಹಂಸೆಯ ಪಿಂಡಿದೆ
ಪೊದಟ್ದ ಚಮರೀಜವಾಗೆ ಜಳದೇವತೆಗೆ ।
ತ್ತಿದ ಪಚ್ಚೆಯ ಸತ್ತಿಗೆಗಳ
ಪುದುವೆನಿಪುದು ವನಜವನದ ಕೊಡೆಯೆಲೆ ಪಲವುಂ ॥ ೬೪

ಮಲಯಸಮೀರಣೇರಣಚಲತ್ತರುಶಾಖೆಗಳೊರ್ವರ್ಗೊರ್ವರ್ ನೀ
ರೊಳಗೆ ಬಟಿಲ್ದ ಹೇಮಸರಸೀಜರಜಾರುಣವಾರಿಯಂ ಪುದುಂ ।
ಗೊಳಿಸಿ ನಭಂಬರಂ ಮಿಳಿರ್ದಲಂಪಿನ ದಂಪತಿಯಿರ್ಪ ಜೊಂಪಮಂ
ತಳಿ ತಳಿದಲ್ಲಿ ತಣ್ಪುವೆಸಕೆಯ್ವುವು ತೀರವನಾಂತರಾಳದೊಳ್ ॥ ೬೫

ಬಳ್ಳಿಗವುಂಗಂ ತಳ್ತಲೆ
ವಳ್ಳಿಯ ಕಟ್ಟಲೆಯನಲೆವ ಸೊಡರ್ಗುಡಿಗಳನೀ ।
ಯೆಳ್ಳಿಱಿದಲೆವುವು ಬನದೊಳ್
ಗುಳ್ಳಲರ್ದುಜ್ಜ್ವಳಿಪ ಚಂಪಕಪ್ರಸವಂಗಳ್ ॥ ೬೬

ಗೊಲೆಯೊಳ್ಪಣ್ತುದು ವೃಂದವಾಪೆ ಪಥಿಕರ್ಬರ್ಕೆಂದು ಭೃಂಗಂಗಳಿಂ
ದುಲಿವಂತಿರ್ದುದು ಪಣ್ತು ಬಕ್ಕೆ ತನಿವಣ್ಣಾಗಿರ್ದುದಿಮ್ಮಾವು ಕ ।
ಟ್ಟಲಿಸಿರ್ದತ್ತಲೆವಳ್ಳಿ ಕಾಯ್ತು ಕರೆವಂತಿರ್ದತ್ತು ಚೆಂದೆಂಗು ಸಾ
ಱಲೆವಂತಿರ್ದುದು ಬಂದ ಕರ್ಬಿನೆ ವನಶ್ರೀಬಣ್ಣಿಸಲ್ಬಕ್ಕುಮೋ ॥ ೬೭

ಕಡುಪಗಲಾದುದು ಬೀಡಂ
ಬಿಡಿಸುವುದೀಪುಣ್ಯನದಿಯ ತಡಿಯೊಳ್ ದೇವರ್ ।
ನಡೆವುದು ವನಜಳಕೇಳಿಗೆ
ಕಡುರಯ್ಯಂ ಬನದ ತೊಱೆಯ ಸಿರಿ ಧರಣಿಪತೀ ॥ ೬೮

ಎಂದೊಡೆ ಭರತೇಶ್ವರನಾ
ನಂದದೆ ಬೀಡಂ ಬಿಡಲ್ಕೆ ವೇೞ್ದೆಱೆದು ಜಯ ।
ಸ್ಯಂದನದಿಂದಂ ಜನಿತಾ
ನಂದದೆ ಬನಮಂ ವಿಳಾಸದಿಂ ಪುಗುತಂದಂ ॥ ೭೦

ವ॥ ಆಗಳ್ ಶರದದ ಬಿಸಿಲಳುರೆ ಪೊಣ್ಮಿದ ಘರ್ಮಜಲಬಿಂದುಗಳಂ ನಾಂದು ಪ್ರಕ್ಷಳಿಸಿದರೆವೊರೆಕನಾದ ಕುಂಕುಮಪತ್ರಭಂಗದ ಕೊಱಗಿದ ನಗೆವೊಗಂಗಳುಂ ಪಯಣದೊಳಳ್ಳಿವಿಳ್ಳಿಯಾಗಿ ಬಂಬಲಬಾಡಿದ ತನುಲತೆಗಳುಂ ಎಱೆವಿಱನಾದ ತಲೆದುಡುಗೆಗಳುಂ ಬಾಡಿದ ಪೂಮಾಲೆಯೊಡನೆ ಬಱಲ್ದ ಸೋರ್ಮುಡಿಯುಂ ಅಡಿಗಡಿಗೆ ತಡತಡವಪ್ಪ ನಡೆಗಳುಂ ಬೆರಸು,

ವನದೇವತೆಗಳ್ ನಂದನ
ವನಮಂ ಪುಗುವಂತೆ ತಳಿರ ಕಳಿಕೆಯ ಪೊಸಪೂ ।
ವಿನ ಮೇಗೆ ದಿಟ್ಟಿಯಾಗಿರೆ
ವನಜಾನನೆಯರ್ ವಿಳಾಸವನಮಂ ಪೊಕ್ಕರ್ ॥ ೭೧

ಪುಗೆ ನಡೆವ ಪರಿಶ್ರಮದಿಂ
ದೊಗೆವ ಲತಾಂಗಿಯರ ಸುಯ್ಯ ಕಂಪಿಂಗಳಿಗಳ್ ।
ಮೊಗಸಿ ಮುಸುಱಿದುವು ಪೊಸಗಂ
ಪುಗೆಂಡು ಸೈರಿಸುವ ಮಧುಕರಂಗಳುಮೊಳವೇ ॥ ೭೨

ಕತ್ತುರಿಯ ಕಂಪುಮಂ ಬೆಮ
ರೊತ್ತರಿಸಿ ಪೊದಟ್ದು ಕಂಪನೀಯುತ್ತಿರೆ ಮೃ ।
ತ್ತೋತ್ತುಂಗಸ್ತನೆಯರ್ ಶ್ರಮ
ಮುತ್ತುಮದೇಂ ಸುರಭಿಗಂಧಮಂ ಬೀಱಿದರೋ ॥ ೭೩

ವ॥ ಆಗಳ್ ಭರತೇಶ್ವರಂ ಸಮಸ್ತಾಂತಃಪುರದೊಡನಿಡಿದಡರೆ ಸಲೆ ಪೂತ ಚೂತಲತೆಯನೊಳಗುಮಾಡಿ ಬಳಸಿದ ಮಾಧವೀಲತೆಯ ಬಳ್ಳಿವಳ್ಳಿಯ ಬಳ್ಳಿಗಾವಣದ ಮುಂದೆ ಬಳ್ವಳ ಬಳೆದೆಳೆದಳಸುವ ಪೊಸಗೆಂದಳಿರ ಗೊಂದಳದೊಳೆ ಸಂದಣಿಸಿದಶೋಕಲತೆಯೋಲಗಶಾಲೆಯೊಳಗಣ ಕಪ್ಪುರ ವಳುಕಿನ ಜಗುಲಿಯ ಮೇಗಣ ಕುಸುಮದೆಸಳ ಮಿಸುಗುವ ಪೊಸದಳಂಬ

ದ ಮೇಗೆ ಕಿಱಿದು ಬೇಗಂ ವಿಶ್ರಮಿಸಿ ಮೇಳದಾಕೆಗಳ್ ವೆರಸು ಬಂದು ಕಾವಣಮಂ ಪುಗಲೊಡಂ,

ತಳಿರ ಪೊಸದಳಿರ ಕಾವಣ
ದೊಳಗೆ ನೃಪೇಶ್ವರನ ಘರ್ಮಜಳಕಣಗಣಮಂ ।
ಕಳೆದುದು ಚಂದನಹಿಮಕರ
ವಿಳುಳಿತಜಳಪರಿಚಿತಂ ಜಳಾರ್ದ್ರಸಮೀರಂ ॥ ೨೪

ವ॥ ಅನ್ತು ಭರತರಾಜಂ ಸಕಳತರ್ಕರಾಜನಪ್ಪ ಮನೋಜರಾಜಂಗೆ ಮಾಡಿದುದೆನಿಸುವ ವಿರಾಜಮಾನರಕ್ತಾಶೋಕಪಲ್ಲವೋಲ್ಲಸಿತಕಾಯಮಾನದೊಳ್ ಕಿನ್ನರಕರಕಿಸಲಯಚಳನಸಮುತ್ಪನ್ನಕಾಕಳೀಕಳರವಮಿಳಿತಮಧುಕರತಂತ್ರೀಸಮಂಚಿತವಿಪಂಚೀಮಂದ್ರತಾರಮಧುರಮೂರ್ಚ್ಛನಾಸನಾಥಪ್ರಯೋಗಂಗಳುಮಂ ಅಂತಃಪುರಪರಿವಾರವಾರಾಂಗನಾಸಂಗೀತಗೀತಂಗಳುಮಂ ನವಪ್ರಸವಪರಾಗಾಸವಾಸಕ್ತಭೃಂಗಾಂಗನಾಗೀತಂಗಳುಮಂ ಆಲಿಸಿ ಕೇಳುತ್ತಿರ್ಪನ್ನೆಗಂ, ಆತನಂತಃಪುರಸ್ತ್ರೀಯರಿಮ್ಮಾವಿನ ಸೊನೆಯ ಸೋನೆಯೊಳ್ ತಳಿದೆಳದಳಿರ ಜೊಂಪಂಗಳೊಳಂ ಕುಳಿರ್ವ ಪುಳಿನಂಗಳೊಳಂ ಕೋಡುವ ಧಾರಾಗೃಹಂಗಳೊಳಂ ವಿಶ್ರಮಿಸಿ ಶಾರದಾತಪಪರಿಶ್ರಮಮಂ ಕಳೆಯೆ,

ನವನಖಪದರೇಖೆಗಳಂ
ಸವತಿಯರಿದಿರೊಳ್ ವಿಳಾಸವತಿಯರ್ ಮೆಱೆಯಲ್ ।
ಅವಯವದಿಂ ಕುಪ್ಪಸಮಂ
ಸಮಂಗಮಂ ಕಳೆದು ಕಳೆದರಲ್ಲಿಂದವರಂ ॥ ೨೫

ಪೊಳೆವಲರ ಪಸೆಯೊಳಿರ್ದುಂ
ಪುಳಿನದ ಲೋಹಾಸನಂಗಳೊಳ್ ನೆಮ್ಮಿರ್ದುಂ ।
ಚಳದಳಕೆಯರರೆಬರದೇಂ
ಕಳೆದರೊ ಶರದಾತಪಪ್ರಭೂತಶ್ರಮಮಂ ॥ ೨೬

ಪೊಸತಳಿರ್ಗಳ ಬಿಜ್ಜಣಿಗೆಯಿ
ನೆಸೆವೆಲರ್ಗಳನೊಗೆವ ಘರ್ಮಜಲಮಂ ಪೀರ್ದಾ ।

ಋಸದುವು ಕುಸುಮರಜಂಗಳ್
ಪೊಸಯಿಸಿದುವು ಬಣ್ಣಮಂ ಲತಾಂಗಿಯರ್ಗಾಗಳ್ ॥ ೭

ಅಲರ ಮಸುರಿಗೆಯೊಳುಸಿರ್ದು
ಳ್ಳಲರ್ದಡ್ಡಂ ನಿಮಿರ್ದ ಲತೆಯ ಮೇಲೆ ವಿಳಾಸಂ ।
ನಿಲೆ ನೀಡಿ ಕಾಲನರೆಬರ್
ಮಲಂಗಿದರ್ ಪೊಳೆವ ತಳಿರ ಬೊಂದರಿಗೆಗಳೊಳ್ ॥ ೭

ತಳಿರ್ಗಳಕಂಡವಡಂಗಳ್
ತಳಿರ್ಗಳ ಪಾಸುಗಳ್ ತಳಿರ್ಗಳೋವರಿಗಳ್ ಕಂ ।
ದಳಿರ್ಗಳೆಳಸಿಪೊಳೆವಿಜ್ಞಾಲ್ಲಳ್
ವಿಳಾಸಮಂ ಮೆಱೆದರಲ್ಲಿ ಕೆಲರಬಲೆಯರೊಳ್ ॥ ೭

ಪೊಳೆವೆಳದಳಿರೊಳ್ ಪುದಿದೆಳ್
ದಳಸಿ ಕುಳಿರ್ಕೊಟ್ಟ ಸೊನೆಯ ಸೋನೆಯನೆ ಪುದುಂ ।
ಗೊಳಿಸಿದೆಳವಳ್ಳಮಾವಿನ
ಕುಳಿರ್ವೋವರಿಯಲರ ಪಸೆಯೊಳುಸಿರ್ದರ್ ಕೆಲಬರ್ ॥ ೮

ಪನಸಾಮ್ರಕದಳನಾರಂ
ಗನಾಳಿಕೇರೀಫಳಾಮೃತಾಸ್ವಾದದೆ ತ ।
ಣ್ಣನೆ ತಣಿದು ಕಿವಿಯೊಳಮರ್ದಿನ
ಪನಿಪನಿವಿನಮೆಸೆದರರೆಬರಳಿಕುಳರುತಿಯಿಂ ॥ ೮

ಗಿಳಿಗಳೊಳ್ ಗಳಪಿ ಮೊಱೆವಳಿ
ಕುಳದೊಡನಾಳ್ದಿಸಿ ಪುರುಳಿಯೊಡನೆಳಸಿ ನವಿ ॥
ಲ್ಗಳ ಬಳಗದೊಡನೆ ನರ್ತಿಸಿ
ವಿಳಾಸಿನೀನಿವಹಮಾಗಳೇಂ ದಳ್ಳಿಸಿತೋ ॥ ೮

ಅಂತು ಭರತೇಶ್ವರಂ ಸಕ
ಳಾಂತಃಪುರಸಹಿತಮಲ್ಲಿ ವಿಶ್ರಮಿಸಿ ವನಾ ।

ಭ್ಯಂತರಮುಂ ತೋಱಲೆ ಮನ
ಕ್ಕಂತಿಲ್ಲದವುದವನಂಟು ಮಾಡಿದುದು ಬನಂ ॥ ೮೩

ಕೊಳಗಳ ಮರಗಳ ಲತೆಗಳ
ಫಳಪ್ರಸೂನಂಗಳೊದವಿನೊಳ್ ಪಕ್ಷಿಗಣಂ ।
ಗಳ ಪುದುವಿನೊಳಾಱುಂ ಋತು
ಗಳ ಚೆಲ್ವಂ ಕಾಣಲಾದುದಾನಂದನದೊಳ್ ॥ ೮೪

ಪೊಸತಲರ್ದ ಕೊಸಗು ತಳಿರ್ಗೊ
ದಸುಗೆ ಪಸುರ್ಗನೆಯೊಳಡಿದ ಮಲ್ಲಿಗೆ ನನೆಯಿಂ ।
ಮುಸುಕಿದ ತಳಿರಂ ಪೀಱಿದ
ಪೊಸಮಾವುಗಳಂ ಬಸಂತಮೆಸೆದಪುದಿದಱೊಳ್ ॥ ೮೫

ನವಚೂತಾಂಕುರಸುರಭಿ
ದ್ರವಮಂ ಸವಿದನಿತಱಿಂದೆ ಮದನಧನುರ್ಜ್ಯಾ ।
ರವಸನ್ನಿಕಾಶಮೀಗಳ್
ಕಿವಿಯಂ ಮುಟ್ಟಿದುದು ಪಿಕದ ಪಂಚಮನಿನದಂ ॥ ೮೬

ಪಾದರಿ ಪೂತುವು ತೋಱಿದು
ವಾದುವು ಮಲ್ಲಿಗೆಗಳೆಯ್ದೆ ಪಣ್ತುವು ಮಾವಿಂ ।
ಬಾದುದು ನಿದಾಘಮಧುವಿನ
ಭೇದಮಿದೀಬನದೊಳಾತಪಕ್ಕೆಡೆಯುಂಟೇ ॥ ೮೭

ವಾರಾಕದಂಬಸುರಭಿಸ
ಮೀರಂ ಪರಿಪಕ್ವರಾಜಜಂಬೂದ್ರುಮವಿ ।
ಸ್ತಾರಂ ಶಿಖಂಡಿತಾಂಡವ
ಸಾರಂ ನವಜಳದಸಮಯಮೇನೆಸೆದಪುದೋ ॥ ೮೮

ಸೋಂಕುವೆಲರ್ ಜಾದಿಯ ಕಂ
ಪಂ ಕರಮಗ್ಗಲಿಸಿ ಸೋಂಕಿದಪ್ಪುದಿದೆಂತೋ ।

ಭೋಂಕೆನೆ ಪಯಣದೊಳೆಮ್ಮಂ
ಸೋಂಕಿದ ಶರದೃತುವೆ ಬನದೊಳವತರಿಸಿದುದೋ ॥ ೮೯

ಅಲರ್ದ ಪೊಸಸಿಂದುರಂಗಳ
ನೆಲೆವಳಕುಳವಂ ತಳರ್ಚೆ ತಣ್ಮಲೆವೆಲರೀ ।
ಯಲೆದಪುವೆಮ್ಮಂತಃಪುರ
ಲಲನೆಯರಂ ಕೋಡುಸೇಡುಗೊಳ್ವನಮೀಗಳ್ ॥ ೯೦

ವನತರುಪತ್ರಂಗಳನೊಯ್ಯ
ನೆ ನೆಲೆಯಿಂ ಪತ್ತುವಿಡಿಸಿ ಕಳಕೆಗವುತ್ಪ ।
ತ್ತಿನಿಮಿತ್ತವಾಗಿ ಶಿಶಿರಮು
ಮಿನಿಸಿನಿಸನೆ ತನ್ನ ನೆಲನನಱಿಪಿದುದೀಗಳ್ ॥ ೯೧

ವ॥ ಅಂತು ದಿವ್ಯಪ್ರಭಾವದಿಂ ಸಕಳರ್ತುಕಸೌಂದರ್ಯಮುಮಂ ಬೇಱೆ ವೇಱೆ ತೋಱುವ ರಾಜ್ಯಲಕ್ಷ್ಮೀವಲ್ಲಭಂ ವನಲಕ್ಷ್ಮಿಯಂ ನೋಡು ವಾಗಳ್,

ನೋಡುತ್ತೆಂತಿರ್ಪವಿಾಬಂದತಿಥಿಗತಿಥಿಸತ್ಕಾರಮಂ ನಾಮವೋಘಂ
ಮಾಡಲ್ವೇೞ್ಕುಂ ಯಥಾಶಕ್ತಿಯಿನೆನುತೆ ಮಹಾಶ್ಚರ್ಯಮಂ ಕಣ್ಗಳುಂಬಂ ।
ಮಾಡುತ್ತುಂ ದಿವ್ಯವಸ್ತ್ರಾಭರಣಕುಸುಮಗಂಧಂಗಳಂ ಚಕ್ರಿಗಾಗಳ್
ನೀಡಿತ್ತತ್ಯಂತರಾಗೋತ್ಥಿತಕರತಳದಿಂ ತದ್ವನಸ್ತ್ರೀಸಮೂಹಂ ॥ ೯೨

ವ॥ ಆಗಳಾವನದೇವತಾಪ್ರೇರಣೆಯೊಳ್ ಚಕ್ರವರ್ತಿಗೆ ಸಂಗೀತಮಂ ತೋಱುವಂತೆ,

ಅಳಿನಿನದದ ಮದಕೋಕಿಳ
ಕಳನಿನದದ ಜತಿಯೊಳಭಿನಯಂ ನೆಗಳ್ವಿನೆಗಂ ।
ಲಳಿತಮನೇನಾಡಿಸಿದನೊ
ಮಳಯಾನಿಳನರ್ತಕಂ ಲತಾನರ್ತಕಿಯಂ ॥ ೯೩

ಅಂಕುರಪಲ್ಲವಕುಸುಮಾ
ಳಂಕಾರದ ಚೂತಲತಿಕೆ ನರ್ತಕಿವೋಲ್ ತ ।
ನ್ನಂಕುರದಿಂ ಶಾಖೆಯಿನೇ
ನಂಕುರಶಾಖಾಭಿನಯಮನಭಿನಯಿಸಿದುದೋ ॥ ೯೪

ಮುಱುಕದ ಮೆಲ್ಪಿನ ಭಂಗಿಯು
ನೆಱವಿನೊಳವೆ ಮಿಗಿಲವರ್ಗಮೆನೆ ಭರತನ ಕ ।
ಣ್ಗೆಱಕಮನೆ ಪಡೆದು ಚೆಲ್ವಿಂ
ಮೆಱಸಿದುವುದ್ಯಾನಲತೆಗಳಂ ವನಲತೆಗಳ್ ॥ ೯೫

ವ॥ ಅನ್ನೆಗಂ ಅಲ್ಲಿ ನವಮಾಳಿಕಾಕುಸುಮಸುಕುಮಾರಿಯರ್ ನವಮಾಳಿಕಾಲತೆಗಳುಮಂ, ರಂಭಾಸ್ತಂಭೋಪಮಾನೋರುಯುಗಳೆಯರ್ ಶಾತಕುಂಭರಂಭಾವನಂಗಳುಮಂ, ಅಭಿನವಮೃಗಮದತಿಳಕವಿಳಸಿತಲಲಾಟೆಯರ್ ಉತ್ಪಳತಿಳಕತರುಗಳುಮಂ, ಚಂಪಕಮುಕುಳನೀಕಾಶನಾಸಾವಂಶೆಯರ್ ಕನಕಕಿಂಕಿಣೀಕಮನೀಯಕುಸುಮಚಂಪಕವಿಟಪಿಗಳುಮಂ, ರಕ್ತಾಶೋಕಪಲ್ಲವಾಧರೆಯರ್ ಅತಿರಕ್ತಪಲ್ಲವಾಶೋಕಾನೋಕಹಂಗಳುಮಂ, ವಿನಿರ್ಜಿತಾಳಿಮಾಲಾವಿಳಾಸಸಾಳಕಾನನೆಯರ್ ಸಾಳಕಾನನಂಗಳುಮಂ, ಕಾಮಕಾರ್ಮುಕೋಪಮಾನಭ್ರೂಲತಿಕೆಯರ್ ಪುನ್ನಾಗಲತಿಕೆಗಳುಮಂ ನೋಡುತ್ತುಂ, ಕುಸುಮಾಪಚಯಕ್ರೀಡಾವಿಳಾಸದಿಂ ತೊೞಲ್ವಲ್ಲಿ,

ತಳಿರೊಳ್ಗೊಂಬಿನೊಳೊಲ್ವಕೋಕಿಳಕುಳಂ ಪೂಗೊಂಬಿನೊಳ್ಪಾಡುತಿ
ರ್ಪಳಿವೃಂದಂ ತುಱುಗಿರ್ದಬಲ್ಮಿಡಿಯ ತೂಗುಂಗೊಂಬಿನೊಳ್ಬಾಯ್ದು ಬಂ
ಡುಳಿಸುತ್ತಿರ್ಪ ಶುಕಾಳಿ ತಮ್ಮ ಬೆಸದಿಂ ತಂತಮ್ಮ ಠಾಣಾಂತರಂ
ಗಳೊಳಿರ್ದಂಗಜತಂತ್ರದಂತೆಸೆವಿನಿಂ ಚೆಲ್ವಾದುವಿಮ್ಮಾವುಗಳ್ ॥ ೯೬

ತೀವಿರ್ದತ್ತು ಮೊದಲ್ಮೊದಲ್ಗೆ ಪಣೆಯುಂ ಮೂಗಯ್ಯ ಮೂಗಯ್ಯೆ ನಿ
ಱ್ತಾವಕ್ಕೆಯ್ದೆ ಕವಲ್ಕವಲ್ತು ಪಲವುಂ ಕೊಂಬಾದುವೊಳ್ಗೊಂಬುಗಳ್ ।
ತೀವಿರ್ದತ್ತು ತಳಿರ್ಮೊದಲ್ಪಣೆಕವಲ್ಗೊಂಬೆಂಬುಮೀಕೆಂದಳಿ
ರ್ಮಾವಿಂಗಲ್ಲದೆ ಮಾವುಗಳ್ಗೆ ಪೆಱವಕ್ಕಿಂ ತೇಂ ಬೆಡಂಗಕ್ಕುಮೋ ॥ ೯೭

ವ॥ ಎಂದು ಅದಂ ಮೆಚ್ಚಿ ಮತ್ತೊಂದು ಪಲ್ಲವಿತಕೋರಕಿತಕುಸುಮಿತಫಳಿತಪರಿಣತಫಲಲಲಿತಸಹಕಾರಭೂರುಹಮನತಿನಿಬಿಡಾಲಿಂಗನಂಗೆಯ್ದು,

ತಳಿರೊಳ್ ನೀನೆ ಬೆಡಂಗನೈ ನನೆಗಳೊಳ್ ನೀಂ ನೀಱನೈ ಪುಷ್ಪಸಂ
ಕುಳದೊಳ್ ನೀನೆ ವಿಳಾಸಿಯೈ ಮಿಡಿಗಳೊಳ್ ನೀಂ ಚೆಲ್ವನೈ ಪಣ್ತಪಂ ।

ಣ್ಗಳನೋವ್ರೋಪೆಱತೇನೊ ನೀನೆ ಭುವನಕ್ಕಾರಾಧ್ಯನೈ ಭೃಂಗಕೋ
ಕಿಳಕೀರಪ್ರಿಯ ಚೂತರಾಜ ತರುಗಳ್ ನಿನ್ನಂತೆ ಚೆನ್ನಂಗಳೇ ‖ ೯೮

ವ॥ ಎಂದದಂ ಪೊಗೞ್ದು,

ರತದೊಳಗಗ್ಗಳಂ ಮುಖರತಂ ಸುರತೋತ್ಸವಕೆಂದು ಕಾಮಿನೀ
ಪ್ರತತಿಗೆ ತೋರ್ಪವ್ರೋಲ್ಮಧುರಸೀತ್ಕೃತನಾದದೊಳುಣ್ಮಿ ಪೊಣ್ಮಿ ಭೂ
ಷಿತನಯನೌಪರಿಷ್ಟ ಕರತಂಗಳ ಭೇದದೊಳೊಂದಿದಾಮ್ರಭೂ
ಷಿತಕವನಾಮ್ರಪಕ್ವಫಳದೊಳ್ ಶುಕಕಾಮಿನಿ ಚೆಲ್ವದೋಱಿದಳ್ ‖ ೯೯

ವ॥ ಎಂದದಂ ಮೆಚ್ಚುತ್ತುಂ,

ವಿರಹಿಗಳಂ ತೆರಳ್ಚ ತುಱಿವಲ್ಲಿಗೆ ನೀಂ ನೆರವುಯ್ಯೊಳಕ್ಕೆ ನೀಂ
ಬರೆ ಭುವನಂಗಳೊಳ್ ನೆಗೞ್ದಿದೀಮಧುಮಾಸಮುವಿಾಬನಕ್ಕೆ ನೀ ।
ನರಸನೆ ಎನ್ನರಾಜ್ಯವಿಭಕ್ಕೆಲೆ ನೀನೆದಲೆಂದು ಬಂದ ಮಾ
ಮರನನೆ ಮೂರುಸೂಱ್ ಪಿರಿದುಮಚ್ಚುಱಿನಿಂ ಬಲವಂದನಂಗಜಂ ‖ ೧೦೦

ಪೊಸಮಾವಿನ ಮಿಡಿಯೊಳ್ ಪ
ಚ್ಚೆಸರಮಂ ಮಾಡುವಟ್ಟಿಯಿಂ ಮತ್ತೊರ್ವಳ್ ।
ಪಸದನದ ಬಸನಿ ನಿಜಕರ
ಕಿಸಲಯರುಚಿ ಪಸುರೊಳೆಸೆಯೆ ಮಿಡಿಯಂ ಕೊಯ್ದಳ್ ‖ ೧೦೧

ಸಿರಿಸದ ಬಾಸಿಗಮಂ ಮಾಂ
ಕರಿಸುವ ನಳತೋಳ ಪಿಂಡುಗಂಕಣದ ಸರಂ ।
ಮೊರೆವಳಗಳ ಸರಮುಂ ಚ
ಪ್ಪರಿಸುವಿನಂ ಚೆನ್ನೆ ಪೊನ್ನೆಯರಲಂ ಕೊಯ್ದಳ್ ‖ ೧೦೨

ಪೊಸಮುತ್ತಿನ ಲಂಬಣದೊಳ್
ಮುಸುಂಕಿದಂತಿಡಿಯೆ ಪೂತ ಸುರಯಿಯ ಮುಗುಳಂ ।
ಪಸವಟ್ಟಂತೊರ್ವಳ್ ತನ
ಗೆ ಸರಿಗೆಗಂ ಲಂಬಣಕ್ಕಮಟ್ಟಿಯೆ ಕೊಯ್ದಳ್ ‖ ೧೦೩

ಒದೆದ ಮೃದುತಳದ ಕೆಂಪೇಂ
ಪುದಿದುದೊ ಕೆಂದಳಿರನದಱ ನೂಪುರನಿನದಂ ।
ಪುದಿದುದೊ ಪೊರೆವಳಿಗಳನೆನೆ
ಸಿದಶೋಕೆಯ ತಳಿರನೊರ್ವಳೆತ್ತಿಯೆ ತಿೞಿದಳ್ ॥ ೧೦೪

ಎಳವೂವನದೊಂದೆಳಲತೆ
ಬಳಸಲ್ ಬಗೆದಪ್ಪುದೆಂಬಿನಂ ನಳತೋಳಂ ।
ಸೆಳೆಗೊಂಬಂ ತೆಗೆದೊರ್ವಳ್
ವಿಳಾಸವತಿ ತಿೞಿದಳಾಮ್ರನವಕಿಸಲಯಮಂ ॥ ೧೦೫

ಪೊಗಡದ ಪೊಸವೂವಿನ ತುಡು
ಗೆಗಳ್ಗಮಧರದ ಪೊದಱ್ದ ತಣ್ಗಂಪಿಂಗಂ ।
ಮೃಗನಯನೆಯರನೆ ಬಿಡದೋ
ಲಗಿಸಿದುವಳಿನಿಕರಮವರನಾರೋಲಗಿಸರ್ ॥ ೧೦೬

ವ॥ ಮತ್ತಮೊರ್ವಳ್ ಮಲ್ಲಿಕಾವಲ್ಲರೀಸಮುಲ್ಲಸಿತಮುಕುಳಂಗಳನಲಂ
ಪಿನೊಳಾಯ್ದು ಕೊಯ್ದು ಮಲ್ಲಿಕಾಮಾಲಭಾರಿಣಿ,

ಮಗಮಗಿಸಲ್ಕೆ ಮಂದಯಿಸಿ ದಿಕ್ತಟಮಂ ಬಱಸಲ್ಕೆ ಪೀರ್ವ ತುಂ
ಬಿಗೆ ತಣಿಪಲ್ಕೆ ನಮ್ಮ ಜಸಮಂ ಬೆಳಗಲ್ಕಿವೆ ಸಾಲ್ಗುಮೆಂದು ತ ।
ಳ್ತಗಲದ ಲಂಪಿನಿಂ ಮಧು ಮನೋಭವದಿರ್ವರುಮೆತ್ತಿಮಟ್ಟ್ಕ ಮ
ಲ್ಲಿಗೆಗೆ ಬಸಂತದೊಳ್ ಬಯಸಿ ಮಾಡಿದರರೆಲ್ಲ ಪಟ್ಟಬಂಧಮಂ ॥ ೧೦೭

ಭುವನದೊಳಂತು ನಿನ್ನೆಸೆವ ಗೋಸನೆ ಸಂದುದು ಪಟ್ಟಬಂಧದು
ತ್ಸವಮಿದು ದೇವ ಮಲ್ಲಿಗೆ ಪಸುರ್ಗನೆದೋಱಿದುದೆಂದು ನಾಡೆ ಬಿ।
ನ್ನವಿಸಲೊಡಂ ವಸಂತಕನದೇಂ ಗುಡಿ ತೋರಣಶೋಭೆ ಪೊಯ್ಪ ಬ
ದ್ದವಣಮಳುಂಬಮಾದುದೊ ನಿಕೇತನದಲ್ಲಿ ಮನೋಜರಾಜನಾ ॥ ೧೦೮

॥ ಅಕ್ಕರ ॥

ಸೊಡರ ಬೆಳಗಿನೊಳ್ ಕೊರಗುವ ಜಾಜಿಯಂ ತುಂಬಿಯೊಳ್ಪಗೆಗೊಂಡ ಸಂಪಿಗೆಯಂ
ಮುಡಿಯೆ ಸೊಗಯಿಸಿದದಿಮುರ್ತ್ತಿಯಲರಂ ಮುಸಿಯೊಳ್ ಸವನಾದಗೊಜ್ಜಗೆಯಂ ।

ನುಡಿಯಲಕ್ಕುಮೆ ಪೂಗಳಲೆಕ್ಕಮನೆಂದೆಯ್ದೆ ಕಾಮನೊಡ್ಡೋಲಗದೊಳ್
ಮುಡಿಗೆ ಯಿಕ್ಕಿಯುಂ ಕೈಯನೆತ್ತಿ ಪೊಗಳ್ದಂ ತಣಿಯನೆ ಮದನನುಂ
ಮಲ್ಲಿಗೆಯುಂ ॥ ೧೦೯

ಪರಿಯೆ ಪಸುಪುರ್ಚ ಬೆಳ್ಪಡರೆ ಬಲ್ಮುಗುಳೊಳ್ ಪೊರೆದೋಱಿ ತೆಂಬೆಲ
ರ್ಪೊರೆವೊರೆಯುಂ ಸಡಿಲ್ವೆ ನಡುಪೂಂಗಿರೆ ಮಲ್ಲಿಗೆಗಳ್ ವಸಂತದೊಳ್ ।
ಬಿರಿದೊಡೆ ನಲ್ಲರಂ ನೆನೆದು ನಲ್ಲರ ಮೆಲ್ಲೆರ್ದೆಗಳ್ ನಿರಂತರಂ
ಬಿರಿವುವದೆಂತೊ ಮಲ್ಲಿಗೆಗೆ ನಲ್ಲರ ಮೆಲ್ಲೆರ್ದೆ ವೇಳೆಗೊಂಡುದೋ ॥ ೧೧೦

ವ॥ ಎನೆ ಮತ್ತೊರ್ವಳ್ ಮಾಳತೀನವಮಾಳಿಕಾಕುಸುಮಸುಕುಮಾರೆ

ರತಿಗೆ ಮುಡಿಯಲ್ಕೆ ಮದನಂ
ಗೆ ತುಱುಂಬಲ್ಕಿರ್ದುದೆಂದು ಮಧು ಸುೞಿವ ಮಧು ।
ವ್ರತಮುಮನಲೆದಪನೆಂಬೀ
ಪ್ರತೀತಿಗಿರುವಂತಿಯಂತೆ ನೋಂತಲರೊಳವೇ ॥ ೧೧೧

ವ॥ ಎನೆ ಮತ್ತೊರ್ವಳ್ ಮಾಳತೀಶ್ಯಾಮಳಾಂಗಿ,

ಇದಿರೊಳ್ ನನೆದೋಱಿ ವಸಂ
ತದೂತಿಯೆನೆ ನೆಗೞ್ದ ಮಾಧವೀಲತೆಯೆನೆ ಸಂ ।
ದದಿಮುರ್ತ್ತೆಯ ಪೂಗೊಂಚಲ
ಪುದುವಿನೊಳೞಗಿದ ಮದಾಳಿಗಳ್ ಮೆಱೆದಪುವೇ ॥ ೧೧೨

ವ॥ ಎನೆ ಮತ್ತೊರ್ವಳ್ ಮಾಳತೀಶ್ಯಾಮಳಕೋಮಳಾಂಗಿ,

ಪೊಸತಲರ್ದ ಪದದೊಳುಣ್ಮುವ
ಪೊಸಗಂಪಂ ಪಡೆದು ಪೊೞ್ತಱೊಳ್ ಜನಮಂ ಸೋ ।
ಲಿಸುಗುಮನಂಗಾಮೃತಸಾ
ಧ್ಯಸಾರಮಂ ಜಾದಿಯಲ್ಲದೇಂ ಪಡೆದಪುದೇ ॥ ೧೧೩

ವ॥ ಎನೆ ಮತ್ತೊರ್ವಳ್ ಕುಂದಕುಟ್ಮಲರದನೆ,

ಫುಲ್ಲಶರಂಗಿಸುವೆಡೆಗಿವೆ
ನಲ್ಲಂಬುಗಳೆನಿಸಿ ತುಱುಗಿ ಮಲರ್ದಲರ್ದೆಸೆವೀ ।

ಮೊಲ್ಲೆಯುಮೊಲಿಸಿದ ನಲ್ಲರ
ಲಲ್ಲೆಯುಮಾರಾರ ಮನಮುಮಂ ಸೋಲಿಸವೇ ॥ ೧೧೪

ವ॥ ಎನೆ ಮತ್ತೊರ್ವಳ್ ಸುರಭಿಪಾಟಳೀಪಾಟಳದಶನವಸನೆ,

ಕಂಪುಗೊಳಲ್ಕೆಸಿದರ್ಸಿರಿನಿ
ಸಂ ಪೊಱಮಟ್ಟೆಸಳ ತುದಿಯನೆಯ್ದಲೊಡಂ ಮು ।
ನ್ನಂ ಪಳೆಯವಪ್ಪ ಪೂಗಳ
ಕಂಪಿನೊಳೇಂ ಪೊಗಱ ಪಾಟಳೀ ಪರಿಮಳಮಂ ॥ ೧೧೫

ವ॥ ಎನೆ ಮತ್ತೊರ್ವಳ್ ಅಭಿನವಸುರಭಿಕುಸುಮಸೌರಭೆ,

ಎಸೆಳ್ಗಳನೆಯ್ದೆ ಕಂಡರಿಸಿ ಮುತ್ತಿನೊಳಲ್ಲಿ ಸುವರ್ಣಚೂರ್ಣಮಂ
ಪಸರಿಸಿ ಕೇಸರಾಕೃತಿಯೊಳಲ್ಲಿಗೆ ಕರ್ಣಿಕೆಯಂದಮಾಗೆ ಕೀ ।
ಲಿಸಿ ಪೊಸತಪ್ಪಮಾಣಿಕದ ನುಣ್ಬರಲಂ ಮಧು ಮನ್ಮಥಂಗೆ ಬ
ಣ್ಣಿಸಿ ಸಮೆದಂತೆ ತೋಱುವುದು ಪೂಗಳೊಳೇಂ ಸುರಹೊನ್ನೆ ಚೆನ್ನನೋ ॥

ವ॥ ಎನೆ ಮತ್ತೊರ್ವಳ್ ಕರ್ಣಿಕಾರಕುಸುಮಸುಕುಮಾರವರ್ಣೆ,

ಪರಿಣಯನೋತ್ಸವಂ ರತಿಗನಂಗನೊಳಾಗೆ ವಸಂತಕಾಂತೆಯರ್
ನೆರೆದು ದಿಗಂಗನಾ ಸಮಿತಿಗಳ್ಕಱನೊಳ್ ಕುಡುವಲ್ಲಿ ಕೇಸರಂ ।
ಬೆರಸಿದ ಪೊನ್ನ ಬಾಯಿನದ ಬಟ್ಟಲಿವೆಂಬಿನಮಾರ್ದ್ರಕೇಸರಂ
ಬೆರಸಿದ ಚೆಲ್ವು ತಳ್ತೆಸಳದೇನೆಸೆದಿರ್ದುದೊ ಕರ್ಣಿಕಾರದಾ ॥ ೧೧೭

ವ॥ ಎನೆ ಮತ್ತೊರ್ವಳ್ ಚಂಪಕಕುಸುಮಗಂಧಿ,

ಪಡೆದೊಡೆ ಕಂಪಂ ಬಣ್ಣಂ
ಬಡೆಯವು ಬಣ್ಣಮನೆ ಪಡೆದುವಪ್ಪೊಡೆ ಕಂಪಂ ।
ಪಡೆಯವುಱಿದಲರ್ಗಳೆರಡುಮ
ನೊಡವೆಳೆದೀಚಂಪಕಕ್ಕೆ ಪೂಗಳ್ ದೊರೆಯೇ ॥ ೧೧೮

ಗಳ್ಕನೆ ಕೊಳೆ ಕಡುಗಂಪಿನೊ
ಳಳ್ಕಮೆ ಗೊಳಗಪ್ಪೆವೆಂದು ಮಧುಪಂಗಳ್ ತಂ ।

ಮೆಲ್ಕಮೆಯಿ ಚೌತವಾಗಿರೆ
ನೀಲ್ಕರಿಸಿದುವುಂತೆ ಚಂಪಕಕ್ಕೆಬಗದುವೇ ॥ ೧೧೯

ವ॥ ಎನೆ ಮತ್ತೊರ್ವಳ್ ಕೇತಕೀದಳಧವಳಲೋಚನೆ,

ಭುವನದೊಳೆಮ್ಮ ಮುಟ್ಟಿದಲರಾವುವೆಱಂಕೆಯು ಗಾಳಿ ಮುಟ್ಟೆ ಕಂ
ದುವುವೆಸಳೊರ್ಮೆ ಪೀರಲೊಡಮಾಗಳೆ ಸೋರ್ವುವು ಕಂಪು ಸೋಂಕೆ ಕಂ
ದವು ದಳಮೆಯ್ದೆ ಪೀರೆ ತವದುಣ್ಮುವ ಸಾರಭವೆಂದು ಪೀರ್ದು ಪೀ
ರ್ದವಚಱದೇಂ ತೆಱಂದಿರಿದು ಪಾಯ್ದವೊ ಕೇತಕಿಯೊಳ್ ಮದಾಳಿಗಳ್ ॥

ಎಸಳಂ ಮುಟ್ಟಲೊಡಂ ತ
ನ್ನ ಸಾರಭಂಗೆಟ್ಟು ನೆಗೆದ್ದ ಕತ್ತುರಿವಣ್ಣಂ ।
ಮಸಿಗಮಣಿಯಪ್ಪುದೆನೆ ಬ
ಣ್ಣಿಸುವಂ ಕೇದಗೆಯ ಕಂಪನೇವಣ್ಣಿಸುವಂ ॥ ೧೨೧

ವ॥ ಎನೆ ಮತ್ತೊರ್ವಳ್ ಸಿಂಧುವಾರಸುರಭಿನಿಶ್ವಾಸೆ,

ಅಲರ್ದರೆಗಳಗೆಯು ಜಾದಿಯು
ಮಲೆಪುಂ ಮಲ್ಲಿಗೆಯ ಪೊಂಕಮುಂ ಟಱಿಕವನಾ ।
ರ್ತಲೆಯೊಳ್ ತಾಳ್ದವರೆಂದೇ
ನಲೆದುದೊ ಸಿಂದುರವೆ ತವದ ತನಿಗಂಪಿಂದಂ ॥ ೧೨೦

ವ॥ ಎನೆ ಮತ್ತೊರ್ವಳ್ ನೀಲೋತ್ಪಳದಳನಯನೆ,

ಉನ್ನತವಾಗಿರೆ ಸೊಕ್ಕಿ
ರ್ದುನ್ನತಕುಚೆಯರ ವಿಳೋಚನಾರುಣರುಚಿಯಂ ।
ತನ್ನೆಸಳ್ಗಳನನುಕರಿಸುವ
ಚೆನ್ನೈದಿಲ ಕಂಪನೆಯ್ದಲಾರ಼್ವೆ ಪೂಗಳ್ ॥ ೧೨೩

ವ॥ ಎನೆ ಮತ್ತೊರ್ವಳ್ ವಕುಳಮುಕುಳಾಸವವದನಪರಿಮಳೆ,

ಮುಕ್ಕುಳಿಸಿಯುಗುಳ್ವ ಮಧುವಿಂ
ಮಿಕ್ಕೆಸೆವಾಮೋದಮಿದಱ ತಣ್ಗಂಪಿನೊಳೊಳ ।

ಪೊಕ್ಕುದೆನೆ ಮಧುವ ಕಂಪಂ
ಮುಕ್ಕುಳಿಸಿದ ವಕುಳಮಾರುವಮಂ ಸೊಕ್ಕಿಸದೇ ॥ ೧೫೪

ವ॥ ಎನೆ ಮತ್ತೊರ್ವಳ್ ಶತಪತ್ರಕುಬ್ಜಕುಸುಮಮಾಳಾಕೋಮಳೆ,

ಮಗಮಗಿಸುವ ಕಂಪೆಸಳೊಳೆ
ತಗುಳ್ದಂ ಮೆಲ್ಪೆಸೆಯೆ ಮನಮನಳಿಗಳ ಬಳಗಂ ।
ಜಗದ ಮನದೊಡನೆ ಸೇವಂ
ತಿಗೆಗಂ ಗೊಜ್ಜಗೆಗಮಲ್ಲದೇನೆಱಗುಗುಮೋ ॥ ೧೫೫

ವ॥ ಅಂತುಮಲ್ಲದೆ,

ಉದಿರ್ದೊರ್ಪ್ಪುವುದೆಯ್ದೆ ತುಱುಂ
ಬಿದೊಡೊಪ್ಪುವುದೆಸಳ ಮೆಲ್ಪಿನಿಂ ದೊಪ್ಪುವುದು ।
ಣ್ಮಿದ ತಣ್ಗಂಪಿಂದೊಪ್ಪುವು
ದದಱಿಂದಲರೊಳಗೆ ಗೊಜ್ಜ ಗೊಜ್ಜಗೆಯೆ ವ್ರೊಲಂ ॥ ೧೫೬

ವ॥ ಎನೆ ಮತ್ತೊರ್ವಳ್ ಕಸ್ತೂರಿಕಾಕದಂಬಚುಂಬಿತಕಬರೀಭಾರೆ,

ಪರಿಮಳತಸೌಂದರಂ ಬಂ
ಧುರಗಂಧಂ ಮದನರಾಗವರ್ಧನಕರಮೀ ।
ಮರುವಂ ಕಬರ್ಗಳಮುಮಿರೆ
ಮರುಳಲ್ಲವೆ ಕುಸುಮನಿಚಯದೊಳ್ ಪಾಯ್ವಳಿಗಳ್ ॥ ೧೫೭

ವ॥ ಎಂದು ಭಿನ್ನರುಚಿಗಳಾಗಿ ತಂತಮ್ಮ ಮೆಚ್ಚಿದಿಚ್ಚೆಯ ಪೂಗಳನೆ ಪೊಗಪೆ ಮತ್ತೊರ್ವಳ್ ಕುಂಕುಮಪಂಕಾಂಕಿತಕದಂಬಚುಂಬಿತಮೃಗಾಂಕವಕ್ತ್ರೆ,

ಲಲನಾಮುಖೇಂದುಲಾವ
ಣ್ಯಲೀಲೆಯಂ ಪಡೆವ ಬಣ್ಣದಿಂ ಕಂಪಿಂದೇ ।
ನಲೆದುದೊ ಬಯ್ತುಗದಂತಿರೆ
ಲೆತಗೇಱುವ ಕುಸುಮನಿಚಯಮುಮಂ ಕಾಶ್ಮೀರಂ ॥ ೧೫೮

ವ॥ ಎಂದು ಬಗೆಗೆವಂದ ಪೂಗಳೊಳ್ ಪೂದುಡುಗೆಯಂ ಮಾಡಿ ವಸಂತಕಾಂತೆಯುರಂತೆ ನೆಱೆಯೆ ಕಯ್ಗೆಯ್ದಾಗಳ್,

ಬನದ ತಳಿರ್ ಕಳಿಕೆ ಮುಗುಳ್
ನನೆ ಬಿರಿಮುಗುಳಲರ ಗೊಂಚಲೆಂಬಿವು ವನಜಾ।
ನನೆಯರ ಪೂದುಡುಗೆಗೆ ಮ
ಟ್ಟನಾದುವೇಂ ಪೆಂಪೊ ಭರತನಂತಃಪುರದಾ ॥ ೧೨೯

ವ॥ ಆಗಳಂತಃಪುರಕಾಂತಾಪ್ರಸಾಧನಕುಸುಮಾವಲೋಕನಮತಿಪ್ರಮೋದಮಂ ಪಡೆಯೆ,

ಅವಚಯಿದೊಂದೆ ಪದ್ಮದೊಳೆ ನೀಲ್ದೊಳಗಾದಳಗೆಮ್ಮವೃತ್ತಿ ಸಂ
ಭವಿಸದು ಕಲ್ಪುದಲ್ತೆ ವಿಟರಿಂ ವಿಟವೃತ್ತಮನೆಮ್ಮೊಳಲ್ಲಿ ಗಾ।
ವೊವಜರೆಮೆಂಬವೋಲ್ಮೊರೆವ ಮೆಲ್ಪೆಸೆಯುತ್ತಿರೆ ಸೂಱೆಸೂಱೆದೇಂ
ಸವಿದುವೊ ಬಣ್ಣವಣ್ಣಿಗೆಯ ಪೂಗಳ ಸೌರಭಮಂ ಮದಾಳಿಗಳ್ ॥ ೧೩೦

ವ॥ ಆಗಳಾಕೆಗಳಲಕ್ತರಕ್ತಮಣಿನೂಪುರಕ್ವಣಿತಸುಭಗವಾಮಪಾದಪ್ರಹರಣದೊಳಶೋಕತರುಗಳಂ ಕುಸುಮಿಸಿಯುಂ, ವದನಸರಸಿಜಾಸವಸೇಕದೊಳ್ ವಕುಳಕುಜಂಗಳನಲರ್ಚಿಯುಂ, ಉನ್ನತಕುಚತಟಾಘಾತದೊಳ್ ಕುರವಕಂಗಳಂ ಪುಷ್ಪಿತಂಗಳಂ ಮಾಡಿಯುಂ, ಕ್ಷೀರಗಂಡೂಷಸೇಚನದೊಳ್ ಚಂಪಕವಿಟಪಿಗಳನಲರ್ಚಿಯುಂ, ಆಯತಧವಳಾಪಾಂಗಸಂಗದೊಳ್ ತಿಳಕಭೂರುಹಂಗಳನಭಿನವಲತಾಂತಂಗಳ್ ಮಾಡಿಯುಂ ಇಂತು ನಾನಾವಿಧಕ್ರೀಡೆಯಿಂದುಪವನಕ್ರೀಡೆಯಂ ನಿರ್ವರ್ತಿಸಿ,

ಇದು ಕಡುನಾಣ ಪುತ್ತಲವಿಂ ನೆನೆಯುತ್ತಿರಿಮೆಮ್ಮನೆಂಬುದಾ
ವುದು ಗುಣಮೆಮ್ಮೊಳಾಗೆ ನೆನೆದಪ್ಪಿರಶೋಕಮೆ ವಾಮಪಾದದಿಂ।
ದೊದೆದುದೊ ಕೇಸರದ್ರುಮಮೆ ನಿನ್ನ ಮನಾನಸಿಂಧುವಿಂದೆ ಪೂ
ಱ್ದುದೊ ಕೃತಮಾವುದಿಂ ಮಱೆವುದೆಮ್ಮ ಮದೋತ್ಕಟಚೇಷ್ಟಿತಂಗಳಂ ॥

ವ॥ ಎಂದಶೋಕವಕುಳಪಾದಪಂಗಳಂ ಬೀಳ್ಕೊಂಡು,

ನನೆಗಳ ಗೊಂಚಲಂ ತಳಿರ ತೊಂಗಲನಾಡುವ ಬೆಳ್ವಳಪ್ಪ ಕೊಂ
ಬಿನ ಮಿಡಿಯಂ ತೆರಳ್ಕೆ ತೆಗೆದೋವದೆ ಕಾಯದೆ ಕೂರಕರ್ವದಿಂ।

ಸೊನೆಸುರಿವನ್ನೆಗಂ ಪಱಿದು ನೋಯಿಸಿ ಕಾಡಿದೆವಿನ್ನದೊಂದುಮಂ
ನೆನೆಯದೆ ನೀನುಮಾಮುಮೊಡನಿರ್ದಿರಮಂ ನೆನೆ ಬಾಳಚೂತಮೋ ॥೧೩೦

ವ॥ ಎಂದು ಮಾಕಂದಮಹೀರುಹಮನಪ್ಪುಕೆಯ್ದು,

ಭಂಗಿಗಳೊಳವೆಮ್ಮಳಾದೀ
ಸಂಗಡಮಂ ನೀಮೆ ಮನದೆಗೊಂಡೆಮ್ಮ ಕಿಸುರ್ ।
ಪಿಂಗುಗಗಲ್ಪೆಡೆಯೊಳ್ ಕೆಳೆ
ಸಂಗಳಸುಗೆ ನಿಮಗಮೆಮಗಮಿಂ ಲತೆಗಳಿರಾ ॥ ೧೩೩

ವ॥ ಎಂದು ವನಲತೆಗಳನನುನಯಿಸಿ,

ಪದೆದುತ್ತಂಸವತಂಸಶೋಭೆಗೆ ಭವದ್ಬಾಳಪ್ರವಾಳೋಲ್ಲಸ
ನ್ಮೃದುಪುಷ್ಪಸ್ತಬಕಂಗಳಂ ಪಱಿದೆವಿನ್ನಾದೋಷಮಂ ಕೊಳ್ಳದಿ ।
ರ್ಪುದು ಕೇಳೀವನಪಾದಪಂಗಳಿರ ಚಿತ್ತಂಗೊಂಡು ಬೀಳ್ಕೊಂಡು ರಾ
ಗದೆ ನಿಮ್ಮಂ ಬಲಗೊಂಡು ಪೋಪಗುಣಮಂ ಕೊಳ್ಳಿಂ ಮನಃಪ್ರೀತಿಯಿಂ ॥

ವ॥ ಎಂದು ವನತರುಗಳನೊಡಂಬಡಿಸಿ,

ಬನದ ಪಡಿಯಱನನಂಗಂ
ನಿನಗಿತ್ತೊಡೆ ಪುಗಲಿಮೆಂಬುದೇಂ ದೋಷಮೆ ಚೀ ।
ನೆನೆಯೆವದಂ ನಿನ್ನಿಂಚರ
ಮನೆ ಮನದೊಳ್ ಸೆನೆವೆವಾಗಳುಂ ಪರಭೃತಮೇ ॥ ೧೩೫

ಇರು ಮೌನವ್ರತಮಂ ತಳೆ
ದರಣ್ಯದೊಳಗಾರ್ಗೆ ಮೆಱೆದಪೈ ನಿನ್ನೆಸೆವಿಂ ।
ಚರಮಂ ಕಳಕೋಕಿಳ ಕಿ
ನ್ನರವೀಣಾಕ್ವಣಿತದಿಂಪನನುಕರಿಸುವುದಂ ॥ ೧೩೬

ವ॥ ಎಂದು ಕೋಕಿಳಕುಳಮಂ ವಿಸರ್ಜಿಸಿ,

ಪೊಸತಲ್ತು ನಿನಗೆ ಪೂವಿನ
ಪೊಸಗಂಪೀಬನದೊಳೀಮೃಗೋದ್ಭವಗಂಧಂ ।

ಪೊಸತದನೋಲಗಿಸಿದೆವಿರು
ಕುಸುಮಾಸವರಸದೆ ತಣಿದು ನೀನಳಿಕುಳಮೋ ॥ ೧೩೭

ವ॥ ಎಂದು ಮಧುಕರನಿಕರಮಂ ಬಿಡಿಸಿ ,

ಮನದ ಪೊಡರ್ಪುಗುಂದದೆ ಲತಾಲಯಕೇಳಿವಿಹಾರದಲ್ಲಿ ನಂ
ದನವನವಿಭ್ರಮಭ್ರಮಣದಲ್ಲಿ ಸರೋವರದೀರ್ಘಿಕಾಂಬುಮ ।
ಜ್ಜನಯುತಲೀಲೆಯಲ್ಲಿ ಬರವೊಂದುಗುಮಾಗಳಿನೆಮ್ಮ ಪೋಗು ಗೆಂ
ಟನಿತೆಡೆಯಂ ತಗುಳ್ದು ಬರಲಾರ್ಪಿರೆ ನಿಮ್ಮ ವಿಳಾಸಯಾನದಿಂ ॥ ೧೩೮

ವ॥ ಎಂದತಿಲಲಿತಗಮನಸಮುಚ್ಚಳಿತರಶನಾಕಳಾಪನೂಪುರಕಿಂಕಿಣೀ ಕ್ವಣಿತಾನುಸಾರಿಯಾಗಿ ಬರ್ಪ ರಾಜಹಂಸಮಂಡಳಮಂ ಮಗುಳ್ಚಿ ಬರ್ಪಾಗಳ್,

ಪೊಳೆಯುತ್ತಿರ್ಪಕ್ಷಿವಿಕ್ಷೇಪದ ಪೊಳಪುಗಳಿಂದಾನನಶ್ರೀವಿಲಾಸಂ
ಗಳಿನಂಗೋಪಾಂಗದೊಳ್ ಸಂಗಳಿಸುವಪಲವೃಂಭಂಗಿಯುಂಕೂಡೆನೀಲೋ ।
ತ್ಪಲಷಂಡಂ ಪದ್ಮಷಂಡಂ ಲಲಿತವನಲತಾಷಂಡಮುಂ ತಂಡತಂಡಂ
ಗಳಿನೀಬಂದಪ್ಪುದೆಂಬಂತೆಸೆದುದು ಭರತಾಂತಃಪುರಸ್ತ್ರೀಸಮೂಹಂ ॥ ೧೩೯

ವ॥ ಅಂತು ವನವಿಹಾರಾನಂತರಂ ಭರತೇಶ್ವರ ಚಕ್ರವರ್ತಿ ವನಕುಸುಮಪಲ್ಲವೋಪಶೋಭಿತಲೀಲಾಪ್ರಸಾಧನಂ ಮದಾಂಧಸಿಂಧುರಲೀಲೆಯಿಂದ ಮಂತಃಪುರಕರಿಣೀಗಣಂ ಬೆರಸು ಗಂಗಾಜಲಕ್ರೀಡಾಸಕ್ತಚಿತ್ತನಾಗಿ ತತ್ಪರಿಸರಪ್ರದೇಶಮನೈಯ್ದೆವಂದು ಚಂಚತ್ಪಂಚರತ್ನಂಗಳೊಳಂ ಕೆದಱಿದ ಕಾಳಾಗರುಕಾಶ್ಮೀರಕಸ್ತೂರಿಕರ್ಪೂರಯಕ್ಷಕರ್ದಮಕ್ಷೋದದೊಳಂ ನದೀತರಂಗಂಗಳಂ ವಿಚಿತ್ರವರ್ಣಂಗಳಂ ಮಾಡಿ,

ಯುವತಿಜನಶಂಕೆಯಂ ಮು
ನ್ನವಯದೊಳ್ ಪೊಕ್ಕು ಕಳೆದು ಸುರಸರಿದಂಭಃ ।
ಪ್ಲವದೊಳ್ ಚಕ್ರಧರಂ ದು
ಗ್ಧವಾರ್ಧಿಯೊಳ್ ನಿಂದ ಕನಕಗಿರಿಯನೆ ಪೋಲ್ತಂ ॥ ೧೪೦

ವ॥ ಅಂತು ಚಕ್ರಧರನ ಕ್ರೀಡಾಪ್ರಾರಂಭಮಂ ಕಂಡು ನೀರಾಟಕ್ಕೆ ತಕ್ಕ ಪಸದನಂ ಗೊಂಡು ತಂಡತಂಡದಿಂ ಪುಗುವಾಗಳ್,

ಕಳಹಂಸೀಲೀಲೆ ನೀಲೋತ್ಪಳರುಚಿ ಕನಕಾಂಭೋಜಿನೀಲಕ್ಷ್ಮಿ ಭೃಂಗೀ
ವಳಯಂ ಶ್ರೀಚಕ್ರವಾಕದ್ವಯುವಿಳಸನಮಂತಃಪುರಸ್ತ್ರೀಸಹಸ್ರಂ ।
ಗಳ ಮೆಯ್ಯೊಳ್ ತಾನೆ ತಳ್ಪಾಯ್ದೆಸೆದುದು ಪೆಸರ್ಗೊಳ್ವೆಗ್ಗರಾರೆಂಬಿನಂ ನಿ
ರ್ಮಳಹಾರಂ ಸ್ವಚ್ಛನೀರಂ ಸೊಗಯಿಸಿತದು ಬೇಱೊಂದು ಗಂಗಾಪ್ರವಾಹಂ ॥

ಜಳಕೇಳಿಯೊಳಧಿಪನನೆರ್ದೆ
ಗೊಳಿಸಿದುದಂತಃಪುರೀಜನಂಗಳ ಲೀಲಾ ।
ಕಿಳಕಿಂಚಿತಲಲಿತವಿಹೃ
ದ್ವಿಳಾಸವಿಚ್ಛಿತ್ತಿ ವಿಭ್ರಮಾದಿ ಗುಣಂಗಳ್ ॥ ೧೪೦

ಸರಸಿಜನೀಲೋತ್ಪಲಕರಿ
ಕರಹಂಸೀವದನರೂಪದಿಂ ನೆಱೆದಂತಃ ।
ಪುರಕಾಂತಾಕರತಳದೊಳ್
ಕರಮೆಸೆದುವು ಕನಕಶೃಂಗಕಂಗಳ್ ಪಲವುಂ ॥ ೧೪೩

ಜಳಕೇಳಿ ನಿಮಿರ್ಗೆ ಭರತನ
ಲಳಿತಾಂತಃಪುರದೊಳೆಂಬ ತನ್ನಱಿಕೆಯೊಳಾ ।
ಜಳದೇವಿ ಬೆಸಸೆ ಗಂಗಾ
ಜಳಮಾಯ್ತು ನಿತಂಬಿನೀ ನಿತಂಬದ್ವಯಸಂ ॥ ೧೪೪

ನವವಧುವ ಶಂಕೆಯುಂ ಕಳೆ
ವ ವಿದಗ್ಧವಿಟಂಬೊಲಲೆವ ತೆರೆಗಳ್ ಮೆಲ್ಲಂ ।
ಬವರಿಸಿ ಸೋಂಕುತ್ತುಂ ಕಳೆ
ದುವು ಘನಕುಚಕಳಶಕುಂಕುಮಸ್ಥಾಸಕಮಂ ॥ ೧೪೫

ಅಲಘುನಿತಂಬದ ಪೊಯ್ಲೊಳ್
ನೆಲೆಮೊಲೆಯುಳ್ಳೆಱೆನೊಳ್ ತರಂಗಂಗಳ್ ತೂ ।
ಳ್ದಲಱುಗುಮವಱಳ್ಳೆಱೆನೊ
ಳಲಱುಗುವೆರ್ದೆ ತೆರೆಗಳಱ ತೊಳ್ಪುದು ಪಿಱಿದೇ ॥ ೧೪೬

ಮಂದರ ಪರ್ವತಮಂ ಸುರ
ಸೌಂದರಿಯರ್ ದುಗ್ಧಜಳದೆ ತಳವಂತೆವೊಲಾ ।

ನಂದೋದಯಯುದಂತಃಪುರ
ಸೌಂದರಿಯರ್ ತಳ್ವಿದರಾದಿದೇವಾತ್ಮಜನಂ ‖ ೧೪೭

ವ‖ ಆಗಳಮೃತಕಿರಣಮೃತಜಲಂಗಳಿಂ ಕುಮುದಿನಿಗಳಂ ತಳ್ವಂತೆ,

ಕಳಿಕಾಸಂದೋಹಮಂ ಪೊಣ್ಮುವ ಪುಳಕಚಯಂ ಪಲ್ಲವೋಲ್ಲಾಸಮಂ ಕೆಂ
ದಳಮೆತ್ತಂ ಪೊದಟ್ದಿರ್ಪಲರ್ಗಳನಲರ್ಗಣ್ಪೋಲ್ತು ಕೈಮಿಕ್ಕ ಚೆಲ್ವಿಂ ।
ಪೊಳೆಯುತ್ತಿರ್ಪನ್ನೆಗಂ ಕುಂಕುಮದ ಕದಡಿನೊಳ್ ಕೆಂಕಮಾಗಿರ್ದ ನೀರಂ
ತಳ್ವಿದಂ ಶುದ್ಧಾಂತಕಾಂತಾಲತಿಕೆಗಳನತಿಪ್ರೀತಿಯಿಂ ರಾಜರಾಜಂ ‖ ೧೪೮

ಸುಕರ್ಗಳ್ದುರುಳಿಗುರುಳ್ ನಸು
ಸುಕ್ಕಿದ ಕುಚಚೂಚುಕಂ ಬೆಳರ್ತಧರಂ ನೀರ್ ।
ಪೊಕ್ಕುಟಿಯೊಳ್ ಜೋಲ್ದುಳ್ಳುಡೆ
ಸೌಕ್ಕೆಯೊಳ್ ನೃಪನಮನಮನಳವಡಿಸಿದುದೋ ‖ ೧೪೯

ಕಳೆದುದು ಪತ್ರಭಂಗದ ಬೆಡಂಗುಗಳಂ ಕುಟಿಲಾಲಕಂಗಳಂ
ಬಳಯಿಸಿದತ್ತು ಕಣ್ಗೆಸೆವ ರಾಗಮನೆಯ್ದಿಸಿ ಕೇಶಹಸ್ತಮಂ ।
ಚಳಯಿಸಿದತ್ತು ಮೆಯ್ಗೆ ಪುಳಕೋದಯಮಂ ಪಡೆದತ್ತು ತಲ್ಲತಾ
ಲಳಿತೆಯರ್ಗಿತ್ತುದಿಂತು ಜಲಕೇಳಿ ಮನೋಭವಕೇಳಿಲೀಲೆಯಂ ‖ ೧೫೦

ಅಂತು ಬೆಳರ್ತಧರಂ ಕ
ಣ್ಣಿಂ ತುಳ್ಕುವ ಕೆಂಪು ಸರದ ನಡುಕಂ ಮಿಗೆ ತ ।
ನ್ನಂತಃಪುರಲಲನೆಯರ್ಗೆ ಲ
ತಾಂತದ ವಿಭವಮನೆ ಮಾಡಿ ತಾಂ ಪೊಱಮಟ್ಟಂ ‖ ೧೫೧

ಮನಸಿಜನೃಪಲೀಲಾಲಾಂಛನಂ ಸ್ವಸ್ತಿಕಂ ಸ್ತ್ರೀ
ಜನದೊಳೆಸೆದು ನಿಂದತ್ತುತ್ತರೀಯಾಂತರೀಯಂ ।
ತೊನೆಯೆ ತೊಲಗಿ ನಿಂದಿರ್ದಲ್ಲಿ ತಂದಿತ್ತುದುಚ್ಚ
ಸ್ತನದೊಳಮರ್ದಹಸ್ತಸ್ವಸ್ತಿಕಂಗಳ್ ಬೆಡಂಗಂ ‖ ೧೫೨

ಮಱಸಿರ್ದಂಬರಮೆಯ್ದೆ ನಾಂದ ತನುವಂ ಪತ್ತಿರ್ದು ಕಣ್ಗೊಲ್ಲಿಯುಂ
ತೆಱಪಂ ಮಾಡಿ ಮನೋಜಚಕ್ರಿಯ ಜಯಶ್ರೀರಾಜ್ಯಚಿಹ್ನಂಗಳಂ ।

ನೆಱೆದೊಂದಂದದಿನೀಕ್ಷಣಕ್ಕೆ ಪರಮಾನಂದಾಮೃತಂ ಸಾರ್ವಿನಂ
ನೆಱೆದರ್ ಚಕ್ರಿಯ ಮುಂದೆ ತಕ್ಕೃತವಿಚಿತ್ರಾನಂಗಚಿಹ್ನಂಗಳಂ ॥ ೧೫೩

ವ॥ ಅಂತು ಜಲಕ್ರೀಡಾವಿನೋದಂಗಳಂ ನಿರ್ವರ್ತಿಸಿದಾಗಳ್,

ಉದಿರ್ದಲ್ಲೊಕ್ಕ ವಿಚಿತ್ರಪುಷ್ಪಚಯದಿಂ ತದ್ಗಂಧಸಂಸಕ್ತಷ
ಟ್ಪದದಿಂ ಸ್ತ್ರೀಕುಚಕುಂಭಕುಂಕುಮರಜಃಕಲ್ಲೋಳದಿಂ ಬಣ್ಣವ ।
ಣ್ಣದ ಚೆಲ್ವಂ ಗೆಡೆಗೊಂಡು ಚಿತ್ರಿತಪತಾಕಾಲೀಲೆಯಂ ತಾಳ್ದಿ ನಿಂ
ದುದು ಗಂಗಾನದಿ ಚಕ್ರವರ್ತಿಯ ಸಮಸ್ತಾಂತಃಪುರಕ್ರೀಡೆಯೊಳ್ ॥೧೫೪

ಧರೆಯೊಳ್ ಸಂದಿರ್ದ ಗಂಗಾನದಿಗೆ ಜಯಸಮಾರಂಭನಿಶ್ಶೇಷದಿಕ್ಸಂ
ಚರಣಾಕ್ಷುಣ್ಣಾವಗಾಹಾಗತಕರಟಿಶಿರಃಪೀಠಸಿಂದೂರಪಾಂಸೂ ।
ತ್ಕರದಿಂ ಸೀಮಂತಸಿಂದೂರದವಿರಚನೆಯಂ ಕೂಡೆ ಮಾಡುತ್ತುಮಿರ್ದಂ
ಭರತೇಶಂ ತತ್ತಟೀನಂದನವಿಟಪಿ ತಟಚ್ಛಾಯವಿಶ್ರಾಂತಸೈನ್ಯಂ ॥ ೧೫೫

ವನಲಕ್ಷ್ಮೀಲೀಲೆಯಂ ತದ್ವನಕುಸುಮದಳಂಕಾರದಿಂ ತಾಳ್ದುತುಂ ಯೌ
ವನಲಕ್ಷ್ಮೀಲೀಲೆಯಂ ತನ್ನೊಡನೆ ನೆಱೆಯುತುಂ ತನ್ನ ಶುದ್ಧಾಂತಕಾಂತಾ।
ಜನವೊಪ್ಪಿರ್ದಲ್ಲಿ ನಾನಾವನಕುಸುಮಲತೋತ್ತಂಸಕರ್ಣಾವತಂಸಂ
ಮನುವಂಶಂ ಶೋಭೆವೆತ್ತಂ ಸುಕವಿಜನಮನೋಮಾನಸೋತ್ತಂಸಹಂಸಂ॥

ವನಕೇಳೀವಿಭವಂ ಸಲೀಲಸಲಿಲಕ್ರೀಡಾವಿಳಾಸಂ ಸಮ
ಸ್ತನಿಜಾಂತಃಪುರದೊಳ್ ಪೊದಪ್ಪೆಸೆದು ಕಣ್ಗೊಂಡುಂ ಮನಂಗೊಂಡು ಮಿಂ।
ದ್ರನೆ ಭೋಗೀಂದ್ರನೆ ಖೇಚರೇಂದ್ರನೆ ದಲೀ ಭೂಪೇಂದ್ರನೆಂಬನ್ನೆಗಂ
ಮನುವಂಶಪ್ರಭು ಬೀಡಿನತ್ತ ತಳರ್ದಂ ಸಂಸಾರಸಾರೋದಯಂ ॥ ೧೫೭

ಗ॥ ಇದು ದೇವೇಂದ್ರಮುನೀಂದ್ರವಂದ್ಯಪರಮಜಿನೇಂದ್ರಮುಖ
ಚಂದ್ರವಾಕ್ಚಂದ್ರಿಕಾಪ್ರಸರಪ್ರಸಾದೋದೀರ್ಣಸೂಕ್ತಿ
ಕಲ್ಲೋಲಮಾಲಾಕೀರ್ಣಕವಿತಾಗುಣಾರ್ಣವ
ಪ್ರಣೀತಮಪ್ಪಾದಿಪುರಾಣದೊಳ್
ದಿಗ್ವಿಜಯಪ್ರಾರಂಭನಿರೂಪಣಂ
ಏಕಾದಶಾಶ್ವಾಸಂ
ಸಂಪೂರ್ಣಂ.

ಶ್ರೀವರನೊಡನೆಯೆ ವನಜಳ
ದೇವತೆಗಳ್ ಬರ್ಪುವೆನಿಸಿ ತನ್ನೊಡವರೆ ಮೂ ।
ದೇವಿಯರಿನೆಸೆದನೋ ಧೃತ
ಲಾವಣ್ಯರಸಂ ಸರಸ್ವತೀಮಣಿಹಾರಂ ॥ ೧

ವ॥ ಅಂತು ಭರತೇಶ್ವರಚಕ್ರವರ್ತಿ ನಿಜಸ್ಥಪತಿರತ್ನವಿರಚಿತಮಣಿಮಯರಾಜಮಂದಿರಮಂ ಪುಗುವುದುಂ, ಆಪ್ರಸ್ತಾವದೊಳಂತಃಪುರದ ಪೂಸಿದ ಕಾಶ್ಮೀರರಾಗಮುಂ ಉಟ್ಟ ಕೌಸುಂಭಾಂಬರರುಚಿಯುಂ ತೊಟ್ಟ ಪದ್ಮರಾಗಾಭರಣಕಿರಣಂಗಳುಂ ಸಂಕ್ರಮಿಸಿದಂತೆ,

ಬಳಕೊಂಡ ಕೆಂಪಿನಿಂ ದಿನ
ವಳಯಂ ಪ್ರೋಲ್ತಿರ್ದುದಪರದಿಗ್ವಧು ಭೂಭೃ ।
ತ್ತಿಳಕಂಗೆ ಪಿಡಿವ ಬಗೆ ಕೈ
ಕೊಳೆ ಬೆಳಗಿದ ಪದ್ಮರಾಗಮಣಿದರ್ಪಣಮಂ ॥ ೨

ವ॥ ಆಗಳ್ ವೃಷಭೇಶ್ವರನಂದನಂ ಸಂಧ್ಯಾಸಮಯೋಚಿತಜಿನೇಂದ್ರವಂದನಾಕುತೂಹಲಿತಾಂತಃಕರಣನಾಗಿ,

ಬೆಳಗುವ ಕೈದೀವಿಗೆಗಳ
ಬೆಳಗುಂ ತರತರದಿನೊಗೆವ ತಾರಗೆಗಳ ಗೊಂ ।
ದಳಮುಮಿಳಾತಳದ ವಿಯ
ತ್ತಳದ ವಿಳಾಸಮನದೇನೊಡಂಬಡಿಸಿದುದೋ ॥ ೩

ಭರತನನೋಲಗಿಸಲ್ಬಂ
ದರಸುಗಳ ಕಿರೀಟಪದ್ಮರಾಗಪ್ರಭೆಗಳ್ ।
ಪರೆವಂತೆ ಪರೆದು ಕೌಸುಂ
ಭರಾಗರಮಣೀಯಮಾಯ್ತು ಸಂಧ್ಯಾರಾಗಂ ॥ ೪

ವ॥ ತದನಂತರದೊಳ್ ತದಾಸ್ಥಾನಮಂಟಪದೊಳ್ ಬೆಳಗುವ ಕೈದೀವಿಗೆಗಳ ಬೆಳಗುಗಳೊಳಂ ಬಳ್ವಳಬಳೆದು ನಿಮಿರ್ವ ಕಾಡಿಗೆಗುಡಿಗಳ ಮ

ಹೇಂದ್ರನೀಲಮರಕತಮಣಿಭವನಂಗಳ ವಿಜಯಕಟಕಸಮದಗಜಸಾವ
ಜಂಗಳ ಕರ್ಪುರಗಳೆಲ್ಲಮಂ ನೆರಂಬಡೆದು,

ಬಳೆದ ತಮೋಮದೇಭಘಟೆಯೊಡೆಯ್ಡೊಡೆವನ್ನೆಗಮುನ್ನತೋದಯಾ
ಚಳಗುಹೆಯಿಂ ಲಸತ್ಕಿರಣಕೇಸರಮಂ ಪರಪುತ್ತು ಮಾಗಳಾ।
ಗುಳಿಸುವ ಬಾಯ ಕೆಂಪೆನುದಯಂಗೆಯೆ ಪೊಣ್ಮುವ ಕೆಂಪು ಪೋಲ್ವಿನಂ
ತಳರೆ ಬೆಡಂಗಿನೊಳ್ ಪುದಿದುದೆತ್ತಿರಮುದ್ಗತಚಂದ್ರಸಿಂಹದಾ॥ ೫

ನೆರೆದೈ ಸಂಜೆಯೊಳಿಂದು ಕಾಯ್ದೊದೆದೊಡೇನಾತ್ಮಾಂಗದೊಳ್ ರೋಹಿಣೀ
ಚರಣಾಲಕ್ತಕರಾಗಮಚ್ಚಿರಿದುದೋ ಮೇಣ್ ಕಾಮಿಗಳ್ಗೀವ ರಾ॥
ಗರಸಂ ಪೊಣ್ಮಿದುದೋ ತಮೋಗಜದ ಕೋಡೇಱಿಂದಮೇಂನೊಂದುದೋ
ಹರಿಣಂ ಮೇಣೆನಿಸಿತ್ತು ರಕ್ತರುಚಿಯಿಂ ಬಿಂಬಂ ಸುಧಾಸೂತಿಯಾ॥ ೬

ಅದೊಂದಿನಿಸುಬೇಗದಿಂ ನವಜಪಾಪಸೂನಾಭಮಾ
ಯ್ತದೊಂದಿನಿಸುಬೇಗದಿಂ ಕನಕಕುಂಭದಂತಾಯ್ತು ಮು।
ತ್ತದೊಂದಿನಿಸುಬೇಗದಿಂ ಮೃದುಮೃಣಾಳಸಂಕಾಶಮಾ
ಯ್ತದೇಂ ಬಟಿಕೆ ಬಿಂಬದುಜ್ಜಳಿಕೆಯೋ ಸುಧಾಸೂತಿಯಾ॥ ೭

ವ॥ ಅಂತು ಪುರಂದರದಿಗ್ವಧೂವದನಮಂಗಳಮಣಿದರ್ಪಣಮುಮನೀಂ
ದ್ರಗಜೇಂದ್ರಧವಳಕರ್ಣಚಾಮರಮುಮನನುಕರಿಸಿ,

ತ್ರಿಜಗತ್ಸಾಮ್ರಾಜ್ಯದಂಡಸ್ಥಪತಿಗೃಹಪತಿಚ್ಛತ್ರಯೋಪಿತ್ಸ್ವರೋಧೋ
ಗಜನಿಸ್ತ್ರಿಂಶಾಶ್ವಕಾಕಿಣ್ಯಜಿನಮಣಿಚಮೂನಾಥಚಕ್ರಾಧಿನಾಥಂ।
ಗೆ ಜಯಪ್ರಾರಂಭಗಚ್ಛಸ್ಫಟಿಕಕಳಶಮಂ ತೀವಿ ದಿವ್ಯಾಂಬುವಿಂ ನಾ
ಕಜನಾಥಂ ಮಜ್ಜನಕ್ಕೆತ್ತಿದ ತೆಱದೆ ಸುಧಾಸೂತಿ ಕಣ್ಗೆಡ್ಡಮಾದಂ॥ ೮

ಪಗಲಂತಿರ್ದಚ್ಚವೆಳ್ದಿಂಗಳೊಳನಕಿರಣದ್ಯೋತಿಗೆತ್ತಾಗಳಾಗಳ್
ಮುಗಿದಿರ್ದಂಭೋಜವೇರೊಂದಲರ್ದುದು ಬಿಸುಸುಯ್ದತ್ತಗಲ್ದಿರ್ದ ನೀರ್ವ
ಕ್ಕಿಗಳಾಗಳ್ ಕೂಡಿ ತೋಡಾದುವು ಕುವಲಯಷಂಡಂಗಳಾಶಂಕೆಯಿಂದಂ
ಮುಗಿಯಲ್ಕೆಂದಿರ್ದವೇನುಜ್ಜಳಿಸಿದುದೊ ಜಗಚ್ಚಕ್ರಮಂ ಚಂದ್ರಬಿಂಬಂ॥

ವ॥ ಅಂತು ಪುರಂದರಕರೋದ್ಧೃತಗಗನತಳಸ್ಪರ್ಧಿ ಗಗನಸ್ಫಟಿಕಕಳಶವಮುಖವಿಗಳಿತಸುಧಾಧಾರಾಪಸರಮನನುಕರಿಸಿ,

ಭರತೇಶ್ವರನಂತಃಪುರ
ದರಸಿಯರ ವಿಲೋಚನೋತ್ಪಳಾಕರಮನಳಂ ।
ಕರಸಿ ದೆಸೆದೆಸೆಗೆ ಪಸರಿಸಿ
ಶರದದ ಬೆಳ್ದಿಂಗಳೀಂ ಮನಂಗೊಳಿಸಿದುದೋ ॥ ೧೦

ಬಸದಪುದಮರ್ದಿನ ಪೊಲ್ಮಳೆ
ಪಸರಿಸಿತೆನೆ ಜಗಮನೊಡನೆ ಕಪ್ಪುರದ ರಜಂ ।
ಮುಸುಕಿದುದೆನೆ ಪುದಿದೇನಾ
ಱುಸಿದುದೊ ಪೊಳೆವಮೃತಕಿರಣನಮೃತಕರಂಗಳ್ ॥ ೧೧

ವ॥ ಅಂತು ಕಾಮರಾಗರಸಸಾಗರಮಂ ನೆಲೆವೆರ್ಚಿಸುವ ಶರಚ್ಚಂದ್ರಾತಪದೊಳ್ ಪಗಲಿನ ಶರದಾತಪಪರಿಶ್ರಮಮನಾಱಿಸಿ ನಿಜವಿಜಯಕಟಕದ ನಾಗರಿಕರಮಣರಮಣೀಜನಂಗಳ್ ಕೌಮುದೀಮಹೋತ್ಸವೋತ್ಸುಕರಾಗಿ ನೆರೆದಲ್ಲಿ,

ಮೃಗಮದದಣ್ಪು ಜಾಜಿಯ ಬಜಲ್ಮುಡಿ ನೆಯ್ದಿಲ ಕರ್ಣಪೂರಮು
ಟ್ಟಗಲದೆ ಕಟ್ಟಿದೈಸರಮದೊಂದುಬೆಡಂಗಿನ ಸೇತಮಾಲೆ ಪ ।
ಟ್ಟಗೆ ಕಟಿಸೂತ್ರಮೆಂಬಿವು ಮನಂಗೊಳೆ ಮನ್ಮಥಚಕ್ರವರ್ತಿಗೀ
ಕೆಗಳೆ ವಿನೋದದಾಕೆಗಳೆನಲ್ ಮೆಱೆದತ್ತು ವಿಳಾಸಿನೀಜನಂ ॥ ೧೨

ವ॥ ಆಗಳಾಸ್ತ್ರೀಸಮೂಹಂ ನೆಱೆದಿರಲಲ್ಲಿ ವಿಳಾಸಿನೀವಾಟದೊಳೊಂದೆಡೆಯೊಳೊಂದು ಕಮನೀಯಕಾಯಮಾನಾಭ್ಯಂತರಚಂಚತ್ಕಾಂಚನಮಂಚೋಪಶೋಭಿತಮೃದುತಳ್ಪದೊಳಿರಡಱಿಯದೆ ಕೂರ್ತ ನಲ್ಲಳ್ಗೆ,

ಮುಳಿದು ಮನಃಪ್ರಿಯಂ ಪೆಱಗುಗೆಯ್ದಿರೆ ಬೆಂಬಿಡದಪ್ಪಿಕೊಂಡ ನ
ಲ್ಲಳ ಮೊಲೆಯೊತ್ತಿನೊಳ್ ತೊಡರ್ದದಾಕೆಯದೂಱಿಸಿಸುಯ್ದು ಸುಯ್ದೊಳ
ಚ್ಚಳಿಸಿದುದಾಸರೋಜದಳನೇತ್ರೆಯ ನಲ್ಮೆಯೊಳತ್ತು ಕಣ್ಣ ನೀ
ರ್ಗಳ ಪೊನಲಿಂದೆ ಕರ್ಚಿ ಕಳೆದಂತಿರೆ ಪೋದುದು ಕೋಪಮೋಪನಾ ॥

ವ॥ ಮತ್ತೊಂದು ವಿಚಿತ್ರಕಾಂಡಪಟಪರಿವೃತಪಟಕುಟೀಪ್ರದೇಶದೊಳ್,

ಪೊದಲ್ದಿ ಕಬರೀಭರಂ ಪರೆದು ಪರ್ವೆ ತುಂಗಸ್ತನಂ
ಕದಕ್ಕದಿಸೆ ಕಣ್ಮಲರ್ ಪೊಳೆಯೆ ಕಾಂತನಂ ಮೆಚ್ಚಿಸಲ್ ।
ವಿದಗ್ಧೆ ಪುರುಷಾಯಿತಂ ತಗುಳೆ ನರ್ತಕೀಲೀಲೆಯಿಂ
ದದೊಂದು ಪೊಸಗಾರಸೋಗೆನವಿಲಾಟವಂ ತೋಱಿದಳ್ ॥ ೧೪

ವ॥ ಮತ್ತೊಂದೆಡೆಯೊಳ್ ಒರ್ವಂ ತನ್ನ ಪ್ರಾಣೇಶ್ವರಿಯ ಮೊಗವಂ ನೋಡಿ ತಲೆಯಂ ತೂಗಿದೊಡೆ ಆಕೆ ಶಂಕಾಕುಳಿತೆಯಾಗಿ ತನ್ನ ಕೆಳದಿಗಿಂತೆಂದಳ್,

ತುಂಗಘನಸ್ತನಂ ಬೆಮರೆ ಮೇಲುದನಾಂ ತೆಱೆದಿರ್ದೊಡತ್ತಲಿ
ರ್ದಂಗಜಸನ್ನಿಭಂ ತಲೆಯನೇಕೆಗೆ ತೂಗಿದನೆಂದೊಡಕ್ಕ ಕೇ ।
ಳಂಗನೆ ನಿನ್ನ ಬೀಗಿ ಬಿಗಿದಿರ್ದ ಕುಚದ್ವಯಮಧ್ಯದಲ್ಲಿ ತಾಂ
ಪಿಂಗದೆ ನಟ್ಟ ದಿಟ್ಟಿಯನವಂ ಕಿೞಲೆಂದನುಗೆಯ್ದು ತೂಗಿದಂ ॥ ೧೫

ವ॥ ಮತ್ತಮೊಂದೆಡೆಯೊಳ್,

ಮಿಳಿರ್ವಸಿಯ ಪಸಿಯ ಪೊಸಬಾ
ಸುಳ ಕರರುಹರೇಖೆ ತುಱುಗಿ ರತನಾಟ್ಯಪರಿ ।
ಸ್ಖಳಿತಕ್ಕೆ ಮುಳಿದು ದಂಪತಿ
ಗಳನಂಗಜನಟನ ಸೆಳೆಯ ಬಾಸುಳಮೆನಿಕುಂ ॥ ೧೬

ವ॥ ಎನೆ ಮತ್ತೊರ್ವನಿಂತೆಂದಂ,

ಬಳ್ಳಿಗಳಪ್ಪಾವಿನ ಮರ
ನುಳ್ಳೆಡೆಗಳನಱಸಿ ಪೋಪುವಲ್ಲವು ಕೆಲದೊಳ್ ।
ಕಳ್ಳಿಯಿಡಲಡರ್ವುವಬಲೆಯ
ರಳ್ಳಿರ್ದಗಳ್ ಪುರುಷಗುಣಮನಱಿದೆಱಗುಗುಮೋ ॥ ೧೭

ವ॥ ಮತ್ತಮೊಂದೆಡೆಯೊಳ್ ಪಲಬರ್ ವಿದಗ್ಧವಿಟರ್ ನೆರೆದಿರ್ದಲ್ಲಿಯೊರ್ವಂ,

ಬಸನಿಯೆ ಗೆಲ್ಲಕಾಱನ ನೆಗಪ್ತೆಗೆ ಕೇಳಗೆ ನಾಡೆ ಗೆಂಟದಂ
ಬೆಸಗೊಳವೇಡ ಸೆಟ್ಟನೆ ಚದುರ್ ತನಗುಳ್ಳೊಡೆ ಮೆಲ್ಪಮೇಳಮಂ ।

ಪೊಸಯಿಸಿ ತನ್ನ ಮುನ್ನಳಿವು ಬೇಟದ ಲಲ್ಲೆಯು ಬಲ್ಮೆ ಪತ್ತಿಸು
ತ್ತಿಸೆ ಪುರುಡಿಂಬುಕ್ಕೆಸೆ ಬಿಯಮಾಱಿಸಿ ಪೊಂದದವಂ ಬೊಜಂಗನೇ॥ ೧೮

ನೆಲನಂ ಪರ್ವುವ ಬಳ್ಳಿಗಂ ಚದುರನೊಳ್ ಮೈಮೈಯೊಡಂಬಟ್ಟು ತ
ಳ್ತಲರ್ವಾಕೋಮಳೆಗಂ ತಗುಳ್ವ ಪೆಱದೊಂದೆಂದಕ್ಕುಮಾ ಬಳ್ಳಿಗೆ ।
ಯ್ದಲಳುಂಬಂ ನೆಲನಾಕೆಗಂ ಬಳಸಿಯುಂ ಲಲ್ಲೈಸಿಯುಂ ನೋಡಿ ಕಾ
ಣಲಳುಂಬಂ ಮನಮೆಂಬಿದಂ ಚದುರರೊಳ್ ಮುಂ ಕೇಳದಿಂ ಕೇಳ್ವನೇ ॥ ೧೯

ವ॥ ಎಂದು ಮತ್ತೊರ್ವನಿಂತೆಂದಂ,

ನಿಧಿ ದೊರೆಕೊಳ್ವೊಡಂ ಕುಲಧನಂ ದೊರೆಕೊಳ್ವೊಡಮೆಲ್ಲಿಯಾನುಮ
ಲ್ಲದೆ ದೊರೆಕೊಳ್ಳದಂತೊಲವು ಗಳ್ದೊರೆ ಕೊಳ್ವೊಡಮೆಲ್ಲಿಯಾನುಮ ।
ಲ್ಲದೆ ದೊರೆಕೊಳ್ಳವಂತಱಿದರಿಂ ದೊರೆಕೊಂಡುವನೇವಮಾಗಲೀ
ಯದೆ ಕಿಡಲೀಯದಿರ್ಪಿರವಿದೊಂದೆ ಚದುರ್ ಚದುರೆಂಬುದಾವುದೋ ॥ ೨೦

ಬಳಸುವ ಬೇಟದೊಳ್ ಮೊಳೆದ ಗೊಟ್ಟೆಯೊಳೀರೆಲೆವೋದಲುಂದಿನೊಳ್
ಬಳೆದ ವಿಯೋಗದೊಳ್ ಪೊಱೆದ ಚಿಂತೆಯೊಳೇ ಮಡಲ್ತ ತಳ್ತ ಮೆ ।
ಯ್ಗಳೊಳಡದೊರ್ತುಪೂತ ವಚನಾಮೃತದೊಳ್ ಗೊಲೆಗೊಂಡ ಬೇಟಮಂ
ಬೆಳಲತೆ ಕೂಟದೊಳ್ ಪದೆದು ಪಣ್ತುರ್ದೆಗಿಂಪಿನಲಂಪನೀಯದೇ ॥ ೨೧

ದಿವಸಂಗಳ್ ವಿಧುಬಿಂಬಚುಂಬಿತನಭೋಭಾಗಂಗಳಾದಂದುಮಾ
ಮ್ರವನಂಗಳ್ ಕಳಿಕಾಪ್ರವಾಳಕುಸುಮಾಕ್ರಾಂತಂಗಳಾದಂದುಮಾ ।
ದವಿನೋದಂಗಳನಂಗರಾಗರಸ ಸಂಕೀರ್ಣಂಗಳಾದಂದುಮಾ
ಱುವ ಪಾಂಗಾವುದು ಕೊಂಡುಪೋಗಗಲಲಾನಾಱೆಂ ಮನೋವಲ್ಲಭಾ ॥ ೨೨

ಬದವಿದ ಚಿಂತೆ ಪೆರ್ಚೆ ಪಸಿವಿಲ್ಲದೆ ಮರ್ಬೆರ್ದೆಯುರ್ಬೆ ನಿದ್ರೆಯಿ
ಲ್ಲದೆ ಬಗೆ ಬೆರ್ಚೆ ಬುದ್ಧಿಯುಣಮಿಲ್ಲದೆ ನಲ್ಲಳಗಲ್ಕೆಯಿಂದಮಾ ।
ದದವಳಲಚ್ಚಿಗಂ ಮಱುಕಮೆಂಬಿವಱಿಂದೆ ಕನಲ್ದು ಮುನ್ನೆ ಬೇ
ಟದ ಸವಿಗಂಡನಲ್ಲದಱಿಯಂ ಶ್ರಮಮಂ ಕಡುಮೇಟಕಾಱರಾ ॥ ೨೩

ವ॥ ಎಂದು ಬೇಟಮನೆ ವಸ್ತು ಮಾಡಿಯೆ ಕವಿತ್ವ ವರ್ಣಕವಿತ್ವಕಾಮತ
ತ್ತ್ವವಿದನೆನಿಸಿದತಿವಿದಗ್ಧನೊರ್ವನಿಂತೆಂದಂ,

ಅಲೆದುಂ ನೋಡುವೊಱಲ್ದುವಿಟ್ಟಪದಮುಂ ಮೊಲ್ದುಂ ಕಳಲ್ದುಂ ಪಳಂ
ಚಲೆದುಂ ಮುಟ್ಟದ ಸೀಯನಪ್ಪ ದನಿಯುಂ ಮೇಲ್ವಾಯ್ದು ಮೇವೈಸಿಯುಂ।
ಪಿಱಿದುಂ ಲುಂದುವ ಬೇಟದೊಂದು ಸುಸಿಲುಂ ನೋಯಿಕ್ಕುಮಾಱಿಕ್ಕುವು
ಗ್ಗಳಿಕುಂ ಕಬ್ಬದ ಗೇಯದೊಂದು ಸುಸಿಲೊಂದಿಂಪೆಂಬುದೇಗೆಯ್ವುದೋ ॥

ವ॥ ಎಂದು ಮಱಣದೆ,

ಒಡನಿರಲಿತ್ತುದಿಲ್ಲ ವಿಧಿ ನಮ್ಮನಳಲ್ದಳವೇಡ ನೀಂ ಮನಂ
ಬಿಡೆ ನಡೆಯೆಂದು ಪೇಟ್ದನಿಸನಾಂ ಮಗುಳ್ದಾಗಳೆ ಸೂಸಿ ಕಣ್ಣನೀ।
ರೊಡನೊಡನುಣ್ಮೆ ಕುಂಕುಮದೊಳರ್ದಿದ ಬಾಳೆಗಳನ್ನವಾಗಿ ಕೆಂ
ಪಡರ್ದಲರ್ಗಣ್ಗಳಿಂದುಗುಱ್ದು ನೋಡಿದುದಂ ನೆನೆವೇಂ ಮೃಗಾಕ್ಷಿಯಾ॥

ವ॥ ಎಂದೆರ್ದೆಯಾಱದೆ,

ಒದವಿ ತಗುಳ್ದು ಗಗ್ಗರಿಕೆ ಸೂಸುವ ಕಣ್ಬನಿ ಕಣ್ಗಳೊಳ್ ಕಲಂ
ಕಿದ ಬೆಳಗೆಂಪು ಕಣ್ಗೆವರೆ ಸಾರ್ಚಿದಗಲ್ಕೆಯೊಳಿಂತು ಬೇಟದು।
ಬ್ಬದಿಗಮನಾಂತ ನಲ್ಲಳ ಮುಖಾಂಬುಜಮಂ ನಡೆನೋಡಿ ನೋಡಿ ಸಾ
ಯದೆ ಬರ್ದುಕಾಡಿದಂ ಜವನ ಬಾರಿಯೊಳಂ ಬರ್ದುಕಾಡದಿರ್ಕುಮೋ॥ ೨೬

ವ॥ ಎಂದುಮವಧರಿಸದೆ,

ನಡುಕಮುಮಳ್ಕಱುಂ ಬೆರಸಗಲ್ಕೆಯೊಳಿಂದಿನಿತೆಂಬವೊಲ್ತೊಡಂ
ತೊಡರೆ ರಸಾಂತದೊಳ್ ಬಗೆದು ಭೋಂಕೆನೆ ಪೋದಪನೋಪನೀಸಲುಂ।
ಕೆಡೆಯುಸುವಿಲ್ಲದೆಂದಱಿದಳಲ್ದಿಱದೊಂದಿದಲುಂದುಗಳ್ಗೆ ನೀ
ರ್ಗುಡಿದವೊಲಾದುದುಚ್ಛಳಿಸಿ ಸೂಸುವ ಕಣ್ಬನಿ ಕಂಜವಕ್ತ್ರೆಯಾ ॥ ೨೭

ವ॥ ಎಂದು ಸೈರಿಸದೆ

ಆವುರ್ದಿನ ದೋರೆಯಂತೆ ನುಡಿಯಿಂಪವುರ್ದಂ ತಳಿದಂತೆ ಸೋಂಕಿನಿಂ
ಪವುರ್ದಿನ ಪೂರದಂತೆ ಪದೆದಿಂಪವುರ್ದಂ ಕುಡಿವಂತೆ ಲುಂದಿನಿಂ।
ಪವುರ್ದೊಡಮೇನಗಲ್ಕೆ ಮುಳಿಸೆಂಬೆರಡುಂ ಗಡ ಕಾಳಕೂಟಮಾ
ಗವುರ್ದಿನ ಕಾಳಕೂಟದೊಡವುಟ್ಟಿದಳೆಂದಪೆನೆನ್ನ ನಲ್ಲಳಂ ॥ ೨೮

ವ॥ ಮತ್ತಮೊಂದೆಡೆಯೊಳಂದೆ ಪೊಸಯಿಸಿಪ್ಪ ಪೊಸಮೇಟಕಾಱರಪ್ಪ ಕ
ಡುನಲ್ಲರುಮಿರ್ವರುಮಿರೆ,

ಕುಡುಗುರುಳೆಂಬ ತಂಬೆಲರ ಬೆಂಬಿಡಿದಿಂಪೊಸವೇಟವೆಂಬ ಚೆ
ಲ್ವಿಡಿದೆಳವಾವುರಂ ಪುಳಕವೆಂಬ ನವಾಂಕುರದಿಂ ವಿಳಾಸಮಂ ।
ಪಡೆದನುರಾಗವೆಂಬ ತಳಿರಿಂದೆಸೆದಳ್ಕಱನಾಳ್ದ ನೋಟವೆಂ
ಬಿಡಿದಲರಿಂ ಮುಸುಂಕಿ ಸುಸಿಲೆಂಬ ಒಸಂತದೊಳೇಂ ಪೊದಱ್ದುವೋ ॥೨೯

ವ॥ ಮತ್ತಮೊಂದೆಡೆಯೊಳ್* ಪಳಿಕೆಯುದ್ದು ಬಂದು ನಲ್ಲಳ ಮುಳಿಸನೊಳಕೊಂಡು ಮುಖಮಂ ಮುಗಳ್ನಗೆವೆರಸು ನುಡಿದು ಗೆಂಟಾದಂ. ಮತ್ತಮೊಂದೆಡೆಯೊಳ್ ಪಳವಳಿಯ ಬೇಟದ ತೋಟಿಯುಂ ತೊಡರ್ದಟ್ಟುಪೆತ್ತಪೊಲೆವುಲ್ಲೆಯಳ್ಳೆವಿಳ್ಳೆಯಾದ ಮಾತಂ ತನ್ನ ಸೂಳೆಯ ಬೇಸಱಿಂ ಕೆಳೆಯಂಗಿಂತೆಂದಂ,

ಮಱುಗುವೆನಾನಿವಳ್ಗವಳವಂಗೆರಡಿಲ್ಲದೆ ನಲ್ಲಳಾತನುಂ
ಮಱುಗುವನಾಕೆಗಾಕೆಯುಮುಮಂನಗವಿನೋದದೊಳೆನ್ನ ಪಂಬಲೊಳ್ ।
ಮಱುಗುವಳೆಂದೊಡೇಂ ತಿಳಿವನಾತನನಾಕೆಯನೆನ್ನ ನೋಡು ಕಾ
ಯ್ದಿಱಿಯೆ ವಿಧಾತ್ರನೇಂ ಪಡೆದನೋ ಬಿಸವಂದಮನೊಂದವಿಂದವಂ ॥ ೩೦

ವ॥ ಎಂದು ನುಡಿದಂ. ಮತ್ತೊರ್ವನಿಂತೆಂದಂ,

ಲಲಿತಲತಾಂಗಿ ನೂತವಿಪರೀತರತಕ್ಕಡಿಯಿಟ್ಟಳೆನ್ನ ಕ
ಣ್ಗಳ ಪಸವ್ರೋಡೆ ನೋಡಲಣಿಮಿಾಯುದೆ ನೀಳ್ದ ಕುರುಳ್ ಮದೀಯಕೋ।
ಮಳೆಯ ಮುಖೇಂದುವಂ ಮಱಸಿದಂದಿನದೊಂದೊಳಲಿಂದವಿಾಗಳಂ
ತೆಳಸಿತಳಲ್ ಮುಗಿಲ್ ಮಱಸಿ ಭೋಂಕೆನೆ ಕಂಡವೃತಾಂಶುಬಿಂಬವಂ ॥

ವ॥ ಅಂತು ಕಂಡು ವಿಾಱಲಾರದಿಂತೆಂದಂ,

ಬನಮಂ ಕೋಗಿಲೆ ಜಕ್ಕವಕ್ಕಿ ಪಗಲಂ ಪೂಗೊಂಚಲಂ ತುಂಬಿ ಚಂ
ದ್ರನನಂಭೋನಿಧಿ ಬಂದ ದೂವೆ ಮಲೆಯಂ ಕಾರ್ಗಾಲಮಂ ಸೋಗೆ ಮುಂ
ಬನಿಯಂ ಜಾದಗೆವಕ್ಕಿ ಹಂಸೆ ಕೊಳನಂ ಪದ್ಮಂಗಳಾದಿತ್ಯನಂ
ನೆನೆವಂತಾಂ ನೆನೆವೆಂ ಸರೋಜಮುಖಿಯಂ ಶ್ಯಾಮಾಂಗಿಯಂ ನಲ್ಲಳಂ ॥೩೨

ನುಡಿವೊಡೆ ಲಲ್ಲೆಯೆಂಗುಮೆರ್ದೆವೇಪ್ಪೊಡೆ ಕೈತವಮೆಂಗುಮಾಸೆಯಿಂ
ಪಿಡಿದೊಡೆ ಸೇದೆಯೆಂಗುಮಿರಿಮೆಂದೊಡೆ ಕೈತವಮೆಂಗುಮೆಂದುನಾಂ ।

*ಇದು ಒಂದು ಪದ್ಯಭಾಗದಂತೆ ತೋರುತ್ತದೆ.

ಬಿಡುಕದೆ ಪೋದಗಲ್ಕೆಡೆಯೊಳಿನ್ನಿರೆನೆಂದೊಡೆ ಕಣ್ಣನೀರ್ಗಳೋ
ಗಡಿಸದೆ ಸೂಸೆ ಗಗ್ಗರಿಕೆಗೊಂಡುದನಾಂ ನೆನೆವೆಂ ಲತಾಂಗಿಯಂ ॥ ೩೩

ವ॥ ಎಂದು ಮತ್ತೊಂದೆಡೆಯೊಳ್ ಒರ್ವಂ ವಿರಹಪರಿತಾಪದೊಳ್ ಸೈರಿಸಲಾಱದೆ ಮದನನಂ ಬಯ್ದು ಬೆಚ್ಚನೆ ಸುಯ್ದು ತನ್ನ ಕೆಳೆಯಂಗಿಂತೆಂದಂ,

ಪಗಲಿರುಳೆನ್ನದೆನ್ನೊಳೆ ಕಡಂಗುವನೆನ್ನೊಳೆ ಬಲ್ಪದೋರ್ಪನಾ
ನಗಿದಱಿದಿರ್ದೊಡಂ ಚಲದಿನೆನ್ನೊಳೆ ಪೊಂಗಿ ಪೊಡರ್ಪುದೋರ್ಪನೋ ।
ಲಗವುರುಡಿಲ್ಲ ಮೆಚ್ಚುವಣಿಗಿಲ್ಲ ಕರಂ ಮುಳಿಸಿಲ್ಲ ಕಾಯ್ದು ಕೆಂ
ಮಗೆಬಳಸಂದು ಕೊಂಪಪನಕಾರಣದಿಂ ಮೊಱೆಯೋ ಮನೋಭವಾ ॥ ೩೪

ವ॥ ಮತ್ತಮೊಂದೆಡೆಯೊಳೆರಡಱಿಯದೆ ಕೂರ್ತ ನಲ್ಲಳ್ಗೆ,

ಮುಳಿದು ಮನಃಪ್ರಿಯಂ ಪೆಱಗುಗೆಯ್ದಿರೆ ಬೆಂಬಿಡಿದಪ್ಪಿಕೊಂಡ ನ
ಲ್ಲಳ ಮೊಲೆಯೊತ್ತಿನೊಳ್ ತಳೆದುರ್ದಾಕೆಯ ದೂರಿಸಿ ಸುಯ್ದುಸುಯ್ಯೊಳು
ಚ್ಚಳಿಸಿದುದಾ ಸರೋಜದಳನೇತ್ರೆಯ ನಲ್ಮೆಯೊಳತ್ತ ಕಣ್ಣನೀ
ರ್ಗಳ ಪೊನಲಿಂದೆ ಕರ್ಚಿಕಳೆದಂತಿರೆ ಪೋದುದು ಕೋಪಮೋಪನಾ॥ ೩೫

ವ॥ ಮತ್ತೊಂದೆಡೆಯೊಳ್ ಒರ್ವಳ್ ಆತ್ಮೀಯಪ್ರಾಣನಾಥನಗಲ್ಕೆಯಂ ಸೈರಿಸಲಾಱದೆ,

ಪ್ರಾಣದಗಲ್ಕೆಯೊಳ್ ಮಱುಕಮೇದೊರೆತಕ್ಕುದೊಡಲ್ಗಳಂ ಕೆಲಂ
ಕಾಣದು ಕಾಣ್ಬುದಾವುದೊಡಲಲ್ತುದು ಕಾರಿಪಮೆನ್ನೊಡಲ್ಗೆ ನೀಂ ।
ಪ್ರಾಣಮಮೋಘಮಪ್ಪುದಱಿನೋಪನೆ ನಿನ್ನನಗಲ್ವಗಲ್ಕೆಯುಂ
ಪ್ರಾಣದಗಲ್ಕೆಯುಂ ಸಮನದಕ್ಕೆ ವಿಯೋಗಮನೆಂತು ಸೈರಿಪೇಂ ॥ ೩೬

ವ॥ ಎಂದು ತನ್ನ ನಿರ್ಭರಪ್ರಣಯನಿಗಳದೊಳೆತೊಡರ್ಚಿತಾಗಿದಳ್ ಮತ್ತೊರ್ವಳ್ ನಿಜಪ್ರಾಣೇಶ್ವರನನೆಂತುಂ ತನ್ನೊಳಳವಡಿಸಲಾಱದೆ ನಿಜ ಪ್ರಿಯಸಖಿಗಿಂತೆಂದಳ್,

ಅನುಮಂಗೈಯದ್ದಳಿಯೆಂಬ ತಾಯ ನುಡಿಯುಂ ಕೈಕೊಂಡೆನೇ ನಂಟರೀ
ತನ ನಣ್ಪಂ ಬಿಸುಡೆಂದೊಡಾನುಡಿಯನಾನೇಗೊಂಡೆನೇ ನಾಣನೆ ।
ಕ್ಷನಿತುಂ ಕಾದೆನೆ ಬೇಡಿದೊಂದು ಪುರುಳಂ ಮಾರ್ಕೊಂಡೆನೇ ಬೇಡಿ ವೇ
ದನೆ ಗೊಂಡಾನೆಱೆದಟ್ಟೆಯುಂ ಬಗೆಯನೇಗಂಡಂ ಮನಂಗಂಡನೋ ॥ ೩೭

ವ॥ ಎಂದು ನುಡಿಯುತ್ತುಮಿರ್ದಳ್. ಮತ್ತೊಂದೆಡೆಯೊಳ್ ತೋಳ
ಪಲ್ಲಟದೊಳ್ ಬೆದಱಿದ ಬಗೆವೆರಸು ಉಲ್ಲಗೆಯ್ವಳನೊರ್ವನತಿಚತುರ
ವಿಟಂ,

ಬಿಗಿದಮರ್ದಪ್ಪುವಪ್ಪುಗಳಮರ್ಕೆಗಳೊಯ್ಯನೆ ಸುಯ್ವು ಸುಯ್ಯು ಗಾ
ಳಿಗಳೊಳಮರ್ಕೆಗೆಟ್ಟೊಡಲಪ್ಪೋಡಿದುದೆಂದಗಿವೆನ್ನ ನಿನ್ನ ಪ।
ತ್ತುಗೆಯ ತೊಡರ್ಪದಿಂದು ಪಱಿದತ್ತು ಮನಂ ಬಟಿಕ್ಕೆಯ್ದೆ ಸೊರ್ಕಿದಾ
ನೆಗೆ ಪಱಿವಂತಿರಿಂದು ಪಱಿದತ್ತೆನೆಗಂ ನಿನಗಂ ತಳೋದರೀ ॥ ೩೮

ವ॥ ಎಂದು ಪಱಿಪಡೆ ನುಡಿದು ಗೆಂಟಾದಂ. ಮತ್ತಮೊಂದೆಡೆಯೊಳ್ ಒ
ರ್ಬನಗಲ್ದ ತನ್ನ ಮನೋನಯನವಲ್ಲಭೆಯಂ ನೆನೆದು,

ಮಿಸುಗುವ ತನ್ನ ಬಾಯ್ದೆಱೆಯೊಳಾಲದ ಪಣ್ಣನೆ ಮೈಯ ಬಣ್ಣದೊಳ್
ಕೊಸಗನೆ ತನ್ನ ಬಳ್ವಳಿಕೆಯೊಳ್ ಸೆಳೆಗೊಂಬನೆ ಪೋಲ್ತು ನೋಡಮಾ।
ನಸೆಯಣಮಲ್ಲಳಿಂತು ಮರವಾಸನಿಯಾಗಿಯುಮಾದುದೊಂದು ಮಾ
ನಸಿಕೆ ಮನಂಗೊಳಲ್ಕೆನಗಮತ್ತಳಗಂ ತರಳಾಯತಾಕ್ಷಿಯಾ ॥ ೩೯

ವ॥ ಎಂದುಮವಧರಿಸದೆ,

ನೆಳತೋಳೊಳ್ ತೊಡದೊರ್ಂದುತೋಳಮಣಿಪೋಲ್ ತುಂಗಸ್ತನದ್ವಂದ
ದೊಳ್
ಪೊಳೆಯುತ್ತಾರದವೋಲ್ ಸಮುನ್ನತನಿತಂಬೋದ್ದೇಶದೊಳ್ ಪರ್ವಿ ಪ।
ಜ್ಜಳಿಸಿತ್ತುಜ್ಜ್ವಳಕಾಂಚಿವೋಲಿನಿಯಳಂ ಪತ್ತಿರ್ಪ ಸೈಪೇಕೆ ಸಂ
ಗಳಿಕುಂ ಮೌನದೆ ಮುನ್ನಮಾನವಱನೋಂತಾನೋಂಪಿಯುಂ ನೋಂತೆನೇ

ವ॥ ಎಂದು ಪಂಬಲಿಸುತ್ತಿರ್ದಂ. ಮತ್ತೊಂದೆಡೆಯೊಳ್ ಒರ್ವಳ್ ತನ್ನ
ಅಭಿನವವಿರಹಪರಿತಾಪದೊಳಂತೆಂದಳ್,

ಬಡಲುರಿಗುಂ ಮನಂ ಮಱುಗುಗುಂ ಕಿವಿ ಗಿಱ್ರನೆ ಪೋಕುಮತ್ತೆ ಕ
ಣ್ಬಿಡಗುಗುಮೆಯ್ದೆ ಬಾಯ್ಬಿಡದೆ ಬತ್ತುಗುಮಳ್ಕಿರ್ದ ನೊಂದು ಕುಂದುಗುಂ
ನುಡಿ ತಡವಕ್ಕುಮಿಕ್ಕೆ ವಿಡುಗುಂ ಗಡ ನಲ್ಲರಗಲ್ಕೆಗೆಂಬ ನಾ
ಣ್ಣುಡಿಯನೆ ಕೇಳ್ದೆನಿನ್ನೆವರಮೋಪೊಲವೆಂಬುದದಿಂತುಟಾಗದೇ ॥ ೪೧

ವ॥ ಎಂದು ಪಂಬಲಿಸುತ್ತಿರ್ದಳ್. ಮತ್ತೊಂದೆಡೆಯೊಳ್ ಬರ್ವಳ್ ನಿಜಮನೋವಲ್ಲಭಪರಿತಾಪತಾಪಿತತನುಲತಿಕೆ ಗಗನತಳತಿಳಕನನಮೃತಕಿರಣನಂ ನೋಡಿ,

ಇನಿಯನಗಲ್ದು ಪೋಗಿ ಪರದೇಶದೊಳಿರ್ದಪನಾನುಮಿಲ್ಲಿ ಮಾ
ವಿನ ತಳಿರ್ವಾಸಿನೊಳ್ ಪೊರಳುತಿರ್ದಪೆನಾಗಳುಮಿಂತೆ ನೀನುಮೆ ।
ನ್ನನೆ ನಡೆನೋಡುತುಂ ನಭದೊಳಿರ್ದಪೆಯುಪ್ಪದಱಿಂದೆ ನಿನ್ನ ನಾ
ನನುವಿಪೆನೆನ್ನ ಮೆಯ್ಬಡವೊ ನಲ್ಲನ ಮೆಯ್ಬಡವೋ ನಿಶಾಕರಾ ॥ ೪೨

ವ॥ ಎಂದು ಪಂಬಲಿಸುತಿರ್ದಳ್. ಮತ್ತವೊಂದೆಡೆಯೊಳ್ ಬರ್ಬಳ್,

ಅವಧಿಯನೊಂದುತಿಂಗಳೆಡೆಯಿಟ್ಟನಿಯಂ ತಡೆದಿರ್ಪನಲ್ಲನೆಂ
ಬವಸರದೊಳ್ ನಿಜಾಂಘ್ರಿನಖದರ್ಪಣಚುಂಬಿತಮುಗ್ನಜಾನನೆಂ ।
ದವನವಳೋಕಿಸುತ್ತವಧಿತಪ್ಪಿದುದಾಱಿನೆ ಪತ್ತುತಿಂಗಳಾ
ದುವು ಬರಲಾತನಾಱದೊಡೆ ಸಾಯಲುಮಾಱೆನೆ ಸತ್ತು ನೀಗೆನೇ ॥ ೪೩

ವ॥ ಎಂದು ಪಂಬಲಿಸುತ್ತಿರ್ದಳ್. ಮತ್ತೊಂದೆಡೆಯೊಳ್ ಬರ್ವಳ್ ತನ್ನ ಪ್ರಾಣವಲ್ಲಭಂ ಬಂದುದರ್ಕೆ ರಾಗಿಸಿ ಇಂತೆಂದಳ್,

ಎನಗೆನ್ನೋಪನ ಬಂದುದರ್ಕಿದುವೆ ದಲ್ ತೆಲ್ಲಂಟ ನೀಂ ನಿನ್ನ ಕಂ
ಪನುಗುಳ್ ಮಲ್ಲಿಗೆ ಚಂದ್ರ ನಿನ್ನ ಪೊಳಪಂ ನೀಂ ತೋಱು ನೀಂ ಮೆಲ್ಲಮೆ ।
ಲ್ಲನೆ ಮಂದಾನಿಳ ತೀಡು ಕೋಗಿಲೆ ಸರಂದೋಱೊಂದು ಮೆಯ್ವೊರ್ಚಿ ತ
ನ್ನಿನಿಯಂ ಬಂದೊಡೆ ನಲ್ಲಳೇಂ ನಲಿದಳೋ ನಾನಾವಿಳಾಸಂಗಳಿಂ ॥ ೪೪

ವ॥ ಎನೆ, ಮತ್ತೊಂದೆಡೆಯೊಳ್,

ವಿದ್ರುಮದಶನಚ್ಛದೆ ಕೋ
ಪೋದ್ರೇಕದಿನೆರ್ದು ಪೋಗೆ ತೆಗೆದಪ್ಪಿದೊಡು ।
ನ್ನಿದ್ರಾಂಭೋಜಾಸ್ಯೆಗೆ ಮುದ
ನದ್ರವಮುಂ ಕಣ್ಣ ನೀರುಮುಣ್ಮಿದುವಾಗಳ್ ॥ ೪೫

ವ॥ ಎಂದು ನುಡಿಯುತ್ತುಮಿರ್ದಳ್. ಮತ್ತವೊಂದೆದೆಯೊಳ್ ಬರ್ಬಂ ಚದುರವಿಟಂ,

ಬದವಿದ ಕೂರ್ಮೆಯಿಲ್ಲದಳಿಪಾರಯುಮಿಲ್ಲದ ಪಾಳ ರಾಗಮಿ
ಲ್ಲದ ಸುಸಿಲಟ್ಕುಋಇಲ್ಲದ ಪದಂ ನೆವಮಿಲ್ಲದ ಕಾಯ್ಪು ಬೇಟಮಿ ।
ಲ್ಲದ ಪುರುಡೇವಮಿಲ್ಲದಳಲುಬ್ಬೆಗಮಿಲ್ಲದ ಕಣ್ಣ ನೀರ್ ಕರಂ
ಚದುರರುಮಂ ಮನಂಗೊಳಿಪುದೇಂ ಕಡುಜಾಣೆಯರೋ ಲತಾಂಗಿಯರ್ ॥

ವ॥ ಎಂದು ನುಡಿದಂತನೇಕಪ್ರಕಾರದ ಕಟಕದ ನಾಗರಿಕನರನಾರೀಜ
ನಂಗಳಂಗಜರಾಗರಂಜಿತವಿನೋದಂಗಳೊಳಿರೆ,

ಭರತೇಶ್ವರಂ ನಿಜಾಂತಃ
ಪುರಕುಮುದವನಂಗಳಲರೆ ತನ್ನಿಂ ತಾನುಂ ।
ಶರದದ ಚಂದ್ರಮನೋಳ್ ಮು
ಚ್ಚರಿಪಂತಿರೆ ಚಂದ್ರಚರಿತಮಂ ಕೈಕೊಂಡಂ ॥ ೪೭

ಅವತಂಸೋತ್ಪಲತಾಡನಂ ಕನಕಕಾಂಚೀಬಂಧನಂ ನೂಪುರಾ
ರವಝುಂಕಾರಿತಚಾರುವಾಮಚರಣಾಘಾತಂ ಚಳದ್ಭ್ರೂಲತಾ ।
ಗ್ರವಿಭಾಗೋತ್ಕಟತರ್ಜನಂ ತರಳತಾತಾಮ್ರಾಧರಂ ಚಕ್ರಿಗಿ
ತ್ತುವಲಂಪಂ ಪ್ರಣಯಪ್ರಕೋಪಸುರತಪ್ರಾರಂಭದೊಳ್ ಕಾಂತೆಯಾ ॥ ೪೮

ವ॥ ಅಂತು ಸುರತಾಂಬುರಾಶಿಯನೀಸಿ ನಿದ್ರಾಂಗನಾಲಿಂಗಿತನಾಗಿರ್ಪ
ನ್ನೆಗಂ,

ಕವುಳಿದ್ದಾಮಕಷಾಯಪಾರಭಮಿಳನ್ಮತ್ತಾಳಿನೀಗೀತಮಂ
ಚಮಹಾಶಬ್ದವಿಜೃಂಭಿತಧ್ವನಿ ಲಸದ್ಗಾಂಧಾರನಾದಂಪ್ರಭಾ ।
ತಮರುತ್ಸುಂದರಮಂದಮಂದಗಮನಂ ಶಂಖಸ್ವನಂ ಪೂರ್ವದಿ
ಗ್ರಮಣೀವಕ್ತ್ರಸರೋಜರಾಗಮಯಮಾಯ್ತೆತ್ತಂ ತ್ರಿಯಾಮಾಂತ್ಯದೊಳ್

ಮಂಗಳಗೀತಿಗಳೊಳ್ಪಗೆ
ಮಂಗಳಪಾಠಕರಮಂಗಳಿಂದೆಸೆದಿರೆ ರಾ ।
ಜಾಂಗಣದೊಳ್ ಭರತನನಿ
ದ್ರಾಂಗನೆಯುಂ ಪತ್ತುವಿಡಿಸುವಂತೆವೊಲಾಗಳ್ ॥ ೫೦

ನಿನಗೋಗಂಬಾಡುವ ಯುವ
ತಿನಿಕಾಯದ ದನಿಗೆ ಸೆಣಸುವಂತೆವೊಲಲರ್ವೀ ।

ವನಜವನಂಗಳ ತೊವರ್ಗಂ
ಪನಾಂಪ ಬಗೆ ಬಳಿಯೆ ಮೊರೆವುವಳಿಗಳ ಬಳಗಂ ॥ ೫೦

ಸರಸಿಜವನಂಗಳಲರ್ವಿನ
ವಿರಲಾಱದೆ ಬೇಗಮೆಱಗುವಳಿನಿವಹದ ಝುಂ ।
ಕರಣಕ್ಕೆ ಕಾಯ್ಪುಗೊಂಡೆ
ಚ್ಚಿರಸ ತೊಳಲ್ದಪುವು ನಿನ್ನ ವಿಜಯಗಜಂಗಳ್ ॥ ೫೧

ಹಿಮಕರಮಂಡಳಮಿದು ಶ
ತ್ರುಮಂಡಳಾಭಂ ನೃಪೇಂದ್ರ ಮಸುಳ್ದುದು ಬೇಗಂ ।
ನಿಮಿರಲ್ ಬಗೆದಪುದೀಮಿ
ತ್ರಮಂಡಲಂ ಮಿತ್ರಮಂಡಳಾಭಂ ನಿನ್ನಾ ॥ ೫೨

ಪುರುಪರಮೇಶ್ವರನಂದನ
ದೊರೆಕೊಳಸುಗೆ ನಿನಗೆ ತಡೆಯದಾಪುರುಪರಮೇ ।
ಶ್ವರನ ನಿರತಿಶಯಗುಣಪರಿ
ಕರಮುಂ ತತ್ಪ್ರಾತಿಹಾರ್ಯಮುಂ ಮಂಗಳಮುಂ ॥ ೫೩

ವ॥ ಎಂಬ ಮಂಗಳಪಾಠಕರವಂಗಳೊಡನೆ ಭರತೇಶ್ವರನುನ್ನಿದ್ರನಾದ ನನ್ನೆಗಂ,

ದೆಸೆಗಳ ಸಂದಂ ಪಱಿದಾ
ಗಸದಿಂದಂ ಪತ್ತುವಿಡಿಸುವಂತೆವ್ರೊಲಿಳೆಯುಂ ।
ಮಸಕದೊಳ್ ಪೊತ್ತು ನೆಗೆದವ್ರೊ
ಲೆಸೆದುದು ದಿಗ್ವಿಜಯಭೂರಿಭೇರೀನಿನದಂ ॥ ೫೪

ವ॥ ಅಂತು ಭೇರಿಯುಂ ಪೊಯ್ಸಿದನನ್ನೆಗಂ,

ಚಕ್ರರತ್ನಮೊಂದೆಯಲ್ತು ಚಕ್ರಿಗಾನುಮಲ್ತೆ ದೋ
ಶ್ಚಕ್ರಮೆಂದು ಬಂದು ಮುಂದೆ ನಿಲ್ವ ಮಾಟ್ಕೆಯಿಂ ಪ್ರಭಾ ।
ಚಕ್ರಮೆಸೆಯೆ ಚೆಲ್ವವೆತ್ತುದುದಯಮೆಂದು ಪದ್ಮಿನೀ
ಚಕ್ರವಾಳಚಕ್ರವಾಕಚಕ್ರ ಚಕ್ರವರ್ತಿಯಾ ॥ ೫೫

ಆಗಳ್ ಪ್ರಭಾತಕಾಲನಿ
ಯೋಗಮನಾಚಕ್ರವರ್ತಿ ನಿರ್ವರ್ತಿಸಿ ಪೋ !
ಪೋಗಲ್ವೇಡ್ ಪಯಣಮನೆಂ
ದಾಗಳ್ ತರವೇಱ್ದು ವಿಜಯಪರ್ವತಗಜಮಂ ॥ ೫೬

ವ॥ ಅಂತು ಸುರೂಪತರನುಂ ಸುರಭಿನಿಶ್ವಾಸನುಂ ಶಂಖಚಕ್ರನಂದ್ಯಾವರ್ತಸ್ವಸ್ತಿಕಧ್ವಜಾವರ್ತರಕ್ತಬಿಂದುಚಿತನುಂ ಮೃಗದೀರ್ಘವಿಸ್ತೃತಾಂಗುಳಿಯುಂ ಮಾನಪೂರ್ವಪೀಡವೃತ್ತಮೃದುತಿರ್ಯಗ್ವಿಲೋಲಮೃದುಶಿರೋರುಹನುಂ ಸುಸ್ನಿಗ್ಧಸಮಪೂರ್ವವೃತ್ತ ಸಮನಾಹಪರಿಪೂರ್ಣವೃತ್ತದಂಡಪರಿವೇಷ್ಟಿತನುಂ ಆಯತಪೃಥುಪಿಬಸ್ತನುಪದಿಗ್ಧಾಂದಪೂರ್ವಪುನರಕ್ತಾರೋಮಾಶ್ಲಿಷ್ಟಸಮಸಮಾಸಗದಾನುತ್ಕೃಷ್ಟಪರಿಪೂರ್ಣಮುಖನುಂ ಮಾನೋನ್ನತಾವನತಕುಂಭನುಂ ಸ್ಥಿರಪ್ರಸನ್ನದೃಷ್ಟಿರಕ್ತಾಪಾಂಗಮಧುಪಿಂಗಳವ್ಯಕ್ತಶುಕ್ಲಕೃಷ್ಣಭಾಗಸ್ನಿಗ್ಧಮೃದುಸೂಕ್ಷ್ಮನೀಳದೀರ್ಘಬಾಹುಳಾಂಚಿತಪಕ್ಷ್ಮನೇತ್ರನುಂ ಮೃದುಸುವಿತ್ರಬಹಳಪ್ರಳಂಬಶಿವಾತರಮಹಾಶ್ರೋತ್ರೊಪತಿಭಿನ್ನಾತನುತ್ಕೃಷ್ಟಾ ವಿಪುಳಚೂಳಿಕಾದುಂದುಭಿನಿರ್ಘೋಷಕರ್ಣನುಂ ಸ್ನಿಗ್ಧಕೃಷ್ಣಬಹುಳದೀರ್ಘಕೇಶನುಂ ಉತ್ಪನ್ನಸವ್ಯಸ್ಯದುಗತವ್ರಾತಮಸ್ತಕಲಂಡನಿರ್ಮನಿರ್ವ್ಯಾಣೋನ್ನತೋವಗ್ರಾಹವಿಭಕ್ತವಿದುವಿಧಾನಶರೀರನುಂ ಅಲ್ಪಘಾಟನುಮನುನ್ನತಶಿಖನುಂ ಪೀನಮಾಂಸಕಟಶ್ಲಿಷ್ಟನುಂ ಅತಿದೀರ್ಘಸ್ನಿಗ್ಧಕೃಷ್ಣಮದನುಂ ಅನುಪೂರ್ವದೀರ್ಘವಾಳಧಿಯುಂ ಮಾನುಷದುಗ್ಧವಿಳಾಸನೋಪೇತಪೇಚಕನುಂ ಸಮಸಂಕ್ಷಿಪ್ತಪ್ರಚ್ಛನ್ನವಪ್ಪಾಯುಮಪಿಂಜೋತ್ಪನ್ನಾಂಡಕೋಶನುಂ ಅಪರಿಭಿನ್ನಾಂತಶ್ಲಕ್ಷ್ಣಶ್ಲಿಷ್ಟಸಂನಿಕಾಂತರಸುಸನ್ನಿವಿಷ್ಟಸುಸಂವೃತ್ತಾಂತರರ್ಧಚಂದ್ರಾಕಾರವಿಂಶತಿನಖನುಂಮನುಪೂರ್ವೋಚಿತಮಾಂಸಸ್ಫಿರನೋಪದಿಗ್ಧಗಾತ್ರಪರನುಂಪೀನೋಪಚಿತಮಾಂಸವಕ್ಷೋನಾಭಿಕಪೋಳೋರೋಮಣಿಯುಂ ಪೀನಾಯತಾಮ್ರಪಲ್ಲವಕೋಶಸುಕೋಶ್ವಮೋಹನನುಂ ವಿಪುಳಾಸನನುಂ ಅನುಪೂರ್ವಧರನಾಕಾರವಂಶನುಂ ಭೇಜುಪರಿಪೂರ್ಣಹ್ರಸ್ವಗ್ರೀವನುಂ ಮಹಾವ್ಯೂಢೋರಸ್ಕನುಂ ವಿಪುಳೋಪಚಿತಾಂಸನುಂ ಸಮಪಾರ್ಶ್ವನುಂ ಅಜಕುಕ್ಷಿಯುಂ ಗೋಧೋತ್ರಿಷ್ಟನುಂ ಮೋಹಜಘನಾಪರನುಂ ಅನಿಮ್ನನಾಭಿಯುಂ ಹ್ರಸ್ವಚೂಚುಕ

ನುಂ ಸುವೃತ್ತಪಸ್ಥರನುಂ ಸುಸಂಚಿತಪ್ರೋಹಫಳೀಹಸ್ತಗಾತ್ರನುಂ ಪರಿಪೂರ್ಣಶ್ಲಿಷ್ಟಪಾರ್ಷ್ಣಿಯುಂ ಅಂಸಳಕಾಳಭಾಗನುಂ ಮೃದುಸ್ನಿಗ್ಧಪ್ರಭೂತಸೂಕ್ಷ್ಮೈಕಜಾತರೋಮನುಂ ಅಪ್ರಿಣಾಕಭಾವಿಳಶ್ಲಿಷ್ಟಿತಚಳನುಂ ಶ್ಲಕ್ಷ್ಣಸ್ನಿಗ್ಧಮೃದುಬಹಳಚ್ಛವಿಯುಂ ಬಂಧುಜೀವಶಾಕಪುಷ್ಪಾಸಪದ್ಮಮುಹಾರಜತಶಂಖಾಸತಳವೆಂಬ ಸಪ್ತಧಾಸ್ಥಿತನುಮಪ್ಪ ವಿಜಯಪರ್ವತಗಜೇಂದ್ರಂ ಬಂದು ಮುಂದೆ ನಿಲ್ವುದುಂ, ?

ಇದನಾನೆ ನೋಡುವಾಗಳ್

ಬಿದಿ ಗಿರಿಗಳ್ ನೆರೆದ ರೂಪಪರಮಾಣುಗಳಂ ।
ದದಿನಿರ್ದುವಕ್ಕುಮೆನೆ ತನ
ಗೊದವಿದಗುರ್ವೆಸೆಯೆ ಮುಂದೆ ನಿಂಗತ್ತು ಗಜಂ ॥ ೫೭

ವ॥ ಅಂತು ದಿಗ್ಗಜೇಂದ್ರ ದೇವಾಂಶದೊಳ್ ನಿರ್ಮಿಸಿದಂತಿರ್ದ ವಿಜಯಪರ್ವತಗಜಮಂ ನೋಡಲೊಡಂ,

ಪರಿಪೂರ್ಣೋತ್ಕಟದಾನಧಾರೆ ಕಟದಿಂ ಪಾಯ್ತುರ್ಪುದುಂ ಪೆರ್ಚಿ ಪುಷ್ಕರದಿಂ ಶೀಕರನಿರ್ಝರಂ ಸುರಿವುದುಂ ನೇತ್ರಂಗಳೊಳ್ ಬಿಂದು ಬೆ ।
ಳ್ನೀರೆಯುಂ ಪೋಲ್ತುದುಮುರ್ಬಿ ಕಾರ್ಮುಗಿಲ ನೀರ್ಪೋಲ್ ಕೋಶದಿಂದಂ ಮದಂ
ಸುರಿಯುತ್ತಿರ್ಪುದುಮೊಪ್ಪೆ ಚಕ್ರಿಯ ಮನಂಗೊಂಡತ್ತು ಮತ್ತದ್ವಿಪಂ ॥೫೮

ದಕ್ಷಿಣಕಟಮನೆ ಸಿವುಱುವ
ದಕ್ಷಿಣರದನದೊಳೆ ಹಸ್ತಮಂ ಪೇಱುವ ಚೆ ।
ಲ್ವೀಕ್ಷಣಹರಮೆನೆ ಜಯಮನ
ನಕ್ಷರಮಱಿಪಿದುದು ಭರತರಾಜಮದೇಭಂ ॥ ೫೯

ದಂತೋತ್ಸಂಗಸ್ಥಿತಜಯ
ಕಾಂತೆಗೆ ಚೆಲ್ವಾಗೆ ಪಿಡಿದ ಸೀಗುರಿದಪೆಯೆಂ ।
ಬಂತೆವೊಲೆಸೆದುವು ಮದಜಳ
ಮಂ ತಣಿಯುಣಲೆಱಗಿ ಸುಳಿವ ಮದಮಧುಪಂಗಳ್ ॥ ೬೦

ಇದು ವಿದ್ವಿಷ್ಟಪ್ರತಾಪೋದಯದವದಹನೋದ್ರೇಕವಿಧ್ವಂಸಿನೀಳಾಂ
ಬುದಧಾರಾಸಾರಮೆಂಬಂತೊದವಿದ ಮದಧಾರಾಜಳಾಸಾರದಿಂದು ।

ಬಿಱಿದಗುರ್ಬಿಂ ತಾಳ್ದಿನಿಂದೂರ್ಜಿತಜಯಗಜಮಂ ರಾಗದಿಂದೇಱಿದಂ ನೀ
ರದಗರ್ಜದ್ಭೂರಿಭೇರೀರವಬಧಿರಿತದಿಙ್ಮಂಡಲಂ ಸಾರ್ವಭೌಮಂ ॥ ೬೧

ವ॥ ಅಂತಧರೀಕೃತಸಪ್ತಚ್ಛದಾಮೋದಗಜಮದಗಂಧಾಂಬುಕುಲ್ಯಾಪ್ರವಾಹದೊಳಂ ಅಪಹಸಿತಶರದಿಂದುಕುಂದಸ್ತಬಕಕರ್ಣಚಾಮರರಾಜಹಂಸಸಲೀಲೋತ್ತಂಸದೊಳಂ ವಿಜಯಶ್ರೀಕೇಶಹಸ್ತಶಂಕಾಕಾರಿಶಂಖಕೇಳೀಮಯೂರಶೋಭೆಯೊಳಂ ಗಗನಗಂಗಾತರಂಗಾಯಮಾನಕದಳಿಕಾಕಾನನಕಮನೀಯದೊಳಂ ವಿಕ್ರಮಕ್ರೀಡಾಪರ್ವತವಿಪರ್ಯಾಸಿರ್ದ ವಿಜಯಪರ್ವತಗಜೇಂದ್ರಮನೇಱಿ ದಂಡಚಕ್ರರತ್ನಂಗಳ್ ಮುಂದೆ ನಡೆವಿನಂ ಅನುಕೂಲಾನಿಲಾಂದೋಳಾಯಮಾನರಾಜಕುಂಜರವಿಜಯಕದಳಿಕಾತರಂಗಿತಗಗನಾಂಗಣನುಂ ಉದಾತ್ತಹೇಷಾರವಮುಖರಿತಬಹುಭಂಗಿರಂಗತ್ತರಂಗಿತಧರಣೀತಳಾಂಗಣನುಂ ಅನೇಕಸೇವಕಕ್ಷತ್ರಿಯಾತಪತ್ರಮಂಡಲಪಿಹಿತದಿನಕರನುಂ ಉಚ್ಛಳಿತಬಹಳಧೂಳೀಪಟಲಪಿಹಿತರಿಪುನೃಪತಿನಗರನುಂ ಅತಿಪ್ರಚುರಚಳದವನಿಪಾಳಸಂಚಳಚ್ಚಾಮರಮರುತ್ಪ್ರೇಂಖೋಳಿತಾಭರಣವಿಚಿತ್ರನೇತ್ರವೈಜಯಂತಿಕಾಂಚಳನುಂ ಅತಿಚಕಿತಾರಾತಿಶುದ್ಧಾಂತಕಾಂತಾತ್ಯಂತಚಿಂತಾಶ್ವಾಸಾನಿಲಾಂದೋಳಿತಕುಚಕಸಿಚಯಾಂಚಳನುಂ ಉದ್ದಾಮಪದಾತಿಪದಕ್ಷೋಭಸಂಚಳಿತಧರಾಚಕ್ರನುಂ ಅಖಿಳದಿಗ್ವಿಜೃಂಭಣಪ್ರಯಾಣಮಂಗಳಾನಕಾನೇಕರವಶ್ರವಣಕಂಪಿತಪರಚಕ್ರನುಮಾಗಿ ನಡೆಯೆ,

ಅಡಿಯಿಡಲೀಧರಾವಳಯಮಿಟ್ಟೆಡೆಯೆಂಬಿನಮಭ್ರಮಂಡಲಂ
ಕಡುನಳಿದಾದುದೀಬಲದ ಧೂಳಿಯೊಳೆಂಬಿನ ಮೊಂದನೊಂದು ತ ।
ಳ್ತಡೆಗಿಱಿದೆತ್ತಲುಂ ನಡೆವ ದಂತಿಘಟಾಳಿಯಿನೆತ್ತವೋದುದಾ
ವೆಡೆಯದು ಪೇಳ್ ದಿಶಾವಳಯಮೆಂಬಿನಮಾದುದದೊಂದು ವಿಸ್ಮಯಂ ॥

ತಡೆವಂ ಗಂಗಾದ್ವಾರದಿ
ನೆಡೆಯೊಳ್ ಬೀಡಿಲ್ಲ ಭರತರಾಜಂಗೆಂದೇಂ ।
ನಡೆದುದೊ ಪೆರ್ಬಡೆ ಗಂಗೆಯ
ತಡಿವಿಡಿದೆರಡನೆಯ ಗಂಗೆ ನಡೆವಂತಾಗಳ್ ॥ ೬೩

ಸಾಗರದೊಳಗಿರ್ದಂಕದ
ಮಾಗಧನಂ ಕಟ್ಟಿದಲ್ಲದಿರನರಸನೆನು ।

ತ್ತೋಗಡಿಸದೆ ನಡೆದುದು ಬಲ
ಸಾಗರಮಾಸಾಗರಂಬರಂ ತರತರದಿಂ ‖ ೬೪

ವ‖ ಆಗಳ್,

ಚತುರಂಗಬಲಸಮನ್ವಿತ
ರತರ್ಕ್ಯವಿಕ್ರಮರನೇಕಕರಿತುರಗಮಣಿ ।
ಪ್ರತತಿಗಳಂ ಮುಂದಿಟ್ಟಮ
ನತರಾದರ್ ಚಕ್ರಿಗಳ್ಗೆ ದಂಡೋಪನತರ್ ‖ ೬೫

ಅತಿಭಯಮುಂ ತಮಗೆ ಚಮೂ
ಪತಿಮಾಡಿದೊಡಳ್ಕಿ ಕುಪ್ಯಸಾರಾದಿಧನ ।
ಪ್ರತತಿಯನಿತ್ತಿತ್ತಂ ಪ್ರತಿ
ಹತಭುಜವಿಕ್ರಾಂತರಂತಪಾಳರ್ ಕಂಡರ್ ‖ ೬೬

ಕಸ್ತೂರಿಕಾಂಡಕಂ ವನ
ಹಸ್ತಿರದಂ ಹಸ್ತಿಮಸ್ತಕೋದ್ಭವಮುಕ್ತಾ ।
ವಿಸ್ತಾರಮೊಂದು ತಂದು ಸ
ಮಸ್ತವನಾಧೀಶರವನಿಪತಿಯಂ ಕಂಡರ್ ‖ ೬೭

ವ‖ ಮತ್ತಂ ಪ್ರಾಚ್ಯಾರ್ಣವತಟನಿಕಟವರ್ತಿಗಳಪ್ರತಿಪ್ರಚಂಡಮಂಡ
ಳಿಕರ್ ಭರತೇಶ್ವರಚಕ್ರವರ್ತಿಯ ಬರವಂ ಕೇಳ್ದು,

ಕರಿಸಂಘಾತಮುಮಂ ಹಯವ್ರಜಮುಮಂ ಪಿಂತಿಕ್ಕಿ ತೂರ್ಯಸ್ವನೋ
ತ್ಕರಮಂ ಮಾಣಿಸಿ ಹೇತಿಮುಕ್ತಭಟದೋರ್ದಂಡಾಗ್ರಶುಂಭದ್ಧ್ವಜೋ ।
ತ್ಕರಸಂದೋಹಮುಮಂ ಬಿಸುಟ್ಟುಡುಗಿ ಪಿಂಛಚ್ಛತ್ರಮಂ ಪ್ರಶ್ರಯಾ
ಕರವೇಷೋಚಿತರರ್ಘ್ಯಹಸ್ತರಿದಿರಂ ಬಂದರ್ ಭಯಭ್ರಾಂತಿಯಿಂ ‖ ೬೮

ವ‖ ಅಂತು ತನ್ನ ಬಲಂ ಬೆರಸೆಲ್ಲಿಯುಂ ನಿಲ್ಲದೆ ಬಂದು ಕಾಲಾನುಭಾವ
ದಿಂ ಯುಗಾರಂಭದ ವರ್ಷಾರಂಭದೊಳಂ ತಗುಳ್ದಿದ್ವೀಪದೊಳಗಣ
ನದೀನದಂಗಳ ಜಲಂಗಳನೊಳಕೊಂಡಲಘ್ಯತ್ವದೊಳಂ ದ್ವೀಪಪರ್ಯಂತವೇ
ಷ್ಟನದೊಳಂ ನೆಱೆದು ವಜ್ರವೇದಿಕೆಯಿಂ ಪೊಱಪೊಣ್ಮದ ಲವಣಸಮುದ್ರ
ದೊಳಗನೆ ಪೋಲ್ತಿರ್ದುಪಸಮುದ್ರದ ತಡಿವಿಡಿದು ಅದಂ ನೋಡುತ್ತಂತೆ

ಬಂದು ಗಂಗಾದ್ವಾರದ ವಜ್ರವೇದಿಕೋತ್ತುಂಗತೋರಣದ್ವಾರದಂತರ್ವಣ
ತುಂಗಕುಜಂಗಳ ನೆಬಿಲ್ಗಳೊಳ್ ನಾಲ್ವತ್ತೆಣ್ಗಾವುದದ ನೀಳದ ಮೂವತ್ತಾ
ಱು ಗಾವುದದಗಲದ ಬೀಡಿಂಗೆ ವಾಸ್ತುವಿಭಾಗಕ್ಕೆಡೆಯಿಲ್ಲದೆ ಕುಱುಂಬಗ
ಳೊಳ್ ಬೀಡಂ ಬಿಡಿಸಿದಾಗಳ್,

ಗಂಗಾದ್ವಾರಾಂತರ್ವಣ
ತುಂಗಕುಜಂಗಳ ನೆಬಿಲ್ಗಳುಂ ತೀಡುವ ತ ।
ದ್ಗಂಗಾತರಂಗವುರುದಾ
ಸಂಗವುಮೇಂ ಪಡೆಯ ಸೇದೆಯಂ ಪಿಂಗಿಸಿತೋ ॥ ೬೯

ವ॥ ಆಗಳ್,

ಭುವನಸ್ತುತ್ಯಾದಿಚಕ್ರೇಶ್ವರಬಲರಜದಿಂ ಪೂತವಾಗಿರ್ದನೆಂಬು
ತ್ಸವದೊಳ್ ವೇಳಾತರಂಗೋತ್ಕರಕರಚಯದಿಂದಾಡುವಂತಿರ್ದ ಪೂರ್ವಾ ।
ರ್ಣವಮಂ ಬಾಹಾಬಳೋಪಾರ್ಜಿತವಿಜಯಯಶೋದುಂದುಭಿಧ್ವಾನಧೀರಾ
ರವಮಂ ಕೈಕೊಂಡುದಂ ಕ್ಷತ್ರಿಯಕುಲತಿಲಕಂ ನೋಡಿದಂ ಚಕ್ರನಾಥಂ ॥

ವ॥ ಅಂತು ಗಗನತಳಮುಂ ತಱುಂಬುವಂತೆ ನೆಗೆದ ವಜ್ರವೇದಿಕೆಯು
ಮಂ ಅಂಬುದಪಥಕ್ಕಾಲಂಬವಿರ್ಪಂತಿರ್ದ ಲವಣಾಂಬುರಾಶಿಯುಂ ನೋಡಿ,

ಎನಗೆ ಪೊಸಂತಿಲೀನೆಗಟ್ದ ವಜ್ರದ ವೇದಿಕೆ ಗೋಷ್ಪದಂ ದಲೀ
ವನನಿಧಿ ಪಾಯ್ದು ಮಾಗಧನನೀಗಳೆ ಕಟ್ಟುವೆನಿಲ್ಲಿ ಪೂಣ್ದು ನಿ ।
ಲ್ವನಿತುವರಂ ಸುರಂ ಗಹನಮೇ ಪುದಿದಪ್ಪಳಪೆನ್ನ ಕಾಯ್ಪು ಪೋ
ಪಿನಮಿರದೀಗಳೇಂಟುವೆನೊ ದಾಂಟುವೆನೋ ಲವಣಾಂಬುರಾಶಿಯಂ ॥ ೭೦

ಚಕ್ರದೊಳೇಂ ಮತ್ತೆ ಜಗ
ಚ್ಚಕ್ರಮೆ ಮುಂದಕ್ಕೆ ದಂಡರತ್ನಂಬರಮಾ ।
ಚಕ್ರಮೆನಗಖಿಳಧರಣೀ
ಚಕ್ರದೊಳನ್ನೆನ್ನ ಬಾಹುದಂಡಮೆ ಸಾಲ್ಗುಂ ॥ ೭೧

ವ॥ ಎಂದು ನಿಜಭುಜಬಳಾವಲೇಪಮನೆ ಮುಂದಿಟ್ಟು ನುಡಿದ ಚಕ್ರ
ವರ್ತಿಯುಂ ಪುರೋಹಿತಪ್ರಮುಖಕುಲವೃದ್ಧರ್,

ದೇವರ ಭುಜಗರ್ವಕ್ಕೇ
ನಾವುದುಮರಿದುಂಟೆ ಸಂದ ಚಕ್ರಿಗಳೆಸಕಂ ।

ದೇವ ನಿನಗೆಸಕಮುದಱೊಳೆ
ದೇವರ್ ನೆಗಟಿಲ್ಕೆವೇೞ್ಕುಮೆಂಬುದುಮಾಗಳ್ ॥ ೩೩

ಅಧಿವಾಸಿತಜೈತ್ರಾಸ್ತ್ರಂ
ವಿಧುವಿಶದದುಕೂಲವಸನಶೋಭಂ ನಾನಾ ।
ವಿಧಮಂತ್ರಾನುಷ್ಠಾನಂ
ಪ್ರಧಾನನುಪವಾಸದಿಂ ತ್ರಿರಾತ್ರಮನಿರ್ದಂ ॥ ೩೪

ವ॥ ಅಂತು ದರ್ಭಶಯನತಳಗತನಾಗಿರ್ದು ಪಂಚಪರಮೇಷ್ಠಿಗಳ್ಗೆ ಪೂಜೆಯುಂ ಪುರೋಹಿತಂ ಮಾಡಿ ಶಾಂತಿಕಪೌಷ್ಟಿಕಕ್ರಿಯೆಯುಂ ನಿರ್ವರ್ತಿಸಿ ಮಱುದಿವಸಂ ನೇಸಮೂಡೆ ಮಂಗಳಾಳಂಕರಣಾಳಂಕೃತನಾಗಿ ಪಡೆವಳ್ಳನಂ ಪಡೆಗೆ ಕಾಪುವೇೞ್ದು ದಿವ್ಯಾಸ್ತ್ರಂಗಳಂ ತೆಕ್ಕನೆ ತೀವಿ ಜಳಸ್ಥಳಾವಿಳಂಬಿಗಳಪ್ಪ ಗಿಳಿಯ ಬಣ್ಣದ ಕುದುರೆಗಳೊಳ್ ಪೂಡಿದಜಿತಂಜಯಮೆಂಬ ರಥಮನೇಱಿ ತನ್ನ ಮನದನ್ನನಪ್ಪ ಸಾರಥಿಯಂ ಚೋದಿಸಲ್ವೇೞ್ದು ವೇದ್ಯಾರೋಹಣಂ ತನಗೆ ವಿಜಯಶ್ರೀವಿವಾಹವೇದ್ಯಾರೋಹಣಮನೆ ಪೋಲೆ,

ವೇದಿಯನಾತ್ಮಗೃಹಾಂಗಣ
ವೇದಿಸೊಳೆಣೆಯಾಗೆ ಬಗೆದು ಜಳಧಿಯುಮಂ ೞ ।
ಷ್ಣೇದಯಿತಂ ನೀರ್ವರಿಯಿಂ
ದಾದಮೆ ಕಿಱಿದೆಂದು ಬಗೆದು ನೋಡಿದನಾಗಳ್ ॥ ೩೫

ವ॥ ಅಂತು ತನಗೆ ವಿಜಯಕಾರ್ಯಸಿದ್ಧಿದ್ವಾರಮಿರ್ಪಂತಿರ್ದ ಗಂಗಾದ್ವಾರದೊಳಗನೆ ಲವಣಜಳಧಿಯಂ ಪೊಕ್ಕಾಗಳ್,

ನೆಗಪ್ದೆನ್ನ ಗುಣಮಲಂಘ್ಯಂ
ಜಗದೊಳದಂ ಕಿಡಿಸಿದಪ್ಪನೀನೃಪನೆಂದ ।
ಚ್ಚಿಗದೊಳ್ ಪುಯ್ಯಲಿಪಂತಿನ್ತೊ
ಲೊಗೆದುದು ಚಳದನಿಲಹತಪಯೋನಿಧಿನಾದಂ ॥ ೩೬

ಪ್ರೋದ್ವೃತ್ತತರಂಗಬಾಹು ಸ
ಮುದ್ಯಚ್ಛೀಕರವಿಮಿಶ್ರಮುಕ್ತಾಕ್ಷತದಿಂ ।
ದಾದ್ಯಮಹೀಪತಿಗೆತ್ತಿದ
ಪಾದ್ಯಮನನುಕರಿಪುದಾಯ್ತು ವಾರ್ಧಿವಿಳಾಸಂ ॥ ೩೭

ತರಳತರಂಗತುರಂಗಂ
ಕರಿಮಕರಕರೀಂದ್ರಮುಖಿಳಶಫರಪದಾತ್ಯ।
ತ್ಕರಮುಗ್ರಗ್ರಾಹರಥಂ
ಭರತಂಗಿತ್ತುದು ಪಯೋಧಿ ಬಳವಿಳಸನಮಂ ॥ ೭೮

ಪುಗೆ ಪಲವುಂ ತೊಱೆಗಳ ನೀ
ರಗಾಧಜಳರಾಶಿ ಕುಡಿದು ತಣಿಯದೆ ಪಾತಾ।
ಳಗಣಂಗಳನೆತ್ತಂ ತಾ
ಳುಗೆವರೆಗಂ ತೆಱೆದ ಬಾಯನನುಕರಿಸಿರ್ಕುಂ ॥ ೭೯

ವ॥ ಮತ್ತಮಂಬರಂಬರಂ ಬಗಿದು ನಿಮಿರ್ವ ತೆರೆಗಳೆಂಬ ಗಿರಿಗಳ ಮೇಗೆ ಕೃತಕಗಿರಿಗಳರ್ಪಂತಿರ್ದ ವೀಣಾಧರಕಿನ್ನರಪನ್ನಗಾಮರರುಮ ನೋಳವಟ್ಟು ಬರ್ಪ ಶಂಖದ ಬಳ್ಳವಳ್ಳಿಗಳುಮನಳ್ಳವಿಳ್ಳಿಯಾಗಿ ಪೋಗ ಲೀಯದೆ ತಳ್ತು ಪರಭಾಗಂಬಡೆದ ವಿದ್ರುಮಲತೆಗಳುಮಂ ಕರಿಮಕರಂಗ ಳ ಕಯ್ವೋಱನೊಳ್ ಬಿಬ್ಬಿಱಿ ಬಿಱಿದೊಡೆದ ಮುಕ್ತಾಪುಟೋದರಂಗಳೊ ಳಗಣಿಂದಮುಚ್ಚಳಿಸಿದ ತಾರಾತರಳಮುಕ್ತಾಫಳಂಗಳುಮನೆತ್ತೆವಟ್ಟು ನೋಡುತ್ತುಂ ಪೋಗೆವೋಗೆ,

ರಥದಿಂದಂ ಮುಂಚೆ ಮನೋ
ರಥಂ ಮನೋರಥದಿನತ್ತಲದು ಮುಂಚೆ ಬೃಹ।
ದ್ರಥಮಿಂತು ಭರತರಾಜನ
ರಥದ ಮನೋರಥದ ಬೇಗಮೊದವಿದುದಾಗಳ್ ॥ ೮೦

ಆಲವಣಜಳಧಿಯಂ ಪರಿ
ಕಾಲನೆ ಬಗೆವಂತೆ ಬಗೆದು ಸಾರಥಿ ರಥಮಂ।
ಲೀಲೆಯೆ ಚೋದಿಸೆ ತೆರೆಗಳ
ಮಾಲೆಯುಮನವಯವದೆ ದಾಂಟಿ ಪರಿದುವು ಹರಿಗಳ್ ॥ ೮೧

ಕದುರೆಯ ಖುರಂಗಳನಿಸಾ
ಱದೆಯುಂ ಚಕ್ರಂಗಳದ್ದುರ್ ಬಾರದೆಯುಂ ಚೆ।
ಕ್ರದ ಚೀತ್ಕಾರರವಂ ಕುಂ
ದದೆಯುಂ ರಥಮಿಂತು ಪರಿದುದಂಭೋನಿಧಿಯೊಳ್ ॥ ೮೨

ತಿಯು ಜಯಸ್ತಂಭದ ಪರಿ
ತಿ ದಲಿದಲ್ಲದೊಡೆ ಜಳಪಥಂ ಸ್ಥಳಪಥದಂ ।
ತಿಸುಗಮಮಾಗದೆನೆ ಪರಿ
ು ತೋಯರಾಶಿಯೊಳದೇಂ ರಥಂ ಸೊಗಯಿಸಿತೋ ॥ ೮೩

ವ॥ ಅಂತು ಚಕ್ರವರ್ತಿಯ ಪುಣ್ಯಾತಿಶಯಮನಱಿಪಿ ಜಳಧಿಯೊಳ್ ೈತ್ರಂ ಪರಿವಂತೆ,

ಇನ್ನೆಪ್ಪ ಚಕ್ರವರ್ತಿಗ
ನ್ನೀಮಾರ್ಗದೊಳ್ ನಡೆಯಿಮೆಂದಱಿಪುವವೋಲ್ ।
ತನ್ನರಥಾಂಗಾಹತಿಯಿಂ
ಮುನ್ನಮೆ ನೀರ್ ತಳರೆ ಚೆಲ್ವುವರಿದತ್ತು ರಥಂ ॥ ೮೪

ವ॥ ಅಂತು ಶೂರಸಾರಥಿಚೋದಿತಪ್ಪ ರಥಮುಂ ಪುಣ್ಯಸಾರಥಿಚೋದಿತಮಪ್ಪ ಮನೋರಥಮುಂ ಉತ್ಸಾಹಮುಂ ಪಡೆಯೆ ಪನ್ನೆರಡುಯೋಜನಂಬರಂ ಪೋದಾಗಳ್,

ಮಿಡುಕಲ್ಸಲ್ಲಿಲ್ಲಿಂದೊಂ
ದಡಿಯುಂ ನಿನಗೆಂದು ಲವಣವಾರಾಶಿಯೆ ಬ ।
ಳ್ಪಿಡಿವಿಡಿದಂತೆ ವರೂಥಂ
ಮಿಡುಕದೆ ನಿಂದತ್ತು ಚೋದ್ಯಮಪ್ಪಿನಮಾಗಳ್ ॥ ೮೫

ವ॥ ಅಂತು ಬೀೞ್ಗುಂಡಿಕ್ಕಿದ ಬಹಿತ್ರದಂತೆ ಅಲ್ಲಿಂ ತಳರದೆ ನಿಂದ ತನ್ನ ರಥಮುಂ ಕಂಡು,

ಕುಡಿವೆನೊ ಲವಣಾಬ್ಧಿಯನೀ
ಗಡೆ ತೋಳ್ಗೊಳ್ ತುಳ್ಕಿ ಬಱಿದುಮಾಪ್ಪೆನೊ ಪೇೞೆಂ ।
ದೊಡನಳುರ್ವ ಕೋಪದಿಂ ಕಣ್
ಕಿಡಿಯುಂ ಕೆಂಡಮುಮನುಗುೞೆ ಮುಳಿದಂ ಭರತಂ ॥ ೮೬

ವ॥ ಅಂತು ಮುಳಿದು,

ಕುಡಿತೆಯ ನೀರಂತುಗಲುಂ
ಕುಡಿಯಲ್ಕುಂಟೆನಗೆ ಲವಣವಾರ್ಧಿಯ ನೀರಂ ।
ಕಡುಪಿದಱೊಳಪ್ಪೊಡೀಗಳೆ
ಸುಡುವೆಂ ಬಾಣಾನಳಾರ್ಚಿಯಿಂ ಮಾಗಧನಂ ॥ ೮೭

ವ॥ ಎಂದು ವಜ್ರಕಾಂಡಮೆಂಬ ನಿಜವಿಜಯಕಾರ್ಮುಕಕ್ಕೆ ಸುರಕರಿ
ಕರಾನುಕಾರಿಯಪ್ಪ ನಿಜಭುಜಾದಂಡಮಂ ನೀಡಿ ನೀಡಿಲ್ಲದೇಱಿಸಿ ನೀವಿ ಜೇ
ವೊಡೆದಾಗಳ್,

ಲವಣಾಂಭೋರಾಶಿ ತೂಳ್ದುಚ್ಚಳಿಸಲೊಡರಿಸಿತ್ತೀಧರಾಭಾಗಮಂ ಪ
ತ್ತುವಿಡಲ್ ಭೂಭೃತ್ಕುಳಂಗಳ್ ಬಗೆದುವು ಜಳಧಿದ್ವೀಪಮಧ್ಯಸ್ಥನಾನಾ ।
ದಿವಿಜಾವಾಸಂಗಳಭ್ರಕ್ಕೊಗೆದುವು ಭರದೊಳ್ ಕೂಡೆ ದಿಕ್ಪಾಲಲೀಲಾ
ಭವನಂಗಳ್ ಬಿರ್ದುವಿಂತಾಯ್ತಖಿಳಮಹಿತಳಕ್ಷೋಭಮಾ ಚಕ್ರಿಯಿಂದಂ ॥

ವ॥ ಅಂತಮೋಘಬಾಣಂ ಬಾಣಮನುರ್ಚಿಕೊಂಡು,

ಪುರುಪರಮೇಶ್ವರಪುತ್ರಂ
ಭರತೇಶ್ವರಚಕ್ರವರ್ತಿ ಬಂದಿರ್ದಂ ತ ।
ದ್ಧರಣಿನಿವಾಸಿಗಳುಂ ವ್ಯಂ
ತರಾಮರರ್ ಬಂದು ಕಾಣ್ಬುದವನತಮುಕುಟರ್ ॥ ೮೯

ಎಂಬಕ್ಕರದಿಂದೆಸೆದುದ
ನಂಬರತಳಮೊಡನೆ ಬೆಳಗೆ ಬೆಳಪುದನಾಶಾ ।
ಯರ್ಾಂಬುಧಿ ತೊಟ್ಟಸಲೊಡಮಿರ
ದಂಬರದಿಂದುಳ್ಕುವುಳ್ಕುಮಂ ಪೋಲ್ತು ಶರಂ ॥ ೯೦

ಕಾಳಾಂತಪವನಹತಿಕ
ಲ್ಲೋಳಾವಿಳಜಳಧಿನಿನದಮೋ ನಿರ್ಘಾತಾ ।
ಭೀಳತರರಭಸಮೋ ಲಯ
ಕಾಳಾಂಬುದಘೋಷಮೋ ನೆಲಂ ಮೊಳಗಿದುದೋ ॥ ೯೧

ಎನೆ ಪುರಜನಮಂತಃಪುರ
ಜನಮುಂ ಪರಿಜನಮುಮಳ್ಕೆ ತದ್ರಾಜನಿಕೇ ।

ತನದಲ್ಲಿ ಬಿರ್ದು ಪಡೆದುದು
ಮನಕ್ಕೆ ಕಡುಮುಳಿಸಿನೆಸಕಮಂ ಮಾಗಧನಾ ‖ ೯೨

ವ‖ ಆಪ್ರಸ್ತಾವದೊಳಾತನ ಪರಿವಾರಾಮರರ್ ನಾನಾವಿಧಾಯುಧವ್ಯಗ್ರಪಾಣಿಗಳುಮುದಾರವೀರರಸರಭಸೋಗ್ರಪಾಣಿಗಳುಮಾಗಿ ಮಾಗಧನ ಮುಂದೆ ಬಂದು ನಿಂದು,

ಇದನಾವನೆಚ್ಚನಾತಂ
ತ್ರಿದಶಂ ಮೇಣಕ್ಕೆ ದಾನವಂ ಮೇಣಕ್ಕಾ ।
ವುದು ಗಹನಮಾತನಾತನ
ಪೊದರ್ಪುಮಾರ್ಪೆನಿಪ್ಪುವೆಮ್ಮೊಳೇಂ ಸಂದಪುವೇ ‖ ೯೩

ಬೆಸಸೆಮ್ಮನೀಗಳಂತೀ
ಬೆಸದೊಳ್ ಕಡೆಗಣಿಸಿ ಬಱಿಯುಮಾವೆಡೆಯೊಳ್ ನೀಂ ।
ಬೆಸಸುವೆಯೊ ನಿನ್ನ ಕಣ್ಣೊಳ್
ಪಸರಿಸೆ ಕಡುಗೆಂಪು ನೋಡಿಯುಂ ಸೈರಿಪೆವೇ ‖ ೯೪

ಎನೆ ಮಾಗಧನಿಂತುಟೆ ನಿ
ಮ್ಮನಿಬರ ವಿಕ್ರಾಂತಮಾದೊಡಂ ಸೈರಿಸಿಮಿ ।
ನ್ನಿನಿಸಂ ನೀಮಾಳ್ಗಳಿರಾ
ನೆ ನಿಮ್ಮ ಕುಲಪತಿಯೆನೆನಗೆ ಮಲೆವರುಮೊಳರೇ ‖ ೯೫

ಪರಿಭವದ ಪೊಱೆಯನಾಂತಿ
ರ್ದರಾತಿಗಳ್ಗಳ್ಕಿ ತನ್ನ ಕುಲಮುಂ ಛಲಮುಂ ।
ದೊರೆಯುಂ ಕಿಡೆ ಬಾೞ್ವಂ ಗಂ
ಡರೂಪಿನೊಳ್ ಗಂಡನಲ್ತು ಪೆಂಡತಿಯ ವೊಲಂ ‖ ೯೬

ಅಧಟಂ ಕೊಂಡಾಡದೆ ಬೇ
ಡಿಪರ್ಗೀಯದೆ ಮುಱಿಗೆ ವಂದರಂ ಕಾಯದೆ ನೀ ।
ಳ್ದೊದವಿದ ಜಸಮನುಪಾರ್ಜಿಸ
ದಧಮನದೇತರ್ಕೆಬಾರ್ತೆ ಜೀವನ್ಮೃತಕಂ ‖ ೯೭

ಬಗೆಗೊಂಡ ಕುಲಧನಂ ಸಮ
ದಗಜಂ ಜಾತ್ಯಶ್ವಮೆಂಬಿವಂ ಮತ್ತೊರ್ಬಂ ।

ಪಗೆವಂಗೆ ಕೊಟ್ಟು ಬೞಿಕೆ
ಮ್ಮಗೆ ಬೆಸೆವವನರಸದೆಂತೊ ಪಗರಣದರಸಂ ॥ ೯೮

ಶರಶಾಳಿಯೆನೆಂಬುದನೀ
ಶರದಿಂದೆಮಗಱಿಪಲೆಚ್ಚು ಕುಲಧನಚಯಮುಮಂ ।
ತರಿಸಿ ಕೊಳಲ್ಬಗೆದಧಟನ
ಪುರುಳಂ ಪೊಣದರ್ಗಳಱಿವೆನುಗ್ರಾಹವದೊಳ್ ॥ ೯೯

ಶರಚಾಪಚಕ್ರಭೀಕರ
ಕರವಾಳಾಯುಧವಿರಾಜಿ ಮತ್ಕರಯುಗಮಿಂ ।
ದೊರೆಗಿಡೆ ಪೆಱಂಗೆ ಮುಗಿವುದೆ
ಕಿರೀಟಮಿದು ಪೆಂಪುಗಿಡೆ ಪೆಱಂಗೆಱಗುವುದೇ ॥ ೧೦೦

ಕುಲದ ಚಲದಾಯದಱಿವಿನ
ಕಲಿತನದುನ್ನತಿಯನಲಸದೀಸುರಸಭೆಯೊಳ್ ।
ಪಲವಾಡುವೆನ್ನ ನಾಲಗೆ
ಬಲಸ್ಥನೊರ್ವಂಗೆ ಜೀಯದೇವೆಂದಪುದೇ ॥ ೧೦೧

ಶರಮುಸಿದಂ ಕಡಿಕಡಿದುಡಿ
ದೆರಡೆರಡಪ್ಪಂತು ತಱಿದು ರಿಪುಬಲಗಹನಾಂ ।
ತರಮುಂ ಸುಡಲೊಗೆವುದು ದು
ರ್ಧರಕೋಪಾಗ್ನಿಯನೆ ಮುನ್ನಮಾಂ ಪೊತ್ತಿಸೆನೇ ॥ ೧೦೨

ವ॥ ಎಂದು ನುಡಿವನಿತುಮಂ ನುಡಿದು ಮಾಣ್ದ ಮಾಗಧಾಮರನಂ ದೃಷ್ಟಪರಂಪರರಪ್ಪ ಕುಲವೃದ್ಧರೆಯ್ದೆವಂದು,

ಚಲದಭಿಮಾನದುನ್ನತಿಯ ಪೆಂಪನೆ ತಾಳ್ದುಮೀನಿಕಾಮುಕೋ
ಮಳಭವದುಕ್ತಿಗಳ್ ಬೆಸಸುವರ್ ಪೆಱರಾರಿದನಿಂತು ಸಂದ ತೋ ।
ಳ್ಬಲದದಟಂ ಪರಾಭವಮನೇಕೆಯೊ ಸೈರಿಸುವಂ ಬಲಸ್ಥನೊಳ್
ಬಲಮನೆ ಪೂಣ್ಪುದುಂ ಪರಿಭವಕ್ಕೆ ಮೊದಲ್ ಸುರಸೈನ್ಯನಾಯಕಾ ॥ ೧೦೩

ಕಡುಗಲಿತನಮುಂ ಚಾಗದ
ಪಡೆಮಾತುಂ ವಿದ್ಯೆಯುರ್ಕುಮೊರ್ವನೊಳೆಂತುಂ ।

ನಡೆಯುವು ಭುವನಾಂತರದೊಳ್
ನಿಡಿಯರ್ಗಂ ನಿಡಿಯರೊಳರಿದೇಂ ವಿಸ್ಮಯಮೋ ‖ ೧೦೪

ಮುನ್ನಾಲೋಚಿಸದಾವುದು
ಮನ್ನೆಗಱಲ್ಕಾಗದೆಂಬುದೇದೊರೆತಿದನೆ ।
ಚ್ಚುನ್ನತಯಶನಾವನದಂ
ಮುನ್ನಂ ತಿಳಿದಱಿದು ನೆಗೞ ನೆಗೞ್ದಿದನೀಗಳ್ ‖ ೧೦೫

ವ॥ ಅದಲ್ಲದೆಯುಂ ಪೂರ್ವಾಪರವಿದೇಹಂಗಳ್ಗೆ ದೇವನಿಕಾಯದೊಡನೆ ಜಿನೇಂದ್ರವಂದನಾಭಕ್ತಿಯಿಂ ಪೋದಲ್ಲಿ ಭರತಕ್ಷೇತ್ರದೊಳೀಯುಗದೊಳ್ ತೀರ್ಥಕರರುಂ ಚಕ್ರವರ್ತಿಗಳುಮಪ್ಪರೆಂದು ಸರ್ವಜ್ಞರ್ ಬೆಸಸೆ ಪಲವು ಸೂೞಿಮೆಲ್ಲಂ ಕೇಳ್ದಱಿದೆವು,

ಸಾಮಾನ್ಯಮಲ್ತು ಶರಮಿದು
ಸಾಮಾನ್ಯಮನುಷ್ಯನಲ್ಲನಿವನೆಚ್ಚಾತಂ ।
ನಾಮಾಕ್ಷರಮಾಳಿಕೆಗಳ್
ತಾಮಱಿಪವೆ ಚಕ್ರವರ್ತಿಯೆಂಬುದನಾತಂ ‖ ೧೦೬

ಮಾಗಧ ಪೆಱತಂ ಬಗೆಯದಿ
ರಾಗದು ಚಕ್ರಿಯೊಳೊಡಂಬಡಂ ನೆಗೞಲ್ ನೀ ।
ನೀಗಳೆ ಪೂಜಿಸು ಶರಮಂ
ಬೇಗಂ ಪೋಗೆಱಗು ಚಕ್ರವರ್ತಿಯ ಪದದೊಳ್ ‖ ೧೦೭

ನಯಮಪ್ಪೊಡೆ ಸೇವಕವೃ
ತ್ತಿಯೆ ದಲ್ ನಮಗೆಳೆವ ತೊಱೆಯುನಿದಿರಿಸುವುದದೆ ।
ಲ್ಲಿಯು ಗಾಂಪು ಚಕ್ರವರ್ತಿಯೊ
ಳಯಶಂ ನಮಗುಱದು ಬೇಗಮೆಱಗದೊಡುಱುಗುಂ ‖ ೧೦೮

ಪುರುಪರಮೇಶ್ವರಪುತ್ರಂ
ಚರಮಾಂಗಂ ಚಕ್ರವರ್ತಿಯೆಂದೊಡೆ ಪೇೞಲ್ ।
ದೊರೆ ಪೆಱರಾರ್ ಭರತನೊಳೆನೆ
ಕರಗಿದುದಾಗರ್ವಪರ್ವತಂ ಮಾಗಧನಾ ‖ ೧೦೯

ವ॥ ಅಂತು ನಿಜಶೌರ್ಯಮದಜ್ವರಂ ಮಂತ್ರಿವರ್ಗವೈದ್ಯವಚನೌಷಧಿಗಳಿಂ ಪತ್ತುವಿಡೆ,

ಮುನ್ನಂ ಪೂಜಿಸಿ ಶರಮಂ
ರನ್ನದ ಪಡಲಗೆಯೊಳಿಟ್ಟು ನಿಜಪರಿವಾರಂ ।
ತನ್ನಿನ್ನಿತುಂ ಬೆರಸು ಭ
ಯನ್ನಡುಕಮನೀಯೆ ಬಂದು ಕಂಡಂ ದಿವಿಜಂ ॥ ೧೧೦

ಪೊಂಗುಳಿದು ಭರತನೃಪಚರ
ಣಂಗಳ್ಗೆ ಮಾಗಧಾಮರಂ ವಿನಮಿತಸ ।
ರ್ವಾಂಗಭರಂ ಚಚ್ಚಾರು ಭು
ಜಂಗನ ಕೊರಲಂತೆ ಬಾಗಿದಂ ಮೂಜಿಡೆಯೊಳ್ ॥ ೧೧೧

ತಳಮುಳುಗುತ್ತೆ ಬಗುವುದುಂ
ವಿಳಸನ್ಮಾಗಧಕಿರೀಟರತ್ನಾಂಶುಗಣಂ ।
ಗಳಿಯಿಸಿದುದವನ ಗರ್ವಮೆ
ಗಳಿಯಿಸುವಂತಿರೆ ನೃಪೇಂದ್ರಪದಸರಸಿಜದೊಳ್ ॥ ೧೧೨

ಚಕ್ರಂ ಪುಟ್ಟಲೊಡಂ ಪರ
ಚಕ್ರಭಯಂಕರ ಬರಲ್ಕೆವೇಳ್ಪುದನಱಿದೆಂ ।
ವಿಕ್ರಮಮನುಟಿದೆನೆನತೊಂ
ದಕ್ರಮಮಂ ಸೈರಿಸೊಂದು ಸೂಟ್ ಚಕ್ರಧರಾ ॥ ೧೧೩

ವಿಜಿತರಿಪುನೃಪ ಭವತ್ಪದ
ರಜದಿಂದಂ ವಾರ್ಧಿಯೊಂದುಪೂತಮೆ ಪೊದಾಂ ।
ಬುಜಸೇವೆಯಿಂದಮಾನುಂ
ವಿಜಯಶ್ರೀಯುತ ಪವಿತ್ರಗಾತ್ರನೆನಾದೆಂ ॥ ೧೧೪

ಎಂದೆಂದಿದು ಭರತಯಶೋ
ದುಂದುಭಿರವಮೆನಿಸಿ ದೆಸೆಗೆ ಪೊಣ್ಮುವ ನಿಜವಾ ।
ಕ್ಸೌಂದರ್ಯದೆ ಪೋಲ್ತಂ ಪುರು
ನಂದನನಂ ಪೊಗೞ್ದು ಮಾಗಧಂ ಮಾಗಧನಂ ॥ ೧೧೫

ಇವು ದಿವದೊಳಗಗ್ಗಳವೆನಿ
ಸುವ ರತ್ನವ್ರಾತಮೆಮ್ಮ ಮನೆಯೊಳ್ ಮಿಗಿಲ।
ಪ್ಪವು ನಿಧಿಗಧಿವಾಸಿಸಲ
ಪ್ಪವೆಂದು ರತ್ನಂಗಳನಿತುಮಂ ಮುಂದಿಟ್ಟಂ॥ ೧೧೬

ಇವು ರತ್ನಕುಂಡಲಂ ಜಿತ
ರವಿಮಂಡಳಮಿವು ತುಡಲ್ಕೆ ಯೋಗ್ಯಂ ನಿನಗ।
ಲ್ಲವು ಪೆಱರ್ಗದೆನ್ನ ಭಕ್ತಿಯ
ನಿವಱಿಂದಾಂ ನಿನಗೆ ಮೆಱೆಪಪೇಂ ಚಕ್ರಧರಾ॥ ೧೧೭

ವಾರಾಶಿಯೊಳನ್ನವು ಮು
ತ್ತೋರನ್ನವು ಪಡೆಯಲಾಗವತಿತರಳತರ।
ತಾರಾಹಾರಂ ಜಿತನೀ
ಹಾರಂ ತ್ರೈಲೋಕ್ಯಸಾರಮಿಂತಿದು ಹಾರಂ॥ ೧೧೮

ಇದು ನಿನ್ನೀಯುಗಲ್ದುರದೊಳ್
ಪೊದಱ್ದು ತನತೊಂದು ಜನ್ಮಮಂ ಸಫಲಂ ಮಾ।
ಳ್ಪುದಿದಿಂದುಕುಂದದಳಶಾ
ರದನೀರದನಿರ್ಮಳಂ ಭವತ್ಕೀರ್ತಿಯವೋಲ್॥ ೧೧೯

ವ॥ ಎಂದು ಮಾಗಧಾಮರಂ ತನ್ನ ಸದ್ಭಾವಸರ್ವಸ್ವದೊಡನೆ ಸರ್ವಸ್ವಮೆಲ್ಲಮುಮಂ ಮುಂದಿಟ್ಟಾಗಳ್,

ಕುಳಶೈಲೋನ್ನತನುಗ್ರಶಾತ್ರವಶಿರೋಮಾಣಿಕ್ಯಮಾಳಾಂಶುಮಾಂ
ಸಳತಶ್ರೀಪದಪೀಠರತ್ನಕಿರಣಂ ಚಕ್ರೇಶ್ವರಂ ವಾರ್ಧಿಭೂ।
ತಳನಾಥಂಗನುರಾಗಮಂ ಬಳೆಯಿಸಲ್ಕೃರ್ತ್ಯಕ್ರಿಯಾತಂಡುಲಂ
ಗಳವೆಂದಾದರದಿಂದೆ ಕೊಂಡನವಱೊಳ್ ಪತ್ತೆಂಟುರತ್ನಂಗಳಂ॥ ೧೨೦

ವ॥ ಅಂತು ಮಾಗಧನಂ ಸಂತಸಂಬಡಿಸಿ ಪೋಗಲ್ವೇೞ್ದು ನಿಜವಿಜಯಕಟಕಾಭಿಮುಖನಾದನಾಗಳ್ ಸಾರಥಿರಥಮಂ ಚೋದಿಸುತ್ತುಂ,

ಮಾಗಧನಂ ಗೆಲ್ದೊಸೆಗೆಗೆ
ರಾಗಿಸಿ ಜಳರಾಶಿ ನಿನಗೆ ಸೇಸಿಕ್ಕುವವೋಲ್।

ಈಗಳ್ ಸೊಗಯಿಸಿದುದು ಮು
ಕ್ತಾಗಣಮಿಶ್ರಿತತರಂಗಹಸ್ತೋತ್ಕರದಿಂ ‖ ೧೨೧

ಪಸರಿಸಿದ ಪದ್ಮರಾಗದ
ಪೊಸಗೆಂಪಂ ಮಾಂಸಮೆಂದು ಮುಂ ಕರ್ದುಕಲ್ಕಾ |
ಟಿಸಿಯುಂ ಬಟಿಕದನುರಿಯೆಂ
ಬ ಸಂಕೆಯಿಂ ಪೊರ್ದದಿರ್ದುಪೀಮತ್ಸ್ಯಂಗಳ್ ‖ ೧೨೨

ಸಮದಕರಿಮಕರಹತಿಯಿಂ
ಸಮುಚ್ಛಳದ್ವೀಚಿಮಾಳಿಕಾಸಸ್ಫಾಳಾಂತ |
ಸ್ಸ್ತಿಮಿತಾಕ್ಷನೀಗಳೀತಿಮಿ
ತಿಮಿಂಗಿಳಂಗೆತ್ತ ನೋಟ್ಪುದೀಸ್ಯಂದನಮಂ ‖ ೧೨೩

ಕಡುಗುಣ್ಪುವೆರಸು ದಾಂಟೆಂ
ಗಡ ಮೇಜೆಯನೆಂದು ವಜ್ರವೇದಿಕೆಯಂ ತಾಂ |
ತೊಡೆಸಕ್ಕಿವೊಯ್ವವೋಲ್ ಪೊ
ಯ್ದೊಡನೊಡನುಚ್ಛಳಪುವಿದಱತುಂಗತರಂಗಂ ‖ ೧೨೪

ವ॥ ಎಂಬಿನೆಗಂ ; ಅತ್ತ ವಿಜಯಕಟಕಜನಮಂಬುಧಿತಟದೊಳಿರ್ದು ಅರಸನೊಂದೆ ಮೆಯ್ಯೊಳ್ ಪೋಗಿ ಬಾರದೆ ತಡೆದುದರ್ಕೆ ಕಟ್ಟು ಕಡಿದು,

ಅರಸಂ ತುಂಗತರಂಗಭಂಗುರುಗಭೀರಾಂಭೋಧಿಯಂ ಪೊಕ್ಕನೊಂ
ದೆ ರಥಂ ಸಾರಥಿಯೊರ್ವನಾರುಮೊಡನಿಲ್ಲೆಂತೆಂತುಟೊಬಲ್ಲಿದಂ |
ಸುರನಾಮಾಗಧನಲ್ಲಿ ಭೂಭುಜನ ದೋರ್ದಂಡಕ್ಕೆ ಪುಣ್ಯೋದಯಂ
ನೆರಮಕ್ಕೆಂದು ಪಲುಂಬಿ ಪಂಬಲಿಪುದಾಯ್ತಂತಾಕುಳವ್ಯಾಕುಳಂ ‖ ೧೨೫

ವ॥ ಅನ್ನೆಗಂ,

ಪರಿತಂದಪ್ಪುದದೊಂದದೇಂ ಮಕರಮೋ ತುಂಗಾದ್ರಿಯಂ ಪೋಲ್ವ ಪೆ
ರ್ದೆರೆಯೋ ಪೆರ್ದೆರೆಯಲ್ತು ಪೋ ಮಕರಮುಂ ತಾನಲ್ಲದುದ್ಯದ್ಧ್ವಜಂ
ಭರತಾಧೀಶ್ವರನೇಱ ಪೋದರಥಮಾಬಂದಂ ಧರಾಧೀಶನೆಂ
ಬ ರವಂ ಪೊಂಪುಳಿವೋಗೆ ವಾರಿಧಿತಟಂ ಚೆಲ್ವಾದುದಾಸೈನ್ಯದಿಂ ‖ ೧೨೬

ತೆರೆಗಳ ಪೊಯ್ಲಿಂ ಸ್ಯಂದನ
ತುರಗಂಗಳ್ ಪೊಗಮನೆತ್ತಿ ಬಂಚಿಸಿ ಪುಟ್ಟಂ ।
ಪರಿಯೆ ತೆರೆಯಿಲ್ಲದೆಡೆಯೊಳ್
ವರೂಥಮುವಯುವದೆ ತಡಿಯನೆಯ್ದಿದುದಾಗಳ್ ॥ ೧೦೭

ವ॥ ಅಂತು,

ಮಣಿಸಂಘಾತಂಗಳಂ ಮಾಗಧನತಿಭಯದಿಂದಿತ್ತು ಮಂ ಚಕ್ರಿಚೂಡಾ
ಮಣಿ ಕೈಕೊಂಡಾಜ್ಞೆಯಂ ದಾಂಟದೆ ನಡೆವುದು ನೀನೆಂದಣಂ ಮಾಣದೇ ಕ।
ಕ್ಷಣದಿಂದಂ ತನ್ನ ಲೀಲಾರಥದೊಳ್ ಲವಣಾಂಭೋಧಿಯಂ ದಾಂಟಿ ನಾನಾ
ಗುಣರತ್ನಾಂಭೋಧಿ ಬಂದಂ ಸುಕವಿಜನಮನೋಮಾನಸೋತ್ತಂಸಹಂಸಂ॥

ವ॥ ಅಂತು ಸಮುತ್ತೀರ್ಣಪ್ರತಿಜ್ಞಾಪಾರಂ ಪಾರಾವಾರಪಾರಮನೆಯ್ದಿದಾಗಳ್ ಗಂಗಾದ್ವಾರದೊಳ್ ಬಂದು ಕಾಣ್ಬ ಮಕುಟಬದ್ಧರುಂ ತದ್ವೇದೀತಟದೊಳ್ ಬಂದಿಱಗುವಧಿಕಾರಿಗಳುಂ ಶಿಬಿರಬಹಿರ್ಭಾಗದೊಳ್ ಬಂದು ಕೈಕೊಂಡ ಸೈನ್ಯಂಗಳುಂ ಬೆರಸು,

ನೆರೆದಂತಃಪುರಕಾಂತೆಯರ್ ಪಲಬರುಂ ಸೇಸಿಕ್ಕೆಯುಂ ವಾರಸಾಂ
ದರಿಯರ್ ಚಾಮರಮಿಕ್ಕೆಯುಂ ಮಕುಟಬದ್ಧಾಧೀಶರಾಗಳ್ ವಸುಂ ।
ಧರೆಯಂ ಪರ್ವಿರೆ ಮೈಯನಿಕ್ಕೆಯುಮುದಾತ್ತೋತ್ಸಾಹದಿಂ ರಾಜಮಂ
ದಿರಮಂ ಪೊಕ್ಕನುದಾರಸಾರವಿಭವಂ ಸಂಸಾರಸಾರೋದಯಂ ॥ ೧೦೯

ಗ॥ ಇದು ದೇವೇಂದ್ರಮುನೀಂದ್ರವಂದ್ಯಪರಮಜಿನೇಂದ್ರಮುಖ
ಚಂದ್ರವಾಕ್ಚಂದ್ರಿಕಾಪ್ರಸರಪ್ರಸಾದೋದೀರ್ಣಸೂಕ್ತಿ
ಕಲ್ಲೋಲಮಾಲಾಕೀರ್ಣಕವಿತಾಗುಣಾರ್ಣವ
ಪ್ರಣೀತಮಪ್ಪಾದಿಪುರಾಣದೊಳ್
ಮಾಗಧದರ್ಪದಳನಂ
ದ್ವಾದಶಾಶ್ವಾಸಂ
ಸಂಪೂರ್ಣಂ.

ತ್ರಯೋದಶಾಶ್ವಾಸಂ.

ಶ್ರೀಯೊಳೊಡಂಬಡಿಸಿ ಜಯು
ಶ್ರೀಯುಂ ಷಟ್ಖಂಡಮಂಡಳಕ್ಷಿತಿಯುಮನಾ ।
ತ್ಮೀಯಂ ಮಾಡುವೆನೆಂಬ ನಿ
ಜಾಯತಿಯಿಂದಂ ಸರಸ್ವತೀಮಣಿಹಾರಂ ॥ ೧

ವ॥ ಅಂತು ಭರತೇಶ್ವರಚಕ್ರವರ್ತಿ ದಕ್ಷಿಣದಿಗಂಗನಾಳಂಕಾರನಾಗಿ ನಡೆದು ದಕ್ಷಿಣಾಂಬುರಾಶಿಯನೆಯ್ದಿ ವೈಜಯಂತೀದ್ವಾರದೊಳ್ ಬೀಡಂ ಬಿಟ್ಟಾಗಳ್,

ಏಲಾಲವಂಗಲವಲೀ
ವೇಲಾವನಭೂಮಿಯೊಳ್ ನಿಧೀಶ್ವರಸೈನ್ಯ ।
ವ್ಯಾಲಗಜಂಗಳ್ ವನಗಜ
ಲೀಲೆಯನನುಕರಿಸೆ ಕಣ್ಗೆವಂದುವು ಪಲವುಂ ॥ ೨

ವ॥ ಅಂತಾವನೋಪಾಂತದೊಳ್ ಮುನ್ನಿನಂತೆ ಶಿಬಿರಮಂ ನಿಱಿಸಿ ವೈಜಯಂತೀದ್ವಾರದೊಳಗಣಿಂದಮೊಂದೇ ರಥದೊಳ್ ಲವಣಜಲಧಿಯಂ ಪೊಕ್ಕು,

ಮಾಗಧನಂ ಗೆಲ್ದಂತವೊ
ಲಾಗಡೆ ವರತನುವನೊತ್ತಿ ಕಪ್ಪಂಗೊಂಡು ।
ದ್ಯೋಗದ ಕಲಿತನಮುಂ ಪೊಗ
ಟ್ವಾಗಳವಾಙ್ಮನಸಗೋಚರಂ ಪೌರವನಾ ॥ ೩

ವ॥ ಅಂತು ವರತನುವಿನ ಕೈಯೊಳಭೇದ್ಯಕವಚಮುಮಂ ಚೂಡಾರತ್ನಮುಮಂ ರತ್ನಕಟಕಂಬೆರಸು ಪಲವುಂ ಪರಾರ್ಥ್ಯರತ್ನಂಗಳಂ ಕೊಂಡು ಮಗುಳ್ದು ಲವಣಸಮುದ್ರದುಪಸಮುದ್ರದ ನಡುವೆ ನಡೆದು ಚಂದನವನನಾಳಿಕೇರತಾಂಬೂಲವಲ್ಲೀಪ್ರಚುರಪ್ರದೇಶಂಗಳೊಳ್ ನಿಜವಿಜಯಕುಂಜರಂಗಳಂ ವಿಹಾರಿಸಿ ಬಂದು ಸಿಂಧುದ್ವಾರದೊಳ್ ಸಮುದ್ರಕಲ್ಲೋಲಲೀಲಾಂದೋಳಿತವನದೇವತಾಂದೋಳನಾನುಕಾರಿತಾಂಬೂಲಲತಿಕಾಲಂಬಕಮುಕಮುಮಾಕಂಪಿತಮಧುಕರನಿಕರಾನುಕಾರಿ ಲತಾಗೃಹಪ್ರದೀಪಚಂಪ

ಕಮುಂ ಪ್ರೇಂಖೋಳಿತಮನಸಿಜವಿಜಯಪ್ರಶಸ್ತಿಲೇಖನೋಚಿತಚ್ಛದಶ್ರೀ ತಾಳಿಕಮುಮಪ್ಪ ವೇಳಾವನದೊಳಾವಾಸಿತವಿಜಯಕಟಕನಾಗಿ ಪೂರ್ವಸ್ಥಿತಿಯೊಳೆ ಪೋಗಿ,

ಜಳಧಿಯ ನೀರನದೊಂದಾಂ
ಗೊಳಗಿನ ನೀರೆಂದು ಬಗೆದು ದಾಂಟಿದ ವಸುಧಾ ।
ತಳಪತಿಗಿತ್ತಂ ತ್ರಾಸಂ
ಗೊಳುತುಂ ಸರ್ವಸ್ವಮಂ ಪ್ರಭಾಸಾಮರನುಂ ॥ ೪

ವ॥ ಅಂತಾಪ್ರಭಾಸಾಮರನಂ ನಿಜವಿಜಯಯಶಃಪ್ರಭಾಸಮೂಹದಿಂದಂ ಪುದಿದು ಸಿಂಧುನದೀತೀರಂಬಿಡಿದು ಬರ್ಪಲ್ಲಿ,

ಎಳವಿಸಿಲೀಗಳೀಗಳೆ ಮುದಿರ್ದುದು ಚೂತಕುಜಾತವೀಗಳೀ
ಗಳೆ ನನೆದೋಱಿತಿಂದೊಳದಿನುನ್ಮದಷಟ್ಪದವೃಂದವೀಗಳೀ ।
ಗಳೆ ಮೊರೆದತ್ತು ಚಂದನದ ತಳ್ಕಬಳಾನಿಕರಕ್ಕದೀಗಳೀ
ಗಳೆ ನೆಗೆಟ್ದತ್ತಲೇ ಪುಗಿಲದಾಗಳೆ ಮೇಡ ವಸಂತರಾಜನಾ ॥ ೫

ಜೆನುಗುವ ತುಂಬಿಯಿಂಚರಮೆ ಗಾಣರ ಕಾಕಳಿ ಕೂಡೆ ಸೋರ್ವ ಮಾ
ವಿನ ಸೊನೆ ಗಂಧಸಿಂಧುರಮದಂ ತಳಿರೋಳಿ ತಗುಳ್ದ್ದ ತಳ್ತ ಕೇ ।
ತನತತಿ ಚಾಮರೋತ್ಕರದೆಲರ್ ಮಳಯಾನಿಳನಾಗೆ ರಾಜರಾ
ಜನ ಪಡೆ ಚೆಲ್ವನೇನೆಪೆದುಕೊಂಡುದೊ ಬಂದ ಬಸಂತರಾಜನಾ ॥ ೬

ವ॥ ಮತ್ತಮತ್ಯಂತಧೌತಕಲಧೌತಸ್ಥಾಸಕಾಳಂಕೃತನಕ್ಷತ್ರಮಾಳಾಪರಿಕಲಿತಕರೀಂದ್ರಂಗಳೆ ವಿಕಚಕರ್ಣಿಕಾಕಾರನಿಕೀರ್ಣಜಂಗಮಕ್ರೀಡಾಗಿರೀಂದ್ರಂಗಳಾಗೆ, ಸಕಲದಿಕ್ಪ್ರಚಳಿತರಾಜಪುತ್ರಮಯೂರಾತಪತ್ರನಿಚಯಮೆ ಸಂಚಾರೀಭೂತಚೂತಭೂಜಾರಾಮಮಾಗೆ, ವಿಜಯಕೌಸುಂಭರಕ್ತಾಂಶುಕಪತಾಕಾನಿಕಾಯಮೇ ಪಲ್ಲವಿತಾಶೋಕವನಮಾಗೆ, ಮದಾಮೋದಸುರಭಿಯುಂ ಮದಶೀಕರಾಸಾರಶಿಶಿರಮುಂ ಮದಾಮೋದಭರಮಂಥರಮುಂ ಅಪ್ಪ ಕರಿಕರ್ಣತಾಳಾನಿಳನೆ ಮಳಯರುಹನಂದನಾಂದೋಳನೋದ್ಗಂಧಿಯುಂ ಮಳಯಗಿರಿನಿರ್ಝರಾಸ್ಫಾಳಿತಶೀತಳಮುಂ ಮಳಯಮವಿಳಾಸಿನೀನಿರಂತರಾಳಸ್ತನತಟಸ್ಖಲನಮಂದಮಂದಗಮನಮುಮಪ್ಪ ಮಳಯಾನಿಳನಾಗೆ,

ಕರಣೀವೃಂದವ್ರಜೋದ್ಗಾಯನಸಮುದಯಕರ್ಣಾಮೃತಸ್ಯಂದಿಹಿಂದೋ
ಳರವಂ ಸಾಮೋದನಾನಾವಿಧಕುಸುಮರಸಾಪಾನಸಾನಂದಭೃಂಗೌ ।
ಘರವಂ ತಾನಾಗೆ ಪುಷ್ಪೋತ್ಕರಬಳವಿಜಯೋದ್ದರ್ಪಕಂದರ್ಪಲೀಲಾ
ಕರನಾದಂ ಜೈತ್ರಯಾತ್ರೋತ್ಸವದೊಳಖಿಳಷಟ್ಖಂಡಭೂಮಂಡಲೇಶಂ॥೭

ವ॥ ಅಂತು ದಿಗ್ವಿಜಯಯಾತ್ರೆಯೆ ವಸಂತೋದ್ಯಾನಯಾತ್ರೆಯನನುಕರಿಸೆ,

ಸಲಿಲಕ್ರೀಡಾಭವೋದ್ಯಜ್ಜಳಕಣನಿಕರಾಕಾರಮತ್ತದ್ವಿಪೇಂದ್ರಾ
ವಳಿಹಸ್ತಾಗ್ರೋಚ್ಚಳಚ್ಛೀಕರಸಮುದಯಮುದ್ಯಾನಕೇಳೀಚಳತ್ಪ ।
ತ್ರಿಳಶಾಖಾಕಾರಜೈತ್ರದ್ವಿರದಕದಳಿಕಾಡಂಬರಂ ಭೂರಿಕೋಳಾ
ಹಳಸೇನಾಚಕ್ರವಾಳಂ ನಡೆದುದು ವಿಜಯಶ್ರೀವಧೂತ್ಕಂಠೆಯಿಂದಂ॥ ೮

ವ॥ ಅಂತತ್ಯಂತಪ್ರವರ್ಧಮಾನವಿಜಯೋದ್ಯೋಗದಿಂ ವಿಜಯಾರ್ಧಾಚಳೋಪಾಂತಮನೊಯ್ಯನೊಯ್ಯನೆಯ್ದಿ ವರ್ಪಾಗಳ್,

ಚಿರವಿಕ್ಷೋಭಿತಸಿಂಧುತೋಯಶಿಶಿರಂ ತತ್ತೀರನಾನಾಲತೋ
ತ್ಕರಸಂಘಟ್ಟನಮಂಥರಂ ಮದಪಯಃಕಂಡೂಳಗಂಡಸ್ಥಳಂ ।
ದ್ವಿರದೋದ್ಘೃಷ್ಟಘನಸ್ರವತ್ಸರಳಸಾರಾಮೋದಮುದ್ದಾಮಭೃಂ
ಗರವಂ ಚಕ್ರಿಯನಾಱಿಸಿತ್ತು ವಿಜಯಾರ್ಧೋಪಾಂತಮಂದಾನಿಳಂ॥ ೯

ವ॥ ಮತ್ತಮಂತಂತೆ ಬರೆವರೆ,

ಗಗನಾಭೋಗಮನೆಯ್ದೆ ನೀಳ್ದ ಮಣಿಕೂಟಾಟೋಪಮೆಂಬಂತೆ ದಿ
ಟ್ಟಿಗೆ ಮುನ್ನಂ ಬರೆ ಸಾರೆ ಸಾರೆ ತನುವಂ ತತ್ಕುಂಜಸಂಜಾತಭೂ ।
ಜಗಳತ್ಪುಷ್ಪಪರಾಗಸಾರಭವಹನ್ಮಂದಾನಿಲಂ ಸೋಂಕೆ ತೊ
ಟ್ಟಿಗೆ ಕಣ್ಗೊಂಡುದು ಪಾರವಂಗೆ ವಿಜಯಾರ್ಧಾದ್ರೀಂದ್ರಶೋಭೋದಯಂ॥

ವ॥ ಆವಿಜಯಾರ್ಧದ ಕಡೆವಿಡಿದು ಮೇಗೆ ನೆಗೆದ ವನವೇದಿಕಾಪ್ರದೇಶಮನೆಯ್ದಿದಾಗಳ್,

ಅದಱೊಳಗೆ ಪುದಿದ ಸಪ್ತ
ಚ್ಛದಚಂಪಕನಾಗಪೂಗಪುನ್ನಾಗವನಂ ।
ಪುದಿದ ಪೊಸಗಂಪಿನೊಳ್ ಬಳ
ಸಿದುದಾಗಳ್ ಪುಗುವ ಭರತನಂತಃಪುರಮಂ ॥ ೧೧

ವ॥ ಅಂತು ಸೊಗಯಿಸುವ ವನವೇದಿಕೆಯ ನಾನಾಮಣಿಮಯಮಾಲಾವಿರಾಜಿತೋತ್ತುಂಗತೋರಣದ್ವಾರದಿಂದಂ ನುಗುಳ್ದು ವನವೀಥಿವಿಡಿದುಬಂದು ವಿಜಯಾರ್ಧಮಧ್ಯಮಕೂಟಾಸನ್ನಪ್ರದೇಶನಿವೇಶಿತಶಿಬಿರನಾಗಿ ನಿಯಮದೊಳಿರ್ದ ಭರತೇಶ್ವರಚಕ್ರವರ್ತಿಯಿರವನಱಿದು,

ಸಿತಕುಸುಮಶೇಖರಂ ಚ
ರ್ಚಿತಚಂದನನತಿವಿಳಾಸವಿಧೃತದುಕೂಲಂ।
ಧೃತರತ್ನಾರ್ಘ್ಯ ೯ಂ ಬಂದಂ
ಪತಿಗಿದಿರಂ ಶಂಖಸಿಧಿಯೆ ಬರ್ಪಂತಾಗಳ್ ॥ ೧೨

ಮಣಿಮಕುಟಂ ಶಿಖರಂ ಲಂ
ಬಣಿಗೆಯ ಪೊಸಮುತ್ತು ನಿರ್ಝರಂ ಮಣಿಕಟಕಂ।
ಮಣಿಕಟಕಮಾಗೆ ತದ್ಗಿರಿ
ಗೆಣೆಯಾದಂ ತನ್ನ ಪೆಸರೊಳಂ ವಿಜಯಾರ್ಧಂ ॥ ೧೩

ಬಂದು ಮಣಿಮಕುಟನಸವಸ
ದಿಂದಂ ಚಕ್ರಿಯ ಪೊದಱ್ದ ತೇಜಕ್ಕೆ ಮಸು।
ಳ್ದಂದೆಱಗಿ ಮುಂದೆ ನಿಲ್ವುದು
ಮೊಂದವಯವದಿಂದೆ ಸಾರೆ ಕರೆದು ನೃಪೇಂದ್ರಂ ॥ ೧೪

ವ॥ ಭದ್ರಾಸನಮನಿಕ್ಕವೇಳೆ ಕುಳ್ಳಿರ್ದು ವಿಜಯಾರ್ಧಕುಮಾರಂ,

ಇದು ವಿಜಯಾರ್ಧಮೆನ್ನ ಪೆಸರುಂ ವಿಜಯಾರ್ಧಮಲಂಘ್ಯಮೆಂದುಮಿಂ
ತಿದು ಪೆಱರ್ಗನುಮಿನ್ನೆಗಮಲಂಘ್ಯನೆನಿಂ ನಿನಗಾಳೆನಾಳ ಲೆ।
ಕ್ಕದೊಳಿದು ಚಕ್ರವರ್ತಿಗಳ ದಿಗ್ವಿಜಯಾರ್ಧದೊಳೊಂದಿನಿಂದುದ
ಪ್ಪದಱೊಳೆ ಸಂದುದೀಗಿರಿಯುಮೀಜಗದೊಳ್ ವಿಜಯಾರ್ಧನಾಮದಿಂ ॥
ಇದಱೊಳ್ ಮಧ್ಯಮಕೂಟದೊಳ್ ವಸಿಯಿಪೆಂ ನಿನ್ನಾಜ್ಞೆ ಪೂಮಾಲೆಯಂ
ದದೆ ನಿಂತಿರ್ಪುದು ಮತ್ಕಿರೀಟತಟದೊಳ್ ಚಕ್ರೇಶರಾರ್ ಬಂದೊಡಂ।
ಮೊದಲೊಳ್ ಮಾಳ್ಪ ನಿಯೋಗಮಿಂತಿದೆನಗೆಂದಾನಂದದಿಂ ತಾನೆ ಮಾ
ಡಿದನಾಚಕ್ರಿಗೆ ನಾಡೆಯುಂ ವಿಭವದಿಂ ಪುಣ್ಯೋದಕಸ್ನಾನಮಂ ॥ ೧೬

ವ॥ ಅಂತು ವಿಜಯಾಭಿಷೇಕಂಗೆಯ್ದು,

ಸಾರಮಿದು ರತ್ನಮಯಭೃಂ
ಗಾರಂ ಹರಿಪೀಠಮಿದು ಜಗತ್ತ್ರಿತಯಾಳಂ ।
ಕಾರಮಿದು ದಿವ್ಯಮಾತಪ
ವಾರಣಮಮೃತಾಂಶುಬಿಂಬಧವಳವಿಳಾಸಂ ॥ ೧೭

ಇವು ಚಮರೀಜಾತಂ ದು
ಗ್ಧವಾರ್ಧಿಫೇನೋಪಮಾನಮಿವು ನಿನಗೆಯೆ ತ ।
ಕ್ಕುವು ನಿನ್ನ ಜಸದ ರೂಪಿನೊ
ಳವೆ ಮೊಱೆವುವು ಸಕಳಚಕ್ರವರ್ತಿಶ್ರೀಯಂ ॥ ೧೮

ವ॥ ಎಂದು ವಿಜಯಾರ್ಧಕುಮಾರಂ ಸಾರವಸ್ತುಗಳನೋಲಗಿಸಿ ತನಗಾ
ಜ್ಞಾವಿಧೇಯನಾಗಿ ಪೋದಂ. ಅನ್ನೆಗಂ ಭರತೇಶ್ವರಚಕ್ರವರ್ತಿಯುಮಲ್ಲಿ
ಚಕ್ರರತ್ನಮಂ ಪೂಜಿಸಿ,

ವಿಜಯಾರ್ಧಜಯಮಿದೆನಗಾ
ವ ಜಯಂ ನೆಗೞ್ದುತ್ತರಾರ್ಧಜಯಮೆ ಜಯಂ ದಿ ।
ಗ್ವಿಜಯದೊಳೆಂದೂರ್ಜಿತಭುಜ
ವಿಜಯಂ ದಿಗ್ವಿಜಯಚಿಂತೆಯಿಂ ತೊಡರ್ದಾಗಳ್ ॥ ೧೯

ವ॥ ಅಂತು ತನ್ನ ಮುನ್ನೆ ಬಂದ ವನವೀಧಿಯೊಳಗನೆ ಮಗುೞ್ದು
ಪೋಗಿ ವೇದಿಕಾದ್ವಾರದಿಂ ಪೊಱಮಟ್ಟು ವಿಜಯಾರ್ಧವನವೇದಿಕಾಸನ್ನ
ವಿಶಾಲಪ್ರದೇಶದೊಳ್,

ನೆಲೆವೀಡಂ ಬೀಡುಮಾಡಲ್ ಕೆಲವುದಿವಸಮಂ ಮಾೞ್ಪುದಿನ್ನಿಲ್ಲಿ ರೂಪ್ಯಾ
ಚಲಮಂ ಪಾಯ್ದುತ್ತರಾರ್ಧಕ್ಕೆಮಗೆ ನಡೆವ ಸಾಮಗ್ರಿಯಂ ಮಾಡಲೀಗಳ್ ।
ನೆಲೆ ಗಂಗಾಸಿಂಧುಮಧ್ಯಕ್ಷಿತಿಪತಿಗಳುಮಿಾತಾಣದೊಳ್ ಬಂದು ಕಾಣ್ಬರ್
ಪಲರೆಂದಂತಲ್ಲಿ ಚೆಲ್ವಾಗಿರೆ ಬಿಡಿಸಿದನುರ್ವೀಶ್ವರಂ ತನ್ನ ಬೀಡಂ ॥ ೨೦

ವ॥ ಅಂತು ಬೀಡಂ ಬಿಟ್ಟಿರ್ಪನ್ನೆಗಂ ಗಂಗಾಸಿಂಧುಗಳೆರಡಱೆಡೆಯ ಭೂ
ಪಾಳರಿಂದೆ ಮುನ್ನ ವೃಷಭನಾಥನ ನಡಪಿದುದುಮಂ ತಮ್ಮ ನಣ್ಪುಮಂ
ಬಗೆದು ಕುರುರಾಜಾದಿಮೂರ್ಧಾಭಿಷಿಕ್ತಪಾರ್ಥಿವರ್ ಸನ್ನದ್ಧಬಲಪರಿವೃ
ತರಾಗಿ ಭರತೇಶ್ವರಚಕ್ರವರ್ತಿಯನಾಸ್ಥಾನದೊಳ್ ಬಂದು ಕಂಡು,

ಒಡೆವುದೆ ವಜ್ರಕವಾಟಮ
ನಡರ್ವುದೆ ವಿಜಯಾರ್ಧಗಿರಿಯನಿಂತೀಗಳ್ ಪೂ ।
ರ್ಣ್ದಡೆಗಿಡುವುದೆ ಸಿಂಧುವನಿಂ
ತಡೆವಂದಮಿದಾವುದೆಮ್ಮನೆಮ್ಮನೆ ಬೆಸಸಾ ॥ ೨೧

ನಿನಗುತ್ತರಾರ್ಧವೊಂದ
ರ್ಧನಿಮೇಷಮುಹೂರ್ತಮಾತ್ರದಿಂ ಬಾರದೆ ಕೈ ।
ಗಿನಿತುವರಂ ದೇವರ್ ನಡೆ
ವನಿತುಂ ಮಾಣ್ಬನಿತುಮಂತದಾವುದು ಗಹನಂ ॥ ೨೨

ಎಂಬನ್ನೆಗಮಂಬರದೊಳ
ಳುಂಬಂ ಬೆಳಗೆನಿಸಿ ಮಕುಟಮಣಿಕುಂಡಲದಿ ।
ವ್ಯಾಂಬರಭೂಷಿತನಮರಕ
ದಂಬಕವೃತನೊರ್ವನಮರನಾಗಿರಿವರದಿಂ ॥ ೨೩

ಅವತರಿಸಿ ಚಕ್ರಿಯುಂ ಕಂ
ಡವನತಮಣಿಮಕುಟನುಚಿತಪೀಠನಿವಿಷ್ಟಂ ।
ಭುವನೇಶಂ ಬೆಸಗೊಳೆ ವಿನ
ಯುವಚಃಪ್ರಸರಂಗಳೆಸೆದೊಡಂಬಡೆ ನುಡಿದಂ ॥ ೨೪

ಭುವನಕ್ಕೆ ಕುಶಲಮಂ ಮಾ
ಡುವ ನಿನಗೇನೆಂದು ಕುಶಲಮೋ ಎಂಬೆಂ ಪೇಟ್ ।
ಭುವನನುತ ಮಾಣದರಿನೃಪ
ಭುವನಕ್ಕನ್ವಳಿಪ ತೋಳ್ಗೆ ಕುಶಲಮೆ ನಿನ್ನಾ ॥ ೨೫

ದೇವರ ಕುಲದೊಳ್ ಪುಟ್ಟಿಯೆ
ದೇವವೆಸರ್ ನೆಗಟ್ದುದೆಮಗೆ ಕಾರಣಮದನಾ ।
ಮೇವೆಮೊ ವಿಜಿಗೀಷುತೆಯಿಂ
ದೇವ ನೆಗಟ್ ದೇವ ನೀನೆ ದೇವನೆ ಅಲ್ತೇ ॥ ೨೬

ಇದು ನೃಪತೇಜಶ್ಚಕ್ರದ
ಪೊದಪ್ಕೆ ತಾನಲ್ತೆ ಚಕ್ರರೂಪದಿನಿರ್ದ ।

ಪ್ಪುದು ನಿನ್ನ ದಂಡನೀತಿಯ
ಪುದುವೆ ವಲಂ ದಂಡರತ್ನಮೆಂಬುದು ಪೆಱತೇ ॥ ೨೭

ಭವದೀಯಬಳವಿಜೃಂಭಿತ
ರವದಿಂ ತ್ರಸ್ತನೆನಧೀಶ ಬಂದೆಂ ಕಾಣಲ್ ।
ಭವದಂಘ್ರಿಸರೋಜಮನಾ
ನವಧೂತಾರಾತಿನೃಪ ಭವತ್ಕಿಂಕರನೇಂ ॥ ೨೮

ಕೃತಮಾಳನೆನೆಂಬೆನಿಳಾ
ಪ್ರತೀತನೆಂ ಗಿರಿತಟಂಗಳೆನ್ನುಱಿಯದುವಿ ।
ಲ್ಲ ತಮಿಸ್ರಗುಹಾಕೂಟ
ಸ್ಥಿತನೆಂ ನೀನೆನ್ನನಾಳ್ವುದಾಳ್ವಸಗೆಯ್ವೆಂ ॥ ೨೯

ವ॥ ಎಂದು ತನ್ನಂ ಮುನ್ನಮಱಿಪಿ,

ಬೆಲೆಯಿಡಲಱಿವೊಡೆ ಮಂಡಲಿ
ಬೆಲೆಯಿಡುಗೆಮ ನೋಪ್ಪೊಡಿವಱ ತೇಜದ ಮೋಲು ।
ಜ್ಜ್ವಲತೇಜ ನಿನ್ನ ತೇಜಂ
ನೆಲಸಿದುದೆನೆ ಪೇೞವರ್ಕೆ ಬೆಲೆಗಳುಮೊಳವೇ ॥ ೩೦

ಬಂದೊಂದಱನೀತುಡುಗೆಗ
ಳೊಂದೊಂದಗ್ಗಳಮಿವೆಂದು ಪದಿನಾಲ್ಕುಮನೋ ।
ರೊಂದನೆ ತೋಱಿ ನಿಜಾದರ
ದಿಂದಂ ಭರತೇಶ್ವರಂಗೆ ದಿವಿಜಂ ಕೊಟ್ಟಂ ॥ ೩೧

ವ॥ ಅಂತು ಕೊಟ್ಟು ತಾನುಂ ಚಕ್ರವರ್ತಿಯ ಮನ್ನಣೆಯೊಳ್ ಸಂತ ಸಂಬಟ್ಟು ವಿಜಯಾರ್ಧಗುಹಾದ್ವಾರಪ್ರವೇಶೋಪಾಯಮನೆಲ್ಲಮಱಿಯೆ ಬಿನ್ನಪಂಗೆಯ್ದಾ ವ್ಯಂತರಾಮರಂ ಪೋಗಲೊಡಂ ಮನುವಂಶಧ್ವಜಂ ಸೇನಾ ನಾಯಕಂಗೆ ಬೞಿಯನಟ್ಟಿದಾಗಳಾತಂ ಬಂದು ಮುನ್ನಮೆ ಬಂದಿರ್ದ ಕುರುರಾಜಾದಿಪಾರ್ಥಿವರಂ ನೋಡಿ,

ಅವನೀಶಾದೇಶಮಂ ದಾಂಟಿದರೆನಿಪ ಜಗದ್ಸ್ಸರ್ಯರ್ಶೋಧೂಳಿಯುಂ ಪಾ
ರ್ಥಿವಸೇನಾಧೂಳಿಯುಂ ಮುಟ್ಟಿದು ದಲಿವರನೆಂಬಂತೆ ಮುಂದಿಟ್ಟು ಬಂದಿ ।

ರ್ಪವರುದ್ಘುಷ್ಟಕ್ಷತ್ರಕಂಠೀರವರಿವರಧಿಪರ್ ಚಂಡದೋರ್ದಂಡಚಕ್ರೈತ್ರೋ
ತ್ಸವಸೌಧೋಪಗ್ರಕೀರ್ತಿಧ್ವಜರಿವರೆ ಪತಿಶ್ರೀಲತೋದ್ಯಾನಪಾಳರ್ ‖ ೩೦

ವ‖ ಎಂಬುದುಂ ತದುಕ್ತಿಸುಧಾಸಾರವಾರಿಧಾರೆಯಿಂದಂ ಕೌನರ್ತ ರಾಜ
ಪುತ್ರರ ಮಾರ್ಗಶ್ರಮಾತಪಾಕ್ರಾಂತಮಪ್ಪಮನಮೆಂಬ ಲತೆಯುಮನನೇಕಕು
ಶಲಾಲಾಪಪ್ರಶ್ನೆಯಿಂದಂ ಕುಸುಮಿತಮುಮಂ ಸ್ವಹಸ್ತತಾಂಬೂಲದಾನದಿಂ
ದಂ ಫಲಿತಮುಮಂ ಮಾಡಿ ತಮ್ಮತಮ್ಮ ಬೀಡುಗಳ್ಗವರಂ ಪೋಗಲ್ವೇೞ್ದು
ಸೇನಾನಾಯಕನ ಮೊಗಮಂ ನೋಡಿ ಕೃತಮಾಳಾಮರೋದ್ದಿಷ್ಟೋಪಾ
ಯಮುಮನೆಲ್ಲಮುಂ ಪೇೞ್ದು,

ತೆಱೆವ ತೆಱನಿಂತುಟೆಂತೀ
ತೆಱದಿಂದೆ ತಮಿಸ್ರಗುಹೆಯ ವಜ್ರದ ಪಡಿಯಂ ।
ತೆಱೆದದಱ ಬೆಂಕೆ ಪೋಪಿನ
ಮೆಱಗಿಸು ನೀಂ ಮ್ಲೇಚ್ಛಖಂಡಮಂ ಪಡುವಣದಂ ‖ ೩೩

ಎನೆ ರಥಿನೀಪತಿ ಚಕ್ರೇ
ಶನ ಬೆಸನಂ ಪೂಣ್ದು ರಾಗದಿಂದೇಱಿ ಜಗ ।
ದ್ವಿನುತಾಶ್ವರತ್ನಮಂ ಪಿರಿ
ದು ನಚ್ಚಿನೊಳ್ ಪಿಡಿದು ದಂಡರತ್ನಮನಾಗಳ್ ‖ ೩೪

ಕತಿಪಯತುರಂಗಬಲಪರಿ
ವೃತನೊಳಪೊಕ್ಕೊಗೆದ ಸಿಂಧುವನವೇದಿಕೆಯಿಂ ।
ಸತತಗತಿವೇಗದಿಂದೂ
ರ್ಜಿತಭುಜಬಳನೆಯ್ದೆ ನಗದ ವನವೇದಿಕೆಯಂ ‖ ೩೫

ವ‖ ಆವೇದಿಕೆಯ ಮೂಡಣ ಮಣಿಮಯಸೋಪಾನಂಗಳಿಂದಂ ರಜತಾ
ಚಳಜಗತೀತಳಮನೇಱಿ ತನ್ನೊಡನೆಯ ಬಲಮೆಲ್ಲಮುಂ ಪಡುವಣ ಸೋ
ಪಾನಂಗಳಿಂದಂ ಬೆಂಕೆ ಭೋಂಕೆನಳುರವಂತು ಬೇಗಂ ಮ್ಲೇಚ್ಛಖಂಡಾಂತ
ರ್ವರ್ತಿಯಾಗೆ ಮುನ್ನಂ ಕಳಿಪಿ ಗುಹೋತ್ಸಂಗಮಂ ತಾನೊರ್ಬನೆಯ್ದೆ
ವಂದು ತುರಗರತ್ನಮನೇಱಿ ಪಶ್ಚಿಮಾಭಿಮುಖನಾಗಿ ನಿಂದು ಭರತೇಶ್ವರ
ಚಕ್ರವರ್ತಿ ಗೆಲ್ಗೆಂದು ಸಾತಿರೇಕಂ ದ್ವಾದಶಯೋಜನವಿಸ್ತಾರಾಷ್ಟಯೋಜ
ನೋತ್ಸೇಧವಜ್ರಕವಾಟಪುಟಂಗಳಂ,

ಭರದಿಂದಂ ದಂಡದೊಳ್ ತಾಟಿಸಿದೊಡೆ ವಿಜಯಾರ್ಧಾಚಳಂ ತೊಟ್ಟನಾಗಳ್
ಬಿರಿದತ್ತೆಂಬಂತುಮಾಪರ್ವತಮಳಱಿದುದೆಂಬಂತುಮಾಕಾಶಮಾಶಾಂ ।
ತರದಿಂದಂ ಪತ್ತುವಿಟ್ಟೀಧರೆಗೆ ಕೆಡೆದುದೆಂಬಂತುಮಾಶಂಕೆ ಪೊಣ್ಮು
ತ್ತಿರೆ ಪೆರ್ಚಿತ್ತುಗ್ರಘೋಷಂ ಪ್ರಳಯಘನಘಟಾಟೋಪಗಂಭೀರಘೋಷಂ ॥

ಆರರೀಪುಟಮೆರಡುಂ ಜೀ
ರ್ಗರೆದು ಮರಲ್ದಂದಮೆಂತುಟಾಯ್ತೆನ್ನ ಭಯಂ ।
ಕರದಂಡರತ್ನಹತಿಯಿಂ
ಗಿರಿನೊಂದು ನರಳ್ವ ಮಾಱ್ಕೆಯಂತಾಯ್ತಾಗಳ್ ॥ ೩೭

ತೆಱೆಯಲೊಡಮಲ್ಲಿ ಬೆಂಕೆಯು
ಪೊಱಮಡುವೊಂದಂದಮಸಿತುಕಾಲದೊಳೆಂದುಂ ।
ಪೊಱಮಡದೆ ಭೋಂಕೆನಾಗಳ್
ಪೊಱಮಟ್ಟವೊಲಾದುದುಷ್ಣದೀರ್ಘೋಚ್ಛ್ವಾಸಂ ॥ ೩೮

ವ॥ ಅಂತಭೇದ್ಯವಜ್ರಕವಾಟಪುಟಂಗಳಾಪರ್ವತದೆರ್ದೆದೆಱೆವಂತೆ ತೆಱೆ
ಯೆ ಭೋಂಕೆನಳುರ್ವ ಬೆಂಕಿಯುಂ ಸೋಂಕಲೀಯದೆ,

ಕಸೆಯನಿನಿಸಱಿಪಿ ಕುಡೆ ಲಂ
ಘಿಸಿದುದು ಪನ್ನೆರಡುಯೋಜನಂಬರಮಿನ್ನೇ ।
ವೆಸಗೊಳ್ವುದೊ ಕಡುವೇಗದಿ
ನಸಕಳಿದುದು ಮನಮುಮಂ ತುರಂಗಮರತ್ನಂ ॥ ೩೯

ವ॥ ಅಂತು ತುರಂಗರತ್ನದ ಜವದೊಳೆಡಂಬಟ್ಟಂತೆ ಸಕಳಚಮೂ
ಪತಿಯುಮನಶ್ವರತ್ನಮುಮಂ ದಂಡರತ್ನಮುಮಂ ಮೆಯ್ಕೆಯ್ದಾಳ್ ಕಾವ
ದೇವತೆಗಳ್ ವಿಜಯಾರ್ಧತಟವೇದಿಕೆಯಿಂ ತಗುಳ್ದು ಸಿಂಧುವಿನ ಪಶ್ಚಿ
ಮದಿಗ್ಭಾಗವನವೇದಿಕೆಯ ತೋರಣದ್ವಾರದಿಂದಂ ಮ್ಲೇಚ್ಛಖಂಡದೊಳ
ಗಣ ವಿವಿಧಾಕಾರಪುರಗ್ರಾಮಸೀಮಾಭಿರಾಮಭೂಮಿಭಾಗಮಂ ಪುಗಿಸಿದಾ
ಗಳ್ ಸೇನಾನಾಯಕಂ ಮ್ಲೇಚ್ಛಖಂಡಮಂ ತ್ರಿಪ್ರದಕ್ಷಿಣಂಗೆಯ್ದುಬಾಯ್ಕೇ
ಳಿಸಿ ಪಲಂಬರ್ ಮ್ಲೇಚ್ಛರಾಜರನವರವರ ಜೀವಧನಕುಲಧನಂಗಳ್ ವೆರಸು
ಮುಂದಿಟ್ಟು ತೋರಣದ್ವಾರದಿಂದಂ ಸಿಂಧುವನವೇದಿಕೆಯೊಳಗನೆ ಬಂದು

ಸೋಪಾನಾಂತರದೊಳ್‌ವಿಜಯಾರ್ಧತಟವೇದಿಕೆಯಂ ಕಳಿದು ಜಗತೀತಳ ಮನೇಱಿ ಬರ್ಪನ್ನೆಗಂ,

ಬಳಗಣ ಬೆಂಕೆಯುನಱಿದಿಂ
ಗಳಂತು ನಗಮುಗುಬ್ಬಿ ಶಾಂತರೂಪದಿನಿರ್ದ।
ತ್ತಳುರುತ್ತಮಿರ್ದ ಕೋಪಾ
ನಳನಿಂದುಪಶಾಂತನಾದ ಭೂಭೃತ್ಪತಿವೋಲ್‌॥ ೪೦

ವ॥ ಆಗಳಾಗುಹಾದ್ವಾರಮಂ ಪತಾಕಿನೀಪತಿ ಪಡೆಗೆ ನಡೆಯಲಿಂಬಪ್ಪಂತು ಶೋಧಿಸಿ ಕಾಪಂ ಪೇೞ್ದು ನಿಜವಿಜಯಶಿಬಿರಮಂ ಪೊಕ್ಕು ಚಕ್ರವಲ್ಲಭನಾಸ್ಥಾನಮಂಟಪದೊಳ್‌ ದೂರಾವನತಮಣಿಮಕುಟನಾಗಿ ಕಂಡು ವಸ್ತುವಾಹನಪುರಸ್ಸರಂ ಮ್ಲೇಚ್ಛರಾಜರಂ ಲಲಾಟಸ್ಪೃಷ್ಟಭೂತಳರಂ ಮಾಡಿ ಕಾಣಿಸಿ,

ಹರಿಕರಿಕನ್ಯಾರತ್ನಾ
ಭರಣಂಗಳ್‌ ದೇವಕುಲಧನಾದಿಗಳಿವು ದೇ।
ವರದೊಂದಾಜ್ಞೆಯನಾಂಪರ್‌
ಕಿರೀಟದಿಂದಿವರ್ಗಳಿನಿಬರುಂ ಭೂಪತಿಗಳ್‌॥ ೪೧

ವ॥ ಎಂದವರ ದೇಶನಾಮಕುಲಗೋತ್ರಂಗಳಂ ನೆಱೆಯೆ ತಿಳಿಯೆ ಬಿನ್ನಪಂಗೆಯ್ದು ಭೃತ್ಯಭಾವಮಂ ಪೂಣಿಸಿ ಸನ್ಮಾನದಾನಂಗಳೊಳ್‌ ಸಂತಸಂಬಡಿಸಿ ತಂತಮ್ಮ ನೆಲೆಗಳ್ಗೆ ಪೋಗಲ್ವೇೞ್ದು ಶುಭದಿನಮುಹೂರ್ತದೊಳ್‌ ಉತ್ತರಭರತವಿಜಯೋದ್ಯೋಗಮಂ ಭರತರಾಜನಱಿಪಲೆಂದು ವಿಜಯಭೇರಿಯಂ ಪೊಯಿಸಿದಾಗಳ್‌,

ದೆಸೆಗಳ ಸಂದಂ ಪಱಿದಾ
ಗಸದಿಂದಂ ಪತ್ತುವಿಡಿಸುವಂತೆವೊಲಿಳೆಯಂ।
ಮುಸಕದೊಳ್‌ ಪೊತ್ತು ನೆಗೆವವೊ
ಲೆಸೆದುದು ದಿಗ್ವಿಜಯಭೂರಿಭೇರೀನಿನದಂ॥ ೪೨

ವ॥ ಆವಿಜಯಪ್ರಯಾಣಭೇರೀನಿನಾದಮಂಭೋಭಾರಗಂಭೀರಾಂಭೋಧರಸ್ತನಿತಬಹಳಸ್ನಿಗ್ಧಂಗಳಪ್ಪ ಮದಸ್ತಂಬೇರಮಬೃಂಹಿತಂಗಳಿಂದಮುಸ

ಕೃದಾಸ್ಫಾಲಿತಾನೇಕದುಂದುಭಿಧ್ವನಿಮಧುರಗಂಭೀರಂಗಳಪ್ಪ ಹಯಹೇಷಿತಂಗಳಿಂದಮುದಗ್ರಕುಂಜರಕುಂಭಜರ್ಜರಣಜನಿತೋತ್ಕಂಠಕಂಠೀರವರವೋದ್ಭಟಭೈರವಂಗಳಪ್ಪ ಸುಭಟಪಟಕ್ಷೋಭಿತಂಗಳಿಂದಂ ಸಂದಣಿಸಿ ಘೂರ್ಣಮಾನಾರ್ಣವಘೋಷಮಂ ಗೆಲ್ದು ಹರ್ಷದಿಂ ಪೆರ್ಚುವಂತೆ ಪೆರ್ಚೆ,

ವೀರಶ್ರೀಸ್ನಾನಕುಂಭದ್ವಯಮೆನಿಪ ಕಟದ್ವಂದ್ವದಿಂ ದಾನಧಾರಾ
ಸಾರಂ ಕೈಗಣ್ಮೆ ಕಣ್ಗೊಪ್ಪುವ ಜಯಗಜಮಂ ಲೀಲೆಯಿಂದೇಱಿ ವಾದಿ ।
ತ್ರಾರಾವಂ ವಂದಿವೃಂದಧ್ವನಿ ಜಯಜಯಕೋಲಾಹಳಂ ಮಂಗಳಾಳಂ
ಕಾರಂ ಯಾತ್ರೋತ್ಸವಪ್ರಸ್ತುತಮೆನೆ ತಳರ್ದಂ ರಾಗದಿಂ ರಾಜರಾಜಂ ॥

ವ॥ ಅಂತು ತಳರ್ದು ರಾಜಮಂದಿರಮಂ ಪೊಱಮಡುವಾಗಳ್,

ಜಳಧಿದ್ವೀಪಾಂತರಾಳಂಗಳನಿರದೆ ಪುಗಿಂ ಪೋಗಿಮುಗ್ರಾರಿಗಳ್ ಮಾ
ಕೊಳಲಾಱಿರ್ ಚಕ್ರನಾಥಪ್ರಬಳಬಳಮನೆಂಬಂತೆವೊಲ್ ಸಾನುಕೂಲಾ ।
ನಿಳನಿಂದಂ ಕೇತುಹಸ್ತಾವಳಿ ಮಿಳಿರ್ವಿನೆಗಂ ಬಂದನುತ್ತುಂಗಭೂಭೃ
ತ್ಕುಳಸಂಕಾಶಂಗಳಾಕಾಶದ ನೆಲದೆಡೆಯುಂ ಪರ್ವೆ ಗಂಧದ್ವಿಪಂಗಳ್ ॥ ೪೪

ವ॥ ಅಂತು ಪೊಱಮಟ್ಟುತ್ತರಭರತದ ವಿಜಯಶ್ರೀವಿವಾಹಮಹೋತ್ಸವಪ್ರಾರಂಭದೊಳ್ ದಿಕ್ಪಾಲಕರ ಕೆದಱುವ ಪಿಷ್ಟಾತಕಚೂರ್ಣಮೆನಿಸುವ ರಜಃಪುಂಜಮುಮಂ ದಿಕ್ಕನ್ಯಕೆಯರ ಸೂಸುವ ಲಾಜಾಂಜಳಿನಿಚಯಮೆನಿಸುವ ಮದಕರಿಕರಶೀಕರನಿಕರಮುಮಂ ಅಂಬರದೊಳಮರವೃಂದಂಗಳ್ ಬಿತ್ತರಿಸುವ ಪತಾಕೆಗಳೆನಿಸುವ ಕರಿಕದಳಿಕೆಗಳುಮಂ ಮುಂದೆ ಮುಂದನಿಲದೇವನ ತಳಿವ ಕುಸುಮಪ್ರಸರಮೆನಿಸುವ ತುರಂಗಮುಖಫೇನಪಲ್ಲವಸ್ತಬಕಮುಮಂ ನೋಡುತ್ತುಂ ನಡೆಯೆ,

ಬಳವತ್ಪ್ರತ್ಯಂತಭೂಪಾಳಕನಿಕರಮಹಾವಾಹಿನೀವಾಹಿನೀಸಂ
ಕುಳಮತ್ಯುತ್ಸಾಹದಿಂದಂ ಪುಗೆ ಪುಗೆ ದೆಸೆಯಂ ಬಂದು ಚಕ್ರೇಶಭೂಭೃ ।
ತ್ಕುಳಚಕ್ರಾವಾರಪಾರಂ ಸುಭಟಜನಚಮತ್ಕಾರಿ ತೇಜೋಮಹೋರ್ವಾ
ನಳಮುಗ್ರಾರಾತಿವರ್ಗಪ್ರಳಯಕರಮದೊಂದೆಯ್ದೆ ತಾಳ್ದಿತ್ತು ಗುರ್ವಂ ॥

ವ॥ ಆಗಳ್ ಸೈನ್ಯಾಧಿನಾಥನಧಿನಾಥನ ಕೆಲದೊಳ್ ಪಕ್ಷಗಜಾಧಿರೂಢನಾಗಿ ದೇವ ನೋಡೀತೋರ್ಪುದು ದವದಹನಧೂಮಾಧಿಕಶ್ಯಾಮಳತೋತ್ತಾಳತಾ

ಳಕಾಯಮತಿವಿಚಿತ್ರತ್ರಪುಮಯಪತ್ರಖಚಿತೋಚ್ಚಂಡತಾಳಚಾಪದಂಡಮನೇಕವರ್ಣಾಕೀರ್ಣತ್ರಿಸರವೇಣಿಕಾಗಾಢಗ್ರಥಿತತ್ರಪುಷಕೋಶಗುಪ್ತಗುಲ್ಫಾಂತರಪ್ರಾಪ್ತಖಡ್ಗಧೇನುಕಮಾಂಧ್ರಧಾನುಷ್ಕಬಳಂ, ಮತ್ತಿತ್ತ ಕೋಮಳಶ್ಯಾಮಳಚ್ಛವಿಯಾನಿಕಾಯಮುಂ ಉಪನಿಟಿಲಘಟಿತಕುಟಿಲಜೂಟಬಂಧಮುಮಾಕೂರ್ಪರರಚಿತಕಾಳಾಯಸವಳಯಭಯಂಕರಕರದ್ವಯಮುಮಭಿನವಶುಂಭತ್ಕೌಸುಂಭವೇಣಿಕಾಬಂಧೋಲ್ಲಸನ್ಮಲ್ಲಿಕಾಮುಕುಳಾಕಾರವಿತಸ್ತಿಮಾತ್ರಾಸಿಧೇನುಕೋಶಮುಮನೇಕರುಚಿವಿಚಿತ್ರವೇತ್ರವಿಶಿಖಾತಿರುಚಿರಪ್ರಾಂತಕುಂತಮನುತ್ತರೀಯಕಂಟಕಮತಿಸುಭಟಮದೋತ್ಕಂಠಮಿದು ಕರ್ಣಾಟಬಲಂ, ಮತ್ತೀಭಾಗದೊಳ್ ಅಭಿನವಪ್ರಿಯಂಗುಶ್ಯಾಮಾಂಗಮರ್ಧಚಂದ್ರಬುದ್ಬುದವ್ಯಾಕೀರ್ಣತ್ರಿಶೂಲಕರಾಳವಿಶಾಲಮಿತ್ರಖೇಟಕಮುದ್ಘೃಷ್ಯರಶ್ಮಿಪಾಂಡುರಪಾಳಿತಕರವಾಳಡಾಡ್ಡಯುಧಮಿಕ್ಷುದಂಡಪ್ರಣೀತಕ್ರೀಡಾಮಖಂಡಿತೋಚ್ಚಂಡಶುಂಡಾಳಗಾತ್ರಪರಪತಿಬಾಳಕದಳಿಕಾಕಾಂಡಲೀಲಾಚ್ಛಿನ್ನಸಿಂಧುರಮಧ್ಯಹಸ್ತಮತ್ಯಂತಮೃದುಮೃಣಾಳದಂಡಹೇಳಾದಳಿತದಂತಿದಶನಮುಸಳಮುತ್ಕವಾಟಲಾಘವಲಂಘಿತಪರಪುರಪರಿಖಾವಳಯಮನೇಕಾಹವದೃಷ್ಟದೋಸ್ಸಾಹಸಮಿದು ಮರಾಟಸುಭಟಬಲಂ, ಮತ್ತಿತ್ತ ಸರ್ವಾಂಗೀಣಸಾಂದ್ರಹರಿದ್ರವಿಲೇಪನವಿಲಿಪ್ತಹರಿತಾಳಪಿಂಗಳವಿಲಂಘಿತಶಿಲಾಸ್ತಂಭವಿಭ್ರಮನಿತಂಬಶಿಖರಿತರಂಗಿತಚತುರಂಗುಳಾಗ್ರಪಲ್ಲವನಿವಸನಮತಿಮಸೃಣವರ್ಣವ್ಯತಿಕರೋದೀರ್ಣಶೋಭಾಪುಂಜರಂಜಾಪುರಪಟ್ಟಿಕಾನಂದಕನಕಪತ್ರಾಂಕಿತಯೋಗಖಡ್ಗಪುತ್ರಿಕೋದ್ಭಾಸಮಾನಸುವರ್ಣಕೋಶಮನತಿಜರಠಕರ್ಣಿಕಾಮುಕುಳಸ್ಥೂಳತ್ರಿಚತುರಸುವರ್ಣಕಂದೋದರಕಂಧರಮುತ್ಕಟಹಾಟಕಪದಕಮಣಿತ್ರಿಖಂಡಕರ್ಣಾಭರಣಮುದ್ಬದ್ಧಜೂಟಮತ್ಯಂತಶೌರ್ಯಸೌಂದರ್ಯಪ್ರಕಾಶನಪರಿತ್ಯಕ್ತತನುಚ್ಛದಮುತ್ತಪ್ತರಜತಾವದಾತಲೋಹಪುತ್ರಿಕಾನಂದಲಾಕ್ಷಾಹಿಂಗುಲಿಕಪಾಟಫಲಕಮರ್ಧಕರವಾಳಚಾಳನಪ್ರಕಟಿತಭಟಬಿಭೀಷಿಕಾಡಂಬರಮತಿಸ್ಫುಟವೀರಶೃಂಗಾರನಾಟಕಾಭಿನಯನಟವೃಂದಮಿದು ಮಹಾನಾಟಕಬಲಂ, ಮತ್ತಿತ್ತ ಕಾರ್ತಸ್ವರಸ್ತಂಭಸಂಚಾರಣಭಾಸ್ವರಮಾಸ್ಕಂದಪ್ರಲಂಬಸುಭಟಕರ್ಣಾಭರಣಕರ್ಣಪಾಶಮಾಬಳಶಾರ್ದೂಲಮುಖರೋಮಕರಾಳಸೃಕ್ವೋಪಾಂತಪ್ರರೂಢಶ್ಮಶ್ರುಜಾಳ

ನಾಹನವಮಹಾಹುಂಕಾರಕಾಳಕೂಟವಿಟಪಿಪ್ರರೋಹಶಂಕಾವಹನಾಭಿಕೂ
ಪಾವಲಂಬಿಕೂರ್ಚಕಳಾಪಂ ಲಲಾಟನಿಹಿತಕಾಂಸುಂಭಾಂಶುಕಪಟ್ಟಿಕಾ
ಪ್ರಾಂತನಿಬಿಡನಿಬದ್ಧಕೇಶಬಂಧವಾಜಕೂಳಸ್ವಸ್ತಿಕಬದ್ಧವಿಚಿತ್ರವಸ್ತ್ರದ್ವ
ಯೋದ್ದಾಮಧಾನುಷ್ಕಮುದ್ವೀಚಿಮರುಮರೀಚಿನಿಚಯಚಂಚಳೋದ್ದಾ
ಮಬಳಬಹಳನಿಕವಚಪ್ರಸಪಾಣಿವಾರಾಶ್ವಿಕಮುಗ್ರಪುಂಖಪ್ರೇಂಖೂ
ಳಾನೇಕನೇತ್ರಪಟ್ಟಿಕಾಸಟಾಳಸರಳಕುಂತಹಸ್ತಮಹಾಹಯಾರೋಹಣವ
ಸಿತಭುಜಗಶಿಶುತರಳತರವಾರಿಖಡ್ಗಖೇಟಕವ್ಯಗ್ರಕರದ್ವಯೋದ್ದಾಮಪದಾ
ತಿಬಹಳವಿದು ಲಾಟಬಲಂ, ಎಂದನೇಕದೇಶಾಧೀಶಬಲಂಗಳಂಬೇಱಬೇಱ
ತೋಱುತ್ತಂ ಬರ್ಪನ್ನೆಗಂ ಮುಂದೆ,

ಇಭಖಡ್ಗಿವ್ರಾತನಾನಾಹರಿಮಯಕಟಕಭ್ರಾಜಿತಂ ತುಂಗವಂಶ
ಪ್ರಭವಂ ಸಿಂಹಾಸನಶ್ರೀಸಮುಚಿತಮಮೃತಾಂಭೋಧಿಕಲ್ಲೋಲಮಾಳಾ।
ನಿಭಲೀಲಾಸಂಚಳಚ್ಚಾಮರರುಚಿರಮಿಳಾಚಕ್ರವಿಖ್ಯಾತಭೂಭೃ
ತ್ಪ್ರಭು ಚಕ್ರಾಧೀಶನೊಳ್ ಮಚ್ಚರಿಪವೊಲೆಸದಿರ್ದತ್ತು ರೌಪ್ಯಾಚಳೇಂದ್ರಂ

ವ॥ ಅಂತು ವಿಜಯಾರ್ಧಾಚಳಕಟಕಾಭಿಮುಖೀಕೃತನಿಜವಿಜಯಕಟ
ಕನಾಗಿ ಬಡಗಮೊಗದೆ ನಡೆದು ತನ್ಮಹೀಧರದ ಜಗತೀತಳಮಣಿಮಯ
ಸೋಪಾನಮನೇಱುವಲ್ಲಿ ಪಶ್ಚಿಮಾಭಿಮುಖನಾಗಿ ಪೋಗಿ ಪಂಚಷಡ್ಯೋಜ
ನಾಯಾಮದೊಳಂ ದ್ವಾದಶಯೋಜನವಿಸ್ತಾರಾಷ್ಟಯೋಜನೋತ್ಸೇಧವಜ್ರ
ಕವಾಟಪುಟಮುಂ ವಿಚಿತ್ರಮಣಿಮಯೂಖಚಿತ್ರಿತದ್ವಾರಬಂಧಬಂಧುರಮು
ಮಧಸ್ಸ್ಥಳಪ್ರಸರ್ಪತ್ಸಿಂಧುವಾಹಪ್ರವಾಹವಿರಾಜಿತಮುಂ ಪ್ರಸವಾಗಾರದಂ
ತೆ ನಿಷಿದ್ಧಾನ್ಯಪ್ರವೇಶಮುಂ ರಾಜಭವನದಂತೆ ಕೃತರಕ್ಷಾವಿಧಿಯುಂ ವಿವಾ
ಹಗೇಹದಂತೆ ಸಂಗತಮಂಗಳಪರಿಕರಮುಂ ಜೀವಿತಾಶಯದಂತೆ ಅತ್ಯಾ
ಯಾಮಮುಂ ಮುಕ್ತಜ್ವರದಂತೆ ನಿರ್ಮುಕ್ತೋಷ್ಮಮುಂ ಮೂರ್ಛಾಪ್ರಾ
ಪ್ತನಂತೆ ತಮೋಮಯಮುಮಪ್ಪ ತಮಿಸ್ರಗುಹೆಯನೆಯ್ದಿದಾಗಳ್,

ಅದಱೊಳಗೆ ಪುದಿದು ಮಂದೈ
ಸಿದ ಕತ್ತಲೆಗಗಿದು ಸುಗಿವ ಪೆರ್ಬಡೆಯುಂ ಕಂ।
ಡಿದು ನಡೆಯದೆ ಸೆಡೆದಿಂದಿ
ರ್ದುದೆಂದು ಬೆಸಸಿದೊಡೆ ಚಕ್ರಿ ಸೇನಾಪತಿಯುಂ॥ ೭೪

ಆತಂ ಪುರೋಹಿತಂ ಬೆರ
ಸಾತತತಿಮಿರಪ್ರಭೇದನೋಪಾಯಮಿದೆಂ ।
ದಾತಮುಮಂ ಕಿಡಿಸಲ್ ಸಂ
ಜಾತನಯಂ ಬಗೆದು ತದ್ಗುಹಾಭಿತ್ತಿಗಳೊಳ್ ॥ ೪೮

ಎರಡಱೊಳಂ ಚಂದ್ರಾದಿ
ತ್ಯರನಾಗಳ್ ಬರೆದು ಕಾಕಿಣೀರತ್ನದೊಳಂ ।
ಸ್ಫುರಿತಮಣಿರತ್ನದೊಳಮಂ
ತರಿಸುತ್ತುಂ ಯೋಜನಕ್ಕೆ ಬರೆದೊಂದೊಂದಂ ॥ ೪೯

ಬಿಸಲಂ ಬೆಳ್ದಿಂಗಳುಮಂ
ಪಸರಿಸೆ ಕತ್ತಲೆ ತೆರಳ್ದು ತೊಳ್ದೊಡೆ ರಾಗಂ ।
ಪಸರಿಸೆ ನಡೆದತ್ತು ಬಲಂ
ಪಸರಿಸಿ ನದ್ಯುಭಯತಟದೊಳೊಡನೊಡನಾಗಳ್ ॥ ೫೦

ವ॥ ಅಂತು ಕಾಕಿಣೀಮಣಿರತ್ನಂಗಳೊಳ್ ಬರೆದ ಚಂದ್ರಾದಿತ್ಯರ ಬೆಳಗುಗಳೊಳಂ ಮುಂದೆ ನಡೆವ ಚಕ್ರರತ್ನಪ್ರಭಾಚಕ್ರದೊಳಂ ಆಪಡೆ ಕಣ್ಡೆದಂತೆ ಸೋಪಾನಾಂತರದೊಳಟಿದೆರಬ್ಬಿಗೆಯಾಗಿ ಸಿಂಧುವಿನೆರಡುಂ ತಡಿಯೊಳಮೆರಡುಯೋಜನದಗಲದೊಳ್ ಸೇನಾನೀನಿಯಮದೊಳ್ ಪ್ರಭೂತಯವಸಮಾಗೆ ನಡೆದು ಕೆಲವು ಪಯಣಂಗಳಂ ಗುಹಾಭಿತ್ತಿಗಳೆರಡುಂ ದೆಸೆಯ ಕುಂಡಂಗಳೊಳ್ ಪುಟ್ಟಿ ಬಂದೆರಡುಂ ದೆಸೆಯೊಳಂ ಸಿಂಧುವಿನೊಳ್ ಕೂಡಿದ ಗುಹಾಮಧ್ಯದ ನಿಮ್ನಗಾತಟದೊಳ್ ಬೀಡಂ ಬಿಡಿಸಿ,

ಬಂದಱ ನೀರ್ಮಳಲೊಂದ
ಕೊರ್ಂದಿಸುತುಂ ಮೇಗೆ ಕೊಂಡು ನೆಗೆವುದಿದೇಂ ಮ ।
ತ್ತೊಂದಱ ನೀರಡಿಗದ್ದುವು
ದೆಂದತಿವಿಸ್ಮಯದಿ ನೋಡಿದಂ ಭರತೇಶಂ ॥ ೫೧

ವ॥ ಅಂತುಭಯನದಿಯ ವೈಷಮ್ಯಮುಮನಾಶ್ಚರ್ಯಂಬಟ್ಟು ನೋಡಿ ನದ್ಯುತ್ತರಣೋಪಾಯಮಾವುದೆಂದು ಬಗೆದು ಬೇಗಂ ಸ್ಥಪತಿರತ್ನಮಂ ಕರೆದು ತನ್ನಿಪತದುದಕೋಭಯಸರಿತ್ಸ್ವರೂಪಮಂ ತೋಱಿದೊಡೆ,

ಅಡಿಯಿಂ ಮೋಗಣ್ಗೆತ್ತುವ
ಕಡುಗಾಳಿಯ ಪೊಯ್ಲೊಳಿದಱ ನೀರೊಱೆದಪುದ।
ರ್ದಡಿಗೆ ಬರೆ ತೆಗೆವ ಗಾಳಿಯಿ
ನಡಿಗಿೞಿದಪುದಿದಱ ನೀರಿದೊಂದಚ್ಚರಿಯೋ॥ ೫೦

ವ॥ ಎಂದು ಬಿನ್ನಪಂ ಗೆಯ್ದು ದಿವ್ಯಶಕ್ತಿಪ್ರಭಾವದಿಂದಮಾನುಷಾರಣ್ಯಂಗಳ ಮಹಾದ್ರುಮಂಗಳಂ ತರಿಸಿ ನಡಿಸಿ ನಟ್ಟ ಕಂಭಂಗಳ ಮೇಗೆ ಸಾರದಾರಂಗಳನೆಡೆಗಿಱಿದಿರೆ ಪಾಸಿ ಪಸರಿಸಿ ಪಡೆಗೆ ನಡೆಯಲಪ್ಪಂತೆ ಮಾಡಿದಾಗಳ್,

ದಳ್ಳಿಸಿ ಕುಕಿಲುತ್ತಂಬುಧಿ
ಯುಳ್ಳಾಳ್ಗಳಂ ನೆಗಪೆ ಕವಿದು ನರ್ತಿಸಿ ನಡೆದ।
ತ್ತೆಳ್ಳಾಳ್ಗಡೆ ನೆಲಂ ಬಲಮದು
ಕೊಳ್ಳೆಂದು ಮಹಾರವಂ ಪೊದಪ್ಪೆಸೆವಿನೆಗಂ॥ ೫೨

ವ॥ ಅಂತು ಭರತೇಶ್ವರಚಕ್ರವರ್ತಿಯುಮನೇಕಮದಗಜಘಟಾಪರಿವೇಷ್ಟಿತನಾಗಿ ರಾಜಮಾರ್ಗದೊಳ್ ನಡೆವಂತದಱ ಮೇಲೆ ನಡೆದು ಕೆಲವು ಪಯಣಂಗಳಿಂದುತ್ತರಗುಹಾದ್ವಾರಮನನಾಯಾಸದೊಳ್ ತೆಱೆದು ಪೊಱಮಟ್ಟಾಗಳ್,

ಸೆಱೆವನೆಯಿಂದಂ ಭೋಂಕೆನೆ
ಪೊಱಮಟ್ಟವೊಲಂದು ಗರ್ಭಗೃಹದಿಂದಂ ಮೋ।
ಕ್ಷೊಪ್ಪಱಮಟ್ಟವೊಲಾಗುಹೆಯಿಂ
ಪೊಱಮಟ್ಟುದು ಸೈನ್ಯಮಂಬುಧಿಧ್ವನಿಯಿಂದಂ॥ ೫೪

ವ॥ ಅಂತು ತಮಿಸ್ರಗುಹಾದ್ವಾರದಿಂ ಪೊಱಮಟ್ಟಾಗಳ್,

ಸಕಟೋದ್ಘೃಷ್ಟವನೇಭತುಂಗಜಠರಸ್ಥೂಳಾರ್ಗಳಾಕಾರಮಾ
ರ್ಗಕುಜಂ ವಾಜಿಖುರಾಹತಿಸ್ಥಪುಟಿತಗ್ರಾವಸ್ಥಳಂ ಸೈನ್ಯದಂ।
ತಿಕರೋಚ್ಚಾಟಿತಸಲ್ಲಕೀಕಿಸಲಯಂ ಚಕ್ರೇಶ್ವರಂ ಪೆರ್ಚಿದು
ತ್ಸುಕದಿಂ ದಾಂಟಲಳುಂಬಮಪ್ಪ ವಿಜಯಾರ್ಧಾದ್ರೀಂದ್ರಮಂ ದಾಂಟಿದಂ॥

ವ॥ ಅಂತು ವಿಜಯಾರ್ಧಮಹೀಧರೋಪಕಂಠವನನಿಕಟದೊಳ್ ಬೀಡಂ ಬಿಟ್ಟಾಗಳ್,

ಆಗುಹೆಯೊಳಗಣ ಶರದದೊ
ೞಾಗಳೆ ಬಸವಳಿದ ಬಲಮನಾಱಿಸುವನ್ತೊಲಾ ।
ಯ್ತಾಗಿರಿಯ ಕೊಳದ ಮರಗಳ
ಪೂಗಳ ಕಂಪನೆ ತೆರಳ್ಚಿ ಬೀಸುವ ಪವನಂ ॥ ೫೬

ವ॥ ಅಂತಲ್ಲಿ ಬೀಡಂ ಬಿಟ್ಟು ಮುನ್ನಿನಂತೆ ಪಶ್ಚಿಮಖಂಡಮುಮಂ ಅಖಂಡಪ್ರತಾಪಧ್ವಜನೆಂದು ತನ್ನ ಧ್ವಜಿನೀಪತಿಯನಟ್ಟಿ ಬಾಯ್ಕೇಳಿಸಿ ಚಕ್ರರತ್ನಮಂ ಮುಂದಿಟ್ಟು ಮಧ್ಯಮಖಂಡಮುಮಂ ಪೊಂಕಿ ಪೂಪೆ ಪೊಕ್ಕವಷ್ಟಂಭಿಸಿ ನಿಂದಾಗಳ್, ಬಳಾಕಾವರ್ತರೆಂಬಿರ್ವರುಂ ಮ್ಲೇಚ್ಛರಾಜರ್ ಧನುರ್ಧರಪ್ರಾಯಮುಮಂ ಅಶ್ವೀಯಬಹಳಮುಮಂ ಹಾಸ್ತಿಕಸಾಧನಮುಮಪ್ಪ ತಮ್ಮ ಬಲಮನೊಂದುಮಾಡಿ ಕೂಡಿಕೊಂಡು ಚಕ್ರವರ್ತಿಯೊಳುಚ್ಚವಿಗ್ರಹಂಗೆಯ್ಯಲೆತ್ತಿಕೊಂಡುದಂ ಕಂಡು ಮಂತ್ರಿಗಳ್ ಮಾರ್ಕೊಂಡು,

ವಿಜಯಾರ್ಧಾದ್ರಿಯನುರ್ಚಿ ಬರ್ಪಳವಿದೇಂ ಸಾಮಾನ್ಯಮೇ ದೇಶಮಂ
ಭುಜವಿಕ್ರಾಂತದಿನೊತ್ತಿ ಪೊಕ್ಕಧಟದೇನಾಶ್ಚರ್ಯಮಲ್ತೇ ಮೃಗ ।
ವ್ರಜದೊಡ್ಡೇಂ ಮೃಗರಾಜನಂ ನೆಱೆವುದೇ ತಾಂಗಳ್ಕೆ ನಮ್ಮಿಮ್ಮೀಬೃಹ
ದ್ಧ್ವಜಿನೀಸಂಕುಳಮೀಜಿಗೀಷುವನಿದೇಂ ಸಂಗ್ರಾಮದೊಳ್ ಗೆಲ್ಗುಮೇ ॥ ೫೭

ವ॥ ಅದಲ್ಲದೆಯುಂ ಈಗಿರಿದುರ್ಗಮಂ ದಾಂಟಿ ಬಂದ ಬಲ್ಲಾಳ್ ದಿವ್ಯಪ್ರಭಾವನಕ್ಕುಮಮೋಘನಕ್ಕುಂ ; ಅದಱಿಂ ಈತನೊಳ್ ಇದಿರ್ಚಿ ಕಾದುವಮರುಳ್ತನಂ ಬೇಡ ; ಹಿಮವದ್ವಿಜಯಾರ್ಧಗಂಗಾಸಿಂಧುತಟಾವಧಿಯಪ್ಪೀ ನಮ್ಮ ಮಧ್ಯಮಖಂಡದೊಳಂ ಅಗಾಧನದೀನದದುಸ್ತರಮಪ್ಪ ಜಲದುರ್ಗದ ಮಹಿಮೆಯುಮಂ ಅಭ್ರಂಕಷಶಿಖರಿಶಿಖರದುರ್ಲಂಘ್ಯಮಪ್ಪ ಗಿರಿದುರ್ಗದಪೆಂಪುಮಂ ಉದಗ್ರತರುಗಹನದುಷ್ಪ್ರವೇಶಮಪ್ಪ ವನದುರ್ಗದುನ್ನತಿಯುಮಂ ಬಳಕೊಂಡು, ನಿರಂತರಾಟ್ಟಾಳಕಪ್ರತೋಳೀಂದ್ರಕೌಶಳದೇವಪಥಸನಾಥಂಗಳುಂ ಗಂಡಶೈಳಾಭೀಳಶಿಳಾಯಂತ್ರಭಯಂಕರಂಗಳುಂ ಪ್ರಳಯಕಾಳಾನಳವರ್ಷಶಂಕಾಕಾರಿಹುತವಹವರ್ಷಾಗ್ನಿಯಂತ್ರಭಯಾನಕಂಗಳುಂ ಕಂಟಕಗುಲ್ಮವಿಷವಲ್ಲೀಸಂಘಾತಭೀಷಣಂಗಳುಂ ಜಾನುಭಂಜನಿಶೂಲಪ್ರಕರಪರಿವೃತಂಗಳುಂ ಕೂಪಕೂಟಾವಪಾಯಲೋಹಕಂಟಕಸಂಕಟಂಗ

ಳುಂ ತಾಳಪತ್ರಶೃಂಗಾಟಕನಿಚಿತಂಗಳುಂ ಸ್ಪಂದದಂಷ್ಟ್ರಾರ್ಗಳೋಪರಿವ
ಸಂಛನ್ನಂಗಳುಂ ಯಂತ್ರಾಯುಧಾವರಣೋಪಕರಣಪರಿಣತಂಗಳಾಗಿರ್ದ
ದುರ್ಗಂಗಳೊಳ್,

ಘನದೋರ್ದಂಡಪ್ರಭಾವಾರ್ಜಿತಧರಣಿಗುಹಾಸಿಂಹರಿರ್ ನೀಮುವಿಾಗಳ್
ವನಸಿಂಹನ್ಯಾಯದಿಂ ದುರ್ಗದೊಳ್ ಬಲಿದು ನಿಂದಲ್ಲಿ ಬಂದೊತ್ತಿ ಚಕ್ರೀ ।
ಶನ ತಂತ್ರಂ ನಿಲ್ಕುವಾರ್ತಲ್ಲಿಗೆ ನೆಱೆದು ಭರಂಗೆಯ್ದುದುರ್ಕುಳ್ಳ ಸಾಮಂ
ತನಿಕಾಯಂ ಯಂತ್ರಮುಕ್ತಾನಳಶರದೃಷದಾಸಾರವಿಧ್ವಂಸವುಕ್ಕುಂ ॥ ೫೮

ವ॥ ಅಂತೀತನ ಕಟಕಕ್ಕೆ ನಿತ್ಯಕ್ಷಯವ್ಯಯಪ್ರತ್ಯವಾಯಂಗಳಂ ಮಾಡಿ
ಬೇಸಱಿಸಿ ನೆಲದಿಂ ತೆರಳ್ಚುವಮಲ್ಲದೊಡಂ ನಮ್ಮ ಕುಲದೇವತೆಗಳಪ್ಪ
ಮೇಘಮುಖರೆಂಬ ನಾಗರಾಜರೆಂಬ ನಾಗರಾಜರಿಂದಮೀತನಳುರ್ಕೆಯುಮ
ನುರ್ಕುಮಂ ಕಿಡಿಸಿ ಗೆಲ್ವಮೆಂದು ನುಡಿದ ಮಂತ್ರಿಗಳಮಾತಂ ಮನದೆಗೊಂ
ಡು ಬಳಾಕಾವರ್ತರ್ ಪೂಜಾಪುರಸ್ಸರಂ ದರ್ಭಶಯನತಳಗತರ್ ತದುದ್ಯೋ
ಗಪರರಾದಾಗಳಾನಾಗರಾಜರ್ ಬಂದು ನಿಮಗಾಮುಳ್ಳಂತೆ ದಂದುಗಮೆಂದು
ಮೇಕಪ್ಪುದೆಂದು,

ಜಳದಾಕಾರದೊಳೆಯ್ದೆ ಪರ್ಬಿ ಸಕಳಾಶಾಚಕ್ರಮಂ ವ್ಯೋಮಮಂ
ಡಳಮಂ ಕರ್ಗಿ ಕಱಂಗಿ ತೋಱಿ ಸಿಡಿಲಿಂ ಮಿಂಚಿಂ ಘನಧ್ವಾನದಿಂ ।
ದಿಳಿ ಕಂಪಂಗೊಳೆ ಸೋನೆಯಿಂ ಸರಿಗಳಂ ತಂದಲ್ಗಳಿಂದಂದು ಭೂ
ತಳಮೇಕಾರ್ಣವಮಾಗೆ ಚಕ್ರಿಯ ಬಲಕ್ಕಾತಂಕಮಂ ಮಾಡಿದರ್ ॥ ೫೯

ವ॥ ಅಂತು ಪ್ರಳಯಕಾಳಜಳದೋದೀರ್ಣಜಳಮುಮನಿಱಿಸಿ ಜಳಧರ
ಜಳಧಿಯ ನಡುವೆ,

ಅಡಿಯೊಳ್ ಪಾಸಿದ ಚರ್ಮರತ್ನಪಟಮಂ ತಚ್ಛತ್ರರತ್ನಂ ಬೆಡಂ
ಗಿಡಿದೋರಂತಿರೆ ಮುಟ್ಟೆ ಪೊಲ್ದ ತೆಱದಿಂದಿಂಬಾಗೆ ತನ್ಮಧ್ಯದೊಳ್ ।
ಸೊಡರಿರ್ಪಂತಿರೆ ಚಕ್ರರತ್ನಮದಱೊಳ್ ನಿರ್ಬಾಧಮಿರ್ದತ್ತು ಪೆ
ರ್ಪಡೆ ವಾರಾಶಿಯೊಳಿರ್ದ ಬೈತ್ರದೊಳಗಂದಿತ್ತಂ ತೆರಳ್ದಿರ್ದವೊಲ್ ॥ ೬೦

ವ॥ ಅಂತು ಕೃತಕಚತುರ್ದ್ವಾರದಂತರ್ಭಾಗದೊಳ್ ಸೇನಾಧಿನಾಥ
ರಕ್ಷಿತಮಪ್ಪ ಕಟಕಕ್ಕೆ ವಜ್ರಪ್ರಾಕಾರರೂಪನಾಗಿ ಕುರುಕುಲಾಗ್ರಗಣ್ಯ

ನಪ್ಪ ಸೋಮಪ್ರಭನ ಮಗಂ ಜಯಕುಮಾರಂ ಸ್ಥಪತಿರತ್ನವಿರಚಿತಾಂಬರಗೋಚರರಥನಿಕರಂಗಳುಂ ವಜ್ರಗಿರಿಗಳುಂ ಬೆರಸು ಮೇಘಮುಖಾಮರರೊಳ್ ಕಾದುವಾಗಳ್,

ತಮದೊಡ್ಡಿರ್ಪವೊಲಿರ್ಪ ಕಾಮುರ್ಗಿಲ ತಳ್ತೊಡ್ಡೆಲ್ಲಮಂ ಮುನ್ನಮ
ಗ್ನಿಮುಖಾಸ್ತ್ರಂಗಳನೆಚ್ಚು ತೂಳ್ದು ಬೞಿಯಂ ಮೆಯ್ಗಂಡು ಪುಂಖಾನು
ಪುಂ।
ಖಮಿಸುತ್ತಿರ್ಪೆಡೆಯೊಳ್ ತೆರಳ್ಚುದುವಗುರ್ವಿಂ ಪರ್ಬಿ ಬಂದಿರ್ದ ಮೇ
ಘಮುಖಾಹೀಂದ್ರರ ಪೊಂಕಮಂ ಜಯಕುಮಾರೋನ್ಮುಕ್ತಬಾಣಾಳಿಗಳ್॥

ಸಿಡಿಲಿಂ ಮಿಂಚಿಂ ಮೊಳಗಿಂ
ಪಡೆಗುಳ್ಕಂ ಪಡೆವಹೀಂದ್ರರೆರ್ದೆಗಿಡುವಿನೆಗಂ।
ಸಿಡಿಲಂ ಮಿಂಚಂ ಮೊಳಗುಮ
ನೊಡನೆ ತೆರಳ್ಚುದುವು ಜಯನ ಶರನಿಕರಂಗಳ್॥ ೬೨

ಸಿಡಿಲಂ ಸಿಡಿಲಟ್ಟುವುದೆನೆ
ಕುಡುಮಿಂಚಂ ಮಿಂಚು ತಳ್ತುದೆನೆ ಗಗನಮನೇ।
ನೆಡದುರ್ವೊ ಜಯನ ಶರಂಗಳ್
ಸಿಡಿಲುಂ ಮಿಂಚುಂ ಪಳಂಚಿ ಸಂಚಳಿಸುವಿನಂ॥ ೬೩

ಅಂಬರದಿಂ ಸೂಸುವ ಧಾ
ರಾಂಬುಗಳುಮನೊಡನೆ ಸುರಿವ ಪಲವಂದದ ಕೂ।
ರಂಬುಗಳುಮನೊಡನಳುರ್ದುವ
ದೇಂ ಬಿಗಿಯುವೊ ಜಯಕುಮಾರನನಲಶರಂಗಳ್॥ ೬೪

ತಳದಳಿಪ ಮುಗಿಲ್ಗಳ್ಕಳ
ಕುಳಮಪ್ಪಿನಮಳುರ್ದು ಜಯನ ಶರತತಿ ಕೊಳೆ ಬ।
ಳ್ವಳಿಯ ಮಱೆವೊಕ್ಕವೊಲ್ ಕಳ
ಕುಳಮಾದರ್ ನಾಗರಾಜರಪಗತತೇಜರ್॥ ೬೫

ಕಡುಕೆಯ್ದಾಸಿರೆ ಚಕ್ರವರ್ತಿವರೆಗಂ ಮೇಘಾಮರರ್ ಬರ್ಪರೆಂ
ದೊಡಿದರ್ಕಂ ಮಿಗಿಲುಂಟೆ ಬನ್ನಮೆನಸುತುಂ ಮೇಘೋತ್ಕರಧ್ವಾನದಿಂ।

ಕಡುಕೆಯ್ದಾದುರ್ದ್ದ ಜಯಮಂ ಭುಜಾರ್ಜಿತಜಯಮುಂ ಪೊಕ್ಕೆಚ್ಚನಸ್ತ್ರಾನಳಂ
ಕಿಡಿಯಿಂ ಕೆಂಡದಿನೇಂ ಪೊರಳ್ಚಿದುವೊ ತನ್ಮ್ಲೇಚ್ಛಾಮರಾನೀಕಮಂ ॥ ೬೭

ವ॥ ಆಗಳಾನೆಗೆಬ್ಬಿ ಸಮರಕಳಕಳಮುಂ ಕೇಳ್ದದೇನೆಂದು ಭರತೇಶ್ವರ
ಚಕ್ರವರ್ತಿ ಖಡ್ಗರತ್ನಕ್ಕೆ ಕೈಯುಂ ನೀಡಿದಾಗಳ್,

ಗಣಬದ್ಧಾಮರಹೂಂಕೃತಂ ಜಯಕುಮಾರೋನ್ಮುಚ್ಯಮಾನೋಗ್ರಮಾ
ರ್ಗಣಮಾವೀರನಿನಾದಸಿಂಹನಿನದಂ ತನ್ಮುಂ ಪಳಂಚಲ್ಕೆ ತ ।
ತ್ಫಣಿವೃಂದಂ ಮಣಿದೋಡೆ ಮಾಣದೆ ಬಳಾಕಾವರ್ತರಳ್ಕತ್ತೆ ಕೀ
ಲ್ಮಿದಿನ್ನೆಂದುದನೆಂಬೆವೆಂದೆಱಗಿದರ್ ಚಕ್ರೇಶಪಾದಾಬ್ಜದೊಳ್ ॥ ೬೭

ವ॥ ಆಗಳ್ ಜಯನ ಭುಜವಿಜಯಸೂಚಕಮಾಗಿ ಮೇಘನಾದಸಮಾನ
ಮಾದ ಸಿಂಹನಾದಕ್ಕೆ ಚಕ್ರವರ್ತಿ ಮೆಚ್ಚಿ ಮೇಘೇಶ್ವರನಾಮಮುಂ ವೀರಾ
ಗ್ರಗಣ್ಯಪದವಿಯುಂ ದಯೆಗೆಯ್ದು ಬಳಾಕಾವರ್ತರ ಕುಲಧನಮುಮಂ
ಯಶೋಧನಮುಮಂ ಕೈಕೊಂಡು ಅವರಂ ವಶವಿಧೇಯರ್ಮಾಡಿ ಸಿಂಧು
ನದೀತೀರಂಬಿಡಿದು ಪೋಗಿ ಹಿಮವತ್ಪರ್ವತದ ಸಿಂಧುಪ್ರಪಾತಮನೆಯ್ದಿ
ತನ್ನ ಬರವನಱಿದಿದಿರ್ವಂದ ಸಿಂಧುದೇವಿಯಿಂದಂ ಸಿಂಧುಜಳಂಗಳೊಳಭಿಷಿ
ಕ್ತನಾಗಿ ಭದ್ರಾಸನಮುಂ ಪಡೆದು ಸಿಂಧುದೇವಿಯನಿರಿಸಿ ಕತಿಪಯಪ್ರಯಾ
ಣಂಗಳಿಂ ಹಿಮವನ್ಮಧ್ಯಕೂಟಾಭಿಮುಖಪ್ರದೇಶದೊಳ್ ಬೀಡಂ ಬಿಟ್ಟು
ನಿಯಮಸ್ಥನಾಗಿ ಹಿಮವತ್ಕುಮಾರನುಮಂ ವಿಜಯಾರ್ಧಕುಮಾರನಂದ
ದೊಳ್ ಸಾಧಿಸುವುದುಮಾತನಂದೋಲಗಿಸಿದ ಗೋಶೀರ್ಷಚಂದನದಿವ್ಯೌಷ
ಧಮಾಳಾದಿತದ್ಗಿರಿಸಮುದ್ಭೂತಸಾರವಸ್ತುಗಳಂ ಕೈಕೊಂಡು ಆಜ್ಞಾವಿಧೇ
ಯರ್ಮಾಡಿ ಸಿಂಧುನದೀತೀರಂಬಿಡಿದು ಪೋಗಿ ಹಿಮವತ್ಪರ್ವತಮಂ ನೋಡಿ,

ಇದು ಹೈಮಾದ್ರೀಂದ್ರಮಾಱುಂ ಕುಲಗಿರಿಗೆ ಮೊದಲ್ ಮೇರುಶೈಲೇಂದ್ರ
ಮಂ ಮೆ
ಚ್ಚದಿದಾಕಾಶಂಬರಂ ಪರ್ಬಿದ ಮಣಿಮಯಕೂಟಂಗಳಿಂದಿಲ್ಲಿ ಮಾದ್ಯ ।
ದ್ರದಿನೀಂದ್ರಸ್ಥೂಳದಂತಾಹತಿವಿದಳಿತಗೋಶೀರ್ಷಸಾರದ್ರವಾಮೋ
ದದಿನೆತ್ತಂಗಂಧವಾಹಂ ಮಗಮಗಿಸೆ ಬೆಡಂಗೀನಗೇಂದ್ರೋಪಕಂಠಂ ॥ ೬೮

ಇದಱಿಂ ಮಧ್ಯದ ಪದ್ಮೆಯೆಂಬ ಕೊಳದಿಂದಂ ಗಂಗೆಯುಂ ಸಿಂಧುವುಂ
ಮೊದಲೊಳ್ ಪುಟ್ಟಿ ನೆಗಪ್ತೆವೆತ್ತುವು ನೆಲಕ್ಕೆನ್ಮಾಳ್ವ ಷಟ್ಖಂಡಕಿಂ ।
ತಿದಱಿಂದಿತ್ತೆಯೆ ಮೇರೆ ನೋಡಿಮೆಮಗೀಶೈಳೇಂದ್ರಮೆಂದಂದು ತೋ
ಱಿದನಾತನ್ನೊಡವರ್ಷ ಭೂಪನಿಕರಕ್ಕುತ್ತುಂಗಹೈಮಾದ್ರಿಯಂ ॥ ೬೯

ವ॥ ಅಂತು ತದ್ಗಿರೀಂದ್ರಮಧ್ಯಮಕೂಟದಿಂದಂ ಸಯ್ತು ತೆಂಕಮೊಗದೆ ಬಂದು ವೃಷಭಾಚಳಮಂ ಕಂಡಂ. ಅದು ಯೋಜನಶತಮೂಲವಿಸ್ತೃತಮುಂ ತಾವತ್ಪ್ರಮಾಣೋತ್ಸೇಧಮುಂ ತದರ್ಧಪ್ರಮಿತೋಪರಿಮತಳವಿಸ್ತಾರಮುಂ ಪಂಚವಿಂಶತಿಶತಯೋಜನಾವಗಾಹಮುಮಾಗಿ ಸಂದುತ್ತರಭರತಮಧ್ಯಮಖಂಡದ ನಟ್ಟನಡುವಣೆಡೆಯೊಳ್ ಅತಿಕ್ರಾಂತಾನೇಕಚಕ್ರವರ್ತಿಗಳ ವಿಶದಯಶಃಪುಂಜಮುಮಂ ವಿಜಯಲಕ್ಷ್ಮೀಮುಖವಿಳೋಕನಮಂಗಳಮಣಿದರ್ಪಣಶ್ರೀಯುಮಂ ತನ್ನೊಳಳವಡಿಸಿ,

ಕುವಲಯಪಾಂಡುರಂ ಕನಕಪಂಕಜಷಂಡವಿರಾಜಿ ಕೇಕಿತಾಂ
ಡವರಮಣೀಯಕಲ್ಪಲತಿಕಾವನಮುನ್ಮದಭೃಂಗಮಾಳಿಕಾ ।
ರವಮುಖರೀಕೃತಾಮ್ರವನಶೋಭಿತಮಾಶ್ರಿತದಿವ್ಯಸುಂದರೀ
ನಿವಹನಿಕೀರ್ಣಚಂಪಕವನಂ ಕರಮೊಪ್ಪುಗುಮಾಮಹೀಧರಂ ॥ ೭೦

ವ॥ ಆವೃಷಭಾದ್ರಿಯ ಮೇಖಳಾಭಿತ್ತಿಯೊಳ್ ಆತ್ಮೀಯವಿಶ್ವವಿಶ್ವಂಭರಾವಿಜಯಪ್ರಶಸ್ತಿಯನತ್ತಿಯೊಳ್ ಬರೆಯಿಸುವೆನೆಂದು ಪೋಗಿ ನೋಡುವನ್ನೆಗಂ,

ಅದಱೊಳನೇಕಕಲ್ಪಶತಕೋಟಿಗಳೊಳ್ ಸಲೆ ಸಂದ ಚಕ್ರಿವೃಂ
ದದ ಚಲದಾಯದಾಯತಿಯ ಬೀರದ ಚಾಗದ ಮಾತುಗಳ್ ಪೊದ ।
ಪ್ದೊದವಿರೆ ತತ್ಪ್ರಶಸ್ತಿಗಳೊಳಂತವನೊಯ್ಯನೆ ನೋಡಿ ನೋಡಿ ಸೋ
ರ್ದುದು ಕೊಳಗೊಂಡ ಗರ್ವರಸಮಾಭರತೇಶ್ವರಚಕ್ರವರ್ತಿಯಾ ॥ ೭೧

ವ॥ ಅಂತು ಗಳಿತಗರ್ವನಾಗಿ ಸಿಗ್ಗಾಗಿ ಪೂರ್ವಾವನಿಪಾಳಪ್ರಶಸ್ತಿಯೊಳೊಂದೊಂದಂ ದಂಡರತ್ನದಿಂ ಸೀಂಟಿ ಕಳೆದು ನಿಜಪ್ರಶಸ್ತಿಗೆಡೆಮಾಡಿ,

ಸ್ವಸ್ತಿ ಸಮಸ್ತನರೇಶ್ವರ
ಮಸ್ತಕವಿನ್ಯಸ್ತಶಾಸನಂ ಸಕಲಜಗ ।

ದ್ವಿಸ್ತಾರಿತಯಶನನ್ವಯ
ವಿಸ್ತಾರಕನಾದಿದೇವನಗ್ರತನೂಜಂ ‖ ೭೨

ಭುವನವಿಶೇಷಕನಿಕ್ಷ್ವಾ
ಕುವಂಶಗಗನೇಂದು ಚಕ್ರರತ್ನಾಧೀಶಂ ।
ನವನಿಧಿವಲ್ಲಭನಾನತ
ದಿವಿಜಗಣಂ ನೆಗೞ್ದ ನಾಭಿರಾಜನ ಪೊಮ್ಮಂ ‖ ೭೩

ಆವನ ದಿಗ್ವಿಜಯದೊಳೈ
ರಾವತಗಜನಿಭಗಜಂಗಳಿಂ ಭುವನತಳಂ ।
ತೀವಿದುದಾವನ ಸೈನ್ಯದೊ
ಳಾವರಿಸಿದ ಧೂಳಿ ಪೂೞ್ದುದಂಭೋನಿಧಿಯಂ ‖ ೭೪

ವೇಳಾವನಂಗಳುಂ ಕು
ತ್ಕೀಳಂಗಳುಮಾವ ನೃಪನ ಪಡೆ ನಡೆವೆಡೆ ನಿ ।
ರ್ಮೂಳಂಗಳಾದುವಾವನ
ತೋಳಿಂ ನಿಮಿರ್ದತ್ತು ಜಳಧಿವರಮವನಿತಳಂ ‖ ೭೫

ದೇವಾಂಗನೆಯರ್ ಪಾಡುವ
ರಾವನ ಜಸಮಂ ಕುಳಾಚಳಾವಳಿಯೊಳ್ ಶೌ ।
ರ್ಯಾವಷ್ಟಂಭದಿನಾಳ್ದವ
ನಾವಂ ಷಟ್ಖಂಡಮಂಡಿತಕ್ಷಿತಿತಳಮಂ ‖ ೭೬

ಆತಂ ಭರತೇಶ್ವರನಿಂ
ತೀತೆಱದಿಂ ನೆಗೞ್ದ ತನ್ನ ಕೀರ್ತಿಯನೀವಿ ।
ಖ್ಯಾತವೃಷಭಾದ್ರಿಯೊಳ್ ಸುರ
ಗೀತಯಶಂ ನಿಱಿಸಿದಂ ನೆಲಂ ನಿಲ್ವಿನೆಗಂ ‖ ೭೭

ವ॥ ಅಂತಾತ್ಮೀಯವಿಜಯಪ್ರಶಸ್ತಿಯನಾವೃಷಭಗಿರಿಯೊಳಾವೃಷಭೇಶ್ವರನಂದನಂ ಕಾಕಿಣೀರತ್ನದಿಂ ಬರೆಯಿಸಿ ಬೞಿಕ್ಕದರ್ಕೀಶಾನದೊಳಿರ್ದ ಗಂಗಾಕೂಟಕ್ಕಭಿಮುಖನಾಗಿ ತತ್ಸಮೀಪದೊಳ್ ಆತ್ಮೀಯಮಂಗಳಜಳಂಗಳಿಂದ

ಭಿಷೇಕಂಗೆಯ್ದು ಅನೇಕಾಶೀರ್ವಾದಪುರಸ್ಸರಂ ಸಿಂಹಾಸನಮಂ ಕೊಟ್ಟು ಗಂಗಾದೇವಿಯುಮಂ ವಿಸರ್ಜಿಸಿ ಗಂಗಾತಟಂಬಿಡಿದು, ಚತುರಂಗಚಮೂಚಕ್ರಪಾಂಸುಪಟಲದಿಂದಂ ದಿಙ್ಮುಖಂಗಳುಂ ವಿರೋಧಿನರಪಾಳಪ್ರಿಯಸಖೀಮುಖಂಗಳುಂ ವಿಚ್ಛಾಯಂಗಳಾಗೆಯುಂ, ಮಹಾವಾಹಿನೀವಾರಣೇಂದ್ರಘಟಾನ್ಯೋನ್ಯಸಂಘಟ್ಟಘಂಟಾಟಂಕಾರಾಸ್ಫಾಳನದಿಂದಂ ಉದಗ್ರಗಿರಿಗುಹಾಂತರಂಗಳುಂ ಉದಗ್ರವಿಕ್ರಮಾರಾತಿಕರ್ಣಾಂತರಂಗಳುಂ ವಿಶೀರ್ಣಂಗಳಾಗೆಯುಂ, ಅಪರಿಮಿತಸ್ತಂಬೇರಮಾನೀಕಶೀಕರನೀಹಾರವರ್ಷದಿಂದಂ ಉಷ್ಣಾಂಶುಪ್ರತಾಪಮುಂ ಊರ್ಜಿತಾರಾತಿರಾಜಪ್ರತಾಪಮುಂ ಅವಿಧೃತೋದ್ರೇಕಮಾಗೆಯುಂ, ಸಂಚಾರಿತಮೇಚಕಾಚಳಚಕ್ರವಾಳರುಚಿಹರಿಕರಟಿಘಟಪ್ರಪಂಚರಾಗಕೇತನಚಂಚಳಾಂಚಳನಿಚಯದಿಂದಂ ಅಂಭೋದಿಪಥಮುಂ ಅತಿಚಕಿತವಿದ್ವಿಷ್ಟದೃಷ್ಟಿಪಥಮುಂ ನಿರವಕಾಶಮಾಗೆಯುಂ, ಉದ್ವೃತ್ತಮತ್ತವಾರಣೇಂದ್ರವಿಷಾಣಕುಲಿಶದಂಡಹತಿಯಿಂ ವನದುರ್ಗಭಂಗಮುಂ ವಿಪಕ್ಷಪಾರ್ಥಿವಮನೋರಥಭಂಗಮುಂ ಸಿದ್ಧಮಾಗೆಯುಂ, ದಕ್ಷಿಣಾಭಿಮುಖನಾಗಿ ನಿತ್ಯಪ್ರಯಾಣಂಗಳಿಂ ಬಂದು,

ಇಭಕುಂಭೋದ್ಭೂತಮುಕ್ತಾಫಲನಿಕರಮುಮಾನಂದದಿಂ ತಂದು ಕಂಡಿ
ರ್ದಭಯಾರ್ಥಿವ್ಯಾಧರಾಜಪ್ರತತಿಗಭಯಮಂ ಕೊಟ್ಟು ಕಲ್ಪಾಂತಕಾಲ ।
ಕ್ಷುಭಿತಾಂಭೋರಾಶಿಶಂಕಾವಹಬಳನಿಕರಂ ರಾಜತಾದ್ರೀಂದ್ರಶೋಭಾ
ವಿಭವಕ್ಕಳ್ಕಿರ್ದು ತತ್ಪರ್ವತನಿಕಟವನೋಪಾಂತದೊಳ್ ಬೀಡುವಿಟ್ಟಂ ॥

ವ॥ ಅಂತು ವಿಜಯಾರ್ಧಾಚಳಕಾಂಡಕಪ್ರಪಾತಗುಹಾಸಮೀಪದೊಳ್ ಬೀಡಂ ಬಿಟ್ಟು ಮುನ್ನಿನ ಮಾಳ್ಕೆಯೊಳ್ ವರೂಥಿನೀಪತಿಯಂ ಬೆಸಸಿದೊಡೆ ಆತನಾಗುಹಾದ್ವಾರಮಂ ಪೂರ್ವೋಕ್ತಕ್ರಮದೊಳ್ ತೆಱೆದದಱ ಬೆಂಕೆಯಾಱುವನ್ನೆಗಂ ಮ್ಲೇಚ್ಛಖಂಡಮುಮಂ ಮೂಡಣ ದೆಸೆಯೊಳಿರ್ದುವುಮಂ ಬಾಯ್ಕೇಳಿಸಲ್ಪೋಗೆ ದಕ್ಷಿಣೋತ್ತರಶ್ರೇಣಿಗಳ ವಿದ್ಯಾಧರರಾಜಾಧಿರಾಜರ್ ನಮಿವಿನಮಿಗಳಂ ಮುಂದಿಟ್ಟು ಬಂದು,

ಭರತೇಶ್ವರಪದನಖಮಣಿ
ಮರೀಚಿಗಳ್ ತಮ್ಮ ಮಕುಟಮಣಿದೀಧಿತಿಯೊಳ್ ।

ಬೆರಸಿರೆ ತದಾಜ್ಞೆಯಂ ನಿಜ
ಕಿರೀಟದಿಂ ತಾಳ್ದಿದಂದದಿಂ ಸೊಗಯಿಸಿದರ್ ॥ ೭೯

ನಮಿವಿನಮಿಗಳಂತಾಕ
ಚ್ಛಮಹಾಕಚ್ಛರ್ಕಳಿಂದವೊದವಿದ ನಣ್ಪಂ ।
ತಮರ್ದಿರೆ ತವರ್ಮೊಡವುಟ್ಟಿದ
ಕಮಳಾನನೆಯಂ ಸುಭದ್ರೆಯಂ ತಂದಿತ್ತರ್ ॥ ೮೦

ವ॥ ಅಂತಾಸುಭದ್ರೆಯೆಂಬ ಕನ್ಯಾರತ್ನಮಂ ಅಂಬರಚರರೋಚಿತಕಲ್ಯಾಣಂಗಳಿಂದಂ ಆಪುರುಷರತ್ನಾಕರನೊಳ್ ನೆಱಪಿ ತಮ್ಮ ಮನೆಯೊಳುಳ್ಳನರ್ಘ್ಯರತ್ನಂಗಳೆಲ್ಲಮಂ ಬಳಿವಳಿಗೊಟ್ಟು ಬೀಳ್ಕೊಂಡು ಪೋದರ್. ಅನ್ನೆಗಂ ಮ್ಲೇಚ್ಛರಾಜಬಲಪರಿವೃತನಾಗಿ ನಿಜಭುಜವಿಜಯಮಂ ಮುಂದಿಟ್ಟು ಬಂದು ಕಂಡ ದಂಡನಾಯಕಂ ತೋಱಿದನೇಕಕ್ಷತ್ರಿಯಪುತ್ರಕುಲಧನಂಗಳಂ ಕೈಕೊಂಡು ಕೋಶಾಧ್ಯಕ್ಷಹಸ್ತನ್ಯಸ್ತಂಗಳ್ಮಾಡಿ ಬೆಸನನಿರ್ವರ್ಕೇಳದಂತು ಪೂಣಿಸಿ ಕಳುಪಿ ಮುನ್ನಮೆ ತೆಱೆದಱುದಿಂಗಳ್ವರಮಾಱಿದ ಕಾಂಡಕಪ್ರಪಾತಗುಹೆಯೊಳಗಣಿಂದಂ ಚಕ್ರರತ್ನಂ ಮುಂದೆ ನಡೆಯೆ ಕಾಕಿಣೀರತ್ನರಚಿತಸೂರ್ಯಚಂದ್ರಮಂಡಲಂಗಳ ಬೆಳಗಿನೊಳಂ ಗಂಗಾನದ್ಯುಭಯತಟಮಹಾವೀಧಿಗಳೊಳಂ ನಡೆದು ಕತಿಪಯದಿನಂಗಳಿಂ ಗುಹಾದ್ವಾರಮಂ ಪೊಱಮಡುವಾಗಳ್ ತದ್ಗುಹಾಕೂಟನಿವಾಸಿಯಪ್ಪ ನಾಟ್ಯಮಾಲಾಮರಂ ಸುವರ್ಣಪೂರ್ಣಕುಂಭಾದಿಮಂಗಳಂಗಳನಿದಿರ್ಗೊಳೆ ಗುಹಾದ್ವಾರದಿಂ ಪೊಱಮಟ್ಟಾಗಳ್,

ಧವಳಚಮರೀಜವೀಚೀ
ನಿವಹಂ ಶ್ವೇತಾತಪತ್ರಫೇನಪ್ರಕರಂ ।
ವಿವಿಧಪ್ರವಾಹಮೆಸೆದುದು
ವಿವಿಧಬಲಂ ಗಂಗೆಯಂತೆ ತದ್ಗಿರಿತಟದೊಳ್ ॥ ೮೧

ವ॥ ಆಗಳ್ ಪತಾಕಿನೀಪತಿಯು ನಿಯಮದಿಂ ಪೂರ್ವದಿಗ್ಭಾಗಸ್ಥಿತಮಂ ಮ್ಲೇಚ್ಛಖಂಡಮನಪ್ರತಿಹತಶಾಸನಾಂಕಿತಂಮಾಡಿ ಬರೆ ವಿಜಯಸೈನ್ಯವಿನಿರ್ಜಿತಭರತಮಂಡಳಂ ಭರತೇಶ್ವರಚಕ್ರವರ್ತಿ ಸಿದ್ಧದಿಗ್ವಿಜಯನಾಗಿ

ವಿಜಯಪರ್ವತಗಜಮನೇಱಿ ಗಂಗಾತಟಂಬಿಡಿದು ಪಯಣಂಬಂದು ಕೈಳಾ
ಸಾಚಳನಿಕಟದೊಳ್ ಕಟಕಮಂ ನಿಱಿಸಿ ಪರಿಮಿತಪರಿಜನಂಬೆರಸು ತದ್ಗಿ
ರೀಂದ್ರಮನೆಯ್ದೆವಂದು,

ಶರಭಂಗಳ್ಗಿಡೆ ಸಿಂಹದುರ್ವು ವನಗಂಧೇಭೋತ್ಕರಕ್ಕೆಂದುಮಾ
ಗರವಿಾಭೂಧರಮಾಮಹೋಗ್ರಮೃಗಸಂಘಾತಂಗಳೊಂದೊಂದನಿಂ ।
ತಿರೆ ಕಂಡೋಡುವುವಲ್ಲದಿಂತಿವೊಡಗೂಡಿರ್ದಪ್ಪವಿಂತೀಜಗ
ದ್ಗುರು ಬಂದಿರ್ದುದಱಿಂದೆ ಶಾಂತರಸಮಂ ಕೈಕೊಂಡುದೀಪರ್ವತಂ ॥ ೪೦

ವ॥ ಎಂದು ಕೈಳಾಸಾಚಳಮನೇಱಿ ಧೂಳೀಶಾಲದಿಂ ತಗುಳ್ದು
ಪೂರ್ವೋಕ್ತವರ್ಣನೋಪೇತಮಪ್ಪ ವೃಷಭನಾಥನಾಸ್ಥಾನಮಂಟಪಮಂ
ನೋಡುತ್ತುಂ ಬಂದು ಸಕಳಸುರಾಸುರೇಂದ್ರಮುನೀಂದ್ರರುಂದ್ರಸಭೆಯ
ನಡುವೆ ಸಿಂಹಾಸನಮಸ್ತಕದೊಳಿರ್ದ ಜಗತ್ತ್ರಯತಿಳಕನ ಪಾದಪದ್ಮಂ
ಗಳ್ಗೆ ಭರತೇಶ್ವರಚಕ್ರವರ್ತಿ ಮಹೀತಳನಿಹಿತಮಣಿಕಿರೀಟರಶ್ಮಿಸಂದೋ
ಹಸಾಂದ್ರಕುಂಕುಮಪಂಕದಿಂ ವಿಹಿತೋಪಹಾರನಾಗಿ,

ಸಮಸ್ತಸುರಕೋಟಿ ಹೇಮಘಟಕೋಟಿಯಿಂ ತೀವಿ ತಂ
ದಮೋಘಭುಜಕೋಟಿಯಿಂ ಮಿಸಿಸೆ ದುಗ್ಧಸಿಂಧುಪ್ಲವಂ ।
ಶ್ರಮಾಂಬುಲವಮೊಂದುಮಂ ನಿನಗೆ ಪುಟ್ಟಿಸಲ್ಕಾರ್ತುದಿ
ಲ್ಲಮಾನುಷಮನಂತವೀರ್ಯಗುಣಮಾದಿತೀರ್ಥೇಶ್ವರಾ ॥ ೪೩

ವಿದಗ್ಧಸುರಸುಂದರೀನಯನಸುಂದರಂ ನಿನ್ನ ರೂ
ಪಿದೆತ್ತ ಕುಸುಮಾಸ್ತ್ರನಂ ತುಳಿದು ಗೆಲ್ದ ವಿಕ್ರಾಂತಮೆ ।
ತ್ತಿದಚ್ಚರಿ ದಲೆಂಬಿನಂ ನೆಗಟ್ದೆ ನೀಂ ತ್ರಿಲೋಕಂಗಳೊಳ್
ನದೇವಚರಿತಂ ಚರೇತೆನಿಸಿದೈ ತ್ರಿಲೋಕೇಶ್ವರಾ ॥ ೪೪

ಅತೀಂದ್ರಿಯಸುಖಾಮೃತಾಂಬುಧಿನಿವಾಸವೊಂದೊಂದನಾ
ತ್ಮತತ್ವವಿದ ಮುಕ್ತಿಮಾರ್ಗಮನೆ ಕೇಱಿ ಕಂಡೈ ಪೆಱರ್ ।
ಚತುರ್ಗತಿಯ ಬಟ್ಟೆಯಂ ನೆಱೆಯೆ ಕಂಡರೆಂತುಂ ಕರ
ಸ್ಥಿತಾಮಳಕಮೆಂಬರಾಜಱುಚದೇವೃದಿಂದ್ರಾರ್ಚಿತಾ ॥ ೪೫

ಮರುಸ್ಥಳದ ಮಾಳದೊಳ್ ನಡುಪಗಲ್ವರಂ ಗ್ರೀಷ್ಮದೊಳ್
ಸುರುಳ್ವನೆಗಮುಷ್ಣೆ ಬೇವವರ್ಗೆ ಜೋಂಪವಿರಾವಮ್ಮಾವು ನಿ ।
ರ್ಝರಾಂಬು ದೊರೆಕೊಳ್ವವೊಲ್ ಭವದವಾಗ್ನಿಯೊಳ್ ಬೇವ ಜೀ
ವರಾಶಿಗೆ ಭವದ್ವಚೋಮೃತಮೆ ಮರ್ದನಂಗಾಂತಕಾ ॥ ೮೬

ಭವಂ ತವೆ ಭವತ್ಪದಾಂಬುರುಹಸೇವೆಗೆಯ್ವಾರುಮಂ
ಭವಂಗಿಡಿಪೆಯೇಂ ತ್ರಿಲೋಕಗುರುವೆಂಬ ಪೆಂಪಿಂತುಟೇ ।
ಭವಂಗಿಡಿಸುವೋಲಗಕ್ಕಭವ ಬೇಸಱಿಂ ಪೋಗೆ ಪೋ
ಭವಂ ಭವದುಪಾಂತದಲ್ಲಿಯೆ ಮನೋಭವಧ್ವಂಸಕಾ ॥ ೮೭

ಜವಂಗಿಡದೆ ಮುಟ್ಟೆ ಬರ್ಪ ಜವನಂ ಜವಂಗುಂದಿಸಲ್
ಜವಂಗೆ ಜವನಾಗಲಿಂಪೆಬರ್ಗೆ ತೀರ್ಗುಮೋ ತೀರದಾ ।
ಜವಂ ಜವಜವಾಗಿ ಮುಟ್ಟುಗಿಡುವನ್ನಮಿನ್ನಾ ಜವಂ
ಜವ ವ್ಯಸನಪುಂಜಮಂ ಕಿಡಿಪುದಾದಿತೀರ್ಥೇಶ್ವರಾ ॥ ೮೮

ಅನೇಕಭುಜನೇತ್ರಪಜ್ತಿರಸನಾದಿಗಳ್ ದೇವನಿ
ನ್ನನರ್ಚಿಸುವ ನೋಳ್ಪ ಬಣ್ಣಿಸುವ ಪೊತ್ತದೇಕಾಂಗದಿಂ ।
ದ್ರನಂತೆನಗೆ ಸಾಲವಿನ್ನೆರಡೆ ಕೈಯ್ಯೆರಡ್ಕಣ್ಗಳೊಂ
ದೆ ನಾಲಗೆಯುಮೆಂದೆ ಚಿಂತಿಸುವೆನಾದಿಭಟ್ಟಾರಕಾ ॥ ೮೯

ಫಣಿಪ್ರಭುಗಮೆತ್ತಮತ್ತಳಗಮಲ್ತೆ ರೂಪಸ್ತವಂ
ಗುಣಸ್ತವಮುದಾತ್ತವೃತ್ತ ಭವದೀಯಮಸ್ತುಸ್ತವಂ ।
ಗುಣಾಗುಣವಿವೇಕಮೂಕರತಿಮೂರ್ಖರೆಮ್ಮಂದಿಗರ್
ಪ್ರಣಾಮದೊಳೆ ಪುಣ್ಯಮಂ ಪಡೆವರಾದಿತೀರ್ಥೇಶ್ವರಾ ॥ ೯೦

ವ॥ ಎಂದನೇಕಸ್ತವನಂಗಳಿಂ ಸ್ತುತಿಸಿ,

ಚತುರಂಭೋರಾಶಿಮಧ್ಯಕ್ಷಿತಿವಲಯದೊಳಂ ತನ್ನುದಗ್ರಪ್ರತಾಪೋ
ನ್ನತಿಯಿಂದಂ ತನ್ನ ರತ್ನಪ್ರತತಿಗಳೊಳಪೂರ್ವಂಗಳಂ ಕೊಂಡುಕೊಂಡೂ
ರ್ಜಿತಪುಣ್ಯಂ ಪೂಜಿಸುತ್ತುಂ ತಣಿಯನೆ ಭಗವತ್ಪಾದಪೀಠೋಪಕಂಠ
ಕ್ಷಿತಿಯಂ ಚಕ್ರಾಧಿನಾಥಂ ಸುಕವಿಜನಮನೋಮಾನಸೋತ್ತಂಸಹಂಸಂ ॥

ಸುರಗೀತಂ ಸುರದುಂದುಭಿಧ್ವನಿ ಸುರಸ್ತ್ರೀರಮ್ಯಸಂಗೀತಕಂ
ಸುರಪುಷ್ಪೋತ್ಕರಸಾರಭಂ ಸುರಜಯಸ್ತೋತ್ರಂ ಸುರಾಶೀಸ್ತವಂ ।
ಸುರರಾಜೇಂದ್ರಮಹಾವಿಭೂತಿ ತರೆ ಚಿತ್ತೋತ್ಸಾಹವಂ ತಾಳ್ದಿದಂ
ಪರಮಾನಂದಮನಾದಿದೇವಸಭೆಯೊಳ್ ಸಂಸಾರಸಾರೋದಯಂ ॥ ೯೦

ಗ॥ ಇದು ದೇವೇಂದ್ರಮುನೀಂದ್ರವಂದ್ಯಪರಮಜಿನೇಂದ್ರಮುಖ
ಚಂದ್ರವಾಕ್ಚಂದ್ರಿಕಾಪ್ರಸರಪ್ರಸಾದೋದೀರ್ಣಸೂಕ್ತಿ
ಕಲ್ಲೋಲಮಾಲಾಕೀರ್ಣಕವಿತಾಗುಣಾರ್ಣವ
ಪ್ರಣೀತಮಪ್ಪಾದಿಪುರಾಣದೊಳ್
ಷಟ್ಖಂಡಮಂಡಳವಿಜಯಂ
ತ್ರಯೋದಶಾಶ್ವಾಸಂ.
ಸಂಪೂರ್ಣಂ.

ಶ್ರೀರಮಣನೆಱಗಿ ಮುಕ್ತಿ
ಶ್ರೀರಮಣನ ಪಾದಪೀಠದೊಳ್ ಸುರಸಭೆ ಕ।
ಣ್ಣಾರೆ ನಡೆ ನೋಡೆ ಮದನಾ
ಕಾರಂ ತಳರ್ದಂ ಸರಸ್ವತೀಮಣಿಹಾರಂ॥ ೧

ವ॥ ಅಂತು ಸಮವಸರಣಮಂಡಳದಿಂ ಪೊಱಮಟ್ಟು ಲೀಲಾಪ್ರಸಾದಿತ ಸಕಳದಿಙ್ಮಂಡಳಂ ಕೈಲಾಸಶೈಲಕಟಕನಿಕಟವರ್ತಿಯಾಗಿರ್ದ ನಿಜವಿಜಯ ಕಟಕಕ್ಕೆವಂದು,

ಅಱುವತ್ತು ಸಾಸಿರಂಗಳ್
ನೆಱೆದವು ಬರಿಸಂಗಳಿಂದು ದಿಗ್ವಿಜಯದೊಳ್ ।
ಙ್ಕಱಿನೊಳಯೋಧ್ಯೆಗೆ ವೊಗಸಿದ
ನೆಱಿಕೆಯ ಪಱಿ ಪಲವುಮೆಸೆಯೆ ಭರತಮಹೀಶಂ॥ ೨

ವ॥ ಅಂತು ಕೆಲವುಪಯಣಂಗಳಿಂದಂ ನಿಜಾನ್ವಯರಾಜಧಾನಿಯನಯೋಧ್ಯಾಪುರಮನೆಯ್ದಿದಾಗಳ್,

ಹತವೈರಿಕ್ಷತ್ರಚಕ್ರಂ ಭಯಚಕಿತಜಗದ್ವೀರಚಕ್ರಂ ವಿನಮ್ರ
ಕ್ಷಿತಿಚಕ್ರಂ ದೀಪದೀಪ್ತಿಪ್ರತಿಹತದಿನಕೃಚ್ಚಕ್ರತೀವ್ರಾಂಶುಚಕ್ರಂ।
ಜಿತದಿಕ್ಚಕ್ರಂ ಪ್ರಭಾಪ್ರಜ್ವಳಿತದಶದಿಶಾಚಕ್ರಮುಗ್ರಪ್ರತಾಪೋ
ರ್ಜಿತತೇಜಶ್ಚಕ್ರಮಿರ್ದತ್ತೊಳಪುಗದೆ ಪುರೋಪಾಂತದೊಳ್ ಚಕ್ರಿಚಕ್ರಂ॥

ವ॥ ಅಂತು ಚಕ್ರರತ್ನಮಯೋಧ್ಯಾಪುರಮಂ ಪುಗದೆ ತಱುಂಬಿನಿಂದುದಂ ಕಂಡುಮುದಂ ರಕ್ಷಿಸುವ ಯಕ್ಷಸಹಸ್ರಂಬೆರಸು ಗಣಬದ್ಧದೇವರೆಲ್ಲಂ ನೆರೆದು,

ಪುರಗೋಪುರದೊಳಗಂ ಚ
ಕ್ರರತ್ನಮಿಂತೇಕೆ ಪುಗದೆ ಮಾಣ್ದಿರ್ದುದೊ ಮ।
ಚ್ಚರಿಪಧಟನಿನ್ನನಾವನೊ
ಭರತೇಶ್ವರಚಕ್ರವರ್ತಿಗಿನ್ನುಂ ಜಗದೊಳ್॥ ೪

ಆವಂಗೆ ಕಾಲಚಕ್ರಮ
ನೋವದೆ ಮಾಡಲ್ಕೆ ಚಕ್ರಮಿದು ಬಗೆದುದೊ ಶೌ।

ರ್ವ್ಯಾವಿರ್ಭೂತದವಾನಳ
ನಾವನ ಚತುರಂಗಬಲಮನಿಂ ಸುಟ್ಟಪುದೋ ॥ ೫

ಆತಂಗೆ ಚಕ್ರಿವೇೞ್ಕುಮೆ
ಪೋ ತಳ್ತುಱಿದಾಮೆ ಗೆಲ್ವಮೆಂದನಿಬರುಮು ।
ತ್ಪಾತಮರುದಾಭಿಘಾತೋ
ದ್ಭೂತಪಯೋನಿಧಿಗಳಂತೆ ಮಸಗಿದರಾಗಳ್ ॥ ೬

ವ॥ ಅಪ್ರಸ್ತಾವದೊಳ್ ಚಕ್ರೇಶ್ವರಂಗೆ ಚಕ್ರರತ್ನಸ್ಖಲನಮಂ ಪತಾಕಿನೀಚಕ್ರಪ್ರಧಾನಪ್ರಭುಗಳಱಿಯೆ ಬಿನ್ನಪಂಗೈದೊಡಸ್ಖಲಿತಗತಿಯಪ್ಪ ಚಕ್ರರತ್ನಸ್ಖಳನಕ್ಕೆ ನಾಡೆಯುಂ ಚಕ್ರಿ ಮನಸ್ಖಳನಮಾಗೆ ವಿಸ್ಮಯಂಬಟ್ಟು ಪುರೋಹಿತರತ್ನಮಂ ಬರಿಸಿ,

ಪದಿನಾಲ್ಕುಂ ರತ್ನಕ್ಕಂ
ಮೊದಲೆನಗೀಚಕ್ರರತ್ನಮಿದಱಿಂ ಮೇಲಾ ।
ವುದು ದೈವಮೆನಗಯೋಧ್ಯೆಯ
ನಿದು ಪೊಗದೆ ತಱುಂಬಿನಿಂದ ಕಾರಣಮೇನೋ ॥ ೭

ಆಪೂರ್ವದಕ್ಷಿಣಾಪರ
ಕೂಪಾರದ ರಜತಗಿರಿಗುಹಾದ್ವಯದೆಡೆಯೊಳ್ ।
ಪೋಪೆಂದುಮಣಮೆ ತೊಡಱದು
ದೀಪುರಗೋಪುರದೊಳೇಕೆ ತೊಡರ್ದುದೊ ಚಕ್ರಂ ॥ ೮

ಎನಗಮರಾತಿಗಳೊಳರೆಂ
ಬಿನಿತು ಪರಾಭವಮನೀಗಳೀಚಕ್ರಂ ಸೂ ।
ಚನೆಗೈದುದಿನ್ನು ನಾವಂ
ತನಗಿರಲೆಡೆಮಾಡಿದಪ್ಪನಂತಕಮುಖಮಂ ॥ ೯

ವ॥ ಎಂದು ವೀರರಸೋದಾರಗಂಭೀರವಚನರಚನೆಗಳನನಿತನೆ ಬೆಸಸಿ ಮೌನ್ದ ಚಕ್ರವಲ್ಲಭಂಗೆ ಪುರೋಹಿತನಭಿಮುಖನಾಗಿ,

ನೀನಾದಿರಾಜನೈ ನಿನ
ಗಾನಾಲ್ಕುಂ ರಾಜವಿದ್ಯೆ ಪುಟ್ಟಿದುದಱಿಂ ।

ನೀನೆ ಬೆಸಸುವುದು ನಯಮನ
ದೇನೆಂದೆಮ್ಮಂದಿಗರ್ ಜಡರ್ ಬಿನ್ನವಿಪರ್ ॥ ೧೦

ಫಳದಿಂ ಕಲ್ಪದ್ರುಮಮಂ
ಜಳದಿಂ ಜಳನಿಧಿಯನುಕ್ತಿಯಿಂ ಸುರಗುರುವಂ ।
ಬೆಳಗಿಂ ದಿನಪನನರ್ಚಿಪ
ಜಡಮತಿಗಳ ತೆಱನನಾಮುಮನುಕರಿಸಿರೆವೇ ॥ ೧೧

ನಿನ್ನಯ ಮಾಡಿದ ಗೌರವ
ದುನ್ನತಿ ನುಡಿಯಿಸುವುದೆನ್ನನದಱಿಂ ಕೆಱಿದಂ ।
ಬಿನ್ನವಿಸಿದಪೆಂ ಜೈತ್ರಾ
ಸ್ತ್ರನ್ನಿನಗೀಚಕ್ರರತ್ನದಿಂ ಪೆಱತುಂಟೇ ॥ ೧೨

ಇದು ಪಗೆವರುಳ್ಳುದಂ ತೋ
ಱದಪುದು ನಿನಗರಿನೃಪರ್ಕಳಿಲ್ಲದಿದಿಂತಿರ್ಪು ।
ದೆ ದುರ್ನಿರೀಕ್ಷ್ಯಮಿನಬಿಂ
ಬದಂತೆ ಪಜ್ಜಳಿಸಿ ಬಾಗಿಲೊಳ್ ಪುರವರದಾ ॥ ೧೩

ದ್ವಾದಶರಾಜಕಮೆಂಬುದ
ನೋದುಗಳೊಳ್ ಕೇಳಲಾದುದಲ್ಲದೆ ಕಾಣ ।
ಲ್ಕಾದುದೆ ಲವಣೋದಧಿವೃತ
ಮೇದಿನಿಯೊಳ್ ದೇವ ನಿನ್ನ ಪೆಸರೆಸೆವೆಡೆಯೊಳ್ ॥ ೧೪

ನಿನಗರಸ ಬಹಿರ್ಮಂಡಳ
ಮನೆ ಸಮಱಲ್ಕಿನಿತುಬರಿಸಮುಂ ಪೋದುವು ಕೇ ।
ಳನಿಸಂತರ್ಮಂಡಲಸಾ
ಧನಮುಂಟೆಂದಱಿಪಿದುದುಮನಿನ್ನ ಱಿಪುವವೇ ॥ ೧೫

ಪುರುತನಯಂ ತಾನಾಮುಂ
ಪುರುತನಯರೆಮಮಗೆ ತಂದೆಯಿತ್ತವನಿತಳಂ ।
ಪೊರೆಯುಂಟೆ ತನಗೆ ಭಾಗ್ಯಾ
ನುರೂಪದಿಂ ಬಾಳ್ವೆಮೆಱೆಗೆನೆಂಬತಿಮದದಿಂ ॥ ೧೬

ನಿನ್ನನುಜರನಿಬರುಂ ಮಾ
ನೋನ್ನತರಣಮೆಱಗರವರೊಳಗ್ಗಳದದಟಂ ।
ತನ್ನಭಿಮಾನದಭುಜಬಲ
ದುನ್ನತಿಯನೆ ಮೆಱೆವ ಬಾಹುಬಲಿ ಮುನ್ನೆಱೆಗಂ ॥ ೧೭

ಆದಿಬ್ರಹ್ಮರ ಕೊಟ್ಟೀ
ಮೇದಿನಿಗಾನೊಡೆಯನಾತನರಸಿನಿವಿರಿದಿಂ ।
ಮಾದೊಡಮೇನೆನಗೆಂಬ ಮ
ದೋದಯದೊಳ್ ದೇವ ಬಾಹುಬಲಿ ಬಲ್ದಿರ್ದಂ ॥ ೧೮

ನಿನಗೇನಂ ಪೇಳ್ವೆನಾತಂ ಸುಭಟಸಮರಸಂಘಟ್ಟದೋರ್ಗರ್ವವಿಧ್ವಂ
ಸನಕೇಳೀದೋಹಳಂ ವಿದ್ವಿಷದಿಭರದನಸ್ತಂಭಲೀಲಾಸಮುತ್ಪಾ ।
ಟನಕಾಂಕ್ಷಾದುರ್ಮದಂ ದುರ್ಜಯರಿಪುನೃಪಶೌರ್ಯೋನ್ನಮನ್ಮಸ್ತಕಾವ
ರ್ಜನವಾಂಛಾದುರ್ಧರಂ ದುರ್ಲಲಿತಚರಿತಸಂಕೇತಗೋಷ್ಠೀನಿಕೇತಂ ॥೧೯

ರಾಜಪತಿಯಕ್ಕುಮಲ್ಲದೆ
ರಾಜನ್ವತಿಯಾಗದಲ್ತೆ ಧರೆ ಮತ್ತೊರ್ವಂ ।
ತೇಜಸ್ವಿ ಪೊಡಪ್ರೊಡದಱಿಂ
ರಾಜನ್ವತಿ ಮಾಡು ಧರಣಿಯುಂ ಧರಣಿಪತೀ ॥ ೨೦

ಭರತೇಶ್ವರ ನಿನ್ನ ಪದಾಂ
ಬುರುಹಕ್ಕಮರೆಱಗಿ ಸುಖಮನನುಭವಿಸುಗೆ ಮೇಣ್ ।
ಪುರುಪರಮೇಶ್ವರನ ಪದಾಂ
ಬುರುಹಕ್ಕಮರೆಱಗಿ ತಪಮನನುಭವಿಸುಗೆ ಮೇಣ್ ॥ ೨೧

ಬಗೆಯೊಳಗೆ ಬಳೆದ ಭೀತಿಯು
ಮಿಗೆ ಭವದಾಸ್ಥಾನಭೂಮಿಯುಂ ಪುಗುಗೆ ವನಂ ।
ಬುಗುಗಲ್ಲದಂದು ಪೆಱತೆಡೆ
ಪುಗುವೆಡೆಯಿಲ್ಲವರ್ಗೆ ಬೆಸಸು ಶಾಸನಹರರಂ ॥ ೨೨

ಎನೆ ಬಳೆದ ಮುನಿಸಿನೊಳ್ ಕೆ
ಚ್ಚನಾದ ಕಣ್ ದೆಸೆಗೆ ಕೆಂಪನೊದವಿಸಿದುದು ದಿ ।

ಗ್ವನಿತೆಯರ್ಗೆ ರಕ್ತಬಲಿಯಂ
ಮನಕ್ಕೆವರೆ ಬಳೆದ ಮುನಿಸೆ ಕುಡುವಂತಾಗಳ್ ॥ ೭೩

ವಿಕಸಿತನಾಸಾಪುಟನತಿ
ವಿಕಂಪಿತಾತಾಮ್ರದಶನವಸನಂ ಬದ್ಧ ।
ಭ್ರುಕುಟಿಪುಟಂ ಭರತೇಶ್ವರ
ನಕಾಲಯಮರಾಜಲೀಲೆಯಂ ಕೈಕೊಂಡಂ ॥ ೭೪

ಏನೇನೋ ಮದನುಜರೆನ
ಗಾನತರಣಮಾಗದಿರ್ದರಾಮದಮವರ್ಗೇ ।
ನೇನೇತಱೊಳಾದುದನಿನಿ
ಸಾನುಂ ಜೇಗದೊಳೆ ಕಳೆದು ತೋಱೆನೆ ರಣದೊಳ್ ॥ ೭೫

ವೀರಭಟರುದ್ಭಟಾರಭ
ಟೀರಸರಿವರವರದೆನ್ನರುಂ ಸೈಸುವೊಡೇ ।
ಕಾರಣಮೊ ಚಕ್ರಮೇವುದೊ
ವಾರಣಘಟೆ ದಂಡರತ್ನಮೇಗೆಯ್ದಪುದೋ ॥ ೭೬

ಕೊಲೆಗೆಯ್ದವೆಂತುಮೆಂಬೀ
ಬಲಮುಕ್ಕುಮವಂದಿರಂ ಪಳಂಚಲೆದಪುದಿಂ ।
ಕೊಲೆಗೆಯ್ದದೊಡೇ ನೆಯ್ದರೆ
ಕಲಹದೊಳೆನ್ನಿಂ ಪರಾಭವಂಗಳನವರ್ಗಳ್ ॥ ೭೭

ಎನಿಬರರಸುಗಳುಮೆಱಗಿದೊ
ಡೆನಗೇ ವಂದಪುದೊ ಬಾಹುಬಲಿ ಪೊಱಗೆನೆ ಪೇ ।
ಳೆನಿತುಂ ಪುರಮೇವುದೊ ಪೌ
ದನಪುರಮೆನ್ನಾಳ್ಕೆಗಿಂತು ಪೊಱಗೆನಿಪಾಗಳ್ ॥ ೭೮

ಏವನೆಮಗೆಂಬ ಶೌರ್ಯಮ
ದಾವಷ್ಟಂಭದೊಳವಂದಿರಿಂತುಱದಿರೆ ಪೇ ।
ಳಾವುದೊ ಬಾಯ್ಕೇಳಸಿಯುಮಿ
ದೇವುದೊ ಷಟ್ಖಂಡಮಂಡಿತಂ ಭೂವಳಯಂ ॥ ೭೯

ಎಂದೊಡೆ ಪುರೋಹಿತಂ ನಿನ
ತೊಂದೋಲಗೆ ತೀರ್ವುದೊಂದುಮನೆವಾರ್ತೆಗಿದೇ ।
ನೆಂದರಸ ಬಳಿಯೆ ನುಡಿದಪೆ
ಯೆಂದಟ್ಟಿಲೆವೇೞ್ದನವರ್ಗೆ ಶಾಸನಧರರಂ ॥ ೩೦

ವ॥ ಆಗಳ್ ಭರತೇಶ್ವರಚಕ್ರವರ್ತಿಯಟ್ಟಿದ ದೂತರ್ ಪುರುಪರಮೇಶ್ವರ ತನೂಜರಲ್ಲಿಗೆ ಪೋಗಿ,

ಎನಗೊರ್ವಂಗುಪಭೋಗ್ಯಮಲ್ತು ವಸುಧಾಸಾಮ್ರಾಜ್ಯಮೋರಂತೆ ನಿ
ಮ್ಮನಿಬರ್ಗಂ ಪಿರಿಯಣ್ಣನೇಂ ಜನಕನೇನೆಂಬೊಂದು ಕೊಂಡಾಟದಿಂ ।
ವಿನಯಂ ಸಾಲ್ವುದು ತಾಮುಮಾಮುಮೊಡನಿರ್ಪಂ ಬರ್ಪುದೆಂಬೀಶಶಾ
ಸನಮಂ ನೆತ್ತಿಯೊಳಾಂತು ಬನ್ನಿಮೆಱಗಿಂ ಚಕ್ರೇಶಪಾದಾಬ್ಜದೊಳ್ ॥ ೩೧

ವ॥ ಎಂದು ನುಡಿದ ದೂತನ ನುಡಿಯುಮಂ ರಾಜಾದೇಶಮುಮನವಧಾರಿಸಿ ಬಂದ ದೂತನಂ ಮನ್ನಿಸಿ ಸಂತೋಷಂಬಡಿಸಿ ಪೋಗಲ್ವೇೞ್ದು,

ಪಿರಿಯಣ್ಣಂ ಗುರು ತಂದೆಯೆಂದೆಱಗುವಂ ಮುನ್ನೆಲ್ಲಮಿಂತೀಗಳಾ
ಳರಸಂಬೊಂದು ವಿಭೇದಮಾದೊಡೆಱಕಂ ಛೀ ಕಷ್ಟಮಲ್ತೇ ವಸುಂ ।
ಧರೆಗಯ್ಯಂ ದಯೆಗೆಯ್ದು ಮುಂ ಪಡೆದುದರ್ಕಿಂತೀತನೊಳ್ ತೊಟ್ಟು ಕಿಂ
ಕರಭಾವಂ ನಮಗಕ್ಕಿಗೊಟ್ಟು ಮಡಗೂೞುಣ್ಬಂದಮಂ ಪೋಲದೇ ॥ ೩೨

ವ॥ ಎಂದು ತಮ್ಮೊಳನಿಬರುಂ ಪರಿಚ್ಛೇದಿಸಿ,

ಕುಳಿಶಾಸ್ತ್ರೋತ್ತಂಸಿತಪದ ।
ನಳಿನಂಗೆ ತನೂಜರಾಗಿ ಪುರುಷಾರ್ಥಮನು ।
ಜ್ಜಳಿಸದೆ ಮಾಣ್ಬಮೆ ನಮಗಿದು
ಪಳಾಳಭಾರಂಬೊಲೀಮಹೀತಳಭಾರಂ ॥ ೩೩

ವ॥ ಎಂದು ಪರಿತ್ಯಕ್ತನಿಜರಾಜ್ಯಪರಿಚ್ಛೇದರಾಗಿ,

ತಳರ್ದಪುವು ರತ್ನಶಿಖರಾ
ವಳಿವಿಳಸಿತಕನಕಗಿರಿಗಳೆನೆ ತನುರುಚಿಗಳ್ ।
ಬೆಳಗೆ ಕುಮಾರರ್ ನೂರ್ವರು
ಮೊಳಪೊಕ್ಕರ್ ಸಮವಸರಣಭೂಮಂಡಲಮಂ ॥ ೩೪

ಬಳಪ್ರುಗುವ್ರುದುಮಖಿಳಜಗ
ತ್ತಿಳಕನ ಮುಖಚಂದ್ರಕಿರಣದಿಂ ಕರಕಮಳಾ।
ವಳಿಯುಂ ತದೀಯನಯನೋ
ತ್ಪಳವನಮುಂ ಮುಗಿದುವಲರ್ದುವೊಡನೊಡನಾಗಳ್ ॥ ೩೫

ವ॥ ಅಂತು,

ಪೊಡೆವಟ್ಟು ದೇವ ನೀಂ ಕುಡೆ
ಪಡೆದೆವಿಳಾತಳಮನೊಡನೆ ಪುಟ್ಟಿದ ಮೇಳ।
ಕ್ಕಡಿಗೆಱಗಿಮೆಂದು ಭರತಂ
ಜಡಿವಂ ನಿನಗೆಱಗಿ ಪರಮ ಪೆಱರ್ಗೆಱಗುವೆವೇ ॥ ೩೬

ಭವದಂಘ್ರಿಕಮಳರಜದಿಂ
ಪವಿತ್ರಮಾದೆಮ್ಮ ಮಕುಟಮೆಂಜಗದು ಪೆಱರ್ಗಂ।
ಭವಭಯಹರ ಭರತನನೆಮ
ಗವಯವದೆಱಗಿಸುವ ತಪಮನೀಗಳ್ ದಯೆಗೈ ॥ ೩೭

ದುರಿತಘನತಿಮಿರದಶಶತ
ಕಿರಣ ಮತಿಪ್ರೀತಿಕರಣಮಖಿಳವಿನೇಯೋ।
ದ್ಧರಣಮೆಮಗಭವ ಭವಭಯ
ಹರಣಂ ಭವದೀಯಸಮವಸರಣಂ ಶರಣಂ ॥ ೩೮

ವ॥ ಎಂದು ಪರಮನಿರ್ವೇಗಪರಾಯಣರಾಗಿ,

ಭರತಂಗೆಱಗುವರೆಂಬಿದೆ
ಪರಿಭವಮೆಮಗಿಂತು ಮಾನಭಂಗಂ ಬರೆ ಬ।
ರ್ಪರಸೇವ್ರುದೆಂದು ಪೊರ್ದ್ದರ್
ಪರಮತಪೋಭರಮನನಿಬರುಂ ಪುರುತನಯರ್ ॥ ೩೯

ವ॥ ಅಂತಾಕುಮಾರರನಿಬರುಮಾದಿತೀರ್ಥಂಕರಸಮವಸರಣಸರೋವರ
ರಾಜಹಂಸವ್ಯತಿಕರಮಂ ಭರತೇಶ್ವರಂ ಕೇಳ್ದು,

ಅವಳಂಬಿಸಿ ನೆಗೞ್ದಿಕ್ಷ್ವಾ
ಕುವಂಶವೊಂದನೆ ಪುರಾಣಪುರುಷರವೋಲಿಂ।

ತವಿಹತಗತಿಯಿಂ ಮುನ್ನ
ಸ್ವವಾಯುಭೂಧರದ ಶಿಖರಮಂ ಮುಟ್ಟಿದರಾರ್ ॥ ೪೦

ವ॥ ಎಂದು ವಿಸ್ಮಿತಾಂತಃಕರಣನಾಗಿ ಮನದೊಳ್ ಮೆಚ್ಚಿ,

ಎನಗನುಜರಾಗಿಯುಂ ಚಲ
ದೆನಗೆಱಗದೆ ಪೋಗಿ ಭುವನಗುರುಗೆಱಗಿದರಂ ।
ತನಿಬರುಮವಱಿಂದಗ್ಗಳ
ಮೆನೆ ನೆಗೞ್ದ ಬಾಹುಬಲಿಯನೆಂತೆಱಗಿಸುವೆಂ ॥ ೪೧

ಖರಕಿರಣಸ್ಫುರಿತಕ್ಕಿದಿ
ರುರಿವಂತಿರೆ ಸೂರ್ಯಕಾಂತಮೆನ್ನೀತೇಜ ।
ಸ್ಫುರಿತಕ್ಕೆ ಸೈಸಿನೊಳ್ ಮಾ
ಱುರಿಗುಂ ಸೈರಿಸದು ತೇಜಮಾಭುಜಬಲಿಯಾ ॥ ೪೨

ಅದಱಿಂದಮಾತನಂ ಸಾ
ಮದಿಂದಮಳವಡಿಸಿ ನೋಡುವೆಂ ಸಾಮದೊಳಂ ।
ಪದವಡೆದೊಡೆ ಬಳಿಕಿರ್ದ
ಪ್ಪುದಲ್ತೆ ಪದವಡಿಸಲೆನ್ನ ಬಯಕೆಯ ದಂಡಂ ॥ ೪೩

ವ॥ ಎಂದು ಮಂತ್ರಿವರ್ಗದೊಡನೆ ನಿರಾಕುಳತಕಾರ್ಯಪರ್ಯವಸಾನನಾಗಿ ಬಾಹುಬಲಿಕುಮಾರಂಗೆ ಲೇಖಮನುನ್ಮಯೂಖರತ್ನಾಭರಣಪ್ರಭೂತಸಮೇತಮನಟ್ಟುವಂತು ಮಹಾಸಂಧಿವಿಗ್ರಹಿಗೆ ಬೆಸಸಿದೊಡಾತಂ ಜನಪದಸಮಭಿಜಾತನುಮನ್ವಯಾಗತನುಮಭಿರೂಪನುಂ ಪ್ರತ್ಯುತ್ಪನ್ನಪ್ರತಿಭನುಂ ವಕ್ರೋಕ್ತಿನಿಪುಣನುಮಾಧೇಯವಚನನುಮನುದ್ಧತವೇಷನುಂ ಪರಿಚಿತಾಶೇಷದೇಶಭಾಷನುಂ ವಯೋವೃದ್ಧನುಂ ಪ್ರಸಿದ್ಧನುಮಪ್ಪ ಮಹತ್ತರನ ಕೈಯೊಳ್ ಸನ್ಮಾನದಾನಪುರಸ್ಸರಮಾಗೆ ಕೊಟ್ಟು ವಿಜಯಕಾರ್ಯಸಿದ್ಧಿಯಕ್ಕೆಂದು ಪೋಗಲ್ವೇೞ್ವುದು ಮಾತನುಂ ಕತಿಪಯಪ್ರಯಾಣಂಗಳಿಂದಂ ಪೌದನಪುರಮನೆಯ್ದಿ ಪುರಶ್ರೀಯನರ್ಘಿವಟ್ಟುನೋಡಿ ಮೆಚ್ಚುತ್ತುಂ ಬಂದು ಲೀಲೋತ್ತಾರಿತರಿಪುನೃಪಾಲಸಾಮಂತಸೀಮಂತಿನೀಸೀಮಂತರಪ್ಪ ಮಹಾಸಾಮಂತರಿಂದಮಧರಿತಾನೇಕರಿಪುನೃಪಾನೇಕರಣಂಗಳಪ್ಪವಾದಣಂಗಳಿಂದಂ

ಹೇಲೋಲ್ಲಂಘಿತಮಹಾವಾಹಿನೀಭೂರಿಭೈರವಾಜಿಗಳಪ್ಪ ವಾಜಿಗಳಿಂದಮು ಪಹೃತವಿಕ್ರಾಂತವಿದ್ವಿಷ್ಟವಿಕ್ರಮಸಂಪತ್ತಿಗಳಪ್ಪ ಪತ್ತಿಗಳಿಂದಂ ವಿರಾಜಮಾನಮಪ್ಪ ರಾಜಮಂದಿರಮನೆಯ್ದಿ ದೌವಾರಿಕನಿವೇದಿತಾತ್ಮೀಯವೃತ್ತಾಂತನಾಸ್ಥಾನಮಂಡಪಮಂ ಪೊಕ್ಕು ಲಲಾಟತಟಸಂಘಟ್ಟಿತಸಭಾಕುಟ್ಟಿಮನಾಗಿ,

ಮರಕತನಗಂ ದಿವ್ಯಂ ಮತ್ರ್ಯಾರ್ತ್ತಮಾಕೃತಿಯೆಂಬಿನಂ
ವಿರಚಿಸಿದನಿಂತಾದಿಬ್ರಹ್ಮಂ ಹರಿನ್ಮಣಿವರ್ಣಸಂ।
ನೆರೆದುದಿದು ಮೇಣ್ ಕ್ಷಾತ್ರಂ ತೇಜಂ ಧರಾಧಿಪರೂಪದಿಂ
ಧರೆಗೆನುತುಮಾದೂತಂ ಕಣ್ಣುಳ್ಕೆ ನೋಡಿ ಕುಮಾರನಂ॥ ೪೪

ಪುರುಪರಮೇಶ್ವರಪುತ್ರಂ
ಭರತೇಶ್ವರಚಕ್ರವರ್ತಿಗನುಜನೆನಲ್ ಸುಂ।
ದರರೂಪನೀಕುಮಾರನೆ
ದೊರೆ ಚಕ್ರಿಗಮೆಸೆಯದಿನಿತು ತೇಜಸ್ಸ್ಫುರಿತಂ॥ ೪೫

ವ॥ ಎಂದು ಮನದೊಳೆ ಬಗೆದು ವಿಸ್ಮಯಂಬಟ್ಟು ಭರತನಾಥದೂತನಾತ್ಮಪಾರ್ಶ್ವಚರಕರತಳದಿನುಪಾಯನರತ್ನಕರಂಡಕಮಂ ಕೊಂಡು ದೇವಭವದೀಯಾಗ್ರಜಂ ರಾಜಾಧಿರಾಜಂ ನಿಮಗಟ್ಟಿದ ಮಹಾಪ್ರಸಾದಂಬಿನ್ನಪಮೆಂದು ಮುಂದಿಟ್ಟು ಮಹತ್ತರಂ ಮಹತ್ತರಯೋಗ್ಯಮಹೀನಿಹಿತಾಸನದೊಳಿರ್ಪುದುಂ; ಅದಂ ಮಹಾಸಂಧಿವಿಗ್ರಹಿ ಕೊಂಡು ಅಪನೀತಮುದ್ರೆಯಂ ಮಾಡಿ ತೆದಂತಸ್ಸ್ಥಿತಂಗಳಪ್ಪ ರತ್ನಾಭರಣಂಗಳಂ ತೋಱಿ ಕೋಶಾಧ್ಯಕ್ಷಹಸ್ತನ್ಯಸ್ತಂಗಳ್ಮಾಡಿ ದೇವ ಲೇಖಮಿದೆಂದು,

ಭೂವಲ್ಲಭಸೋತ್ಕ್ಷೇಪ
ಭ್ರೂವಿಲಸಿತದತ್ತವಾಚನಾದೇಶಪಿಂದಂ।
ಭಾವಿಸಿವೆಂದತಿಮಧುರೋ
ದ್ಭಾವಿತಗಂಭೀರನಾದದಿಂ ಬಾಜಿಸಿದಂ॥ ೪೬

ವ॥ ಸ್ವಸ್ತಿ ಸಮಸ್ತವಿಷ್ಟಪಾಧೀಶ್ವರಪುರುಪರಮೇಶ್ವರಚರಣಸರಸಿಜರಜೋರಂಜಿತಮಣಿಕಿರೀಟಮಕರಿಕಾಚಕ್ರಂ ಚಕ್ರರತ್ನಪ್ರಭಾಸಾದಿತನಿಖಿಲದಿಕ್ಚಕ್ರಂ ಭರತೇಶ್ವರಚಕ್ರವರ್ತಿ ನಿಜಪ್ರಿಯಾನುಜಬಾಹುಬಲಿಕುಮಾರನಂ ಪರಮಾಶೀರ್ವಾದದಿಂ ಪರಸಿ ಕನಕಪತ್ರಾಂಕಿತಕಾರ್ಮುಕಲತಾ

ಲಂಬನಂಗಳುಂ ವಿಜಯೋತ್ಸವತೋರಣಸ್ತಂಭಂಗಳುಂ ವೀರಶ್ರೀಭುಜಂಗೀ ಸಮಾಶ್ರಯಶ್ರೀಖಂಡಕಾಂಡಂಗಳುಮಪ್ಪ ದೋರ್ದಂಡಂಗಳಿಂದಮತಿನಿಬಿಡಾಲಿಂಗನಂಗೆಯ್ದು ಕಾರ್ಯಮಂ ಬೆಸಸಿಕೆರ್ಗ,

ಮತ್ತಪ್ಪುದೆನಲೊಡಂ ಮರ್‍ಣ
ಮತ್ತತ್ತಣ ಕಾರ್ಯಮಱಿಯಲಾದುದು ಪೇೞ ಭೂ ।
ಪೋತ್ತಮನಿರ್ದನೆ ಸುಖದಿನು
ದಾತ್ತಯಶಂ ನೆಗೞೆ ನೆಗೞ್ದಯೋಧ್ಯಾಪುರದೊಳ್ ॥ ೪೭

ಎಂತಾನುಂ ನೆನೆದಂ ಬಹು
ಚಿಂತಂ ಚಕ್ರೇಶನೆಮ್ಮ ದಿಗ್ವಿಜಯಮುಮಮಾ ।
ದಂತೆಡಱದೆಯ್ದೆ ನಡೆದುದೆ
ಸಂತಮೆ ದಕ್ಷಿಣಭುಜಕ್ಕೆ ಭೂವಲ್ಲಭನಾ ॥ ೪೮

ಅರಸುಗಳೆಲ್ಲಂ ಬಾಯ್ಕೆ
ಳ್ದರೆಂದುಮಾಶಾಂತರಂಗಳಳ್ಕಿದುವೆಂದುಂ ।
ಧರಣಿತಳಂ ಕೀರ್ತಿಸೆ ಕೇ
ಳ್ದು ರಾಗಿಸುತ್ತಿರ್ಪೆವಿನ್ನುಮೇಂ ತೊದಳುಂಟೇ ॥ ೪೯

ಇಲ್ಲೆಯೊ ಪೇೞೆಂದು ಮಹೀ
ವಲ್ಲಭದೂತಂಗೆ ನುಡಿದು ದಶನಾಂಶುಗಳಿಂ ।
ಮೆಲ್ಲನೆ ದಶನಚ್ಛದಮೃದು
ಪಲ್ಲವದಿಂ ಮುಱಿಸಿ ಮಾಣೆ ದೂತಂ ನುಡಿದಂ ॥ ೫೦

ಭವದಗ್ರಜದಿಗ್ವಿಜಯೋ
ತ್ಸವಮಧಿಕಮಹೋತ್ಸವಂ ವಲಂ ನಿನಗಾದಂ ।
ಶ್ರವಣಸುಖಮೆಂದೆ ದಿಜ್ಮ
ತ್ರವರ್ಣನಂಗೆಯ್ವೆನುಂತದೇ ನೆನ್ನಳವೇ ॥ ೫೧

ವ॥ ಅದೆಂತೆಂದೊಡೆ ಮುನ್ನಂ ತ್ರೈಲೋಕ್ಯಸಾಮ್ರಾಜ್ಯಹೇತುಭೂತಮೆನಿಸಿದ ಪುರುಪರಮೇಶ್ವರನ ಕೇವಲಜ್ಞಾನಪೂಜೆಯುಮಂ ಪ್ರಾಜ್ಯಸಾಮ್ರಾಜ್ಯಪ್ರಕಾಶನಕರಮಪ್ಪ ಚಕ್ರಪೂಜೆಯುಮಂ ನಿರ್ವರ್ತಿಸಿ,

ನೆಗಳ್ದಿಕ್ಷ್ವಾಕುಕುಲಾಂಬರೇಂದು ಭರತಂ ನಿನ್ನಗ್ರಜಂ ಸಾಹಸಂ
ಮುಗಿಲಂ ಮುಟ್ಟೆ ನಿಜಪ್ರತಾಪದಳವಂ ತೋಱಲ್ಕೆ ಮಾಱಾಂಪ ಜ।
ಟ್ಟಿಗರಾರಪ್ಪೊಡಮಿಲ್ಲದಂತು ಸಕಳಾಶಾಚಕ್ರಮಂ ಚಕ್ರಮೊಂ
ದೆ ಗೆಲಲ್ಸಾಲ್ದಿರೆ ದಿಗ್ಜಯಕ್ಕೆ ಪೊಱಮಟ್ಟಾಪೆಂಪು ಸಾಮಾನ್ಯಮೇ ॥ ೫೨

ವ॥ ಅಂತು ಪೊಱಮಟ್ಟನೇಕಕರಟಿಕಟಕಷೀಕರಣನಿಕ್ಷೇಷಿತಾರಾತಿವನದುರ್ಗನುಂ, ಉದಗ್ರಮದಾಂಧಸಿಂಧುರಪ್ರತಿಗಜಶಂಕಾಸ್ಫಾಲಿತಗಂಡಶೈಲವಿಘಟಿತಗಿರಿದುರ್ಗನುಂ, ಅಂತಸ್ಸ್ಫುರದತಿಸಪ್ಪಿರಸಮುರೋಷ್ಮಸಂತಪ್ತಜಲಪ್ರತ್ಯೇಕ ಚುಳಕಪಾನ ಮಾತ್ರಜಾನುದಘ್ನ ಜಲದುರ್ಗನುಮಾಗಿ ನಡೆದು,

ಬಳಸಂಪನ್ನಕ್ಷಿತೀಶಪ್ರಕರಕರಿಕುಳಗ್ರಾಮಸಂಘಟ್ಟಭಂಗಂ
ಗಳನೆಂದುಂ ಕಾಣದೆತ್ತಂ ಬಳೆಯೆ ಕಳದ ವೇಳಾವನಸ್ಥೂಳಶಾಳ್ಂ।
ಗಳೊಳಾದಿಬ್ರಹ್ಮಪುತ್ರಂ ನಿಜವಿಜಯಗಜೇಂದ್ರಂಗಳಂ ಕಟ್ಟೆ ನೀಳಾ
ಚಳಸಂಘಾತಂಗಳಂ ಸುತ್ತಿಱಿದವೊಲೆಸೆದತ್ತಾ ಸಮುದ್ರೋಪಕಂಠಂ ॥ ೫೩

ವ॥ ಅಂತು ಪೂರ್ವದಕ್ಷಿಣಾಪರಪಾರಾವಾರತೀರವರ್ತಿಗಳಪ್ಪ ಭೂಪಾಳರನೆಱಗಿಸಿ ಗಂಗಾವೈಜಯಂತೀಸಿಂಧುದ್ವಾರಂಗಳಂ ನಿಜವಿಜಯವರೂಥವೊಂದಱೊಳೆ ನುಗುಳ್ದು ಲವಣಜಲಧಿಯುಂ ಪೊಕ್ಕು,

ಕರಿಮಕರಂ ಪರಿವಂತಿರೆ
ಪರಿವ ರಥಂ ಜಳಧಿಯೊಳಗೆ ಮಾಣ್ದೊಡೆ ಶರದಿಂ।
ದುರಿಪಿದನಲ್ಲವೆ ತದ್ವ್ಯಂ
ತರಾಮರಾವಾಸಮನಿತುಮಂ ಭರತೇಶಂ ॥ ೫೪

ಶರಪಾತಮೆ ದೂತನವೋಲ್
ತರೆ ಮಾಗಧವರತನುಪ್ರಭಾಸಾಮರರಂ।
ಕರುಣಿಸಿ ಬಿಟ್ಟಂ ಕುಲಧನ
ಪರಿಕರಮಂ ಕಯ್ಗೆ ಮಾಡಿ ಮನುಕುಲತಿಲಕಂ ॥ ೫೫

ವಿಜಯಾರ್ಧಾದ್ರೀಂದ್ರದೊಳಂ
ವಿಜಯಾರ್ಧಕುಮಾರನೆಂಬ ನೆಗಳ್ದಮರನುಮಂ।
ವಿಜಯಶರಮೊಂದೆ ತಂದುದು
ವಿಜಯೋದ್ಘೋಷಣೆಗಳಮರರಿಂ ನೆಗಳ್ವಿನೆಗಂ ॥ ೫೬

ಕೃತಮಾಳಾಮರನಗಿದಾ
ನತನಾಗೆ ತಮಿಸ್ರಗುಹೆಯು ವಜ್ರದ ಪಡಿ ತ।
ತ್ಕ್ಷಿತಿಧರದೆರ್ದೆಯಂತೆ ಚಮೂ
ಪತಿಯಿಂ ತೆಱಿದತ್ತು ಚಕ್ರಿಗರಿಯುವುವೊಳವೇ ॥ ೫೭

ವ॥ ಅಂತು ತಮಿಸ್ರಗುಹೆಯೊಳಗನೆ ಕಾಕಿಣೀರತ್ನದೊಳ್ ಬರೆದ ಚಂದ್ರಾದಿತ್ಯರ ಬೆಳಗುಗಳೊಳ್ ನಿಜವಿಜಯಕಟಕಂ ನಡೆಯೆ ವಿಜಯಾರ್ಧಾಚಳಮಂ ಪೆಱಗಿಕ್ಕಿ ಶಬರಖಂಡಂಗಳಂ ಸೇನಾನಾಯಕನೆ ಬಾಯ್ಕೇಳಿಸಿ ಬರೆ,

ಮಸಗಿ ಬಳಾಕಾವರ್ತರ
ಬೆಸದಿಂದಂ ಬಂದ ಮೇಘಮುಖರಂ ತೂಳ್ದೇ।
ಡಿಸೆ ಜಯನೊರ್ವನೆ ಚಕ್ರಿಗೆ
ಬೆಸಕೆಯ್ದತ್ತುತ್ತರಾರ್ಧಮಧ್ಯಮಖಂಡಂ ॥ ೫೮

ವ॥ ಮತ್ತಂ ಸಿಂಧುಪ್ರಪಾತ ಸಿಂಧು ದೇವಿಯಿಂದಮಭಿಷಿಕ್ತನಾಗಿ ಪೋಗಿ,

ಹಿಮಗಿರಿಯ ಮಧ್ಯಕೂಟದ
ಹಿಮವದ್ವಿಜರುಮನೊತ್ತಿ ಕಪ್ಪಂಗೊಂಡಾ।
ಹಿಮಶೈಲದೊಳಮಲಂಪಿಂ
ಹಿಮವತ್ತೇಜಮನುದಾತ್ತತೇಜಂ ಮೆಱೆದಂ ॥ ೫೯

ವ॥ ಅಂತು ಬಂದು ವೃಷಭಾಚಳನಿಕಟಂಗಳೊಳಂ ಅಪ್ರತಿಹತದಿಗ್ವಿಜಯಪ್ರಶಸ್ತಿಯಂ ಟಂಕೋತ್ಕೀರ್ಣಂಮಾಡಿ ಗಂಗಾದೇವಿಯೋಲಗಿಸಿದನರ್ಘ್ಯರತ್ನಂಗಳಂ ಕೈಗೆಮಾಡಿ ನಮಿವಿನಮಿಗಳ್ಮೊದಲಾಗೆ ದಕ್ಷಿಣೋತ್ತರಶ್ರೇಢಿಗಳ ವಿದ್ಯಾಧರರಾಜರನಾಜ್ಞಾವಿಧೇಯರ್ಮಾಡಿ ಕಾಂಡಕಪ್ರಪಾತಗುಹೆಯ ವಜ್ರಕವಾಟಂಗಳಂ ತೆಱೆದು ಪೊಱಮಟ್ಟು ಸಿದ್ಧದಿಗ್ವಿಜಯನಾದನಿಂತು,

ಆರಜತಾದ್ರಿಮುದ್ರಿತಮಹೀತಳಮಂ ಬೆಸಕೆಯ್ಸಿ ತದ್ಗುಹಾ
ದ್ವಾರಮನುರ್ಚಿಪೋಗಿ ವಿಜಿತೋತ್ತರಭೂತಳನಾದನಲ್ತೆ ಘ!
ಕ್ಕಾರವರಪ್ರದಿಗ್ವಳಯಕುಂಜರಕುಂಭವಿಲಗ್ನಸಾಂದ್ರಸಿಂ
ದೂರರಜಃಪಟಾವೃತದಿಶಾವಳಯಂ ಭರತಕ್ಷಿತೀಶ್ವರಂ ॥ ೬೦

ನೃಸುರಾಸುರಖೇಚರರಂ
ಬೆಸಕೆಯ್ಸಿದನೆಡಱುವಹಿತರಂ ಚಕ್ರಮ ಸಾ।
ಧಿಸಿದಪ್ಪುದು ನವನಿಧಿಗಳ್
ಪೊಸಯಿಸಿದಪ್ಪುವು ವಿಭೂತಿಯುಂ ಪುರುಸುತನಾ॥ ೬೧

ಎನ್ನಣುಗದಮ್ಮನಿಲ್ಲದೆ
ಬಿನ್ನನೆ ಸಾಮ್ರಾಜ್ಯವಿನಿತುಮಾದೇಱಕಮುಮ ।
ತ್ಯುನ್ನತಿಯಲ್ತೆನಗಾತಂ
ಮುನ್ನೆಱಗದೊಡೆಂದು ಬೆಸಸಿಯಟ್ಟಿದನೆನ್ನಂ॥ ೬೨

ವಿನಯಂ ಸಹಜಂ ಕೃತ್ರಿಮ
ಮೆನಿಸಿದುವವು ಬೇಱಬೇಱ ವಿದ್ವಜ್ಜನಮಂ।
ಮನದೆಗೊಳಸುವುವಿವೆರಡುಂ
ನಿನಗೊಳವಾರಾರ ಮನಮುಮಂ ರಂಜಿಸವೇ॥ ೬೩

ವ॥ ಎಂಬುದುಂ ಬಾಹುಬಲಿಕುಮಾರಂ ದೂತವಚನಾಕರ್ಣನೋದೀ ರ್ಣಕ್ರೋಧೋದ್ಗಚ್ಛದಚ್ಛೇದಜಳಧಾರಾಸಾರಭೀಕರಾಲೋಹಿತಕಪೋಳ ತಳಮುಮುದ್ದೀಪನಪಿಂಡಪ್ರದೀಪ್ತಕಪೋಲೋಚ್ಛಳದತುಚ್ಛಮದಜಳಚ್ಛ ಟಾಟೋಪಭೀಷಣಾರುಣಗಂಡಸ್ಥಳಮುಮಪ್ಪ ಗಂಧಸಿಂಧುರೇಂದ್ರಮನೆನು ಕರಿಸಿ ಕೋಪಗರ್ಭಸ್ಮಿತಂ ಬೆರಸು,

ಮುನ್ನಂ ಸಾಮಮನೆಮ್ಮಮ
ನನ್ನೋಡಲ್ ನುಡಿದು ಭೇದಮಂ ದಂಡಮುಮಂ।
ನಿನ್ನಱವನಿತಂ ನುಡಿದೆಯಿ
ದೇನ್ನುಡಿಗಳೊ ಸಮಱಕೊಂಚ ನುಡಿಗಳ್ ನಿನ್ನಾ॥ ೬೪

ಇನಿತೊಂದು ನುಡಿದ ಬಲ್ಮೆಯೆ
ನಿನಗಿಲ್ಲದೊಡೇಕೆ ನಿನ್ನನಾಳ್ದಂ ನಿನ್ನಂ।
ಮನವೊಲ್ದು ನಚ್ಚಿಯಟ್ಟಿದ
ನನಾಕುಳಂ ದೂತನಿಂತು ನುಡಿಯಲ್ವೇೞ್ಕುಂ॥ ೬೫

ನೀ ನ್ನಿನ್ನ ನೃಪನ ದಿಗ್ವಿಜ
ಯೋನ್ನತಿಯಂ ಪೊಗೞ್ದ ಮೂರ್ಖರ್ವ್ರೋಪ್ಪೈ ಪೊಗೞ್ದಂ ।
ನೀನ್ನಿನ್ನ ಮನದೊಳಿಂತಿದು
ಬನ್ನಮನೆತ್ತವವ್ರೊಲಾಯ್ತು ನಿನ್ನವನಿಪನಾ ॥ ೬೬

ಮುಂದಿಟ್ಟು ಚಕ್ರಮಂ ತಿರಿ
ತಂದುದುಮಂ ಪೂಜಿದಿರ್ದರ್ ಬಯ್ತಂಗೊಳ್ವಂ ।
ದಂದದೆ ಕೊಂಡುದುಮನದೇ
ನೆಂದುನ್ನತಿಮಾಡಿ ಪೊಗೞ್ವೆಯೊಳಗಱಿಯದುದೇ ॥ ೬೭

ಪಸಿದುಣ್ಣ ಪಟ್ಟು ಬಿರ್ದ
ದರ್ ಸಮುದ್ರದ ತಡಿಯೊಳುದಕಮಂತ್ರದ ಬಲದಿಂ ।
ನುಸುಳ್ದೊಡೆ ಜಳನಿಧಿಯಂ ಕರು
ಣಿಸಿ ಕೊಟ್ಟರ್ ಧನಮನಂಜಿ ಕೊಟ್ಟರೆ ದಿವಿಜರ್ ॥ ೬೮

ಧರೆಯೊಳ್ ಕುಲಾಲಚಕ್ರಂ
ತಿರಿವಂತಿರೆ ತಿರಿಯೆ ಚಕ್ರಮದಱಿಯೆ ಬೞಿಯಿಂ ।
ತಿರಿತಿರಿದು ಮಾಡಿದಂ ಕುಲ
ಧರಕುಲದೊಳ್ ಪಿಱಿದು ಮಹಿಮೆಯಂ ನಿಮ್ಮರಸಂ ॥ ೬೯

ಉತ್ತರಭರತದೊಳಾದಾ
ಪತ್ತಂ ನೀನಱಿಯೆಯಕ್ಕುಮನಿತುಂ ಬಲಮಂ ।
ಮುತ್ತಿ ಬಳಾಕಾವರ್ತರ್
ಸುತ್ತಲುಮೇಸಾಡಿ ಪಿರಿದು ತಿಣಿಕಂ ತಂದರ್ ॥ ೭೦

ಮೇಘಮುಖರೆನಿಸಿ ಸಂದರೆ
ಘೌಘದಿನಂದೋಘಮೇಘಮಾದೊಡೆ ಮೞೆ ಶೌ ।
ರ್ಯಾಘಾತಂ ನೆಗಪೆ ಬಳ
ವ್ಯಾಘಾತಂ ನಿನ್ನ ಪತಿಗದಾದುದು ಪುಸಿಯೇ ॥ ೭೧

ಬೇಡವಡೆ ಮುಸುಱಿ ಕೊಂಡೇ
ಸಾಡೆ ಸುರುಳ್ದಗಿದು ಕೊಡೆಯ ಚರ್ಮದ ಮಱೆಯೊಳ್ ।

ಗೂಡುಗೊಳಿಸುತಿರ್ದ ಶೌರ್ಯ
ಕ್ರೀಡೆಯು ದಿಗ್ವಿಜಯಮೆಸೆದುದೆಮ್ಮಗ್ರಜನಾ ॥ ೭೦

ಬರೆಯಿಸಿದಂ ಪೂರ್ವಮಹೀ
ಶ್ವರನಾಮಮನೆಯ್ದೆ ಕಳೆದು ವೃಷಭಾಚಲದೊಳ್ ।
ಭರತಂ ನಿಜನಾಮಮನೆನೆ
ಪರಿಹಸಿತಂ ಬುಧಜನಕ್ಕದಲ್ಲದೆ ಪೆಱತೇಂ ॥ ೭೩

ಧನಮೆಂಬುದು ವಿಭುಗೆ ಯಶೋ
ಧನಮದನಿಂತಳಿಪಿ ಕಳಿಪಿ ಕಿಡೆ ಮಾಡಿದರ್ಾ ।
ತನ ಪಡೆದ ಧನಮದೇತಱ
ಧನಮದಱಿಂ ನಿಧನಮೆಯ್ದಿದರ್ ಪಲರರಸರ್ ॥ ೭೪

ಪಿರಿಯಣ್ಣಂಗೆಱಗುವುದೇಂ
ಪರಿಭವಮೇ ಕೀಱು ನೆತ್ತಿಯೊಳ್ ಬಾಳಂ ನಿ ।
ರ್ನೆರಮಾಱಿ ಚಲದಿನೆಱಗಿಸ
ಲಿರೆ ಭರತಂಗೆಱಗುವೆಱಕಮಂಜಮೆಯಲ್ತೇ ॥ ೭೫

ವಿನಯಮುಮೆಱಕಮುಮಪ್ಪುದು
ಸನಾಭಿಗಳ್ ಸಂಗತಂಗಳಪ್ಪೊಡೆ ಪೆಸಗೊಂ ।
ಡನಿತಱೊಳೆನ್ನಂ ಸೈರಿಸ
ನೆನೆ ಭರತಂಗೆಱಗಿ ಲೋಕದಿಂ ನಗಿಸುವೆನೇ ॥ ೭೬

ಭರತಂ ಷಟ್ಖಂಡಭೂವಲ್ಲಭನೆನೆ ಸಿರಿಯುಂ ಗೆಂಟಱೊಳ್ ಕೇಳ್ದು ರಾಗಂ
ಬೆರಸಿರ್ಪನ್ನೆಸಾಲ್ಗುಂ ಕರೆದೊಡೆ ಬೆಸನೇನೆಂಬ ಜೀಯೆಂಬ ದೇವಂ।
ಬರಸೆಂಬಾಳೆಂಬ ದೈನ್ಯಕ್ಕೆಲವೊ ತನುವನಾನೊಡ್ಡುವಂತಾದಿದೇವಂ
ಪುರುದೇವಂ ದೇವದೇವಂ ಕುಡೆ ಪಡೆದ ನೆಲಕ್ಕಾರೊಳಂ ಪಂಥಮುಂಟೇ ॥

ಧರೆಯುಂ ಕುಡುವಂದೆನಗಂ
ಗುರು ತನಗಂ ರಾಜನಾಮಮುಮಂ ಕೊಟ್ಟೊಡೆ ನೋ ।
ಡಿರೆ ತನಗೀಗಳ್ ರಾಜಾ
ಧಿರಾಜನೆಂದಿಟ್ಟುಕೊಂಡನಡಕಿಲ್ಪೆಸರಂ ॥ ೭೮

ಚಕ್ರಂ ಪುಟ್ಟಿದೊಡೀಗಳ್
ಚಕ್ರೇಶ್ವರನೆಂಬ ಪೆಸರುಮಾಯ್ತಕ್ಕವು ತಾಂ ।
ಚಕ್ರೇಶನಾದೊಡಂ ತ
ನ್ನಾಕ್ರಮಣಮನೆನ್ನೊಳೇಕೆ ಕೆಮ್ಮನೆ ತೋರ್ಪಂ ॥ ೭೯

ದೊರೆಯಲ್ಲದಂಗೆ ನುಡಿವುದು
ಪುರುಳಿಲ್ಲದ ಮಾತನೆಮ್ಮೊಳಂ ನುಡಿವುದೆ ಪೇಳ್ ।
ಎರಲೆಗೆ ಪಾಡುವ ಗೋರಿಯು
ನರಣ್ಯದೊಳ್ ಮೃಗವಿರೋಧಿಗಂ ಪಾಡುವುದೇ ॥ ೮೦

ಪುರುತನಯರ್ ಭುಜಬಲಿಯುಂ
ಭರತನುಮೆನೆ ದೊರೆಗೆವಂದೊಡಾರಳವುಮನೀ ।
ಧರೆಯಱಿಯಲೊಡಂ ತೂಗಲ್
ಧರೆಗೆ ತುಲಾದಂಡಮಲ್ತೆ ಮದ್ಭುಜದಂಡಂ ॥ ೮೧

ವ॥ ಅದಲ್ಲದೆಯುಮುದಾರವೀರಚರಿತನಿರತಕದನಕರ್ಕಶಕ್ಷತ್ರಿಯಂಗೆ ವಿಪಕ್ಷಕ್ಷತ್ರಿಯಪರಾಕ್ರಮಾಕರ್ಣನೋದೀರ್ಣಕ್ರೋಧದೊಳ್ ಅಳೀಕಭ್ರುಕುಟಿಯುಂ ಅನರ್ಥಕಲಲಾಟತ್ರಿಪತಾಕೆಯುಂ ಅಪಾರ್ಥವಿಲೋಹಿತವಿಲೋಚನರುಚಿಯುಂ ನಿರರ್ಥಕನಿಷ್ಠುರೋಷ್ಠಪುಟಸಂದಂಶಮುಂ ನಿಷ್ಪ್ರಯೋಜನಸ್ವೇದಜಳೋದ್ಗಮಮುಂ ನಿಷ್ಪಂದನಾಸಾಸ್ಫುರಿತಮುಂ ನಿಷ್ಕಾರಣಕಾಯಕಂಪನಮುಂ ನಿರಾಲಂಬನವಾಗಾಡಂಬರಮುಂ ತಕ್ಕುದಲ್ತು,

ನೆಗಳ್ದೀಷಟ್ಖಂಡಭೂಮಂಡಲಮನನಿತುಮಂ ಗೆಲ್ದಖಂಡಪ್ರತಾಪಂ
ನೆಗಳ್ದಂತಾಱುಂ ಬಲಂಗಳ್ವೆರಸೊದವಿದ ಸಂಗ್ರಾಮಸಂರಂಭದಿಂದಂ ।
ಬಗೆಯಂ ಪ್ರಾಣಪ್ರಿಯಸ್ತ್ರೀಜನತನಯಧನವ್ರಾತದೊಳ್ ಮಾಡದಾತಾ
ಜಿಗೆ ಬಂದೊಡ್ಡಲ್ಕೆ ಪೇೞ್ಸಂಗರನಿಕಷದೊಳೆಮ್ಮಂದಮಂ ನೀನೆ ಕಾಣ್ಬೆ ॥

ವ॥ ಎಂದು ಮನುನರೇಂದ್ರವೃಂದಾರಕಶಿಖಂಡಮಂಡನಮಣಿಯೆನಿಸಿದ ಬಾಹುಬಲಿಕುಮಾರಂ ಭರತೇಶ್ವರಚಕ್ರವರ್ತಿಯ ದೂತನಂ ಪೋಗಲ್ವೇಳ್ದಾಗಳನೇಕರಾಜನ್ಯಕಮಕುಟಸಂಘಟ್ಟೋಚ್ಚಳಿತೋನ್ಮಣಿಮರೀಚಿಗಳ್ ವಿಳಯಾನಳವಿಸ್ಫುಲಿಂಗಂಗಳಂತೆ ದೆಸೆದೆಸೆಗೆ ಕೆದಱೆ,

ಕಿಸುಸಂಜೆವೆರಸು ಕತ್ತಲೆ
ಪಸರಿಸಿದಪ್ಪುದೆನಿಸಿ ಕಣ್ಣ ಕೆಂಪುಂ ಭ್ರುಕುಟಿ ।
ಪ್ರಸರಾಂಧಕಾರಮುಂ ದೆಸೆ
ದೆಸೆಗೆಸೆದುವು ಬಾಹುಬಲಿನೃಪಾಸ್ಥಾಯಿಕೆಯೊಳ್ ॥ ೮೩

ವ॥ ಅನ್ನೆಗಂ ಚಕ್ರವರ್ತಿಯ ದೂತಂ ಸಾಕೇತಪುರಮನೆಯ್ದೆವಂದಾಸ್ಥಾನಮಂಟಪದೊಳ್ ಇರ್ದ ಚಕ್ರವರ್ತಿಯಂ ಕಂಡು ಪೊಡೆವಟ್ಟು,

ನಿನಗೀಷಟ್ಖಂಡಭೂಮಂಡಲಮೆಱಗಿದುದೇಂ ಸಾಲದೇ ಬೇಡದುದ್ವೃ
ತ್ತನೊಳಿನ್ನೇನೆಂದು ದೇವರ್ಕಡೆಗಣಿಸಿರೆ ಸೌಂದರ್ಯಮಂ ಕಾದ ಪೆಂಪೇ ।
ವನಧಿದ್ವೀಪಾಂತರಾಳಕ್ಷಿತಿಯೊಳೆಸಗುವಾಕ್ಷೇಪಮಂ ಮಾಣ ನೀಂ ಕ್ರೋ
ಧನನಾಗಲ್ ನಿನ್ನ ತಮ್ಮಂ ನಿನಗೆಱಗನಿದಂ ನಂಬು ರಾಜಾಧಿರಾಜಾ ॥ ೮೪

ವ॥ ಅದಲ್ಲದೆಯುಂ ವಿಜಗೀಷುಬಳಾನಕಾನೀಕನಿನದಮನೆ ನಿಜಭುಜವಿಕ್ರಮೋತ್ಸವಕೋಳಾಹಳಮೆಂದುಂ ವಿದ್ವಿಷ್ಟಚಮೂಚಕ್ರಪಾಂಶುಪಟಳಮನೆ ನಿಜವಿಜಯಲಕ್ಷ್ಮೀಪರಿಣಯನೋತ್ಸವಪ್ರಾರಂಭಪಿಷ್ಟಾತಕಚೂರ್ಣಮೆಂದುಂ ವಿರೋಧಿಸಿಂಧುರಧ್ವಜಪಟಚ್ಛಾಯಾಪ್ರತಾನಮನೆ ನಿಜವೀರಪಟ್ಟಬಂಧೋತ್ಸವಸಮುಚ್ಛ್ರಿತಚ್ಛತ್ರಚ್ಛಾಯಾಮಂಡಳಮೆಂದುಂ ವಿಪಕ್ಷವಿಶಿಖಮೋಕ್ಷಹೂಂಕಾರಮನೆ ನಿಜವಿಜಯಲಕ್ಷ್ಮಿಯುದಗ್ರವೀರಗ್ರಹಸ್ತೋಭನಾಕ್ಷರಮೆಂದುಂ ಬಗೆವ ಬಾಹುಬಲಿಕುಮಾರಂ ವಿಜಗೀಷುವಿಜಯಯಾತ್ರಾಪಟಹರವಾಟೋಪನಿರ್ಭರಚರಿತಶ್ರವಣವಿವರನಾಗಿ ವಿಕ್ರಾಂತಕ್ಷತ್ರಚರಿತ್ರಂಗಳಂ ಕೇಳದವರ ಗಣನೆಯೊಳಂ ವಿರೋಧಿಧ್ವಜಿನೀಧೂಳೀಪಟಲಪಿಹಿತದೃಷ್ಟಿಗಳಾಗಿ ವೀರನರೇಂದ್ರಮಾರ್ಗಮಂ ಕಾಣದ ವಿದ್ವಿಷ್ಟರ ಸಭಾವನಿಯೊಳಂ ಅಹಿತಮತಂಗಜವಿಜಯಕದಳೀಕಾನನಬಹುಳಚ್ಛಾಯಾಚ್ಛನ್ನರಾಗಿ ಕುಳಕ್ರಮಾಯಾತಪ್ರತಾಪೋಷ್ಮಮಂ ಪತ್ತುವಿಡುವರಾತಿಗಳ ಸಂಖ್ಯೆಯೊಳಂ ವಿಪಕ್ಷಶರಾಸಾರಮೋಕ್ಷಹೂಂಕಾರಸ್ತಂಭನಾಕ್ಷರಸ್ತಂಭಿತಹೃದಯರಾಗಿ ರಾಜಪ್ರಸೂತವಿಜಯಯಶಶ್ಶರೀರಮಂ ಮೆಱೆವ ರಿಪುಗಳ ರೇಖೆಯೊಳಂ ಬಗೆಯದೆ ನಿಮ್ಮ ಬಗೆವ ಕಾರ್ಯಮಂ ಬಗೆಯಿಮೆಂದು ಬಿನ್ನಪಂಗೆಯ್ದಾಗಳ್,

ತುದಿಯೆಯ್ದಿತ್ತೆಮ್ಮ ವಿಶ್ವಕ್ಷಿತಿತಳಜಯಮಿಂತೆಮ್ಮ ದಾಯಾದನುಂ ಕೋ
ಪದಿನೆನ್ನೊಳ್ ಕಾದಲೆಂದುಬ್ಬರಿಸಿದ ಸಮರಾಟೋಪದಿಂ ನಿಂದೊಡಂ ಮಾ।
ಣ್ಬುದು ಸೂಟಿಲ್ಲೆತ್ತೆಮ್ಮ ಸಾಪತ್ನನ ಭುಜಬಲಮಂ ನೋಳ್ಪೆವೆಂದಾಗಳಾಸ್ಥಾ
ನದಿನೆರ್ದಂ ಚಕ್ರಿರಾಜನ್ಯಕಮಕುಟಮಣಿಪ್ರೋಜ್ಜ್ವಳದ್ವ್ಯೋಮಚಕ್ರಂ॥

ವ॥ ಆಗಳ್ ದೂತಾಳಾಪವಿಳಯಸಮೀರಪ್ರೇರಿತಪ್ರಳಯಜಳನಿಧಿಪ್ರ
ಧ್ವಾನಾನುಕಾರಿಯಾಗಿ,

ಭುವನೇಶಂ ಕ್ಷತ್ರಪುತ್ರಾಗ್ರಣಿಯ ಭರತನಕ್ಷೋಹಿಣೀವೀರಕಂಠೀ
ರವಸಂದೋಹಕ್ಕೆ ರೋಮಾಂಚಮನೆ ಕವಚಮಂ ಮಾಡುತುಂ ವೀರಪತ್ನೀ
ನಿವಹಕ್ಕಾನಂದಬಾಷ್ಪಾವಳಿಯನೆ ಕುಚದೊಳ್ ಹಾರಮಂ ಮಾಡುತುಂ ಭೂ
ಭುವನಾಂತರ್ಭಾಗಮಂ ಪರ್ಬಿದುದು ಸಮರಸನ್ನಾಹಭೇರೀನಿನಾದಂ ॥೮೬

ವ॥ ಆಸಮರಸನ್ನಾಹಭೇರೀ ನಿನಾದಮಂಭೋಭಾರಗಂಭೀರಾಂಭೋಧ
ರಸ್ತನಿತಬಹುಸ್ನಿಗ್ಧಂಗಳಪ್ಪ ಮದಸ್ತಂಬೇರಮಬೃಂಹಿತಂಗಳಿಂದಂ ಯುಗ
ಪದಾಸ್ಫಾಲಿತಾನೇಕದುಂದುಭಿಧ್ವನಿಮಧುರಗೀತಂಗಳಪ್ಪ ಹಯಹೇಷಿತಂಗ
ಳಿಂದಂ ಸಂದಣಿಸಿ ಪೂರ್ಣಪಯೋಣ್ಯಾರ್ಣವಘೋಷಮಂ ಗೆಲ್ದು ಪೆರ್ಚುವಂತೆ
ಪೆರ್ಚೆ ವಿಜಯಪರ್ವತಗಜೇಂದ್ರದ ಬೆಂಗೆ ವಂದು,

ಗಿರಿರಾಜೋದಗ್ರಸಿಂದೂರಿತಕರಟಿಘಟಾಟೋಪಮಂ ಕುಂಕುಮಾಂಭ
ಶ್ಛುರಿತಾಂಗೋತ್ತುಂಗವಲ್ಗತ್ತುರಗಬಲಮದೋದ್ದಾಮಮಂ ಚಿತ್ರನೇತ್ರಾಂ
ಬರನಾನಾಹೇತಿಹಸ್ತೋದ್ಭಟಭಟಪೃತನಾಜಾಳಮಂ ಚಿತ್ತದೊಳ್ ವೀ
ರರಸಂ ಕೈಗೆಣ್ಮಿ ಪೊಣ್ಮುತ್ತಿರೆ ನಿಜಬಲಮಂ ನೋಡಿದಂ ಸಾರ್ವಭೌಮಂ ॥

ವ॥ ಅಂತು ನೋಡಿ ಪಾದನಪುರಾಭಿಮುಖನಾಗಿ ನಡೆವಲ್ಲಿ,

ಪದಧೂಳೀಕ್ಷೋಭದಿಂ ದಿಗ್ಯುವತಿವದನಮಂ ಶ್ಯಾಮಳಂಮಾಡಿ ಮಾಣ್ದಿ
ರ್ದುದೆ ಕೋಪೋದ್ಭಿನ್ನಗಂಡಸ್ಥಳಕರಟಿಘಟಾವ್ಯಾಪನೀಲಾಂಬುದಾಟೋ।
ಪದಿನತ್ಯುಗ್ರಾಸ್ತ್ರಶಸ್ತ್ರಪ್ರಕರಕಿರಣಸಂಘಾತತೀವ್ರಾತಪೋದ್ಯೋ
ತದಿನರ್ಧಶ್ಯಾಮಳಂ ಮಾಡಿದುದು ದಿನಮುಮಂ ಕೂಡೆ ರಾಜೇಂದ್ರಸೈನ್ಯಂ ॥

ವ॥ ಅಂತು ಬಂದು,

ರಜಮುಂ ದಿಗ್ಧೂಮಮುಂ ಸಂದಣಿಸೆ ಪರುಷವಾತಾಹತಿಪ್ರೋಚ್ಛಳತ್ಸಾ
ಮಜಸೇನಾಕುಂಭಸಿಂದೂರಮುಮೊದವಿದ ದಿಗ್ದಾಹಮುಂ ಕೂಡೆ ಭೂರಿ।
ಧ್ವಜಿನೀಸಂಕ್ಷೋಭಮಾಕಂಪಮುಮಶುಭಮಹೀಕಂಪಮುಂ ತನ್ನೊಳೊಂದಾ
ಗೆ ಜಗಕ್ಕೇನಿಲ್ಲಿ ಪೇಳೊದಪುದೆನೆ ದೆಸೆ ಬರ್ಪಂತೆ ಬಂದೊಡ್ಡಿ ನಿಂದಂ ॥ ೮೯

ವ॥ ಅನ್ನೆಗಮಿತ್ತ ಬಾಹುಬಲಿಕುಮಾರನ ವಿಜಯಸೈನ್ಯದೊಳ್,

ಮಸೆಯಿಪ ಶಸ್ತ್ರಕೋಟಿ ಸಮಕಟ್ಟುವ ಸನ್ನಣಮುಟ್ಟಿಯಿಂದಮು
ರ್ಚಿಸುವ ತುರಂಗದಂತಿರಥಸಂಕುಳಮೇಱುವ ದರ್ಪಶಯ್ಯೆ ಪೂ।
ಜಿಸುವ ಜಿನೇಂದ್ರಬಿಂಬಮೆಸೆವುಗ್ರರಣಾನಕರೌದ್ರಘೋಷಮೆ
ರ್ವಸಕಮನುಂಟುಮಾಡಿದುದು ಪಂದೆಗಮಂದಿನ ವೀರಗೋಷ್ಠಿಯೊಳ್ ॥

ವ॥ ಆಗಳಾಬಾಹುಬಲಿಕುಮಾರನುಂ ಸಂಗ್ರಾಮರಂಗಾಗ್ರೇಸರನಾಗಲ್ಬಗೆದು ವಿಜಯಕನ್ಯಕಾಸ್ವಯಂವರೋತ್ಪಳಮಾಲಾನುಕಾರಿನಾರಾಚಂಗಳಿಂದಂ ವಿಜಯರಾಜಮಹಿಷೀಮಯೂರಾತಪತ್ರಶಂಕಾವಹಸಂಕುಳಂಗಳಿಂದಂ ವಿಜಯಲಕ್ಷ್ಮೀಕರವಳಯವಿಭ್ರಮಕರಚಕ್ರಂಗಳಿಂದಂ ತೀವಿದ ಸಿಬಿಗೆಯೊಳೆಸೆದು ವಿಜಯಾಂಗನಾಚರ್ಚನೋಚಿತಮೃಗಮದಮುಂ ನಿಜಭುಜವಿಜಯಲಕ್ಷ್ಮೀಪರಿರಂಭಣಪ್ರಕಟನದಕ್ಷದಕ್ಷಿಣವಿಷಾಣವಿನ್ಯಸ್ತಹಸ್ತಮುಂ ದಾನಪ್ರಮೋದವಾಚಾಳಷಟ್ಚರಣಚಾರಣಗಣೋಚ್ಚಾರಝುಂಕಾರಜಯಾಶೀರ್ಘೋಷಮುಮಪ್ಪ ವಿಜಯಗಜದ ಬೆಂಗೆವಂದು,

ಇರದೆಂಟುಂ ದಿಗ್ಗಜಂಗಳ್ ನೆಱೆದಿದಿರಿದಿರೊಳ್ ತಾಗೆಯುಂ ಮಂದರಕ್ಷ್ಮಾ
ಧರದೊಳ್ ಕೈಯ್ಗೂಡಿ ಗೋತ್ರಾದ್ರಿಗಳೆ ಗಜಘಟಾರೂಪದಿಂ ತಾಗೆಯುಂ ಮ।
ತ್ಕರಿತಾಂಗಲ್ ತಾನೆ ಸಾಲ್ಗುಂ ಮನುಜಗಜಘಟಾಬಂಧಮೋ ಬಂಧಮೆಂಬೊಂ
ದು ರಣೋತ್ಸಾಹಂ ಮನಕ್ಕುಬ್ಬರಿಸಿರೆ ಸಮರೋತ್ಸಾಹಸಂಪನ್ನನಾದಂ ॥

ವ॥ ಅಂತು ಕದನಲಕ್ಷ್ಮೀಕನ್ಯಕಾಪ್ರದಾನಪ್ರಥಮಪ್ರಸರದೋಂಕಾರಶಂಕಾಕಾರವಿಜಯಪ್ರಸ್ಥಾನನಾಂದೀಸಮಯನಿನದಾನಂದಿತದಿಕ್ಪಾಳಚಕ್ರನುಂ

ನಿಜವಿಜಯಶ್ರೀಪರಿವಾರಪರಿಣಯನೋತ್ಸವಾಲೋಕನಕುತೂಹಲಪ್ರಚಲಿತಸಮಸ್ತಸಾಮಂತಚಕ್ರನುಂ, ನಿಷ್ಕಂಟಕೀಕೃತಾಶೇಷಜಗದಕಾಂಡೋತ್ಥಿತಪ್ರಚಣ್ಡವಿಪಕ್ಷೋತ್ಪಾತಪ್ರಶಮನಶಾನ್ತ್ಯುದಕಧಾರಾಕಾರತತ್ಕ್ಷಣಕ್ಷರದಜಸ್ರದಾನಪ್ರಮೋದಜಳಧಾರಾಭಿರಾಮಕರಟಿಘಟಾಚಕ್ರನುಂ ನಿಜವಿಜಯಪ್ರಯಾಣಪ್ರಾರಂಭಸಂಭೂತೋತ್ಸವಭೂದೇವತಾರ್ಯವಿಕೀರ್ಯಮಾಣಪಿಷ್ಟಾತಕಪಾಂಶುಪಟಲವಿಭ್ರಮನುಂ ಕರಿತುರಗಖುರಶಿಖರೋತ್ಖಾತಧೂಳೀಸ್ಥಳೀಕೃತಗಗನಚಕ್ರನುಂ, ಜಗತ್ಕಂಪಿತಾರಾತಿದರ್ಪತ್ವರಿತವಿಧ್ವಂಸನೋದ್ಭೂತಭಟಾನೀಕಾರಾತಿಭೂಕಂಪಶಂಕಾವಹಮಹಾಪದಾತಿಪಾದಕ್ಷೋಭಾಂದೋಳಿತಮೇದಿನೀಚಕ್ರನುಮಾಗಿ ಚಕ್ರವರ್ತಿಯ ಬಲಮನಿದಿರ್ಚಲೆಂದು ಮೇಲೆತ್ತಿ ಬರ್ಪಾಗಳ್,

ನರಪಾಳವ್ರಜವರ್ಮಜಾಳವಿಳಸನ್ಮಾಣಿಕ್ಯಮಾಳಾಂಶುಪಿಂ
ಜರಿತಂ ಪ್ರೇಂಖಳಶಂಖವಾಜಿವಿಳಸದ್ವೀಚೀಚಯಂ ಮತ್ತಕುಂ ।
ಜರಕುಂಭೀರಕುಳಂ ಚಳತ್ಕದಳಿಕಾಮಾಳಂ ಝಷಾನೀಕಮು
ಚ್ಚರಿಯಂ ಬಾಹುಬಲೀಶ್ವರಂಗೆ ಪಡೆದತ್ತಾತ್ಮೀಯಸೈನ್ಯಾರ್ಣವಂ ॥ ೯೦

ವ॥ ಅಂತು ಯುದ್ಧಭೂಮಿಗಭಿಮುಖನಾಗಿ ಬರ್ಪಾಗಳ್,

ಕದನಕ್ರೀಡಾರಸಪ್ರಸ್ಫುಟಮುದಿತಭಟಾವಿರ್ಭವತ್ಸಿಂಹನಾದೋ
ನ್ಮದಮುದ್ದಾಮಾಶ್ವಹೇಷಾವಿಗಳಿತನಿಗಳಂ ದಂತಿಸಂಘಟ್ಟಘಂಟಾ ।
ರುದಿತಸ್ವಚ್ಛಂದಮಾಯೋಧನಪಟಹರವೋಜ್ಜೃಂಭಿತಂ ಶ್ರೋತ್ರಮಂ ಮು
ಟ್ಟಿದುದೆತ್ತಂ ರಾಜರಾಜಪ್ರಬಳಬಲಪಯೋರಾಶಿಗಂಭೀರನಾದಂ ॥ ೯೧

ವ॥ ಆಗಳಿದು ವಿಪಕ್ಷಬಲಮೆಂದಱಿದು ಕ್ಷುಭಿತಚಿತ್ತನಾಗಿ ಬಾಹುಬಲಿಕುಮಾರನುಭಯಪಾರ್ಶ್ವಾನದ್ಧಶರಧಿಸಾರಿಕಾಮಾದ್ಯೋತಬದ್ಧಗೋಧಾಂಗುಳಿತ್ರಾಣಾಯೋಧಸಿಂಧುರಘಟಾಸಂಘಟ್ಟಮುಂ ನಿಬಿಡನಿಪೀಡಿತಪ್ರಾಸಮುಷ್ಟಿದುರ್ಧರಾಶ್ವಾರೋಹಕತುರಂಗಬಲಾವಗಾಢಮುಂ ವಿವಿಧಾಯುಧಕರಾರಭಟೀರಭಸೋದ್ಭಟಸುಭಟವ್ಯಾಕೀರ್ಣಮುಮುದ್ಧೂಯಮಾನಪ್ರಕೀರ್ಣಚಾಪಲಕ್ಷಿತಕ್ಷತ್ರಪುತ್ರನಿರಂತರಮುಮಪ್ಪ ನಿಜಬಲಂಬೆರಸು ಭರತೇಶ್ವರಚಕ್ರವರ್ತಿಯ ಸೈನ್ಯಕ್ಕೆ ಮುಟ್ಟುವರೆ,

ಕಿವಿಯಂ ಮುಟ್ಟಿತ್ತು ಮುನ್ನಂ ವಿವಿಧಲಯಗತಿಪ್ರೋಚ್ಛಳತ್ಕಾಹಳಾಘೋ
ರವಮಲ್ಲಿಂ ಪಿಂದೆ ಧೂಳೀಪಟಲಪಿಹಿತಕೇತುದ್ವಿಪಾನೀಕಘಂಟಾ ।
ನಿವಹವ್ಯಾಪಾರಮಲ್ಲಿಂ ಬಳಿಕ ಹಯಖುರಧ್ವಾನಮಲ್ಲಿಂ ಬಳಿಕಾಳ್ ಕಾ
ಹವರಾಗೋತ್ಸಾಹಚಂಚದ್ಭಟಚಯಚರಣಾಸ್ಫಾಲಿತಂ ಕ್ಷೋಣಿಘೋಷಂ ॥

ವ॥ ಅಂತುಭಯಬಲದ ಸೆರೆಗೋಲ್ಗಳೊಂದೊಂದಂ ಮುಟ್ಟುವಿನಮತ್ತ ರಾಜಾಧಿರಾಜನುಮಿತ್ತ ಯುವರಾಜನುಂ ನಿಂದಾಗಳ್,

ರಸೆ ಪತ್ತಿತ್ತೆತ್ತಮಾಕಾಶದೊಳನಿಲಪಥಂ ಧಾರಿಣೀಚಕ್ರದೊಳ್ ಕಾ
ಳಸೆಗೊಂಡತ್ತೆಂಬಿನಂ ಮಂದಯಿಸಿ ನಿಜಪರಾಲೋಕನವ್ಯಗ್ರದೃಷ್ಟಿ ।
ಪ್ರಸರಕ್ಕೆಲ್ಲಿತ್ತು ಮಾರ್ಗಂ ಕುಲಿಶನಿಭಶಿಖಾಭೇದಿಬಾಣಂಗಳುಂ ಭೇ
ದಿಸವೆಂಬಂತಾಯ್ತು ತಿಕ್ಷೋಭದಿನುಭಯಬಲಕ್ಷೋಭಧೂಳೀಪ್ರತಾನಂ ॥

ವ॥ ಅಂತು ನೆಗೆದ ಧೂಳೀಪ್ರತಾನಮನನ್ಯೋನ್ಯಘಂಟಾಟಂಕಾರಶ್ರವಣದ್ವಿಗುಣಿತರಣರಭಸಕ್ಷೋಭಮಹಾಹವಸಂಭೂತಭೂರಿಮದಾಂಭಃಪ್ರವಾಹಸಹಸ್ರಂಗಳಿಂದಮಿತರೇತರಹೇಷಾರವಾಕರ್ಣನೋದೀರ್ಣರೋಷಹಯಹೂಂಕಾರನಿಷ್ಠುರದಶನಗ್ರಾಹಖಣಖಣಾಯಿತಖಲೀನಸಂಘಟ್ಟಸ್ಯಂದಮಾನಫೇನಸಲಿಲಸ್ರೋತಶ್ಶತಂಗಳಿಂದಮಾಕುಳಾಕುಳನಯನರಾಜತನೂಜಸಮಾಜವದನಾಭಿಮುಖಚಟುಳಸಂಚಾರ್ಯಮಾಣಚಾರುಚಾಮರನಿಚಯವಿಚಳದವಿರಳಾನಿಳಂಗಳಿಂದಂ ವಿರಳವಿರಳಮಾದಾಗಳ್,

ಬಲಧೂಳೀವ್ರಾತಮೇಘಪ್ರಕರತಿಮಿರದೊಳ್ ಶಸ್ತ್ರಜಾಳಾಂಶುವಿದ್ಯು
ತ್ಸ್ಖಳವಿದ್ಯೋತಂಗಳಿಂದಂ ಬಲನಿವಹರಜಸ್ಸಂತತಿಧ್ವಾಂತದೊಳ್ ಭೂ ।
ತಳನಾಥಾನೀಕವರ್ಮೋತ್ಕರಖಚಿತಮಣಿಶ್ರೇಣಿರತ್ನಪ್ರದೀಪಾ
ವಳಿದೀಪ್ತಿವ್ರಾತದಿಂದಂ ದಿಟಮುಭಯಬಲಂ ಕಂಡುದೊಂದೊಂದನಾಗಳ್ ॥

ರೋದೋಂತಂ ಕೂಡೆ ರತ್ನೋಜ್ಜ್ವಳಗಿರಿಕುಳದಿಂ ತೂಂತನಿಟ್ಟಂತೆ ನೀಲಾಂ
ಭೋದಂಗಳ್ ಕೂಡೆ ವಿದ್ಯುದ್ವಳಯಮನೊಳಕೊಂಡಂತೆ ಪಾಠೀನಚಕ್ರ
ಕ್ಷೋದಪ್ರಕ್ಷೋಭಿತಂ ವಾರಿಧಿಯೆ ಗಗನಮಂ ಮುಟ್ಟೆ ನಿಂದಂತಗುರ್ವಿಂ
ದಾದಂ ಚೆಲ್ವಾಯ್ತು ಚಕ್ರಿದ್ವಿಪಘಟೆ ನಿಶಿತಾಸ್ತ್ರಾಂಶುಜಾಳಾವಲೀಢಂ ॥ ೯೭

ವ॥ ಅಂತೊಡ್ಡಿದ ಗಜಘಟಾಟೋಪದ ನಡುವೆ,

ಘನವರ್ಮಾರ್ಗವ್ಯಾಪಿ ಜೈತ್ರಧ್ವಜವಿಜಯಗಜಾರೂಢನಂಗ್ರಾರಿವಿತ್ರಾ
ಸನಸಂಗ್ರಾಮಾನಕೌಘಧ್ವನಿಬಧಿರಿತದಿಕ್ಚಕ್ರನುದ್ಧ್ವಂಶವಿಂಧ್ಯಾ।
ವನಿಭೃನ್ಮೂರ್ಧಾಧಿರೂಢದ್ವಿಪಚಯದ ರವಂ ರಾಜಕಂಠೀರವಂ ತಾ
ನೆನೆ ವೀರಕ್ಷತ್ರಚೂಡಾಮಣಿ ಭರತನೃಪಂ ನೂಂಕಲುದ್ಯುಕ್ತನಾದಂ ॥ ೯೮

ವ॥ ಅನ್ನೆಗಮಿತ್ತಂ ಯುವರಾಜನಾವಿಜಿಗೀಷುಬಲಾನಕಾನೀಕನಿನದಮನೆ ನಿಜಭುಜವಿಕ್ರಮೋತ್ಸವಕೋಳಾಹಳಮೆಂದುಂ, ವಿದ್ವಿಟ್ಚಮೂಚಕ್ರಪಾಂಶುಪಟಲಮನೆ ನಿಜವಿಜಯಲಕ್ಷ್ಮೀಪರಿಣಯನೋತ್ಸವಪ್ರಾರಂಭಪಿಷ್ಟಾತಕಚೂರ್ಣಮೆಂದುಂ, ವಿರೋಧಿಸಿಂಧುರಧ್ವಜಪಟಲಛ್ಛಾಯಾಪ್ರತಾನಮನೆ ನಿಜವೀರಪಟ್ಟಬದ್ಧೋತ್ಸವಸಮುಚ್ಛ್ರಿತಚ್ಛತ್ರಚ್ಛಾಯಾಮಂಡಳಮೆಂದುಂ, ವಿಪಕ್ಷವಿಶಿಖಮೋಕ್ಷಟಂಕಾರಮನೆ ಜಗದುದಗ್ರನಿಜವೀರಗ್ರಹಸ್ತೋಭನಾಕ್ಷರಮೆಂದುಂ, ಬಗೆದಭಿನಿಷಾದಿಯುಮಂ ಪಶ್ಚಿಮನಿಷಾದಿಯುಮಂ ನಿಜವಿಜಯಸಿಂಧುರಮುಮಂ ತಿಣ್ಣಂ ನೂಂಕಲುಮವುಂಕಲುಂ ಬೆಸೆಸಿ ವಿಜಯಲಕ್ಷ್ಮೀವಿಲಾಸಿನೀಭ್ರೂಲತಾವಿಭ್ರಮಾನುಕಾರಿಯೆನಿಪುದಂ ಮಧ್ಯಮನಿಷಾದಿಯ ಕೈಯಂ ಕೊಂಡು,

ವನಧಿದ್ವೀಪಸಮೀಪವರ್ತಿವಸುಧಾಂತರ್ವರ್ತಿಯಾಗಿರ್ದರಾ
ತಿನಿಕಾಯಕ್ಕಿದು ಯಾಮಿನೀಸಮುದಿತಂ ದೇವೇಂದ್ರಚಾಪಂ ದಲೆಂ ।
ಬಿನೆಗಂ ಬಾಹುಬಲೀಶನೇಱಿಸಿದನಾನಮ್ರಾಟನೀನಾದಸಂ
ಜನಿತಾರಾತಿಕುಲಾಂಗನಾಜನಮನಸ್ಸಂತಾಪಮಂ ಚಾಪಮಂ ॥ ೯೯

ವ॥ ಅಪ್ರಸ್ತಾವದೊಳ್,

ಇಸಲೆಂದಿರ್ದ ಧನುರ್ಧರ್ಲಂ ಪೊಳೆವ ಬಾಳುಳ್ಳಂಗಳಂ ಪೋಲೆ ಪಾ
ಯಿಸಲೆಂದಿರ್ದಳಮಂ ಪೊದಪ್ಪಿಸೆವ ಚಕ್ರಾರಾವಮೋರಂತೆ ಚೋ।
ದಿಸಲೆಂದಿರ್ದ ರಥಂ ಕನಲ್ವ ಮುಳಿಸಿಂ ಮಾರಾನಲೆಂದಿರ್ದ ಖ
ಳ್ಗಸಮಂ ತೊರ್ವೆಯೆ ನೂಂಕಲಿರ್ದ ಘಟೆ ನೋಟಕ್ಕೇನಗುರ್ವಾದುದೋ

ವ॥ ಆಗಳುಭಯಬಲಮನಿತ್ತುಮುಖ್ಯರಿವರಿರ್ಬರರಸುಗಳಪ್ಪೊಡೆ ಚರಮದೇಹಧಾರಿಗಳವರ ಯುದ್ಧಮೆಂಬುದತಿಕ್ರೂರಗ್ರಹಯುದ್ಧದಂತೆ ಸಕಳಪ್ರ

ಜಾವಿನಾಶಕರಮಲ್ಲದೆ ಪೆಱತಲ್ತು ; ಚತುರಂಗಬಲಯುದ್ಧದೊಳಲ್ಲದೆ ಗೆಲ್ಲ ಸೋಲಮೆಂಬುದಿಲ್ಲ ; ಸಮಸ್ತಜನಸಂಹರಣಕಾರಣಮಪ್ಪ ರಣದೊಳೇವಂ ದಪ್ಪುದೆಂದು ಧರ್ಮಯುದ್ಧಮನೆ ತಮ್ಮೊಳ್ ಸಮಕಟ್ಟಿ ಮುನ್ನಂ ಭರತೇಶ್ವರ ಚಕ್ರವರ್ತಿಯಲ್ಲಿಗೆ ವಂದು,

ಜಯಮಂ ಕೈಕೊಳ್ವುದು ದೃ
ಷ್ಟಿಯುದ್ಧಜಳಯುದ್ಧಮಲ್ಲಯುದ್ಧದೊಳ್ ಜನ ।
ಕ್ಷಯಕರಣದೊಳೇಂ ಪಾಪಮು
ಮಯಶಮುಮಪ್ಪನಿತೆ ದೇವ ಕಡೆಗಣಿಪುದಿದಂ ॥ ೧೦೧

ಉಱಿವುದು ಭುಜಬಲದಳವಂ
ಘೞಿಲನೆ ಕೊಳ್ ಹೀನಬಲನನಧಿಕಬಲಂ ತೊ ।
ತ್ತುಱದುಳಿದನೆಂಬ ಲೋಕದ
ಪೞಿ ಪೊರ್ದದೆ ಮಾಣೆ ಧರ್ಮಯುದ್ಧದೊಳೆಸಗಿಂ ॥ ೧೦೨

ವ॥ ಎನೆ ಭರತೇಶ್ವರಚಕ್ರವರ್ತಿಯಿಂತಾದೊಡೆಮಗೆ ಬಾಹುಬಲಿಯ ಸಮರಸಂಘಟ್ಟದೋಹಳಮಿದು ದರಿದ್ರಂಗೆ ಹೀನಗರ್ಭದೋಹಳದಂತಾದುದೆಂದು ರಾಜ್ಯಲಕ್ಷ್ಮೀಲೀಲಾಲಂಬನಮೆನಿಸಿದ ಬಿಸುಗೆಯ ಮತ್ತಾಲಂಬನಮನವಳಂಬಿಸಿ ಸಿಂಧುರಸ್ಕಂಧಪೀಠದೊಳ್ ಸುಖಾಸೀನನಾಗಿರ್ದಾಗಳ್, ಬಾಹುಬಲಿಕುಮಾರನಲ್ಲಿಗೆ ಮಂತ್ರಿಗಳ್ ಬಂದು ಪೂರ್ವೋಕ್ತಕ್ರಮದೊಳ್ ಧರ್ಮಯುದ್ಧವ್ಯತಿಕರಮಂ ಬಿನ್ನಪಂಗೆಯ್ದಾಗಳ್,

ಎನ್ನ ಚತುರಂಗಬಲಮನಿ
ದನ್ನರರಾಂಪನ್ನರೆಂಬ ನಿಮ್ಮರಸನ ಗ ।
ರ್ವೋನ್ನತಿಯುಮುಡುಕುಮನಿನಿಸಾ
ನು ನೋಡಿಂ ಧರ್ಮಯುದ್ಧಮಕ್ಕೆಮ ಬಱಿಯಂ ॥ ೧೦೩

ವ॥ ಎಂದು ನಿಜಭುಜದಂಡೋಚ್ಚಂಡಚಾಪಟಂಕಾರಮಂ ಭರತರಾಜಸೈನ್ಯಕ್ಕೆ ಕುಪಿತಕೃತಾಂತಹೂಂಕಾರಶಂಕಾವಹಂ ಮಾಡಲ್ಪಡೆಯುದೆಯುಂ ಅನ್ಯದುರ್ಧರನಿಜಧನುರ್ದಂಡಮಂ ತದ್ಧ್ವಜಿನಿಗೆ ಕೋಪಕುಟಿಲದಕ್ಷಿಣದಿಕ್ಪಾಲಭ್ರುಕುಟೀವಿಭ್ರಮಮಂ ಮಾಡಲ್ಪಡೆಯುದೆಯುಂ ಅನವರತಪ್ರಮು

ಚ್ಯವಮಾನಪ್ರಚುರನಿಜನಾರಾಚರಾಜಿಯಿಂದಮವಿರಳಮದಜಳತೈಲಪಾಕ ದುರಾಲೋಕಂಗಳಪ್ಪ ತದ್ಬಲಕರಟಿಘಟಂಗಳನಲ್ಪತುಚ್ಛಚ್ಛಿದ್ರಂಗಳ್ಮಾ ಡಲ್ಪಡೆಯದೆಯುಂ, ಆಕರ್ಣಕೃಷ್ಟೋತ್ಸೃಷ್ಟನಿಜವಿಕೀರ್ಣಟಂಕಂಗಳಿಂದಂ ತತ್ಪತಾಕಿನೀಕುಂಜರಶಿರಶ್ಶಿಳಾಪಟ್ಟಕಂಗಳನಿರ್ಬಗಿಮಾಡಲ್ಪಡೆಯದೆಯುಂ, ನಿಜವಿಜಯಗಜಕರೋನ್ಮುಕ್ತಂಗಳಪ್ಪ ಮುಕ್ತಾಮುಕ್ತವಿನಿರ್ದಳಿತವೀರ ಯೋಧರ ರುಧಿರವಾರಾಶೀಕರಂಗಳನುದಗ್ರಕೋಪಾನಳನನಾಱಿಸಲ್ಪಡೆ ಯದೆಯುಂ, ಈಷದ್ವಿಷಣ್ಣವದನನಾಗಿರ್ದ ಬಾಹುಬಲಿಕುಮಾರನಂ ಮ ನ್ತ್ರಿಪುಂಗವರ್ ನೋಡಿ,

ಬಿಸುಡುವುದಸದಾಗ್ರಹಮಂ
ಪ್ರಸನ್ನಗಂಭೀರಚಿತ್ತದಿಂದಿದನವಧಾ।
ರಿಸುವುದು ಯುವರಾಜ ಮನಂ
ಬಸದೊರ್ವಗೆ ಸಲಿಪುದೆಮ್ಮ ಮುದುಗಣ್ತನಮಂ ॥ ೧೦೪

ವ॥ ಎಂದು ನುಡಿದೊಡಂಬಡಿಸಿ ಧರ್ಮಯುದ್ಧಮನುಭಯಬಲಂಗಳೊ ಳವಮಾನಂದಭೇರಿಯಂ ಪೊಯಿಸಿ ಘೋಷಿಸಲ್ವೇೞ್ದು ಬಾಹುಬಲಿಕುಮಾ ರನ ಭರತೇಶ್ವರನ ಪಕ್ಷದ ರಾಜಲೋಕಮನೆರಡುಂ ದೆಸೆಯೊಳಂ ಮಧ್ಯ ಸ್ಥರಾಗಿ ಮಿಡುಕದೆ ನೋಡುತ್ತಿರ್ಪಂತು ನಿಯಮಿಸಿದಾಗಳಿರ್ಬರುಂ ನೀಲ ನಿಷಧಗಿರಿಗಳೊಂದೊಂದಱೊಳ್ ಬಂದು ಪೊಣರ್ದು ನಿಲ್ವಂತೆ ನಿಂದೊರ್ವ ರೊರ್ವರೆಮೆಯಿಕ್ಕದೆ ನೋಡುವಲ್ಲಿ,

ಲಲಿತಮುಖಸರಸಿಜಂ ನಿ
ಶ್ಚಳಪಕ್ಷ್ಮಂ ಸ್ತಿಮಿತತಾರಕಂ ಭುಜಬಲಿ ಕ।
ಣ್ಗೊಳಿ ತವೆ ಪೀರ್ವವೊಲೇ ನಿ
ಶ್ಚಳತನು ನಡೆನೋಡೆ ಭರತರಾಜಂ ಸೋಲ್ತಂ ॥ ೧೦೫

ವ॥ ಅಂತು ಬಾಹುಬಲಿತೇಜಃಪುಂಜಮಂ ಕಣ್ಗೊಳುಳ್ಕುವಂತೆ ಸೈರಿಸದೆ ಮೆಯಿಕ್ಕಿ ದೃಷ್ಟಿಯುದ್ಧದೊಳ್ ಸೋಲೆ ಮತ್ತಮಿರ್ವರುಂ ಬಂದು,

ಕರಿಯೂಥಪತಿಗಳಿರಡುಂ
ಸರಸೀಜಳಮಂ ವಿಳಾಸದಿಂ ಪುಗುವವೊಲಾ।

ದರದಿಂದೆ ಪೊಕ್ಕು ತುಳುಂಕಿದ
ರರವಿಂದರಜಃಪಿಶಂಗಿತಾಭಿಷ್ಟೋದಕವಂ ‖ ೧೦೬

ಭರತನಮುಖದೊಳ್ ಪರ್ವಿದ
ಖರಕೋಪಾನಳನನೆಯ್ದೆ ನಂದಿಸುವವೊಲಾ ।
ಮರಕತವರ್ಣಂ ಕರಿಕರ
ಪರಿಘದಿನೊಡನೊಡನೆ ತುಳುಂಕಿದಂ ತಿಳಿನೀರಂ ‖ ೧೦೭

ವ॥ ಭರತೇಶ್ವರಂ ಪಂಚಶತಶರಾಸನೋತ್ಸೇಧನಪ್ಪುದಱಿಂ ಪಂಚವಿಂಶತ್ಯುತ್ತರಪಂಚಶತಶರಾಸನೋತ್ಸೇಧನಪ್ಪ ಬಾಹುಬಲಿಕುಮಾರನ ಮೇಗೆ,

ಭರದಿಂದಂ ತುಳುಂಕಿದ ನೀ
ರುರದೊಳ್ ಹಾರಾಂಶುರುಚಿಯುನಿರ್ಝರಿಗೆಗೊಳೆ ಮ ।
ರ್ಧರಜಳಯುದ್ಧಮುಮಾದಮೆ
ಪರಿಭವಮಂ ಚಕ್ರವರ್ತಿಗಿತ್ತತ್ತಾಗಳ್ ‖ ೧೦೮

ವ॥ ಅಂತು ಬಾಹುಬಲಿಯ ಸುರಕರಿಕರಾನುಕಾರಿಯಪ್ಪ ಬಾಹುಗಳಿಂದಂ ತುಳ್ಕಿದ ನೀರ್ಗೆ ಮೊಗಮನೊಡ್ಡಿ ಮೊಗಂ ಸೋಲ್ವುದುಂ, ಕುಮಾರಂಗೆ ಘೋಷಿಸುವ ಜಯಘೋಷಣೆಯುಂ ಕೇಳಲಾಱದೆ ಮಣಿಮಯಕಿರೀಟೋದಗ್ರವಿಸ್ಫುರಿತಸಂಚಳಿಕಾಕನಕಾಚಳಮನೆ ಪೋಲ್ತು ಮಲ್ಲಯುದ್ಧದೊಳ್ ಬಂದು ಪೊಣರ್ದರ್,

ಮರಕತಮಣಿಶೈಲಮನನು
ಕರಿಸುವ ಭುಜಬಲಿಯೊಳರದೆ ಪೊಣರ್ವುದುಮಾಗಳ್ ।
ಸುರವಿದ್ಯಾಧರನರಬಲ
ಮೆರಡುಂ ದೆಸೆಯೊಳ್ ತೆರಳ್ದು ನೋಡಿತ್ತೆತ್ತಂ ‖ ೧೦೯

ಕರಣಂಗಳ್ ಗಾಯಂಗಳ
ಪರಿಣತೆಯುಂ ಮೆಱೆದು ಪೊಣರ್ದರ್ ಸಂದೊಂದೆಡೆಯೊಳ್ ।
ಭರತನನವಯವದೊಳ್ ಮಣಿ
ಕಿರೀಟರುಚಿ ಬೆಳಗೆ ದೆಸೆಗೆ ಬೀಸಿದನಾಗಳ್ ‖ ೧೧೦

ಕನಕಾಚಳಮಂ ಪೊತ್ತುದು
ಘನಮರಕತಶೈಲಮೆನಿಸಿ ಭುಜಬಲಿ ಸಕಳಾ ।
ವನಿತಳವಲ್ಲಭನಂ ಭೋಂ
ಕೆನೆತ್ತಿ ಪೊತ್ತಿರ್ದನಿಕ್ಕಲೊಲ್ಲದೆ ನೆಲದೊಳ್ ॥ ೧೧೧

ಭರತಾವನೀಶ್ವರಂ ಗುರು
ಪಿರಿಯಣ್ಣಂ ಚಕ್ರವರ್ತಿ ಮಹಿಮಾಕರನೀ ।
ದೊರೆಯನುಮಳವಟಿಯೆ ವಸುಂ
ಧರೆಯೊಳ್ ತಂದಿಕ್ಕಿ ಭಂಗಮಂ ಮಾಡುವೆನೇ ॥ ೧೧೨

ಎಂದೊಯ್ಯನಿೞಿಪೆ ನೆಲದೊಳ್
ದುಂದುಭಿರವದೊಡನೆ ವಿಜಯಘೋಷಣೆ ನೆಗೞ್ದ ।
ತ್ತಂದು ಭುಜಬಲಿಯ ಬಲದೊಳ್
ಕುಂದು ಕರಂ ಪಿಱಿದುಮಾಯ್ತು ಭರತನ ಬಲದೊಳ್ ॥ ೧೧೩

ಚರಮತನುಸಾರ್ವಭೌಮಂ
ಪುರುಪರಮೇಶ್ವರತನೂಜನಂತತಿಭಂಗಂ ।
ದೊರೆಕೊಂಡುದಿಂದು ಭರತೇ
ಶ್ವರಂಗೆ ಹುಂಡಾವಸರ್ಪಿಣೀವಿಳಸನದಿಂ ॥ ೧೧೪

ನೆರೆದೆರಡುಂ ಬಲದರಸುಗ
ಳರೆ ಪರಿಭವಮಂತು ತನಗೆ ಬರೆ ಮುಳಿಸಿನ ದ ।
ಳ್ಳುರಿಗಳನುಗುೞುತ್ತುಂ ಚ
ಕ್ರರತ್ನಮಂ ಬಗೆದು ಬೆಸಸಿದಂ ಭರತೇಶಂ ॥ ೧೧೫

ವ॥ ಆಗಳಾಪುರುಪರಮೇಶ್ವರತನೂಭವರ ಯುದ್ಧಾಡಂಬರೋಪಸರ್ಗದೊಳಮಾಕುಳವ್ಯಾಕುಳರಾಗಿ ತತ್ಪ್ರಶಮನಪ್ರತೀಕಾರಮಾಗೆ ನಾಕಲೋಕಸೌಂದರಿಯರೊಡನೆ,

ಅನಿಮೇಷರ್ ನೂತನಪ್ರಸ್ತುತಸುರಭಿಸುಧಾಕ್ಷೀರಧಾರಾಭಿಷೇಕಾ
ರ್ಚನೆಯಂ ಸದ್ಯಸ್ತನಾಖಂಡಳವನಸುಮನೋಮಾಲಿಕಾಲಂಬಲೀಲಾ ।
ರ್ಚನೆಯಂ ಪ್ರತ್ಯಗ್ರಚಿಂತಾಮಣಿಮಯರಚನಾಶ್ಚರ್ಯನಿಶ್ಶೇಷಭೂಷಾ
ರ್ಚನೆಯಂ ಸರ್ವಜ್ಞಬಿಂಬಾವಳಿಗೆಪರಸಿದರ್ ಮಸ್ತಕನ್ಯಸ್ತಹಸ್ತರ್ ॥ ೧೧೬

ವ॥ ಅಪ್ರಸ್ತಾವದೊಳ್,

ಬೆಸಸಿದೊಡದು ಮಾರ್ಕೊಳ್ಳದೆ
ಬೆಸನಂ ಬಲವಂದು ಬಾಹುಬಲಿಯುನಣಂ ಭೇ।
ದಿಸಲಾಱದುದಱಿಸಿರ್ದುದು
ಮಸುಳ್ದಿಸಕಂಗೆಟ್ಟು ಬಲದ ಮುಯ್ಪಿನ ಕೆಲದೊಳ್॥ ೧೧೭

ವ॥ ಆಗಳ್,

ಧರೆಯುಂ ಪರ್ಬಿರ್ದುದೀಬಾಹುಬಲಿನೃಪಯಶೋದುಂದುಭಿಧ್ವಾನವೆಂಬಂ
ತಿರೆ ದೇವಾನೀಕಿನೀದುಂದುಭಿರವಮಮರೀವೃಂದಮಾಂಗಲ್ಯಗೇಯ।
ಸ್ವರದೊಳ್ ಕೈಗೂಡಿ ಪೊಣ್ಮುತ್ತಿರೆಮುದಿತಸುರಾನಂದಬಾಷ್ಪೋದಬಿಂದೂ
ತ್ಕರಮೆಂಬಂತಾಗೆ ತಂದತ್ತರಲ ಮಳೆಗಳಂ ಪುಷ್ಪಮೇಘಪ್ರತಾನಂ॥ ೧೧೮

ತನಗಲ್ಲದುದಂ ಮಾಡಿದ
ನಿನಸಂ ಚಕ್ರೇಶನೆಂಬ ಕುಲವೃದ್ಧರ ಭೂ।
ವನಿತಾಧೀಶರ ನುಡಿಗ
ಳ್ಗೆ ನಾಣ್ಚಿದಂ ಭರತರಾಜನವನತಮುಕುಟಂ॥ ೧೧೯

ಬಾಹುಬಲಿ ತನ್ನ ದಕ್ಷಿಣ
ಬಾಹುವ ಕೆಲದಲ್ಲಿ ನಿಂದ ಚಕ್ರಮನಾಗಳ್।
ಸಾಹಸರಸಿಕಂ ಕಂಡೀ
ಸಾಹಸಮಂ ನೆಗೞ್ದನೆನ್ನೊಳಂ ಭರತೇಶಂ॥ ೧೨೦

ಕಳೆದಿಡುವುದೆ ಕಷ್ಟಂ ಭೂ
ತಳರಾಜ್ಯವಿಮೋಹಮುಚಿರರುಚಿಸಂಚಳಮಿಂ।
ತಳವುಗಿಡಿಸಿದುದು ಮನುಕುಲ
ತಿಳಕನುಮಂ ಖಳಮಹೀಶರುೞಿದವರಳವೇ॥ ೧೨೧

ಸೋದರರೆೊಳ್ ಸೋದರರಂ
ಕಾದಿಸುವುದು ಸುತನ ತಂದೆಯೆಡೆಳ್ ಬಿಡದು।
ತ್ಪಾದಿಸುವುದು ಕೋಪಮನಳ
ವೀದೊರೆತೆನೆ ತೊಡರ್ವುದೆಂತು ರಾಜ್ಯಶ್ರೀಯೊಳ್॥ ೧೨೨

ವ॥ ಅದಲ್ಲದೆಯುಮಶೇಷವಿದ್ಯಾನದೀಶೋಷಣಗ್ರೀಷ್ಮಾಂಶುಮಾಲಿಯುಮೂ ಖಮಾಲೆಯುಮುಪಶಮಾಂಭೋರಾಶಿಪ್ರಳಯಬಾಡಬಾನಳಜ್ವಾಲೆಯುಂ ವಿನಯಾಮೃತಮರೀಚಿಸಂಛಾದನಾಂಭೋದಸಂತತಿಯುಮುಭಯಲೋಕವಿ ವೇಕವಿರೋಚನಾಸ್ತಮಯವೇಲೆಯುಂ ಧರ್ಮದ್ರುಮಚ್ಛೇದಪರಶುಧಾರೆ ಯುಂ ವಿಷಯವಿಷದ್ರುಮಕಂದಳಿಯುಮಿಂದ್ರಿಯಲುಬ್ಧಕಸ್ವಚ್ಛಂದವಿಹಾ ರಗಹನಭೂಮಿಯುಂ ದುರ್ಯಶಃಪಾಂಶುಪ್ರಸರಮಹಾವಾತ್ಯೆಯುಮಪ್ಪ,

ಪಾತಕಿಯೊಳ್ ಲಕ್ಷ್ಮಿಯೊಳತಿ
ಕಾತರಕಾಪುರುಷಗಣನೆಯೊಳ್ ನೆರೆಯಲ್ಕಿಂ ।
ತೀತನೆ ಬಗೆಗಾಂ ಪುರುತನು
ಜಾತರ ಬಗೆದುದನೆ ಬಗೆವೆನಳಿಪಂ ಬಗೆಯೆಂ ॥ ೧೦೩

ವಿಷಧಿಗಳೊಳಗೊಯ್ದುರ್ವ
ವಿಷಮರಣಾಂಗಣಮನಿರದೆ ಪುಗಿಸುವ ನಾನಾ ।
ವಿಷಯಂಗಳಂ ತೊಡರ್ಚುವ
ವಿಷಯಸುಖಂಗಳೊಳೆ ತೊಡರ್ದು ಬಿರ್ದಪುದು ಜಗಂ ॥ ೧೦೪

ಇನಿಯವು ಮೊದಲೊಳ್ ನಂಜಿನ
ಪನಿವೊಲ್ ಬಳಿಕೆಯ್ದೆ ಮುಳಿದು ಕೊಂದಿಕ್ಕುವುವಿಂ ।
ತೆನೆಯೆನೆ ವಿಷಯಸುಖಾಸ್ವಾ
ದನದೊಳ್ ಲಂಪಟರಿದೇಕೆಯೋ ನರಪಶುಗಳ್ ॥ ೧೦೫

ಕಿವಿ ಮೆಯ್ ಕಣ್ ನಾಲಗೆ ಮೂ
ಗಿವು ಶಬ್ದಸ್ಪರ್ಶರೂಪರಸಗಂಧಸಮು ।
ದ್ಭವಸುಖದೊಳ್ ತೊಡರ್ವುದೆ ಸುಖ
ಮವಿಲ್ಲದಂದಿಲ್ಲದರ್ಕತೀಂದ್ರಿಯಮೆ ಸುಖಂ ॥ ೧೦೬

ಕಿಡುವೊಡಲ ಕಿಡುವ ರಾಜ್ಯದ
ಪಡೆವಮಾತುಗೊಳಲ್ಕಮೆನ್ನ ಮೆಯ್ಯಾಗಿದಪುದೀ ।
ಗಡೆ ಜೈನದೀಕ್ಷೆಯಂ ಕೊಂ
ಡಡಿಗೆಱಗಿಸುವೆಂ ಸಮಸ್ತಸುರಸಮುದಯಮಂ ॥ ೧೦೭

ಎಂದಿಂತು ಬಗೆದು ಭರತನ
ನೆಂದಂ ಚಕ್ರೇಶ ಸಿಗ್ಗನುಱೆ ಮುಳಿಸಿಂ ನೀ ।
ನೆಂದಿಂಗಂ ಬಿಸುಡೀತ
ವ್ಮಂದಿರೊಳಿಂತಿಂತು ಕಟ್ಟುವರ್ಪುದು ಪೆಂಪೇ ॥ ೧೨೮

ನಿನ್ನೀಬೆಸಸಿದ ಚಕ್ರಮ
ದೆನ್ನೀದೇಹಾದ್ರಿಯಂ ಗೆಲಲ್ ನೆಱೆಯದು ನೀಂ ।
ಬಿನ್ನ ನಿದೇಕಿರ್ಪೆಯದೆಂ
ತೆನ್ನ ಗೆಲಲ್ ವಜ್ರಗಿರಿಯನಾರ್ಕುಮೆ ವಜ್ರಂ ॥ ೧೨೯

ನೆಲಸುಗೆ ನಿನ್ನ ವಕ್ಷದೊಳೆ ನಿಶ್ಚಳವಿಸ್ಫುಟಖಡ್ಗಮಂಡಲೋ
ತ್ಪಲವನವಿಭ್ರಮಭ್ರಮರಿಯಪ್ಪ ಮನೋಹರಿ ರಾಜ್ಯಲಕ್ಷ್ಮಿ ಭೂ ।
ವಲಯಮನಯ್ಯನಿತ್ತುದುಮನಾಂ ನಿನಗಿತ್ತೆ ನಿದೇವುದಣ್ಣ ನೀ
ನೊಲಿದ ಲತಾಂಗಿಗಂ ಧರೆಗೆಮಾಟಿಸಿದಂದು ನೆಗಪ್ತೆ ಮಾಸದೇ ॥ ೧೩೦

ಅವಧರಿಸದೆ ನಿನ್ನೊಳ್ ಪಿರಿ
ದವಿನಯಮಂ ನೆಗಟ್ದ ದೋಷಮಂ ತಪದೊಳ್ ನೀ ।
ಗುವೆನಸದಾಗ್ರಹಮಂ ಬಿಸು
ಡುವುದೊರ್ಮೆಗೆ ಮಱೆವುದೆನ್ನ ದುರ್ವಿಳಸನಮಂ ॥ ೧೩೧

ವ॥ ಎಂದು ಬಾಹುಬಲಿಕುಮಾರಂ ತಪಶ್ಚರಣನಿಶ್ಚಳನಿಶ್ಚಯಮನನಾ
ದಾಗಳ್,

ಮನದೊಳ್ ಮುಂ ಪುದಿದಿರ್ದ ಕೋಪಮನಿತುಂ ತೂಳ್ದಾಗಳೆತ್ತೆತ್ತ ಗೆ
ಯ್ದೆನಿದಂ ತಮ್ಮನೊಳೆಂಬುದೊಂದುಪಶಮಂ ಕೈಗಣ್ಮೆ ನೀನೊರ್ಬನೈ ।
ಮನುವಂಶಕ್ಕೆ ಲಲಾಮನಪ್ಪನುಜನೈ ಬೇಡಮ್ಮ ನೀನುಂ ತಪೋ
ವನಮಂ ಸಾರ್ವುದುಮಾನದಾರ್ಗೆ ಮೆಱೆವೆಂ ಮತ್ಪ್ರಾಜ್ಯಸಾಮ್ರಾಜ್ಯಮಂ ॥

ವ॥ ಎಂದು,

ನಿಜಪಾದಾಂಬುರುಹಕ್ಕೆ ಪಾದ್ಯವಿಧಿಯಂ ನೇತ್ರಾಂಬುವಿಂ ಮಾಡುವ
ಗ್ರಜನತ್ಯುನ್ನತಮಪ್ಪ ಮಸ್ತಕದ ಮೇಗೋರಂತೆ ಪಾಯ್ವಾತ್ಮಬಾ ।

ಷ್ಪಜಳೌಘಂಗಳನಂದು ಬಾಹುಬಲಿ ತನ್ನಿಂದಂ ನಿಧೀಶಂಗೆ ವಂ
ಶಜರಾಜ್ಯಾಭಿಷವೋತ್ಸವಂ ನೆಗೞ್ದುದೆಂಬಾಶಂಕೆಯುಂ ಮಾಡಿದಂ ॥ ೧೩೩

ವ॥ ಅಂತು ಭರತೇಶ್ವರನಂ ಬಾಹುಬಲಿಕುಮಾರನೆಂತಾನುಮೊಡಂಬಡಿಸಿ ಮಹಾಬಲಿಯೆಂಬ ನಿಜತನೂಜನನಾತ್ಮೀಯಪದವಿಯೊಳ್ ನಿಱಿಸಿ,

ಕ್ಷಿತಿತಳದೊಳ್ ನೆಗೞ್ದಿರ್ದ
ಪ್ರತಿಮಲ್ಲನನಿಕ್ಕಿ ಮುಯ್ವನೆಣಮಾನದೆ ದ।
ರ್ಪಿತದುರಿತಮಲ್ಲನುಮನುಡಿ
ವ ತಕ್ಕಿನಿಂ ಸಭೆಗೆ ನಡೆದನಿಂದ್ರಾರ್ಚಿತನಾ ॥ ೧೩೪

ವ॥ ಅಂತು ನಡೆಯೆ,

ಮಂದಾರವರ್ಷನವಮುಕ
ರಂದರಜೋಗಂಧಬಂಧುವಿವಿಧಪತಾಕಾ।
ಸಂದೋಹಾಂದೋಳನಪಟು
ಬಂದಾಱಿಸಿದತ್ತು ಸಮವಸರಣಸಮೀರಂ ॥ ೧೩೫

ದಿವಿಜನಿಕಾಯದ ಜಯಜಯ
ರವದಿಂದಂ ದುರಿತವಿಜಯಮಂ ತಮಗೆ ಮಹೋ।
ತ್ಸವದಿನಱಿಪುತ್ತು ಮಿದಿಗ್ರೋ
ಳ್ಪೊಲೆಸೆದುದು ಸಮವಸರಣದುಂದುಭಿನಿನದಂ ॥ ೧೩೬

ವ॥ ಅಂತು ಭಗವದಾಸ್ಥಾನಾರವಿಂದಿನಿಯುಂ ರಾಜಹಂಸನಂತಳಂಕರಿಸುತ್ತುಂ ಬಂದು ಭಗವತ್ಪಾದಪೀಠೋಪಕಂಠದೊಳ್ ಸರ್ವಾಂಗೋಪನತನಾಗಿ ನಿಂದಾಗಳ್,

ಪುರುಪರಮೇಶ್ವರಮುಖಚಂ
ದ್ರರಶ್ಮಿಯಿಂ ಚೋದ್ಯಮಿನ್ನವಿಲ್ಲೆಂಬಿನೆಗಂ।
ಕರವದನಹೃದಯಕಮಳದೊ
ಳೆರಡಲರ್ದುವದೊಂದು ಮುಗಿದುದಾಭುಜಬಲಿಯಾ॥ ೧೩೭

ವ॥ ಅಂತು ನಿಟಿಲತಟಘಟಿತಕರಕುಶೇಶಯಕುಟ್ಮಲನಾಗಿ,

ಮೊದಲೊಳ್ ದೇವರ ದಯೆಗೆ
ಯ್ದುದಲ್ತೆ ಯುವರಾಜಪದವಿಯೆನಗೀಗಳುವು ।
ಭ್ಯುದಯಕರಪ್ರವ್ರಜ್ಯದ
ಪದವಿಯು ಯುವರಾಜಪದವಿಯುಂ ದಯೆಗೆಯಿಸಿಂ ॥ ೧೩೮

ಗುರುಪದಪದ್ಮಾಂತಿಕದೊಳ್
ಪರಮೇಶ್ವರದೀಕ್ಷೆಯುಂ ಮನಂಬಿಡೆ ಕೊಂಡೀ ।
ಧರೆಯುಂ ಪೊಗೞಿಸಿದನಿದೇಂ
ಪುರುಪರಮೇಶ್ವರಸುತರ್ ಪರಿಚ್ಛೇದಿಗಳೋ ॥ ೧೩೯

ವ॥ ಅಂತು ಜೈನದೀಕ್ಷೆಯುಂ ಕೈಕೊಂಡು ಗುರುವಿನನುಮತದಿಂ ದ್ವಾದಶಾಂಗಚತುರ್ದಶಪೂರ್ವಂಗಳಂ ಕಲ್ತು ತದನುಮತದೊಳ್ ಬೞಿಯುಮೇಕವಿಹಾರಿಯಾಗಿ ಸಂವತ್ಸರಾವಧಿವರಂ ಪ್ರತಿಮಾಯೋಗದೊಳ್ ನಿಲೆ,

ಅಡಿವಿಡಿದಿಟ್ಟ ಪುತ್ತುಗಳ ನೆತ್ತಿಗಳಿಂ ನಿಮಿರ್ದಿರ್ದ ಬಳ್ಳಿಗ
ಳ್ವಡಿದು ವಿಷೋರಗಪ್ರತತಿ ನೋಪ್ಪೊಡಗುರ್ವಿಸೆ ಸುಯ್ವ ಸುಯ್ಗಳಿಂ ।
ಕಿಡಿ ಪೊಱಪೊಣ್ಮೆ ಬಾಹುಬಲಿಯೋಗಿಯ ಘೋರತಪೋಮಹಾಗ್ನಿಯಿಂ
ಸುಡೆ ಸುೞಿದುಣ್ಮುತಿರ್ಪ ಕಿಡಿಗಳ್ಗೆಣೆಯಾದುವು ತತ್ಪ್ರದೇಶದೊಳ್ ॥ ೧೪೦

ವಿಜಯಶರಾಸನಗುಣಘಾ
ತಜಾತಕಾಳಿಕೆಯನೆತ್ತಮಗ್ಗಳಿಸಿದುದಾ ।
ಭುಜಬಲಿಯ ಭುಜದ್ವಯದೊಳ್
ಭುಜಂಗನಿಶ್ವಾಸಧೂಮವೇಣೀನಿಕರಂ ॥ ೧೪೧

ಬಳೆದ ಜಡೆ ನಿಮಿರ್ದ ಬಳ್ಳಿಗ
ಳೊಳೆ ಪೆಣೆದು ವಿಷೋರಗಾನಳಾರ್ಚಿಗಳಿಂದಂ ।
ಮಿಳಿರ್ದುವು ಮುನಿಪಧ್ಯಾನಾ
ನಳನಿರ್ಯದ್ಧೂಮವೇಣಿಕಾನಿಕರದವೊಲ್ ॥ ೧೪೨

ಪರಮಮುನಿತನುವನಡರ್ದು
ಸುರದ್ರುಮಂಗೆತ್ತು ಯುವತಿರೂಪದಿನೆಂದಾ ।

ದರದಿಂ ಬಿಡಿಸಿದರನಘನ
ನಿರದಡರ್ವ ಲತಾಪ್ರತಾನಮಂ ಖೇಚರಿಯರ್ ॥ ೧೪೩

ವ॥ ಅಂತುಗ್ರೋಗ್ರತಪದೊಳಮಾಬಾಹುಬಲಿಮುನೀಂದ್ರಂಗೆ ಕೇವಲ ಜ್ಞಾನಾವಾಪ್ತಿಯಾಗದುದರ್ಕೆ ಭರತೇಶ್ವರಂ ವಿಸ್ಮಯಮುತ್ತು ಪೋಗಿ ವೃಷಭನಾಥನಂ ಬೆಸಗೊಳೆ ತಪದೊಳ್ ನಿಂದುಂ ನಿನ್ನ ನೆಲದೊಳ್ ನಿಂದೆವೆಂಬ ಮಾನಕಷಾಯಮವರ್ಗಿನ್ನುಂ ಪತ್ತುವಿಟ್ಟುದಲ್ತದಱಿಂ ಕೇವಲಜ್ಞಾನೋತ್ಪತ್ತಿಯಾಗದಿರ್ದುದು. ನೀಂ ಪೋಗಿ ಕಾಲ್ಗೆ ಬಗಲೊಡಂ ಕೇವಲಜ್ಞಾನಮಕ್ಕುಮೆಂದು ಬೆಸಸಿದೊಡೆ ಲಬ್ಧೋಪದೇಶನಾಗಿ ವಿವಿಧಾರ್ಚನಾಸಮಗ್ರಪರಿಜನಪರಿವೃತಂ ರಾಜರಾಜಂ ಮುನಿರಾಜಚರಣಾಂಭೋಜದೊಳ್ ಬಂದೆಱಗಿ ವಿವಿಧಾರ್ಚನೆಗಳಿಂದಮರ್ಚಿಸಿ,

ನಿನ್ನ ಮಡಗೊಪ್ಪೆಲಂ ಮಾ
ನೋನ್ನತ ನೀನೀಯೆ ಬಂದುದೆನಗಿದನೆನತೆಂ ।
ದೇನ್ನಿನಗೆ ಬಗೆಯಲಪ್ಪುದೆ
ನಿನ್ನನೆ ನೀಂ ಬಗೆಯ ಬಗೆಯದಿರ್ ಪೆಱಪೆಱತಂ ॥ ೧೪೪

ಎನಲೊಡಮಂತಃಕರಣದೊ
ಳನಿಸಾನುಂ ನಿಂದುದೊಂದು ಮಾನಕಷಾಯಂ ।
ಮುನಿಪತಿಗೆ ಪೋಗೆ ಪುಟ್ಟಿದು
ದನಂತವಸ್ತುಪ್ರಕಾಶಿಕೇವಳಬೋಧಂ ॥ ೧೪೫

ಆಗಳ್ ದೊರೆಕೊಂಡಿರೆ ದೇ
ವಾಗಮಮೇಕಾತಪತ್ರಮೆಸೆದಿರೆ ಚರಮಿಂ ।
ಬಾಗಿರೆ ಚಾಮರಯುಗ್ಮಮ
ದಾಗಳೆ ನಿಲೆ ದಿವ್ಯವಿಷ್ಟರಂ ಮಣಿಖಚಿತಂ ॥ ೧೪೬

ಜಯನಿನದಂ ಸುರದುಂದುಭಿ
ಚಯನಿನದಂ ಪುಷ್ಪವರ್ಷಮೊರ್ಮೆಯೆ ಸಕಲೋ ।
ರ್ವಿಯನೆಯ್ದೆ ಪರ್ವುತಿರೆ ಚಿ
ತ್ತೆಯ ಸರಿಯಂತೆಱಗಿ ಪೋದುದಮರಸಮಾಜಂ ॥ ೧೪೭

ವ॥ ಅಂತು ಬಾಹುಬಲಿಕೇವಳಿಯುಂ ನಾನಾದೇಶವಿಹಾರದೊಳ್ ವಿಶ್ವಜನ ಮಂ ನಿಜವಚೋಮೃತದಿಂ ಭವ್ಯಜನಸಾರ್ಥಮಂ ತಣಿಪಲೆಂದು ಬಂದು ಕೈಲಾಸಶೈಲದೊಳಾದಿದೇವರ ಸನ್ನಿಧಿಯೊಳಿರ್ದಂ. ಇಂತು ಭರತೇಶ್ವರನು ಮಾಮುನೀಶ್ವರನಂ ಪೂಜಿಸಿ,

ಪೆಸರ್ಗಂ ತೇಜಕ್ಕವೊಂದೋಜೆಗಮಹಿತಮಹೀಪಾಳಕರ್ಬೆಚ್ಚೆ ಬಾಯ್ಕೇ
ಳಿಸಿ ಹೈಮಕ್ಷ್ಮಾಕಳೇಂದ್ರಂಬರೆಗಮಖಿಳಷಟ್ಖಂಡಭೂಭಾಗಮಂ ಷ।
ಷ್ಟಿಸಹಸ್ರಾಬ್ದಂಗಳಿಂ ದಿಗ್ವಿಜಯದೊಳಿಗೆದಾನಂದಭೇರೀರವಂ ಘೂ
ರ್ಣಿಸೆ ಸಾಕೇತಕ್ಕೆ ವಂದಂ ಸುಕವಿಜನಮನೋಮಾನಸೋತ್ತಂಸಹಂಸಂ ॥

ವ॥ ಅಂತು ನಿರ್ವರ್ತಿತಾಶೇಷದಿಗ್ವಿಜಯಸಾಹಸಾಶ್ಚರ್ಯಾವಲೋಕನನಿರ ತಪುರಜನಾಶೀರ್ವಾದಶೇಷಾಕ್ಷತಂಗಳನಾಂತುಕೊಂಡು,

ವನಧಿಧ್ವಾನಮನೊಡ್ಡಿ ಸುತ್ತಿರೆ ನದದ್ಗಂಭೀರಭೇರೀಬೃಹ
ದ್ಧ್ವನಿ ನಾನಾವಿಧಮಂಗಳಾನಕರವಂ ಕೈಗಣ್ಮೆ ಸಂಛನಮಂ।
ದನಮಾಳಾಲಲಿತಾಂಶುಕಧ್ವಜವಿಳಾಸಾಕೀರ್ಣಮಂ ಮೆಚ್ಚಿ ಪೊ
ಕ್ಕನಯೋಧ್ಯಾಪುರಮಂ ಮಹಾವಿಭವದಿಂ ಸಂಸಾರಸಾರೋದಯಂ ॥ ೧೪೯

ಗ॥ ಇದು ದೇವೇಂದ್ರಮುನೀಂದ್ರವಂದ್ಯಪರಮಜಿನೇಂದ್ರಮುಖ
ಚಂದ್ರವಾಕ್ಚಂದ್ರಿಕಾಪ್ರಸರಪ್ರಸಾದೋದೀರ್ಣಸೂಕ್ತಿ
ಕಲ್ಲೋಲಮಾಲಾಕೀರ್ಣಕವಿತಾಗುಣಾರ್ಣವ
ಪ್ರಣೀತಮಪ್ಪಾದಿಪುರಾಣದೊಳ್
ದಿಗ್ವಿಜಯಧ್ವಜಾರೋಹಣಂ
ಚತುರ್ದಶಾಶ್ವಾಸಂ.
ಸಂಪೂರ್ಣಂ.

ಪಂಚದಶಾಶ್ವಾಸಂ.

ಶ್ರೀದಯಿತಂ ಮನುಕುಲಗಗ
ನಾದಿತ್ಯಂ ಹಿಮವಮನೆಯ್ದೆ ಷಟ್ಖಂಡಮುಮಂ ।
ಸಾಧಿಸಿ ಜಿತದಿಙ್ಮಂಡಲ
ನಾದ ಮಹಾತ್ಮಂ ಸರಸ್ವತೀಮಣಿಹಾರಂ ॥ ೧

ವ॥ ತದನಂತರಮೆ ಮಾಗಧಾಮರತನುಪ್ರಭಾಸಾಃಮರವಿಜಯಾರ್ಧಕು ಮಾರಕೃತಮಾಲಾಃನಾದ್ಯಮಾಲಾಹಿಮವತ್ಕುಮಾರದಿವಿಜರಿಂದಂ ಗಂಗಾಸಿಂ ಧುದೇವೀಪ್ರಮುಖದೇವೀನಿವಹದಿಂ ಲವಣಜಲಧಿಗಂಗಾಸಿಂಧುನದ್ಯಾದಿತೀರ್ಥ ಜಲಪರಿಪೂರಿತವಿವಿಧೌಷಧಿರತ್ನಗರ್ಭಮಂಗಳಭೃಂಗಾರುಜಳಂಗಳೊಳಭಿ ಷಿಕ್ತನಾದಾಗಳ್,

ಗಣಬದ್ಧಾಮರಖೇಚರ
ಗಣಭೂಚರನಿಕರಮಾಗಧಾದ್ಯಮರಶಿರೋ ।
ಮಣಿರುಚಿ ಪುದಿಯೆಯುಮಿನಿಸುಂ
ಮಣಿಯದೆ ಬೆಳಗಿದುವು ಭರತನೃಪನಖರುಚಿಗಳ್ ॥ ೨

ವ॥ ಅಂತು ಚಕ್ರಾಭಿಷೇಕೋತ್ಸವಾನಂತರಂ,

ಮನುಕುಳತಿಳಕಂ ವೃಷಭಾ
ಗ್ರನಂದನಂ ರಾಜರಾಜನಧಿರಾಜಂ ಚ ।
ಕ್ರನಿಧೀಶನಾದಿಭೂಭುಜ
ನೆನೆ ನೆಗಳ್ದಂ ಭರತಚಕ್ರಿ ವಿಶ್ವಂಭರೆಯೊಳ್ ॥ ೩

ವ॥ ಅಂತು ಷಟ್ಖಂಡಭರತಮಂಡಳಮನುಂಡಿಗೆ ಸಾಧ್ಯಂಮಾಡಿ ಪದಿನೆಂ ಟುಕೋಟಿ ಜಾತ್ಯಶ್ವಂಗಳುಮೆಂಭತ್ತುನಾಲ್ಕುಲಕ್ಕೆ ಗಂಧಸಿಂಧುರಂಗಳಪ್ಪ ಭದ್ರಹಸ್ತಿಗಳುಮೆಂಭತ್ತುನಾಲ್ಕುಲಕ್ಕೆ ಸಮರಸನ್ನಾಹಯೋಗ್ಯಂಗಳಪ್ಪ ರಥಂಗಳುಮೆಂಭತ್ತುನಾಲ್ಕುಕೋಟಿವೀರಭಟನಿಕರಮುಂ ಮೂವತ್ತಿರ್ಛಾ ಸಿರಮುಕುಟಬದ್ಧರುಂ ಮೂವತ್ತಿರ್ಛಾಸಿರ್ವರ್ ಮೆಯ್ಗಾಪಿನ ಗಣಬದ್ಧದೇ ವರುಂ ಮೂವತ್ತಿರ್ಛಾಸಿರ್ಬರುಭಯಕುಲವಿಶುದ್ಧಮಕುಟಬದ್ಧರ ತನೂ ಜಯೆರಪ್ಪ ಕುಲಲಲನೆಯರುಂ ಮೂವತ್ತಿರ್ಛಾಸಿರ್ಬರ್ ಪ್ರತ್ಯಂತರಾಜತ

ನೂಜೆಯರುಂ ಮೂವತ್ತಿರ್ಛಾಸಿರ್ಬರವರೋಧವಧೂನಿವಹಮುಂ ಅಂತು ತೊಂಭತ್ತಾಱುಸಾಸಿರಮಂತಃಪುರಮುಂ ಮೂಱುಕೋಟಿಯುವತಿಬಂಧುವರ್ಗಮುಂ ಮೂವತ್ತಿರ್ಛಾಸಿರಸಂಗೀತಕಸಂಗತನಾಟ್ಯಶಾಲೆಗಳುಂ ಮತ್ತಂ ಲೌಕಿಕಶಾಸ್ತ್ರನಿವರ್ತನಂ ಬೆಱಸು ಪಲವುಂ ತೆಱದ ಪಱೆಗಳುಂ ಷಟ್ಕರ್ಮಸಾಧನದ್ರವ್ಯಂಗಳುಂ ದಿವ್ಯಶಯ್ಯಾಸನನಾನಾಸದನಂಗಳುಂ ಶಾಲಿವ್ರೀಹಿಯುವಗೋಧೂಮಾದಿಧಾನ್ಯನಿಚಯದೊಡನನೇಕಧಾನ್ಯಸದನಂಗಳುಂ ಕ್ಷೌಮದುಕೂಲಾದಿದಿವ್ಯವಸನವಿವಿಧಪ್ರಾವರಣವಿಶೇಷಂಗಳುಂ ನೀತಿಶಾಸ್ತ್ರಂಗಳೊಡನನೇಕಶಾಸ್ತ್ರಂಗಳುಂ ಸ್ತ್ರೀಪುರುಷಯೋಗ್ಯಮಣಿಮುಕ್ತಾಭರಣಂಗಳುಂ ಚಕ್ರವರ್ತಿಯಾಜ್ಞೆಯಿಂದಂ ನೆಲನೆಲ್ಲಂ ಬಂದು ಕೊಳ್ಳೊಡಂ ತವದ ಕನಕರಾಶಿಯುಂ ಮರಕತಪದ್ಮರಾಗವಜ್ರವೈಡೂರ್ಯಮುಕ್ತಾಫಳಾದಿನವರತ್ನಂಗಳುಮನುಕ್ರಮದಿಂದಂ ಶ್ರೀಗೃಹದೊಳ್ ಪುಟ್ಟಿದ ಕಾಳಮಹಾಕಾಳನೈಸರ್ಪಪಾಂಡುಕಪದ್ಮ ಪಿಂಗಳಮಾಣವಕಶಂಖಸರ್ವರತ್ನಂಗಳೆಂಬನವನಿಧಿಗಳುಂ ಆಯುಧಾಗಾರದೊಳ್ ಪುಟ್ಟಿದ ಚಕ್ರಾಸಿದಂಡಚ್ಛತ್ರರತ್ನಂಗಳುಂ ಶ್ರೀಗೃಹದೊಳ್ಪುಟ್ಟಿದ ನಿಧಿಮಣಿಚರ್ಮ ಕಾಕಿಣೀರತ್ನಂಗಳುಂ, ವಿಜಯಾರ್ಧಪರ್ವತದೊಳ್ ಪುಟ್ಟಿದ ಗಜಾಶ್ವಸ್ತ್ರೀರತ್ನಂಗಳುಂ, ಸಾಕೇತನಗರದೊಳ್ ಪುಟ್ಟಿದ ಸೇನಾನಾಯಕಪುರೋಹಿತಗೃಹಪತಿತಕ್ಷಕರತ್ನಂಗಳುಂ ಅಂತುಪದಿನಾಲ್ಕು ತೆಱದ ಜೀವಾಜೀವರತ್ನಂಗಳುಂ ಕ್ಷಿತಿಸಾಗರವೆಂಬ ಪ್ರಾಕಾರದೊಳಂ ಸರ್ವತೋಭದ್ರವೆಂಬ ಗೋಪುರದೊಳಂ ಕೂಡಿದ ವೈಜಯಂತಿಯೆಂಬ ದಿವ್ಯಪ್ರಾಸಾದಮುಂ ದಿಕ್ಸ್ವಸ್ತಿಕವೆಂಬ ಸಭಾಭೂಮಿಯುಂ ನಂದ್ಯಾವರ್ತವೆಂಬ ಶಿಬಿರನಿವೇಶಮುಂ ಗಿರಿಕೂಟವೆಂಬ ದಿಗವಲೋಕನಗೃಹಮುಂ ವರ್ಧಮಾನವೆಂಬೀಕ್ಷಣಪ್ರಿಯಪ್ರೇಕ್ಷಾಗೃಹಮುಂ ಮಹಾಘರ್ಮಾಂತವೆಂಬ ಧಾರಾಗೃಹಮುಂ ಗೃಹಕೂಟವೆಂಬ ವರ್ಷಾವಾಸಮುಂ ಪುಷ್ಕಳಾವತಿಯೆಂಬ ಶಯನಸದನಮುಂ ಕುಬೇರಕಾಂತವೆಂಬ ತವದ ಭಂಡಾರಮುಂ ವಸುಧಾರಕವೆಂಬ ಕೋಶಾಗಾರಮುಂ ಜೀಮೂತವೆಂಬ ಮಜ್ಜನಗೃಹಮುಂ ಅವತಂಸಿಕೆಯೆಂಬ ರತ್ನಮಾಲೆಯುಂ ದೇವರಮ್ಯವೆಂಬ ಪಟಕುಟಿಯುಂ ಸಿಂಹವಿಧೃತಮಪ್ಪ ಸಿಂಹವಾಹಿನಿಯೆಂಬ ಮೃದುಶಯ್ಯೆಯುಂ ಮೇರುಕಂತೋಪಮವೆಂಬ ಸಿಂ

ಹಾಸನಮುಂ, ಯಕ್ಷಕರವಿಧೂಯಮಾನಮಪ್ಪನುಪಮಮಂಗಳಮೆಂಬ ಮೂವತ್ತೆರಡುಚಾಮರಂಗಳುಂ ಸೂರ್ಯಪ್ರಭಮೆಂಬಾತಪತ್ರಮುಂ ವಿದ್ಯುತ್ಪ್ರಭಮೆಂಬ ಮಣಿಕುಂಡಲಯುಗಳಂಗಳುಂ ವಿಷಮೋಚಿಕೆಗಳೆಂಬ ಪಾವುಗೆಗಳುಂ ಅಭೇದ್ಯಮೆಂಬ ಕವಚಮುಂ ಅಜಿತಂಜಯಮೆಂಬ ರತ್ನರಥಮುಂ ವಜ್ರಕಾಂಡಮೆಂಬ ಬಿಲ್ಲುಂ ಅಮೋಘಮೆಂಬ ಶರನಿಕರಮುಂ ವಜ್ರದಂಡಮೆಂಬ ಶಕ್ತಿಯುಂ ಸಿಂಹಾಟಕಮೆಂಬ ಕುಂತಮುಂ ಲೋಹವಾಹಿನಿಯೆಂಬ ಸುರಿಗೆಯುಂ ಮನೋವೇಗಮೆಂಬ ಕಣೆಯುಂ ಸೌನಂದಕಮೆಂಬ ಬಾಳುಂ ಭೂತಮುಖಮೆಂಬ ಖೇಟಕಮುಂ ಸುದರ್ಶನಮೆಂಬ ಚಕ್ರರತ್ನಮುಂ ಚೂಡಾಮಣಿಯೆಂಬ ಮಣಿರತ್ನಮುಂ ಚಿಂತಾಮಣಿಯೆಂಬ ಕಾಕಿಣೀರತ್ನಮುಂ ಅಯೋಧ್ಯನೆಂಬ ದಂಡನಾಯಕನುಂ ಬುದ್ಧಿಸಾಗರನೆಂಬ ಪುರೋಹಿತನುಂ ಕಾಮವೃಷ್ಟಿಯೆಂಬ ಭಂಡಾರಿಗನುಂ ಭದ್ರಮುಖನೆಂಬ ತಕ್ಷಕಪತಿಯುಂ ವಿಜಯಾರ್ಧಪರ್ವತಮೆಂಬ ಯಾನಹಸ್ತಿಯುಂ ಪವನಂಜಯಮೆಂಬ ತುರಗರತ್ನಮುಂ ಸುಭದ್ರೆಯೆಂಬ ಸ್ತ್ರೀರತ್ನಮುಂ ದ್ವಾದಶಯೋಜನಸಂಸರ್ಪನ್ನಿನಾದಂಗಳಪ್ಪಾನಂದಿಗಳೆಂಬ ಪನ್ನೆರಡುಂ ಮಹಾಭೇರಿಗಳುಂ ವಿಜಯಘೋಷಂಗಳೆಂಬ ಪನ್ನೆರಡು ಪಟಹಂಗಳುಂ ಪ್ರಣಾಳ್ಯಬ್ಧಿಸಂಭವಂಗಳಾಗಿ ಗಂಭೀರಾವರ್ತಂಗಳೆಂಬಿರ್ಪತ್ತುನಾಲ್ಕುಂ ಶಂಖಂಗಳುಂ ನಾಲ್ವತ್ತೆಂಟುಕೋಟಿ ಪತಾಕೆಗಳುಂ ತಟಿದ್ವಳಯವಿಳಸಿತಂಗಳಾಗಿ ನಿಜಪ್ರಕೋಷ್ಠನಿಷ್ಠಿತಂಗಳಪ್ಪ ವೀರಾಂಗದಂಗಳೆಂಬ ಕಟಕಂಗಳುಂ ಮಹಾಕಲ್ಯಾಣಕಾರಮೆಂಬ ದಿವ್ಯಾಹಾರಮುಂ ಅಮೃತಗರ್ಭಂಗಳೆಂಬ ಸದ್ಯೋಘೃತಮುಂ ಅಮೃತಪರಿಮಳಾಮೋದಮೆಂಬ ದಧಿಯುಂ ಅಮೃತರಸಾಯನಮೆಂಬ ಪಾನಮುಂ ಮತ್ತಂ ಮೂವತ್ತಿರ್ಛಾಸಿರವಿಷಯಂಗಳುಂ ಎಪ್ಪತ್ತಿರ್ಛಾಸಿರಪ್ಪೊೞಲ್ಗಳುಂ ತೊಂಭತ್ತಾಱುಕೋಟಿಗ್ರಾಮಂಗಳುಂ ತೊಂಭತ್ತೃಸಾಸಿರದ್ರೋಣಾಮುಖಂಗಳುಂ ನಾಲ್ವತ್ತೆಣ್ಸಾಸಿರ ಪಟ್ಟಣಂಗಳುಂ ಪದಿನಾಱುಸಾಸಿರಖೇಡಂಗಳುಂ ಪದಿನಾಱುಸಾಸಿರ ಸಂವಾಹನಂಗಳುಂ ಐವತ್ತಾಱಂತರದ್ವೀಪಂಗಳುಂ ಏಕಕೋಟಿಪ್ರಮಾಣಸ್ಥಾಯಿಗಳುಂ ಶತಸಹಸ್ರಕೋಟಿಹಲಂಗಳುಂ ಮೂಱುಕೋಟಿಗೋಮಂಡಳಮುಂ ಪ್ರತ್ಯಂತವಾಸಿಗಳಪ್ಪೇೞ್ನೂಱುಕುಕ್ಷಿನಿವಾಸಿಗಳುಂ

ಎಪ್ಪತ್ತೆರ್ಛಾಸಿರದುರ್ಗಾಟವಿಗಳುಂ ಪದಿನೇಣ್ಛಾಸಿರಮ್ಲೇಚ್ಛರಾಜರುಂ ಆತ್ಮೀಯಸಾಮ್ರಾಜ್ಯಪರಿಚ್ಛೇದವಾಗೆ ವಜ್ರವೃಷಭನಾರಾಚಶರೀರಸಂಹನನಸಾಮ್ಯನುಂ ಸಮಚತುರಶ್ರಸಂಸ್ಥಾನನುಂ ನಿಷ್ಟಪ್ತಕನಕವರ್ಣನುಂ ಸ್ವಸ್ತಿಕನಂದ್ಯಾವರ್ತಾದಿಚತುಷ್ಷಷ್ಟಿಲಕ್ಷಣಧರನುಂ ತಿಳಮಸೂರಿಕಾದ್ಯನೇಕವ್ಯಂಜನನಿಧಿಯುಂ ಅಪಾರವೀರ್ಯನುಂ ಪಂಚಶತಚಾಪೋತ್ಸೇಧನುಂ ಚತುರಶೀತಿಲಕ್ಷಣಪೂರ್ವಾನಪವರ್ತ್ಯಾಯುಷ್ಯನುಂ ಅಪ್ರತಿಹತಶಾಸನನುಮಾಗಿ,

ಹಿಮದಿಂದಂ ಲವಣಾಂಬುರಾಶಿವರೆಗಂ ಷಟ್ಖಂಡಭೂಮಂಡಳಂ
ನಿಮಿರ್ದಾಜ್ಞಾಪ್ರಸರಕ್ಕಗುರ್ವುಗೊಳೆಯುಂ ವಿದ್ಯಾಧರರ್ ಮಾಗಧಾ ।
ದ್ಯಮರರ್ ತನ್ನನೆ ನಿಚ್ಚವೋಲಗಿಸೆಯುಂ ಚಕ್ರೇಶ್ವರಂ ಕೀರ್ತಿವಿ
ಭ್ರಮದಿಂ ಪಜ್ಜಳಿಪನ್ನಮುಜ್ಜಳಿಸಿದಂ ವ್ಯೋಮಾವನೀಭಾಗಮಂ ॥ ೪

ವ॥ ಅಂತು ಭರತಂ ಭರತಮಂಡಳಮನೇಕಚ್ಛತ್ರಚ್ಛಾಯೆಯಿಂದಂ ಪ್ರತಿಪಾಲಿಸುತ್ತಮಿರೆಯಿರೆ,

ಪುರನಿಧಿಶಯ್ಯಾಸನರಾ
ಜ್ಯರತ್ನವಾಹನವರೂಥಿನೀನಾಟ್ಯಸಭಾ ।
ಪರಿಕರಸಹಿತಂ ಭರತೇ
ಶ್ವರಂಗೆ ಸಮಸಂದುದೀದಶಾಂಗಂ ಭೋಗಂ ॥ ೫

ವ॥ ಇಂತಯೋಧ್ಯಾಸಿಂಹಾಸನಾಸೀನನುಮುದಿತೋದಿತಸಾಮ್ರಾಜ್ಯಸುಖಾನುಭವನುಂ ಕೃತಕೃತ್ಯನುಮಪ್ಪ ಸಕಲಚಕ್ರವರ್ತಿ,

ಜಿನಪೂಜೋತ್ಸವಮಂ ಮಹಾಮಹಮುಮಂ ತಾಂ ಮಾಡಿ ಸಲ್ವನ್ನೆಗಂ
ಧನಮಂ ತಕ್ಕವರ್ಗೀಯಮೇಬ್ಬುದದನಂತೇಗೆಯ್ದುವೊಲ್ಲರ್ ತಪೋ ।
ಧನರಾರಾಧ್ಯಗೃಹಸ್ಥರಾದರೊಳಮಿನ್ನಾರ್ ತಕ್ಕರಾರ್ಯೆವೆನೊ
ಯ್ಯನುಪಾಯಾಂತರದಿಂದಮೆಂದೊಸಗೆಯಂ ತದ್ವ್ಯಾಜದಿಂ ಮಾಡಿದಂ ॥ ೬

ವ॥ ಅಂತು ಮಾಡಿ,

ಹರಿತಾಂಕುರಫಳಪುಷ್ಪೋ
ತ್ಕರಂಗಳಂ ಪೂಸತೆ ಮೊಳೆತ ಧಾನ್ಯಂಗಳನಾ ।

ಧರಣೀಶಂ ಕೆದಱಿಸಿದಂ
ನಿರಂತರಂ ರಾಜಗೇಹದೊಳಗಂ ಪೊಱಗಂ ‖ ೭

ಕೆದಱಿಸಿ ಬೞಿಯಂ ಬರವೇ
ೞ್ಪುದುಮಲ್ಲಿ ಕೆಲರ್ ವಿವೇಕರಹಿತರ್ ಬಂದರ್ ।
ಮೊದಲೊಳೆ ಪೊಕ್ಕರ್ ವ್ರತವಿ
ಲ್ಲದವರ್ ತುೞಯುತ್ತುಮಂಕುರಂಗಳನಾಗಳ್ ‖ ೮

ಸಾವದ್ಯಭೀರುಗಳ್ ಕೆಲ
ರಾವಿವಿಧಫಲಪ್ರಸೂನಪಲ್ಲವತತಿಯಿಂ ।
ತೀವಿದ ರಾಜಾಂಗಣಮನಿ
ಳಾವಂದ್ಯರ್ ಮೆಟ್ಟಲೊಲ್ಲದಲ್ಲಿಯೆ ನಿಂದರ್ ‖ ೯

ನಿಲಲೊಡಮನಿಬರುಮಂ ಭೂ
ತಲಪತಿ ಬೞಿಯಟ್ಟಿ ಬರಿಸೆ ಪೆಱತೊಂದೆಡೆಯೊಳ್ ।
ಮಲರಹಿತರ್ ಬಂದು ಧರಾ
ಲಲನಾಧೀಶಂಗೆ ವಿನತಮಸ್ತಕರಾದರ್ ‖ ೧೦

ವ॥ ಆಗಳ್ ಭರತೇಶ್ವರಚಕ್ರವರ್ತಿ ನೀಮಿನಿಬರುಮಿವರ್ ಬಂದ ಮಾರ್ಗ ದೊಳ್ ಬಾರದೆ ಪೆಱತೊಂದು ಮಾರ್ಗದೊಳೇಕೆ ಬಂದಿರೆಂದು ಬೆಸಗೊಳೆ

ಫಳಕುಸುಮಪ್ರವಾಳಹರಿತಾಂಕುರರಾಜಿಯೊಳಲ್ಲಿ ಜೀವಸಂ
ಕುಳಮಳವಲ್ಲದುಂಟದಱಿನಾಗದು ಪರ್ವದಿನಂಗಳೊಳ್ ವ್ರತಂ ।
ಗಳನೊಡಗೂಡಿ ನಿಂದೆಮಗೆ ಮೆಟ್ಟಲಿಳೇಶ್ವರ ಕೇಳ್ದವಾವಿದಂ
ತಿಳಿಯೆ ಗಣಾಧಿಪರ್ ಬೆಸೆಸೆ ರುಂದ್ರಜಿನೇಂದ್ರಸಭಾಂತರಾಳದೊಳ್ ‖ ೧೧

ವ॥ ಅದಱಿಂ ಪ್ರವಾಳಪತ್ರಪುಷ್ಪಾಂಕುರಂಗಳಿಂದಂ ಸಂಕೀರ್ಣಮಪ್ಪ ರಾಜಾಂಗಣಮಂ ಮೆಟ್ಟದೆ ಪೆಱತೊಂದು ಬಟ್ಟೆಯೊಳ್ ಬಂದೆವೆಂಬುದುಂ ನಾಭಿನಂದನನಂದನನವರ ದೃಢವ್ರತಕ್ಕೆ ಮೆಚ್ಚಿ ದಾನಸನ್ಮಾನಯೋಗ್ಯರಪ್ಪರೆಂದು ಪದ್ಮನಿಧಿಯೆಂಬ ನಿಧಿಯಂ ತರಿಸಿ ತಪನೀಯಸೂತ್ರದೊಳೇಕಾದ್ಯೇಕೋತ್ತರದಶಾಂತಂಬರಮವರವರ ನೆಲೆಗಳೊಳ್ ಬ್ರಹ್ಮಸೂತ್ರಾಭಿಧಾನಯಜ್ಞೋಪವೀತದಿಂ ಪವಿತ್ರಗಾತ್ರರ್ಮಾಡಿ,

ಏನಭಿಮತಮಪವರ್ಗಾಪವರ್ಗದ
ನೇನುಂ ತೊದಳಿಲ್ಲದಿತ್ತು ಮನ್ನಿಸಿದಂ ಸ।
ನ್ಮಾನಪುರಸ್ಸರಮಂತುಟೆ
ನಾನಾವ್ರತಯುತರನಾರುಮೋಂ ಮನ್ನಿಸರೇ ॥

ಬ್ರತಹೀನರನನಿಬರುಮಂ
ಕ್ಷಿತಿಪತಿ ಬೇಱಿರಿಸಿ ಮಾನ್ಯರಂ ಮನ್ನಿಸೆ ತ।
ದ್ವ್ರತಹೀನರುಮಂದಖಿಳ
ಬ್ರತಮಂ ಕೈಕೊಳ್ವ ಬಗೆಗೆ ಬಗೆಯುಂ ತಂದರ್ ।

ವ॥ ಭರತೇಶ್ವರಂ ತಾನುಂ ಮುನ್ನೆ ಭಟ್ಟಾರಕರ ಸಮಕ್ಷದೊಳ್ ಸ
ಕರ್ಣಿತೋಪಾಸಕಾಧ್ಯಯನನಪ್ಪುದಱಿಂದಮಾರೇನಂಬೇಡಿಪ್ಪರವರ್ಗ
ಕೊಟ್ಟು ಚಕ್ರವರ್ತಿಗಳ್ ಮಾಳ್ಪ ಕಲ್ಪವೃಕ್ಷಮುಂ ಮಹಾಮಂಡಳಿಕ
ಮುಖಮಕುಟಬದ್ಧರ್ ಮಾಳ್ಪ ಚತುರ್ಮುಖಮುಂ ಅರ್ಧಮಂಡಳಿ
ಮಾಳ್ಪ ಸರ್ವತೋಭದ್ರಮೆಂಬ ಪೆಸರನೊಡನೆಯ ಮಹಾಮಹಮುಂ
ದ್ರರ್ ಮಾಳ್ಪ ಇಂದ್ರಧ್ವಜಮುಂ ಸಮಸ್ತ ಭವ್ಯಜನನಿರ್ವರ್ತ್ಯಮಾನಾಷ್ಟಾ
ಕಮುಂ ಚೈತ್ಯಾಲಯನಿರ್ಮಾಣನಿವರ್ಾಪಣಶಾಸನಾರೋಪಿತಗ್ರಾಮಕ್ಷೆ
ವಿತರಣಮುಂ ಮುನಿಜನಪೂಜಾನ್ನದಾನಾದಿಕರಣಜಿನಗೃಹಜನಸತತೋ
ನೀಯಮಾನಪಾದ್ಯಗಂಧಾಕ್ಷತಕುಸುಮಚರುಧೂಪದೀಪಫಲಾದ್ಯರ್ಚನಾ
ಕಮಪ್ಪ ನಿತ್ಯಮಹಮುಂ ಶಾಂತಿಕಪೌಷ್ಟಿಕಾದಿಗಳುಮಂ ಬಗೆದು ಮಾ
ಬಗೆಯುಂ ಘೃತಕ್ಷೀರದಧಿನಾಳಿಕೇರತೋಯಾಮ್ರರಸೇಕ್ಷುರಸಗಂಧೋ
ಕಾದಿಗಳಿಂ ಮಾಡುವ ಸವನಮುಂ ಮೂಱುಂ ಪೊತ್ತು ಮರ್ಚನಾಪುರಸ್ಸ
ಧೂಪೋದ್ಧಾರಂಗೆಯ್ವ ನಿರಂತರತ್ರಿಸಂಧ್ಯಾಸೇವೆಯುಮೆಂದೆಂಟುಂ ತೆ
ಪೂಜೆಯುಮನರ್ಕಪೂಜೆಯುಮಂ ಮನ್ನಿಸಿ ಅಸಿಮಷಿಕೃಷಿವಣಿಗ್ವಿದ
ಲ್ಪಕರ್ಮಂಗಳಿಂ ಶುದ್ಧವೃತ್ತಿಯಿಂದರ್ಥೋಪಾರ್ಜನಂಗೆಯ್ವ ವಾರ್ತೆಯುಂ
ಶುದ್ಧಿಯಿನನುಕಂಪೆವೆರಸು ಸಮಸ್ತಪ್ರಾಣಿಗಳ್ಗಭಯಂಗುಡುವ ದಯಾತಿ
ಯುಂ ತ್ರಿಯಾಮಾತ್ರಿತಯಂಗಳಿಂದಮಾತ್ಮಸಮಾನಶ್ರಾವಕಾಗ್ರಣಿಗಳ್ಗೆ
ನ್ಯಾಭೂಮಿಸುವರ್ಣಹಸ್ತ್ಯಶ್ವರಥರತ್ನಾದಿಗಳಂ ಕುಡುವ ಸಮದತ್ತಿಯ
ಪರಮತಪಶ್ಚರಣನಿರತಯತಿಸಮಿತಿಗೆಲ್ಲಂ ಪ್ರತಿಗ್ರಹಾದಿಪುರಸ್ಸರಂ ನಿರವದ

ರಾದಿವಿತರಣರೂಪಸಾತ್ರದತ್ತಿಯುಂ ನಿಜಾನ್ವಯೋದ್ಧರಣಸಮರ್ಥನಪ್ಪ ತನೂಭವಂಗಾತ್ಮೀಯಧರ್ಮಧನಬಂಧುಗಳಂ ಸಮರ್ಪಿಪ ಸಕಳದತ್ತಿ ಯುಂ ಬೆರಸು ಚತುರ್ವಿಧಮಪ್ಪ ದತ್ತಿಯುಂ ಉಪಾಸಕಾಧ್ಯಯನಾಧ್ಯಾಪ ನಂತರಂ ಸಕಳಶಾಸ್ತ್ರಂಗಳನೋದುವೋದಿಸುವ ನೆನೆವ ಬರೆವ ಪರಮ ಸ್ವಾಧ್ಯಾಯಮುಮಂ ಪಂಚಾಣುವ್ರತಾದಿಪ್ರವರ್ತನಸ್ವಭಾವಸಂಯಮಮುಮಂ ನಶನವೃತ್ತ್ಯಾದಿತಪೋನುಷ್ಠಾನಮುಮಂ ಬೆರಸಾರ್ಯಷಟ್ಕರ್ಮಂಗಳಂ ನಿ ಗಿವು ಕುಲಾಚಾರಂಗಳೆಂದಱಿಯೆ ಪೇೞ್ದು ಕೈಕೊಳಿಸಿ,

ಱುಂವೃತ್ತಿಗಳನಿವಂ
ಾಱಿದರಲ್ಲರ್ ದ್ವಿಜನ್ಮರೀವೃತ್ತಿಗಳಿಂ।
ೇಕ್ಷಾದರ್ ದ್ವಿಜರುಂತೇಂ
ೇಱುಂಟೆ ಮನುಷ್ಯಜಾತಿ ತಾನೊಂದೆ ವಲಂ॥ ೧೪

ತಸಂಸ್ಕಾರದಿನಾದರ್
ತತಗುಣರ್ ಬ್ರಾಹ್ಮಣರ್ ಕ್ರಿಯಾಸಂತತಿಸಂ।
ಮುತರುಚಿತಸತ್ಕ್ರಿಯಾವಿರ
ತನಾತಂ ನಾಮಧಾರಕಂ ದ್ವಿಜನಲ್ಲಂ॥ ೧೫

ವ॥ ಎಂದವರನಾತ್ಮೀಯಾನ್ವಯೋಚಿತವ್ರತಂಗಳೊಳ್ ದೃಢವ್ರತರಂಮಾ ಮತ್ತಂ ದ್ವಾದಶಾಂಗಂಗಳೊಳ್ ಪೇೞ್ದ ದಾನಪ್ರೀತಿಸುಪ್ರೀತಿಧೃತಿಮೋದಪ್ರಿ ಯೋದ್ಭವನಾಮಕರ್ಮಬಹಿರ್ಯಾನನಿಷದ್ಯಾನಪ್ರಸಾದನವ್ಯುಷ್ಟಿಕೇಶವಾಪ ಲಿಪಿಸಂಖ್ಯಾನಸಂಗ್ರಹೋಪನಯನಬ್ರತಚರ್ಯಾವ್ರತಾವತರಣವಿವಾಹವರ್ಣ ಲಾಭಕುಲಾಚಾರ್ಯಗೃಹೀತ್ವಪ್ರಶಾಂತಿಗೃಹತ್ಯಾಗದೀಕ್ಷಾಜಿನರೂಪಮೌನಾ ಧ್ಯಯನವೃತ್ತತೀರ್ಥಕೃದ್ಭಾವನಾಗುರುಸ್ಥಾನಾಭ್ಯುಪಗಮಗಣೋಪಗ್ರಹ ಸ್ವಗುಣಸ್ಥಾನಸಂಕ್ರಾಂತಿನಿಸ್ಸಂಗತ್ವಾತ್ಮಭಾವನಾಯೋಗನಿರ್ವಾಣಸಂಪ್ರಾ ಪ್ತಯೋಗನಿರ್ವಾಣಸಾಧನೇಂದ್ರೋಪಪಾತಾಭಿಷೇಕವಿಧಿಸುಖೋದಯೇಂ ದ್ರತ್ಯಾಗಾವತಾರಹಿರಣ್ಯಗರ್ಭೋತ್ಕೃಷ್ಟಜನ್ಮಮಂದರಾದ್ರೀಂದ್ರಾಭಿಷೇ ಕಗುರುಪೂಜೋಪಲಾಭಯುವರಾಜ್ಯಚಕ್ರಲಾಭದಿಗ್ವಿಜಯಚಕ್ರಾಭಿಷೇಕ ಸಾಮ್ರಾಜ್ಯಪರಿನಿಷ್ಕ್ರಮಣಯೋಗಸನ್ಮಾಹಾರ್ಹತ್ಸಂವಿಹಾರಯೋಗ್ಯ ತ್ಯಾಗನಿರ್ವೃತಿಯೆಂಬಯ್ವತ್ತುಮೂಱು ಗರ್ಭಾದಿನಿರ್ವಾಣಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳಂ,

ಮೊದಲಿಂ ತೆಗುಳ್ದು ತುದಿವರ
ಮಿದರ್ಕಿದಾಚರಣಮಿದಱ ವಿಧಿಯಿಂತುಟು ತ।
ಪ್ಪದೆ ಮನ್ತ್ರಪೂರ್ವಕಂ ನೆಗ
ೞ್ವುದೆಂದು ಚಕ್ರಾಧಿಪಂ ಮನಂಗೊಳೆ ಪೇೞ್ದಂ ॥ ೧೬

ವ॥ ಮತ್ತಮವತಾರವೃತ್ತಿಲೋಭಗಣಗ್ರಹಣಪೂಜಾರಾಧ್ಯಪುಣ್ಯಯಜ್ಞಾಧೃಢಚರ್ಯೋಪಯೋಗಿತ್ವಮೆಂಬೆಂಟುಂ ಬೆರಸುಂ ಪೂರ್ವೋಕ್ತೋಪನಯನಾದಿಚತ್ವಾರಿಂಶತ್ಕ್ರಿಯೆಗಳೊಡನೆನಾಲ್ವತ್ತೆಂಟುದೀಕ್ಷಾನ್ವಯಕ್ರಿಯೆಗಳುಮಂ ಸಜ್ಜಾತಿಸದ್ಗೃಹತ್ವಪರಿವ್ರಾಜ್ಯಪದಸುರೇಂದ್ರತ್ವಸಾಮ್ರಾಜ್ಯಪರಮಾರ್ಹಂತ್ಯಪರಿನಿರ್ವಾಣಮೆಂಬೇೞುಂ ಪರಮಸ್ಥಾನನಾಮಕೃತಾನ್ವಯಕ್ರಿಯೆಗಳನತಿಬಾಲವಿದ್ಯಾಕುಲಾವಧಿವರ್ಣೋತ್ತಮತ್ವಪಾತ್ರತ್ವಸೃಷ್ಟ್ಯಧಿಕಾರಿವ್ಯವಹಾರದಂಡ್ಯತ್ವಮಾನಾರ್ಹತ್ವಪ್ರಜಾಸಂಬಂಧಾಂತರಮೆಂಬ ಪತ್ತುಮಧಿಕಾರಂಗಳುಮನಱಿಪಿ, ಮತ್ತಂ ಗರ್ಭಾನ್ವಯಾದಿಕ್ರಿಯೆಗಳನನುಷ್ಠಿಸುವಾಗಳ್ ವಿನೇಯಜನತಾಸತತಾರ್ಚಿತಜಿನಭವನದೊಳಮಾತ್ಮೀಯಗೃಹಾಭ್ಯಂತರಪ್ರಶಸ್ತಪ್ರದೇಶಂಗಳೊಳಂ ಪ್ರಶಸ್ತಮೃತ್ತಿಕಾವಿರಚಿತೋನ್ನತವೇದಿತಳಾಷ್ಟಮಮಹಾಪ್ರಾತಿಹಾರ್ಯಸಮನ್ವಿತಜಗತ್ಪೂಜ್ಯಪೂಜಿತಾರ್ಹತ್ಪ್ರತಿಮೆಗಳ ನಿಱಿಸಿ ಯಥಾಶಕ್ತಿಸ್ನಪನಪೂಜಾಪುರಸ್ಸರಂ ಬಹುವಿಧಾರ್ಚನೆಗಳಿಂದರ್ಚಿಸಿ ಧರ್ಮಚಕ್ರಚ್ಛತ್ರತ್ರಿತಯಂಗಳ ಬಳಸಿಯುಮುಪಾಶ್ರಯಂಬಡೆಯೆ ನಿಱಿಸಿ ತೀರ್ಥಕರಗಣಧರಾನಗಾರಕೇವಳಿಗಳ ಪರಿನಿರ್ವಾಣಕ್ಷೇತ್ರದೊಳ್ ಶರೀರಸಂಸ್ಕಾರಾದಿಗಾರ್ಹಪತ್ಯದಕ್ಷಿಣಾಗ್ನ್ಯಾಹವನೀಯಮೆಂಬ ಪೆಸರಂ ಪಡೆದಗ್ನಿತ್ರಯಂಗಳೊಳಗರ್ಹದರ್ಚನಾಭಿಷೇಕಘೃತತಿಳಾಜ್ಯಾಹುತಿಗಳನುಪಾಸಕಾಧ್ಯಯನಗದಿತಸಮಸ್ತಪ್ರಕಾರಪಿಪೀಲಿಕಾಜಾತ್ಯಾದಿಮಂತ್ರಂಗಳಿಂ ಕ್ರಿಯಾನುಯುಕ್ತಮಾಗೆ ಪೇೞ್ದು ಪೂರ್ವಾಪರವಿದೇಹಂಗಳೊಳ್ ಅವ್ಯವಚ್ಛಿನ್ನರೂಪದಿಂ ಭರತೈರಾವತಂಗಳೊಳ್ ನಿಜೋಚಿತಕಾಲಕಾಲಾರಂಭಾವಸಾನರೂಪದಿಂ ನೆಗೞ್ದೀಕ್ರಿಯಾವಿಶೇಷಂಗಳನಿಲ್ಲಿಂದಿತ್ತಡೆಯುಡುಗದೆ ನಡೆಯಿಸುವುದು ಈಕ್ರಿಯೆಗಳನುಷ್ಠಾನಮಂತ್ರಶೂನ್ಯಂಗಳಾದಂದು,

ದೊರೆಕೊಳಿಸುವ ತತ್ಕ್ರಿಯೆಯೊಳ್
ಪರಿಣಮಿಸುವ ಫಳಮನಸ್ತ್ರಶಸ್ತ್ರತನುತ್ರೋ।

ತ್ಕರರಹಿತಂಗೆಸಹಾಯಂ
ಗರಾತಿಬಳಜಯಮನಳವು ದೊರೆಕೊಳಿಸುವವೊಲ್ ‖ ೧೭

ಅದಱಿಂದಂ ಸಕಳಾಗಮ
ವಿದರಿದನಿಂ ತಪ್ಪದಂತು ನೆಗೞಿಂ ನೆಗೞ್ದಿಂ ।
ದುದಿತೋದಿತಪರಮಸುಖಾ
ಸ್ಪದಕ್ಕೆ ಬಗೆದಂತೆ ನೀಮೆ ಮೊದಲಿಗರಪ್ಪಿರ್ ‖ ೧೮

ಇದನಾದಿಪ್ರಭವಂ ಭವಭ್ರಮಣದುಃಖೋಗ್ರಾಗ್ನಿಯೊಳ್ ಮಗ್ಗಿದ
ಪ್ಪುದು ಜೀವಂಗಳನೆಂಬಿನಂ ಬಳಸದೀಮಿಥ್ಯಾತ್ವಬಂಧಂ ಕಳ ।
ಲ್ದುದಿರುತ್ತಿರ್ಪಿನೆಗಂ ಚತುರ್ದಶಗುಣಸ್ಥಾನಂಗಳಂ ನಂಬಿ ಪೊ
ರ್ದಿದವರ್ ಪೊರ್ದಿದರಲ್ತೆ ಮುಕ್ತಿವನಿತಾಕಾಂಚೀಗುಣಸ್ಥಾನಮಂ ‖ ೧೯

ಪರಮಬ್ರಹ್ಮತನೂಭವರ್ ದ್ವಿಜವರರ್ ವರ್ಣೋತ್ತಮರ್ ಲೋಕಪೂ
ಜ್ಯರಿಳಾವಲ್ಲಭಮಾನ್ಯರುನ್ನತಗುಣರ್ ಚಾರಿತ್ರಶುದ್ಧರ್ ಧರಾ ।
ಮರರೀಬ್ರಾಹ್ಮಣರೆಂದು ಕೊಂಡುಕೊನೆದಾಷಟ್ಖಂಡಭೂಮಂಡಲೇ
ಶ್ವರನೋರಂತೆ ನೆಗೞ್ಚೆ ಕೂಡೆ ನೆಗೞ್ದತ್ತತ್ತಂ ದ್ವಿಜನ್ಮಾನ್ವಯಂ ‖ ೨೦

ಎಂದಿಂತು ನಾಭಿನಂದನ
ನಂದನನಾನಂದದಿಂದಮಂದವರಂ ತ ।
ನ್ನೆಂದಂದದಿಂದೆ ನಡೆಯಿಸಿ
ದಂ ದಾನಂಗುಡುವದೊಂದಲಂಪಿನ ಪೆಂಪಿಂ ‖ ೨೧

ವ॥ ಅಂತು ಭರತೇಶ್ವರಂ ಭರತಕ್ಷೇತ್ರದೊಳ್ ತಾನೆ ಮಾಡಿದ ತನ್ನ ಕೊಂಡಾಟದಿನತಿಪ್ರಸಿದ್ಧಮಾದ ವಿಪ್ರಸಂತತಿ ಕೆಲವುಕಾಲಂ ನಡೆವನ್ನೆಗ ಮೊಂದುದಿವಸಂ ತ್ರಿಯಾಮಾವಿರಾಮದೊಳ್ ಆಶ್ಚರ್ಯಭೂತಂಗಳುಂ ದೂರಾರಿಷ್ಟಫಲಸೂಚಕಂಗಳುಮಪ್ಪ ಸ್ವಪ್ನಂಗಳಂ ಕಂಡು ಬೆರ್ಚಿದಂತೆದರ್ದು ವಿಶಾಗಳೆನ್ನ ಕಂಡಕನಸುಗಳೀಯುಗದ ಕಡೆಯೊಳ್ ಪ್ರಜೆಗಳ್ಗೆ ವಿವಿಧೋಪದ್ರವಸೂಚಕಂಗಳಾಗಿ ತೋರ್ಕುಮೆಂದನುಮಾನಿಸಿದನಸ್ಪಷ್ಟರೂಪದಿನಱಿದು ಭಗವದರ್ಹತ್ಸಮೀಪಕ್ಕೆ ಪೋಗಿ ಯುಗಪತ್ಸಕಳಪದಾರ್ಥಯಥಾರ್ಥಾವಭಾಸಿಯಪ್ಪ ಕೇವಲಜ್ಞಾನದಿಂ ವಿಶೇಷನಿಶ್ಚಯಮಂ ಮಾಡುವನೆಂದು ಸಕ

ಳಪ್ರಾಭಾತಿಕಕ್ರಿಯೆಯಂ ನಿರ್ವರ್ತಿಸಿ ಮಕುಟಬದ್ಧಪರಿವೃತನಾಗಿ ಬಂದು ಕೈಳಾಸಗಿರೀಂದ್ರಸ್ಥಿತಸಮವಸೃತಿಯಂ ಸಂಸೃತಿಲತಾವಿಚ್ಛೇದಿಯಂ ಪೊಕ್ಕು ಗಂಧಕುಟಿಯಂ ಮೂಱುಸೂಳ್ಬಲವಂದು ದೇವದಾನವಗಂಧರ್ವವಿದ್ಯಾಧರಾರಾಧ್ಯನಂ ವೃಷಭನಾಥನನರ್ಥಾನುಗತಾಷ್ಟೋತ್ತರಸಹಸ್ರನಾಮಾಂಕಿತಸ್ತುತಿಗಳಿಂ ಸ್ತುತಿಯಿಸಿ ದಿವ್ಯಾರ್ಚನೆಗಳಿಂದರ್ಚಿಸಿ ಗಣಧರಾದಿಯತಿಸಮಿತಿಗೆಱಗಿ ನಿಜೋಚಿತಸ್ಥಾನದೊಳ್ ಕುಳ್ಳಿರ್ದಾಗಳ್,

ಪರಿಣಾಮಶುದ್ಧಿ ದೊರೆಕೊಳೆ
ಪುರುಪರಮೇಶ್ವರಪದಾಬ್ಜಭಕ್ತಿಯಭರದಿಂ ।
ಭರತಂಗೆ ಶಾಸ್ತ್ರಲಕ್ಷಣ
ಪರಿಕರದಿಂ ತೊಟ್ಟನವಧಿ ಪುಟ್ಟಿತ್ತಾಗಳ್ ॥ ೨೨

ವ॥ ಅಂತುತ್ಪನ್ನಾವಧಿಬೋಧಂ, ಧರ್ಮಾಮೃತಾಸ್ವಾದನಪರನಾಗಿ ಕಿಱಿದು ಪೊತ್ತಿರ್ದು ನಿಜಮನೋಗತಕಾರ್ಯವಿಜ್ಞಾಪನಮುಖರಮುಖನಾಗಿ,

ಆದಿಬ್ರಹ್ಮನೆನಲ್ ಮೊದ
ಲಾದುದಱಿಂ ದೇವ ಮಾಳ್ಪ ನೀನಿರ್ದಂತಾ ।
ನಾದ ಮರುಳ್ತನದಿಂದು
ತ್ಪಾದಿಸಿದೆಂ ಬ್ರತಸಮೇತವಿಪ್ರಾನ್ವಯಮಂ ॥ ೨೩

ಗುಣಭೂಮಿವಿಭಾಗದೊಳಾ
ದೆಣಿಕೆಯೊಳೊಂದಾದಿಯಾಗೆ ಪನ್ನೊಂದುವರಂ ।
ಗುಣವದ್ವ್ರತಚಿಹ್ನಂ ಗುಣ
ಮಣಿಭೂಷಣ ಸೂತ್ರಮಮರ್ದುದವರ್ಗೆನ್ನಿಂದಂ ॥ ೨೪

ಇದಱೊಳ್ ಗುಣಮೋ ದೋಷಮೊ
ಪೊದೞ್ದು ನಿಂದಪುದಯುಕ್ತಮೋ ಯುಕ್ತಮೊ ಪೇ ।
ೞದು ಹಾನಿಯೊ ವೃದ್ಧಿಯೊ ತಾ
ನದಾವುದಂ ಪೊರ್ದಿ ನಿಲ್ಕುಮಘವಿಘಟಪಟೂ ॥ ೨೫

ವ॥ ಅದಲ್ಲದೆಯುಮಿಂದಿನ ದಿನಂ ಬೆಳಗಪ್ಪ ಜಾಮದೊಳ್ ಪದಿನಾಱು ಕನಸುಗಳಂ ಕಂಡೆನಾಕನಸುಗಳನಿಷ್ಟಫಲಸೂಚಕಂಗಳೆಂಬುದಂ ಸಾಮಾ

ನ್ಯದಿನುಪಲಕ್ಷಿಸಿದೆನವಱ ಫಲಮುಮನೆನಗಱಿಯೆ ಬೆಸಸಿಮೆಂದವಧಿಜ್ಞಾನ ದಿಂ ತಾನಾಕನಸುಗಳನಱಿವನಾಗಿಯುಂ ಸಭಾಜನಕ್ಕಮಱಿಪಲೆಂದು ಬೆಸ ಗೊಳ್ವುದುಂ ಪ್ರಶ್ನಾನುಕ್ರಮದಿಂ ತ್ರಿಲೋಕಗುರುವಿಂತೆಂದು ಬೆಸಸಿದಂ ನೀನಾದ್ವಿಜನ್ಮಜಾತಿಯುಂ ಬಳ್ಳಿತಂಮಾಡಿದೆಯಾದೊಡಂ,

ಧರೆಯೊಳ್ ಧರ್ಮಾರ್ಥದಿಂ ನೀಂ ಸೃಜಿಯಿಸಿ ನೆಗಳ್ದೀವಿಪ್ರಸಂತಾನದೊಂದಾ
ಚರಣಂ ನೀನೆಂದ ಪಾಂಗಿಂ ಕೃತಯುಗದೊಳ್ ದಲ್ಸಲ್ಗುಮಿನ್ನುತ್ತ ನಪ್ಪಾ।
ಚರಣಂ ಸನ್ಮಾರ್ಗದೊಳ್ ಪುಚ್ಚರಿಸಿ ಕಲಿಯುಗಾಭ್ಯರ್ಣದೊಳ್ ದ್ರವ್ಯಲೋಭಾ
ತುರರುನ್ಮಾರ್ಗೋಪದೇಶೋದ್ಯತಮತಿಗಳತಿಕ್ರೂರರಪ್ಪರ್ ದ್ವಿಜನ್ಮರ್॥

ಮಧುಮದ್ಯಮಾಂಸಲೋಲುಪ
ರಧಾರ್ಮಿಕರ್ ಪರವಧೂರತಿಪ್ರಿಯರಧಮರ್।
ವಧನಿರತರ್ ಪಾಪಿಗಳನ್ಯ
ತಧನರ್ ದ್ವಿಜರಿನ್ನರಪ್ಪರಾಕಲಿಯುಗದೊಳ್॥ ೨೫

ವ॥ ಆದೊಡವಿಗಾಗಳವರ್ ಸದಾಚಾರರಪ್ಪುದಱಿಂ ಅವರನಾಮಾಪ್ಕೆಯೊಳ್ ನಡೆಯಲೀಯದೆ ಮಾಡಿ ಕಿಡಿಸಿದೊಡೆ ನಿನಗೆ ಪಿರಿದುಂ ದೂಱಕ್ಕುಮೆಂದು ಪೇೞ್ದು ಮತ್ತಮಾತನ ಕಂಡ ಷೋಡಶಸ್ವಪ್ನಸೂಚಿತಫಲಂಗಳನಿಂತೆಂದು ಬೆಸಸಿದರ್,

ಭರತಮಹೀತಳಮನಳಂ
ಚರಿಸಿರ್ದಿರ್ಪತ್ತು ನಾಲ್ಕು ಕೇಸರಿಗಳನಾ।
ದರದಿಂ ಕಂಡುದಱಿಂದನಿ
ಬರೆ ತೀರ್ಥಕರರ್ಕಳಪ್ಪರವರ ವಿಹಾರಂ॥ ೨೬

ಧರೆಯೊಳ್ ಸಲೆ ಪಾಷಂಡಿಗ
ಳರೆಬರ್ ಪುಟ್ಟುಯುಮುಡಂಗುವರ್ ಮತ್ತಂ ಕೇ।
ಸರಿಗಳ ಬಳಸಿಯುಮನುಕೂ
ಲರೂಪದಾಡುವ ಮೃಗಂಗಳಂ ಕಂಡುದಱಿಂ॥ ೨೭

ಪರಮಜಿನತೀರ್ಥರೊಳ್ ಪಲ
ಬರುಮಾಗಿಯುಮೇಕಲಿಂಗಿಗಳ್ ವಿಕೃತಿಗಳಂ।

ವಿರಹಿತರಪ್ಪರ್ ಮದಸಿಂ
ಧುರಭಾರಮನಾನಲಾಱದಳ್ವಿಂ ಬೆನ್ನಂ ‖ ೧೭

ನೞದೞದು ನಡೆವ ಹಯದಳಿ
ಯೞವಂ ಕಂಡುದಱಿನಧಿಕಬಲಮುನಿಪಧೃತಾ ।
ತುೞಗುಣಭಾರಮನಾಂಪನಿ
ತೞವಿಲ್ಲದೆ ಕಿಡುವರಲ್ತೆ ದುಷ್ಷಮಯತಿಗಳ್ ‖ ೧೮

ನೆರೆದೊಂದಿನಿಂದ ಶಾಕ್ಯರ
ವರಯೂಥಮನವನಿನಾಥ ಕಂಡುದಱಿಂದೊ ।
ರ್ವರೆ ವಿಹರಿಪ್ಪುದಂ ಬಿಸಟಂ
ಬರಾಂಬರರ್ ತಮ್ಮ ಸಮುದಯಂಬೆಱಸಿರ್ಪರ್ ‖ ೧೯

ಮುಸುಱಿದ ಮುಗಿಲ್ಗಳಿಂದಣ
ಮೆಸೆಯದೆ ನಿಂದರ್ಕಬಿಂಬಮಂ ಕಂಡುದಱಿಂ ।
ದೆಸೆಯದು ದುಷ್ಷಮಕಾಲದೊ
ೞ ಸದೃಶಕೈವಲ್ಯಬೋಧದಿನಕರಬಿಂಬಂ ‖ ೨೦

ಕಳಿಕಾಂಕುರಕುಸುಮೋತ್ಕರ
ಫಳಪಲ್ಲವರಹಿತಮಹಿಜಮಂ ಕಂಡುದಱಿಂ ।
ದೞವಿಲ್ಲದನರನಾರೀ
ಕುಳಮನುಪಮಸತ್ಯಶೌಚವಿರಹಿತಮಕ್ಕುಂ ‖ ೨೧

ಹರಿತಾಂಕುರಪಲ್ಲವಪ
ತ್ರರಾಜಿಯಂ ಬಿಸುಟು ಶುಷ್ಕಪತ್ರಂಗಳನಾ ।
ದರದಿಂ ಮೇವಜಕುಳಮಂ
ದೊರೆಕೊಳೆ ನೀಂ ಸ್ವಪ್ನಕಾಲದೊಳ್ ಕಂಡುದಱಿಂ ‖ ೨೨

ಸಮಯಿಗಳುಂ ಚಾತುರ್ವ
ರ್ಣಮುಮುಚಿತಚರಿತ್ರಮಂ ಬಿಸುಟ್ಟಾದಂ ಪೊ ।
ಲ್ಲಮೆಯೊಳ್ ಸಲೆ ನಡೆವರ್ ದು
ಷ್ಷಮಮೆಂಬಯ್ದನೆಯ ಕಾಲದೊಳ್ ಭರತನೃಪಾ ‖ ೨೩

ಕರಿಪತಿಯುನೇಱಿ ಕೋಡಗ
ಮಿರೆ ಕಂಡುದಱಿಂದಮಾದಿಭೂಪರ್ ಕಿಡೆ ಬೇ ।
ಡರುಮಕುಲೀನರುಮತಿದು
ಶ್ಚರಿತ್ರರುಂ ಭೂಪರಪ್ಪರನ್ಯಾಯಪರರ್ ॥ ೩೪

ಕಾಗೆಗಳಿಂದಂ ಬಳಸಿದ
ಗೂಗೆಗಳಂ ಕಂಡೆಯಪ್ಪ ಕಾರಣದಿಂ ಜೈ ।
ನಾಗಮವಿದರಂ ಸಾರದೆ
ಪೋಗಿ ಕುಲಿಂಗಿಗಳನೀಜನಂ ಸೇವಿಸುಗುಂ ॥ ೩೫

ಆಡುವ ಮರುಳ್ಗಳಂ ನಡೆ
ನೋಡಿದುದಱಿನಿಂತು ಕನಸಿನೊಳ್ ಮಕ್ಕಳ್ಗಂ ।
ಕೂಡೆ ಪೆಸರಿಟ್ಟು ಸಲೆ ಕೊಂ
ಡಾಡಿದಪರ್ ವ್ಯಂತರರ್ಕಳಂ ಜಡಮತಿಗಳ್ ॥ ೩೬

ಕಡೆವಿಡಿದು ಬಳಸಿ ನೀರಿರೆ
ನಡುಬತ್ತಿದ ಕೆಱೆಯನಿಂತು ಕಂಡುದಱಿಂದಂ ।
ನಡುನಾಡೊಳಱಂ ನೆಲಸದೆ
ಕಡೆಯೊಳ್ ನೆಲೆಗೊಳ್ಗುಮಿಲ್ಲಿ ಸಂದೆಯಮುಂಟೇ ॥ ೩೭

ಧೂಳೀಧೂಸರವರರ
ತ್ನಾಳಿಗಳಂ ಕಂಡ ದೂಸಱಿಂದಂ ಧರಣೀ ।
ಪಾಳಕಮುನಿಪರ್ ಪಂಚಮ
ಕಾಳದೊಳಣಮಾಗರಲ್ತೆ ಋದ್ಧಿಪ್ರಾಪ್ತರ್ ॥ ೩೮

ಕೊರಲೊಳ್ ಕಟ್ಟಿದ ಮಾಲೆಯ
ಸಿರಿಖಂಡದ ತಳ್ಕುವೆರಸು ಬಿಡುನಾಯ್ಬೆರಸಾ ।
ದರದಿಂದನರ್ಘ್ಯಮಣಿವಿ
ಷ್ಟರದೊಳ್ ಕಳ್ಳರ್ದುರ್ಗ ಸರುಗನುಣೆ ಕಂಡುದಱಿಂ ॥ ೩೯

ವ್ರತಹೀನರ್ ಸನ್ಮಾರ್ಗ
ಪ್ರತಿಕೂಲರ್ ವ್ಯಸನವಶಗತರ್ ಪಾಪಿಗಳಂ ।

ತತಿಕಷ್ಟರಪ್ಪರವನಿಯೊ
ಳತಿಥಿಯೊಳನ್ನನ್ನದಾನವುಂ ಕುಡುವೆಡೆಯೊಳ್ ॥ ೪೦

ತರುಣವೃಷಂ ಕೆಲೆದು ತೊೞ
ಲ್ತರೆ ಕಂಡುದಱಿಂದೆ ಜೈನದೀಕ್ಷೆಗೆ ಮೆಯ್ಯಂ ।
ತರುಣಜನಂಗಳೆ ತರ್ಪರ್
ಪರಿಣತವಯಸರ್ಕಳಪ್ಪವರ್ ಮೆಯಿಡ್ದರರ್ ॥ ೪೧

ಪರಿವೇಷಂಗೊಂಡಾಖರ
ಕರನಂ ಕಂಡುದಱಿನೆಂದು ಮುನಿನಿಕರಕ್ಕಾ ।
ದರದವಧಿಮನಃಪರ್ಯಯ
ಮೆರಡುಮಣಂ ಪುಟ್ಟವೆಂದು ನಂಬು ನರೇಂದ್ರಾ ॥ ೪೨

ಪುದಿದ ತಱಗೆಲೆಗಳಂ ಕಂ
ಡುದಱಿಂದಂ ಧಾನ್ಯಸಮಿತಿ ನೀರಸಮಕ್ಕುಂ ।
ತುದಿಯೊಳ್ ಮನುಜಪ್ರತತಿಗ
ಮದೆ ದಲ್ ಭೋಗೋಪಭೋಗಕಾರಣಮಕ್ಕುಂ ॥ ೪೩

ಇವು ದೂರಫಲಂಗಳ್ ಸ್ವ
ಪ್ನವಿಶೇಷಂಗಳ್ ತನೂಜ ಕೊಕ್ಕರಿಸದಿರಿ ।
ನ್ನಿವಱಿಡೆಗೆ ನಿನಗೆ ಸಲೆ ಮಾ
ಡ್ಕೆ ವಿಶ್ವವಿಘ್ನೋಪಶಾಂತಿಯುಂ ಜಿನಧರ್ಮಂ ॥ ೪೪

ವ॥ ಎಂಬುದುಂ ಭರತೇಶ್ವರಂ ಪ್ರಸನ್ನಮನನಾಗಿ ವೃಷಭಸೇನಾದ್ಯನುಪಮಪರ್ಯಂತಗಣಧರದೇವಚರಿತಾಕರ್ಣನಮನೆ ತನಗೆ ಕರ್ಣಪೂರಂಮಾಡಿ ಭಗವತ್ಸಿಂಹಾಸನರತ್ನರಶ್ಮಿಚ್ಛಟಾತಿಪೂತಭೂತಳಕ್ಕೆ,

ಕುಸುಮೋಪಹಾರಮೆಸೆವಂ
ತೆಸೆವಿನಮಾನಮ್ರಮೌಳಿಶೇಖರವಿಗಳ ।
ತ್ಕುಸುಮೋತ್ಕರಮುರ್ವೀಯಶಃ
ಕುಸುಮಿತದಿಗ್ಲತಿಕನೆಱಗಿದಂ ಭರತೇಶಂ ॥ ೪೫

ವ॥ ಅಂತು ಪುರುಪರಮೇಶ್ವರಂಗೆಱಗಿ ಬಂದಯೋಧ್ಯಾಪುರಮಂ ಪೊಕ್ಕು ದುಸ್ಸ್ವಪ್ನದರ್ಶನಕರ್ಷಣಾರ್ಥಮಾಗಿ ಕಲ್ಪವೃಕ್ಷಮಹಾಮಹಿಮಾಪುರಸ್ಸರಂ ಭಗವದರ್ಹದಭಿಷೇಕಮುನಿಪೂಜನಸತ್ಪಾತ್ರದಾನಪ್ರಣಯಪ್ರೀಣನಮಾಹಾರವಿತರಣಗೋದೋಹಪ್ಲಾವನೀತಳಸಂತರ್ಪಣಾದಿಶಾಂತಿಕಕ್ರಿಯೆಗಳಂ ನೆಗೞ್ದು,

ವಿವಿಧದ್ವೀಪಂಗಳೊಳ್ ಮಂದರಗಿರಿತಟದೊಳ್ ಜ್ಯೋತಿರಾವಾಸದೊಳ್ ದೇ
ವವಿಮಾನಾನೀಕದೊಳ್ ಶೋಭಿಸುವ ಜಿನಗೃಹವ್ರಾತಮಂ ಗೆಲ್ದು ರತ್ನ ।
ಚ್ಛವಿಯಿಂ ದಿಗ್ಭಿತ್ತಿಯಂ ಚಿತ್ರಿಸುವ ಜಿನನಿಕೇತಂಗಳಂ ಮಾಡಿಸುತ್ತುಂ
ದಿವಿಜೇಂದ್ರಸ್ತುತ್ಯನಾದಂ ಸುಕವಿಜನಮನೋಮಾನಸೋತ್ತಂಸಹಂಸಂ ॥

ವ॥ ಅಂತಯೋಧ್ಯಾಪುರೋಪಾಂತಕಾಂತಪ್ರದೇಶಂಗಳೊಳಂ ಕೈಳಾಸೋದಗ್ರಕೂಟಂಗಳೊಳಂ ಷಟ್ಖಂಡಮಂಡಳಪ್ರಸಿದ್ಧರಾಜಧಾನಿಗಳೊಳಂ,

ದೆಸೆಗಳ್ ಪೆರ್ಚದೆ ಮೊಟ್ಟನಾದುವಗಲಕ್ಕೆಂಬನ್ನೆಗಂ ನೀಳಮಾ
ಗಸದೊಳ್ ಕಾಳಸೆಗೊಂಡುದೆಂಬಿನಗಮದ್ರೀಂದ್ರಂಗಳಂ ತಂದು ಕೀ ।
ಲಿಸಿದಂ ನಿಶ್ಚಳಮಪ್ಪಿನಂ ವಸುಧೆಗಾಕಲ್ಪಾಂತಮೆಂಬಂತು ಮಾ
ಡಿಸಿದಂ ಜೈನಗೃಹಂಗಳಂ ಪಲವುಮಂ ಸಂಸಾರಸಾರೋದಯಂ ॥ ೪೩

ಗ॥ ಇದು ದೇವೇಂದ್ರಮುನೀಂದ್ರವಂದ್ಯಪರಮಜಿನೇಂದ್ರಮುಖಚಂದ್ರ
ವಾಕ್ಚಂದ್ರಿಕಾಪ್ರಸರಪ್ರಸಾದೋದೀರ್ಣಸೂಕ್ತಿಕಲ್ಲೋಲ
ಮಾಲಾಕೀರ್ಣಕವಿತಾಗುಣಾರ್ಣವ
ಪ್ರಣೀತಮಪ್ಪಾದಿಪುರಾಣದೊಳ್
ಉಪಾಸಕಾಧ್ಯಯನವರ್ಣನಂನಾಮ
ಪಂಚದಶಾಶ್ವಾಸಂ
ಸಂಪೂರ್ಣಂ.

ಷೋಡಶಾಶ್ವಾಸಂ.

ಶ್ರೀರಮಣೀನಿಳಯಜಿನಾ
ಗಾರಂಗಳ್ ತನ್ನ ಜಸದವೊಲ್ ವಸುಧೆಗಳಂ ।
ಕಾರಂಗಳಾಗೆ ಪೂರ್ಣಮ
ನೋರಥನಾದಂ ಸರಸ್ವತೀಮಣಿಹಾರಂ ॥ ೧

ವ॥ ಅಂತು ತನ್ನ ಮಾಡಿಸಿದ ಚೈತ್ಯಾಲಯಂಗಳೊಳ್ ಆದಿಭಟ್ಟಾರಕಾದಿಯಾಗೆ ಭವಿಷ್ಯತ್ತೀರ್ಥಕರಪ್ರತಿಕೃತಿಗಳಂ ಪಂಚರತ್ನಮಯಂಗಳಂ ಮಾಡಿಸಿ ಮಾಣಿಕ್ಯದೇವರೆಂದು ಕೊಂಡಾಡಿ ತತ್ಪೂಜಾಕರಣಪುಣ್ಯವಾಸರಂಗಳೊಳ್ ಉಪವಾಸನಿರತನಪರಿಮಿತಾಜ್ಯಕ್ಷೀರದಧಿನಾಳಿಕೇರಸಹಕಾರಪೂಗೀಫಲಪುಂಡ್ರೇಕ್ಷುರಸಂಗಳಿಂದಂ ಗೋಶೀರ್ಷಚಂದನಕರ್ಪೂರಪರಿಮಳಸುರಭಿಗಂಧೋದಕಗಳಿಂದಮಭಿಷೇಕಂಗೆಯ್ದು,

ಫಳದೊಳ್ ದೇವೇಂದ್ರನುದ್ಯಾನದ ವಿವಿಧಫಲಂ ಪೂಗಳೊಳ್ ಕಲ್ಪವೃಕ್ಷಂ
ಗಳ ಪೂಗಳ್ ದೀಪಗಳೊಳ್ ಪನ್ನಗಪತಿಯ ಫಣಾರತ್ನದೀಪಂ ವಿತಾನಾ ।
ವಳಿಯೊಳ್ ದಿವ್ಯಂ ವಿತಾನಂ ತುಱುಗಿದುವಮರೇಂದ್ರಾರ್ಚನಕ್ಕಿಂತಿದಾಯ್ತು
ಗ್ಗಳವೆಂಬಂತಾಗೆ ದಿವ್ಯಾರ್ಚನೆಯೊಳೆ ಮೆಱೆದಂ ಭಕ್ತಿಯಂ ಚಕ್ರನಾಥಂ

ವ॥ ಅಂತರ್ಚಿಸಿ ನಿರ್ಭರಪ್ರಣಾಮಾಂಜಲಿಪ್ರಣಯಕೃತೋತ್ತಮಾಂಗನಾಗಿ,

ಕಮಳಾಳಂಕೃತಮಪ್ಪ ಹೇಮಕಮಳಂ ಮಾಣಿಕ್ಯಭಟ್ಟಾರಕ
ದ್ಯುಮಣಿಜ್ಯೋತಿಯಿನೊಯ್ಯನುಳ್ಳಲರ್ದವೊಲ್ ಚೆಲ್ವಿಂಬಿನಂ ಭವ್ಯಹೃ ।
ತ್ಕಮಳಕ್ಕಂ ಮುದಮಂ ಜಪಾಪ್ರಸವರಕ್ತಾಶೋಕಬಂಧೂಕಶೋ
ಣಮಣಿಜ್ಯೋತಿಗಳೈಕ್ಯದಿಂ ಕುಡೆ ಜಯಂ ಭದ್ರಂ ಶುಭಂ ಮಂಗಳಂ ॥೩

ಕಣಿ ರತ್ನತ್ರಿತಯಕ್ಕಿದೇಂ ಪಿರಿದೆನಲ್ ರತ್ನಾಕರಂ ರತ್ನತೋ
ರಣರತ್ನಾಸನರತ್ನವಿಭ್ರಮಣರತ್ನಾಶೋಕರತ್ನಪ್ರಭಾ ।
ಮಣಿರತ್ನಾತಪವಾರಣತ್ರಿತಯದಿಂ ತ್ರೈಲೋಕ್ಯಸಾಮ್ರಾಜ್ಯಭೂ
ಷಣಮಾಣಿಕ್ಯಜಿನೇಂದ್ರಬಿಂಬಮೆ ಜಯಂ ಭದ್ರಂ ಶುಭಂ ಮಂಗಳಂ ॥ ೪

ಪರಿಪೂರ್ಣೋರ್ಜ್ಜ್ವಲಚಂದ್ರಬಿಂಬರುಚಿಯಿಂ ಚಂದ್ರಪ್ರಭಾಪುಷ್ಪದಂ
ತರೆನಲ್ ಗಾರುಡನೀಲಶೋಣಮಣಿಹೇಮಚ್ಛಾಯೆಯಿಂದಿರ್ಪತಿ ।

ರ್ಬರೆನಲ್ ಸಂದೊಡಮೇಕರೂಪಮೆ ಜಗಕ್ಕಾಶ್ಚರ್ಯಮಂ ಪುಟ್ಟಿಸು
ತ್ತಿರೆ ಮಾಣಿಕ್ಯಜಿನೇಂದ್ರಬಿಂಬಮೆ ಜಯಂ ಭದ್ರಂ ಶುಭಂ ಮಂಗಳಂ ॥ ೫

ಸ್ಫುರಿತೋದ್ಯತ್ಕನಕಪ್ರಭಾಪ್ರಸರದಿಂ ಪೀತಾಂಬರಂ ಪದ್ಮವಿ
ಷ್ಟರದಿಂ ಪಂಕಜವಿಷ್ಟರಂ ನತವಿನೇಯವ್ರಾತಚೇತಸ್ತಮೋ ।
ಹರನಾಗಿರ್ದದಱಿಂ ಹರಂ ಭವಹರಂ ಮಾಣಿಕ್ಯದೇವಂ ವಸುಂ
ಧರೆಗಿಂತೊರ್ಬನೆ ದೇವನಾಗಿರೆ ಜಯಂ ಭದ್ರಂ ಶುಭಂ ಮಂಗಳಂ ॥ ೬

ವಿಪಿನೋಲ್ಲಂಘನಸಿಂಧುಯಾನನಗಕೂಟಾರೋಹಣಕ್ಲೇಶಮಂ
ತ್ರಿಪದಧ್ಯಾನಬಿಳಪ್ರವೇಶರಸವಾದಾಯಾಸದೊಳ್ ಬಾರ್ತೆ ತೀ ।
ರ್ದಪುದೇ ಪೊರ್ದಲೊಡಂ ವಿನೇಯಜನಸಂಘಾತಕ್ಕೆ ಮಾಣಿಕ್ಯದೇ
ವಪದಾಂಭೋಜವರಪ್ರಸಾದಮೆ ಜಯಂ ಭದ್ರಂ ಶುಭಂ ಮಂಗಳಂ ॥ ೭

ಸಕಳಕ್ಷ್ಮಾಚರಖೇಚರಾಂಚಿತಮಹಾಮಾಣಿಕ್ಯಗಾಣಿಕ್ಯಹಾ
ಸ್ತಿಕರತ್ನೋರ್ಜಿತಚಕ್ರವರ್ತಿವಿಭವಂ ಮುನ್ನಂ ಬಟಿಕ್ಕೈಂದ್ರಮೈ ।
ಹಿಕಪಾರತ್ರಿಕಭೋಗಮಂ ಕುಡುವಿನಂ ಮಾಣಿಕ್ಯಭಟ್ಟಾರಕಾಂ
ತಿಕಮಂ ಸಾರೆ ವಿನೇಯರಾಜಿಗೆ ಜಯಂ ಭದ್ರಂ ಶುಭಂ ಮಂಗಳಂ ॥ ೮

ಕುಪಿತಾನೇಕಪದಂದಶೂಕದವದೈತ್ಯಾರಾತಿಚೋರಾಂಧಕಾ
ರಪತದ್ವಜ್ರವಿಷಾಭಿಚಾರಿಕಜರಾತಂಕಾದಿಭೇದಂಗಳ ।
ಪ್ಪುಪಸರ್ಗಂಗಳ ನೋವನಾವೆಡೆಯೊಳಂ ಕೈಗಾವ ಮಾಣಿಕ್ಯದೇ
ವಪದಾಂಭೋಜಮೆ ಭವ್ಯಕೋಟಿಗೆ ಜಯಂ ಭದ್ರಂ ಶುಭಂ ಮಂಗಳಂ ॥ ೯

ಸಿತದೂರ್ವಾಂಕುರಮಾತುಲುಂಗನಳಿನೀಭೃಂಗಾರಗೋರೋಚನಾ
ಕ್ಷತದಧ್ಯಾದಿವಿಡಂಬಮಂಗಳದೊಳೀಂ ಸಂಸಾರಮಂ ದಾಂಟುವೂ ।
ರ್ಜಿತಪುಣ್ಯಾಂಗಪವರ್ಗಲಕ್ಷ್ಮಿವರೆಗಂ ಸಂಸಾರಸಾರೋದಯೋ
ದಿತಮಾಣಿಕ್ಯಜಿನಸ್ತವಾವಳಿ ಜಯಂ ಭದ್ರಂ ಶುಭಂ ಮಂಗಳಂ ॥ ೧೦

ನಮೋವೃಷಭನಾಥಾಯ ತಸ್ಮೈ ವಿಸ್ಮಯಕಾರಿಣೇ
ಪುರಾಣೋಪ್ಯದ್ವಿತೀಯಸ್ಸರ್ಗ ಯುಗಭಾರಂ ಬಭಾರ ಯಃ ॥ ೧೧

ನಮೋಽಜಿತಾಯ ನಾಕಸ್ತ್ರೀನೇತ್ರೋತ್ಪಲವನೇಂದುನಾ ।
ದೂರೀಕೃತಸ್ಮರೋ ಯೇನ ನ ದೇವಚರಿತಂ ಚರೇತ್ ॥ ೧೨

ನಮೋಽಪುನರ್ಭವಪ್ಲುಷ್ಟ ಕಂದರ್ಪಾಯ ತಪೋಗ್ನಿನಾ ।
ಬೋಧದೃಷ್ಟಿಭುವಾಽಶ್ಚರ್ಯಧಾಮ್ನಾ ಸಂಭವಶಂಭವೇ ॥ ೧೩

ನಮಸ್ಸಮಸ್ತಜಗತಾಮತ್ಯಂತಸ್ವಾಸ್ಥ್ಯಹೇತವೇ ।
ಧರ್ಮಚಕ್ರಪವಿತ್ರಾಭಿರಭಿನಂದನವಿಷ್ಣವೇ ॥ ೧೪

ನಮಸ್ಸುಮತಿನಾಥಾಯ ವಿದ್ಯಾನಾಮಾದ್ಯವೇಧಸೇ ।
ಸ್ವಾತ್ಮೋಪಲಬ್ಧಮಾರ್ಗಸ್ಯ ಸ್ವಯಂಬೋಧಾತ್ಸ್ವಯಂಭುವೇ ॥ ೧೫

ನಮಃ ಪದ್ಮಪ್ರಭೇಶಾಯ ತಸ್ಮೈ ಪದ್ಮಪ್ರಧಾಯಿನೆ ।
ಜಗನ್ನಮತಿ ಕಿಂ ಚಿತ್ರಂ ಜನೋದಾತ್ತ ವಿರಜ್ಯತೇ ॥ ೧೬

ನಮಃ ಸುಪಾರ್ಶ್ವನಾಥಾಯ ಯಃಪಾರ್ಶ್ವದ್ವಯಚಾಮರೈಃ ।
ಮುಕ್ತಿಲಕ್ಷ್ಮೀಕಟಾಕ್ಷೈರ್ವಾ ರೇಜೇ ದುಗ್ಧಚ್ಛಟೋಜ್ಜ್ವಲೈಃ ॥ ೧೭

ನಮಃ ಪ್ರಕ್ಷೀಣರಾಗಾಯ ಲಬ್ಧಾತಿಶಯ ಶುದ್ಧಯೇ ।
ಸತ್ಪಥೋದ್ಯೋತಿನೇ ನಿತ್ಯಂ ಚಂದ್ರಪ್ರಭಜಿನೇಂದವೇ ॥ ೧೮

ನಮಸ್ಸುವಿಧಯೇ ಯಸ್ಯ ಜಗದ್ಗಹನಜೃಂಭಿತಃ ।
ಸ್ಯಾದ್ವಾದಸಿಂಹನಾದೋಭೂತ್ ಸಂಕುಚದ್ವಾದಿಕುಂಜರಃ ॥ ೧೯

ನಮಶ್ಶೀತಳನಾಥಾಯ ಯತ್ಸೂಕ್ತಾಮೃತಪಾಯಿನಾಂ ।
ಪ್ರಾಣಿನಾಂ ವಿಪ್ರಲಂಭಾಯ ನ ಭೋಗಮೃಗತೃಷ್ಣಿಕಾ ॥ ೨೦

ನಮಶ್ಶ್ರೇಯೋಜಿನೇಂದ್ರಾಯ ಯತ್ಪಾದಾಶ್ರಯವರ್ತಿನಾಂ ।
ಶ್ರೇಯಾಂಸಿ ಬಹುವಿಘ್ನಾನೀತ್ಯುಕ್ತೇರರ್ಥೋ ನಿರಾಶ್ರಯಃ ॥ ೨೧

ನಮಃ ಶ್ರೀವಾಸುಪೂಜ್ಯಾಯ ಭಜತಾಂ ಭಾವಪೂಜಯಾ ।
ಯೋ ಭವೇದ್ವರದಸ್ಸತ್ಯಂ ಭಕ್ತ್ಯಾ ತುಷ್ಯಂತಿ ದೇವತಾಃ ॥ ೨೨

ನಮೋ ವಿಮಲನಾಥಾಯ ಯದ್ಬೋಧಸ್ಯ ಸಮಃ ಕಥಂ ।
ಸಾಕ್ಷಾದ್ವಿಭಾವಭಾವಸ್ಯ ದರ್ಪಣಪ್ರತಿಮಾರ್ಪಣಂ ॥ (?) ೨೩

ನಮೋಽನಂತಜಿತೇಽನಂತಜನ್ಮಕಾಂತಾರಭಾರಜಂ ।
ರಜೋ ಯೇನ ಕ್ಷಣಾದ್ಧೌತ ಮಾಧ್ಯಾತ್ಮಧ್ಯಾನವಾರಿಣಾ ॥ ೨೪

ನಮೋ ಧರ್ಮಾಯ ಯೋ ನೋಚ್ಚೈರ್ಜಿತದುರ್ಜಯಕರ್ಮಣಾ ।
ಧರ್ಮೋ ಜಯತಿ ನಾಧರ್ಮ ಇತ್ಯಮೋಘೀಕೃತಂ ವಚಃ ॥ ೨೫

ನಮಃ ಶ್ರೀಶಾಂತಯೇ ತಸ್ಯ ಮೋಹಶಾಂತಿಃ ಕಿಮುಚ್ಯತೇ ।
ಷಟ್ಖಂಡರಾಜ್ಯಮತ್ಯಾಕ್ಷೀದ್ಯೋಽನಂತೈಶ್ವರ್ಯಕಾಂಕ್ಷಯಾ ॥ ೧೬

ನಮಶ್ಶ್ರೀಕುಂಥವೇ ಯೇನ ಮಹಾರಾಜ್ಯಂ ಮಹಾತ್ಮನಾ ।
ತ್ಯಕ್ತಂ ಮಹಾಮಹಾರ್ಹೇಣ ಸರ್ವಂ ಹಿ ಮಹತಾಂ ಮಹತ್ ॥ ೧೭

ನಮೋಽಸ್ತ್ವರಾಯ ಸಂಪ್ರಾಪ್ತಮುಕ್ತಿಸಾಮ್ರಾಜ್ಯಸಂಪದೇ ।
ವಾಚಾ ಸಹಾದ್ಭುತಂ ಚಕ್ರೇ ಚಕ್ರಾಂಕಕಮಲೋತ್ಸವೇ ॥ (?) ೧೮

ನಮೋನಿರ್ಮಲನಿಸ್ಸೃಷ್ಟಕರ್ಮಮಲ್ಲಾಯ ಮಲ್ಲಯೇ ।
ಬಂಧಮೋಕ್ಷವಿಧಿಜ್ಞಾಯ ದದತೇಽನಂತವೀರ್ಯತಾಂ ॥ ೧೯

ನಮಸ್ಸುವ್ರತನಾಥಾಯ ಯೋಽಭೂದ್ವ್ರತಗುಣ್ಯೈಃ ಭವಾತ್ ।
ಉದ್ಧರ್ತುಂ ಜಗತಾಂ ತ್ಯಕ್ತ್ವಾ ಕಾ ನೋಹಾನಿರಿತಿ ಸ್ಥಿತಃ ॥ ೨೦

ನಮೋ ನಿಮಿಜಿನೇಂದ್ರಾಯ ಯತ್ಪದಾಂಬುರುಹದ್ವಯಂ ।
ಉತ್ತಂಸಿತಮಹೀಂದ್ರೇಣ ಮಂದಾರಗಳಿತಾದರಂ ॥ ೨೧

ನಮಶ್ಶ್ರೀನೇಮಯೇ ಯೇನ ಹರಿತಲ್ಪಾಹಿಭೋಗವತ್ ।
ಶ್ರೀಭುಜಂಗೇ* ಮಹಾಭೋಗೋ ನ ತೃಣಾಯ ಜಘನ್ಯತೇ ॥ ೨೨

ನಮಃಪಾರ್ಶ್ವಾಯ ಸಾಮ್ರಾಜ್ಯಮೇಕಚ್ಛತ್ರೇ ಜಗತ್ತ್ರಯೇ ।
ಯಸ್ಯಾಖ್ಯಾತೀವ ವರಣಂ ಸ್ತ್ರೀಧೃತಾತಪವಾರಣಂ ॥ ೨೩

ನಮಸ್ತ್ರೈಲೋಕ್ಯದುರ್ವಾರಮಾರವೀರಮದಚ್ಛಿದೇ ।
ಮಹಾವೀರಾಯ ಭೂಪೇಂದ್ರಸ್ತೂಯಮಾನಜಯಶ್ರಿಯೇ ॥ ೨೪

ಸಮಹತಿ ಕವಿತಾಗುಣಾರ್ಣವಾಖ್ಯಾಂ
ನನು ಭುವನತ್ರಿತಯೇಪ್ಯನನ್ಯರೂಢಾಂ ।
ನ ವಿಷಯಮಮತಿರ್ಯದೀಯಚಿಂತಾ
ಚತುರಧಿಕಾ ಜಿನವಿಂಶತಿಶ್ಯುಭಾಯ ॥ ೨೫

ನಯವಿನಯಧಿಯಃ ಸಮಂತಭದ್ರಾಃ
ವಿದಧತ ವಾಙ್ಮಯದಾಮ ಪೂಜ್ಯಪಾದಾಃ ।

*ಸ್ತ್ರೀಭುಜಂಗೀಃಮಹಾಭೋಗಂ ನತೃಣಂಯಾನ್ಯಮನ್ಯಥಾ

ಗಮಯತಿ ಪರಮಾಕ್ಷರದ್ವಯಂ ತೇ
ಮಮ ಜಿನತತ್ಪದಮಕ್ಷರಂ ಜಿನೇಂದ್ರಾಃ ॥ (?) ೩೬

ವ॥ ಎಂದನೇಕಸ್ತವನಂಗಳಿಂ ಸ್ತುತಿಯಿಸಿ ತದನಂತರಸಮಯದೊಳ್,

ಭರತಂ ಕಾಯೋತ್ಸರ್ಗದೊ
ಳಿರೆ ಚಿತ್ತನಿರೋಧದಿಂ ಸಡಿಲ್ದೊಡೆ ತನು ಭಾ ।
ಸುರರತ್ನಾಭರಣಂಗಳ್
ಶರೀರದಿಂದುದಿರ್ದುವಮರತರುಕುಸುಮದವೊಲ್ ॥ ೩೭

ವ॥ ಮತ್ತಂ ಸಾಕೇತನಗರಮಂ ಬಳಸಿದ ಕನಕಪ್ರಾಕಾರದ ಬಾಗಿಲ್ವಾಡಂಗಳೊಳಂ ರಾಜಮಂದಿರದ ಗೋಪುರದ್ವಾರಂಗಳೊಳಂ ತನ್ನ ಪುರದ ಪೋಪಬರ್ಪ ರಾಜಮಾರ್ಗದೊಳಂ ಚತುರ್ವಿಂಶದರ್ಹತ್ಪ್ರತಿಮಾವಿರಾಜಮಾನಹೇಮದಾಮವಿಳಂಬಿತಮಣಿಘಂಟಾಸಮನ್ವಿತವಂದನಮಾಲೆಗಳೊಳಂ

ಪುಗೆ ಪೊಱಮಡೆ ತನ್ನ ಮನಂ
ಬುಗುವಂತಿರೆ ತನ್ನ ಮಕುಟಶಿಖರಮನವು ನೆ ।
ಟ್ಟಗೆ ತಾಗುವಂತುಮಾಗಿರೆ
ಜಗದಧಿಪನುದಾತ್ತಭಕ್ತಿಯಿಂ ಮಾಡಿಸಿದಂ ॥ ೩೮

ತನಗೆ ಭರತೇಶ್ವರಂ ವಂ
ದನಾರ್ಥದಿಂ ಸಮೆದ ಮಾಲೆ ಭರತದೊಳದು ವಂ ।
ದನಮಾಲೆಯೆಂಬ ಪೆಸರಂ
ತನಗೆ ಪೆಸರ್ಮಾಡಿ ಕೂಡೆ ಸಂದಪುದಿನ್ನುಂ ॥ ೩೯

ಪ್ರಿಯಧರ್ಮನ್ನೃಪತಿಯುಂ ನೋ
ಡಿ ಯಥಾ ರಾಜಾ ತಥಾ ಪ್ರಜಾಎಂಬವೊಲೋ ।
ಜೆಯೊಳೋಜೆಗೊಂಡು ಧರ್ಮ್ಮ
ಪ್ರಿಯರಾದರ್ ಪ್ರಜೆಗಳುಂ ಸಮಸ್ತಾವನಿಯೊಳ್ ॥ ೪೦

ವ॥ ಮತ್ತಿತ್ತ ವೃಷಭನಾಥನುಂ ವೃಷಭಸೇನನುಂ ಕುಂಭ ದೃಢರಥ ಶತಧನು ದೇವಶರ್ಮ ದೇವಭಾವ ದೇವಧರ ನಂದನ ಸೋಮದತ್ತ ಸೂರದತ್ತ ಯಜ್ಞದತ್ತ ವಾಯುಶರ್ಮ ಯಶೋಬಾಹು ದೇವಾಗ್ನಿ ಅಗ್ನಿದೇವ

ಅಗ್ನಿಗುಪ್ತ ಚಿತ್ರಗುಪ್ತ ಚಿತ್ರಾಗ್ನಿ ಹಳಧರ ಮಹೀಧರ ಮಹೇಂದ್ರ ವಾಸುದೇವ ವಸುಂಧರಾಚಳ ಮೇರುಧರ ಮೇರುಭೂತಿ ಸರ್ವಯಶ ಸರ್ವಜ್ಞ ಸರ್ವಗುಪ್ತ ಸರ್ವಪ್ರಿಯ ಸರ್ವದೇವ ಸರ್ವವಿಜಯ ವಿಜಯಗುಪ್ತ ವಿಜಯಮಿತ್ರ ವಿಜಯ ಅಪರಾಜಿತ ವಸುಮಿತ್ರ ವಿಶ್ವಸೇನ ಚಾರುಷೇಣ ಸತ್ಯದೇವದೇವ ಸತ್ಯ ಸತ್ಯಗುಪ್ತ ಸತ್ಯಮಿತ್ರ ಶರ್ಮಳಿ ವಿನೀತ ಸವರ ಮುನಿಗುಪ್ತ ಮುನಿದತ್ತ ಮುನಿಯಜ್ಞ ಮುನಿದೇವ ಗುಪ್ತಯಜ್ಞ ಮಿತ್ರಯಜ್ಞ ಸ್ವಯಂಭು ಭಗದೇವ ಭಗದತ್ತ ಭಗಫಲ್ಗು ಮಿತ್ರಫಲ್ಗು ಪ್ರಜಾಪತಿ ಸರ್ವಸಿಂಹ ವರುಣ ಧನಪಾಲ ಮಘವ ತೇಜೋರಾಶಿ ಮಹಾವೀರ ಮಹಾರಥ ವಿಶಾಲ ಮಹಾಪೀಠ ಸುವಿಶಾಲ ವಜ್ರ ವಜ್ರಶಾಳ ಚಂದ್ರಚೂಡ ಮೇಘಸ್ವರ ಮಹಾಸ್ವರ ಕಚ್ಛ ಮಹಾಕಚ್ಛ ನಮಿ ವಿನಮಿ ಬಳ ಅತಿಬಳ ವಜ್ರಬಳ ಬಳಾರಾತಿ ಭದ್ರಬಳ ನಂದಿಬಳ ಮಹಾಭೋಗ ನಂದಿಮಿತ್ರ ಕಾಮದೇವ ಅನುಪಮರೆಂಬೆಣ್ಭತ್ತನಾಲ್ವರ್ ಗಣಧರದೇವರುಂ, ನಾಲ್ಸಾಸಿಱದೇೞ್ನೂಱಯ್ವದಿಂಬರ್ಸಕಳಪೂರ್ವಧರರುಂ, ನಾಲ್ಸಾಸಿರದೈನೂಱಯ್ವದಿಂಬರ್ ಶಿಕ್ಷಕರುಂ ಒಂಭೈಸಾಸಿರ್ವರವಧಿಜ್ಞಾನಿಗಳುಂ ಇರ್ಪತ್ತುನಾಲ್ಸಾಸಿರ್ವರ್ಕೇವಳಜ್ಞಾನಿಗಳುಂ ಇರ್ಪತ್ತಾಱುಸಾಸಿರ್ಬರ್ ವಿಕ್ರಿಯರ್ಧಿಪ್ರಾಪ್ತರುಂ ಪನ್ನಿರ್ಛಾಸಿರದೇೞ್ನೂಱಯ್ವದಿಂಬರ್ ಮನಃಪರ್ಯಯಜ್ಞಾನಿಗಳುಂ ಅನಿಬರೆವಾದಿಗಳುಂ ಮೊದಲಾಗೆ ಎಣ್ಭತ್ತನಾಲ್ಸಾಸಿರದೆಣ್ಭತ್ತನಾಲ್ವರ್ ಮುನಿಪತಿಗಳುಂ ಮೂಱುಲಕ್ಕೆಯುಮಯ್ವತ್ತುಸಾಸಿರಬ್ರಹ್ಮಿಮುಖ್ಯಾರ್ಯಿಕಾಗಣಮುಂ ಮೂಱುಲಕ್ಕೆದೃಢಬ್ರತಾಧಿಶ್ರಾವಕರುಂ ಅಯ್ದುಲಕ್ಕೆಸುವ್ರತೆ ಮೊದಲಾಗೆ ಪರಮಶ್ರಾವಕಿಯರುಂ ಅಯ್ದುಲಕ್ಕೆಭವನಾಮರಾದಿಚತುರ್ವಿಧದೇವನಿಕಾಯಮುಂ ಪಕ್ಷಿಚತುಷ್ಪದಸರೀಸೃಪಾದಿತಿರ್ಯಗ್ಜಾತಿಗಳುಂ ಬೆರಸು ಧರ್ಮಾಮೃತವರ್ಷದಿಂ ಧರ್ಮಕ್ಷೇತ್ರಂಗಳೊಳ್ ಭವ್ಯಸಸ್ಯಂಗಳನನೇಕಬ್ರತಫಲಭರವಿನತಂಗಳ್ ಮಾಡಿ ಚತುರುತ್ತರಾಶೀತಿಲಕ್ಷಪುರ್ವಂಗಳೊಳಗೆ ಪದಿನಾಲ್ಕುದಿವಸದಾಯುಷ್ಯಮುಂಟೆನೆ ಕೈಳಾಸಪರ್ವತದ ಸಿದ್ಧಕೂಟದೊಳ್ ಪೌಷ್ಯಮಾಸದ ಪೌರ್ಣಮಿಯಾದಿನದಂದು ಯೋಗಪಲ್ಯಂಕಾಸನದಿಂದಂ ಯೋಗನಿರೋಧದೊಳ್ ಪೂರ್ವಾಭಿಮುಖನಾಗಿರ್ದಂ ; ಅನ್ನೆಗಮಿತ್ತಲ್,

ಭರತಂ ದರ್ಶನದೊಳ್ ಮುಂ
ದರವೂಪಪ್ರಾಗ್ಭಾರಭೂತಳಂಬರೆಗಂ ನೀ ।
ಳ್ದರೆ ಕಂಡು ವಿಸ್ಮಿತಾಂತಃ
ಕರಣನದರ್ಕಾಗಿದು ನಾಡೆಯುಂ ಚಿಂತಿಸಿದಂ ॥ ೪೧

ದಿವದಿನಿಳಿದೌಷಧಿದ್ರುಮ
ಮವನೀತಳಮನುಜಮರಣಜನ್ಮಜರಾಸಂ ।
ಭವಭಯಮಂ ಕಿಡಿಸಿ ದಿವ
ಕ್ಕವಯಮದಿಂದಡರೆ ನೋಡಿದಂ ಯುವರಾಜಂ ॥ ೪೨

ನರಸಮಿತಿಗೆ ಬೇಡಿದುದಂ
ನಿರಂತರಂ ಕೊಟ್ಟು ಕಲ್ಪವೃಕ್ಷಂ ಪೋಗಲ್ ।
ಸುರಲೋಕಕ್ಕುದ್ಯತಮಾ
ಗಿರೆ ಕಂಡಂ ಸ್ವಪ್ನಸಮಯದೊಳ್ ಗೃಹಪತಿಯುಂ ॥ ೪೩

ವರರತ್ನದ್ವೀಪಂ ಭಾ
ಸುರರತ್ನಾಳಿಯನನಾರತಂ ಕೊಟ್ಟು ವಸುಂ ।
ಧರೆಗಭ್ರದತ್ತ ನೆಗೆಯ
ಲ್ಕಿರೆ ಕಂಡಂ ಭರತಮಂತ್ರಿಮುಖ್ಯನುಮಾಗಳ್ ॥ ೪೪

ನೆಲಸಿರ್ದ ವಜ್ರಪಂಜರ
ಮಳಱುವಿನಂ ಪಾಯ್ದು ಸಿಂಧುರಾರಾತಿಯನು ।
ಜ್ಜ್ವಳತನುವನಭ್ರಪಥದ
ತ್ತ ಳಂಘಿಸಲ್ಕಿರ್ದುದಂ ಚಮೂಪತಿಕಂಡಂ ॥ ೪೫

ವ॥ ಮತ್ತಂ ಜಯಪ್ರಿಯತನೂಜಂ,

ತಾರಾನಿಕರಾವೇಷ್ಟಿತ
ತಾರಾಪತಿಯಂ ಸಮಸ್ತಸುರಲೋಕಮುಮಂ ।
ನೇರಿತ್ತು ಬೆಳಗಿ ಪೋಪುದ
ನಾರಾತ್ರಿಯೊಳಂತನಂತವೀರ್ಯಂ ಕಂಡಂ ॥ ೪೬

ಸುರರಾಜಮನಃಪ್ರಿಯೆ ಶಚಿ
ವೆರಸು ಯಶಸ್ವತಿಯುಮಾಸುನಂದೆಯುಮಾಗಳ್ ।

ಪಿರಿದುಂ ಶೋಕದೊಳಿರೆ ಯುವ
ತಿರತ್ನಮೆನಿಸಿದ ಸುಭದ್ರೆ ಕನಸಂ ಕಂಡಳ್ ॥ ೪೭

ವ॥ ಮತ್ತಂ ವಾರಾಣಸೀನಗರಾಧೀಶ್ವರನಕಂಪನತನಯುಂ,

ಧರಣೀತಳಘನತಮಮುಮಂ
ಕರಗಿಸಿ ಭಾಸ್ವತ್ಕರಂಗಳಿಂ ಗಗನತಳ।
ಕ್ಕಿರದಡರ್ವ ವಿಸ್ಫುರದ್ದಿನ
ಕರನಂ ಚಿತ್ರಾಂಗದಾವನೀಶಂ ಕಂಡಂ ॥ ೪೮

ವ॥ ಅಂತು ಭರತಾದಿಗಳನಿಬರುಂ ತಂತಮ್ಮ ಕಂಡ ಕನಸುಗಳಂ ಪ್ರಭಾತಸಮಯದೊಳ್ ಪುರೋಹಿತಂಗಱಿಪಿದೊಡೆ ನಿಮ್ಮ ಕಂಡ

ಕನಸುಗಳವು ಪೆಱಪೆಱತೇ
ನನಂತಗುಣನಿಳಯನಾದಿದೇವಂ ಪಲಬರ್ ।
ಮುನಿಪತಿಗಳ್ ಪೆರಸಡರ್ದಪ
ನನಶ್ವರಾಸ್ಪದಮನೆಂಬುದಂ ಸೂಚಿಸುಗುಂ ॥ ೪೯

ವ॥ ಎಂಬುದುಮಾಪ್ರಸ್ತಾವದೊಳ್ ಆದಿಭಟ್ಟಾರಕವ್ಯತಿಕರಸ್ಥಿತಿಯನಾನಂದನೆಂಬಂ ಧರ್ಮಕಾರ್ಯನಿಮಿತ್ತಂ ಬಂದಱಿಪಿದೊಡೆ, ಭರತೇಶ್ವರಚಕ್ರವರ್ತಿಯುಂ ವಿನೇಯಜನಸಮೇತಂ ಬಂದು ಭಟ್ಟಾರಕರಂ ಮೂಱು ಸೂಳ್ ಬಲವಂದು ಕೃತಾಭಿಷ್ಟಸ್ತವನಪರಂ ಮಹಾಮಹಮೆಂಬ ಮಹಾಪೂಜೆಯಂ ಮಹಾವಿಭೂತಿಯಿಂ ಪದಿನಾಲ್ಕುದಿವಸಂಬರಂ ನಿರಂತರಂ ಮಾಡೆ ವೃಷಭನಾಥಂ ಸ್ವಸ್ಥಾನಯೋಗ್ಯಕೇವಳಕೇವಳಪ್ರದೇಶನಿರ್ಜರೆಯಂ ಮಾಡುತ್ತಮಂತರ್ಮುಹೂರ್ತಕಾಲದಿಂ ಶರೀರತ್ರಿಗುಣಬಹುಳತೆಯಿಂ ಚತುರ್ದಶರಜ್ವಾಯಾಮಾತ್ಮತ್ರಿಗುಣಪ್ರಮಾಣಾತ್ಮಪ್ರದೇಶವಿಸರ್ಪಣದಿಂ ದಂಡಕ್ರಿಯಾಕರಣಾನಂತರಸಮಯದೊಳ್ ಪೂರ್ವೋಕ್ತಬಾಹುಲ್ಯದಿಂ ಲೋಕಾಕಾಶವ್ಯಾಪಕಕವಾಟಕ್ರಿಯೆಯುಂ ನೆಱಪಿ ತದನಂತರಸಮಯದೊಳ್ ವಾತವಳಯಮುಟಿಯೆ ಜೀವಪ್ರದೇಶಂಗಳಿಂ ಲೋಕಪ್ರದೇಶಮಂ ಪರ್ವಿ ನಿರ್ವರ್ತಿತಪ್ರತರಕ್ರಿಯಾವಿಶೇಷಂ ತದನಂತರಕ್ಷಣದೊಳ್ ವ್ಯಾಪ್ತಸಪ್ತಘನರಜ್ಜುಪ್ರಮಾಣಶೇಷಜಗತ್ಪ್ರದೇಶಲೋಕಪೂರಣಕ್ರಿಯಾಪರಿಸಮಾಪ್ತಿಯುಂ ಮಾಡಿ ಮತ್ತಂ ಪ್ರವರ್ತಿತಪ್ರತರಕವಾಟದಂಡಕ್ರಿಯಾ

ವಿಶೇಷಂಗಳಿಂ ಖಂಡಿತಘಾತಿಚತುಷ್ಕಸ್ಥಿತ್ಯನುಭಾಗನಪಗತಮೂಲಶರೀರ ಪ್ರಮಾಣಾತ್ಮಕಪ್ರದೇಶನಾಯುಷ್ಯಸ್ಥಿತಿಸಮೀಕೃತಾಶೇಷಾಘಾತಿತ್ರಯ ಸ್ಥಿತಿಕನಂತರ್ಮುಹೂರ್ತನಿರುದ್ಧಾಶೇಷಮನೋವಾಗ್ಬಾದರಕಾಯಯೋಗಸೂಕ್ಷ್ಮಕಾಯಯೋಗಪರಿಣತನುಪಯೋಗಪರಿಕಲ್ಪಿತಸೂಕ್ಷ್ಮಕ್ರಿಯಾ ಪ್ರತಿಹತ್ಯಭಿಧಾನತೃತೀಯಶುಕ್ಲಧ್ಯಾನಪರಾಯಣಂ ನಿರುದ್ಧಸೂಕ್ಷ್ಮಶರೀರಯೋಗನನಂತರಸಮಯದೊಳ್ ಪಂಚಹ್ರಸ್ವಾಕ್ಷರೋಚ್ಚಾರಣಮಾತ್ರಕಾಲಪ್ರಮಿತಾಯೋಗಗುಣಸ್ಥಾನಸ್ಥಿತಂ ಸಮುಚ್ಛಿನ್ನಕ್ರಿಯಾಪ್ರತಿಪತ್ತಿಧ್ಯಾನಪರಿಪೂರ್ಣಾಶೇಷಶೀಲಗುಣಗಣನಿಳಯಂ ನಿಜದ್ವಿಚರಮಸಮಯದೊಳ್ ಅನ್ಯತರವೇದನೀಯ ದೇವಗತಿತತ್ಪ್ರಯೋಗ್ಯಾನುಪೂರ್ವ ಶರೀರಬಂಧನ ಸಂಘಾತವರ್ಣರಸಪಂಚಕಸಂಸ್ಥಾನಸಂಹನನಪಂಚಷಟ್ಕಾಂಗೋಪಾಂಗದ್ವಿಕಂ ಗಂಧದ್ವಿಕಂ ಸ್ಪರ್ಶಾಷ್ಟಕಂ ಅಗುರುಲಘು ಚತುಷ್ಕವಿಹಾಯೋಗತಿ ದ್ವಿಕಸ್ಥಿರಾಸ್ಥಿರಶುಭಾಶುಭಸುಸ್ವರದುಸ್ವರಸುಭಗದುರ್ಭಗಪ್ರತ್ಯೇಕಶರೀರ ಯಶಸ್ಕೀರ್ತಿರನಾದೇಯನಿರ್ಮಾಣಪರ್ಯಾಪ್ತಿ ನೀಚೈರ್ಗೋತ್ರಂಗಳೆಂಬ ದ್ವಿಸಪ್ತತಿಪ್ರಕೃತಿಗಳಂ ನಿರವಶೇಷಂ ಕಿಡಿಸಿ ಸ್ವಕೀಯಚರಮಸಮಯದೊಳ್ ಅನ್ಯತರವೇದನೀಯಮನುಷ್ಯಾಯುಷ್ಯಮನುಷ್ಯಗತಿತತ್ಪ್ರಯೋಗ್ಯಾನುಪೂರ್ವಿಪಂಚೇಂದ್ರಿಯಜಾತಿತ್ರಸನಾಮಶುಭಾಶುಭೋದಯಪರ್ಯಾಪ್ತ ಬಾದರಯಶಸ್ಕೀರ್ತಿರುಚ್ಚೈರ್ಗೋತ್ರತೀರ್ಥಕರನಾಮಂಗಳೆಂಬ ಪದಿಮೂಱುಂ ಪ್ರಕೃತಿಗಳುಮಂ ನಿರ್ಮೂಲಂ ಕಿಡಿಸಿ ಬಳಿಯಂ ಕ್ಷಾಯಿಕಸಮ್ಯಕ್ತ್ವಾನಂತ ಜ್ಞಾದರ್ಶನವೀರ್ಯಸೂಕ್ಷ್ಮಾವಗಾಹಾಗುರುಲಘುತಾವ್ಯಾಬಾಧಂಗಳೆಂಬ,

ಗುಣಮೆಂಟುಂ ಬಂದು ತನ್ನೊಳ್ ಪಿಣೆದಿರೆ ಸುಖಸೋದ್ಭೂತನುಂ ಲೋಕಚೂಡಾ
ಮಣಿಯುಂ ಶಶ್ವತ್ತ್ರಿಲೋಕೀಪ್ರಣುತನುಮತಿವಿಖ್ಯಾತನುಂ ಭವ್ಯಚಿಂತಾ ।
ಮಣಿಯುಂ ತಾನಾಗಿತನ್ನೊಳ್ ನೆಱೆಯೆ ಪಡೆದು ತನ್ನಂದಮಂ ತಾನೆ ತನ್ನ
ತ್ತಣಿನಾದಿಬ್ರಹ್ಮನೇಕಕ್ಷಣದೊಳ್ ಪರಮಬ್ರಹ್ಮಸದ್ಮಕ್ಕೆ ಸಂದಂ ॥ ೫೦

ದೊರೆಕೊಂಡ ಮಾಘಮಾಸಂ
ಬರೆ ಕೃಷ್ಣಚತುರ್ದಶೀದಿನಂ ಸಮಸಿನೆ ತ ।

ತ್ಪುರುದೇವಂ ಮುಕ್ತಿವಧೂ
ವರತೆಯನಭಿಜಿನ್ಮುಹೂರ್ತದೊಳ್ ಕೈಕೊಂಡಂ ॥ ೫೧

ವ॥ ಅಂತು ವೃಷಭೇಶ್ವರಂ ತ್ರಿಲೋಕಶಿಖರಿಶಿಖರಶೇಖರಾಯಮಾನಮ ನುಕ್ರಮೋನ್ನತವಾಗಿ ಮಧ್ಯಪ್ರದೇಶದೊಳಷ್ಟಯೋಜನಬಾಹುಲ್ಯಮುಂ ಧವಳಚ್ಛತ್ರಾಕಾರಮುಂ ನಾಲ್ವತ್ತೈದುಲಕ್ಷಯೋಜನದಗಲಮುಂ ಸಮವೃ ತ್ತಮುಂ ಎನಿಸಿದೀಷತ್ಪ್ರಾಗ್ಭಾರದ ಮೇಗಣ ಘನೋದಧಿಘನಾನಿಳತನುವಾತ ತ್ರಿತಯಭಾಗದೊಳ್ ಅವ್ಯಾಬಾಧನುಮನಂತಸುಖಾಂಬುಧಿನಿಳಯನುಮಾಗಿ ನೆಲಸಿರ್ದಂ. ಇತ್ತ ಚತುರ್ವಿಧದೇವನಿಕಾಯಮುಂ ಪುರುದೇವಪರಿನಿರ್ವಾ ಣಮಹಾಕಲ್ಯಾಣಪೂಜಾನಿರ್ವರ್ತನಾಭಿಲಾಷೆಯಾಗಿ ನಿರ್ವಾಣಭೂಮಿಯು ನನೇಕಸುರಭಿಸುರತರುಕುಸುಮಸುಗಂಧಾಕ್ಷತಂಗಳಿಂದಮರ್ಚಿಸಿ,

ಸ್ಫುರಿತಾಗ್ನೀಂದ್ರಕಿರೀಟಕೋಟಿಮಣಿಸಂಭೂತಾಗ್ನಿಯಿಂ ಚಂದನಾ
ಗುರುಕರ್ಪೂರಲವಂಗಕುಂಕುಮಘೃತಕ್ಷೀರಾನಲದ್ರವ್ಯಸಂ।
ಕರಸಂಪರ್ಕದೊಳೆಯ್ದೆ ಪೆರ್ಚಿದುದಱಿಂ ರೂಪಾಂತರಕ್ಕೊಯ್ದು ಭಾ
ಸುರದಿಂ ತತ್ಸುರರಾಜನಂದು ಪಿಱಿದೊಂದುತ್ಸಾಹಮಂ ಮಾಡಿದಂ॥ ೫೨

ವ॥ ಅಂತು ಸುರಭಿಕುಸುಮಗಂಧಾಕ್ಷತಂಗಳಿಂದಮರ್ಚಿಸಿ ಭಗವಚ್ಛ ರೀರಹೋಮಕುಂಡದಕ್ಷಿಣಭಾಗದೊಳ್ ಗಣಧರಶರೀರಮನಿಱಿಸಿ ತದಪರ ದಿಗ್ಭಾಗದೊಳನಗಾರಕೇವಳಹುತಾಶನಕುಂಡಮುಂ ಸ್ಥಾಪನಂಗೆಯ್ದು ಆಗಾ ರ್ಹಪತ್ಯದಕ್ಷಿಣಾಗ್ನ್ಯಾಹವನೀಯಾಭಿಧಾನಕುಂಡಂಗಳಂ ಕೊಂಡು ಲಲಾ ಟಕಂಠಭುಜಶಿಖರಗಳಹೃದಯಪ್ರದೇಶದೊಳಂ,

ಭೂತಿಗಳೊಳ್ ಕಲ್ಯಾಣವಿ
ಭೂತಿಗಳೆಮಗಕ್ಕೆ ಬೇಗಮಿನ್ನೆಂದು ಮನೋ।
ಜಾತಮಹೋತ್ಸಾಹರ್ ತ
ದ್ಭೂತಿಯನಿಟ್ಟರ್ ತ್ರಿಪುಂಡ್ರಮಂ ದಿವಿಜೇಂದ್ರರ್ ॥ ೫೩

ವ॥ ಅಂತು ತ್ರಿಪುಂಡ್ರಂಗಳನಿಟ್ಟೊಸಗೆಯಿಂದೊಸಗೆ ಮಱುಳ್ಗೊಂಡು,

ಆನಂದನಾಟಕಂ ಪರ
ಮಾನಂದಮನಂದು ಮಾಡೆ ದಿವಿಜಾಧೀಶರ್।

ನಾನಾಪ್ರಕಾರದಿಂದಮ
ದೇನೆಂಬುತ್ಸವಮನೆತ್ತಿಯಿಂ ಮಾಡಿದರೋ ॥ ೫೪

ವ॥ ಆಗಳಾತ್ಮೀಯಗುರುವಿಯೋಗಶೋಕಾನಳದಹ್ಯಮಾನಮಾನಸನಾಗಿರ್ದ ಭರತಪತಿಯ ಶೋಕಾವೇಗಮಂ ವೃಷಭಸೇನಗಣಾಗ್ರಣಿಗಳಿಂತೆಂದಾಱಿಸಿದರ್,

ಖಳಕರ್ಮಾಷ್ಟಕಮಂ ಪಡಲ್ವಡಿಸಿ ಸಂಸಾರಾಬ್ಧಿಯಂ ದಾಂಟಿ ನಿ
ಶ್ಚಳಸಾಖ್ಯಾಸ್ಪದಮಂ ತ್ವದೀಯಜನಕಂ ಕೈಕೊಂಡೊಡೀದೇವಸಂ ।
ಕುಳಮಿಂದ್ರಂಬೆರಸಾಡಿದಪ್ಪುದಿದಱೊಳ್ ನೀಂ ರಾಗಿಸಲ್ವೇಕ್ಕುದೇ
ಕೆಳೆಗೊಳ್ವೈ ಜಡರಂತೆ ಶೋಕರಸಮಂ ಷಟ್ಖಂಡಧಾತ್ರೀಶ್ವರಾ ॥ ೫೫

ನಿನಗೆ ವೃಷಭೇಶ್ವರಂ ಲೋ
ಚನಗೋಚರನಿನ್ನೆವರೆಗಮೀಗಳ್ ನಿಂದಂ ।
ಮನುಕುಲಲಲಾಮ ನೆಟ್ಟನೆ
ಮನದೊಳ್ ಕಡುಸಾರೆಯಲ್ತೆ ಮುನ್ನಿಂದೀಗಳ್ ॥ ೫೬

ಭರತೇಶ್ವರ ನಾಮಪ್ಪೊಡೆ
ಚರಮಾಂಗರುಮಖಿಳಮಲವಿಲೇಪನದಿಂದಂ ।
ಪುರುಪರಮೇಶ್ವರನೈದಿದ
ಪರಮಪದಂ ನಮಗಮದುವೆ ನೆಲೆ ಪೆಱತುಂಟೇ ॥ ೫೭

ವ॥ ಅವಲ್ಲದೆಯುಂ ಜೀವಂಗಳ್ ಶುಭಾಶುಭಕರ್ಮಶೈಲೂಷಪ್ರೇರಿತಂಗಳಾಗಿ ಚತುರ್ಗತಿಸಂಸಾರಂಗಳೊಳನೇಕರಸಪರಿಣತಂಗಳ್ ನಾನಾಶರೀರೋಪಾದಾನಪರಿತ್ಯಜನಪುರಸ್ಸರಂ ಪರಿಭ್ರಮಿಸುಗುಂ. ಅದು ನಮ್ಮಿನಿಬರ ಭವಾಳಿಯಿಂದೆ ನಮಗನುಭೂತಪೂರ್ವಮದೆಂತೆಂದೊಡೆ ಭವದೀಯಜನಕಂ ಪುರುಪರಮೇಶ್ವರಂ,

॥ ಅಕ್ಕರಂ ॥

ಭೋಗಕಾಂಕ್ಷೆಯೊಳ್ ಜಯವರ್ಮಂ ಬೞಿಕೀಮಹಾಬಳಂ ಲಲಿತಾಂಗಂ ವಜ್ರಜಂಘಂ
ಭೋಗಭೂಮಿಜಂ ಶ್ರೀಧರದೇವಂ ಸುವಿಧಿನರಾಧಿಪನಚ್ಯುತೇಂದ್ರಂ
ಸಾಗರಾಂತಂ ನೆಲನನಿತುಮಂ ಚಕ್ರದಿಂ ಬೆಸಕೈಸಿದ ವಜ್ರನಾಭಿ
ಯಾಗಿ ಸರ್ವಾರ್ಥಸಿದ್ಧಿಯೊಳ್ ಪುಟ್ಟಿ ಬಂದಿಲ್ಲಿ ತಾನಾದಿದೇವನಾದಂ ॥ ೫೮

ವ॥ ಮತ್ತಂ ಧನಶ್ರೀಯುಂ ನಿರ್ನಾಮಿಕೆಯುಂ ಸ್ವಯಂಪ್ರಭಾದೇವಿಯುಂ ಶ್ರೀಮತಿಯುಂ ಆರ್ಯೆಯುಂ ಸ್ವಯಂಪ್ರಭದೇವನುಂ ಕೇಶವಮಹೀಶನುಂ ಅಚ್ಯುತಪ್ರತೀಂದ್ರನುಂ ಧನದತ್ತನುಂ ಅಹಮಿಂದ್ರನುಂ ಆಗಿ ಬಂದೀಗಳಾದಿ ದಾನತೀರ್ಥಪ್ರವರ್ತಕಶ್ರೇಯಾಂಸನಾದಂ ; ಅತಿಗೃದ್ಧಮಹೀಶನುಂ ನಾರಕನುಂ ವ್ಯಾಘ್ರನುಂ ಈಶಾನಕಲ್ಪಜನುಂ ಮತಿವರಮಂತ್ರಿಯುಂ ಅಧೋಗ್ರೈವೇಯಕದಿವಿಜನುಂ ಸುಬಾಹುಮಹೀಪತಿಯುಂ ಸರ್ವಾರ್ಥಸಿದ್ಧೀಶ್ವರನುಂ ಅಹಮಿಂದ್ರನುಮಾಗಿ ಬಂದು ನೀನೀಗಳ್ ಭರತೇಶ್ವರಚಕ್ರವರ್ತಿಯಾದೈ ; ನಾರಕನುಂ ಪ್ರೀತಿವರ್ಧನಸೇನಾನಾಯಕನುಂ ಭೋಗಭೂಮಿಜನುಂ ಕನಕಪ್ರಭಾಮರನುಂ ಲಲಿತಾಂಗದೇವಸಾಮಾನಿಕನುಂ ಪ್ರಭಂಕರನುಂ ವಜ್ರಜಂಘಸೇನಾಧೀಶ್ವರನಕಂಪನನುಂ ಅಧೋಗ್ರೈವೇಯಕನುಮಹಮಿಂದ್ರನುಂ ಮಹಾಬಾಹುಮಹೀಪತಿಯುಂ ಸರ್ವಾರ್ಥಸಿದ್ಧಿಜನನುಮಾಗಿ ಬಂದು ಋಷಭೇಶ್ವರತನೂಜನೀಗಳ್ ಬಾಹುಬಲಿಕುಮಾರನಾದಂ. ದಿವಿಜನುಂ ಪ್ರೀತಿವರ್ಧನಮಂತ್ರಿಯುಂ ಭೋಗಭೂಮಿಜನುಂ ಕನಕಪ್ರಭಾಮನರನುಂ ವಜ್ರಜಂಘಪುರೋಹಿತನಾನಂಗನುಂ ಅಧೋಗ್ರೈವೇಯಕನುಮಹಮಿಂದ್ರನುಂ ಪೀಠನುಂ ಸರ್ವಾರ್ಥಸಿದ್ಧೀಶನುಮಾಗಿ ಬಂದು ನಾನೀಗಳ್ವೃಷಭನಾಥಂಗೆ ಪ್ರಥಮಗಣಧರನಾದೆಂ, ಪ್ರೀತಿವರ್ಧನಪುರೋಹಿತನುಂ ಭೋಗಭೂಮಿಜನುಂ ಲಲಿತಾಂಗದೇವಸಾಮಾನಿಕಪ್ರಭಂಜನದೇವನುಂ ವಜ್ರಜಂಘಶ್ರೇಷ್ಠಧನಮಿತ್ರನುಂ ಅಧೋಗ್ರೈವೇಯಕಾಹಮಿಂದ್ರನುಂ ಮಹಾಪೀಠನುಂ ಸರ್ವಾರ್ಥಸಿದ್ಧೀಶ್ವರನುಮಾಗಿ ಬಂದೀಗಳನಂತವಿಜಯನಾದಂ ; ಶಾರ್ದೂಲಾರ್ಯನುಂ ಚಿತ್ರಾಂಗದೇವನುಂ ವರದತ್ತನೃಪನುಂ ಅಚ್ಯುತಸಾಮಾನಿಕದೇವನುಂ ವೈಜಯಂತಭೂಪನುಂ ಸರ್ವಾರ್ಥಸಿದ್ಧೀಶ್ವರನುಮಾಗಿಬಂದೀಗಳನಂತವೀರ್ಯನಾದಂ ; ವರಾಹಾರ್ಯನುಂ ಮಣಿಕುಂಡಲಾಮರನುಂ ವರಸೇನಭೂಪನುಂ ಅಚ್ಯುತಸಾಮಾನಿಕದೇವನುಂ ವೈಜಯಂತಭೂಪನುಂ ಸರ್ವಾರ್ಥಸಿದ್ಧೀಶ್ವರನುಮಾಗಿ ಬಂದೀಗಳ್ ಸುವೀರನಾದಂ ; ವಾನರಾರ್ಯನುಂ ಮನೋಹರಾಮರನುಂ ಚಿತ್ರಾಂಗದೇವದತ್ತನೃಪನುಂ ಅಚ್ಯುತಸಾಮಾನಿಕನುಂ ಅಪರಾಜಿತನೃಪನುಂ ಸರ್ವಾರ್ಥಸಿದ್ಧಿಯೊಳಹಮಿಂದ್ರನಾಗಿ ಬಂದೀಗಳ್ ವೀರನಾದಂ, ನಕುಳಾರ್ಯನುಂ ಮನೋರಥದಿವ್ಯನುಂ ಶಾಂತ

ಮದನನೃಪನುಂ ಅಚ್ಯುತಸಾಮಾನಿಕನುಂ ಅಪರಾಜಿತನೃಪನುಂ ಸರ್ವಾರ್ಥ ಸಿದ್ಧಿಯೊಳಿಅಹಮಿಂದ್ರನಾಗಿ ಬಂದೀಗಳ್ ಸುವೀರನಾದಂ,

ಭವವಾಃರಾಶಿಯೊಳಿಂತು ಜೀವನಿವಹಂ ಬರ್ದುಗ್ತು ಮಿರ್ಕುಂ ಮಹೋ
ತ್ಸವಮಲ್ತೇ ಗುರುವಿಂತು ದಾಂಟಿದೊಡಿದಂ ಬೇಡಿೀವಿಷಾದಂ ನಿರ ।
ಸ್ತವಿವೇಕಂಬೊಲಿದೇಕೆ ಮೋಹಿಸಿದಪೈ ನೀಂ ಮಾಣ ಶಕ್ರಂಗೆ ವ
ಸ್ತುವಿವರ್ ನಿನ್ನವೊಲಾರ್ಪರೆ ಭುವನದೊಳ್ ಷಟ್ಖಂಡಧಾತ್ರೀಶ್ವರಾ ॥ ೭೯

ಎನೆ ದಾವದಗ್ಧಗಿರಿ ನೂ
ತನಜಳದಜಳಂಗಳಿಂದಮಾಱುವವೋಲ್ ಭೋಂ ।
ಕನೆ ಭರತನನಾಱಿಸಿದಂ
ಮುನಿವಿನುತಗಣಾಧಿನಾಥವಚನಾಮೃತದಿಂ ॥ ೮೦

ವ॥ ಅಂತಪಗತಗುರುಶೋಕವೇಗನಾಗಿ ಗಣಧರಚರಣಸರಸಿಜಂಗಳ್ಗೆ ಱಗಿ ತನ್ನಭೋಗತೃಷ್ಣೆಯುಂ ತಾನೆ ತನ್ನ ಮನದೊಳ್ ನಿಂದಿಸುತ್ತುಂ ಮುಕ್ತ್ಯಂಗನಾನುರಕ್ತಚಿತ್ತನಾಗುತ್ತುಂ ಬಂದಯೋಧ್ಯಾಪುರಮಂ ಪೊಕ್ಕು ಕೆಲವುದಿವಸಮಿರ್ದೊಂದು ದಿವಸಂ,

ಪರಮಪದದಿಂದಮಟ್ಟಿದ
ಪುರುಪರಮೇಶ್ವರನ ದೂತನಂ ಕಾಣ್ಬವೊಲಾ ।
ಭರತಂ ಕಂಡಂ ಕನ್ನೆಯ
ನೆರೆಯಂ ತಳದಳಿಸಿ ಪೊಳೆವ ಮಣಿದರ್ಪಣದೊಳ್ ॥ ೮೧

ವ॥ ಅಂತದಂ ಕಂಡಪಗತಮೋಹರಸನುಮುಪಗತನಿರ್ವೇಗರಸನುಮಾಗಿ,

ಹೇಯಂ ಸಾಮ್ರಾಜ್ಯಮುಪಾ
ದೇಯಂ ಪ್ರವ್ರಜ್ಯಮೆಂದು ಮಾಣದೆ ರಾಜ್ಯ ।
ಶ್ರೀಯುಂ ಕೊಟ್ಟುಂ ಮುಕ್ತಿ
ಶ್ರೀಯುಂ ಬಗೆದರ್ಕಕೀರ್ತಿಗಾಭರತೇಶಂ ॥ ೮೨

ವ॥ ಅಂತು ಪರಿತ್ಯಕ್ತಸಾಮ್ರಾಜ್ಯಪರಿಚ್ಛೇದನಾಗಿ ಸಮಸ್ತಧಾರ್ಮಿಕಜನಂಗಳಂ ಬರಿಸಿ ಸರ್ವತೋಭದ್ರಮೆಂಬ ಮಹಾಮಹಿಮೆಯುಂ ಮಹೋತ್ಸವದಿಂದೆಂಟುದಿವಸಂಬರಂ ಮಾಡಿ ತತ್ಪೂಜಾಸಮೇತಂ ಕೈಳಾಸಶೈಲಕ್ಕೆ ಪೋಗಿ ತದಗ್ರಸ್ಥಿತಚೈತ್ಯಾಲಯಂಗಳನನೇಕವಿಧಾರ್ಚನೆಗಳಿಂದಮರ್ಚಿಸಿ,

ಕೋಟ್ಯಸ್ಸಪ್ತ ಗೃಹಾಸ್ತ್ರಿವಿಷ್ಟಪಗುರೋಃ ಲಕ್ಷಾಃ ಪುನಸ್ಸಪ್ತತಿಃ ।
ದ್ವಾಭ್ಯಾಮಭ್ಯಧಿಕಾ ಭವಂತಿ ಭವನಾವಾಸೇಷು ತೇಭ್ಯೋ ನಮಃ ॥
ನಿಸ್ಸಂಖ್ಯಾಶ್ಶಿಖರೀಂದ್ರಕಂದರಸರಿದ್ದ್ವೀಪಾದಿಷು ವ್ಯಂತರ ।
ಸ್ಥಾನೇಷು ಪ್ರಣಮಾಮಿ ಜೈನವಸತಿಂ ಜ್ಯೋತಿರ್ವಿಮಾನೇಷು ಚ ॥ ೬೩

ದ್ವಾತ್ರಿಂಶತ್ಪ್ರಥಮೇ ಜಿನೇಂದ್ರನಿಲಯಾಃ ಕಲ್ಪೇ ದ್ವಿತೀಯೇ ಭವಂ
ತ್ಯಷ್ಟಾವಿಂಶತಿರಗ್ರತೋ ನಿಗದಿತೇ ಲಕ್ಷಾಸ್ತತೋ ದ್ವಾದಶ ॥
ಮಾಹೇಂದ್ರಾಷ್ಟಶತದ್ವಯೋರಪಿ ದಿವೋ ಲಕ್ಷಾಶ್ಚತಸ್ರಃ ಪೃಥಕ್ ।
ಲಕ್ಷಾರ್ಧಂ ವಿಲಸಂತಿಚಪ್ರಥಿತಯೋರೂರ್ಧ್ವಂ ತತಃ ಕಲ್ಪಯೋಃ ॥ ೬೪

ಚತ್ವಾರಿಂಶದಶೋತ್ತರೇ ದಶಶತಾನ್ಯಾಭಾಂತಿ ಕಲ್ಪದ್ವಯೇ ।
ತಸ್ಯಾನಂತರವರ್ತಿನಿ) ? ತ್ರಿದಶಯೊರ್ದ್ವಂದ್ವೇ ಸಹಸ್ರಾಣಿ ಷಟ್ ॥
ಸಪ್ತಷ್ಣಂಶತಮಾನತಪ್ರಭೃತಿಷು ಸ್ವರ್ಗೇಷು ತೇಷ್ವಚ್ಯುತ ।
ಪ್ರಾಂತೇಷು ತ್ರಿದಶಾರ್ಚಿತಾ ಜಿನಗೃಹಾಸ್ತಾನಂಜಸೋಪಾಸ್ಮಹೇ ॥ ೬೫

ಭಾಂತ್ಯೇಕಾದಶಭಿಶ್ಶತಂ ಸಮಧಿಕಂ ಪ್ರಾಚ್ಯಾಂ ತದಗ್ರೇ ಶತಂ ।
ಸಪ್ತಾಗ್ರಂ ಚರಮೇ ಸಹೈಕನವತಿಗ್ರೈವೇಯಕಾಣಾಂ ತ್ರಿಕೇ ॥
ವಿಖ್ಯಾತಾ ವಸತಿರ್ನವಸ್ವನುದಿಶಂ ಶೇಷಂ ಚ ತತ್ಸಂಖ್ಯಯೋಃ ।
ಪಂಚಾಣೂತ್ತರಭಾಗಿನೋ ಜಿನಗೃಹಾಃ ಪಂಚೈವ ತಾನರ್ಚಯೇ ॥ ೬೬

ವಂದೇ ಪಂಚಸು ಮಂದರಾದ್ರಿಷು ವನಾಂತಭ್ರಾಜಿನಃ ಷೋಡಶ ।
ಪ್ರತ್ಯೇಕಂ ಜಿನಮಂದಿರಾಣಿ ದಿವಿಜೈಃ ಸೇವ್ಯಾನಿ ವಂದಾರುಭಿಃ ॥
ಕುರ್ಮಶ್ಚೇತಸಿ ಕುಂಡಲಾದ್ರಿರುಚಕಕ್ಷೋಣೀಧ್ರಯೋರ್ವಿಶ್ರುತಃ ।
ನ್ಯಾಣಾಂ ಸೀಮನಿ ಮಾನುಷೋತ್ತರಗಿರೌ ಚತ್ವಾರಿ ಚತ್ವಾರಿ ಚ ॥ ೬೭

ತ್ರಿಂಶದ್ವರ್ಷಧರಾಧರೇಷು ವಿಜಯಾರ್ಧೋರ್ವೀಧರಾಣಾಂ ಶತೇ ।
ಸಪ್ತತ್ಯಭ್ಯಧಿಕಂ ದಶಸ್ವಪಿ ಕುರುಕ್ಷೋಣೀರುಹೇಷು ಸ್ಥಿತಾಃ ॥
ಇಷ್ವಾಗಾರಚತುಷ್ಟಯೇ ಕ್ಷಿತಿಭೃತಾಂ ವಕ್ಷಾರನಾಮ್ನಾಂ ಶತೇ ।
ವಂದೇ ತತ್ಪರಿಸಂಖ್ಯಯೇವ ಭುವನಖ್ಯಾತಂ ಜಿನೇಂದ್ರಾಲಯಂ ॥ ೬೮

ಚತ್ವಾರೋಂಜನಪರ್ವತಾದಧಿಮುಖಕ್ಷೋಣೀಧರಾಃ ಷೋಡಶ ।
ದ್ವಾತ್ರಿಂಶದ್ಧರಣೀಭೃತೋ ರತಿಕರಾಃತೇಷಾಂ ಶಿರಶ್ಶೇಖರಾ ॥

ದ್ವಾಪಂಚಾಶತಮರ್ಹತಾಂ ಮಣಿಗೃಹಾಃ ನಂದೀಶ್ವರಾಖ್ಯೇಷ್ಟಮು ।
ದ್ವೀಪೇಪುಣ್ಯಮಹಾಮಹೀಂದ್ರಮಹಿತಾನಭ್ಯರ್ಚ್ಯ ವಂದಾಮಹೇ ॥ ೬೯

ಕಲ್ಪಾತೀತಸಮೇತಕಲ್ಪಕಥಿತಾಸ್ಸರ್ವೇ ತ್ರಯೋವಿಂಶತಿಃ ।
ಸಪ್ತಾಂತಾ ನವತಿಃ ಸಹಸ್ರಗುಣಿತಾಶೀತಿಶ್ಚತುರ್ಮಿಶ್ರಿತಾ ॥
ಲಕ್ಷಾಶ್ಚೈತ್ಯಗೃಹಾಶ್ಚತುಶ್ಶತಯುತಾ ಪಂಚಾಶದಷ್ಟೋತ್ತರಾಃ ।
ತೇನಂದೀಶ್ವರಕುಂಡಲಾದ್ರಿರುಚಕೇಷ್ವದ್ಯರ್ಧಯೋರ್ದ್ವೀಪಯೋಃ ॥ ೭೦

ಜ್ಯೋತಿರ್ವ್ಯಂತರಚೈತ್ಯಗೇಹರಚಿತಾದ್ವಿಘ್ನಾಶ್ಚತುಷ್ಕೋಟಯೋ ।
ಲಕ್ಷೈಸ್ಸಂಘಟಿತಾಶ್ಚ ಷಟ್ಸಹಿತಯೋಃ ಪಂಚಾಶದರ್ಹದ್ಗೃಹಾಃ ॥
ಸಾಹಸ್ರಾಣಿ ಭವಂತಿ ಸಪ್ತನವತಿಃ ಯುಕ್ತಾಶ್ಚತುರ್ಭಿಶ್ಶತೈಃ ।
ಏಕಾಶೀತಿರಕೃತ್ರಿಮಾಸ್ತ್ರಿದಿವಗಾಃಶಸ್ಯ ವಾ ಗೋಚರಾಃ ॥ (?) ೭೧

ಭೂಪಾಲೇಂದ್ರಮಹಾಮಹೈರಹರಹಸ್ಸಂಪಾದ್ಯಮಾನೈರ್ನವೈಃ
ಭ್ರಾಜಂತೇ ಜಿನರಾಜಕೃತ್ರಿಮಗೃಹಾಸ್ತೇಭ್ಯೋ ನಮಸ್ಕುರ್ಮಹೇ ।
ಅಸ್ಮಾಕಂ ಕವಿತಾಗುಣಾರ್ಣವನುತಾಃ ಕುರ್ವಂತು ಚೈತ್ಯಾಲಯಾಃ
ತೇ ಲೋಕತ್ರಯತುಂಗಮಂಗಳಮಹಾಶ್ರೀಭಾಗ್ಯಯೋಗ್ಯಂ ಪದಂ ॥ ೭೨

ವ॥ ಎಂದು ಜಗತ್ತ್ರಯಚೈತ್ಯಸ್ತೋತ್ರಪವಿತ್ರಮುಖಾರವಿಂದನಾಗಿ ಭಗವದಾದಿಭಟ್ಟಾರಕರ ನಿರ್ವಾಣಭೂಮಿಸಮೀಪಸ್ಥಿತವಿಶಾಲಸ್ಫಟಿಕಶಿಲಾತಳಾರೂಢನುತ್ತರಾಭಿಮುಖನಾಗಿ ಸಿದ್ಧಭಕ್ತಿಪೂರ್ವಕಂ ತ್ರಿಜಗದ್ಗುರುವೇ ಗುರುವೆಂದು ತತ್ಪದಸರಸಿಜಧ್ಯಾನಪರಾಯಣನಾಗಿ,

ಶ್ರೀನಾರೀಪತಿದೀಕ್ಷೆಯಂ ಕೊಳಲೊಡಂ ಭೋಂಕಲ್ ಮನಃಪರ್ಯಯ
ಜ್ಞಾನಂ ಪುಟ್ಟಿದುದಂತು ಪುಟ್ಟಿದ ಬಳಿಕ್ಕಂತಮುರ್ಹೂರ್ತಕ್ಕೆ ಭ ।
ವ್ಯಾನಂದಪ್ರದಮಿಂದ್ರವೃಂದಕೃತಕಲ್ಯಾಣಾಸ್ಪದಂ ಕೇವಲ
ಜ್ಞಾನಂ ಪುಟ್ಟಿದುದಿಂತು ಭವ್ಯತೆ ಜಗಕ್ಕಾಶ್ಚರ್ಯಮಾಯ್ತಾಶನಾ ॥ ೭೩
ನರಲೋಕವೊಂದೆ ಮುನ್ನಿನ
ಚರಣಾಬ್ಜಕ್ಕೆಱಗೆ ನೆಗಳ್ದ ಕೇವಳಬೋಧಂ ।
ದೊರೆಕೊಳೆ ಸುರನರಲೋಕಂ
ಚರಣಾಬ್ಜಕ್ಕೆಱಗೆ ಭರತಮುತಿಪತಿ ನೆಗಳ್ದಂ ॥ ೭೪

ವ॥ ಅಂತನಂತಚತುಷ್ಟಯವಿರಾಜಮಾನನುಂ ದೇವಮಾನವಪರಿಷತ್ಪರಿವೃತನುಂ ಸಪ್ತರ್ಧಿಸಮನ್ವಿತಯತಿಪತಿಸಮೇತನುಂ ಅಮೃತಕರಕರಧವಳೈಕಚ್ಛತ್ರಚಾಮರಚತುಷ್ಟಯವಿಭ್ರಾಜಿತನುಂ ಸುರೇಂದ್ರಗಿರಿಶಿಖರವಿರಾಜಮಾನಮೃಗೇಂದ್ರಾಸನವಿಭಾಸಿಯುಂ ಸರಿತ್ಸರೋವರವಿಮಳಗಗನತಳವಿಹರಣಪರಿಣತನುಮಾಗಿ ನಾನಾವಿಧಧರ್ಮಕ್ಷೇತ್ರಂಗಳೊಳೊಂದುಲಕ್ಕೆ ಪುರ್ವಂಬರಂ ಧರ್ಮಾಮೃತಾಂಬುಸೇಕದಿಂ ವಿನೇಯಜನಸಸ್ಯಸಂಪತ್ಪರಂಪರೆಯುಂ ಮಾಡಿ ಕೈಳಾಸಶೈಲಶಿಖರಾಲಂಕಾರನಿರುದ್ಧಯೋಗನುಂ ಅಪಗತಯೋಗಗುಣಸ್ಥಾನನುಂ ಚತುರ್ಥಧ್ಯಾನಾನಳದ್ಧಗಶೇಷಾಶೇಷಕರ್ಮೇಂಧನನುಮಾಗಿ,

ಪರಮಶ್ರೀಸಂತತಾವಾಸದೊಳಖಿಳಸುಖಸ್ವಚ್ಛಸಂಪನ್ನತೋಯಾ
ಕರದೊಳ್ ಶಶ್ವದ್ಗುಣಾಂಭೋರುಹವಿಳಸನವಿಭ್ರಾಜಿಯೊಳ್ ಸಿದ್ಧಹಂಸೋ।
ತ್ಕರಲೀಲಾರಮ್ಯದೊಳ್ ಸಂದಮೃತನಿಳಯನೀರೇಜಿನೀಷಂಡದೊಳ್ ಸಾಂ
ದರಕೇಳೀಹಂಸನಾದಂ ಸುಕವಿಜನಮನೋಮಾನಸೋತ್ತಂಸಹಂಸಂ ॥ ೭೫

ವ॥ ಭರತಯತಿಪತಿಯು ತದನಂತರದೊಳ್ ತದ್ವೃಷಭಸೇನಗಣನಾಥಪುರಸ್ಸರಂ ಪುರುತನಯರ್ ಆಕ್ರಮದೊಳ್ ಪರಮಸುಖಾಸ್ಪದಮನನಿಬರುಂ ಕೈಕೊಂಡರ್,

ಶಕವರ್ಷಮೆಂಟುನೂಱು
ಕ್ಕೆ ಕಡೆಯೊಳಱುವತ್ತುಮೂಱು ಸಂದಂದು ಜಗ।
ತ್ಪ್ರಕಟಪ್ಲವಸಂವತ್ಸರ
ದ ಕಾರ್ತಿಕಂ ಮುದಮನೀಯೆ ನಂದೀಶ್ವರದೊಳ್ ॥ ೭೬

ಸಿತಪಕ್ಷದ ಪಂಚಮಿದಿನ
ಪತಿವಾರಂ ಶುಭದಮೂಲನಕ್ಷತ್ರದೊಳ್।
ಸ್ಥಿತಮಾಗೆ ನೆಗಱ್ದೀಮ
ತ್ಕೃತಿ ಜಗದೊಳ್ ಪುದಿದು ಸಾಗರಾಂತಕ್ಷಿತಿಯುಂ ॥ ೭೭

ತ್ರಿದಶಸ್ತುತ್ಯಮಿದಾದಿದೇವಚರಿತಂ ಕರ್ಣಾಮೃತಸ್ಯಂದಿಯ
ಕ್ಕಿದು ಭವ್ಯಾವಳಿಗೆಂದು ಪೇೞಿಸೆ ಬುಧರ್ ಸ್ವರ್ಗಾಪವರ್ಗಕ್ಕಮಾ।

ಸ್ಪದಮುಪ್ಪಾದಿಪುರಾಣವಸ್ತುಕೃತಿಯುಂ ಪೇೞ್ದಿಂ ಬೆಡಂಗಪ್ಪಮಾ
ರ್ಗದೊಳಂ ದೇಸಿಯೊಳಂ ಪೊದಪ್ಡೆಸೆವಿನಂ ಸಂಸಾರಸಾರೋದಯಂ ॥ ೭೮

ರಸಭಾವೋಪೇತಧರ್ಮಾಮೃತರಸಮಯದೊಳ್ ಘೋರಸಂಸಾರನಾನಾ
ವ್ಯಸನವ್ಯುಚ್ಛಿತ್ತಿಯೊಳ್ ಧಾರ್ಮಿಕಜನಜನಿತಾನಂದಸಂದೋಹವಿದ್ಯಾ ।
ರಸದೊಳ್ ಸಂಸಾರಸಾರೋದಯವಿರಚಿತದೊಳ್ ವಾಗ್ವಧೂಮುದ್ರೆಯೊಳ್ಮು
ದ್ರಿಸಿ ನಿಂದತ್ತಾದಿತೀರ್ಥೇಶ್ವರನ ಚರಿತದೊಳ್ ವಾಕ್ಯಮಾಣಿಕ್ಯಕೋಶಂ ॥

ಭಾಸುರದೇವಕೋಟಿವಿಭುವಪ್ಪ ಮಹರ್ಧಿಕನಪ್ಪ ವಾಸವಂ
ಗಾಸನಕಂಪಮಂ ಪಡೆದು ತೀರ್ಥಕರತ್ವಮನಿತ್ತನಪ್ಸರಾ ।
ವಾಸಮನೆಯ್ದಿಸಲ್ಕಿದುವೆ ಷೋಡಶಭಾವನೆಯಿಂದೆ ಷೋಡಶಾ
ಶ್ವಾಸಮನೆಯ್ದೆ ಭಾವಿಸುಗೆ ಭವ್ಯರನಂತಸುಖಾಭಿಲಾಷಿಗಳ್ ॥ ೮೦

ಗ ॥ ಇದು ದೇವೇಂದ್ರಮುನೀಂದ್ರವಂದ್ಯಪರಮಜಿನೇಂದ್ರಮುಖಚಂದ್ರ
ವಾಕ್ಚಂದ್ರಿಕಾಪ್ರಸರಪ್ರಸಾದೋದೀರ್ಣಸೂಕ್ತಿಕಲ್ಲೋಲ
ಮಾಲಾಕೀರ್ಣಕವಿತಾಗುಣಾರ್ಣವ
ಪ್ರಣೀತಮಪ್ಪಾದಿಪುರಾಣದೊಳ್
ಪರಿನಿರ್ವಾಣಕಲ್ಯಾಣವರ್ಣನಂ
ಷೋಡಶಾಶ್ವಾಸಂ
ಸಂಪೂರ್ಣಂ.

ಆದಿಪುರಾಣಂ ಸಂಪೂರ್ಣಂ.

ಶೋಧನ ಪತ್ರಿಕೆ.

ಪುಟ.	ಪಙ್ಕ್ತಿ.	ಅಶುದ್ಧ.	ಶುದ್ಧ.
೨	೧	ಮೆಂದು	ವೆಂದು
,,	೬	ಕಳ	ಕೞ
,,	೧೨	ಟುಗು	ಟಿಗು
೩	೨	ಸ್ಕಂದ	ಸ್ಕಂಥ
೪	೮	ಮುಳಿ	ಮುೞಿ
,,	೧೬	ಮನೇಕ	ಮನೇಡ
೫	೧೦	ತಾರ್ಕಿಗಂ	ತಾರ್ಕಿಕಂ
,,	೧೯	ಮೆಚ್ಚೆ	ಮೆಚ್ಚಿ
೭	೮	ದೆಂನ	ದೆನ್ನ
,,	೧೨	ಸನ್ಮನಂ	ಸಲ್ಮನಂ
,,	೧೩	ನೆಗೆಪ್ತೆ	ನೆಗಪ್ತೆ
,,	೧೬	ಪೆಱಱ	ಪೆಱರ
,,	,,	ಪೆಱಱಿಂದವಪ್ಪ	ಪೆಱರಿಂದಮಪ್ಪ
,,	೨೨	ಪ್ರಮುದ	ಪ್ರಮದ
೮	೧	ಸ್ಕಂದ	ಸ್ಕಂಥ
,,	೧೮	ರಮಣೀಯಕಾ	ರಮಣೀಯತಾ
೯	೩	ಸ್ಥಾನಂಕಟ	ಸ್ಥಾನಂ
,,	೮	ತಟ	ಕಟಿತಟ
,,	೨೨	ಶ್ಚರ್ಯಂ	ಶ್ವರ್ಯಂ
೧೧	೩	ಕೊಳ್ವ	ಕೊೞ್ವ
,,	೧೦	²ಡಂಗಳ್	ಢಂಗಳ್
೧೨	೧೨	ಫಲ	ಫಳ
೧೨	೨೩	ನೆಯ್ದಲ್ ಎಂಬ ಪದಗಳಲ್ಲಿ	ನೆಯ್ದಿಲ್-ಎಂದು ಓದಿಕೊಳ್ಳು [ದು
೧೩	೧೫	ನೂಱ	ನೂಱು
,,	೧೮	ಜನೋತ್ಸೆಧ	ಜನೋತ್ಸೇಧ

ಪುಟ.	ಪಙ್ಕ್ತಿ.	ಅಶುದ್ಧ.	ಶುದ್ಧ.
೧೬	೧೭	ತನ್ನೊಳ್ಳೞೆಯಲಿದು	ತನ್ನೊಳ್ಳೆರೆಯಲಿದು
೧೭	೪	ಸಂತವಿಂ	ಸಂತನಿಂ
,,	೫	ಕರ್ದಿದರ್	ಕಟ್ಟಿದರ್
,,	೧೪	ತಾಗೆ	ತಾಗಿ
೧೮	೨೦	ಮುಳುಗುತ್ತುಂ	ಮುೞುಗುತ್ತುಂ
೨೦	೨	ಪೂವಿನುಬ್ಬುರ್	ಪೂವಿನುಬ್ಬರ್
,,	೧೫	ತಿಳುಪು	ತಿಳಿಪು
,,	೨೧	ಬಡಿವುದು	ಬಡುವುದು
೨೧	೫	ಕಾರ್ಯರ್ಚೈತನ್ಯ	ಕಾರ್ಯಂ ಚೈತನ್ಯ
,,	೧೨	ಚಿತ್ತ	ಚಿತ್ತಿ
೨೩	೫	ಡೆಯುದುವ್ರಂ ಹಿತಾಹಿತಾ	ಡಯುದುವುಂ ಹಿತಾಹಿತ
೨೪	,,	ಗಳೆಯು	ಗಳೆ ಅ
,,	೧೯	ಸಭಾಂತರ	ಸಭಾಂತರಾಳ
,,	೨೨	೪ವಿಜಯಿ	ವಿಜಯಿ
,,	೨೬	೪ಕ. ಗ—ತಳವುಳಿಸಿ	ಇದು ಅವಶ್ಯಕವಿಲ್ಲ.
೨೭	೧	ನಾಗಿ	ನಾಗೆ
,,	೮	ಗಳಂ ಮುಗಂ	ಗಳಂ ಕಾವೆಂದು ಮುಗಂ
೩೧	೬	ದುರ್ದು	ದುರ್ದೊ
,,	೧೯	ಪ್ರೊಗಳುತ್ತುಂ	ಪೊಗೞುತ್ತುಂ
೩೨	೨೩	ದೀಶನಿಂ ।	ದೀಶನಿ ॥
೩೩	೧	ನುಂನಿಜ	ನ್ನುನ್ನಿಜ
,,	೧೩	ನೆಱಪಿ	ನೆರಪಿ
,,	೨೧	ಗೆಯ್ಯ್ವು	ಗೆಯ್ದು
೩೪	೯	ಪಸಿವಳ್ವ	ಪಸಿವಪ್ವೆ
,,	೧೨	ದುಜರ್ುಗೆ	ಕುಚರ್ುಗೆ
೩೬	,,	ತೆಸೆವ	ತೆಸೆದ
೩೭	೨	ಮೂಣ್ದಿದರ್	ಮೂಣ್ಪಿರ್ದರ್
೩೮	೧೨	ತೊರಯಿಸಿದಂ೩ ॥	ತೊರೆಯಿಸಿದಂ೨ ॥

ಪುಟ.	ಪಜ್ಕ್ತಿ.	ಅಶುದ್ಧ.	ಶುದ್ಧ.
೩೮	೧೩	ತೊರಯಿಸಿ,	ತೊರೆಯಿಸಿ,
೪೦	೨	ಸಿಟಿಸೆ	ನಿಟಿಪಿ
೪೧	೮	ಯುರುವುುಂ	ಯುರುವುಂ
೪೨	೧೨	ಅಪರಿಮಾಣ	ಅಪರಿಮ್ಲಾನ
,,	೧೩	ನಾಲ್ಫಸಿರ್ವರ್	ನಾಲ್ಸಾಸಿರ್ವರ್
,,	೨೪	ಕಪೆಯಿ	ಕಟಿಯಿ
,,	೨೬	ಹಸೋಚ್ಛ್ರತ	ಹಸ್ತೋಚ್ಛ್ರತ
೪೩	೨೧	ವಣ್ಣಿಪೆಂಬಣ್ಣಿಂ ॥	ವಣ್ಣಿಪಂಬಣ್ಣಿಪಂ ॥
,,	೨೩	ಬಂದಿರೆ	ನಿಂದಿರೆ
೪೫	೧೪	ಬಾಡಿ	ಬಾಡೆ
೪೬	೨	ನೋಡಿ.	ನೋಡಿ,
,,	೧೩	ಜೈತ್ಯ	ಚೈತ್ಯ
೪೭	೧	ಸಂಪತ್ತ್ವದ	ಸಂಪತ್ಪ್ರದ
,,	೧೫	ನೀಳ್ಪಂ	ನೀಳ್ವಂ
,,	೨೪	ಪೊಂಪ್ರಪೆ	ಪೊಂಪ್ರಟಿ
೪೮	೧	ತೇಟ್ರಿ	ತೆಂತು
,,	೧೧	ಬಪೆ	ಬಟಿ
,,	೧೯	ಮುಱಿದೆ	ಮುರಿದೆ
೪೯	೨೧	ತೆಂಪಲ	ತೆಂಬೆಲ
೫೦	೧೯	ಭೋಂಕನೆ	ಭೋಂಕೆನೆ
೫೧	೨೧	ಮನಮನಾರೆ	ಮನಮನಾಱೆ
೫೩	೧೦	ಸ್ವಭಾ	ಸ್ವಭಾವ
೫೫	೫	ಈತೆರ	ಈತೆಱ
,,	೨೪	ಕಜ್ಜಿರ್	ಕರ್ಜಿ
೫೬	೮	ಎಂಭತ್ತೆಂಟು–ಎಂಜೆಗಳಲ್ಲಿ	ಎಂಬತ್ತೆಂಟು — ಎಂದು ಓದಿ [ಕೊಳ್ಳುವುದು.
೫೭	೧೨	ಕಳಿಪ್ರ	ಕಟಿಪ್ರ
೫೮	೨೨	ಚಂದದ	ಚೆಂದದ
೬೦	೨೪	ವರ್ಗಳ್ವಗಳ್ತ್ರೋಷ.	ವರ್ಗಱ್ವದಪ್ತ್ರೋಷ

ಪುಟ.	ಪಙ್ಕ್ತಿ.	ಅಶುದ್ಧ.	ಶುದ್ಧ.
೬೧	೬	ಮಾಜಿವು	ಮಾಜಿದು
೬೩	೧೫	ಮುಳುಗು	ಮುೞುಗು
೬೪	೬	ಬದುರ್ಗ	ಬದುರ್ಗಳು
೬೮	೧೨	ನೂಸೆ	ನೊಸೆ
೭೪	೧೬	ಕೃತಾ	ಕೃತ
೭೫	೧	ಲಂಪಿ	ಲೆಂಪಿ
,,	೨೪	ತಗುಳ್ಚಿದೆ	ತಗುೞ್ಚಿದೆ
೭೬	೩	ಪೂಸ	ಪೊಸ
,,	೨೨	ಸ್ತ್ರಕಕರ್ಣಪೂರಾಯುಮಾನ	ಸ್ತ್ರಬಕಕರ್ಣಪೂರಾಯಮಾ [ಣ
೭೭	೮	ದರವುರನೆಚ್ಚಿ	ದರಿವುರನೆೞ್ಚಿ
೭೯	೧೧	ನೆಚ್ಚಿತ್ತು	ಮೆಚ್ಚಿತ್ತು
೮೦	೧	ಕೋಟಿ	ಕೋಟಿ
,,	೯	ಸೆಳಿಲ್ವ	ಸೆೞಿಲ್ವ
೮೨	೭	ಜೆಲುವಿಂಗದು	ಜೆಲ್ವಿಂಗದು
,,	೧೦	ಪಳುಕಿನ, ಪೊಳಪು	ಪಳಿಕಿನ, ಪೊಳೆಪು
೮೭	೧೨	ಳೆಸುವ	ಳಸುವ
೮೯	೧೧	ಮುಱು ; ಸಂಮಂತು	ಮಱು ; ಸಮಂತು
,,	೧೪	ವಿಗಳಿದ	ವಿಗೞಿದ
೯೦	೪	ನೊಟ್ಟಜೆಯಂ	ನೊಟ್ಟಜೆಯಿಂ
,,	೭	ನರ್ಥಿಎಂಬೆಡೆಗಳಲ್ಲಿ	ನೆತ್ತಿ ಎಂದು ಓದಿಕೊಳ್ಳುವದು
,,	೮	ಳೆಸಾಂದರಿಯಂ	ಳನುದರಿಯಂ
,,	೧೦	ಕಳಪಿ——ಎಂಬೆಡೆಗಳಲ್ಲಿ	ಕೞಿಪಿ ಎಂದು ಓದಿಕೊಳ್ಳುವ [ದು
೯೨	೧೪	ನವ	ನವು
೯೩	೬	ನಾಲ್ವತ್ತೊಂಭ-ಎಂಬೆಡೆಗಳಲ್ಲಿ	ನಾಲ್ವತ್ತೊಂಬ–ಎಂದು ಓದಿ ಕೊಳ್ಳುದು
೯೫	೧೦	ದೊಂದೊಂದೆನೆ	ದೊಂದೊಂದನೆ
,,	೧೨	ಕೊಂದಿಕವೆ	ಕೊಂದಿಕ್ಕವೆ

ಪುಟ.	ಪಙ್ಕ್ತಿ.	ಅಶುದ್ಧ.	ಶುದ್ಧ.
೯೬	೨	ಬಱಿಯಂ	ಬಱುವಂ
,,	೧೪	ಸೊಲ್ಕಿಂದೆ	ಸೊಲ್ಗಿಂದೆ
೯೮	೧೭	ಪಱಿದದು	ಪಱಿದುದು
೯೯	೧೫	ಸೇನಾಯಕ	ಸೇನಾನಾಯಕ
೧೦೦	೨೫	ಕುಂಜಗಂಳೊಳಂ	ಕುಂಜಂಗಳೊಳಂ
೧೦೩	೩	ಳೆನೆಗೆಂ	ಳೆನಗೆಂ
೧೦೪	,,	ಪುಟ್ಟೆ	ಪುಟ್ಟೆ
೧೦೬	೬	ಭಟ್ಟ್ಯಾಕರರ್	ಭಟ್ಟ್ಯಾರಕರ್
೧೦೭	೧೭	ಗೊಳೆಗೆ	ಗೊಳಗೆ
೧೧೦	೨೧-೨೨	ಒಡೆ	ಒಡೆ
೧೧೨	೧೩	ಮುದ್ಯೋತಿಸೆ	ಮುದ್ದ್ಯೋತಿಸೆ
೧೨೭	೬	ನಿನ್ನ ನೆಲೆ	ನೆನ್ನ ನೆಲೆ
೧೩೬	೧೭	ಬದ್ಧರ್	ಬದ್ಧರುಂ
೧೪೫	೨೩	ಮುಂನಡೆಯು	ಮುಂನಡೆಯೊನಡೆಯು
೧೫೪	೧೬	ಸೊಲುವಿಂ	ಸೊಲ್ಗುವಿಂ
೧೬೧	೧೫	ಪುದಿದುದುಱಿ	ಪುದಿದುಱಿ
೧೬೩	೧	ವರ್ಣಿಸುವದಂ	ವರ್ಣಿಸುವುದಂ
೧೬೯	೧೧	ಮುಗುಳ್ನಗೆ	ಮುಗುಳ್ನಗೆ
೧೭೩	೨೧	ನೆಗೆಗಣ್ಣಂ	ನಗೆಗಣ್ಣಂ
೧೮೮	೧೦	ರಸೆಯರ್	ರಸಿಯರ್
೧೯೦	೨	ಕಳ್ಣ	ಕಣ್ಗ
೧೯೨	೨೫	ಮಾನ	ಮಾಣ
೧೯೬	೧೦	ಮಾಡಿ	ಮಾಡೆ
೨೦೩	೯	ಸಿಂಧುಸಿಂದೂರೀ	ಸಿಂಧುರಸಿಂದೂರೀ
೨೧೧	೬	ಸಾದಿ	ಮಾದಿ
೨೧೧	೨೫	ತ್ರೆಱೆ	ತ್ರೆಱ
೨೧೬	೬	[illegible]	ಕಾರ್ಯ
,,	೧೩	ತೊಂ[illegible]	ತಾಂತ

ಪುಟ.	ಪಙ್ಕ್ತಿ.	ಅಶುದ್ಧ.	ಶುದ್ಧ.
೨೧೯	೨೧	ಗದಾ	ಗವದಾ
೨೨೧	೨೨	ದ್ಯೋ ।	ಜ್ಯೋ ।
,,	೨೬	ಧೃತ	ದ್ರುತ
೨೨೨	೧	ಯುತತ್ವಾ	ಯುತತತ್ವಾ
,,	೨೬	ಡೆಯೆ ॥	ಡೆಯೇ ॥
೨೨೩	೧	ತೆಱ	ತೆರ
೨೨೮	೬	ತದುದ್ಯೋಗ	ತ್ವದುದ್ಯೋಗ
,,	೯	ಲಿರ್ದುದ	ಲಿರ್ದುದದ
೨೩೦	೧೪	ಪಚ್ಛ	ಪಚ್ಛ
೨೩೫	೨೧	ಸಾರದಳಿಪೆಂದು	ಸಾರದಱಿಪೆಂದು
೨೪೪	೧೦	ಪರಿತ	ಪಱಿತಂ
೨೪೮	೯	ವಿರತಣ	ವಿತರಣ
೨೫೦	೧	ನಾಗ	ನಾಗಿ
,,	೩	ಸಾಮಗ್ರ	ಸಾಮಗ್ರಿ
,,	೧೦	ಗಳೊ	ಗಳೊಳ
,,	೨೨	ಪಚಳಾ	ಪ್ರಚಳಾ
೨೫೨	೧೦	ಚುತುಷ್ಟಯ	ಚತುಷ್ಟಯ
೨೬೨	,,	ಪ್ರಭುಗರಾ	ಪ್ರಭುಗಳಾ
,,	೨೧—೨೨	ಕೆಗೆಯೊಳ	ಕೆಗವೊಳ
,,	೨೩	ಕ್ಕಳಯಲ್	ಕ್ಕಳೆಯಲ್
೨೭೦	೭	ನೆಗೆವದ	ನೆಗೆವ
೨೭೨	೧೨	ವೆರಸೆಯೆ	ವೆರಸೆಸೆಯೆ
,,	೨೬	ತೊಂಗಲ್,	ತೊಂಗ
೨೭೫	೬	ಪಾಱುತ್ತೆ	ಪಾರುತ್ತೆ
೨೭೯	೧೮	ವಳುಕಿನ	ವಳಕಿನ
,,	೨೫	ಛತ್ರಕಾ	ಛತ್ರಿಕಾ
೨೮೦	೧೫	ಪೊಳೆಯೆ	ಪೊಪೆಯೆ
೨೮೫	೨೬	ನೆಸವೆಲ	ನೆಸಪೆಲ

ಪುಟ.	ಪಙ್ಕ್ತಿ.	ಅಶುದ್ಧ.	ಶುದ್ಧ.
೨೮೬	೯	ರ್ಗಳೆಳಸಿಪೊಳೆವಿಱುಲ್ಗಳೆ	ರ್ಗಳಪೊಳೆವಿಱುಸಿಲ್ಗಳೆ
,,	೧೧	ಪೊಳೆವೆಳೆ	ಪೊಳೆವೆಳ
೨೮೯	೧೭	ವಿನಿಂ	ವಿನಂ
,,	೨೪	ಬೆಂಡಂ	ಬೆಡಂ
೨೯೧	೨೫	ಸಂಪಿಗೆ	ಸಂಪಗೆ
೨೯೩	೧೧	ನುಣ್ಬೆರಲಂ	ನುಣ್ಬರಲಂ
೨೯೪	೭	ಪಾಯ್ದುವೊ	ಪಾಯ್ದುವೊ
,,	೧೦	ಮಣಿ	ಮಣಿ
,,	೧೩	ಗೆಯು	ಗೆಯು
೨೯೫	೨೪	ಲೆತ	ತಲೆ
೨೯೬	೨೨	ಮನಾನ	ಮನಾಸವ
೨೯೯	೨೪	ಪಿಱಿದೇ	ಪಿರಿದೇ
೩೦೦	೩	ಕಿರಣ	ಕಿರಣನ
೩೦೩	೮	ಮಚ್ಚಿರಿದು	ಮಚ್ಚಿಱಿದು
,,	೧೧	ಪಸೂನಾ	ಪ್ರಸೂನಾ
,,	೧೫	ಮನೀಂ	ಮನಿಂ
೩೦೪	೭	ಪಾಲ್ಮಳೆ	ಪಾಲ್ಮಟೆ
,,	೧೧	ಶರಚ್ಚಂದಾ	ಶರಚ್ಚಂದ್ರಾ
,,	೧೪	ನೆರೆದಲ್ಲಿ,	ನೆಱೆದಲ್ಲಿ,
,,	೧೫	ಜಾಜೆಯ	ಜಾಡಿಯ
,,	೨೬	ದೇಶೊಳ್,	ದೇಶದೊಳ್
೩೦೬	೧	ನ್ನುಳಿವು	ನ್ನುಟಿವು
೩೦೯	೨೩	ಗೈಯ್ದುಳಿ	ಗೈಯ್ದುಟಿ
೩೧೨	೯	ಮನೋಳ್	ಮನೊಳ್
೩೧೬	೬	ಮಾನ	ಮಾಣ
೩೨೧	೧೧	ಚೋದಿತಪ್ಪ	ಚೋದಿತಮಪ್ಪ
೩೩೨	೧	ಕರಣೀ	ಕರಿಣೀ
,,	೧೮	ಭಾಗ	ಭೋಗ

ಪುಟ.	ಪಙ್ಕ್ತಿ.	ಅಶುದ್ಧ.	ಶುದ್ಧ.
೩೩೩	೨೩	ನಿಂತಿರ್ಪುದು	ನಿಂದಿರ್ಪುದು
೩೩೬	೧೫	ಪೇೞ	ಪೇೞಿ
೩೩೭	೧	ರುದ್ಧ್ವ ಷ್ಯಕ್ಷತ್ರ	ರುದ್ಧಕ್ಷತ್ರ
,,	೯	ಟೆಂತೀ	ಟಿಂತೀ
೩೪೩	೧೪	ಕಣ	ಕಣ್ಬ
೩೫೧	೧೦	ಅಂಭೋದಿ	ಅಂಭೋಧಿ
೩೫೮	೨೫	ತನಗೆ	ತಮಗೆ
,,	೨೬	ಮೊಱೆಗೆ	ಮೊಱಗೆ
೩೫೯	೪	ಮುನ್ನೆಱೆಗಂ	ಮುನ್ನೆರಗಂ
೩೬೦	೨೫	ಬಾಯ್ಕೀೞಸಿ	ಬಾಯ್ಕೀೞಿಸಿ
೩೬೧	೯	ಸೊಲ್ವುದು	ಸಲ್ವುದು
,,	೧೪	ೞರಸಂ	ೞರಸೆಂ.
೩೬೩	,,	ವಡೆ	ವಡ
೩೬೪	೨೪	ಸಾದಿತ	ಸಾಧಿತ
೩೬೭	೪	ತೆಱುದತ್ತು	ತೆಱೆದತ್ತು
೩೭೩	೭	ನೇಶಂ, ಕ್ಷೋಹಿಣೀ	ನೇಶ, ಕ್ಷೌಹಿಣೀ
,,	೧೯	ಣ್ಮೈತ್ರಿರೆ	ಣ್ಮುತ್ರಿರೆ
೩೭೬	೩	ಬೞಿಕಾಳ್ಕಾ	ಬೞಿಕ್ಕಾ
೩೭೭	೯	ಚ್ಬಾಯಾ	ಚ್ಛಾಯಾ
೩೭೮	೧೮	ಯುದ್ಧ	ಯುದ್ಧ
೩೮೧	೧೭	ದೆರೆಡುಂ	ದೆರಡುಂ
೩೮೨	೨೪	ಯೆಡೆಳ್	ಯೆಡೆಯೊಳ್
೩೮೩	೨೨	ದಿಲ್ಲದ	ದಿಲ್ಲದಿ
೩೯೨	೨೦	ಚಿನ	ಜಿನ
೪೦೦	೯	ಬಿಸಟಂ	ಬಿಸುಟಂ

Particles of matter
100,000th of a millimetre
long can be seen with the
BEM-100 electron



HERE AND THERE

...kilo
...Don

...puter-
...orking
... per-
...opera-
...pleted
...grad. It
...nd that
...ny one



...specia...
...d out a n...
of heating orch...
as a means of...
citrus fruit in th...
cal districts ...
against cold wi...
piped to burner...
with special scr...
envelop the f...
warm currents ...
been observed...
winter of thi...
the trees "resp...
creasing their ...

...years
of the
had a
...nomy.
... cliff
in Ar-
...ct the
...ations.
...lunar-
...d been
draw-
...bodies
...ied to
...s and



Scientists at Ka...
sity are carrying ...
sus" of the l...
scape. Using ph...
taken by the Z...
Zond-8, Soviet ...
space stations, ...
clarified the ex...
of 17 lunar ...
chains. A cata...
cular mountai...
more kilometr...
ter is also being...

...iver in
span-
...ay. The
...ermez-



A phraseologic...
of the Kirghiz ...
being compiled...
tute of Langua...
ature of the ...
Academy of Sc...
meaning of app...
4,000 widely us...
turns of speech a...
sions is explaine...
...tions and for...
...e given. Illustr...
...wn from Kir...
...and folklore...

HERE AND THERE



...scien...
...vith a ...
...synth...
...ou...
...spu...

half a dozen light brown
caps each. Biologists con-
sider this find to be of great
scientific interest

In moss ... clumps of about



particles ... wing", an image magnified a million times on a television screen. Prod[illegible]ion of the [illegible]w microscop[illegible]s intended for [illegible] in many fields of science, [illegible]gun in the Ukrainian city of Sumy



The bears, roe deer and martens of the mountainous taiga in Bashkiria have been joined by coypus brought from Kirov Region in the north of the country. They are doing well in their new home, as are the spotted deer which were introduced here from Khabarovsk Territory. Bashkiria's elk population is now 6,000 more than three years ago



The world's largest collection of cotton plants, which is housed at the Central Asian Experimental Station of the USSR Institute of Plant-Breeding in Tashkent, has acquired its [illegible],000th specimen. This is a hitherto unstudied, wild variety found by Soviet scientists on [illegible] Rio Mexcala [illegible] station's cata[illegible] clude almost eve[illegible] plant grown in the [illegible] years, as well as ma[illegible] varieties



[illegible] has helped Soviet [illegible] peep into the mysterious depths of the [illegible] which cannot be reached by drilling equipment. Rocks discovered in [illegible]akhstan were brought to the surface from depths of several dozen kilometres during tect[illegible] movements. Research[illegible] has shown that these fragments are of very ancient formation, dating back more than 1,000 million years



Soviet researchers wintering on Waterloo Island in the Antarctic have made an important discovery—near

